ಪ್ರಗತಿಶೀಲ ಕಾದಂಬರಿಗಳಲ್ಲಿ ಇತಿಹಾಸದ ಪುನರ್‌ಲೇಖದ ಸ್ವರೂಪ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಸುನಂದಾ ಎಸ್. ಹಾಡಕಾರ

ಮಾರ್ಗದರ್ಶಕರು
ಡಾ.ಎಸ್.ಎಫ್.ಜಕಬಾಳ
ಸಂಯೋಜಕರು
ಕೆ.ಎಸ್.ಎಸ್.ಸ್ನಾತಕೋತ್ತರ ಅಧ್ಯಯನ ಕೇಂದ್ರ
ವಿದ್ಯಾನಗರ, ಗದಗ

ಭಾಷಾನಿಕಾಯ
ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ–583276

ಮಾನ್ಯತಾ ಸಂಸ್ಥೆ
ಡಾ.ಎಂ.ಎಂ ಕಲಬುರ್ಗಿ
ಸಂಶೋಧನಾ ಕೇಂದ್ರ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ.
ಗದಗ ೫೮೨೧೦೧

೨೦೧೯

ಪ್ರಗತಿಶೀಲ ಕಾದಂಬರಿಗಳಲ್ಲಿ ಇತಿಹಾಸದ ಪುನರ್‌ಲೇಖದ ಸ್ವರೂಪ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಸುನಂದಾ ಎಸ್. ಹಾಡಕಾರ

ಮಾರ್ಗದರ್ಶಕರು

ಡಾ.ಎಸ್.ಎಫ್.ಜಕಬಾಳ

ಸಂಯೋಜಕರು

ಕೆ.ಎಸ್.ಎಸ್.ಸ್ನಾತಕೋತ್ತರ ಅಧ್ಯಯನ ಕೇಂದ್ರ

ವಿದ್ಯಾನಗರ, ಗದಗ

ಭಾಷಾನಿಕಾಯ

ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩೨೭೬

ಮಾನ್ಯತಾ ಸಂಸ್ಥೆ

ಡಾ.ಎಂ.ಎಂ ಕಲಬುರ್ಗಿ

ಸಂಶೋಧನಾ ಕೇಂದ್ರ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ,

ಗದಗ ೫೮೨೧೦೧

೨೦೧೯

ದೃಢೀಕರಣ ಪತ್ರ

ಶ್ರೀಮತಿ ಸುನಂದಾ ಷಣ್ಮುಖಪ್ಪ ಹಾಡಕಾರ ಅವರು ಬರೆದು ಸಾದರಪಡಿಸಿದ **"ಪ್ರಗತಿಶೀಲ ಕಾದಂಬರಿಗಳಲ್ಲಿ ಇತಿಹಾಸದ ಪುನರ್‌ಲೇಖದ ಸ್ವರೂಪ"** ಎಂಬ ವಿಷಯ ಕುರಿತು ಸಿದ್ಧಪಡಿಸಿದ ಮಹಾಪ್ರಬಂಧ ಮೂಲ ಸಂಶೋಧನಾ ಕೃತಿ ಆಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಡಾ.ಎಂ.ಎಂ ಕಲಬುರ್ಗಿ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ. ಈ ಮಹಾಪ್ರಬಂಧವು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ ಹಂಪಿ

ದಿನಾಂಕ : ೧೫-೪-೨೦೧೮

ಮಾರ್ಗದರ್ಶಕರು

ಡಾ.ಎಸ್.ಎಫ್.ಜಕಬಾಳ

ಸಂಯೋಜಕರು

ಕೆ.ಎಸ್.ಎಸ್.ಸ್ನಾತಕೋತ್ತರ ಅಧ್ಯಯನ ಕೇಂದ್ರ

ವಿದ್ಯಾನಗರ, ಗದಗ

ಪ್ರಮಾಣ ಪತ್ರ

ನಾನು **ಶ್ರೀಮತಿ ಸುನಂದಾ ಷಣ್ಮುಖಪ್ಪ ಹಾಡಕಾರ "ಪ್ರಗತಿಶೀಲ ಕಾದಂಬರಿಗಳಲ್ಲಿ ಇತಿಹಾಸದ ಪುನರ್‌ಲೇಖದ ಸ್ವರೂಪ"** ಎಂಬ ವಿಷಯ ಕುರಿತು ಸಿದ್ಧಪಡಿಸಿದ ಮಹಾಪ್ರಬಂಧವನ್ನು **ಡಾ.ಎಸ್.ಎಫ್ ಜಕಬಾಳ** ಅವರ ಮಾರ್ಗದರ್ಶನದಲ್ಲಿ ಡಾ.ಎಂ.ಎಂ ಕಲಬುರ್ಗಿ ಸಂಶೋಧನಾ ಕೇಂದ್ರದ ಮೂಲಕ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ ಹಂಪಿ

ದಿನಾಂಕ : ೧೨-೪-೨೦೧೯

Hadkar

ಸಂಶೋಧಕರು

ಶ್ರೀಮತಿ ಸುನಂದಾ ಷಣ್ಮುಖಪ್ಪ ಹಾಡಕಾರ
ಡಾ.ಎಂ.ಎಂ ಕಲಬುರ್ಗಿ
ಸಂಶೋಧನಾ ಕೇಂದ್ರ
ಶ್ರೀ ತೋಂಟದಾರ್ಯ ಮಠ, ಗದಗ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

---

೧. ಪೀಠಿಕೆ

೨. ಅಧ್ಯಯನದ ಉದ್ದೇಶ

೩. ಅಧ್ಯಯನದ ವ್ಯಾಪ್ತಿ

೪. ಅಧ್ಯಯನದ ಸ್ವರೂಪ

೫. ಅಧ್ಯಯನದ ವಿಧಾನ

೬. ಅಧ್ಯಯನದ ಮಹತ್ವ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧ ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ ಬದಲಾವಣೆಗೊಳ್ಳುತ್ತ ಮುನ್ನಡೆಯುತ್ತಿದೆ. ಸಾಹಿತ್ಯವೆಂಬುದು ಜೀವನದಿಯಂತೆ ಸದಾ ಕಾಲವೂ ಪರಿವರ್ತನೆಗೊಂಡು ಹರಿಯುತ್ತಿದೆ. ಯಾವುದೇ ಸಾಹಿತ್ಯದ ಇತಿಹಾಸವನ್ನು ನೋಡುವುದಾದರೆ ಅದು ನಿರಂತರ ಹೋರಾಟ, ಚಳುವಳಿ, ಪ್ರಯತ್ನಗಳಿಂದ ಮೂಡಿಬಂದಿರುವುದಾಗಿರುತ್ತದೆ. ಕನ್ನಡ ಸಾಹಿತ್ಯವೂ ಕೂಡ ಇದರಿಂದ ಹೊರತಾಗಿಲ್ಲ. ಒಂದು ಸಾಹಿತ್ಯ ಪರಂಪರೆ ತನ್ನ ಸಾಧ್ಯತೆಗಳನ್ನು ಪೂರೈಸಿಕೊಂಡು ಸ್ಥಗಿತವಾದ ಸಂದರ್ಭದಲ್ಲಿ ಮತ್ತೊಂದು ಸಾಹಿತ್ಯ ಪರಂಪರೆ ಜನ್ಮ ತಾಳುತ್ತದೆ. ಹಾಗೆಯೇ ನವೋದಯ ಸಾಹಿತ್ಯದ ನಂತರದಲ್ಲಿ ಸಮಾಜದ ಮೇಲೆ, ಸಾಹಿತ್ಯದ ಮೇಲೆ ತನ್ನದೇ ಆದ ಪರಂಪರೆ ಮತ್ತು ಪ್ರಭಾವವನ್ನು ಬೀರಿದ್ದು ಪ್ರಗತಿಶೀಲ ಸಾಹಿತ್ಯ. ಇದರ ಪ್ರತಿಕ್ರಿಯೆಯಾಗಿ ನವ್ಯ ಸಾಹಿತ್ಯ, ನವ್ಯಕ್ಕೆ ಪ್ರತಿರೋಧವಾಗಿ ಬಂಡಾಯ ಮತ್ತು ದಲಿತ ಸಾಹಿತ್ಯಗಳು ಹುಟ್ಟಿಕೊಂಡವು.

'ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದು' ಎಂಬ ಅಲ್ಲಮಪ್ರಭುಗಳ ಮಾತು ವರ್ತಮಾನದಲ್ಲಿ ನಿಂತು ಭೂತಕಾಲದ ಕುರಿತು ಆಲೋಚಿಸುವ ಕ್ರಮಕ್ಕೆ ಸಮರ್ಥನೆ ನೀಡುತ್ತದೆ. ಅಂದರೆ ಇತಿಹಾಸದ ಕುರಿತು ಆಲೋಚನೆಯಿಲ್ಲದೆ ವರ್ತಮಾನ ಭವಿಷ್ಯಗಳಿಲ್ಲ ಎಂಬಂತಿದೆ.

೧.೨ ಅಧ್ಯಯನದ ಉದ್ದೇಶ :

ಒಂದು ದೇಶದ ಇತಿಹಾಸವನ್ನು ಅಧ್ಯಯನ ಮಾಡುವಲ್ಲಿ ಹಾಗೂ ರಚಿಸುವಲ್ಲಿ ಅನೇಕ ವ್ಯಕ್ತಿಗಳ ಪರಿಶ್ರಮದ ಅವಶ್ಯಕತೆಯಿದೆ. ಯಾವುದೇ ಒಬ್ಬ ವ್ಯಕ್ತಿಯಿಂದ ದೇಶದ ಇಡೀ ಇತಿಹಾಸವನ್ನು ಸಂಪೂರ್ಣವಾಗಿ ಸಮಗ್ರವಾಗಿ, ಅಧ್ಯಯನ ಮಾಡಲು ಸಾಧ್ಯವಿಲ್ಲ. 'ಪ್ರತಿಯೊಂದು ಅಧ್ಯಯನವೂ ಒಂದಲ್ಲ ಒಂದು ಉದ್ದೇಶವನ್ನು ಇಟ್ಟುಕೊಂಡಿರುವುದರ ಜೊತೆಗೆ, ಗುರಿಯನ್ನು ಹೊಂದಿರುತ್ತದೆ. ಇಲ್ಲಿ ಗುರಿ ಎಂದರೆ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದಾದರೆ, ಏನನ್ನು ಶೋಧಿಸಲು ಪ್ರಯತ್ನಿಸಲಾಗುತ್ತದೆ ಎನ್ನುವುದನ್ನು ಉದ್ದೇಶ ತಿಳಿಸುತ್ತದೆ. ಇಂತಹ ಅಧ್ಯಯನದ

ಉದ್ದೇಶಗಳು ಸಂಶೋಧನಕಾರ್ಯದಲ್ಲಿ ಒಂದು ಉತ್ತಮ ಮಾರ್ಗಸೂಚಿಯಂತೆ ಕೆಲಸ ನಿರ್ವಹಿಸುತ್ತವೆ.'' (ಚಂದ್ರಪೂಜಾರಿ ಎಂ, ೨೦೦೮, ಪುಟ-೧೯)

ಕನ್ನಡದ ಮೊದಲ ಕಾದಂಬರಿಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಅವುಗಳ ಸಮಕಾಲೀನ ಪ್ರಜ್ಞೆ ಮತ್ತು ಸಾಮಾಜಿಕ ಕಾಳಜಿ. ಈ ಕಾಲಘಟ್ಟದಲ್ಲಿ ಹಿಂದೂ ಸಮಾಜದ ಜ್ವಲಂತ ಸಮಸ್ಯೆಗಳಾಗಿದ್ದ ಬಾಲ್ಯವಿವಾಹ ಮತ್ತು ವಿಧವಾ ವಿವಾಹ, ಸಾಂಪ್ರದಾಯಿಕ ನಂಬಿಕೆಗಳು ಮತ್ತು ವೃತಾಚರಣೆಗಳು, ಮಠಾಧಿಪತಿಗಳ ಅನೈತಿಕತೆ ಮತ್ತು ನಿರಂಕುಶತೆ, ಅಧಿಕಾರಿ ವರ್ಗದ ದರ್ಪ ಹಾಗೂ ಸ್ವಾರ್ಥ ಇವುಗಳಿಗೆಲ್ಲ ಪ್ರಗತಿಶೀಲ ಕಾದಂಬರಿಗಳು ರೊಚ್ಚಿನಿಂದ ಸ್ಪಂದಿಸುತ್ತವೆ. ಆದರೆ ಆ ಸ್ಪಂದನದ ಹಿಂದೆ ಒಂದು ಉತ್ತಮ ಸಮಾಜವನ್ನು ನಿರ್ಮಾಣ ಮಾಡುವ ಕಾಳಜಿಯಿದೆ. ಇವರು ಜಡಸಂಪ್ರದಾಯಕ್ಕೆ ವಿರುದ್ಧವಾಗಿ ಸೆಟೆದು ನಿಲ್ಲುವ ಪ್ರಗತಿಪರ ಮನೋಧರ್ಮದವರಾಗಿದ್ದರಿಂದ ಅವರ ದೃಷ್ಟಿಕೋನ ಪ್ರಧಾನವಾಗಿ ಕಾಣಿಸಿಕೊಂಡದ್ದು ಸಣ್ಣಕತೆಗಳ ರಂಗದಲ್ಲಿ. ಪ್ರಗತಿಶೀಲ ಚಳುವಳಿಯಿಂದ ನಮ್ಮ ಸಾಹಿತ್ಯದ ಮೇಲೆ ಆದ ಪರಿಣಾಮ ಗಣನೀಯವಾದದ್ದು. ಸಾಹಿತ್ಯ ರಚನೆಯ ದೃಷ್ಟಿ ಸ್ವರೂಪಗಳಲ್ಲಿ ಬದಲಾವಣೆಯನ್ನು ಅದು ಪ್ರಚೋದಿಸಿತು. ಸಂಭಾಷಣೆಗಳಲ್ಲಿ ಆಡುಮಾತಿನ ಬಳಕೆ ಹೆಚ್ಚಿತು. ಬರವಣಿಗೆ ಚುರುಕಾಯಿತು. ನಿರೂಪಣೆಯಲ್ಲಿ ವಾಸ್ತವಿಕತೆಗೆ ಮಾನ್ಯತೆ ದೊರೆಯಿತು. ದೇಶದಲ್ಲಿದ್ದ ಅತೃಪ್ತ ವಾತಾವರಣ ಸಾಹಿತ್ಯದಲ್ಲಿ ಮೂಡಿ ಬಂದಿತು. ಆವರೆಗೆ ಸ್ಥಳ ಕಾಣದಿದ್ದ ಹೊಸ ಹೊಸ ಸಮಸ್ಯೆಗಳ ವಿವೇಚನೆಗೆ ಪ್ರಾಧಾನ್ಯ ದೊರೆಯಿತು.

ಪ್ರಗತಿಶೀಲ ಸಾಹಿತ್ಯಕ್ಕೆ ಕಾದಂಬರಿಯೇ ಅಭಿವ್ಯಕ್ತಿಯ ಸಿದ್ಧರೂಪ ಎನ್ನುವ ಮಟ್ಟಿಗೆ ಅದು ಕಾದಂಬರಿಗಳ ಮೂಲಕವೇ ತನ್ನ ಆಶಯಗಳನ್ನು ಬಿಂಬಿಸಿತು. ಇವರು ತಮ್ಮ ಕಾದಂಬರಿಗಳಲ್ಲಿ ಅಂದಿನ ಸಮಾಜದಲ್ಲಿದ್ದ ಸಾಮಾಜಿಕ ಸಮಸ್ಯೆಗಳು, ಬ್ರಿಟೀಷರ ದಬ್ಬಾಳಿಕೆ, ಜನರ ಹಾಹಾಕಾರ, ಬಂಡವಾಳಶಾಹಿಗಳ ಶೋಷಣೆ, ಬೆಲೆಯೇರಿಕೆ ಈ ಎಲ್ಲ ಅಂಶಗಳನ್ನು ಚಿತ್ರಿಸುವರು. ಅಷ್ಟೇ ಅಲ್ಲದೇ ದೇಶದಲ್ಲಿದ್ದ ಜಾತಿವ್ಯವಸ್ಥೆ ಹಾಗೂ ಅದರ ಪರಿಣಾಮವಾಗಿ ಹುಟ್ಟಿದ ಅಸ್ಪೃಶ್ಯತೆ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಮಹಿಳೆ ವೇಶ್ಯೆಯಾಗುವ ಸ್ಥಿತಿಯನ್ನು ಪ್ರಗತಿಶೀಲರು ಮುಖ್ಯವಾಗಿ ಗಮನಿಸಿದರು. ಬಾಲ್ಯವಿವಾಹ, ವರದಕ್ಷಿಣೆ, ವಿಷಮವಿವಾಹ, ವೈಧವ್ಯ ಮೊದಲಾದ ಕ್ರೌರ್ಯಗಳಿಗೆ ತುತ್ತಾಗುತ್ತಿದ್ದ ಮಹಿಳೆ ಸಮಾಜದಲ್ಲಿ ಕೇವಲ ಒಂದು ಭೋಗದ ವಸ್ತು ಎಂದೇ ಬಿಂಬಿತವಾಗಿದ್ದಳು. ಇದನ್ನು ವಿರೋಧಿಸುವ ಪ್ರಗತಿಶೀಲರು ಅವಳಿಗೂ ಒಂದು ಸ್ಥಾನ ಮಾನವುಂಟು. ಸ್ತ್ರೀಯರನ್ನು ಮನುಷ್ಯರಾಗಿ ನೋಡುವ ಪರಿಪಾಠ ನಮ್ಮಲ್ಲಿ ಬರಬೇಕೆಂಬ ಆಶಯದಿಂದ ಅವರ ಬದುಕನ್ನು ಕುರಿತಾದ ಹಲವಾರು ಕಾದಂಬರಿಗಳನ್ನು ರಚಿಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ

ಶೋಷಣೆಗಳನ್ನು, ಜನರಲ್ಲಿ ಮನೆಮಾಡಿಕೊಂಡಿದ್ದ ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ಸಾಮಾಜಿಕ ಪ್ರಜ್ಞೆಯ ಕಾದಂಬರಿಗಳನ್ನು ಬರೆದರು.

ಪ್ರಗತಿಶೀಲರು ಸಮಕಾಲೀನ ಸಮಾಜದ ವಿವಿಧ ಮುಖಗಳ ಅನಾವರಣ ಮಾಡಿದ್ದಲ್ಲದೇ ಪುರಾಣ ಇತಿಹಾಸಗಳ ಆಳಕ್ಕೂ ಇಳಿದು ಶ್ರದ್ಧೆಯಿಂದ ಅಭ್ಯಸಿಸಿ ಅವುಗಳನ್ನು ತಮ್ಮ ಲೇಖನಿಯಿಂದ ಪುನಃ ಸೃಷ್ಟಿಸಿದರು. ಸನ್ನಿವೇಶಗಳನ್ನು ರಮ್ಯೋಜ್ವಲವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲ ಶಕ್ತಿ ಪ್ರಗತಿಶೀಲರಿಗೆ ಇದ್ದುದರಿಂದಲೇ ಪಾತ್ರಾಂತರಂಗವನ್ನು ಪ್ರವೇಶಿಸಿ ಅಲ್ಲಿನ ಸೂಕ್ಷ್ಮತಮ ಸಂವೇದನೆಗಳನ್ನು ಅರಿತು ಅರಗಿಸಿಕೊಂಡು ಅವುಗಳನ್ನು ಮರಳಿ ವಿವರ ವಿವರವಾಗಿ ಚಿತ್ರಿಸಬಲ್ಲ ಅಭಿವ್ಯಕ್ತಿ ಕೌಶಲವಿದ್ದುದರಿಂದ ಇತಿಹಾಸವನ್ನು ಮತ್ತೆ ಮರಳಿ ಕಟ್ಟುವ ಕೆಲಸ ಮಾಡಿದರು. ಇವರ ಐತಿಹಾಸಿಕ ಕಾದಂಬರಿಗಳಲ್ಲಿ ಆ ಕಾಲದ ರುದ್ರರಮಣೀಯವಾದ ಇತಿಹಾಸ, ದ್ರೋಹ, ಸ್ವಾರ್ಥ, ಪತನಗಳ ಕತೆ, ಸ್ವಾಮಿನಿಷ್ಠೆ, ದೈವಭಕ್ತಿ, ಪ್ರಜಾವಾತ್ಸಲ್ಯಗಳ ನಿರೂಪಣೆಯಿರುವುದು. ಭೂತಕಾಲವನ್ನು ವರ್ತಮಾನ ಕಾಲದಲ್ಲಿ ತಂದು ನಿಲ್ಲಿಸುವ ಕಲ್ಪನಾಶಕ್ತಿ ಅಸಾಮಾನ್ಯವಾದುದಾಗಿದೆ. ಸಾಮಾಜಿಕ ಸನ್ನಿವೇಶವೊಂದರಲ್ಲಿ ಇತಿಹಾಸದ ಎಳೆಗಳನ್ನು ಹುಡುಕಿ ತೆಗೆದು ಕಾದಂಬರಿಗಳನ್ನು ರಚಿಸಿರುವರು. ಇವರ ಐತಿಹಾಸಿಕ ಕಾದಂಬರಿಗಳೂ ಸಹ ಓದುಗರನ್ನು ಸಾಮಾಜಿಕ ಕಾದಂಬರಿಗಳಂತೆಯೇ ರಂಜಿಸುತ್ತವೆ. ಸಮಕಾಲೀನ ಜೀವನ ಸಮಸ್ಯೆಗಳನ್ನು ಅಮೂಲಾಗ್ರವಾಗಿ ವಾಸ್ತವತೆಯ ಬೆಳಕಿನಲ್ಲಿ ಚರ್ಚಿಸುವ ಉದ್ದೇಶದಿಂದ ಐತಿಹಾಸಿಕ ವಸ್ತುವನ್ನು ಆಯ್ಕೆ ಮಾಡಿಕೊಂಡರು.

ಇತಿಹಾಸ ಎಂಬುದರಲ್ಲಿ ಕೇವಲ ರಾಜ ಮಹಾರಾಜರುಗಳು, ಸಂಸ್ಥಾನಗಳನ್ನು ಕುರಿತು ಮಾತ್ರ ಬರೆಯದೆ ಜನರಲ್ಲಿ ಜಾಗೃತಿ ಮೂಡಿಸುವ ರಾಷ್ಟ್ರೀಯ ಪ್ರಜ್ಞೆಯುಳ್ಳ ಹಲವಾರು ಕಾದಂಬರಿಗಳನ್ನು ರಚಿಸಿದರು. ಪ್ರಗತಿಶೀಲರನ್ನು ಕುರಿತು ಇಲ್ಲಿಯವರೆಗೆ ಅಧ್ಯಯನ ನಡೆಸಿರುವಂತವರು ಮುಖ್ಯವಾಗಿ ಅವರ ಸಾಮಾಜಿಕ ಕಾದಂಬರಿಗಳನ್ನು ಹಾಗೂ ಕತೆಗಳನ್ನು ಅಧ್ಯಯನದಲ್ಲಿ ಚರ್ಚೆಗೆ ಒಳಪಡಿಸಿರುವರು. ಕನ್ನಡ ಸಾಹಿತ್ಯ ಲೋಕಕ್ಕೆ ಅಸಂಖ್ಯಾತ ಕತೆ, ಕಾದಂಬರಿಗಳನ್ನು ಕೊಟ್ಟ ಪ್ರಗತಿಶೀಲರ ಐತಿಹಾಸಿಕ ಕಾದಂಬರಿಗಳನ್ನು ಕುರಿತು ಇಲ್ಲಿಯವರೆಗೆ ಸಮಗ್ರವಾಗಿ ಅಧ್ಯಯನಕ್ಕೊಳಪಡಿಸಿಲ್ಲವೆಂದೇ ಹೇಳಬೇಕು.

ಕನ್ನಡ ಮುನ್ನಡೆವ ಬಗೆ ಎಂಬ ಲೇಖನದಲ್ಲಿ ಶಿ.ಶಿ ಬಸವನಾಳರು ಪ್ರಗತಿಶೀಲ ಸಾಹಿತ್ಯ ಕುರಿತು ಚರ್ಚಿಸಿರುವರು. 'ಸಾಹಿತ್ಯವು ಜೀವನದಿಂದಲೇ ಉದಯಿಸುವುದು. ಆದುದರಿಂದ ಜೀವನವನ್ನೇ ಅದು ಕನ್ನಡಿಸತಕ್ಕದ್ದು. ಈ ಅರ್ಥದಲ್ಲಿ ವಾಸ್ತವವಾಗಿರತಕ್ಕದ್ದು ಸರಿಯೆ. ಆದರೆ ವಾಸ್ತವವಾದುದಕ್ಕೆ ಹೋಗಿ ನಿಸರ್ಗತೆಯ ಮಟ್ಟ ಇಳಿಯಬಾರದು. ನಿಜವಾಗಿ ನೋಡಿದರೆ ಸಾಹಿತ್ಯಕ್ಕೆ

ಇಂತಹದೇ ವಸ್ತುವಿರಬೇಕೆಂಬ ಕಟ್ಟಳೆ ಇಲ್ಲ. ಆದರೆ ಯಾವ ವಸ್ತುವನ್ನು ಆರಿಸಿಕೊಂಡರೂ, ಅದನ್ನು ಆಯ್ದುಕೊಳ್ಳುವ ಉದ್ದೇಶ, ಅದಕ್ಕೆ ಕೊಡುವ ಮಹತ್ವ, ಅದನ್ನು ನಿರೂಪಿಸುವ ಕ್ರಮ, ಬಳಸುವ ಶೈಲಿ ಈ ಮುಂತಾದವುಗಳಿಂದ ಅದು ಉಚ್ಚ ಇಲ್ಲವೇ ನೀಚ ಕೃತಿಯಾಗಿರುವುದುಂಟು'[೨] (ವಿದ್ಯಾಶಂಕರ ಎಸ್, ೨೦೧೦, ಪುಟ-೨೦೮) ಎಂದು ಅಭಿಪ್ರಾಯ ವ್ಯಕ್ತಪಡಿಸಿರುವರು.

ಪ್ರಗತಿಶೀಲ ಕಾಲಘಟ್ಟದ ಐತಿಹಾಸಿಕ ಕಾದಂಬರಿಗಳಲ್ಲಿ ಮೂಡಿಬಂದಿರುವ ಇತಿಹಾಸದ ಪುನರ್‌ಲೇಖದ ಸ್ವರೂಪ ಕುರಿತು ವಿಶ್ಲೇಷಿಸುವುದು ಪ್ರಸ್ತುತ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶದಿಂದ ಪ್ರಗತಿಶೀಲ ಕಾಲಘಟ್ಟದಲ್ಲಿ ಬರುವ ನಾಲ್ಕು ಪ್ರಮುಖ ಕಾದಂಬರಿಕಾರರ ಐತಿಹಾಸಿಕ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಿದೆ. ಸಾಮಾನ್ಯವಾಗಿ ಒಂದು ಕಾಲಘಟ್ಟದ ಕಥಾಸಾಹಿತ್ಯವನ್ನೋ ಅಥವಾ ಕೆಲವು ಸೀಮಿತ ವ್ಯಕ್ತಿಗಳನ್ನೋ, ಕಾವ್ಯಗಳನ್ನೋ, ಕಾದಂಬರಿಗಳನ್ನೋ ಇಟ್ಟುಕೊಂಡು ಸಂಶೋಧನ ವಿದ್ಯಾರ್ಥಿಗಳು ಸಂಶೋಧನೆಯನ್ನು ಮಾಡುವುದು ಸಹಜ. ಇಲ್ಲಿ ನಾಲ್ಕು ಜನ ಕಾದಂಬರಿಕಾರರ ಐತಿಹಾಸಿಕ ಕಾದಂಬರಿಗಳನ್ನು ಇತಿಹಾಸದ ಪುನರ್‌ಲೇಖದ ಸ್ವರೂಪದ ನೆಲೆಯಲ್ಲಿ ಪರಿಭಾವಿಸಿ ಅಧ್ಯಯನ ನಡೆಸುವುದಕ್ಕೆ ಯತ್ನಿಸಲಾಗಿದೆ.

ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಬರೆಯಬೇಕೆನ್ನುವವರಿಗೆ ವಿಷಯ ವೈವಿಧ್ಯತೆಗೇನೂ ಕೊರತೆಯಿಲ್ಲ. ಪ್ರಗತಿಶೀಲ ಕಾದಂಬರಿಕಾರರು ಅದನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಕರ್ನಾಟಕದ ರಾಜಮನೆತನಗಳನ್ನಾಳಿದ ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೆಯಗಾರರು, ಕಿತ್ತೂರು ಸಂಸ್ಥಾನಿಕರು, ನರಗುಂದ ಸಂಸ್ಥಾನಿಕರು ಅವರ ಏಳು-ಬೀಳು, ರಾಜವೈಭವ, ಸಾಹಿತ್ಯ ಕಲೆಗಳ ಪ್ರೇಮ, ಅವರು ವೀರಾವೇಷದಿಂದ ಹೋರಾಡಿದ ಯುದ್ಧ ಪ್ರಸಂಗಗಳು, ಇವುಗಳನ್ನುಪಯೋಗಿಸಿಕೊಂಡು ವೈವಿಧ್ಯಮಯವಾದ ರೋಚಕವಾದ ಕಾದಂಬರಿಗಳನ್ನು ಪುನರ್‌ಲೇಖದ ಸ್ವರೂಪದ ಹಿನ್ನಲೆಯಲ್ಲಿ ರಚಿಸಿದ್ದು ಅವುಗಳನ್ನು ಕುರಿತು ಅಧ್ಯಯನ ನಡೆಸುವುದು ಪ್ರಮುಖ ಉದ್ದೇಶವಾಗಿದೆ.

ಐತಿಹಾಸಿಕ ಕಾದಂಬರಿಗಳ ರಚನೆ ಸುಲಭವಾದುದಲ್ಲ. ಅಂಥ ಕಾದಂಬರಿ ಕವಿಯ ಸೃಷ್ಟಿ ಶಕ್ತಿಯೂ, ಜೊತೆಗೆ ಸಂಶೋಧನಕಾರನ ತೀಕ್ಷ್ಣವಂತಿಕೆಯೂ ಅತ್ಯವಶ್ಯಕ. ಕಣ್ಣೆದುರಿನ ಸಮಾಜವನ್ನೂ, ವ್ಯಕ್ತಿಗಳನ್ನು ಚಿತ್ರಿಸುವುದಕ್ಕಿಂತ ಗತಿಸಿಹೋದ ಇತಿಹಾಸದ ಪಾತ್ರಗಳನ್ನು ಚಿತ್ರಿಸುವುದು ಕಷ್ಟಸಾಧ್ಯ. ಇಂತಹ ಐತಿಹಾಸಿಕ ಕಾದಂಬರಿಗಳನ್ನು ಇತಿಹಾಸದ ಪುನರ್‌ಲೇಖದ ಸ್ವರೂಪದ ಹಿನ್ನೆಲೆಯಲ್ಲಿ ಕಾಣುತ್ತ ಆ ಪಾತ್ರಗಳ ಮತ್ತು ಘಟನೆಗಳ ಬದುಕಿನ ಸಾಮರಸ್ಯ ಮತ್ತು ಸಂಘರ್ಷದ ನೆಲೆಗಳನ್ನು ಕುರಿತು ಅಧ್ಯಯನ ನಡೆಸುವುದು ಪ್ರಮುಖ ಉದ್ದೇಶವಾಗಿದೆ.

೧.೩ ಅಧ್ಯಯನದ ವ್ಯಾಪ್ತಿ :

ಸಾಮಾನ್ಯ ಅರ್ಥದಲ್ಲಿ 'ವ್ಯಾಪ್ತಿ' ಎಂದರೆ ಎಲ್ಲೆ, ಮೇರೆ, ಹರವು, ಗಡಿ, ವೈಶಾಲ್ಯತೆ ಅಥವಾ ಸೀಮಾರೇಖೆ ಎಂದಾಗುತ್ತದೆ. ಆದರೆ ಯಾವುದೇ ಒಂದು ವಿಷಯದ ವ್ಯಾಪ್ತಿ ಎಂದರೆ ಆ ಕ್ಷೇತ್ರದ ವೈಶಾಲ್ಯತೆ, ಹರವು ಅಥವಾ ಅಧ್ಯಯನದ ಸೀಮಾರೇಖೆ ಎಂದರ್ಥ. ಸಂಶೋಧಕ ಕೈಗೊಳ್ಳುವ ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು, ಅಂದರೆ ವ್ಯಾಪ್ತಿ ಎಂಬುದು ಬಹಳ ಮುಖ್ಯ. ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತವಾದ ಸಂಶೋಧನೆ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಒಂದು ಚೌಕಟ್ಟು ಅಗತ್ಯ. ಈ ಚೌಕಟ್ಟಿನ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನ ಮಿತಿಯನ್ನು ತೀವ್ರಗೊಳಿಸುವುದಲ್ಲದೇ, ಸಂಶೋಧಕನನ್ನು ದಾರಿ ತಪ್ಪಿಸುವ ಕೆಲಸ ಮಾಡುವುದರಿಂದ ಕೈಗೊಂಡ ಕಾರ್ಯಕ್ಕೆ ಒಂದು ವ್ಯಾಪ್ತಿ ಹಾಕಿಕೊಳ್ಳುವುದು ಅತ್ಯಂತ ಅವಶ್ಯಕ.

ಕನ್ನಡನಾಡು ಚಾರಿತ್ರಿಕ ಹಾಗೂ ಸಾಂಸ್ಕೃತಿಕತೆಯನ್ನು ಮೆರೆದ ಪ್ರದೇಶ. ಇಲ್ಲಿಯ ಇತಿಹಾಸ, ಭಾಷೆ, ಉಡುಪು, ಕಲೆ, ಹಬ್ಬ ಹರಿದಿನ, ಆಧುನಿಕ ಸಾಹಿತ್ಯ ಹೀಗೆ ಹತ್ತಾರು ವೈವಿಧ್ಯತೆಗಳಲ್ಲಿ ಅರಳಿ ನಿಂತಿದೆ. ಇದು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಇಂತಹ ಕನ್ನಡ ನಾಡಿನ ಹಲವಾರು ರಾಜಮನೆತನಗಳ ಇತಿಹಾಸವನ್ನು ಪ್ರಗತಿಶೀಲ ಕಾದಂಬರಿಕಾರರು ಚಿತ್ರಿಸಿದ್ದಾರೆ. ವ್ಯಕ್ತಿ ತನ್ನ ವಿಚಾರ, ಚಿಂತನ, ತಿಳುವಳಿಕೆ, ಭಾವನೆಗಳನ್ನು ಕಲಾತ್ಮಕವಾಗಿ ಅಕ್ಷರಮಾಧ್ಯಮದ ಮೂಲಕ ಅಭಿವ್ಯಕ್ತಿ ಪಡೆಯುವ ಸಾಹಿತ್ಯವೂ ಸಮಾಜದ ಪ್ರಗತಿಗಾಗಿ, ಪೂರಕವಾಗಿ ನಿಲ್ಲಬಲ್ಲ ಪ್ರಮುಖವಾದ ಅಂಶವಾಗಿದೆ. ಪ್ರಗತಿಶೀಲ ಸಾಹಿತ್ಯ ತನ್ನ ವಿಶಿಷ್ಟವಾದ ಪ್ರಭಾವವನ್ನು ಬೀರಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಶ್ವತವಾಗಿ ಗಮನ ಸೆಳೆಯುವಂತಾಗಿದೆ.

ಪ್ರಗತಿಶೀಲ ಲೇಖಕರು ಸಾಕಷ್ಟು ಜನರಿದ್ದು ಈ ಅಧ್ಯಯನದ ವ್ಯಾಪ್ತಿಗೆ ಎಲ್ಲ ಲೇಖಕರನ್ನು ಆಯ್ದುಕೊಳ್ಳದೇ ಕೇವಲ ನಾಲ್ಕು ಜನರನ್ನು ಅಂದರೆ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರನ್ನು ಮಾತ್ರ ಆಯ್ದುಕೊಂಡು ಅವರು ರಚಿಸಿರುವ ಐತಿಹಾಸಿಕ ಕಾದಂಬರಿಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ :

ಒಂದು ರಾಷ್ಟ್ರದ ಜೀವ ಜೀವಾಳವನ್ನರಿಯಬೇಕಾದರೆ ಅದರ ಪ್ರಾಚೀನ ಇತಿಹಾಸದ ಪರಿಚಯ ಅಗತ್ಯ. ಆಚಾರ ವಿಚಾರಗಳ ಪರಂಪರೆ ರಾಷ್ಟ್ರದಲ್ಲಿ ಹೇಗೆ ಬೆಳೆದು ಬಂದಿದೆ. ಅದನ್ನು ಹೇಗೆ ಮುಂದಕ್ಕೊಯ್ಯಬೇಕೆಂಬ ಕಲ್ಪನೆ ಇತಿಹಾಸದ ಪರಿಚಯದಿಂದ ಉಂಟಾಗುತ್ತದೆ. ಕೀರ್ತಿವೆತ್ತ

ಕನ್ನಡನಾಡಿನ ಪ್ರಾಚೀನ ಇತಿಹಾಸವೆಂದರೆ ಇಲ್ಲಿ ಆಳಿದ ಅರಸುಮನೆತನ, ಪಾಳೆಯಗಾರರ ಗೌರವಪೂರ್ಣ ಇತಿಹಾಸ, ಕರ್ನಾಟಕದಲ್ಲಿ ಶ್ರೀಮಂತ ಪರಂಪರೆಯನ್ನು ಹುಟ್ಟು ಹಾಕಿದ, ಪ್ರಾಚೀನ ಕಾಲದಿಂದ ಪ್ರಾಚ್ಯ ವೈಶಿಷ್ಟ್ಯವನ್ನು ಮೆರೆಯುತ್ತ ಬಂದ ಅರಸು ಮನೆತನಗಳ ತಲಸ್ಪರ್ಶಿ ಇತಿಹಾಸ. ಈ ಇತಿಹಾಸವನ್ನು ಇಟ್ಟುಕೊಂಡು ಸಾಕಷ್ಟು ಕಾದಂಬರಿಕಾರರು ಅನೇಕ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದು ಅದರಲ್ಲಿ ಮೊಟ್ಟ ಮೊದಲ ಐತಿಹಾಸಿಕ ಕಾದಂಬರಿ ಗಳಗನಾಥರ 'ಕುಮುದಿನಿ'. ತದನಂತರ ದೇವುಡು ನರಸಿಂಹಶಾಸ್ತ್ರೀಗಳು 'ಮಯೂರ' ಎಂಬ ಕಾದಂಬರಿಯನ್ನು ರಚಿಸುವುದರ ಮೂಲಕ ಕನ್ನಡಿಗರ ಗತವೈಭವವನ್ನು ಪರಿಚಯಿಸಿದರು. ತದನಂತರ ಅನೇಕ ಕಾದಂಬರಿಕಾರರು ಕನ್ನಡನಾಡಿನ ಮತ್ತು ಭಾರತದ ಇತಿಹಾಸವನ್ನು ಬಳಸಿಕೊಂಡು ಕಾದಂಬರಿಗಳನ್ನು ರಚಿಸಿದ್ದಾರೆ. ಅವರಲ್ಲಿ ಪ್ರಮುಖವಾಗಿ ಆನಂದಕಂದ, ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನ, ಬಿ.ಪುಟ್ಟಸ್ವಾಮಯ್ಯ, ಸೀತಾರಾಮಶಾಸ್ತ್ರೀ, ಕೊರಟಿ ಶ್ರೀನಿವಾಸರಾವ್, ಮಾಸ್ತಿ, ಕೆ.ವಿ ಅಯ್ಯರ್, ಸೂರ್ಯನಾಥ ಕಾಮತ್, ಎಚ್ ತಿಪ್ಪೇರುದ್ರಸ್ವಾಮಿ ಮುಂತಾದವರು. 'ಐತಿಹಾಸಿಕ ಗತವೈಭವದ ನೆನಪುಗಳಲ್ಲಿ ಭಾರತೀಯ ಸಾಹಿತ್ಯ ಪುಂಖಾನುಪುಂಖವಾಗಿ ವಿಜೃಂಬಿಸಿತು. ಕ್ಷಾತ್ರವೂ ಒಂದು ಬಗೆಯಲ್ಲಿ ರಾಷ್ಟ್ರೀಯ ಪ್ರಜ್ಞಾಭಿವ್ಯಕ್ತಿ ಜನರ ಮೈಯಲ್ಲಿ ತಣ್ಣಗಾಗಿ ಹೆಪ್ಪುಗಟ್ಟಿದ ರಕ್ತದಲ್ಲಿ ಬಿಸಿ ಹರಿಯಲು ಈ ಐತಿಹಾಸಿಕ ಸಾಹಿತ್ಯದ ಅಭಿವ್ಯಕ್ತಿ ಸಮರ್ಥ ಪಾತ್ರವಾಯಿತು'[೩] (ಸಂಪತ್‌ಕುಮಾರ ಬಿ.ಪಿ, ೨೦೧೨, ಪುಟ-೧೩೬) ಐತಿಹಾಸಿಕ ವಿಷಯವಸ್ತುಗಳು, ಘಟನೆಗಳು, ಪ್ರಗತಿಶೀಲ ಕಾದಂಬರಿಕಾರರಿಗೆ ಹೇಗೆ ಕಂಡಿವೆ. ಆ ಘಟನೆಗಳ ಕುರಿತು ಸಿಕ್ಕ ಅಲ್ಪ ಸ್ವಲ್ಪ ಆಧಾರಗಳ ಮೇಲೆಯೇ ಐತಿಹಾಸಿಕ ಕಾದಂಬರಿಗಳನ್ನು ಹೇಗೆ ರಚಿಸಿರುವರು ಎಂಬುವುದರ ಕುರಿತಾಗಿ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ಪೀಠಿಕೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ ಮತ್ತು ಮಹತ್ವಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಐತಿಹಾಸಿಕ ಕಾದಂಬರಿಗಳಿಗೆ ಸಂಬಂಧಿಸಿದಂತೆ ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಈ ಅಧ್ಯಾಯದಲ್ಲಿ ಮೂರು ವಿಭಾಗಗಳನ್ನು ಮಾಡಿಕೊಂಡಿದ್ದು ಪಿಹೆಚ್.ಡಿ/ಎಂ.ಫಿಲ್‌ಗೆ ಸಂಬಂಧಿಸಿದ ಸಂಶೋಧನಾ ಪ್ರಬಂಧಗಳನ್ನು ಅಧ್ಯಯನದ ವಿಭಾಗದಲ್ಲಿ, ಕಾದಂಬರಿಗಳಿಗೆ ಸಂಬಂಧಿಸಿದ ವಿಷಯಗಳ ಕೃತಿಗಳನ್ನು ಕೃತಿಗಳ ವಿಭಾಗದಲ್ಲಿ ಹಾಗೂ ಕಾದಂಬರಿಗಳ ಕುರಿತು ರಚಿತವಾದ ಪ್ರಬಂಧಗಳು,

ವಿಮರ್ಶಾ ಲೇಖನಗಳು, ಸಂಶೋಧನಾ ಲೇಖನಗಳನ್ನು ಬಿಡಿಲೇಖನಗಳು ಎಂಬ ವಿಭಾಗದಲ್ಲಿ ವಿವರಿಸಲಾಗಿದ್ದು, ಆ ಮೂಲಕ ಪ್ರಸ್ತುತ ಈ ಸಂಶೋಧನೆಯು ತುಳಿಯಬೇಕಾಗಿದ್ದ ಹಾದಿಯನ್ನು ಕಂಡುಕೊಳ್ಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪುನರ್‌ಲೇಖದ ಕುರಿತು ವಿವಿಧ ವಿದ್ವಾಂಸರು ಹೇಳಿದ ವಿಚಾರಗಳನ್ನು ನೋಡಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ಪ್ರಜ್ಞೆ ಹೇಗೆ ಬೆಳೆದು ಬಂದಿತು? ಅದರಲ್ಲೂ ಪ್ರಗತಿಶೀಲ ಕಾದಂಬರಿಕಾರರಾದ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿಯವರು ಇತಿಹಾಸದ ಒಂದೊಂದು ಎಳೆಯನ್ನು ಇಟ್ಟುಕೊಂಡು, ಸಿಕ್ಕಂತಹ ಅಲ್ಪ ಸ್ವಲ್ಪ ಆಕರಗಳ ಮೇಲಿಂದ ಇತಿಹಾಸಕ್ಕೆ ಅಪಚಾರವಾಗದ ರೀತಿಯಲ್ಲಿ ಕೆಲವೊಂದು ಸನ್ನಿವೇಶ, ಪಾತ್ರಣಗಳನ್ನು ಚಿತ್ರಿಸುವುದರ ಮೂಲಕ ಪುನರ್‌ಲೇಖದ ಸ್ವರೂಪದಲ್ಲಿ ಇತಿಹಾಸದ ಚಿತ್ರಣವೇ ಕಣ್ಮುಂದೆ ಕಟ್ಟುವ ರೀತಿಯಲ್ಲಿ ಹೇಗೆ ಬರೆದಿರುವರೆಂಬುದನ್ನು ಶೋಧಿಸಲಾಗಿದೆ. ಅಷ್ಟೇ ಅಲ್ಲದೆ ಪ್ರಗತಿಶೀಲ ಕಾದಂಬರಿಕಾರರು ಪುನರ್‌ಲೇಖದಲ್ಲಿ ರಚಿಸಿರುವ ಐತಿಹಾಸಿಕ ಕಾದಂಬರಿಗಳ ಕಥಾವಸ್ತುವಿನ ಬಗ್ಗೆ ಸಂಕ್ಷಿಪ್ತವಾಗಿ ನೋಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಜೀವನ ಮೌಲ್ಯಗಳಾವವು ಎಂದು ಹೇಳುತ್ತ ವೀರ, ತ್ಯಾಗ, ಪ್ರೇಮ ಮತ್ತು ಕರುಣೆ ಎಂಬ ನಾಲ್ಕು ಅಂಶಗಳ ಕುರಿತು ನೋಡಲಾಗಿದೆ. ಪ್ರತಿಯೊಂದು ಕಾದಂಬರಿಗಳಲ್ಲಿ ಪ್ರಸ್ತಾಪವಾಗಿರುವ ಈ ಜೀವನ ಮೌಲ್ಯಗಳ ವಿಚಾರಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಒಂದು ಸಾಮ್ರಾಜ್ಯ ಕಟ್ಟುವಲ್ಲಿ ಮಠಾಧೀಶರು ಬೀರಿದ ಪ್ರಭಾವವೇನು? ಶ್ರೀ ವಿದ್ಯಾರಣ್ಯರು, ಶ್ರೀ ಸಾಯಣಾಚಾರ್ಯರು, ಶ್ರೀ ವ್ಯಾಸತೀರ್ಥರು ವಿಜಯನಗರದ ಶ್ರೇಯೋಭಿವೃದ್ಧಿಗೆ ಯಾವ ತೆರನಾಗಿ ನೆರವಾದರು, ಶ್ರೀ ಉಗ್ರಚನ್ನವೀರಸ್ವಾಮಿಗಳು, ಶ್ರೀ ಮುರುಘರಾಜೇಂದ್ರ ಸ್ವಾಮಿಗಳು, ಶ್ರೀ ಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು ಚಿತ್ರದುರ್ಗ ಸಂಸ್ಥಾನದ ಬೆಳವಣಿಗೆಗೆ ಹೇಗೆ ಕಾರಣೀಕರ್ತರಾದರು ಎಂಬುದರ ಕುರಿತು ನೋಡಲಾಗಿದೆ. ಹಾಗೆಯೇ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನಿಗೆ ಜಿನಸೇನಾಚಾರ್ಯರು ಮತ್ತು ಗುಣಭದ್ರಾಚಾರ್ಯರು ನೀಡಿದ ನೆರವು ಜೊತೆಗೆ ಕಿತ್ತೂರು ಸಂಸ್ಥಾನದ ಬೆಳವಣಿಗೆಯಲ್ಲಿ ಶ್ರೀ ಪ್ರಭುಸ್ವಾಮಿಗಳ ಪಾತ್ರ ಮುಂತಾದ ವಿಚಾರಗಳ ಜೊತೆಗೆ ಕಾದಂಬರಿಗಳಲ್ಲಿ ಪ್ರಸ್ತಾಪವಾದ ವಿವಿಧ ಹಬ್ಬಗಳ ಆಚರಣೆಗಳ ಕುರಿತು ಸವಿಸ್ತಾರವಾಗಿ ನೋಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಒಂದು ಕಾದಂಬರಿಗೆ ಪಾತ್ರಗಳು ಎಷ್ಟು ಅವಶ್ಯಕ. ಯಾವುದೇ ಪಾತ್ರವಿಲ್ಲದೇ ಘಟನೆಯಿಲ್ಲ. ಘಟನೆಯ ಮೂಲಭೂತವಾದ ವಸ್ತು ಪಾತ್ರದಲ್ಲಿದೆಯೆಂಬುದರ ಕುರಿತು ಹೇಳಲಾಗಿದೆ. ಇದರಲ್ಲಿ ನಾಯಕ ಪ್ರಧಾನ ಪಾತ್ರಗಳು ಹಾಗೂ ಉಪೇಕ್ಷಿತ ಪಾತ್ರಗಳು ಎಂದು ವಿಭಾಗಿಸಿಕೊಂಡಿದ್ದು ಐತಿಹಾಸಿಕ ಕಾದಂಬರಿಗಳಲ್ಲಿ ಪುನರ್‌ಲೇಖದ ಸ್ವರೂಪದಲ್ಲಿ ಹಲವಾರು ಪಾತ್ರಗಳು ಮೂಡಿಬಂದಿದ್ದು ಅವುಗಳನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಈ ಅಧ್ಯಯನದ ಸಮಾರೋಪವನ್ನು ಪ್ರಕಟಿಸಲಾಗಿದೆ. ಜೊತೆಗೆ ಈ ಸಂಶೋಧನೆಯ ಬಹುಮುಖ್ಯ ಭಾಗವಾದ ಅಧ್ಯಯನದ ಫಲಿತಗಳನ್ನು ಮಂಡಿಸಲಾಗಿದೆ. ಅಧ್ಯಾಯಗಳ ನಂತರದ ಅನುಬಂಧದಲ್ಲಿ ಪ್ರಾಥಮಿಕ ಆಕರಗಳು, ಪರಾಮರ್ಶನ ಕೃತಿಗಳನ್ನು ಅಕಾರಾದಿಯಲ್ಲಿ ದಾಖಲಿಸಲಾಗಿದೆ.

೧.೫ ಅಧ್ಯಯನದ ವಿಧಾನ :

೧) ಪ್ರತಿಯೊಂದು ಐತಿಹಾಸಿಕ ಕಾದಂಬರಿಗಳಲ್ಲೂ ಇತಿಹಾಸದ ಅಂಶಗಳಿದ್ದು ಇವು ಪುನರ್‌ಲೇಖದ ಸ್ವರೂಪದಲ್ಲಿ ಹೇಗೆ ಪ್ರಕಟವಾಗಿವೆ ಮತ್ತು ಯಾಕೆ ಪ್ರಕಟವಾಗಿವೆ ಎಂಬುದನ್ನು ಚರ್ಚಿಸಲು ಯತ್ನಿಸಲಾಗಿದೆ. ಈ ದಿಸೆಯಲ್ಲಿ ಪರಸ್ಪರ ಕಾದಂಬರಿಗಳನ್ನು ವಿಶ್ಲೇಷಣಾತ್ಮಕವಾಗಿ ಚರ್ಚಿಸಲಾಗಿದೆ.

೨) ಮಹಾಪ್ರಬಂಧವು ಒಂದು ವಿಶ್ಲೇಷಣಾತ್ಮಕ ಆಶಯವಾಗಿದ್ದು ಪ್ರಸ್ತುತ ಅಧ್ಯಯನವು ಸಹಜವಾಗಿಯೇ ಆಶಯ ಪ್ರಧಾನವಾಗಿದೆ. ಈ ಆಶಯವನ್ನು ನಾಲ್ಕು ಜನ ಕಾದಂಬರಿಕಾರರು ಬೇರೆ ಬೇರೆ ಬಗೆಯಲ್ಲಿ ನಿರ್ವಹಣೆ ಮಾಡಿದ್ದಾರೆ. ಈ ನಿರ್ವಹಣೆಯಲ್ಲಿರುವ ವಿಶಿಷ್ಟತೆಯನ್ನು ಗುರುತಿಸಲು ಯತ್ನಿಸಲಾಗಿದೆ.

೩) ಕಾದಂಬರಿಗಳಲ್ಲಿ ಪ್ರಕಟವಾಗುವ ಮಾನಸಿಕ, ತಾತ್ವಿಕ, ದಾರ್ಶನಿಕ ಹೊಳವುಗಳನ್ನು ಮತ್ತು ಆ ಹೊಳವುಗಳ ಮೂಲಕ ವ್ಯಕ್ತವಾಗುವ ಲೋಕದೃಷ್ಟಿಗಳನ್ನು ಕುರಿತು ಚರ್ಚಿಸಲಾಗಿದೆ.

೪) ಕಾದಂಬರಿಗಳಲ್ಲಿ ವ್ಯಕ್ತಿ, ಕುಟುಂಬ, ಊರು ದೇಶಗಳ ಒಳಗೆ ನಡೆದಿರುವ ಪಲ್ಲಟಗಳನ್ನು ಕುರಿತು ಲೋಕಚಿಂತನೆ ಮತ್ತು ಜಿಜ್ಞಾಸೆಯಿದೆ. ಈ ಜಿಜ್ಞಾಸೆಯನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ. ಕಾದಂಬರಿಗಳಲ್ಲಿ ವಿಕಾಸ, ನೈತಿಕತೆ, ಸಂಘರ್ಷ, ಅನುಭವದ ಶೋಧವನ್ನೂ ಅದರ ನೆಲೆಗಳನ್ನು ಅಧ್ಯಯನ ಮಾಡಲಾಗಿದೆ.

೫) ಕಾದಂಬರಿಗಳಲ್ಲಿ ಬರುವ ಮಾನವ ಸಂಬಂಧಗಳನ್ನು, ಹಿಂಸೆ, ಕ್ರೌರ್ಯವನ್ನು ಮತ್ತು ಹಿಂಸೆ, ಕ್ರೌರ್ಯಗಳು ಮನುಷ್ಯ ಸಂಬಂಧಗಳನ್ನು ಹೇಗೆ ಹಾಳುಗೆಡವಿವೆ ಎಂಬುದನ್ನು ಒಟ್ಟಾರೆಯಾಗಿ ಮನುಷ್ಯ ಸಂಬಂಧದ ಎರಡೂ ಮುಖಗಳನ್ನೂ ಗುರುತಿಸಿ ಅಧ್ಯಯನ ಮಾಡಲಾಗಿದೆ.

೬) ಕನ್ನಡ ಕಾದಂಬರಿಗಳಲ್ಲಿ ಬಹಳ ಮುಖ್ಯವಾದ ವಿನ್ಯಾಸ ಗ್ರಾಮ ಮತ್ತು ನಗರಗಳ ನಡುವಿನ ಜೀವನ ಪದ್ಧತಿ, ಈ ಸಂಚಲನ ಪ್ರಗತಿಶೀಲ ಕಾದಂಬರಿಗಳಲ್ಲಿದೆ. ಈ ಹಿನ್ನೆಲೆಯಲ್ಲಿ ನಾಲ್ಕೂ ಕಾದಂಬರಿಕಾರರು ಹೇಗೆ ನಿರ್ವಹಣೆ ಮಾಡಿದ್ದಾರೆ ಎಂದು ತಿಳಿಯುವ ವಿಧಾನವನ್ನು ಅನುಸರಿಸಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ನಾಲ್ಕು ಜನ ಕಾದಂಬರಿಕಾರರ ಕಾದಂಬರಿಗಳ ಜೊತೆಯಲ್ಲಿ ಉಳಿದ ಕನ್ನಡ ಕಾದಂಬರಿಕಾರರನ್ನು ಪ್ರಾಸಂಗಿಕವಾಗಿ ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೬ ಅಧ್ಯಯನದ ಮಹತ್ವ :

ಪ್ರಗತಿಶೀಲ ಚಳುವಳಿಯ ಪ್ರಮುಖ ಬರಹಗಾರರಾದ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರ ಐತಿಹಾಸಿಕ ಕಾದಂಬರಿಗಳನ್ನು ಓದುವಾಗ ಅವರು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಪಡಿಸಿದ ಇತಿಹಾಸದ ವಿಷಯಗಳು ಓದುಗರನ್ನು ರಾಜ ಮಹಾರಾಜರ ಕಾಲಕ್ಕೆ ಕೊಂಡೊಯ್ದು ಬೇರೊಂದು ಲೋಕವನ್ನೇ ಸೃಷ್ಟಿಸುವಂತಿವೆ. ಇವರು ತಮ್ಮ ಐತಿಹಾಸಿಕ ಕಾದಂಬರಿಗಳಲ್ಲಿ ಯಥಾವತ್ತಾದ ಇತಿಹಾಸವನ್ನು ಕೊಡದೆ ಅದನ್ನು ತಮ್ಮ ಕಾಲ್ಪನಿಕ ದೃಷ್ಟಿಕೋನದಿಂದ ಕೆಲವು ಪಾತ್ರ ಹಾಗೂ ಸನ್ನಿವೇಶಗಳನ್ನು ಸೃಷ್ಟಿಸಿ ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಿರುವುದರಿಂದ ನಮ್ಮ ನಾಡಿನ ಇತಿಹಾಸದ ಬಗ್ಗೆ ಸಮಗ್ರವಾಗಿ ತಿಳಿದುಕೊಳ್ಳಲು ಈ ಅಧ್ಯಯನ ಮಹತ್ವತೆಯನ್ನು ಪಡೆದುಕೊಂಡಿದೆ.

ಅಧ್ಯಾಯ ೨

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧. ಅಧ್ಯಯನಗಳು

೨. ಕೃತಿಗಳು

೩. ಲೇಖನಗಳು

ಅಧ್ಯಾಯ ೨

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಸಾಹಿತ್ಯದ ಬೆಳವಣಿಗೆಗೆ ಕಾರಣರಾದಂತವರು ಹಲವರು. ಅದರಲ್ಲಿ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿ ಮುಂಚೂಣಿಯಲ್ಲಿದ್ದವರು. ಆ ಕಾಲಘಟ್ಟದ ಕನ್ನಡಿಗರಲ್ಲಿ ಓದುಗ ವರ್ಗವನ್ನು ಬೆಳೆಸಿ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಬರಹಗಳ ಮೂಲಕ ಹೊಸ ಚಿಂತನೆಯನ್ನು ಮೂಡಿಸಿದರು. ಇವರ ಬರಹಗಳನ್ನು ಒಪ್ಪದವರು ಟೀಕೆ ಮಾಡಿದ್ದು ಉಂಟು. ಆದರೆ ಯಾವ ಟೀಕೆಗಳಿಗೂ ಜಗ್ಗದ ಇವರು ವಾಸ್ತವ ಬದುಕನ್ನು ಚಿತ್ರಿಸುವ ಸಾಮಾಜಿಕ ಕಾದಂಬರಿಗಳನ್ನು ರಚಿಸುವುದರ ಜೊತೆಗೆ ಐತಿಹಾಸಿಕ ಕಾದಂಬರಿಗಳನ್ನು ಸಹ ಬರೆದರು. ಈ ಅಧ್ಯಾಯದಲ್ಲಿ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರನ್ನು ಕುರಿತಾಗಿ ಬಂದಿರುವ ಸಂಶೋಧನಾತ್ಮಕ ಪ್ರಬಂಧಗಳು, ವಿಮರ್ಶಾತ್ಮಕ ಲೇಖನಗಳು, ಸಂಪಾದನಾ ಕೃತಿಗಳು, ಬಿಡಿಲೇಖನಗಳನ್ನು ಕುರಿತು ನೋಡಲಾಗಿದೆ. ಈ ಅಧ್ಯಾಯವನ್ನು ಮೂರು ಭಾಗಗಳಾಗಿ ಮಾಡಲಾಗಿದೆ.

೧) ಅಧ್ಯಯನಗಳು (ಪಿಹೆಚ್.ಡಿ/ಎಂ.ಫಿಲ್)

೨) ಕೃತಿಗಳು

೩) ಲೇಖನಗಳು

೨.೧ ಅಧ್ಯಯನಗಳು :

ಬಸವರಾಜ ಸಾದರ **ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು** ೧೯೮೬ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧವಾಗಿದ್ದು ಪ್ರಗತಿಶೀಲ ಚಳುವಳಿ ಹುಟ್ಟಿ ಅದು ಕನ್ನಡ ನಾಡಿನಲ್ಲಿ ಬೆಳೆದು ಬಂದ ರೀತಿ, ಬಸವರಾಜ ಕಟ್ಟೀಮನಿಯವರು ಪ್ರಗತಿಪಂಥದಲ್ಲಿ ಗುರುತಿಸಿಕೊಂಡು ನಡೆಸಿದ ಹೋರಾಟ, ಅವರ ಜೀವನದ ಸವಿಸ್ತಾರ ವಿವರಣೆಗಳನ್ನು ನೀಡಿರುವರು. ಅವರು ರಚಿಸಿರುವ ಕಾದಂಬರಿಗಳ ವಸ್ತು ಅಥವಾ ಕಥೆಯನ್ನಾಧರಿಸಿ ಅಧ್ಯಯನದ ಅನುಕೂಲಕ್ಕಾಗಿ ರಾಷ್ಟ್ರೀಯತೆಯ ಕಾದಂಬರಿಗಳು, ಕಾರ್ಮಿಕ ಹೋರಾಟದ ಕಾದಂಬರಿಗಳು, ಸಾಮಾಜಿಕ ಕಾದಂಬರಿಗಳು, ರಾಜಕೀಯ ಕಾದಂಬರಿಗಳು, ಐತಿಹಾಸಿಕ ಕಾದಂಬರಿಗಳು ಎಂದು ವರ್ಗೀಕರಣ ಮಾಡಿಕೊಂಡು ಸಮಗ್ರವಾಗಿ ಚರ್ಚಿಸಿದ್ದಾರೆ.

ಕೆ.ಶಿವಾನಂದಯ್ಯ **ಅ.ನ.ಕೃ ಅವರ ಸಮಗ್ರ ಸಾಹಿತ್ಯ: ಒಂದು ಅಧ್ಯಯನ** ೨೦೦೦ ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧವಾಗಿದ್ದು ಇದರಲ್ಲಿ ಅ.ನ.ಕೃ ರವರ ಜೀವನ ಸಾಧನೆ, ಪ್ರಗತಿಶೀಲ ಚಳುವಳಿಯ ಸೈದ್ಧಾಂತಿಕ ನೆಲೆಗಳನ್ನು ಕುರಿತು ಹೇಳುತ್ತ, ಅ.ನ.ಕೃ ರವರ ಬರಹಗಳನ್ನು ಸೃಜನ ಸಾಹಿತ್ಯ ಮತ್ತು ಸೃಜನೇತರ ಸಾಹಿತ್ಯ ಎಂದು ವಿಭಾಗಿಸಿ ಅಧ್ಯಯನ ನಡೆಸಿದ್ದಾರೆ.

ಅನ್ನಪೂರ್ಣ ಫ ಹತ್ತಿಮತ್ತೂರ **ಕಿತ್ತೂರ ಸಂಸ್ಥಾನದ ಸಾಹಿತ್ಯ** ೨೦೦೨ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧವಾಗಿದ್ದು ಇದರಲ್ಲಿ ಕಿತ್ತೂರಿನ ಇತಿಹಾಸ, ಅಲ್ಲಿಯ ಜಾನಪದ ಸಾಹಿತ್ಯ, ಶಿಷ್ಟ ಸಾಹಿತ್ಯ, ಅಪ್ರಕಟಿತ ಸಾಹಿತ್ಯದ ಅಂಶಗಳನ್ನು ಕುರಿತು ಸಮಗ್ರವಾಗಿ ಚರ್ಚಿಸಿರುವರು.

ಮೀನಾಕ್ಷಿ ಜಂಗಮನಿ **ಚಾರಿತ್ರಿಕ ಕಾದಂಬರಿ ಸಾಂಸ್ಕೃತಿಕ ಸಂಕಥನ** ೨೦೧೦ ರಚನ ಪ್ರಕಾಶನ ಮೈಸೂರು ಎಂಬುದು ಸಂಶೋಧನಾ ಮಹಾಪ್ರಬಂಧವಾಗಿದ್ದು ಇದರಲ್ಲಿ ಕರ್ನಾಟಕವನ್ನಾಳಿದ ಪ್ರತಿಯೊಂದು ಅರಸು ಮನೆತನ, ಪಾಳೆಯಗಾರರು, ಸಂಸ್ಥಾನಿಕರು ಇವರ ಆಡಳಿತ ಪದ್ಧತಿ, ಸಾಮಾಜಿಕ, ರಾಜಕೀಯ, ಆರ್ಥಿಕ ಜೀವನ, ಕಲೆ, ವಾಸ್ತುಶಿಲ್ಪಕ್ಕೆ ಅವರ ಕೊಡುಗೆಗಳು ಮುಂತಾದ ವಿಷಯಗಳನ್ನು ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ.

ಗಾದೆಪ್ಪ **ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ** ೨೦೧೦ ಗೀತಾಂಜಲಿ ಪುಸ್ತಕ ಪ್ರಕಾಶನ ಶಿವಮೊಗ್ಗ ಎಂಬುದು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧವಾಗಿದ್ದು ಇಲ್ಲಿನ ಅಧ್ಯಾಯಗಳಲ್ಲಿ "ಪ್ರತಿನಿಧೀಕರಣ" ಎಂಬುದರ ಬಗ್ಗೆ ಸವಿಸ್ತಾರವಾಗಿ ವಿವರಿಸಿ, ವಿಜಯನಗರದ ಗತವೈಭವ, ನಾಟಕ, ಗೀತಸಾಹಿತ್ಯ, ಕಾದಂಬರಿಗಳಲ್ಲಿ ವಿಜಯನಗರದ ಪ್ರತಿನಿಧೀಕರಣವನ್ನು ನಿರ್ವಚಿಸುವ ಪ್ರಯತ್ನ ಮಾಡಿದ್ದಾರೆ. ಅಷ್ಟೇ ಅಲ್ಲದೇ ಜನತೆಯಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವುದು, ಆ ಮೂಲಕ ನಾವೆಲ್ಲರೂ ಒಂದೇ ಎನ್ನುವ ಭಾವನಾತ್ಮಕ ಸಂಬಂಧವನ್ನು ಬೆಸೆಯಲು ಸೃಜನಶೀಲ ಬರಹಗಾರರು, ಹೋರಾಟಗಾರರು ವಿಜಯನಗರದ ಚರಿತ್ರೆಯನ್ನು ಹೇಗೆ ಪ್ರತಿನಿಧೀಕರಿಸಿದ್ದಾರೆ ಎನ್ನುವುದನ್ನು ಗುರುತಿಸುವ ಪ್ರಯತ್ನ ಮಾಡಿರುವುದನ್ನು ಈ ಕೃತಿಯಲ್ಲಿ ಕಾಣುತ್ತೇವೆ.

ಸವಿತ ಎಸ್ **ತ.ರಾ.ಸು ಅವರ ಐತಿಹಾಸಿಕ ಕಾದಂಬರಿಗಳಲ್ಲಿ ಮಹಿಳೆ** ೨೦೧೩ ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧವಾಗಿದ್ದು ಐತಿಹಾಸಿಕ ಕಾದಂಬರಿಗಳಲ್ಲಿ ಚಿತ್ರಿತವಾದ ಸ್ತ್ರೀಪಾತ್ರಗಳೆಲ್ಲವು ನಿಜವಾದುದಲ್ಲ, ಕೆಲವು ಕಾಲ್ಪನಿಕವೂ ಆಗಿದ್ದು ಇತಿಹಾಸದ

ಉಲ್ಲಂಘನೆಯಾಗದಂತೆ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಚಿತ್ರಿಸಿದ್ದಾರೆ ಎಂದು ತ.ರಾ.ಸು ರವರ ಐತಿಹಾಸಿಕ ಕಾದಂಬರಿಗಳ ಕುರಿತು ಚರ್ಚಿಸಿರುವರು. ಪ್ರಾರಂಭದಲ್ಲಿ ತ.ರಾ.ಸು ರವರ ಜೀವನ ಮತ್ತು ವ್ಯಕ್ತಿತ್ವ ಕುರಿತು ಹೇಳುತ್ತ, ಸಾಹಿತ್ಯದಲ್ಲಿ ಸಾಧಿಸಿದ ಸಾಧನೆ, ಅವರು ರಚಿಸಿರುವ ಹದಿಮೂರು ಐತಿಹಾಸಿಕ ಕಾದಂಬರಿಗಳಲ್ಲಿ ಬರುವ ಮಹಿಳೆಯರು ಅವರ ಸ್ಥಾನಮಾನ, ಅವರು ನಾಡಿಗಾಗಿ ಸಲ್ಲಿಸಿದ ಸೇವೆ ಮುಂತಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಗಿರೀಶ ಪಿ ದೇಸೂರ **ಅ.ನ.ಕೃ ಕಾದಂಬರಿಗಳಲ್ಲಿ ಸಂಸ್ಕೃತಿ ಚಿಂತನೆ** ೨೦೧೫ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪಿಹೆಚ್.ಡಿ ಸಂಶೋಧನಾ ಪ್ರಬಂಧದಲ್ಲಿ ಅ.ನ.ಕೃ ಅವರ ಜೀವನ ಮತ್ತು ಸಾಧನೆ, ಅವರ ವ್ಯಕ್ತಿತ್ವ, ಸಂಸ್ಕೃತಿ ಕುರಿತ ಪ್ರಗತಿಶೀಲರ ಅಭಿಪ್ರಾಯಗಳಲ್ಲಿ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿಯವರು ತಮ್ಮ ಕಾದಂಬರಿಗಳಲ್ಲಿ ಸಂಸ್ಕೃತಿಯನ್ನು ಹೇಗೆ ಚಿತ್ರಿಸಿದ್ದಾರೆ. ಅವರು ಯಾವ ದೃಷ್ಟಿಕೋನದಿಂದ ಕಂಡಿದ್ದಾರೆ ಎಂಬುದನ್ನು ಚರ್ಚಿಸಿರುವರು. ಅ.ನ.ಕೃ ಕಾದಂಬರಿಗಳನ್ನು ಸಾಮಾಜಿಕ ಕಾದಂಬರಿಗಳು, ಕಲೆ ಮತ್ತು ಕಲಾವಿದರನ್ನು ವಸ್ತುವಾಗುಳ್ಳ ಕಾದಂಬರಿಗಳು, ಸ್ವಾತಂತ್ರ್ಯ ಚಳುವಳಿಯ ಕಾದಂಬರಿಗಳು, ರಾಜಕೀಯ ಕಾದಂಬರಿಗಳು, ಐತಿಹಾಸಿಕ ಕಾದಂಬರಿಗಳೆಂದು ವರ್ಗೀಕರಿಸಿ ಅಧ್ಯಯನ ನಡೆಸಿರುವರು.

೨.೨ ಕೃತಿಗಳು :

ಶಾ.ಮಂ ಕೃಷ್ಣರಾಯರ ಸಂಪಾದನೆಯ ಡಾ.ಅ.ನ.ಕೃಷ್ಣರಾಯರ ಜೀವನ–ಸಾಹಿತ್ಯ ದರ್ಶನ ಚಿತ್ರಿಸುವ ಕೃತಿ **ರಸಚೇತನ** ೧೯೭೦ ಗೋವಾ ಕನ್ನಡ ಸಂಘ(ರಿ) ಮಡಗಾಂವ್ ಗೋವಾ ಇದರಲ್ಲಿ ರಸಚೇತನ ವಿಭಾಗ, ಸಾಹಿತ್ಯ ಚೇತನ ವಿಭಾಗ, ಸುದರ್ಶನ ವಿಭಾಗ ಎಂಬ ವಿಭಾಗಗಳಲ್ಲಿ ಅ.ನ.ಕೃ ರವರ ಬದುಕು, ಬರಹದ ಎಲ್ಲ ಅಂಶಗಳನ್ನು ಒಟ್ಟುಗೂಡಿಸಿದ್ದಾರೆ. ಅ.ನ.ಕೃ ರವರ ಧೀಮಂತ ವ್ಯಕ್ತಿತ್ವ, ಪ್ರತಿಭೆ, ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆ, ಬರವಣಿಗೆಯ ಶೈಲಿ ಮುಂತಾದ ಅಂಶಗಳನ್ನು ಕುರಿತ ಲೇಖನಗಳಿವೆ.

ವೆಂಕಟೇಶ ತಿರಕೋ ಕುಲಕರ್ಣಿ (ಗಳಗನಾಥ) ಗಳಗನಾಥ ಕಾದಂಬರಿ ಸಂಪುಟ ೧ **ಮಾಧವ ಕರುಣಾ ವಿಲಾಸ** ೧೯೯೯ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಈ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣೀಕರ್ತನಾದ ಶ್ರೀ ವಿದ್ಯಾರಣ್ಯರ ಜೀವನದ ಪ್ರಮುಖ ಘಟನೆಗಳು, ಅವರ ಸಾಂಸಾರಿಕ ಜೀವನ ಮಾಧವನೆಂಬ ಹೆಸರು ಹೋಗಿ ಶ್ರೀ ವಿದ್ಯಾರಣ್ಯರಾದದ್ದು. ಜೊತೆಗೆ ಹಕ್ಕಬುಕ್ಕರಿಗೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ನೆರವಾಗಿ ಭೀಕರ ಕ್ಷಾಮ ತಲೆದೋರಿದಾಗ ಹೊನ್ನಿನ ಮಳೆಗೈದ ಪ್ರಸಂಗ. ಹೀಗೆ ಹಲವಾರು ರೋಮಾಂಚನಕಾರಿ ದೃಶ್ಯಗಳನ್ನು

ಚಿತ್ರಿಸಿದ್ದಾರೆ. ಸಂಪುಟ ೨ ರಲ್ಲಿ ಕನ್ನಡಿಗರ ಕರ್ಮಕಥೆ, ಕುಮುದಿನಿ, ದುರ್ಗದ ಬಿಚ್ಚುಗತ್ತಿ ಎಂಬ ಮೂರು ಕಾದಂಬರಿಗಳನ್ನು ರಚಿಸಿದ್ದು ಕನ್ನಡಿಗರ ಕರ್ಮಕಥೆ ಮತ್ತು ಕುಮುದಿನಿ ಕಾದಂಬರಿಗಳು ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿರುವಂತಹ ಕಾದಂಬರಿಗಳಾಗಿವೆ. ವಿಜಯನಗರ ಸಾಮ್ರಾಜ್ಯವು ತಾಳಿಕೋಟೆ ಯುದ್ಧದಲ್ಲಿ ಸಂಪೂರ್ಣವಾಗಿ ನಾಶವಾಗಿ ಹೋಯಿತೆಂಬ ವಿಚಾರಗಳನ್ನು ಕಾಣುತ್ತೇವೆ. ಕುಮುದಿನಿ ಕಾದಂಬರಿಯಲ್ಲಿ ಆಂತರಿಕ ಕಚ್ಚಾಟವನ್ನು ಕಾಣುತ್ತೇವೆ. ಹಾಗೆಯೇ ದುರ್ಗದ ಬಿಚ್ಚುಗತ್ತಿ ದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಯಾಗಿದೆ. ಇಲ್ಲಿ ಚಿತ್ರದುರ್ಗ ಕೋಟೆಯ ನಾಯಕರ ಮನೆತನಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಸಮಗ್ರವಾಗಿ ವಿಶ್ಲೇಷಿಸಿರುವರು.

ಬಿ.ಎಲ್ ವೇಣು **ಹೆಬ್ಬುಲಿ ಹಿರೇಮದಕರಿ ನಾಯಕ** ೨೦೦೩ ಪಾಂಚಜನ್ಯ ಪಬ್ಲಿಕೇಷನ್ಸ್ ಕೃತಿಯಲ್ಲಿ ಚಿತ್ರದುರ್ಗದ ಇತಿಹಾಸ ಪ್ರಸಿದ್ಧ ನಾಯಕನಾಗಿದ್ದ ಹಿರೇಮದಕರಿ ನಾಯಕನ ಕುರಿತು ಬರೆದಿದ್ದಾರೆ. ಬಿಚ್ಚುಗತ್ತಿ ಭರಮಣ್ಣನಾಯಕನ ಮಗನಾದ ಹಿರೇಮದಕರಿ ನಾಯಕನ ಶೌರ್ಯ, ಪರಾಕ್ರಮಗಳ ಕುರಿತು ಒಂದು ಕಾದಂಬರಿಯನ್ನು ಬರೆಯುವಂತೆ ಶ್ರೀ ಶಿವಮೂರ್ತಿ ಶರಣರು ಆಶಿಸಿದಾಗ ಅವರ ಆಶಯದಂತೆ ಪ್ರೊ ಲಕ್ಷ್ಮಣ ತೆಲಗಾವಿಯವರ ಹತ್ತಿರ ಈ ವಿಷಯದ ಕುರಿತು ಚರ್ಚಿಸಿ ಅವರಿಂದ ಹಲವಾರು ಪುರಾವೆಗಳನ್ನು ಸಂಗ್ರಹಿಸಿಕೊಂಡು ಈ ಕಾದಂಬರಿ ರಚಿಸಿರುವುದಾಗಿ ಹೇಳಿರುವರು. ಹಿರೇಮದಕರಿನಾಯಕನ ನ್ಯಾಯ ನಿಷ್ಠೂರತೆ, ಯುದ್ಧಕೌಶಲ್ಯ, ನಿರ್ದಾಕ್ಷಿಣ್ಯ ಸ್ವಭಾವ ಈ ಎಲ್ಲ ಅಂಶಗಳನ್ನು ಚಿತ್ರಿಸುವಾಗ ಶ್ರೀ ಕುಂ.ಬಾ ಸದಾಶಿವಪ್ಪ ಅವರ ಸಂಶೋಧನಾತ್ಮಕ ಕೃತಿ 'ಹರಪನಹಳ್ಳಿ ಪಾಳೇಗಾರರು' ಎಂಬ ಕೃತಿ ಅನುಲಕ್ಷಿಸಿರುವುದಾಗಿ ಪ್ರಸ್ತಾಪಿಸಿದ್ದಾರೆ. ಹೆಬ್ಬುಲಿಯಂತಿರುವ ಹಿರೇಮದಕರಿನಾಯಕನ ವ್ಯಕ್ತಿತ್ವ ಆತನ ಮುಂದಾಲೋಚನಾ ಕ್ರಮ, ಓಬವ್ವನಾಗತಿಯನ್ನು ಹಾಗೂ ವೆಂಕಟಾಚಲನಾಗತಿಯನ್ನು ವಿವಾಹವಾದ ಪ್ರಸಂಗಗಳು, ಆತನ ಯುದ್ಧ ತಂತ್ರ ಎಲ್ಲ ಅಂಶಗಳ ಜೊತೆ ಹರಪನಹಳ್ಳಿ ಸೋಮಶೇಖರನಾಯಕನಿಗೂ ಹಿರೇಮದಕರಿನಾಯಕನಿಗೂ ನಡೆದ ಹೋರಾಟದಲ್ಲಿ ದುರ್ಗಕ್ಕೆ ಜಯವಾದರೂ ಹಿರೇಮದಕರಿನಾಯಕನು ವೀರಸ್ವರ್ಗ ಪಡೆದುಕೊಂಡ ವಿಚಾರವನ್ನು ಕಣ್ಮುಂದೆ ಕಟ್ಟುವ ರೀತಿಯಲ್ಲಿ ಚಿತ್ರಿಸಿರುವರು.

ಬೆಟಗೇರಿ ಕೃಷ್ಣಶರ್ಮ (ಆನಂದಕಂದ) **ರಾಜಯೋಗಿ ಮತ್ತು ಅಶಾಂತಿಪರ್ವ** ೨೦೦೫ ಸಾಹಿತ್ಯ ಚಂದನ ಬೆಂಗಳೂರು ಕೃತಿಗಳಲ್ಲಿ ಸಂಗಮವಂಶದಲ್ಲಿ ಸುಸಂಸ್ಕೃತಿ ಸಾತ್ವಿಕತೆಗಳ ಸಾಕಾರಮೂರ್ತಿಯೆನಿಸಿಕೊಂಡು ಶೋಭಿಸಿದ ಮಲ್ಲಿಕಾರ್ಜುನ ದೊರೆಯ ಅಳಿದುಳಿದ ಇಬ್ಬರು ಮಕ್ಕಳಲ್ಲಿ ಹಿರಿಯನಾದ ರಾಜಶೇಖರನೇ ರಾಜಯೋಗಿ ಕಾದಂಬರಿಯ ಕಥಾನಾಯಕ.

ಅಶಾಂತಿಪರ್ವ ಕಾದಂಬರಿಯು ರಾಜಯೋಗಿ ಕಾದಂಬರಿಯ ಮುಂದುವರಿಕೆಯ ಭಾಗವೆನಿಸಿದರೂ ಸಹ ಇದೊಂದು ಸ್ವತಂತ್ರವಾದ ಕೃತಿ. ಈ ಕಾದಂಬರಿಗಳಲ್ಲಿ ಲೇಖಕರು ಅಂದಿನ ಕಾಲದ ಜನರ ನಡೆ- ನುಡಿ, ಸ್ವಭಾವ- ಸಂಸ್ಕೃತಿಗಳನ್ನು ಚಿತ್ರಿಸಿ ಐತಿಹಾಸಿಕ ಘಟನೆಗಳನ್ನು ವಿಶ್ಲೇಷಿಸಿದ್ದಾರೆ.

ಶಾ.ಮಂ ಕೃಷ್ಣರಾಯರ ಸಂಪಾದನೆಯ **ಅಮರಚೇತನ** ೨೦೦೮ ಸಾಗರ್ ಪ್ರಕಾಶನ ಬೆಂಗಳೂರು ಅ.ನ.ಕೃ ವ್ಯಕ್ತಿ-ಅಭಿವ್ಯಕ್ತಿ ಎಂಬ ಕೃತಿಯಲ್ಲಿ ಎರಡು ಭಾಗಗಳಿವೆ. ಸುಮಾರು ಅರವತ್ತು ವರ್ಷಗಳು ಪತ್ರಿಕೆಗಳಲ್ಲಿ ಬಂದ ಮಹತ್ವದ್ದೆನಿಸಿದ ಲೇಖನಗಳನ್ನು ಸಂಗ್ರಹಿಸಿ, ಇನ್ನು ಕೆಲವರಿಂದ ಲೇಖನಗಳನ್ನು ಬರೆಯಿಸಿ ಈ ಕೃತಿಯನ್ನು ಹೊರತರಲಾಗಿದೆ. ಇದರಲ್ಲಿ ಸಾಕಷ್ಟು ಮಹನೀಯರ ಅತ್ಯುಪಯುಕ್ತ ಲೇಖನಗಳಿದ್ದು ಅ.ನ.ಕೃ ಜೀವಿತಾವಧಿಯ ಪ್ರಮುಖ ಘಟನೆಗಳು, ಅವರ ಕಾದಂಬರಿ, ಕಥೆ, ನಾಟಕ, ಸಾಹಿತ್ಯ, ಇತರೆ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಳ ಕುರಿತಾದ ವಿಶಿಷ್ಟ ಸಂಗತಿಯ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ.

ಅರ್ಕಸಾಲಿ ವೃಷಭೇಂದ್ರಾಚಾರ್ಯ **ವೀರರಾಣಿ ಕಿತ್ತೂರು ಚೆನ್ನಮ್ಮ** ೨೦೦೯ ದಾಮಿನಿ ಸಾಹಿತ್ಯ ಪ್ರಕಾಶನ ಕೃತಿಯಲ್ಲಿ ಒಟ್ಟು ಹನ್ನೊಂದು ಅಧ್ಯಾಯಗಳಲ್ಲಿ ಕಿತ್ತೂರಿನ ಇತಿಹಾಸವನ್ನೇ ಕಣ್ಮುಂದೆ ಕಟ್ಟುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಒಂದೊಂದು ಅಧ್ಯಾಯಗಳಲ್ಲೂ ಮಹತ್ವದ ಅಂಶಗಳನ್ನು ತಿಳಿಸುತ್ತ ಕಿತ್ತೂರಿನ ಇತಿಹಾಸ, ಹಿನ್ನೆಲೆ, ದೇಸಗತಿ ಎಂಬುದು ಈ ವಂಶಕ್ಕೆ ಬಂದುದು ಪ್ರಸಿದ್ಧ ದೊರೆಯಾದ ಮಲ್ಲಸರ್ಜನ ಆಳ್ವಿಕೆ, ಅವನ ಮಗ ಶಿವಲಿಂಗರುದ್ರಸರ್ಜ ಪುತ್ರಸಂತಾನವಿಲ್ಲದೆ ಶಿವೈಕ್ಯವಾಗಿದ್ದುದರಿಂದಲೇ ದತ್ತಕದ ವಿಷಯದಲ್ಲಿ ಇಂಗ್ಲೀಷರಿಗೂ ಕಿತ್ತೂರಿನ ಅರಸರಿಗೂ ನಡೆದ ಹೋರಾಟ, ಮಲ್ಲಸರ್ಜನ ಮಡದಿ ಚೆನ್ನಮ್ಮ ರಾಣಿಯ ದಿಟ್ಟ ಮನೋಭಾವ, ಮೊದಲು ಕಿತ್ತೂರಿನ ರಾಣಿ ಚೆನ್ನಮ್ಮ ಬ್ರಿಟೀಷರ ವಿರುದ್ಧ ಹೋರಾಡಿ ಜಯಗಳಿಸುತ್ತಾಳೆ. ಆದರೆ ಎರಡನೆಯ ಯುದ್ಧದಲ್ಲಿ ಸೋಲಾಗುತ್ತದೆ. ಯುದ್ಧಾನಂತರ ಕಿತ್ತೂರಿನಲ್ಲಿ ನಡೆದ ವಿದ್ಯಮಾನಗಳು, ಚೆನ್ನಮ್ಮ ಇಂದಿಗೂ ಅಮರಳಾಗಿರುವ ವಿಚಾರಗಳೆಲ್ಲವನ್ನೂ ಸಮರ್ಥವಾಗಿ ವಿಶ್ಲೇಷಿಸುತ್ತ ಕೆಲವು ದ್ರೋಹಿಗಳಿಂದ, ಸ್ವಾರ್ಥಿಗಳಿಂದ ಕಿತ್ತೂರು ಇಂಗ್ಲೀಷರ ಕೈವಶವಾದ ಕಥೆಯನ್ನೆಲ್ಲ ಸಮಗ್ರವಾಗಿ ಚರ್ಚಿಸಿದ್ದಾರೆ.

ಎ.ಎಸ್ ನಂಜುಂಡಸ್ವಾಮಿ **ವಿಜಯನಗರದ ಇತಿಹಾಸ** ೨೦೦೯ ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ ಧಾರವಾಡ ಈ ಕೃತಿಯಲ್ಲಿ ವಿಜಯನಗರ ರಾಜ್ಯದ ಸ್ಥಾಪನೆಯ ಜೊತೆಗೆ ಸಂಗಮ, ಸಾಳುವ, ತುಳುವ, ಅರವೀಡು ವಂಶದ ಚರಿತ್ರೆಯನ್ನು ಕುರಿತು ವಿಶ್ಲೇಷಿಸಿರುವರು. ಅಷ್ಟೇ ಅಲ್ಲದೆ ಅಲ್ಲಿನ ಧಾರ್ಮಿಕ, ಆರ್ಥಿಕ, ಸಾಮಾಜಿಕ ಪರಿಸ್ಥಿತಿ, ಶಿಕ್ಷಣ ಪದ್ಧತಿ, ಸಾಹಿತ್ಯಕ್ಕೆ ಸಿಕ್ಕ ಅವಕಾಶ ಹೀಗೆ ಪ್ರತಿಯೊಂದು ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿದೆ.

ಹುರಗಲವಾಡಿ ಲಕ್ಷ್ಮೀ ನರಸಿಂಹಶಾಸ್ತ್ರಿ **ಯುಗಪುರುಷ ಶ್ರೀ ವಿದ್ಯಾರಣ್ಯರು** ೨೦೧೦ ಭಾರತೀ ಪ್ರಕಾಶನ ಕೃತಿಯಲ್ಲಿ ಶ್ರೀ ವಿದ್ಯಾರಣ್ಯರ ಜೀವನದ ಕುರಿತು ಹೇಳುತ್ತಾ, ಭರತಖಂಡದಲ್ಲಿ ೧೩-೧೪ನೇ ಶತಮಾನದಲ್ಲಿ ಹಿಂದೂ ಧರ್ಮ ವಿನಾಶದತ್ತ ಹೊರಟಾಗ ವಿಜಯನಗರ ಸಾಮ್ರಾಜ್ಯ ಹುಟ್ಟು ಹಾಕಿದ ವಿಷಯವನ್ನು ಹೇಳಿದ್ದಾರೆ. ವಿದ್ಯಾತೀರ್ಥರ ಸಲಹೆಯಂತೆ ಶ್ರೀ ವಿದ್ಯಾರಣ್ಯರು ಹರಿಹರ ಬುಕ್ಕರಿಗೆ ಮಾರ್ಗದರ್ಶನ ಮಾಡುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುತ್ತಾರೆ. ಆದರೆ ಇತಿಹಾಸದ ಖ್ಯಾತ ವಿದ್ವಾಂಸರಾದ ಜರ್ಮನಿಯ ಪಾದ್ರಿ ಶೃಂಗೇರಿಗೂ, ವಿಜಯನಗರಕ್ಕೂ, ವಿದ್ಯಾರಣ್ಯರಿಗೂ ಯಾವ ಸಂಬಂಧವೂ ಇಲ್ಲ. ಈ ಸಂಬಂಧ ಕಲ್ಪನೆ ಹದಿನಾರನೇ ಶತಮಾನದಿಂದ ಈಚೆಗೆ ಸೃಷ್ಟಿಸಲ್ಪಟ್ಟಿರುವ ವಿಚಾರ ಕುರಿತು ಹೇಳಿ ಇದು ಅನ್ಯಮತ ದ್ವೇಷದಿಂದ ಹುಟ್ಟಿಬರುವಂತಹದ್ದೆಂದು ನಿರೂಪಿಸಿದ್ದಾರೆ.

ಎಸ್ ವಿದ್ಯಾಶಂಕರ ಅವರ **ಅ.ನ.ಕೃ ಬದುಕು ಬರಹ** ೨೦೧೦ ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು ಎಂಬ ಕೃತಿಯು ಅ.ನ.ಕೃ ಅವರನ್ನು ಕುರಿತ ಸಮೀಕ್ಷಾ ಕೃತಿಯಾಗಿದ್ದು ಅದರಲ್ಲಿ ಅ.ನ.ಕೃ ರವರ ಜೀವನವನ್ನು ವಿವರವಾಗಿ ಚಿತ್ರಿಸಿದ್ದಾರೆ. ಕನ್ನಡ ಕಟ್ಟುವ ಕಾರ್ಯದಲ್ಲಿ ಅವರು ವಹಿಸಿದ ಪಾತ್ರ, ಕಲೆ, ಪತ್ರಿಕಾ ಪ್ರಪಂಚ, ಸಿನೆಮಾ, ರಂಗಭೂಮಿ, ಇತ್ಯಾದಿಯಾಗಿ ಎಲ್ಲ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದ ರೀತಿ ಅವರ ಸಾಹಿತ್ಯ ಸೃಷ್ಟಿ ಎಲ್ಲ ವಿಷಯಗಳ ಕುರಿತ ಸವಿವರವಾದ ಸಮೀಕ್ಷಾ ಕೃತಿಯನ್ನು ರಚಿಸಿದ್ದಾರೆ.

ಬಿ.ಎಸ್ ಜಯಪ್ರಸಾದ(ಸಂ) **ನರಗುಂದ ಚರಿತ್ರೆ** ೨೦೧೧ ಬಿ.ಎಸ್ ಜಯಪ್ರಕಾಶನ ಕೃತಿಯಲ್ಲಿ ನರಗುಂದದ ಚರಿತ್ರೆಯನ್ನು ಸಮಗ್ರವಾಗಿ ನಿರೂಪಿಸಿರುವರು. ಪ್ರಾರಂಭದಲ್ಲಿ ನರಗುಂದದ ವೆಂಕಟರಮಣಸ್ವಾಮಿ ದೇವಾಲಯದ ಹೊರಹಜಾರದಲ್ಲಿ ಇಬ್ಬರು ಸ್ತ್ರೀಯರು ಸಂಭಾಷಣೆಯಲ್ಲಿ ತೊಡಗಿರುವಂತೆ ಚಿತ್ರಿಸಿದ್ದಾರೆ. ನರಗುಂದಕ್ಕೆ ಮರಾಟೆಯವರ ಕಾಲದಲ್ಲಿ "ಮಹಾವತ್‌ಗಢ" ಎಂಬ ಹೆಸರಿದ್ದು ಕ್ರಿ.ಶ ೧೬೭೬ ರಲ್ಲಿ ಛತ್ರಪತಿ ಶಿವಾಜಿ ಮಹಾರಾಜನು ನರಗುಂದದಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ್ದ ವಿಚಾರ ಪ್ರಸ್ತಾಪಿಸಿ ಅದು ಹೇಗೆ ಬಾಬಾಸಾಹೇಬನ ವಂಶಕ್ಕೆ ಸೇರಿಕೊಂಡಿತು ಎಂಬುದರ ವಿಚಾರಗಳನ್ನು ಪ್ರಸ್ತಾಪಿಸಿರುವರು. ಬಾಬಾಸಾಹೇಬ ದತ್ತು ಮಗನನ್ನು ಪಡೆದುಕೊಳ್ಳಲು ನಡೆಸಿದ ಹೋರಾಟ, ತನ್ನ ಜನರ ಕುತಂತ್ರಕ್ಕೆ ಒಳಗಾಗಿ ನರಗುಂದ ಇಂಗ್ಲೀಷರ ವಶವಾದ ರೀತಿ, ತಾಯಿ ಯಮುನಾಬಾಯಿ ಪತ್ನಿ ಸಾವಿತ್ರಿಬಾಯಿ ಮಲಪ್ರಭೆಗೆ ಹಾರಿ ಪ್ರಾಣ ಕಳೆದುಕೊಂಡ ಪ್ರಸಂಗ, ಬಾಬಾಸಾಹೇಬ ಇಂಗ್ಲೀಷರ ವಶನಾಗಿ ಗಲ್ಲಿಗೇರಿದ ವಿಷಯಗಳನ್ನು ಸಮಗ್ರವಾಗಿ ಚರ್ಚಿಸಿರುವರು.

ಬೆ.ಗೋ ರಮೇಶ **ರಾಷ್ಟ್ರಕೂಟ ನೃಪತುಂಗ** ೨೦೧೧ ಸಾಹಿತ್ಯ ಸಾಧನಾ ಪ್ರಕಾಶನ ಕೃತಿಯಲ್ಲಿ ರಾಷ್ಟ್ರಕೂಟರ ಕುರಿತಾದ ಇತಿಹಾಸವನ್ನು ಅದರಲ್ಲಿ ಶ್ರೇಷ್ಠ ದೊರೆಯಾದ ಅಮೋಘವರ್ಷನ ಆಡಳಿತ, ಆತನು ಮಾಡಿದ ಸಾಧನೆ, ಇಮ್ಮಡಿ ಕೃಷ್ಣ, ಮುಮ್ಮಡಿ ಕೃಷ್ಣನ ಆಡಳಿತ ವೈಖರಿ, ಕಲೆ ಸಾಹಿತ್ಯಕ್ಕೆ ರಾಷ್ಟ್ರಕೂಟರು ನೀಡಿದ ಕೊಡುಗೆ, ಇವರ ಆಶ್ರಯದಲ್ಲಿ ಬೆಳಗಿದ ಕವಿಗಳ ಕೃತಿಗಳ ವಿವರಣೆ ಈ ಎಲ್ಲ ಪ್ರಮುಖ ವಿಷಯಗಳನ್ನು ಚರ್ಚಿಸಿದ್ದಾರೆ.

ಶಿವಾನಂದ ಗುಬ್ಬಣ್ಣವರ **ಜನಪದ ಸಾಹಿತ್ಯದಲ್ಲಿ ಕಿತ್ತೂರು ಸಂಸ್ಥಾನಿಕರು** ೨೦೧೧ ಅಕ್ಷಯ ಪ್ರಕಾಶನ ಧಾರವಾಡ ಎಂಬ ಕೃತಿಯಲ್ಲಿ ಸಂಪೂರ್ಣ ಕಿತ್ತೂರಿನ ಇತಿಹಾಸವನ್ನು, ಅದನ್ನಾಳಿದ ಪ್ರಮುಖ ದೊರೆಗಳ ಆಳ್ವಿಕೆಯ ವೈಖರಿ ಪ್ರಮುಖ ಅಂಶಗಳನ್ನೆಲ್ಲ ಕೋಲು ಪದಗಳು, ದುಂದುಮೆ ಪದಗಳು, ಲಾವಣಿ ಪದಗಳು, ಸೋಬಾನ ಪದಗಳು, ಹಂತಿ ಪದಗಳು, ಹೋಳಿ ಪದಗಳು ಹೀಗೆ ಬೇರೆ ಬೇರೆ ಜನಪದ ಸಾಹಿತ್ಯದ ದಾಟಿಯಲ್ಲಿ ನಿರೂಪಿಸಿದ್ದಾರೆ.

ಕೆ.ವಿ ರಾಜೇಶ್ವರಿ **ವಿಜಯನಗರ ಚರಿತ್ರೆ** ೨೦೧೪ ಶ್ರೀ ಲಕ್ಷ್ಮೀವೆಂಕಟೇಶ್ವರ ಪ್ರಕಾಶನ ಬೆಂಗಳೂರು ಎಂಬ ಕೃತಿಯಲ್ಲಿ ವಿಜಯನಗರವು ಹುಟ್ಟಿದ ಬಗೆ, ಆಗಿದ್ದ ಪರಿಸ್ಥಿತಿಗಳು, ವಿಜಯನಗರವನ್ನಾಳಿದ ದೊರೆಗಳ ಕುರಿತಾಗಿ ಹೇಳಲಾಗಿದೆ. ವಿಜಯನಗರವನ್ನಾಳಿದ ದೊರೆ ಕೃಷ್ಣದೇವರಾಯನ ಕಾಲವಂತೂ ಸುವರ್ಣಯುಗವೆಂದೇ ಖ್ಯಾತಿಯಾಗಿದೆ. ಮುತ್ತು, ರತ್ನ, ವಜ್ರ, ವೈಢೂರ್ಯಗಳನ್ನು ಬೀದಿ ಬದಿಯಲ್ಲಿ ರಾಶಿ ಹಾಕಿಕೊಂಡು ಬಳ್ಳಗಳಲ್ಲಿ ಅಳೆದು ಮಾರುತ್ತಿದ್ದರೆಂಬ ವಿಷಯವನ್ನು ಅನೇಕ ವಿದೇಶಿ ಯಾತ್ರಿಕರು ಬರೆದಿಟ್ಟಿರುವ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

ಮುರಿಗೆಪ್ಪ ಎ. ಪ್ರಧಾನ ಸಂಪಾದಕರು **ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ** ೨೦೧೪ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಈ ಕೃತಿಯಲ್ಲಿ ಕೃಷ್ಣದೇವರಾಯನ ಜೀವನದ ಹಲವಾರು ಘಟನೆಗಳ ಕುರಿತು ನೋಡಲಾಗಿದೆ. ಸಾಳುವ ವಂಶ ಕೊನೆಗೊಂಡು ತುಳುವ ವಂಶ ಇವನ ತಂದೆ ನರಸಿಂಹನಾಯಕನಿಂದ ಪ್ರಾರಂಭವಾದದ್ದು, ಈತನ ತಾಯಿ ನಾಗಲಾದೇವಿಯ ಪ್ರಸ್ತಾಪ, ಪತ್ನಿ ತಿರುಮಲಾದೇವಿ ಪಟ್ಟ ಮಹಿಷಿಯ ವಿವರಣೆ, ಮೆಚ್ಚಿನ ಮಡದಿ ಚಿನ್ನಾದೇವಿಯ ಕುರಿತು ಹೀಗೆ ಹಲವಾರು ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಕೃಷ್ಣದೇವರಾಯ ಕೈಗೊಂಡ ದಿಗ್ವಿಜಯಗಳು, ಮಾಡಿದ ತೀರ್ಥಯಾತ್ರೆಗಳು, ಆತನು ಸಕಲ ಧರ್ಮಗಳಿಗೆಲ್ಲ ಕೊಟ್ಟ ಪ್ರಾಧಾನ್ಯತೆ, ಕನ್ನಡ ಮತ್ತು ತೆಲುಗು ಭಾಷೆಯ ಕವಿಗಳು ಇವನ ಆಶ್ರಯ ಪಡೆದುಕೊಂಡು ರಚಿಸಿರುವ ಕೃತಿಗಳು ಅಷ್ಟೇ ಅಲ್ಲದೆ ಸ್ವತಃ ಪ್ರಭುಗಳೇ ರಚಿಸಿರುವ ರಾಜನೀತಿಶಾಸ್ತ್ರ ಆಮುಕ್ತಮೌಲ್ಯದ ಕೃತಿಗಳಲ್ಲಿರುವ ವಿಷಯಗಳನ್ನು ಚರ್ಚಿಸಿದ್ದಾರೆ.

ಬಿ.ಎ ವಿವೇಕ ರೈ ಸಂಪಾದಕರು **ಪ್ರವಾಸಿ ಕಂಡ ವಿಜಯನಗರ** ೨೦೧೪ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಈ ಕೃತಿಯಲ್ಲಿ ಹನ್ನೆರಡು ಜನ ವಿದೇಶಿ ಪ್ರವಾಸಿಗರು ವಿಜಯನಗರದ ವೈಭವ, ಜನಜೀವನ, ಆಡಳಿತ, ರಾಜರ ವಿಚಾರಗಳು ಹೀಗೆ ಹಲವಾರು ವಿಷಯಗಳನ್ನು ತಮ್ಮ ಕೃತಿಗಳಲ್ಲಿ ಬರೆದಿದ್ದು ಅವುಗಳ ಕುರಿತು ಹಲವು ಲೇಖಕರು ಬರೆದಿರುವ ಲೇಖನಗಳನ್ನು ಒಟ್ಟುಗೂಡಿಸಿ ಈ ಕೃತಿಯನ್ನು ಸಂಪಾದನೆ ಮಾಡಿರುತ್ತಾರೆ. ಅಷ್ಟೇ ಅಲ್ಲದೆ ಆ ವಿದೇಶಿ ಪ್ರವಾಸಿಗರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿರುತ್ತಾರೆ.

ಕುಂದೂರಿ ಈಶ್ವರದತ್ತು ತೆಲುಗು ಮೂಲ ಗುರುಮೂರ್ತಿ ಪೆಂಡಕೂರು ಕನ್ನಡಾನುವಾದ **ಭಗ್ನ ವಿಜಯನಗರ ಚರಿತ್ರೆ** ೨೦೧೪ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಈ ಕೃತಿಯಲ್ಲಿ ಐದು ಭಾಗಗಳಿದ್ದು ವಿಜಯನಗರದ ನಿರ್ಮಾಣ, ಅಲ್ಲಿರುವ ಸ್ಥಳಗಳ ಮಹಾತ್ಮೆ, ನಾಲ್ಕು ವಂಶಗಳ ಚರಿತ್ರೆ, ಆ ವಂಶಗಳು ಬಹುಮನಿಯವರ ಆಕ್ರಮಣಕ್ಕೆ ಒಳಗಾಗಿ ಎದುರಿಸಿದ ಸಮಸ್ಯೆಗಳು, ಅದನ್ನು ಸಮರ್ಥವಾಗಿ ನಿಭಾಯಿಸಿದ ಬಗೆ, ಅಲ್ಲಿರುವ ಪ್ರಮುಖ ದೇವಾಲಯಗಳು ಮುಂತಾದ ವಿಷಯಗಳನ್ನು ಕುರಿತು ಹೇಳುತ್ತ ಒಂದು ಕಾಲದಲ್ಲಿ ವೈಭವಯುತವಾಗಿ ಮೆರೆದ ವಿಜಯನಗರ ಸಾಮ್ರಾಜ್ಯ ಹೇಗೆ ಭಗ್ನವಾಯಿತು ಎಂಬುದರ ಕುರಿತಾಗಿ ವಿಶ್ಲೇಷಿಸಿದ್ದಾರೆ.

ಬಿ.ಎಲ್ ವೇಣು **ಚಿತ್ರದುರ್ಗದ ಕಲ್ಲಿನ ಕೋಟೆ** ೨೦೧೪ ವಸಂತ ಪ್ರಕಾಶನ ಬೆಂಗಳೂರು ಈ ಕೃತಿಯಲ್ಲಿ ಚಿತ್ರದುರ್ಗದ ಇತಿಹಾಸ ಚಿತ್ರದುರ್ಗವನ್ನಾಳಿದ ಅರಸರ ಕುರಿತು, ಅಲ್ಲಿನ ತಾಲ್ಲೂಕುಗಳು, ಸಾಹಿತ್ಯ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿ ಮಾಡಿದ ಸಾಧನೆ, ಅಲ್ಲಿರುವ ಮುರುಘಾ ಪರಂಪರೆ, ಅಲ್ಲಿನ ಉತ್ಸವಗಳು ಮೊದಲಾದ ವಿಷಯಗಳನ್ನು ಸಮಗ್ರವಾಗಿ ಚರ್ಚಿಸಿದ್ದಾರೆ.

ಬಿ.ಎಲ್ ವೇಣು **ಮಹಾಮಾತೋಶ್ರೀ ಚಿತ್ರದುರ್ಗದ ವೀರರಾಣಿ ಓಬಳವ್ವನಾಗತಿ** ೨೦೧೫ ಗೀತಾಂಜಲಿ ಪುಸ್ತಕ ಪ್ರಕಾಶನ ಶಿವಮೊಗ್ಗ ಈ ಕಾದಂಬರಿಯಲ್ಲಿ ಹೆಬ್ಬುಲಿ ಹಿರೇಮದಕರಿನಾಯಕರ ಪತ್ನಿ 'ಗಂಡೋಬಳವ್ವ'ನಾಗತಿ ಎಂದೇ ಪ್ರಸಿದ್ಧಳಾದ ಆಕೆಯ ಮುತ್ಸದ್ಧಿತನ, ಧೈರ್ಯ, ರಣೋತ್ಸಾಹ ತಂತ್ರ ಕುತಂತ್ರಗಳ ಮೂಲಕ ೧೨ ವರ್ಷದ ಬಾಲಕ ಮದಕರಿನಾಯಕನಿಗೆ ಪಟ್ಟವನ್ನು ಕಟ್ಟಲು ಎದುರಿಸಿದ ಸಮಸ್ಯೆಗಳು, ಚಿತ್ರದುರ್ಗದ ಸಿಂಹಾಸನವನ್ನು ಅರ್ಹತೆಯಿರುವ ಗಂಡುಗಲಿ ರಣಕಲಿಯೇ ಏರಬೇಕೆಂಬ ಸದುದ್ದೇಶದಿಂದ ಆಕೆ ನಡೆಸಿದ ಹುನ್ನಾರಗಳು ಮುಂತಾದ ಅಂಶಗಳನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ನರೇಂದ್ರ ಕಟ್ಟಿ **ನಾಡಪ್ರಭು ಕೆಂಪೇಗೌಡ** ೨೦೧೫ ವಸಂತ ಪ್ರಕಾಶನ ಕೃತಿಯಲ್ಲಿ ಧೈರ್ಯವಂತ, ಬುದ್ಧಿವಂತ, ಸಮರ್ಥ ಆಡಳಿತಗಾರ, ಬೆಂಗಳೂರು ನಿರ್ಮಾಪಕ ನಾಡಪ್ರಭು

ಕೆಂಪೇಗೌಡನ ಕುರಿತು ಬರೆಯುತ್ತ ಆತ ಮಾಧವಭಟ್ಟರ ಗುರುಕುಲಾಶ್ರಮದಲ್ಲಿ ವಿದ್ಯೆ ಪಡೆದ ವಿಚಾರ, ತಾನು ಪಟ್ಟಾಭಿಷಕ್ತನಾದಾಗ ಯಲಹಂಕ ನಾಡಿನ ಜೊತೆಗೆ ಬೆಂಗಾಳೂರು ನಗರವನ್ನು ಕಟ್ಟಿ ರಾಜಧಾನಿಯನ್ನಾಗಿ ಮಾಡಿಕೊಂಡು ಸಮರ್ಥವಾಗಿ ಆಡಳಿತ ಮಾಡಿದ ವಿಚಾರಗಳನ್ನು ಹೇಳುವುದರ ಜೊತೆಗೆ ಈತನ ಪೂರ್ವಿಕರ ವಿಚಾರಗಳನ್ನೆಲ್ಲ ಪ್ರಸ್ತಾಪಿಸಿರುವರು. ಅಷ್ಟೇ ಅಲ್ಲ ಪೂರ್ವಿಕರ ಕಾಲದಿಂದಲೂ ವಿಜಯನಗರ ಸಾಮ್ರಾಜ್ಯಕ್ಕೆ ಇವರು ಹೇಗೆ ಋಣಿಯಾಗಿ ಆ ಸಾಮ್ರಾಜ್ಯದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತ ಮಾಡಿದ ಜನೋಪಯೋಗಿ ಕಾರ್ಯಗಳ ಕುರಿತು ಹೇಳಿದ್ದಾರೆ. ಕೆಂಪೇಗೌಡನ ಸಾವಿನ ಬಗ್ಗೆಯೂ ವಿದ್ವಾಂಸರಲ್ಲಿಯ ಭಿನ್ನಾಭಿಪ್ರಾಯಗಳನ್ನು ವಿಶ್ಲೇಷಿಸಿದ್ದಾರೆ.

೨.೩ ಲೇಖನಗಳು :

ದೇಜಗೌ **ಸಾಹಿತಿಗಳ ಸಂಗದಲ್ಲಿ** ೧೯೭೨ ಉಷಾ ಸಾಹಿತ್ಯ ಮಾಲೆ ಮೈಸೂರು ಎಂಬ ಕೃತಿಯಲ್ಲಿ 'ಕನ್ನಡದ ರಕ್ಷಾಮಣಿ ಅ.ನ.ಕೃ' ಎಂಬ ಲೇಖನದಲ್ಲಿ ಅ.ನ.ಕೃ ರವರನ್ನು ಹೊಸ ಸಂಪ್ರದಾಯದ ಅಧ್ವರ್ಯು ಎಂದೇ ಕರೆದಿದ್ದಾರೆ. ಅ.ನ.ಕೃ ಅವರ ಕೃತಿಗಳ ಹೆಸರೆತ್ತಿದ ಕೂಡಲೇ ಓಣಕಲನ ಎದೆಯಲ್ಲಿಯೂ ಹಸಿರು ಚಿಮ್ಮುತ್ತದೆ. ಸರಳವಾದ ವಸ್ತು, ನೇರವಾದ ಕಥಾನಿರೂಪಣೆ, ತೊಡಕಿಲ್ಲದ ಪಾತ್ರ ರಚನೆ ಅವರ ಕಾದಂಬರಿಗಳ ಜನಪ್ರಿಯತೆಗೆ ಕಾರಣವೆಂದಿರುವರು. ಅವರ ಅಸದೃಶವಾದ ಕನ್ನಡ ಪ್ರೇಮವನ್ನು ಹಾಡಿ ಹೊಗಳುತ್ತ ಕನ್ನಡತ್ವಕ್ಕೆ ಹೋರಾಡಿದ ಬಗೆಯನ್ನು ಸಮಗ್ರವಾಗಿ ನಿರೂಪಿಸಿರುವರು.

ಕೆ.ಶ್ರೀಕಂಠಯ್ಯನವರು **ಸಾಹಿತ್ಯ ಚಿತ್ರಗಳು** ೨೦೦೫ ಅಳಿಲು ಸೇವಾ ಸಂಸ್ಥೆ ಎಂಬ ಕೃತಿಯಲ್ಲಿನ ದುರ್ಗಾಸ್ತಮಾನ ಎಂಬ ಲೇಖನದಲ್ಲಿ ಆರು ಭಾಗಗಳನ್ನು ಮಾಡಿದ್ದಾರೆ. ೧ 'ದುರ್ಗಾಸ್ತಮಾನ'ದಲ್ಲಿ ಗಂಡು ಮೆಟ್ಟಿನ ಚಿತ್ರದುರ್ಗ ೨ 'ದುರ್ಗಾಸ್ತಮಾನ'ದಲ್ಲಿ ರಾಜ ೩ 'ದುರ್ಗಾಸ್ತಮಾನ'ದಲ್ಲಿ ಧರ್ಮ ಜಿಜ್ಞಾಸೆ ೪ 'ದುರ್ಗಾಸ್ತಮಾನ'ದಲ್ಲಿ ಒಂದು ರಾತ್ರಿ ೫ 'ದುರ್ಗಾಸ್ತಮಾನ'ದಲ್ಲಿ ಪುಡಗೋಸಿ ಪ್ರಸಂಗ ೬ 'ದುರ್ಗಾಸ್ತಮಾನ'ದಲ್ಲಿ ರಕ್ತ ಎಂದು ಆ ಕಾದಂಬರಿಯಲ್ಲಿರುವ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

ಹ.ಕ ರಾಜೇಗೌಡ **ಜಾನಪದ ಶೋಧ** ೨೦೦೭ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಈ ಕೃತಿಯಲ್ಲಿ ಹಲವಾರು ಬಿಡಿ ಲೇಖನಗಳಿದ್ದು 'ಇತಿಹಾಸ ಮತ್ತು ಜಾನಪದ' ಲೇಖನದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನನ್ನು ಕುರಿತು ಬರೆಯಲಾಗಿದ್ದು 'ಯಲಹಂಕ ಪ್ರಭುಗಳು ಹೊರಗಿನಿಂದ ಬಂದವರೆ?' ಎಂಬ ಲೇಖನದಲ್ಲಿ ಯಲಹಂಕ ಪ್ರಭುಗಳು ಕನ್ನಡಿಗರೇ?

ಹೊರಗಿನಿಂದ ಬಂದವರೇ? ಎಂಬುದರ ಕುರಿತು ಚರ್ಚಿಸಲಾಗಿದೆ. ಕೆಂಪೇಗೌಡ ಬೆಂಗಳೂರು ನಗರವನ್ನು ಕಟ್ಟಿದ್ದು, ಭೈರವ ನಾಣ್ಯದ ಮುದ್ರಣ, ಚಲಾವಣೆಯ ಕುರಿತು ಇತಿಹಾಸಕಾರರಲ್ಲಿರುವ ವಿಚಾರಗಳನ್ನು ಚರ್ಚಿಸಲಾಗಿದೆ.

ಬಿ.ಎಸ್ ಕೇಶವರಾವ್ **ಮರೆಯಲಾಗದವರು** ೨೦೦೮ ಐಬಿಎಚ್ ಪ್ರಕಾಶನ ಕೃತಿಯಲ್ಲಿನ 'ಕನ್ನಡ ನೆಲದ ಕಿಂದರಜೋಗಿ ಅ.ನ.ಕೃ' ಎಂಬ ಲೇಖನದಲ್ಲಿ ಅ.ನ.ಕೃ ಸಾಹಿತ್ಯ ಹಾಗೂ ಸಾರಸ್ವತ ಲೋಕದಲ್ಲಿ ಒಬ್ಬ ಸೃಜನಶೀಲ ವ್ಯಕ್ತಿಯಾಗಿ ಬೆಳೆದು ಕಥೆ, ಕಾದಂಬರಿ, ನಾಟಕಗಳನ್ನು ರಚಿಸಿ ಜನಪ್ರೀಯತೆ ಗಳಿಸಿರುವ ವಿಚಾರಗಳನ್ನು ನಿರೂಪಿಸುವರು. ಇವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡಮಾಡಲ್ಪಟ್ಟಿರುವ ಕಾದಂಬರಿ, ಕಥೆ, ನಾಟಕ, ಪ್ರಬಂಧ, ವಿಮರ್ಶೆ ಮುಂತಾದ ಪ್ರಕಾರಗಳ ಅಂಕಿ ಸಂಖ್ಯೆಗಳನ್ನು ಕೊಟ್ಟು ಈ ಎಲ್ಲ ಕೃತಿಗಳನ್ನು ಒಟ್ಟುಗೂಡಿಸಿದರೆ ಇವರ ಬರವಣಿಗೆಯ ಒಟ್ಟು ಪುಟಗಳ ಸಂಖ್ಯೆ ೮೦ ಸಾವಿರಕ್ಕೂ ಹೆಚ್ಚಾಗಬಹುದೆಂದು ಅಂದಾಜಿಸುವರು. ಅಷ್ಟೇ ಅಲ್ಲ 'ಹುಟ್ಟು ಹೋರಾಟಗಾರ ಬಸವರಾಜ ಕಟ್ಟೀಮನಿ' ಎಂಬ ಲೇಖನದಲ್ಲಿ ಅವರ ಬದುಕಿನ ಬಾಲ್ಯದ ದಿನಗಳು, ಅವರು ಎದುರಿಸಿದ ಬಡತನದ ಬವಣೆ, ಸಮಾಜದಲ್ಲಿ ಏಕೀ ಭೇದ ಭಾವ ಎಂದು ಸಿಡಿದೆದ್ದು ಕಾದಂಬರಿಗಳ ಮೂಲಕ ಅದನ್ನು ಹೊರಹಾಕಿದ ವಿಚಾರಗಳನ್ನಷ್ಟೇ ಅಲ್ಲದೆ ಪತ್ರಿಕೋದ್ಯಮದಲ್ಲಿ ಅವರು ನಿರ್ವಹಿಸಿದ ಕಾರ್ಯ, ಅವರು ರಚಿಸಿರುವ ಕಥೆ, ಕಾದಂಬರಿ, ನಾಟಕ ಮುಂತಾದವುಗಳ ಅಂಕಿಸಂಖ್ಯೆಗಳನ್ನು ಕೊಡುವುದರ ಮೂಲಕ ಉತ್ತರ ಕರ್ನಾಟಕದ ಧಾರವಾಡದಲ್ಲಿ ಎಂಟೆದೆಯ ಗಂಡಾಗಿ ಮೆರೆದ ವಿಚಾರಗಳನ್ನು ನಿರೂಪಿಸುವರು.

ಎಸ್.ಚನ್ನಪ್ಪನವರು **ಸಾಹಿತ್ಯ ಸಾಂತ್ವನ** ೨೦೧೦ ಪುಸ್ತಕ ಭಾಗ್ಯ ಎಂಬ ಕೃತಿಯಲ್ಲಿ ತ.ರಾ.ಸು ರವರನ್ನು ಕುರಿತು 'ದುರ್ಗಾಸ್ತಮಾನದ: ತ.ರಾ.ಸು' ಎಂಬ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ತ.ರಾ.ಸು ಅವರ ಜೀವನ ಹಾಗೂ ಅವರ ಐತಿಹಾಸಿಕ ಕೃತಿಗಳ ಪಟ್ಟಿಯನ್ನು ಕೊಟ್ಟು ಅವರು ರಚಿಸಿರುವ ಚಿತ್ರದುರ್ಗದ ಐತಿಹಾಸಿಕ ಕಾದಂಬರಿಗಳ ಮಾಲೆಯಲ್ಲಿ ನಾಯಕಮಣಿಯಂತಿರುವ ದುರ್ಗಾಸ್ತಮಾನ ಒಂದು ಅನನ್ಯವಾದ ಕೃತಿ ಎಂದು ಕರೆದಿರುವರು. ಅಷ್ಟೇ ಅಲ್ಲದೆ ಬಸವರಾಜ ಕಟ್ಟೀಮನಿಯವರನ್ನು ಕುರಿತು 'ನೇರ ನಡೆ ನುಡಿಯ ಬಸವರಾಜ ಕಟ್ಟೀಮನಿ' ಎಂಬ ಲೇಖನವನ್ನು ಬರೆದಿದ್ದು ಅದರಲ್ಲಿ ಬಸವರಾಜ ಕಟ್ಟೀಮನಿಯವರ ಬದುಕು ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ರಚಿಸಿದ ಸಾಮಾಜಿಕ ಹಾಗೂ ಐತಿಹಾಸಿಕ ಕಾದಂಬರಿಗಳ ಪಟ್ಟಿಯನ್ನೇ ಕೊಟ್ಟಿದ್ದು ಸಮರಭೂಮಿ, ಪೌರುಷಪರೀಕ್ಷೆ ಹಾಗೂ ಸಂಗೊಳ್ಳಿ ರಾಯನಾಯಕ ಐತಿಹಾಸಿಕ

ಕಾದಂಬರಿಗಳಾಗಿದ್ದು, ಸ್ವಾತಂತ್ರ್ಯದೆಡೆಗೆ ಮತ್ತು ಮಾಡಿಮಡಿದವರು ರಾಷ್ಟ್ರೀಯ ಪ್ರಜ್ಞೆಯುಳ್ಳ ಕಾದಂಬರಿಗಳೆಂದು ಹೇಳಿದ್ದಾರೆ.

ಟಿ.ಪಿ ಅಶೋಕ **ಸಾಹಿತ್ಯ ಸಂಪರ್ಕ** ೨೦೧೧ ವಸಂತ ಪ್ರಕಾಶನ ಎಂಬ ಕೃತಿಯಲ್ಲಿನ 'ತ.ರಾ.ಸು ಅವರ ದುರ್ಗಾಸ್ತಮಾನ' ಎಂಬ ಲೇಖನದಲ್ಲಿ ಹತ್ತು ಪಾಯಿಂಟಿನ ಸಣ್ಣಕ್ಷಗಳಲ್ಲಿ ಸುಮಾರು ಏಳುನೂರು ಪುಟಗಳಿಗೆ ಹರಡಿಕೊಂಡಿರುವ ತ.ರಾ.ಸು ಅವರ ಬೃಹತ್ ಐತಿಹಾಸಿಕ ಕಾದಂಬರಿ 'ದುರ್ಗಾಸ್ತಮಾನ' ಎಂದಿರುವರು. ದುರ್ಗ ಎಂದರೆ ಮದಕರಿನಾಯಕ, ಮದಕರಿನಾಯಕನೆಂದರೆ ದುರ್ಗವೆಂದು ನಂಬುವ ತ.ರಾ.ಸು ಮದಕರಿನಾಯಕನ ಅಂತ್ಯವನ್ನು 'ದುರ್ಗಾಸ್ತಮಾನ' ಎಂದೇ ಕರೆಯುವಲ್ಲಿ ವ್ಯಕ್ತವಾಗುವ ಧೋರಣೆಗಳನ್ನು ಚಿತ್ರಿಸಿದ್ದಾರೆ. ಅಷ್ಟೇ ಅಲ್ಲದೇ 'ನಿರಂಜನ ಅವರ ಚಿರಸ್ಮರಣೆ' ಎಂಬ ಲೇಖನದಲ್ಲಿ 'ತಾವು ಪ್ರಗತಿಶೀಲರೆಂದು ಪುಕ್ಕ ಕಟ್ಟಿಕೊಂಡ ಕೆಲವರು ಸೂಳೆಗೇರಿಯ ರಮ್ಯ ಕಥನದಿಂದಲೇ ತೃಪ್ತರಾಗಿದ್ದ' ಕಾಲದಲ್ಲಿ ಹೊರಬಂದ ಈ ಕಾದಂಬರಿ ಕನ್ನಡದ ಪ್ರಗತಿಶೀಲ ಚಳುವಳಿಯ ಇತ್ಯಾತ್ಮಕ ಅಂಶಗಳನ್ನು ಬಹುಮಟ್ಟಿಗೆ ಸಾಂಕೇತಿಸುವ ಕಾದಂಬರಿ ಎಂದು ಹೇಳಿರುವರು. ಈ ರೀತಿಯ ವಸ್ತುವನ್ನೊಳಗೊಂಡ ಸಫಲ ಕೃತಿಗಳು ಕನ್ನಡದಲ್ಲಿ ಅತ್ಯಲ್ಪ ಎಂದಿರುವರು.

ರಾಜಶೇಖರ ಇಚ್ಚಂಗಿ **ಜನಪದ ಜೀವಾಳ** ೨೦೧೧ ಸಚಿನ್ ಪಬ್ಲಿಷರ್ಸ್ ಎಂಬ ಕೃತಿಯಲ್ಲಿ 'ಲಾವಣಿ ಸಾಹಿತ್ಯದಲ್ಲಿ ಕಿತ್ತೂರ ಸಂಸ್ಥಾನ' ಎಂಬ ಲೇಖನವನ್ನು ಬರೆದಿದ್ದು ಅದರಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನೇಕ ಕತೆ, ಕಾದಂಬರಿ, ನಾಟಕಗಳು ರಚನೆಗೊಂಡಿದ್ದು ಅವುಗಳಲ್ಲಿ ಕಾಲ್ಪನಿಕ ಸಂಗತಿಗಳಿದ್ದರೂ ಇತಿಹಾಸದ ಸತ್ಯಕ್ಕೆ ಬಾಧಕವಾಗದ ರೀತಿಯಲ್ಲಿ ಚಿತ್ರಣಗೊಂಡಿರುವದೆಂದು ಹೇಳಿದ್ದಾರೆ. ಕಿತ್ತೂರಿನ ಕ್ರಾಂತಿಗೆ ಕಾರಣವಾದ ವಿಚಾರಗಳನ್ನು, ಕಿತ್ತೂರು ಚೆನ್ನಮ್ಮಳ ಸಾವಿನ ವಿಷಯವನ್ನು ಬೇರೆ ಬೇರೆ ಲೇಖಕರು ಭಿನ್ನ ಭಿನ್ನವಾಗಿ ಪ್ರಸ್ತಾಪಿಸಿರುವ ವಿಷಯಗಳನ್ನೆಲ್ಲ ಚರ್ಚಿಸಿದ್ದಾರೆ. ಜೊತೆಗೆ ಮಲ್ಲಸರ್ಜ ಚೆನ್ನಮ್ಮರ ದಾಂಪತ್ಯ ಜೀವನ, ಮಲ್ಲಸರ್ಜನ ಸಾವು, ಥ್ಯಾಕರೆಯನ್ನು ಕೊಂದವರು ಚೆನ್ನಮ್ಮಳೆಂದೇ ಒಬ್ಬ ಲಾವಣಿಕಾರ ಹೇಳಿದರೆ, ಮತ್ತೊಬ್ಬ ಲಾವಣಿಕಾರ ಅಮಟೂರು ಬಾಳಪ್ಪ ಎಂದು ಹಾಡಿರುವ ವಿಷಯಗಳನ್ನೆಲ್ಲ ನಿರೂಪಿಸಿರುವರು.

ಕುಂ.ಬಾ.ಸದಾಶಿವಪ್ಪ **ರಾಯಸಂಸ್ಕೃತಿ** ೨೦೧೧ ಶ್ರೀ ಎಚ್.ಬಿ.ಪ್ರಭಾಕರ ಮತ್ತು ಶ್ರೀಮತಿ ಶಾಂತಾ ಪ್ರಭಾಕರ ಪ್ರಕಾಶಕರು ಕೃತಿಯಲ್ಲಿನ 'ರಾಯ ಸಂಸ್ಕೃತಿ' ಎಂಬ ಲೇಖನದಲ್ಲಿ ವಿಜಯನಗರದ ಪ್ರಮುಖ ಅರಸರಾದ ೨೪ ಜನರ ಪಟ್ಟಿಯನ್ನು ಕೊಟ್ಟು ಅದರಲ್ಲಿ ಐದು ಜನರನ್ನು ಹೊರತುಪಡಿಸಿ ಉಳಿದವರು ಸಮರ್ಥರು ಎಂದಿರುವರು. ಹಂಪೆಯ ಬಾಗಿಲುಗಳು, ಹಂಪೆಯ

ಬಾವಿಗಳು ಯಾವವೆಂದು ಹೇಳುವುದರ ಜೊತೆಗೆ ವಿಜಯನಗರದ ರಾಯರ ನಾಣ್ಯಗಳ ಕುರಿತು ನಿರೂಪಿಸಿರುವರು.

ಸಿ.ಪಿ.ಕೆ **ಸಾಹಿತ್ಯ ಮನನ** ೨೦೧೧ ಕಣ್ವ ಪ್ರಕಾಶನ ಬೆಂಗಳೂರು ಕೃತಿಯಲ್ಲಿನ 'ಕಟ್ಟೀಮನಿಯವರ ಎರಡು ಕಾದಂಬರಿಗಳು' ಎಂಬ ಲೇಖನದಲ್ಲಿ ಸ್ವಾತಂತ್ರ್ಯದೆಡೆಗೆ, ಮಾಡಿಮಡಿದವರು ಎರಡು ಕಾದಂಬರಿಗಳ ಕುರಿತು ಚರ್ಚಿಸಿರುವರು. ಸ್ವಾತಂತ್ರ್ಯದೆಡೆಗೆ ಕಾದಂಬರಿಯೇ ಮಾಡಿಮಡಿದವರು ಕಾದಂಬರಿಯ ಉತ್ತರಭಾಗ ಎಂದಿರುವರು. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಲೇಖಕರು ಗಾಂಧೀಜಿಯ ರಾಮರಾಜ್ಯದ ಕಲ್ಪನೆಯನ್ನೇ ಮಂಡಿಸಿದ್ದಾರೆ. ಮಾಡಿಮಡಿದವರು ಕಾದಂಬರಿಯಲ್ಲಿ ಜಮೀನ್ದಾರರು, ಸಾಹುಕಾರರು, ಪರಕೀಯ ಸರಕಾರ ಈ ಮೂವರ ವಿರುದ್ಧವೂ ರೈತ ಹೋರಾಟ ನಡೆಸಬೇಕಾಗಿದೆ ಎಂಬುದನ್ನು ನಿರೂಪಿಸಿದ್ದಾರೆ. ಲೇಖಕರ ಸ್ವಾತಂತ್ರ್ಯದೆಡೆಗೆ ಕಾದಂಬರಿಯ ಆಶಯದಂತೆ ಇಂದಿಗೂ ಅದು ಪೂರ್ತಿಯಾಗಿ ಈಡೇರಿಲ್ಲ, ಭಾರತ ಇನ್ನೂ ಸ್ವಾತಂತ್ರ್ಯದೆಡೆಗೆ ಸಾಗುತ್ತಲೇ ಇದೆ ಎಂದು ನಿರೂಪಿಸಿರುವರು.

ಹಳೆಮನೆ ರಾಜಶೇಖರ **ತಲೆಮಾರುಗಳ ಸಂಕಥನ** ೨೦೧೧ ನೆಲಮನೆ ಪಬ್ಲಿಷಿಂಗ್ ಹೌಸ್ ಕೃತಿಯಲ್ಲಿನ ಕನ್ನಡ ಕಾದಂಬರಿಯ ಚಾರಿತ್ರಿಕ ಬೆಳವಣಿಗೆ ಎಂಬ ಲೇಖನದಲ್ಲಿ ನಿರಂಜನರ ಮೃತ್ಯುಂಜಯ ಕಾದಂಬರಿಯು ಸಾಮಾನ್ಯರ ಚರಿತ್ರೆಯಾಗಿದೆ. ಇತರ ಐತಿಹಾಸಿಕ ಕೃತಿಗಳಿಗಿಂತ ತೀರಾ ಭಿನ್ನವಾಗಿದ್ದು ನಾಲ್ಕು ಸಾವಿರ ವರ್ಷಗಳ ಹಿಂದಿನ ಈಜಿಪ್ತ ಸಮಾಜದ ವರ್ಣ ಮತ್ತು ವಿಶ್ಲೇಷಣೆ ಇಲ್ಲಿ ಬರುವುದೆಂದು ಹೇಳಿದ್ದಾರೆ. ಚಿರಸ್ಮರಣೆಯು ಜಮೀನ್ದಾರಿಕೆ ಮತ್ತು ಬ್ರಿಟೀಷ್ ಅಧಿಕಾರಿಶಾಹಿಯ ವಿರುದ್ಧ ಕಯ್ಯೂರು ರೈತರು ಸಂಘಟಿತರಾಗಿ ನಡೆಸುವ ಹೋರಾಟದ ಕಥೆಯಾಗಿರುವುದು. ಕಟ್ಟೀಮನಿಯವರ ಮಾಡಿಮಡಿದವರು ಕಾದಂಬರಿ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯ ಚಳುವಳಿಯ ಕುರಿತು ಸಮಗ್ರ ರೀತಿಯಲ್ಲಿ ಕಟ್ಟಿಕೊಡುತ್ತದೆ. ಇದು ಬ್ರಿಟೀಷರ ವಿರುದ್ಧ, ಜಮೀನ್ದಾರರ ವಿರುದ್ಧ ಹೋರಾಡಿ ನಾಡಿಗಾಗಿ ಪ್ರಾಣ ಕೊಟ್ಟವರ ಕತೆಯಾಗಿದೆ ಎಂಬ ವಿಷಯಗಳನ್ನು ನಿರೂಪಿಸಿರುವರು.

ಸಿ.ಕೆ ನಾವಲಗಿಯವರ **ಜಾನಪದ ಸಡಗರ** ೨೦೧೧ ಸಾಗರ ಪ್ರಕಾಶನ ಬೆಂಗಳೂರು ಎಂಬ ವಿಮರ್ಶೆ–ಸಂಶೋಧನೆ ಕೃತಿಯಲ್ಲಿ ಜನಪದ ಕವಿ ಕಂಡ ಕಿತ್ತೂರ ಶರಶೂರಿ ರಾಣಿ ಚೆನ್ನಮ್ಮ, ಕಿತ್ತೂರ ನಾಡ ಸಂಸ್ಕೃತಿ, ವಿಜಯನಗರ ಕಾಲದ ಜಾನಪದ ಎಂಬ ಲೇಖನಗಳನ್ನು ಬರೆದಿರುವರು.

ವ್ಹಿ.ಎಲ್ ಪಾಟೀಲ ರವರ **ಮೌಖಿಕ ಪರಂಪರೆ** ೨೦೧೨ ಹೇಮಂತ ಸಾಹಿತ್ಯ ಬೆಂಗಳೂರು ಎಂಬ ಕೃತಿಯಲ್ಲಿ ಸಂಗೊಳ್ಳಿ ರಾಯಣ್ಣನ ಬಲಗೈ ಬಂಟ 'ಖ್ಯಾತ ಯೋಧ ಬಿಚಗತ್ತಿ ಚನಬಸಪ್ಪ' ಹಾಗೂ 'ಕಿತ್ತೂರಿನ ವೀರ ಸಾಹಿತ್ಯ' ಎಂಬ ಲೇಖನಗಳನ್ನು ಬರೆದಿರುವರು.

ಬಿ.ಜಿ.ರಮೇಶ **ಸಾಹಿತ್ಯದ ಅಂತರ್ಜಲ** ಸಾಹಿತ್ಯ ವಿಮರ್ಶಾ ಕೃತಿ ೨೦೧೨ ಚಂದನ ಪ್ರಕಾಶನ ಕೃತಿಯಲ್ಲಿ 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು' ಎಂಬ ಲೇಖನದಲ್ಲಿ ಅವರ ಬದುಕು ಬರಹಗಳ ಕುರಿತಾಗಿ ಬರೆದಿದ್ದು ಸಾಮಾಜಿಕ, ಐತಿಹಾಸಿಕ, ರಾಷ್ಟ್ರೀಯ ಪ್ರಜ್ಞೆ ಮೂಡಿಸುವ ಕಾದಂಬರಿಗಳ ಪಟ್ಟಿ ಕೊಟ್ಟಿದ್ದು ಸಮರಭೂಮಿ ಕೃತಿಯನ್ನು ಬರೆಯಲು ಸ್ವತಃ ಅವರು ನರಗುಂದಕ್ಕೆ ಹೋಗಿ ಅಂದಿನ ಹೋರಾಟದಲ್ಲಿ ಭಾಗವಹಿಸಿದ್ದ ಕೆಲವು ವಂಶಜರನ್ನು ಕಂಡು ವಿವರಗಳನ್ನು ಸಂಗ್ರಹಿಸಿದ್ದರು ಎಂದಿರುವರು. ಅಷ್ಟೇ ಅಲ್ಲ 'ನಿರಂಜನರ ಕಥೆ ಕಾದಂಬರಿಗಳು' ಎಂಬ ಲೇಖನವನ್ನು ಬರೆದಿದ್ದು ಇದರಲ್ಲಿ ಪ್ರಗತಿಶೀಲ ಪಂಥದಲ್ಲಿ ನಿರಂಜನರು ತಮ್ಮನ್ನು ತೊಡಗಿಸಿಕೊಂಡ ವಿಚಾರ ಹಾಗೂ ಅವರು ರಚಿಸಿರುವ ಕಥೆ ಕಾದಂಬರಿಗಳ ಕುರಿತು ಚರ್ಚಿಸಿದ್ದಾರೆ. ನಿರಂಜನರ ಐತಿಹಾಸಿಕ ಕಾದಂಬರಿಗಳಲ್ಲಿ ಕಲ್ಯಾಣಸ್ವಾಮಿ, ಸ್ವಾಮಿ ಅಪರಂಪಾರ, ಮೃತ್ಯುಂಜಯ ಗಮನಾರ್ಹವಾದವಾಗಿವೆ.

ಇ.ಪುಟ್ಟಸ್ವಾಮಿ(ಸಂ) **ಕಾಲಗರ್ಭದ ಕಥೆಗಳು** ೨೦೧೨ ಪ್ರಕಾಶಕರು ಕೃತಿಯಲ್ಲಿ 'ನಾಡಪ್ರಭು ಕೆಂಪೇಗೌಡ' ಎಂಬ ಲೇಖನವನ್ನು ಸರೋಜಮ್ಮ ಕಾಕೋಳು ಅವರು ಬರೆದಿದ್ದು ಇದರಲ್ಲಿ ಕೆಂಪೇಗೌಡನ ಜನನ, ಬಾಲ್ಯ ಆತನ ವಿದ್ಯಾಭ್ಯಾಸದ ಸಂದರ್ಭದಲ್ಲಿ ನಡೆದ ಘಟನೆಗಳು, ಚೆನ್ನಾಂಬೆಯ ಜೊತೆಗಿನ ವಿವಾಹ, ಶ್ರೀ ಕೃಷ್ಣದೇವರಾಯರ ಒಪ್ಪಿಗೆ ಪಡೆದುಕೊಂಡು ಯಲಹಂಕ, ಮಾಕುಟಿಯ ಮಧ್ಯ ನಗರವೊಂದನ್ನು ನಿರ್ಮಿಸಿದ್ದು ವಿಜಯನಗರದವರ ಸಾಮಂತರಾಗಿ ಸಮರ್ಥವಾಗಿ ಆಡಳಿತ ನಡೆಸಿದ ವಿಚಾರಗಳನ್ನೆಲ್ಲ ಬಹು ಸಮರ್ಥವಾಗಿ ನಿರೂಪಿಸಿರುವರು.

ಚಂದ್ರಶೇಖರ.ಜಿ, ಮತ್ತು ಮಂಜುನಾಥ ಎಂ.ಕೆ **ಶಾಸನ ದೀವಿಗೆ** ೨೦೧೩ ಅನ್ನದಾನಿ ಭೈರವ ಪ್ರಕಾಶನ ಎಂಬ ಕೃತಿಯಲ್ಲಿ 'ಚಿತ್ರದುರ್ಗದ ನಾಯಕರ ಧಾರ್ಮಿಕ ಕೊಡುಗೆಗಳು' ಎಂಬ ಲೇಖನದಲ್ಲಿ ಚಿತ್ರದುರ್ಗವನ್ನು 'ಗಂಡು ಮೆಟ್ಟಿದ ನಾಡು' ಎಂದೂ, ಚಿತ್ರದುರ್ಗದಲ್ಲಿನ ಕೋಟೆಯು 'ಏಳುಸುತ್ತಿನ ಕೋಟೆ' ಎಂದೂ ಪ್ರಸಿದ್ಧಿಯನ್ನು ಪಡೆಯಲು ಕಾರಣಕರ್ತರಾದ ಚಿತ್ರದುರ್ಗದ ನಾಯಕರು 'ಮದಕರಿ ನಾಯಕರು' ಎಂಬ ಹೆಸರಿನಿಂದ ಜನಮಾನಸದಲ್ಲಿ ಚಿರಪರಿಚಿತರಾಗಿದ್ದಾರೆ. ಚಿತ್ರದುರ್ಗದ ನಾಯಕರು ಶೌರ್ಯಕ್ಕೆ ಹೆಸರಾದಂತೆ ದಾನಧರ್ಮಗಳಲ್ಲಿ ಸರ್ವಧರ್ಮ

ಸಮನ್ವಯಿಗಳಾಗಿದ್ದರು. ಬೇಡ ಜನಾಂಗದವರಾದ ಈ ನಾಯಕರು ತಮ್ಮ ಸಾಮ್ರಾಜ್ಯದಲ್ಲಿ ಸರ್ವಧರ್ಮ ಪರಿಪಾಲಕರಾಗಿ ದಾನದತ್ತಿ ನೀಡಿರುವುದಾಗಿ ಚಿತ್ರಿಸಿದ್ದಾರೆ.

ಈ ಎಲ್ಲ ಅಧ್ಯಯನಗಳ ಸಮೀಕ್ಷೆಯನ್ನು ನೋಡಲಾಗಿ ಯಾವ ಸಂಶೋಧಕರೂ ಸಹ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿ ಈ ನಾಲ್ಕು ಜನ ಪ್ರಗತಿಶೀಲ ಕಾದಂಬರಿಕಾರರ ಐತಿಹಾಸಿಕ ಕಾದಂಬರಿಗಳನ್ನು ಪುನರ್‌ಲೇಖನದ ಸ್ವರೂಪದಲ್ಲಿ ಅಧ್ಯಯನ ಮಾಡಿಲ್ಲವೆಂಬುದು ತಿಳಿದುಬರುವುದು.

ಅಧ್ಯಾಯ ೩

ಪ್ರಗತಿಶೀಲ ಕಾದಂಬರಿಗಳಲ್ಲಿ ಐತಿಹಾಸಿಕ ಪ್ರಜ್ಞೆಯ ಪುನರ್‌ಲೇಖದ ಚಿತ್ರಣ

ಅಧ್ಯಾಯ ೩

ಪ್ರಗತಿಶೀಲ ಕಾದಂಬರಿಗಳಲ್ಲಿ ಐತಿಹಾಸಿಕ ಪ್ರಜ್ಞೆಯ ಪುನರ್‌ಲೇಖದ ಚಿತ್ರಣ

ಸುದೀರ್ಘವಾದ ಇತಿಹಾಸವನ್ನುಳ್ಳ ಕನ್ನಡ ಸಾಹಿತ್ಯ ನಿಂತ ನೀರಾಗದೆ ಹರಿಯುತ್ತಿರುವ ಪ್ರವಾಹದಂತೆ ಕಾಲದಿಂದ ಕಾಲಕ್ಕೆ ಸಾಕಷ್ಟು ಮಾರ್ಪಾಟುಗಳಾಗಿರುವದನ್ನು ಕಾಣುತ್ತೇವೆ. ಕನ್ನಡದ ಮೊಟ್ಟ ಮೊದಲ ಲಾಕ್ಷಣಿಕ ಕೃತಿ ಎಂದು ಗುರುತಿಸಲ್ಪಡುವದು ಕವಿರಾಜಮಾರ್ಗ. ಅಲ್ಲಿಂದಲೇ ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸವನ್ನು ಕಾಣುತ್ತೇವೆ. ಆದರೆ ಅದಕ್ಕಿಂತಲೂ ಪೂರ್ವದಲ್ಲಿ ಸಾಹಿತ್ಯ ಕೃತಿಗಳು ರಚಿತವಾಗಿದ್ದವೇ? ಇಲ್ಲವೇ? ಎಂಬುದರ ಕುರಿತು ಅನುಮಾನಗಳು ಹುಟ್ಟಿದರೂ ಸಹ ಯಾವೊಂದು ಕೃತಿಗಳು ಉಪಲಬ್ಧವಿಲ್ಲದಿರುವುದರಿಂದ ಕವಿರಾಜಮಾರ್ಗ ಕೃತಿಯನ್ನೇ ಕನ್ನಡದ ಮೊಟ್ಟಮೊದಲ ಕೃತಿಯೆಂದು ಒಪ್ಪಿಕೊಳ್ಳಲಾಗಿದೆ.

ಇತಿಹಾಸವೆಂದರೆ "ಗತಕಾಲದಲ್ಲಿ ನಡೆದು ಹೋದ ಘಟನೆಗಳ ವಿವರ" ಎಂದು ಸಾಮಾನ್ಯವಾಗಿ ಹೇಳಿದರೂ ಸಹ 'ಕತೆ ಹಳೆಯದಾದಷ್ಟೂ ಅರ್ವಾಚೀನರಿಗೆ ಅದು ಇತಿಹಾಸ. ಇತಿಹಾಸದ ಅರ್ಥ ಅದರ ಉಪಯೋಗದಲ್ಲಿದ್ದರೆ ಕಾವ್ಯಾರ್ಥ ಕಾವ್ಯದ ಮೈಯಲ್ಲೇ ಅಡಗಿರುತ್ತದೆ.'[೧] (ಕೀರ್ತಿನಾಥ ಕುರ್ತಕೋಟಿ, ೨೦೦೮, ಪುಟ-೬೩) ಚರಿತ್ರೆಯ ಬಗ್ಗೆ ಒಂದು ಜನಜನಿತ ಮಾತಿದೆ. ಇತಿಹಾಸವನ್ನು ಮರೆತವರು ಇತಿಹಾಸವನ್ನು ನಿರ್ಮಿಸಲಾರರು. ಪ್ರತಿಯೊಂದು ಮನೆಗೂ; ಪ್ರತಿಯೊಂದು ನಾಡಿಗೂ ಅದರದೇ ಆದ ಕಪ್ಪು ಬಿಳುಪಿನ ಇತಿಹಾಸವಿದೆ. ಈ ಐತಿಹಾಸಿಕ/ಪೌರಾಣಿಕ ವಸ್ತುಗಳನ್ನು ತೆಗೆದುಕೊಂಡು, ಅವುಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡು ಮೂಲದಲ್ಲಿಯ ಹೊಸ ತಿರುವು, ಹೊಸ ವ್ಯಾಖ್ಯಾನ ನೀಡುವುದರ ಮೂಲಕ ಜೀವನದ ಮೂಲಭೂತ ಸತ್ಯಗಳನ್ನು ಧ್ವನಿಸುವುದಾಗಿದೆ. 'ಕತೆಯೊಡನೆ ಇತಿಹಾಸವನ್ನು ಹೋಲಿಸಿ ಕತೆಯೆಂದರೆ ಕಲ್ಪನೆಯ ಸೃಷ್ಟಿ, ಇತಿಹಾಸ ವಾಸ್ತವತೆಗೆ ಹೆಚ್ಚು ಸಮೀಪ ಎಂಬ ನಿರ್ಣಯಕ್ಕೆ ನಾವು ಬಂದು ಮುಟ್ಟುತ್ತೇವೆ. ಆದರೆ ಒಂದು ದೃಷ್ಟಿಯಿಂದ ಇತಿಹಾಸವೂ ಕೂಡ ಒಂದು ಕಥನವೇ. ಅದು ಕಥೆಯಾಗುವುದಕ್ಕಿಂತ ಮೊದಲು ನಮ್ಮ ತಿಳುವಳಿಕೆಗೆ ನಿಲುಕುವುದಿಲ್ಲ. ಇತಿಹಾಸ ಕಥನವಾಗುವಂತೆ ಅದು ವಚನವೂ ಆಗಬಹುದು.'[೨] (ಕೀರ್ತಿನಾಥ ಕುರ್ತಕೋಟಿ, ೨೦೦೮, ಪುಟ-೭೭) ಇತಿಹಾಸವನ್ನು ಕುರಿತಾಗಿ ಹಲವಾರು ವ್ಯಾಖ್ಯಾನಗಳನ್ನು ನೋಡಿದಾಗ ಪ್ರಗತಿಶೀಲ ಕಾದಂಬರಿಕಾರರು ತಮ್ಮ ಪ್ರತಿಭೆ, ಪಾಂಡಿತ್ಯದಿಂದ ಐತಿಹಾಸಿಕ ಘಟನೆಗಳನ್ನು ಸುಸಂಬಂಧವಾಗಿ ವಿಸ್ತರಿಸಿ ಸತ್ಯಕ್ಕೆ ಅಪಚಾರವಾಗದಂತೆ ಓದುಗರನ್ನು ಅಂದಿನ ಐತಿಹಾಸಿಕ ಪರಿಸರಕ್ಕೆ

ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ. ಇತಿಹಾಸಕಾರ ಪರಿಶೀಲಿಸುವುದು ನಿರ್ಜೀವವಾದ ಗತವನ್ನಲ್ಲ, ವರ್ತಮಾನದೊಂದಿಗೆ ಯಾವುದೇ ಒಂದು ವಿಧದಲ್ಲಿ ಸಜೀವ ಸಂಬಂಧವುಳ್ಳ ಗತವನ್ನು ಎಂಬ ಮಾತಿನಂತೆಯೇ ಪ್ರಗತಿಶೀಲ ಕಾದಂಬರಿಕಾರರಾದ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರು ಇತಿಹಾಸವನ್ನು ಕಾದಂಬರಿಗಳ ರೂಪದಲ್ಲಿ ಹೊರತಂದಿದ್ದಾರೆ. ಇಲ್ಲಿ ಪ್ರಗತಿಶೀಲ ಕಾದಂಬರಿಕಾರರಿಗೆ ಇತಿಹಾಸದ ವಸ್ತು ಕೈಗೆ ಸಿಕ್ಕಾಗ ಅದನ್ನು ತಿಳುವಳಿಕೆ ಮತ್ತು ಅನುಭವಗಳ ಹಿನ್ನೆಲೆಯಲ್ಲಿ ಈ ಪ್ರತಿಮೆಗಳನ್ನು ಭಾಷಾಂತರಿಸುತ್ತಾರೆ. ಅದರಲ್ಲಿ ಅವರ ಭಾಷೆಯ ಶಕ್ತಿ ಕಾಣುತ್ತೇವೆ. ಈ ಶಕ್ತಿಯಿಂದ ಮೂಲ ಪ್ರತಿಮೆ ಜೀವಂತವಾಗಿಯೇ ಉಳಿದರೂ ಸಹ ಅದರ ಅರ್ಥ ಮತ್ತು ಸ್ವರೂಪ ಬದಲಾವಣೆ ಪಡೆದುಕೊಳ್ಳುತ್ತದೆ.

ಲೇಖಕರ ಸೃಜನಶೀಲವಾದ ಬರವಣಿಗೆಯಲ್ಲ ಒಂದು ರೀತಿಯಲ್ಲಿ ಪುನರ್ಲೇಖವೆಂದೇ ಹೇಳಬೇಕಾಗುತ್ತದೆ. ಪುನರ್ಲೇಖದಿಂದ ಒಂದು ಕೃತಿಯ ಮೌಲ್ಯವ್ಯವಸ್ಥೆಯಲ್ಲಿ ಆಗುವ ಬದಲಾವಣೆಗಳನ್ನು ನೋಡಬಹುದು. ಪ್ರಾಚೀನ ಸಾಹಿತ್ಯದಲ್ಲಿ ಪುನರ್ಲೇಖದ ಕಾರ್ಯ ನಿಸ್ಸಂಕೋಚವಾಗಿ ನಡೆಯುತ್ತಿತ್ತು. ಆದರೆ ಇಂದು ಪುನರ್ಲೇಖದ ಕಾರ್ಯ ನಿಸ್ಸಂಕೋಚವಾಗಿ ನಡೆಯುವುದಿಲ್ಲ. ಪ್ರಾಚೀನ ಕಾಲದ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ನಾಗಚಂದ್ರ, ಜನ್ನ ಮೊದಲಾದವರ ಕೃತಿಗಳನ್ನು ನೋಡಿದರೆ ನಮಗೆ ಪುನರ್ಲೇಖದ ಅರಿವಾಗುತ್ತದೆ.

ಪುನರ್‌ಲೇಖ ಎಂದರೆ ಕಿಟೆಲ್‌ರವರ ನಿಘಂಟುವಿನ ಪ್ರಕಾರ ಪುನರ್ ಎಂದರೆ ಪುನಃ, ಮತ್ತೆ ಎಂದೂ, ಲೇಖ ಎಂದರೆ ಬರಹ ಎಂಬುದಾಗಿ ಅರ್ಥವಾಗುತ್ತದೆ. ಇವೆರಡು ಪದಗಳು ಸೇರಿ ಪುನರ್‌ಲೇಖವಾಗಿರುವುದು. ಸಾಮಾನ್ಯ ಅರ್ಥದಲ್ಲಿ ಪುನರ್‌ಲೇಖವೆಂದರೆ ಮರುಸೃಷ್ಟಿ ಎಂದಾಗುತ್ತದೆ. ಇದನ್ನೇ ಮೂಲವಾಗಿ ಇಟ್ಟುಕೊಂಡು ಪ್ರಗತಿಶೀಲ ಕಾದಂಬರಿಕಾರರು ತಮ್ಮ ಐತಿಹಾಸಿಕ ಕಾದಂಬರಿಗಳನ್ನು ರಚಿಸಿರುವರು. ಪರಂಪರಾಗತವಾಗಿ ಬಂದ ಇತಿಹಾಸ ವಿಷಯಗಳನ್ನು ರಂಜನೀಯವಾಗಿ ಮತ್ತೆ ಪುನಃ ಬರೆದು, ಐತಿಹಾಸಿಕ ಮೂಲ ಸಂಗತಿಗಳಿಗೆ ದಕ್ಕೆ ಬಾರದಂತೆ ಮರುಸೃಷ್ಟಿ ಮಾಡಿರುವರು. ಪುನರ್‌ಲೇಖ ಅಥವಾ ಮರುಸೃಷ್ಟಿ ಎಂಬುದನ್ನು ಕೆಲವು ವಿದ್ವಾಂಸರು ಹೀಗೆ ವ್ಯಾಖ್ಯಾನಿಸುತ್ತಾರೆ.

ಲೆಫೆವರ್ : 'ಮರುಬರವಣಿಗೆ ಲೆಫೆವರ್ ಪ್ರಸ್ತುತ ಪಡಿಸಿದ ಈ ಪರಿಕಲ್ಪನೆಯನ್ನು ಕನ್ನಡದಲ್ಲಿ ಕುರ್ತಕೋಟಿಯವರು 'ಪುನರ್ಲೇಖ' ಎಂದು ಪ್ರಚುರಪಡಿಸಿದರು. ಸಾಮಾನ್ಯ ಅರ್ಥದಲ್ಲಿ ಭಾಷಾಂತರವು ಮೂಲವನ್ನು ಮತ್ತೆ ಬರೆಯುವ ಪ್ರಕ್ರಿಯೆಯಾಗಿದೆ. ಲೆಫೆವರನ ಪ್ರಕಾರ, ಸಾಹಿತ್ಯವನ್ನು ತನ್ನ ಕುಶಲತೆಯ ಮೂಲಕ ಭಿನ್ನ ನೆಲೆಗಳಿಗೆ ತಲುಪಿಸುವ ಚರಿತ್ರಲೇಖನ,

ಅಂಥಾಲಜಿ ನಿರ್ಮಾಣ, ವಿಮರ್ಶೆ ಮತ್ತು ಸಂಪಾದನೆ ಇತ್ಯಾದಿ ಮರುಬರವಣಿಗೆಯ ಕ್ರಮಗಳಲ್ಲಿ ಭಾಷಾಂತರವೂ ಒಂದು. ಅತ್ಯಂತ ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಗಳಲ್ಲಿ ಒಂದಾದ ಸಾಹಿತ್ಯವನ್ನು ಭಾಷಾಂತರವು (ಮರುಬರವಣಿಗೆಯು) ಭಿನ್ನ ಭಾಷಿಕ ಸಂಸ್ಕೃತಿಗೆ ತಲುಪಿಸುವ ಕೆಲಸ ಮಾಡುತ್ತದೆ.'[೩] (ಉಷಾ ಎಂ, ೨೦೧೪, ಪುಟ-೨೪೫)

ಅರಿಸ್ಟಾಟಲ್ : 'ಅರಿಸ್ಟಾಟಲ್‌ನು ಪುನರ್ಲೇಖ ಎಂಬರ್ಥದಲ್ಲಿಯೇ 'ಅನುಕರಣೆ' ಎಂಬುದಾಗಿ ಹೇಳಿರುವನು. 'ಅನುಕರಣೆ' ಎಂದರೆ 'ಪುನರ್ನಿರ್ಮಿತಿ' ಒಂದು ಬಗೆಯ ಸೃಷ್ಟಿಕಾರ್ಯ ಎಂದರ್ಥ. ಅನುಕರಣೆ ಎಂಬ ಮಾತಿಗೆ ಅರಿಸ್ಟಾಟಲ್ ಒಂದು ಸ್ಪಷ್ಟವಾದ ಹೊಸ ಅರ್ಥವನ್ನು ಕಲ್ಪಿಸುತ್ತಾನೆ. ಕಾವ್ಯಕ್ರಿಯೆ ಹೊರಗಿನದನ್ನು ಅನುಕರಿಸಿ ಅದರ ಒಂದು ಪ್ರತಿಕೃತಿಯನ್ನು ತಯಾರಿಸುವ ಕೆಲಸವಲ್ಲ. ಅದು ನಿರ್ಮಾಣಶೀಲವಾದ ಕ್ರಿಯೆ. ಹೊರಜಗತ್ತಿನಲ್ಲಿಯ ವಾಸ್ತವಾಂಶಗಳನ್ನು ಕವಿ ಎತ್ತಿಕೊಂಡರೂ ಅವನ್ನು ಬಳಸಿ ಆತ ಹೊಸದೊಂದು ಸೃಷ್ಟಿಯನ್ನು ತಯಾರಿಸುತ್ತಾನೆ. ಹೊರಗಿನಿಂದ ಎತ್ತಿಕೊಂಡ ವಿಷಯ ಇಂದಿನದಾಗಿರಬಹುದು, ನಿನ್ನೆಯದಾಗಿರಬಹುದು, ನಾಳೆಯದಾಗಿರಬಹುದು. "ಇದ್ದುದನ್ನು, ಇರುವುದನ್ನು ಇದ್ದಿತೆಂದು ಭಾವಿಸಲಾದದ್ದನ್ನು, ಇರಬೇಕೆನ್ನುವುದನ್ನು ಅಥವಾ ಇರಬಹುದಾದದ್ದನ್ನು" ಆತ ಎತ್ತಿಕೊಳ್ಳಬಹುದು ಎಂದಾಗ, ಭೂತ, ವರ್ತಮಾನ, ಭವಿಷ್ಯಗಳಂತೆ ಹಿಂದಿನ ನಂಬಿಕೆಗಳೂ ಮುಂದಿನ ಆದರ್ಶಗಳೂ ಆಕಾಂಕ್ಷೆಗಳೂ ಕವಿಗೆ ವಿಷಯಗಳಾಗಬಲ್ಲವು ಎಂದು ಸೂಚಿಸುತ್ತಾನೆ. ವಿಷಯ ಯಾವುದೇ ಆದರೂ ಅದು ಕವಿಕ್ರಿಯೆಯಲ್ಲಿ ಪರಿವರ್ತನ ಹೊಂದುತ್ತದೆ.'[೪] (ಇನಾಂದಾರ ವಿ.ಎಂ, ೧೯೯೫, ಪುಟ-೪೫)

ಕೀರ್ತಿನಾಥ ಕುರ್ತಕೋಟಿ : 'ಪುನರ್ಲೇಖನ ಎಂದರೆ ಪುನರುಕ್ತಿ, ನಿಜ ಆದರೆ ಅದು ಪುನಃಸೃಷ್ಟಿಯೂ ಹೌದು. ಈ ಪುನಃಸೃಷ್ಟಿ ಕಾವ್ಯ ಪ್ರಯತ್ನದ ಮೂಲಕವಾಗಿ ನಡೆಯುವುದರಿಂದ ಅದಕ್ಕೆ ತಿಳುವಳಿಕೆಯ ಹೊಸ ಪ್ರತಿಮಾನಗಳು ತಾನಾಗಿ ಕೂಡಿಕೊಂಡು ಬಿಡುತ್ತವೆ.'[೫] (ಕೀರ್ತಿನಾಥ ಕುರ್ತಕೋಟಿ, ೨೦೦೮, ಪುಟ-೩೩) 'ಪುನರ್ಲೇಖನದ ಪ್ರಕ್ರಿಯೆಯಲ್ಲಿ ಪ್ರತಿಮಾನಗಳು ಬೇರೆ ಬೇರೆ ಅರ್ಥಗಳನ್ನು ಪಡೆದುಕೊಂಡವು. ಕಾಲಕ್ರಮದಲ್ಲಿ ಹೊಸದಾಗಿ ಬಂದು ಸೇರಿದ ಅರ್ಥಗಳೆಲ್ಲ ಸೇರಿಕೊಂಡು ಪುರಾಣದಲ್ಲಿಯ ಮೂಲ ಪ್ರತಿಮೆಯನ್ನು ಬಿಚ್ಚಿ ಮತ್ತೆ ಕಟ್ಟುತ್ತವೆ. ಅಂದರೆ ಅದನ್ನು ಹಾಳು ಮಾಡುತ್ತಲೇ ಪುನಃಸೃಷ್ಟಿಸುತ್ತವೆ.'[೬] (ಕೀರ್ತಿನಾಥ ಕುರ್ತಕೋಟಿ, ೨೦೦೮, ಪುಟ-೩೦)

'ಕೃತಿಗೂ ಇತಿಹಾಸಕ್ಕೂ ಇರುವ ಸಂಬಂಧ ವಿಲಕ್ಷಣವಾದದ್ದು. ಕೃತಿಯೊಂದು ಹುಟ್ಟಿದೊಡನೆ ಅದು ತನ್ನ ಕೃತಿಕಾರನೊಂದಿಗೆ ಇನ್ನೂ ಸಂಬಂಧವನ್ನಿಟ್ಟುಕೊಂಡಿರುತ್ತದೆ. ಕೃತಿಯ ಜೊತೆಗೆ ಕೃತಿಕಾರನ ಮೌಲ್ಯಮಾಪನವೂ ನಡೆಯುತ್ತದೆ. ಆದರೆ ಅದು ಇತಿಹಾಸದಲ್ಲಿ ಅವತರಿಸಿರುತ್ತದೆ.

ಕಾಲಕಳೆದಂತೆ ಅದು ಸಹೃದಯರ ಸೊತ್ತಾಗಿ ಕೃತಿಕಾರನಿಂದ ಬಿಡುಗಡೆಯನ್ನು ಪಡೆದು, ಸ್ವತಂತ್ರವಾಗಿ ತನ್ನ ಅರ್ಥವನ್ನು ಕಟ್ಟಿಕೊಳ್ಳುತ್ತದೆ. ಸಾಹಿತ್ಯ ಕೃತಿಯ ಒಂದು ವಿಚಿತ್ರವಾದ ಲಕ್ಷಣವೆಂದರೆ ಅದು ತನ್ನ ರೂಪವನ್ನು ಒಮ್ಮೆಲೆ ಪ್ರಕಟಿಸುವುದಿಲ್ಲ. ಸಮಕಾಲೀನತೆಯ ಕಣ್ಣಿಗೆ ಕಂಡಿರುವ ಅದರ ರೂಪ ಮುಂದಿನ ಕಾಲಕ್ಕೆ ಉಳಿಯುವುದಿಲ್ಲ'[೭] (ಕೀರ್ತಿನಾಥ ಕುರ್ತಕೋಟಿ, ೧೯೯೨, ಪುಟ-೮) ಎಂಬ ವಿಚಾರಗಳನ್ನು ಕಾಣುತ್ತೇವೆ.

ರಾಬರ್ಟ್ ಸ್ಪಿಲ್ಲರ್ : 'ಸಾಹಿತ್ಯ ಚರಿತ್ರಕಾರ ಹೆಚ್ಚು ಕಡಿಮೆ ಪರಿಣತನಾದ ಭಾಷಾಶಾಸ್ತ್ರಜ್ಞ, ಗ್ರಂಥಸಂಪಾದಕ, ವಿಮರ್ಶಕ ಆಗಿರಲೇಬೇಕಾಗಿದ್ದರೂ ಸಾಹಿತ್ಯ ಚರಿತ್ರಕಾರನಾಗಿ ಅವನು ನಿರ್ವಹಿಸಬೇಕಾದ ಹೊಣೆಯೇ ಪ್ರತ್ಯೇಕವಾದುದು; ವಿಶಿಷ್ಟವಾದುದು.'[೮] (ನಾಯಕ ಹಾ.ಮಾ(ಸಂ), ೧೯೭೪, ಪುಟ-೨೬) ಸಾಹಿತ್ಯ ಚರಿತ್ರೆಕಾರ ಚರಿತ್ರೆಯ ನಿರ್ಮಾಣದಲ್ಲಿ ಅನೇಕ ಅಡೆ ತಡೆಗಳನ್ನು ಎದುರಿಸುತ್ತಾನೆ. ಎಲ್ಲ ಚರಿತ್ರಕಾರರೂ ಚರಿತ್ರೆಯನ್ನು ಬರೆಯುವಾಗ ಆ ವಿಷಯದಲ್ಲಿ ಅಭಿವ್ಯಕ್ತಗೊಳ್ಳುವ ಒಂದು ಸಮಾಜದ, ಜನಾಂಗದ ಚರಿತ್ರೆಯನ್ನೇ ಹೇಳುತ್ತಾರೆ. ಹಾಗೆಯೇ ಸಾಹಿತ್ಯ ಚರಿತ್ರಕಾರನೂ ಕೂಡ ತಾನು ಆಯ್ದುಕೊಂಡ ವಿಷಯಕ್ಕನುಸಾರವಾಗಿ ಆ ಕಾಲಘಟ್ಟದ ಜನಜೀವನ, ರೀತಿ ನೀತಿಗಳು, ಸಂಪ್ರದಾಯ ಆಚರಣೆಗಳು ಪ್ರತಿಯೊಂದನ್ನು ಅನುಲಕ್ಷಿಸಿ ತನ್ನ ಐತಿಹಾಸಿಕ ಕೃತಿಯಲ್ಲಿ ಅಳವಡಿಸಿಕೊಳ್ಳುತ್ತಾನೆ. ಹಾಗೆಯೇ ಅವುಗಳನ್ನು ಅಳವಡಿಸಿಕೊಳ್ಳುವ ಪೂರ್ವದಲ್ಲಿ ಯಾವುದಾದರೂ ಆಧಾರಗಳು ಸಿಗುತ್ತವೆಯೇ ಎಂಬುದನ್ನು ಗಮನಿಸುತ್ತಾನೆ.

ವೈಟ್ : 'ಪ್ರಾಚೀನ ಕಾಲವನ್ನು ಒಳಹೊಕ್ಕು, ಅದರ ಅರ್ಥವನ್ನು ಅರಿತುಕೊಂಡು ಅದನ್ನು ಪುನರ್‌ನಿರ್ಮಿಸುವುದು'[೯] ಇತಿಹಾಸದ ಕಲ್ಪನಾಶಕ್ತಿ ಎಂದು ವೈಟ್ ಅರ್ಥೈಸಿದ್ದಾರೆ. (ಶ್ರೀನಿವಾಸಮೂರ್ತಿ ಎಚ್.ವಿ, ೨೦೦೪, ಪುಟ-೧೧೯)

ಟ್ರೆವರ್ ರೋಪರ್ : 'ದೂರದಲ್ಲಿರುವ ಅನ್ಯರ ಮನಸ್ಸಿಗೆ ವಲಸೆ ಹೋಗುವ ಶಕ್ತಿಯೇ ಇತಿಹಾಸದ ಕಲ್ಪನಾಶಕ್ತಿ. ನಮಗಿಂತ ವಿಭಿನ್ನವಾಗಿರುವ ವ್ಯಕ್ತಿಯ ಮನಹೊಕ್ಕು, ಆತನ ಆಶೋತ್ತರಗಳು, ಭಾವನೆಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಅದನ್ನು ಅರಿತುಕೊಂಡಂತೆಯೇ ವಿವರಿಸುವುದಕ್ಕೆ ಕಲ್ಪನಾಶಕ್ತಿಯನ್ನು ಉಪಯೋಗಿಸಬೇಕೆಂದು ಪ್ರೊ.ಟ್ರೆವರ್ ರೋಪರ್ ತಿಳಿಸಿದ್ದಾರೆ.'[೧೦] (ಶ್ರೀನಿವಾಸಮೂರ್ತಿ ಎಚ್.ವಿ, ೨೦೦೪, ಪುಟ-೧೧೯)

ಕ್ರೋಚೆ ಮತ್ತು ಕಾಲಿಂಗ್ ವುಡ್ : 'ಐತಿಹಾಸಿಕ ಜ್ಞಾನಕ್ಕೆ ಕಲ್ಪನಾಶಕ್ತಿಯು ಮೂಲಾಧಾರವಾಗಿದೆ.'[೧೧] (ಶ್ರೀನಿವಾಸಮೂರ್ತಿ ಎಚ್.ವಿ, ೨೦೦೪, ಪುಟ-೧೧೯)

ಹಾಲ್‌ಫೆನ್ : 'ಅಪೂರ್ಣವಾದ ಬರವಣಿಗೆಯನ್ನು ಪೂರ್ಣಗೊಳಿಸಲು ಅವಶ್ಯಕವಾದ ವಿಷಯಗಳನ್ನು ನಮ್ಮ ಸ್ವಂತ ಅನುಭವಗಳಿಂದ ಕಾಣುವುದು'[೧೨] ಎಂದಿದ್ದಾರೆ. (ಶ್ರೀನಿವಾಸಮೂರ್ತಿ ಎಚ್.ವಿ, ೨೦೦೪, ಪುಟ-೧೧೯)

ರೇನಿಯರ್ : 'ನಾವು ಸಂಕೇತಗಳಿಂದ ಪಡೆದ ಘಟನೆಗಳನ್ನು ಕಥೆಯ ರೂಪದಲ್ಲಿ ವಿವರಿಸಲು ಈ ಕಲ್ಪನಾಶಕ್ತಿಯನ್ನು ಉಪಯೋಗಿಸಬೇಕು'[೧೩] ಎಂದು ರೇನಿಯರ್ ಹೇಳಿದ್ದಾರೆ. (ಶ್ರೀನಿವಾಸಮೂರ್ತಿ ಎಚ್.ವಿ, ೨೦೦೪, ಪುಟ-೧೧೯)

ಕೊರಟಿ ಶ್ರೀನಿವಾಸರಾಯರು : 'ಲೇಖಕನು ಮೊದಲು ತಾನು ಬರೆಯಬೇಕೆಂದಿರುವ ಐತಿಹಾಸಿಕ ಸಾಮಗ್ರಿಯನ್ನು ವಿಷಯ ಸಂಗ್ರಹಣೆಯನ್ನು ಹಲವು ಆಕರಗಳಿಂದ ಮಾಡಿಕೊಳ್ಳಬೇಕು. ಅನಂತರ ಅವನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವುದು ಹೇಗೆಂದು ತಿಳಿದಿರಬೇಕು. ಕಡೆಯದಾಗಿ ಅಂತಹ ನಿರ್ಜೀವ ವಸ್ತುಗಳಿಗೆ ಜೀವ ತುಂಬಿ ಅವುಗಳ ಹಂದರದಿಂದ ಗತಕಾಲದ ಜನಜೀವನವನ್ನು ಯಥಾರ್ಥವನ್ನಾಗಿ, ಜೀವಂತವಾಗಿ, ರಸಮಯವಾಗಿ, ಕಲಾತ್ಮಕವಾಗಿ, ಮೂಡಿಸುವಂತಹ ಚತುರ ಶಿಲ್ಪಿ, ಪ್ರತಿಭಾ ಸಂಪನ್ನ ಲೇಖಕ ಅವನಾಗಿರಬೇಕು. ಆಗ ಮಾತ್ರ ಯುಗಧರ್ಮವನ್ನು ಪ್ರತಿಬಿಂಬಿಸಬಲ್ಲ ಜೀವಂತ ಸಾಹಿತ್ಯ ಕೃತಿ ಐತಿಹಾಸಿಕ ಕಾದಂಬರಿ ಅವನಿಂದ ಸೃಷ್ಟಿಯಾದೀತು. ಇಲ್ಲದಿದ್ದರೆ ಅವನು ಕೇವಲ ವರದಿಗಾರನಾಗುತ್ತಾನೆ ಅಷ್ಟೇ.'[೧೪] (ಕೃಷ್ಣರಾಯ ಶಾ.ಮಂ(ಸಂ) ೧೯೯೪, ಪುಟ-೧೫೯) ಆದರೆ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರು ಕೇವಲ ವರದಿಗಾರರಾಗದೇ ಇತಿಹಾಸದ ವಿಶಾಲವಾದ ವಸ್ತುವನ್ನು ಆಯ್ದುಕೊಂಡು ತಮ್ಮ ಪ್ರತಿಭಾಶಕ್ತಿಯಿಂದ ಓದುಗರಲ್ಲಿ ಆಸಕ್ತಿ, ಉತ್ಸುಕತೆಯನ್ನು ಹೆಚ್ಚುವಂತೆ ಮಾಡಿ ಅರ್ಥವತ್ತಾಗಿ, ರಸವತ್ತಾಗಿ, ಭಾವನೆಗಳಿಗೆ, ಸನ್ನಿವೇಶಕ್ಕೆ, ವ್ಯಕ್ತಿತ್ವಕ್ಕೆ ತಕ್ಕ ಶಬ್ದಗಳ ಸುಂದರವಾದ ತಡೆಯಿಲ್ಲದ ಸಹಜವಾದ ಜೋಡಣೆ ಮಾಡುತ್ತ ಐತಿಹಾಸಿಕ ಪಾತ್ರ, ಘಟನೆಗಳ ಜೊತೆಗೆ ಕಾಲ್ಪನಿಕ ಪಾತ್ರ, ಘಟನೆಗಳನ್ನು ಸಹ ಜೋಡಿಸಿ ಐತಿಹಾಸಿಕ ಕಾದಂಬರಿಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ರಚಿಸಿರುವರು.

ಪ್ರಗತಿಶೀಲ ಕಾದಂಬರಿಕಾರರು ತಮ್ಮ ಐತಿಹಾಸಿಕ ಎಂದರೆ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ವಾಸ್ತವದ ಬದುಕಿಗೆ ಸಮೀಕರಿಸುತ್ತಾ ಹಲವಾರು ಕಾದಂಬರಿಗಳನ್ನು ಬರೆದಿರುವರು. ಆದರೆ ಇವರು ರಚಿಸಿದ ಈ ಐತಿಹಾಸಿಕ ಕಾದಂಬರಿಗಳಲ್ಲಿ ಇತಿಹಾಸದಲ್ಲಿ ಪ್ರಸ್ತಾಪಿಸಲ್ಪಟ್ಟ ವ್ಯಕ್ತಿಗಳನ್ನು ಒಂದೊಂದು ಪಾತ್ರವಾಗಿ ಸೃಷ್ಟಿಸುವುದರ ಜೊತೆಗೆ ಹಲವು ಕಾಲ್ಪನಿಕ ಪಾತ್ರಗಳನ್ನು ಸಹ ಚಿತ್ರಿಸಿರುವರು. ಅಂದರೆ ಗತಿಸಿದ ಇತಿಹಾಸವನ್ನು ಪುನರ್‌ಲೇಖದ

ಸ್ವರೂಪದಲ್ಲಿ ಅದನ್ನು ಮತ್ತೆ ಕಟ್ಟುವ ಕಾರ್ಯವನ್ನು ಬಹು ಯಶಸ್ವಿಯಾಗಿ ಅರ್ಥಪೂರ್ಣವಾಗಿ ನಿಭಾಯಿಸಿದ್ದಾರೆ. ಪುನರ್ಲೇಖ ಎಂಬುದು ಹಳೆಯದರ ಮುಂದುವರಿಕೆ ಎಂದು ಮೇಲ್ನೋಟಕ್ಕೆ ತೋರಿದರೂ ಸಹ ಅದು ಹೊಸದೇನನ್ನೋ ಜೋಡಿಸುವ ಕೆಲಸ ಮಾಡುವುದು. ಈ ಕೆಲಸ ಮಾಡುವ ಲೇಖಕ ತನ್ನ ಕೃತಿ ಸಮಾಜದ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ಇತಿಹಾಸದ ಘಟನೆಗಳನ್ನು ಆಕರವಾಗಿ ಇಟ್ಟುಕೊಂಡು ಪುನರ್‌ಲೇಖವಾಗಿ ರಚಿಸುವನು. ಅಂದರೆ 'ಪುನರ್ಲೇಖದಲ್ಲಿ ಹಳೆಯ ತಿಳುವಳಿಕೆ ಪ್ರತಿಮಾನಗಳು ಹೊಸ ಪ್ರತಿಮಾನಗಳೊಂದಿಗೆ ಕೂಡಿಕೊಂಡು ಹೊಸದಾದ ಅರ್ಥ ನಿರ್ಮಾಣಕ್ಕೆ ಅನುವು ದೊರೆತಂತಾಗುತ್ತದೆ.'[೧೫] (ಕೀರ್ತಿನಾಥ ಕುರ್ತಕೋಟಿ, ೨೦೦೮, ಪುಟ-೨೮)

ಮನುಷ್ಯನು ಈ ಜಗತ್ತಿನಲ್ಲಿ ಹುಟ್ಟಿದ್ದಾನೆ ಎಂದ ಮೇಲೆ ಆತನ ಪ್ರತಿಯೊಂದು ಅನುಭವಕ್ಕೂ ಹಾಗೂ ಚಟುವಟಿಕೆಗೂ ಒಂದು ಚರಿತ್ರೆ ಎಂಬುದು ಇದ್ದೇ ಇರುತ್ತದೆ. ಹಾಗೆಯೇ ಸಾಹಿತ್ಯಕ್ಕೂ ಕೂಡ ಒಂದು ಚರಿತ್ರೆ ಇರುವುದು. ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಗಳ ಕುರಿತು ತಿಳಿಯಲು ಅಗತ್ಯವಾದ ಆಧಾರಗಳು ದೊರೆಯುವುದು ಅವಶ್ಯಕ. ಆದರೆ ಕೆಲವೊಂದು ಭಾಷೆಗಳ ಸಾಹಿತ್ಯ ಚರಿತ್ರೆಯನ್ನು ತಿಳಿಯಲು ಆಧಾರಗಳು ದೊರೆಯುವುದಿಲ್ಲ. ಆಧಾರಗಳು ಇಲ್ಲದ ಮಾತ್ರಕ್ಕೆ ಚರಿತ್ರೆಯೇ ಇಲ್ಲವೆಂದು ಅರ್ಥವಲ್ಲ. ಆದರೆ ಸಾಹಿತ್ಯ ಚರಿತ್ರೆಯ ಜೀವಂತಿಕೆಯನ್ನು ಕಾಣುವುದು ಅದರ ಬರವಣಿಗೆಯ ರೂಪದಲ್ಲಿ. ಬರವಣಿಗೆಯ ರೂಪದ ಗ್ರಂಥ ಸಮುದಾಯದ ಚರಿತ್ರೆಯ ನಿರೂಪಣೆಯೇ ಸಾಹಿತ್ಯ ಚರಿತ್ರೆ. ವಸಾಹತುಶಾಹಿಯ ಪರಿಣಾಮವಾಗಿ ಭಾರತೀಯ ವೈಚಾರಿಕತೆಯಲ್ಲಿ ಹೇಗೋ ಹಾಗೆ ಭಾರತೀಯ ಸಾಹಿತ್ಯದಲ್ಲಿಯೂ ಬಗೆ ಬಗೆಯ ನೂತನ ಆಯಾಮಗಳು ಹೊಸ ಬದಲಾವಣೆಗಳು ಕಂಡುಬಂದವು. ಕನ್ನಡ ಸಾಹಿತ್ಯದಲ್ಲಂತೂ ಅದರಲ್ಲೂ ಪ್ರಗತಿಶೀಲಕಾರರು ವೈಚಾರಿಕತೆಯಿಂದ ಕೂಡಿದ ಸಾಮಾಜಿಕ ಹಾಗೂ ಇತಿಹಾಸ ವಿಷಯ ವಸ್ತುಗಳುಳ್ಳ ಐತಿಹಾಸಿಕ ಕಾದಂಬರಿಗಳನ್ನು ಬರೆದಿರುವರು.

'ಸಾಹಿತ್ಯ ಸೃಷ್ಟಿಯ ಆಧಾರಗಳನ್ನು ಸಾಹಿತ್ಯ ಚರಿತ್ರಕಾರ ವಿಶೇಷವಾಗಿ ಲಕ್ಷಿಸಬೇಕು. ಭಾವನೆಗಳೂ, ವಿಚಾರಗಳೂ ಲೋಕವನ್ನು ಆಳುತ್ತವೆ. ಲೇಖಕ ಈ ಲೋಕದ ಪ್ರಜೆಯಾಗಿರುವುದರಿಂದ ಅವನು ಒಂದಲ್ಲ ಒಂದು ವಿಚಾರದ ಪ್ರಭಾವಕ್ಕೆ ಒಳಗಾಗಿಯೇ ಇರುತ್ತಾನೆ. ಧಾರ್ಮಿಕ ಹಾಗೂ ರಾಜಕೀಯ ವಿಚಾರಗಳು ಲೇಖಕರ ಮೇಲೆ ಅಥವಾ ಸಾಹಿತ್ಯದ ಮೇಲೆ ಮಿಕ್ಕ ವಿಚಾರಗಳಿಗಿಂತ ಹೆಚ್ಚಿನ ಪ್ರಭಾವ ಬೀರುತ್ತವೆ. ಇವೆರಡೂ ದೈನಂದಿನ ಜೀವನದಲ್ಲಿ ವಿಶೇಷ ಪಾತ್ರವಹಿಸುವುದೇ ಇದಕ್ಕೆ ಕಾರಣ.'[೧೬] (ನಾಯಕ ಹಾ.ಮಾ(ಸಂ), ೧೯೭೪, ಪುಟ-೨೭) ಕನ್ನಡ

ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಮೊದಲ ಲಾಕ್ಷಣಿಕ ಕೃತಿಯಾದ ಕವಿರಾಜಮಾರ್ಗದಿಂದ ಇಂದಿನ ಆಧುನಿಕ ಸಾಹಿತ್ಯದವರೆಗೂ ಅವಲೋಕಿಸಿದಾಗ ಅಧಿಕ ಕೃತಿಗಳಲ್ಲಿ ಧಾರ್ಮಿಕ ಮತ್ತು ರಾಜಕೀಯ ಅಂಶಗಳು ಪ್ರಸ್ತಾಪವಾಗಿರುವುದನ್ನು ಕಾಣುತ್ತೇವೆ. ಜೊತೆಗೆ ಆಯಾ ಕಾಲಘಟ್ಟದ ಸಾಹಿತಿಗಳು ಕೇವಲ ಅಂದಿನ ಸಮಾಜದ ವಾಸ್ತವ ಸಂಗತಿಗಳನ್ನು ಮಾತ್ರ ಅಭಿವ್ಯಕ್ತಪಡಿಸದೆ ತಮಗಿಂತಲೂ ಹಿಂದಿನ ಇತಿಹಾಸವನ್ನು ಪ್ರಸ್ತಾಪಿಸುವುದನ್ನು ಕಾಣುತ್ತೇವೆ. ಏಕೆಂದರೆ ಒಬ್ಬ ಸಾಹಿತಿಯಾದವನಿಗೆ ಹಳೆಯದರ ಪರಿಚಯವಿಲ್ಲದಿದ್ದರೆ ಹೊಸದರ ಔಚಿತ್ಯವನ್ನಾಗಲಿ, ವೈಶಿಷ್ಟ್ಯವನ್ನಾಗಲಿ ಕಂಡುಕೊಳ್ಳುವುದು ಸಾಧ್ಯವಿಲ್ಲ. ಲೇಖಕ ವರ್ತಮಾನದಲ್ಲಿ ಇದ್ದರೂ ಅವನ ಅಂತಃಪ್ರಜ್ಞೆಯಲ್ಲಿ ನಾಡು, ನುಡಿಯ ಇತಿಹಾಸ, ಪರಂಪರೆ, ಸಂಸ್ಕೃತಿ, ಇವುಗಳೆಲ್ಲದರ ಅರಿವು ಇದ್ದುದರಿಂದಲೇ ಪ್ರಗತಿಶೀಲ ಕಾದಂಬರಿಕಾರರು ಐತಿಹಾಸಿಕ ಪ್ರಜ್ಞೆಯುಳ್ಳ ಕಾದಂಬರಿಯನ್ನು ರಚಿಸಲು ಸಾಧ್ಯವಾಗಿರುವುದು. 'ಇಂದಿನ ಸಾಹಿತ್ಯ ಜಾಣ್ಮೆಗೆ, ನಿನ್ನೆಯ ಸಾಹಿತ್ಯದ ಸದ್ವಿವೇಕ ಇಂಬಾಗಿರುತ್ತದೆ. ಇದು ನೂರಕ್ಕೆ ನೂರು ಸತ್ಯವಾದ ಮಾತು. ಆಧುನಿಕತೆಯ ಹೊಸ ಬೆಳಕಿಗೆ, ಇತಿಹಾಸದ ಪೂರ್ವ ಪಲುಕು ಪ್ರೇರಣೆಯಾಗಿರುತ್ತದೆ. ಬರಹಕ್ಕೆ ಬದುಕು ಹೇಗೆ ಭಾಗ್ಯ ಬುನಾದಿಯೋ, ಹಾಗೆಯೇ ಪ್ರಗತಿಗೆ ಪರಂಪರೆ ಅಡಿಪಾಯ'[೧೭] (ಚಂದ್ರಶೇಖರ ಧೂಳೇಕರ, ೨೦೧೦, ಪುಟ-೧೪೩) ಆಗಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಐತಿಹಾಸಿಕ ಪ್ರಜ್ಞೆ ಎಂಬುದು ಹೇಗೆ ಬೆಳೆದು ಬಂದಿತು? ಅದರಲ್ಲೂ ಪ್ರಗತಿಶೀಲ ಕಾದಂಬರಿಕಾರರು ಐತಿಹಾಸಿಕ ಕಾದಂಬರಿಗಳನ್ನು ಬರೆಯಲು ಪ್ರೇರಣೆ, ಪ್ರಭಾವಗಳೇನು? ಯಾವ ಹಿನ್ನೆಲೆಯನ್ನು ಇಟ್ಟುಕೊಂಡು ಇವರು ಐತಿಹಾಸಿಕ ಕಾದಂಬರಿಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ರಚಿಸಿದರು ಎಂಬುದರ ವಿವೇಚನೆಯೇ ಈ ಅಧ್ಯಾಯದ ಮುಖ್ಯ ವಿಷಯ ವಸ್ತು. ನವೋದಯ ಸಾಹಿತ್ಯದ ಬೆನ್ನಿಗೆ ಅಂಟಿಕೊಂಡೇ ಹುಟ್ಟಿಬಂದ ಪ್ರಗತಿಶೀಲ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರತಿಯೊಬ್ಬರ ಗಮನವನ್ನು ಸೆಳೆದಿದೆ. ಕನ್ನಡದಲ್ಲೊಂದೇ ಏಕೆ, ಜಗತ್ತಿನ ಇತರ ಭಾಷೆಗಳಲ್ಲೂ ಸಾಹಿತ್ಯವೆಂದರೆ ಪಂಡಿತರಿಗಾಗಿಯೇ ಇರುವ ಸೊತ್ತು ಎಂಬ ಭಾವನೆಯು ಹಲವು ಕಾಲದಿಂದಲೂ ಬೇರೂರಿತ್ತು. ಈ ಭಾವನೆಯ ಬುಡ ಕಿತ್ತೊಗೆದವರು ನವೋದಯ ಕಾಲದ ಪ್ರಗತಿಶೀಲರು. ಈ ದಿಶೆಯಲ್ಲಿ ಅ.ನ.ಕೃ, ತ.ರಾ.ಸು, ಬಸವರಾಜ ಕಟ್ಟೀಮನಿ, ನಿರಂಜನ ಮೊದಲಾದ ಪ್ರಗತಿಶೀಲ ಲೇಖಕರು ನಡೆಸಿರುವ ಸಾಹಿತ್ಯ ಕೃಷಿ ಗಮನಾರ್ಹವಾದುದು. ನವೋದಯದವರಿಗಿಂತ ತುಸು ಭಿನ್ನವಾದ ರೀತಿಯಲ್ಲಿ ಆಲೋಚಿಸಿ ಕಥೆ, ಕಾದಂಬರಿಗಳನ್ನು ಬರೆದ ಪ್ರಗತಿಶೀಲರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. 'ನವೋದಯ ಸಾಹಿತ್ಯದಂತೆ ಪ್ರಗತಿಶೀಲ

ಸಾಹಿತ್ಯವು ಕೂಡ ಪಶ್ಚಿಮ ಮತ್ತು ದೇಸೀಯ ತಾತ್ವಿಕ ಸಂವೇದನೆಯ ಹಿನ್ನೆಲೆಯಲ್ಲಿ ರೂಪಿತವಾದ ಒಂದು ಸಾಹಿತ್ಯ ಪಂಥವಾಗಿದ್ದು, ಮಾರ್ಕ್ಸ್‌ವಾದ, ಗಾಂಧೀವಾದ, ವಚನಕಾರರ ಸಾಮಾಜಿಕ ಬದ್ಧತೆ, ಕೀರ್ತನಕಾರರ ಸಾಮಾಜಿಕ ಚಳುವಳಿ, ಸರ್ವಜ್ಞನ ನಿಷ್ಠುರ ವಾಸ್ತವಪ್ರಜ್ಞೆ ನವೋದಯ ಸಾಹಿತ್ಯದ ಮಾನವೀಯತೆ ಮತ್ತು ವಾಸ್ತವಪ್ರಜ್ಞೆಯ ತಾತ್ವಿಕ ಚಿಂತನೆಯ ಬೆಳಕಿನಲ್ಲಿ ಮೂಡಿದ ಒಂದು ಪ್ರಮುಖ ಎಡಪಂಥೀಯ ಸಾಹಿತ್ಯ ಚಳುವಳಿಯಾಗಿ ಬೆಳೆದುಬಂದಿದೆ'[೧೮] (ತಿಮ್ಮೇಗೌಡ ಎಚ್.ಆರ್, ೨೦೧೧, ಪುಟ-೨೩) ಎಂಬ ಅಂಶಗಳನ್ನು ನೋಡಬಹುದು.

ನಮಗೆ ಇತಿಹಾಸ ಏಕೆ ಬೇಕು? ಎಂಬ ಪ್ರಶ್ನೆಗೆ ಉತ್ತರವಾಗಿ ನಮಗೆ ನಮ್ಮ ಪೂರ್ವಜರ ಕುರಿತು ಯೋಗ್ಯವಾದ ಅಭಿಮಾನವನ್ನು ಹುಟ್ಟಿಸಿಕೊಂಡು ಅವರ ವಿಷಯವಾಗಿ ನಮ್ಮಲ್ಲಿ ನೆಲೆಗೊಂಡಿರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿಕೊಳ್ಳಲು ನಮ್ಮ ದೇಶದ ನಿಜವಾದ ಇತಿಹಾಸವನ್ನು ನಮ್ಮ ಜನರೇ ಅಭಿಮಾನಪೂರ್ವಕವಾಗಿ ಬರೆದಾಗ ರಾಷ್ಟ್ರದ ಪ್ರಗತಿಗೆ ಅದು ನೆರವಾಗಬಲ್ಲದು. 'ಚರಿತ್ರೆಯ ಕಾಲಗತಿಯಲ್ಲಿ ಅನೇಕ ಪರಿಕಲ್ಪನೆಗಳು ಹುಟ್ಟಿಕೊಂಡಿವೆ. ನಮ್ಮ ಸ್ವಾತಂತ್ರ್ಯ ಪೂರ್ವದಲ್ಲಿ ಚರಿತ್ರೆಯ ಬಗೆಗಿದ್ದ ಕಲ್ಪನೆ ಬೇರೆ, ನಂತರದ ಕಾಲದಲ್ಲಿ ಬಂದ ಪರಿಕಲ್ಪನೆ ಬೇರೆ. ಅರಸರ ಏಳು ಬೀಳುಗಳನ್ನಷ್ಟೇ ತಿಳಿದುಕೊಳ್ಳುವುದು ನಮ್ಮ ಉದ್ದೇಶಗಳಲ್ಲ. ಚರಿತ್ರೆಯ ಒಂದು ಭಾಗವಾಗಿಯಷ್ಟೇ ಅವು ಬರಬೇಕೇ ಹೊರತು, ಅದೇ ಪ್ರಧಾನ ಉಳಿದದ್ದು ಅಧೀನವೆನ್ನಿಸಬಾರದು. ಒಂದು ದೇಶದ ಚರಿತ್ರೆ ಎಂದರೆ ಆ ದೇಶದ ಜನರ ಜೀವನ ವಿಧಾನಗಳ ಚರಿತ್ರೆ'[೧೯] (ನಿಂಗಪ್ಪ ಮುದೇನೂರು, ೨೦೦೪, ಪುಟ-೫೨) ಆ ಕೆಲಸವನ್ನು ನಮ್ಮ ಕನ್ನಡದ ಅನೇಕ ಸಾಹಿತಿಗಳು ಮಾಡಿದ್ದು ಅದರಲ್ಲಿ ಪ್ರಗತಿಶೀಲರು ಪ್ರಮುಖರಾಗಿರುವರು. 'ಯಾವ ಕರ್ನಾಟಕಸ್ತರಿಗೆ ತಮ್ಮ ಪೂರ್ವಜರ ಬಗ್ಗೆ ಸಕೌತುಕವಾದ ಅಭಿಮಾನವುಂಟಾಗುವುದಿಲ್ಲವೋ, ಯಾರು ತಮ್ಮ ಜನರ ಮಹಾಕಾರ್ಯಗಳ ಜ್ಞಾನವಿಲ್ಲದೆ ಇನ್ನೂ ಕಗ್ಗತ್ತಲೆಯಲ್ಲಿ ಅಲೆದಾಡುತ್ತಿರುವರೋ ಅಂಥ ಜನರ ಭಾಷಾವೃಕ್ಷವು ಕೂಡ ಭರದಿಂದ ಬೆಳೆಯದಿದ್ದರೆ ಸೋಜಿಗವೇನು? ಕನ್ನಡಿಗರೇ, ನಿಮ್ಮ ಈ 'ವಿಷಾದ'ವನ್ನು ಹೋಗಲಾಡಿಸಿ, ನಿಮ್ಮ ಮೇಲಿನ ನಿರಭಿಮಾನತೆಯ ಮುಸುಕನ್ನು ಹೊಡೆಯಲಿಕ್ಕೆ ನೀವು ನಿಮ್ಮ ಇತಿಹಾಸಕ್ಕೆ ಶರಣು ಹೋಗಿರಿ'[೨೦] (ನಾಯಕ ಹಾ.ಮಾ, ಸಿಪಿಕೆ, ಟಿ.ವಿ ವೆಂಕಟಾಚಲಶಾಸ್ತ್ರೀ(ಸಂ), ೧೯೮೩, ಪುಟ-೧೦೨) ಎಂಬ ಐತಿಹಾಸಿಕ ಪ್ರಜ್ಞೆಯುಳ್ಳ ವ್ಯಾಖ್ಯಾನಗಳನ್ನು ಕಾಣುತ್ತೇವೆ.

ಸಾಮಾಜಿಕ ಕಾದಂಬರಿಗಳನ್ನು ಬರೆಯುತ್ತ ಸಮಾಜದ ವಾಸ್ತವದ ಚಿತ್ರಣವನ್ನು ಕಣ್ಮುಂದೆ ಕಟ್ಟುವ ರೀತಿಯಲ್ಲಿ ಚಿತ್ರಿಸುವ ಪ್ರಗತಿಶೀಲ ಕಾದಂಬರಿಕಾರರು ಏಕೆ ಐತಿಹಾಸಿಕ ಕಾದಂಬರಿಗಳನ್ನು

ಪುನರ್‌ಲೇಖದಲ್ಲಿ ಬರೆಯಲು ಪ್ರಾರಂಭಿಸಿದರು ಎಂಬುದು ಗಮನಾರ್ಹ ವಿಷಯ. ಏಕೆಂದರೆ ಇತಿಹಾಸದಲ್ಲೂ ವಾಸ್ತವಾಂಶವಿರುವುದು. ಐತಿಹಾಸಿಕ ಸಂಗತಿಗಳನ್ನು ಇಂದಿನ ಜನರಿಗೆ ತಿಳಿಸುವ ಉದ್ದೇಶದಿಂದ ಪುನರ್‌ಲೇಖದ ಸ್ವರೂಪದಲ್ಲಿ ಇತಿಹಾಸವನ್ನು ಚಿತ್ರಿಸಿರುವರು. ಪ್ರಗತಿಶೀಲರು ಅಂದಿನ ಪಾತ್ರಗಳನ್ನು ಜೀವಂತಗೊಳಿಸುವ ಕಲೆ, ಅಂದಿನ ಸಾಮಾಜಿಕ ಸ್ಥಿತಿಯನ್ನು ಸಜೀವಗೊಳಿಸುವ ಕಲೆ, ಅಂದಿನ ಸಾಹಿತ್ಯ, ಸಂಸ್ಕೃತಿ, ಕಲೆಗಳ ದರ್ಶನ ನೀಡುವಂತಹ ಕಲೆಗಾರಿಕೆಯನ್ನು ಒಗ್ಗೂಡಿಸಿಕೊಂಡು ಬಂದಿದ್ದರು. ಹೀಗಾಗಿಯೇ ಪ್ರಗತಿಶೀಲರು ಅಂದಿನ ಕಾಲದ ಜನರ ನಡೆ–ನುಡಿ, ಸ್ವಭಾವ–ಸಂಸ್ಕೃತಿಗಳನ್ನು ಚಿತ್ರಿಸಿ, ನಡೆದಿದ್ದ ಐತಿಹಾಸಿಕ ಘಟನೆಗಳಿಗೆ ಅವು ಹೇಗೆ ಕಾರಣಗಳಾಗಿ ಪರಿಣಮಿಸಿದುವೆಂಬುದನ್ನು ಹೇಳಲಿಕ್ಕೆ ಹೊರಟವುಗಳಾಗಿವೆ ಇವರ ಐತಿಹಾಸಿಕ ಕಾದಂಬರಿಗಳು. ಐತಿಹಾಸಿಕ ಕಾದಂಬರಿಗಳನ್ನು ಬರೆಯಬೇಕಾದರೆ ಸಾಹಿತಿಯಾದವನು ಆಕರಗಳ ಸಂಪೂರ್ಣ ಅಧ್ಯಯನ, ಕ್ಷೇತ್ರದರ್ಶನ, ಮಾಹಿತಿ ಸಂಗ್ರಹ, ನಿರೂಪಣಾ ವಿಧಾನ ಹಾಗೂ ತಾಳ್ಮೆ ಬಹಳ ಮುಖ್ಯವಾದ ಅಂಶಗಳು. ಇದರಲ್ಲಿ ಒಂದಿಷ್ಟು ತಪ್ಪಾದರೂ ಅದು ಇತಿಹಾಸಕ್ಕೆ ಅಪಚಾರವೆಸಗಿದಂತಾಗುತ್ತದೆ. ಐತಿಹಾಸಿಕ ಕೃತಿಗಳನ್ನು ರಚಿಸಿದಾಕ್ಷಣಕ್ಕೆ ಇತಿಹಾಸಕಾರನಾಗಲೇಬೇಕು ಎಂದೇನೂ ನಿಯಮವಿಲ್ಲ. ಐತಿಹಾಸಿಕ ಅಥವಾ ಇನ್ನಾವುದೇ ವಿಚಾರಗಳಾಗಲಿ, ಕೃತಿ ರಚನಾಕಾರರ ಅಧ್ಯಯನಕ್ಕೊಳಪಟ್ಟಾಗ ಅಥವಾ ಆಸಕ್ತಿ ಇದ್ದರೆ ಅಂತವರು ಆಯಾ ವಿಚಾರಕ್ಕೆ ಸಂಬಂಧಿಸಿದಂತೆ ಕೃತಿ ರಚಿಸಿದರೆ ತಪ್ಪೇನೂ ಇಲ್ಲ.

ಐತಿಹಾಸಿಕ ಕಾದಂಬರಿಗಳನ್ನು ರಚಿಸುವ ಲೇಖಕ ಆ ಕಾಲದ ನಂಬಿಕೆ, ಸಂಪ್ರದಾಯಗಳಿಗೆ ಅನುಗುಣವಾಗಿ ಕತೆಯನ್ನು ಕಲ್ಪಿಸಿಕೊಂಡು ಪುನರ್ಘಟಿಸಿ ಅಂದರೆ ಪುನರ್‌ಲೇಖನದ ಸ್ವರೂಪದಲ್ಲಿ ಹೇಳಬೇಕಾಗುತ್ತದೆ. ಇಂತಹ ಕೃತಿಯಲ್ಲಿ ಚಿತ್ರಿತವಾದ ಪಾತ್ರಗಳು, ಸನ್ನಿವೇಶಗಳು, ಐತಿಹಾಸಿಕವೂ ಕೆಲವೊಂದು ಕಾಲ್ಪನಿಕವೂ ಆಗಿದ್ದು ಒಟ್ಟಾರೆಯಾಗಿ ಓದುಗರಿಗೆ ಇತಿಹಾಸದ ಕುರಿತು ಮನವರಿಕೆಯಾಗುವ ರೀತಿಯಲ್ಲಿ ಸೃಷ್ಟಿಸುತ್ತಾನೆ. ಆದರೆ ಎಲ್ಲಿಯೂ ಕೂಡ ಇತಿಹಾಸಕ್ಕೆ ಅಪಚಾರವಾಗುವ ರೀತಿಯಲ್ಲಿ ಹೇಳುವುದಿಲ್ಲ. ಐತಿಹಾಸಿಕ ಕಾದಂಬರಿಗಳನ್ನು ರಚಿಸುವಾಗ ತಮಗೆ ಒದಗಿದ ಎಡರು ತೊಡರುಗಳು, ಸಿಕ್ಕ ಅಲ್ಪ ಸ್ವಲ್ಪ ಆಧಾರಗಳ ಕುರಿತಾಗಿ ಅನೇಕ ಲೇಖಕರು ತಮ್ಮ ಅಳಲನ್ನು ಕಾದಂಬರಿಯ ಮುನ್ನುಡಿಯಲ್ಲಿ ತೋಡಿಕೊಂಡಿದ್ದಾರೆ. ಸಿಕ್ಕಂತಹ ಆಧಾರಗಳ ಹಿನ್ನೆಲೆಯಲ್ಲಿಯೇ ಇತಿಹಾಸಕ್ಕೆ ಅಪಚಾರವಾಗದ ರೀತಿಯಲ್ಲಿ ಮೈಯೆಲ್ಲಾ ಕಣ್ಣಾಗಿಸಿಕೊಂಡು, ಪರಿಶ್ರಮಪಟ್ಟು ಐತಿಹಾಸಿಕ ಕಾದಂಬರಿಗಳನ್ನು ರಚಿಸಿರುವುದನ್ನು ಕಂಡರೆ ಅವರಲ್ಲಿರುವ ಶ್ರದ್ಧೆ, ಇತಿಹಾಸವನ್ನು ಓದುಗರಿಗೆ ಪರಿಚಯಿಸಬೇಕೆಂಬ ಆಸಕ್ತಿ ಎಂತಹುದು ಎಂಬುದು ಮನವರಿಕೆಯಾಗದೇ ಇರದು.

ಗತಕಾಲದ ಚರಿತ್ರೆಯ ಜೊತೆಗೆ ಅಂದಿನ ಸಮಗ್ರ ಬದುಕಿನ ವಿವರಗಳನ್ನು ದಾಖಲಿಸಿಕೊಡಬೇಕಾದ ಐತಿಹಾಸಿಕ ಕಾದಂಬರಿ ರಚಿಸುವುದು ಲೇಖಕನ ಸಾಮರ್ಥ್ಯಕ್ಕೆ ಒಂದು ನಿಕಷವೆ. ಇತಿಹಾಸದ ಘಟನೆಗಳು ಕೇವಲ ದಾಖಲೆಯಾಗದೇ, ಅದೇ ಕಾಲಕ್ಕೆ ಆ ಐತಿಹಾಸಿಕ ದಾಖಲೆಗಳನ್ನು ಬಿಡದ ಹಾಗೆ ಕಾದಂಬರಿಯ ಸೌಧ ಕಟ್ಟುವುದು ಕಲೆಗಾರನ ಕೌಶಲವನ್ನು ಬಯಸುವಂಥದು. ಇದು ನಿಜಕ್ಕೂ ಪರಿಶ್ರಮ ಹಾಗೂ ತಾಳ್ಮೆಯ ಕೆಲಸ. ಸಾಮಾಜಿಕ ಕಾದಂಬರಿಗಿಂತ ಐತಿಹಾಸಿಕ ಕಾದಂಬರಿ ರಚಿಸುವುದು ಹೆಚ್ಚಿನ ಹೊಣೆಗಾರಿಕೆಯ ಕಾರ್ಯವಾಗಿದೆ. ಐತಿಹಾಸಿಕ ಸತ್ಯದ ಆವರಣದಲ್ಲಿಯೇ ಲೇಖಕನ ಕಲ್ಪನೆ ಕೆಲಸ ಮಾಡಬೇಕಾಗುತ್ತದೆ ಎಂಬ ಮಾತುಗಳನ್ನು ಕಟ್ಟೀಮನಿಯವರೇ ತಮ್ಮ "ಪೌರುಷ ಪರೀಕ್ಷೆ" ಕಾದಂಬರಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಐತಿಹಾಸಿಕ ಕಾದಂಬರಿಗಳನ್ನು ರಚಿಸುವ ಪೂರ್ವದಲ್ಲಿ ಕಾದಂಬರಿಕಾರ ಮೊಟ್ಟಮೊದಲು ಮಾಡಬೇಕಾದ ಕಾರ್ಯವೆಂದರೆ ತಾನು ಬರೆಯಬೇಕೆಂದುಕೊಂಡಿರುವ ವಿಷಯದ ಇತಿಹಾಸಕ್ಕೆ ಸಂಬಂಧಿಸಿದಂತೆ ಖಚಿತ ದಾಖಲೆಗಳನ್ನು ಸಂಶೋಧಿಸಿಕೊಳ್ಳುವುದು ಅಗತ್ಯ. ವಿಷಯ ಎಷ್ಟು ಖಚಿತ ಹಾಗೂ ಸಮಗ್ರವಾಗಿರುತ್ತದೆಯೋ ಅಷ್ಟು ಓದುಗರ ಮೇಲೆ ಪ್ರಭಾವ ಬೀರಲು ಅನುಕೂಲವಾಗುವುದು. 'ಏಕೆಂದರೆ ಐತಿಹಾಸಿಕ ಸತ್ಯವು ಒಂದು ರೀತಿಯಲ್ಲಿ ಮಡಿವಂತನಂತಿದ್ದು ಅದು ಕಲ್ಮಶರಹಿತ ನಿಜಾಂಶವನ್ನು ಅಪೇಕ್ಷಿಸುತ್ತದೆ. ಅದರ ಪರಿಷ್ಕರಣ ಅಥವಾ ಜನಪ್ರಿಯ ಮಿಥ್ಯೆಯನ್ನಲ್ಲ.'[೨೧] (ನರಹರಿ ವಿ, ೨೦೧೧, ಪುಟ-೨೬) ಯಾವುದೇ ಸಾಹಿತ್ಯದ ಇತಿಹಾಸವನ್ನು ತೆಗೆದು ನೋಡಿದಾಗ ಕಾಲದಿಂದ ಕಾಲಕ್ಕೆ ಬರವಣಿಗೆಯ ಸಂಪ್ರದಾಯಗಳು ಬದಲಾಗುವುದು ಸಾಮಾನ್ಯ. ಪ್ರತಿಯೊಂದು ಹೊಸ ಸಾಹಿತ್ಯವೂ ತನ್ನ ಹಿಂದಿನ ಸಾಹಿತ್ಯದ ಕೆಲವೊಂದು ಗುಣಧರ್ಮಗಳ ಬಗೆಗೆ ಭಿನ್ನಾಭಿಪ್ರಾಯ ತಳೆದು, ಅದಕ್ಕೆ ಪ್ರತಿಕ್ರಿಯೆಯಾಗಿ, ಪ್ರತಿಭಟನೆಯಾಗಿ, ಚಳುವಳಿಯಾಗಿ ರೂಪುಗೊಂಡಿರುತ್ತದೆ. ಈ ರೀತಿಯಾಗಿ ಚಳುವಳಿಯ ರೂಪದಲ್ಲಿ ಹುಟ್ಟಿಕೊಂಡ ಸಾಹಿತ್ಯವೇ ಪ್ರಗತಿಶೀಲ ಸಾಹಿತ್ಯ. ನವೋದಯ ಕಾಲದಲ್ಲಿ ಬಂದ ಪ್ರಗತಿಶೀಲ ಸಾಹಿತ್ಯ ನವೋದಯದ ಛಂದೋರೂಪಗಳಲ್ಲೇ ಭಿನ್ನತೆಯನ್ನು ಬಳಸಿಕೊಂಡು ಆವೇಶ, ರೊಚ್ಚುಗಳನ್ನು ಪ್ರಕಟಿಸಿತು. ಆದರೆ ಹತ್ತು ಹನ್ನೊಂದನೆಯ ಶತಮಾನಗಳಲ್ಲಿ ರಚಿತವಾದ ಸಾಹಿತ್ಯದಲ್ಲಿ ಅಂಥ ಮಹತ್ವದ ಬದಲಾವಣೆಗಳೇನೂ ಆಗಲಿಲ್ಲ. 'ರಾಜ್ಯಪದ್ಧತಿ, ಧರ್ಮ, ಜನಜೀವನ ಪರಂಪರಾಗತ ಮೌಲ್ಯಗಳ ಜಾಡಿನಲ್ಲೇ ನಡೆದಿದ್ದವು. ಹೀಗಾಗಿ ಆ ಕಾಲದ ಸಾಹಿತ್ಯದಲ್ಲೂ ಒಂದು ಬಗೆಯ ಏಕರೂಪತೆ ಇದೆ. ಯುದ್ಧದ ವೈಭವೀಕರಣ, ರಾಜನಿಷ್ಠೆ, ಧರ್ಮಶ್ರದ್ಧೆಗಳು ಅದರ ಮುಖ್ಯ ಧೋರಣೆಗಳಾಗಿವೆ. ಹನ್ನೆರಡನೆಯ ಶತಮಾನದಲ್ಲಿ ಕಂಡುಬಂದ ವೀರಶೈವ ವೈಚಾರಿಕ, ಧಾರ್ಮಿಕ

ಕ್ರಾಂತಿ ಆ ಕಾಲದ ಜೀವನವಿಧಾನ, ಜೀವನದೃಷ್ಟಿಗಳನ್ನು ಆಳವಾಗಿ ಪ್ರಭಾವಿಸಿತು. ಅದು ಹೊಸದೊಂದು ಸಾಹಿತ್ಯ ಮಾರ್ಗದ ಉದಯಕ್ಕೆ ಕಾರಣವಾಯಿತು.'[೨೨] (ಗಿರಡ್ಡಿ ಗೋವಿಂದರಾಜ, ೨೦೧೧, ಪುಟ-೨೧)

ಗತಕಾಲವನ್ನು ಸಾಹಿತಿಯಾದವನು ಅದೊಂದು ನಿರ್ಜೀವ ವಸ್ತು ಎಂದು ಭಾವಿಸದೆ ಅದಕ್ಕೆ ತನ್ನ ಬರಹದ ಮೂಲಕ ಜೀವಂತಿಕೆ ಕೊಡುವ ಕೆಲಸ ಮಾಡಬೇಕಾಗುತ್ತದೆ. ಟಿ.ಎಸ್.ಎಲಿಯಟ್ 'ಗತಕಾಲಕ್ಕೂ ವರ್ತಮಾನಕ್ಕೂ ಇರುವ ಅಂತರವೆಂದರೆ ಗತಕಾಲದ ಅರಿವೇ ಒಂದು ರೀತಿಯಲ್ಲಿ ಪ್ರಜ್ಞಾಪೂರ್ಣ ವರ್ತಮಾನ'[೨೩] (ಗಿರಡ್ಡಿ ಗೋವಿಂದರಾಜ, ೨೦೧೧, ಪುಟ-೧೦) ಎಂದು ಅಭಿಪ್ರಾಯ ಪಡುತ್ತಾನೆ. ಕನ್ನಡ ಸಾಹಿತ್ಯದಲ್ಲಿ ನಾಲ್ವತ್ತರ ದಶಕದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಚಳುವಳಿಗೆ ಎಡಪಂಥೀಯ ಒಲವುಗಳಿದ್ದು ಕಮ್ಯೂನಿಷ್ಟ್ ಸಿದ್ಧಾಂತಗಳ ಹಿನ್ನಲೆಯಿದೆ. ಆದರೆ ಪ್ರಗತಿಶೀಲಕ್ಕಿಂತಲೂ ಮೊದಲು ಹುಟ್ಟಿಕೊಂಡ ನವೋದಯ ಮತ್ತು ನಂತರ ಹುಟ್ಟಿಕೊಂಡ ನವ್ಯ ಚಳುವಳಿಯ ದೃಷ್ಟಿಯಿಂದ ಹುಟ್ಟಿಕೊಳ್ಳಲಿಲ್ಲ. ಪ್ರಗತಿಶೀಲ ಸಾಹಿತ್ಯದಲ್ಲಿ ವರ್ಗಸಂಘರ್ಷ, ಶೋಷಣೆ, ಸಾಮ್ಯವಾದದಲ್ಲಿ ಸಾಹಿತ್ಯದ ಪಾತ್ರ, ಸಮಾಜ ರಚನೆಯ ಕಲ್ಪನೆ, ಸಾಹಿತ್ಯ ಚಿತ್ರಿಸಬೇಕಾದ ವಸ್ತುಗಳು, ಸಾಹಿತಿ ಎತ್ತಿಹಿಡಿಯಬೇಕಾದ ಮೌಲ್ಯಗಳು, ವಹಿಸಬೇಕಾದ ಪಕ್ಷ ಇತ್ಯಾದಿ ವಿಷಯಗಳ ಬಗ್ಗೆ ತಮ್ಮದೇ ಆದ ಸೈದ್ಧಾಂತಿಕ ನಿಲುವನ್ನು ಹೊಂದಿದ್ದರೂ ಸಹ ನಮ್ಮ ಇತಿಹಾಸದತ್ತ ಅವರ ಗಮನವಿದ್ದದ್ದರಿಂದಲೇ ಐತಿಹಾಸಿಕ ಕಾದಂಬರಿಗಳನ್ನು ಬರೆಯಲು ಆಸಕ್ತಿ ತೋರಿದರು.

ನವೋದಯದವರು ಸಂಪೂರ್ಣವಾಗಿ ಜನಪದವನ್ನು ನಿರ್ಲಕ್ಷಿಸದೆ, ಪರಂಪರಾಗತವಾಗಿ ಬಂದ ಪೌರಾಣಿಕತೆಯನ್ನು ನಿರಾಕರಿಸದೆ ಅದಕ್ಕೆ ಜೋತುಬಿದ್ದು ಪ್ರಗತಿಯ ವೇಗಕ್ಕೆ ಹೊಂದಿಕೊಳ್ಳಲಾಗದೆ ಅತೃಪ್ತಿ ಹೊಂದಿದರು. ಅಂತಹ ವೇಳೆಯಲ್ಲಿ ಕನ್ನಡ ಸಾಹಿತ್ಯವನ್ನು ಜೀವಂತ ಉಳಿಸಿದವರೆಂದರೆ ಪ್ರಗತಿಶೀಲರು. ನವೋದಯದವರು ನಿರ್ವಿಣ್ಣರಾಗಿ ಕುಳಿತಾಗ ಪ್ರಗತಿಶೀಲರು ಜನಕ್ಕೆ ಧೈರ್ಯ, ಸ್ಥೈರ್ಯ ತುಂಬಿದರು. ಮೌಢ್ಯತೆಯನ್ನು ರೂಢಿಸಿಕೊಂಡು ಬಂದಿದ್ದ ನವೋದಯದವರನ್ನು ಖಂಡಿಸಿದರು. ಕ್ರಾಂತಿಯ ನಂತರವೇ ಶಾಂತಿ ಸಾಧ್ಯ. 'ಎಂದೋ ಆಗಿ ಹೋದ ಹರಿಶ್ಚಂದ್ರ ರಾಮರ ಸತ್ಯಪ್ರಿಯತೆಯನ್ನು ನೆನೆಯುತ್ತ ಕುಳಿತಲ್ಲಿ ಬಂದ ಲಾಭವೇನು? ಪ್ರಭುದೇವರ ಮಾತಿನಲ್ಲಿ ಹೇಳಬೇಕಾದರೆ

"ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೇ?

ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೇ?

ಧನವುಳ್ಳವರ ನೆನೆದರೆ ದಾರಿದ್ರ್ಯ ಹೋಹುದೇ?

ಪುರಾತನರ ನೆನೆದು ಕೃತಾರ್ಥರಾದೆವೆಂಬರು

ತಮ್ಮಲ್ಲಿ ಭಕ್ತಿ ನಿಷ್ಠೆ ಇಲ್ಲದವರ ಕಂಡೆಡೆ ಮೆಚ್ಚನು ಗುಹೇಶ್ವರಾ"[೨೪] (ಕೃಷ್ಣರಾಯ ಶಾ.ಮಂ(ಸಂ), ೨೦೧೨, ಪುಟ ೧೩೧)

ಪ್ರಗತಿಶೀಲರ ವಾದವೈಖರಿ, ಜನತೆಯ ಮೇಲೆ ಅವರು ಉಂಟು ಮಾಡಿದ ಪರಿಣಾಮ ನವೋದಯ ಸಾಹಿತಿಗಳಲ್ಲಿ ತಳಮಳವನ್ನುಂಟು ಮಾಡಿತು. ಪ್ರಗತಿಶೀಲರನ್ನು ಕುರಿತು ನವೋದಯದವರು ತೀಕ್ಷ್ಣವಾಗಿ ಖಂಡಿಸಿದರು. ಪ್ರಗತಿಶೀಲರು ಬರೆದ ಸಾಹಿತ್ಯವನ್ನು ಎಲ್ಲರೂ ಒಪ್ಪಿಕೊಂಡರು ಎಂದಲ್ಲ. ಅದಕ್ಕೆ ಸಾಕಷ್ಟು ವಿರೋಧಗಳು ವ್ಯಕ್ತವಾದವು. ಒಂದು ಸಾಹಿತ್ಯ ಹೊಸದಾಗಿ ಆರಂಭವಾದಾಗ ಅದು ತೀವ್ರವಾದ ವಿರೋಧವನ್ನು ಎದುರಿಸಬೇಕಾಗುತ್ತದೆ. ಪ್ರಚಲಿತ ಸಂಪ್ರದಾಯಕ್ಕೆ ಒಗ್ಗಿ ಹೋದ ಜನ ಹೊಸ ಮಾರ್ಗವನ್ನು ಸುಲಭವಾಗಿ ಒಪ್ಪದೇ ಅದೊಂದು ಸಾಹಿತ್ಯವೇ ಎಂಬ ಅಭಿಪ್ರಾಯ ತೋರುವರು. ಹೀಗಾಗಿ ಹೊಸ ಸಾಹಿತ್ಯ ಹುಟ್ಟುಹಾಕಿದ ಸಂದರ್ಭದಲ್ಲಿ ಸಾಹಿತಿಯಾದವನು ಜನರಿಗೆ ಹೊಸ ಸಾಹಿತ್ಯದ ಅಭಿರುಚಿಯನ್ನು ಹೆಚ್ಚಿಸುವ ರೀತಿಯಲ್ಲಿ ತನ್ನ ಸೃಜನಶೀಲ ಪ್ರತಿಭೆಯಿಂದ ಶ್ರೇಷ್ಠ ಕೃತಿಗಳನ್ನು ರಚಿಸಿ, ಅವುಗಳ ಸಾಹಿತ್ಯಿಕ ಮಹತ್ವವನ್ನು ಎಲ್ಲ ಓದುಗರು ಒಪ್ಪಿಕೊಳ್ಳುವಂತೆ ಮಾಡಬೇಕಾದುದು ಅವನ ಹೊಣೆಗಾರಿಕೆಯಾಗಿದೆ. ಪ್ರಗತಿಶೀಲರು ಹುಟ್ಟುಹಾಕಿದ ಸಾಹಿತ್ಯವನ್ನು ಪ್ರಾರಂಭದಲ್ಲಿ ಕೆಲವರು ವಿರೋಧಿಸುವ ಸಂದರ್ಭದಲ್ಲಿ ತಮ್ಮ ಸಾಹಿತ್ಯದ ಉದ್ದೇಶವನ್ನು ಓದುಗರಿಗೆ ಮನದಟ್ಟು ಮಾಡುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದರೂ ಸಹ ಅವರೊಳಗೆ ಅಡಗಿದ್ದ ಇತಿಹಾಸದ ಕಲ್ಪನೆ ಅವರಿಂದ ಮಾಸಲಿಲ್ಲ. ಹೀಗಾಗಿಯೇ ಅವರು ಐತಿಹಾಸಿಕ ಕಾದಂಬರಿಗಳನ್ನು ಬರೆಯಲು ತೊಡಗಿಕೊಂಡರು. ಪ್ರಮುಖ ಪ್ರಗತಿಶೀಲ ಕಾದಂಬರಿಕಾರರಾದ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರಂಥ ದಿಗ್ಗಜರು ಇತಿಹಾಸದ ಒಂದೊಂದು ವಿಷಯವನ್ನು ಆಯ್ದುಕೊಂಡು ಐತಿಹಾಸಿಕ ಕಾದಂಬರಿಗಳನ್ನು ಬರೆಯಲು ತೊಡಗಿಕೊಂಡರು. ಪ್ರಗತಿಶೀಲರು ವಾಸ್ತವತೆಯ ಹೆಸರಿನಲ್ಲಿ ಅಶ್ಲೀಲತೆಯ ಕಾದಂಬರಿಗಳನ್ನು ಮಾತ್ರ ಬರೆಯುತ್ತಾರೆಂಬ ಅಪವಾದಗಳು ಇದ್ದವು. ಈ ಅಪವಾದ, ವಿರೋಧಗಳಿಗೆ ಜರ್ಜರಿತರಾಗದ ಪ್ರಗತಿಶೀಲರು ಅತ್ಯಂತ ಮಹತ್ವದ ಸದಾ ಕಾಲವೂ ಎಲ್ಲರೂ ಓದಿ ಮೆಚ್ಚಿಕೊಳ್ಳಬಹುದಾದಂತಹ ಐತಿಹಾಸಿಕ ಕಾದಂಬರಿಗಳನ್ನು ರಚಿಸಿ ಓದುಗರೆಲ್ಲರಿಂದಲೂ ಸೈ ಎನಿಸಿಕೊಂಡರು.

ಪ್ರಗತಿಶೀಲ ಲೇಖಕರ ಕಾಲದಲ್ಲಿ ಉಂಟಾದ ಸಾಹಿತ್ಯಿಕ ಚಿಂತನೆಗಳು ಸಾಹಿತ್ಯ ರಚನೆಗಳ ಸ್ವರೂಪವನ್ನೇ ಬದಲಾಯಿಸಿದವು. ಪರಂಪರೆ ಮತ್ತು ಇತಿಹಾಸವನ್ನು ನೋಡುವ ಕ್ರಮ ಈ

ಕಾಲಘಟ್ಟದಲ್ಲಿ ಬದಲಾಯಿತು. 'ಸಮಕಾಲೀನ ಕೀರ್ತಿ ಪಡೆದ ಕೃತಿಗಳು ಎಲ್ಲ ಕಾಲದಲ್ಲೂ ರಂಜನೆ ಒದಗಿಸುವುದಿಲ್ಲ. ಕೆಲವು ಕೃತಿಗಳು ರಚನೆಗೊಂಡ ಹತ್ತಿಪ್ಪತ್ತು ವರ್ಷ ಓದುಗರ ಮನಸ್ಸನ್ನು ಸೆರೆಹಿಡಿಯುತ್ತವೆ. ಅದೇ ಓದುಗರು ಅನಂತರ ಅವನ್ನು ಓದಲಿಕ್ಕೆ ಬೇಸರಿಸುತ್ತಾರೆ. ಕೆಲವು ಕೃತಿಗಳು ಸಮಕಾಲೀನ ಉಪೇಕ್ಷೆಗೆ ಗುರಿಯಾಗುತ್ತವೆ. ನೂರಾರು ವರ್ಷಗಳ ತರುವಾಯ ಒಮ್ಮೆಲೆ ಜನಪ್ರೀಯವಾಗುತ್ತವೆ.'[೨೫] (ಶಂಕರ ಮೊಕಾಶಿ ಪುಣೇಕರ, ೨೦೧೨, ಪುಟ-೦೧) ಆದರೆ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರಂತವರ ಐತಿಹಾಸಿಕ ಕಾದಂಬರಿಗಳು ಸರ್ವಕಾಲಕ್ಕೂ, ಸರ್ವರಿಗೂ ಬೇಸರ ತರಿಸದಿರುವ ಕಾದಂಬರಿಗಳೆಂದೇ ಹೇಳಬಹುದು.

ಕನ್ನಡ ನಾಡಿನ ರಾಜ ಮಹಾರಾಜರುಗಳ ಇತಿಹಾಸದ ಕುರಿತು ನಮ್ಮಲ್ಲಿ ಬಹುಸಂಖ್ಯಾತರಿಗೆ ಪಠ್ಯಪುಸ್ತಕಗಳ ಸಂಕ್ಷಿಪ್ತ ಉಲ್ಲೇಖನಗಳಿಗಿಂತ ಹೆಚ್ಚಿನ ಇತಿಹಾಸದ ಜ್ಞಾನ ಇರುವುದಿಲ್ಲ. ಐತಿಹಾಸಿಕ ಕಾದಂಬರಿಗಳು ಈ ಲೋಪವನ್ನು ಸ್ವಲ್ಪ ಮಟ್ಟಿಗೆ ನಿವಾರಣೆ ಮಾಡಿ ಜನರಲ್ಲಿ ಇತಿಹಾಸವನ್ನು ಕುರಿತು ಆಸಕ್ತಿಯನ್ನು ಹುಟ್ಟಿಸುತ್ತವೆ. ಐತಿಹಾಸಿಕ ಕಾದಂಬರಿ ಎಂದರೇನು? ಎಂಬುದರ ಕುರಿತು ವಿಮರ್ಶಕರು ಹೀಗೆ ವಿವರಿಸುತ್ತಾರೆ. 'ಲೇಖಕನು ಜೀವಿಸಿರುವುದಕ್ಕಿಂತ ಹಿಂದಿನ ಯಾವುದಾದರೊಂದು ಕಾಲದ ಘಟನೆಗಳನ್ನು, ವ್ಯಕ್ತಿಗಳನ್ನು ಆ ಕಾಲದ ನಂಬಿಕೆ, ನಡವಳಿಕೆ, ಸಂಪ್ರದಾಯಗಳಿಗೆ ಅನುಗುಣವಾಗಿ ಕಲ್ಪಿಸಿಕೊಂಡು ಪುನರ್ಘಟಿಸಿ ಕಥಾರೂಪದಲ್ಲಿ ಚಿತ್ರಿಸುವುದೇ ಐತಿಹಾಸಿಕ ಕಾದಂಬರಿ. ಇಂತಹ ಕೃತಿಯಲ್ಲಿ ಚಿತ್ರಿತವಾದ ಪಾತ್ರಗಳು ಐತಿಹಾಸಿಕ ವ್ಯಕ್ತಿಗಳಾಗಿರಬಹುದು, ಇಲ್ಲವೇ ಐತಿಹಾಸಿಕ ಘಟನೆಗಳ ಅಂತರಂಗ ಬಹಿರಂಗ ಕಾರಣಗಳನ್ನು ಸ್ಪಷ್ಟಪಡಿಸಲು ಕಾದಂಬರಿಕಾರನು ಕಲ್ಪಿಸಿಕೊಂಡ ಅನ್ಯೈತಿಹಾಸಿಕ ವ್ಯಕ್ತಿಗಳಾಗಿರಬಹುದು. ಗೊತ್ತಾದ ಕಾಲದ ವಾಸ್ತವ ಚಿತ್ರವನ್ನು ವಾಚಕರ ಮುಂದಿರಿಸಲು ಕೃತಿ ಎಷ್ಟರ ಮಟ್ಟಿಗೆ ಸಮರ್ಥವಾಗಿದೆ ಎಂಬುದೇ ಕಾದಂಬರಿಯ ಸಫಲತೆಯ ಮುಖ್ಯ ಒರೆಗಲ್ಲು'[೨೬] (ಕೃಷ್ಣರಾಯ ಶಾ.ಮಂ(ಸಂ), ೧೯೭೦, ಪುಟ-೫೯೭) ಎಂದಿರುವರು. ಐತಿಹಾಸಿಕ ಕಾದಂಬರಿಯೆಂಬುದು ಕೇವಲ ಇತಿಹಾಸವಲ್ಲ. ಅದು ಇತಿಹಾಸ ಹಾಗೂ ಕಲ್ಪನೆಯ ಮಿಶ್ರಣವು. 'ಇತಿಹಾಸ ಒಂದು ದಾಖಲೆಯಾಗಿ ಮಾನವನ ಗತಿಸಿದ ವಿಷಯ ಸಾಮಗ್ರಿಗಳೊಂದಿಗೆ ವ್ಯವಹರಿಸುತ್ತದೆ. ಇದು ಇತಿಹಾಸದ ವಾಸ್ತವದ ಮಗ್ಗುಲಾಗಿದ್ದು ಈ ಮಗ್ಗುಲು ಶಾಶ್ವತವಾಗಿ ಮತ್ತು ಮಾರ್ಪಡಿಸಲಾಗದಂತೆ ನೆಲೆಗೊಳಿಸಲಾಗಿದೆ. ಘಟನೆಗಳತ್ತ ಕೊಂಡೊಯ್ಯುವ ವಾಸ್ತವಿಕ ಸನ್ನಿವೇಶಗಳು ವಾಸ್ತವಿಕವಾಗಿ ನಡೆದುದಕ್ಕಿಂತಲೂ ವಿಭಿನ್ನವಾಗಿರದು. ಈ ದೃಷ್ಟಿಯಿಂದ ಇತಿಹಾಸವು ಸಮಗ್ರವಾಗಿದೆ. ಇತಿಹಾಸ ಗತಿಸಿದ ವಾಸ್ತವತೆಯಲ್ಲಿ ಸಂಬಂಧ ಸಿದ್ಧಾಂತ ಕುರಿತಾಗಿ ಭವಿಷ್ಯ ನುಡಿಯಲಾಗದಿದ್ದರೂ, ಕೆಲವು ದೃಷ್ಟಿಗಳಲ್ಲಿ ಇದನ್ನು ಇತಿಹಾಸ ಒಂದು ದಾಖಲೆಯಾಗಿ ಗುರುತಿಸಬಹುದಾಗಿದೆ.'[೨೭] (ಶ್ರೀನಿವಾಸಮೂರ್ತಿ

ಎಚ್.ವಿ, ೨೦೦೪, ಪುಟ-೦೭) ಇಂತಹ ದಾಖಲೆಯ ಇತಿಹಾಸವನ್ನು ಕುರಿತು ಪ್ರಗತಿಶೀಲರಾದ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರು ವಿಜಯನಗರ ಸಾಮ್ರಾಜ್ಯ, ಚಿತ್ರದುರ್ಗ, ಕಿತ್ತೂರು ಸಂಸ್ಥಾನ ಅಷ್ಟೇ ಅಲ್ಲದೇ ಸ್ವಾತಂತ್ರ್ಯ ಚಳುವಳಿಯ ವಿಷಯವನ್ನೊಳಗೊಂಡಂತಹ ಅನೇಕ ಐತಿಹಾಸಿಕ ಕಾದಂಬರಿಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ರಚಿಸಿರುವರು. ಇತಿಹಾಸವು ಕಾದಂಬರಿಯಲ್ಲಿ ಜನಿಸಿ ಪ್ರಬಂಧದಲ್ಲಿ ಕೊನೆಗೊಳ್ಳುತ್ತದೆ. ಆದರೆ ಇತಿಹಾಸ ಕಟ್ಟುಕಥೆಯಲ್ಲ. ಕಥೆ ಹಾಗೂ ಇತಿಹಾಸ ಸಂಗತಿಗಳನ್ನು ಅವಲಂಬಿಸಿರುತ್ತವೆಂಬುದು ನಿಜ. ಆದರೆ ನಿರೂಪಣೆಯಲ್ಲಿ ವ್ಯತ್ಯಾಸವಿರುತ್ತದೆ. ಇತಿಹಾಸಕಾರನಾದವನು ತನ್ನ ವಸ್ತುವನ್ನು ಸೃಷ್ಟಿಸಲಾರ. ನಡೆದುದನ್ನು ನಡೆದಂತೆ ವಿವರಿಸುವುದೇ ಆತನ ಕರ್ತವ್ಯವಾಗಿರುವುದು. ಆದರೆ ಕಾದಂಬರಿಕಾರ ಇತಿಹಾಸ ಒಂದು ಎಳೆಯಿಂದ ತನ್ನ ಕಾಲ್ಪನಿಕ ಪ್ರಪಂಚದಿಂದ ಹಲವಾರು ಪಾತ್ರಗಳನ್ನು, ಘಟನೆಗಳನ್ನು ಸೃಷ್ಟಿಸುತ್ತಾನೆ. ಭಾರತೀಯ ಇತಿಹಾಸದ ಪ್ರಮುಖ ರಾಜ ರಾಣಿಯರು, ಮನೆತನಗಳು, ಮಹಾಪುರುಷರು ಇವರುಗಳ ಬಗೆಗೆ ಬರೆಯುವಲ್ಲಿ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನ ಇವರೆಲ್ಲರೂ ಭಾರತೀಯ ಸಂಸ್ಕೃತಿಯ ಬಗೆಗೆ ಆರಾಧ್ಯಭಾವ ಮತ್ತು ತನ್ಮಯತೆಯ ನಿಲುವನ್ನು ಪ್ರಕಟಿಸುವುದು ಕೂಡ ನವೋದಯಕ್ಕಿಂತ ಭಿನ್ನವಾದ ಗಟ್ಟಿಯಾದ ತಾತ್ವಿಕತೆ ಇರುವುದನ್ನು ಕಾಣುತ್ತೇವೆ.

ಇತಿಹಾಸವು ಘಟನೆಗಳನ್ನು ಅತಿ ವಾಸ್ತವವಾಗಿ ನಿರೂಪಿಸಿದರೆ, ಸಾಹಿತ್ಯ ಅದನ್ನೇ ಕಥೆ ಮಾಡಿ ರಮ್ಯಗೊಳಿಸಿ ಅಭಿವ್ಯಕ್ತಿಸುತ್ತದೆ. ಅದು ಸದಾ ಪ್ರಸ್ತುತಗೊಳ್ಳುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತದೆ. ಇತಿಹಾಸವೆನ್ನುವುದನ್ನು ಕೆಲವು ಆಕರಗಳಿಂದ ಎಂದರೆ ಶಾಸನ, ಓಲೆಗರಿ, ತಾಮ್ರಪತ್ರ, ಪ್ರವಾಸಿಗಳ ಉಲ್ಲೇಖ, ಕೈಫಿಯತ್ತು ಮೊದಲಾದವುಗಳಿಂದ ರೂಪಿಸಿಕೊಂಡಿದ್ದೇ ವಿನಾ ಅದು ಸಂಭವಿಸಿದ ಘಟನೆಯ ಯಥಾವತ್ ಚಿತ್ರಣವೇನಲ್ಲ. ಈ ಆಕರಗಳಿಂದ ಒಂದು ಇತಿಹಾಸವೆಂಬುದನ್ನು ಕಟ್ಟಿಕೊಂಡಿದ್ದೇವೆ. ಇಂತಹ ಇತಿಹಾಸವನ್ನು ಆಯ್ದುಕೊಂಡ ಸಾಹಿತಿ ಕಥೆ, ಕಾದಂಬರಿಗಳ ರೂಪದಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸುತ್ತಾನೆ. ಇತಿಹಾಸ ಮೌನವಾಗಿರುವ ಕಡೆಗಳಲ್ಲೆಲ್ಲ ತನ್ನ ಕಲ್ಪನೆಯಲ್ಲಿ ಸಂಗತಿಗಳನ್ನು ಹೆಣೆಯುತ್ತ ಹೋಗುತ್ತಾನೆ. ಆ ಸ್ವಾತಂತ್ರ್ಯ ಲೇಖಕನಿಗಿದ್ದರೂ ಸಹ ಆತ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಕೃತಿಗಳನ್ನು ರಚಿಸುವುದಿಲ್ಲ. ರಾಜವಂಶದ ಹುಟ್ಟು ಅಧಿಕಾರದ ಮುಂದುವರಿಕೆ ಒಂದು ಸರಳರೇಖೆಯಲ್ಲಿ ಹಾದು ಹೋಗುವ ಪ್ರಕ್ರಿಯೆಯಲ್ಲ. ಅದು ಆ ಪ್ರದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಬದಲಾವಣೆಯನ್ನು ಒಳಗೊಂಡಿರುತ್ತದೆ. ಒಂದು ರಾಜವಂಶದಿಂದ ಮತ್ತೊಂದಕ್ಕೆ ಆಗುವ ಅಧಿಕಾರದ ಹಸ್ತಾಂತರ ಸರಳವಾಗಿ ಕಂಡರೂ ಈ ಬದಲಾವಣೆ ಪ್ರತ್ಯೇಕವಾಗಿ ಸ್ವತಂತ್ರವಾಗಿ ಆಗುವುದಿಲ್ಲ. ಹಲವಾರು ಅಂಶಗಳು ಒಂದಕ್ಕೊಂದು ಹೆಣೆದುಕೊಂಡಿರುತ್ತವೆ. ಈ ಎಲ್ಲ

ವಿಚಾರಗಳನ್ನು ಗಮನದಲ್ಲಿಟ್ಟುಕೊಂಡೇ ಐತಿಹಾಸಿಕ ಪ್ರಜ್ಞೆಯುಳ್ಳ ಸಾಹಿತಿಯೊಬ್ಬ ಐತಿಹಾಸಿಕ ಕೃತಿಗಳನ್ನು ರಚಿಸುವಲ್ಲಿ ಸಫಲನಾಗುತ್ತಾನೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಅತ್ಯಂತ ಚಲನಶೀಲವಾದ ಸಂದರ್ಭ ಎಂದು ಗುರುತಿಸಬಹುದಾದ ಪ್ರಗತಿಶೀಲ ಚಳುವಳಿಯ ಕಾಲದಲ್ಲಿ ಅದರ ಚಾಲಕ ಶಕ್ತಿಯಾಗಿ, ಅತ್ಯಂತ ಆಕರ್ಷಕವಾದ ಒಂದು ಆಯಸ್ಕಾಂತೀಯ ವ್ಯಕ್ತಿತ್ವದಿಂದ ಹೆಸರು ಮಾಡಿದವರು ಅ.ನ.ಕೃ ಕನ್ನಡಿಗರಲ್ಲಿ ಪರಂಪರೆಯ ಪ್ರಜ್ಞೆಯನ್ನು ಸ್ವಾಭಿಮಾನವನ್ನು ಪ್ರಚೋದಿಸುವ ಕನ್ನಡಪರ ಹೋರಾಟದ ನಾಯಕನಾಗಿ ಅ.ನ.ಕೃ ಒಂದು ಮರೆಯಲಾಗದ 'ಸಾಂಸ್ಕೃತಿಕ ಸ್ಮರಣೆ'ಯಾಗಿ ಉಳಿದಿದ್ದಾರೆ.

ಅ.ನ.ಕೃ ಅವರು ಕನ್ನಡಿಗರಿಗೆ ನಮ್ಮ ಇತಿಹಾಸವನ್ನು ಪರಿಚಯಿಸುವ ದೃಷ್ಟಿಯಿಂದ ಪುನರ್‌ಲೇಖದ ಸ್ವರೂಪದಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಬರೆದರು. ವಿಜಯನಗರ ಸಾಮ್ರಾಜ್ಯದ ಸಂಪೂರ್ಣ ಇತಿಹಾಸವನ್ನು ತಮ್ಮ ಹತ್ತು ಕಾದಂಬರಿಗಳ ಮಾಲಿಕೆಯಲ್ಲಿ ಸಮಗ್ರವಾಗಿ ಚಿತ್ರಿಸಿದ್ದಾರೆ. ವೀರರಾಣಿ ಕಿತ್ತೂರು ಚೆನ್ನಮ್ಮನ ಬಗ್ಗೆ, 'ಯಲಹಂಕ ಭೂಪಾಲ' ಕೆಂಪೇಗೌಡನ ಬಗ್ಗೆ ಕೂಡ ಕಾದಂಬರಿಗಳನ್ನು ರಚಿಸಿದ್ದು ಈ ಎಲ್ಲ ಐತಿಹಾಸಿಕ ಕಾದಂಬರಿಗಳು ಮಹತ್ವದ ಕಾದಂಬರಿಗಳಾಗಿವೆ. 'ನಮ್ಮ ನಾಡಿನ ಉತ್ತಮ ಜೀವಿಗಳು ಉತ್ತಮ ಜೀವನವನ್ನು ಬೃಹತ್ತಾಗಿ ಚಿತ್ರಿಸಿ ಓದುಗರ ಮನಸ್ಸನ್ನು ಪರಿಶುದ್ಧ ವಾತಾವರಣದಲ್ಲಿಡಬೇಕೆಂಬುದೇ ನನ್ನ ಸಾಹಿತ್ಯ ಸೇವೆಯ ಆದರ್ಶ. ಆದರೆ ಜೀವನವನ್ನು ಸಮಗ್ರವಾಗಿ ನೋಡುವಾಗ ಅದರ ಸುತ್ತ ಕವಿದಿರುವ ಕಾರ್ಗತ್ತಲೆಯನ್ನು ಗಮನಿಸುವಾಗ, ಈ ಕತ್ತಲೆ ಕಳೆದುದಲ್ಲದೇ ಬೆಳಕು ಮೂಡಿತೇ ಎಂಬ ಸಂಶಯ ಸಹಜವಾಗಿ ನನ್ನ ಮನಸ್ಸಿನಲ್ಲಿ ಮೂಡುತ್ತದೆ. ಕತ್ತಲೆಯ ತೆರೆಗಳನ್ನು ಸರಿಸಿ ಜ್ಞಾನ, ಪ್ರೇಮ, ಸೌಹಾರ್ದದ ಬೆಳ್ಳಿಯ ಬೆಳಕು ಬಿತ್ತರಿಸುವಂತೆ ಮಾಡಲು ಅವಿಶ್ರಾಂತವಾಗಿ ಶ್ರಮಿಸಿದ್ದೇನೆ ಎಂದು ಹೇಳಬಲ್ಲೆ'[೨೮] (ಕೃಷ್ಣರಾಯರು ಅ.ನ, ೨೦೧೦, ಪುಟ–೩೩೦) ಎಂದು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

ಕನ್ನಡದ ಅತ್ಯಂತ ಜನಪ್ರೀಯ ಕಾದಂಬರಿಕಾರರಾದ ಅ.ನ.ಕೃ ಅವರ ಬಗೆಗೆ ಕುರ್ತಕೋಟಿಯವರು ಹೇಳಿರುವ ಮಾತುಗಳು ಇಲ್ಲಿ ಉಲ್ಲೇಖಾರ್ಹ. 'ಲೋಕಪ್ರಿಯತೆಯೊಂದೇ ಲೇಖಕನ ಗುಣಾವಗುಣಗಳ ಮಾನದಂಡವಾಗಿದ್ದರೆ ಅ.ನ.ಕೃ ಅವರಿಗೆ ನಿಶ್ಚಯವಾಗಿ ಅಗ್ರಸ್ಥಾನ ಸಲ್ಲುತ್ತದೆ. ಅವರ ಬರವಣಿಗೆಯ ಸುಗಮತೆ ಓದುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿತು. ಆದರೆ ಅದೇ ಸುಗಮತೆ ಕಾದಂಬರಿಯ ಬರವಣಿಗೆಯ ಮೇಲೆ ದುಷ್ಪರಿಣಾಮವನ್ನು ಬೀರಿತು. ಭಾಷೆಯ ನುಣುಪು ಅದರ ಸತ್ವವನ್ನು ಹಾಳುಮಾಡಿತು. ಸೈನಿಕರ ಸಮವಸ್ತ್ರದಂತೆ ಈ ಶೈಲಿ ಎಲ್ಲ ಕಾದಂಬರಿಗಳಿಗೂ ಹೊಂದಿಕೆಯಾಗುವ ಶೈಲಿಯಾಗಿ ಪರಿಣಮಿಸಿತು. ಅದೇನಿದ್ದರೂ ಗಳಗನಾಥರು,

ವೆಂಕಟಾಚಾರ್ಯರು ಆರಂಭಿಸಿದ ಜನಪ್ರೀಯ ಪರಂಪರೆಯ ಒಂದು ಧಾರೆ ಅ.ನ.ಕೃ ಅವರಲ್ಲಿ ಇನ್ನಷ್ಟು ಖಚಿತಗೊಂಡು ಮುಂದೆ ಸಾಗಿತು. ಈ ಧಾರೆಯಲ್ಲಿ ಮುಂದೆ ಅನೇಕರು ಕಾದಂಬರಿಗಳನ್ನು ಬರೆದರು. ವಿಮರ್ಶಕರು ಏನೇ ಹೇಳಲಿ, ದೊಡ್ಡದೊಂದು ಓದುಗ ವರ್ಗ ಈ ಧಾರೆಯನ್ನು ಪೋಷಿಸಿಕೊಂಡು ಬಂದಿದೆ ಎಂಬ ಅಂಶವನ್ನು ನಾವು ಮರೆಯುವಂತಿಲ್ಲ.'[೨೯] (ನಾಯಕ ಜಿ.ಹೆಚ್, ೨೦೦೦, ಪುಟ-೨೩೧) ಎಂದಿರುವರು.

ಪ್ರಜಾಪ್ರಭುತ್ವದ ಯುಗದಲ್ಲಿ ಹುಟ್ಟಿ ಬೆಳೆದಿರುವ ನಮಗೆ ಒಂದು ಸಾಮ್ರಾಜ್ಯದ ಇತಿಹಾಸ ತಿರಸ್ಕಾರವಾಗಿ ಕಾಣಬಹುದು. ಈ ತಿರಸ್ಕಾರದ ಭಾವನೆ ಮೂಡುವುದಕ್ಕೆ ಕಾರಣ ಸಾಮ್ರಾಜ್ಯಗಳ ವೈಭವ ಕುರಿತು ಪ್ರಸಾರ ಮಾಡಿರುವ ಕವಿಗಳೂ, ಇತಿಹಾಸಕಾರರೂ ಕಾರಣೀಕರ್ತರಾಗಿದ್ದಾರೆ. ಇತಿಹಾಸ ಇಂದು ನಮಗೆ ರಾಜ ಮಹಾರಾಜರ ಈರ್ಷಾಸೂಯೆಗಳ, ಲೂಟಿ ದರೋಡೆಗಳ ಕಥೆಯಾಗಿಲ್ಲ. ಮಾನವ ಸಂಸ್ಕೃತಿಯ ವಿಕಾಸವೇ ಇತಿಹಾಸ ಎಂಬ ಭಾವನೆ ನಮ್ಮಲ್ಲಿ ಬೆಳೆಯುತ್ತಿರುವಾಗ ಉಚ್ಚ ಸಂಸ್ಕೃತಿಯ ವಿಕಾಸವನ್ನು ಮೂರು ಶತಮಾನ ಸಾಧಿಸಿ, ವಿಶ್ವ ಸಂಸ್ಕೃತಿಗೆ ತನ್ನ ವಿಶಿಷ್ಟ ಕಾಣಿಕೆ ನೀಡಿದ ವಿಜಯನಗರದ ಇತಿಹಾಸ ನಮಗೆ ಮಾರ್ಗದರ್ಶಕವಾಗುತ್ತದೆ. 'ಹದಿಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರದಿಂದ ಮುಸ್ಲಿಂ ದಾಳಿಗಳು ಆರಂಭವಾದುವು. ಕರ್ನಾಟಕದ ಉತ್ತರದಲ್ಲಿ ಮತ್ತು ದಕ್ಷಿಣದಲ್ಲಿ ಆಳುತ್ತಿದ್ದ ಯಾದವರು ಮತ್ತು ಹೊಯ್ಸಳರು ನಾಶವಾದರು. ಇದರ ಜೊತೆ ಜೊತೆಗೇ ಹಿಂದೂ ಸಂಸ್ಕೃತಿಯ ಅಸ್ತಿತ್ವಕ್ಕೆ ಘೋರ ಧಕ್ಕೆ ಒದಗಿತು. ಕ್ರಿ.ಶ ೧೩೩೫-೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಆರಂಭವಾಗಿ ಹಿಂದೂ ಸಂಸ್ಕೃತಿಯನ್ನು ಉಳಿಸಿತು'[೩೦] (ಚಿದಾನಂದಮೂರ್ತಿ ಎಂ, ೨೦೧೦, ಪುಟ-೩೮೨) ಎಂಬ ವಿಚಾರಗಳನ್ನು ಇತಿಹಾಸದಲ್ಲಿ ಕಾಣುತ್ತೇವೆ.

ಅ.ನ.ಕೃರವರು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಸಂಬಂಧಿಸಿದ ಹತ್ತು ಕಾದಂಬರಿಗಳ ಮಾಲೆಯನ್ನು ರಚಿಸಿರುವರು. ವಿಜಯನಗರದ ಸ್ಥಾಪನೆಯಿಂದ ಹಿಡಿದು ಪತನಗೊಳ್ಳುವವರೆಗೆ ರಚಿಸಿರುವ ಕಾದಂಬರಿಗಳನ್ನು ಓದುವಾಗ ವಿಜಯನಗರ ಸಾಮ್ರಾಜ್ಯದ ಒಂದು ಸಮಗ್ರ ಚಿತ್ರಣವು ನಮ್ಮ ಕಣ್ಮುಂದೆ ಬಂದು ನಿಲ್ಲುವುದು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪ್ರೇರಣೆಯೇ ಶ್ರೀ ವಿದ್ಯಾರಣ್ಯರು. ಇದನ್ನು ಅ.ನ.ಕೃ **'ವಿಜಯ ವಿದ್ಯಾರಣ್ಯ'** ಕಾದಂಬರಿಯಲ್ಲಿ ಚಿತ್ರಿಸಿರುವರು. ವಿಜಯನಗರದ ಸ್ಥಾಪನೆಯ ವಿಚಾರದ ಕುರಿತು ಇತಿಹಾಸದಲ್ಲಿ, ಕೆಲವು ಕೃತಿಗಳಲ್ಲಿ ಭಿನ್ನವಾದ ವಿಚಾರಗಳಿದ್ದರೂ ಸಹ ಅ.ನ.ಕೃ ಒಬ್ಬ ಲೇಖಕನಿಗಿರುವ ಲೇಖನಿಯ ಸ್ವಾತಂತ್ರ್ಯವನ್ನು ಬಳಸಿಕೊಂಡು ತರ್ಕಬದ್ಧವಾಗಿ ಸಮರ್ಥವಾಗಿ ಹೇಳಿದ್ದಾರೆ. ವಿದ್ಯಾರಣ್ಯರ ಜೀವನ ವೃತ್ತಾಂತ,

ಅವರು ವಿಜಯನಗರ ಸಾಮ್ರಾಜ್ಯ ಕಟ್ಟುವಲ್ಲಿ ಹರಿಹರ ಮತ್ತು ಬುಕ್ಕರೆಂಬ ಸಹೋದರರಿಗೆ ನೆರವಾದ ಪ್ರಸಂಗ ಹೀಗೆ ಹಲವಾರು ವಿಷಯಗಳನ್ನು ನಿರೂಪಿಸಿರುವರು. ವಿದ್ಯಾರಣ್ಯರು ಜನರಲ್ಲಿ ಧರ್ಮದ ಬಗೆಗೆ ತಿಳುವಳಿಕೆ ಮೂಡಿಸಿ ದೈವಭಕ್ತಿ ನಿಸ್ವಾರ್ಥ ಬುದ್ಧಿ ಹಾಗೂ ಒಗ್ಗಟ್ಟು ಕುರಿತು ಹೇಳುವರು. ಕನ್ನಡ ಜನರಿಗೆ ಹೀನ ಸ್ಥಿತಿ ಉಂಟಾಗಲು ಸ್ವಾರ್ಥಪರತೆ, ಹೇಡಿತನ, ವಂಚಕತನ, ಸದಭಿಮಾನಶೂನ್ಯತೆ, ಆಲಸ್ಯತನ ಇಂತಹ ಗುಣಗಳೇ ಕಾರಣ ಎನ್ನುವರು. ವಿದ್ಯಾರಣ್ಯರು ಜಾತಿ, ಮತ, ಭೇದವಿಲ್ಲದೆ ಎಲ್ಲರನ್ನೂ ಒಗ್ಗೂಡಿಸಿಕೊಂಡು ಮಹಾಸಾಮ್ರಾಜ್ಯವೊಂದರ ನಿರ್ಮಾಣಕ್ಕೆ ಕಾರಣಕರ್ತರಾದರು. ಅ.ನ.ಕೃರವರು ತಮ್ಮ ಸಮಕಾಲೀನ ಸಂದರ್ಭದಲ್ಲಿ ಕಟ್ಟಿಕೊಳ್ಳಬೇಕಾದ ನಾಡಿನ ಕಾರ್ಯಕ್ಕೆ ಒಗ್ಗಟ್ಟು ಅಗತ್ಯ ಎಂಬುದನ್ನು ವಿಜಯನಗರದ ಚರಿತ್ರೆಯ ಮೂಲಕ ಸಮೀಕರಿಸಿ ಹೇಳಿದ್ದಾರೆ.

'ತಪೋಬಲ'ದಲ್ಲಿ ವಿದ್ಯಾರಣ್ಯರ ಜೀವನದ ಕೊನೆಯ ಘಟ್ಟದ ಚಿತ್ರಣವಿದ್ದು ಈ ಎರಡು ಕಾದಂಬರಿಗಳ ನಾಯಕ ಸ್ಥಾನದಲ್ಲಿರುವವರು ಶ್ರೀ ವಿದ್ಯಾರಣ್ಯರೆ. ಹರಿಹರನ ನಿಧನಾ ನಂತರ ಪಟ್ಟಕ್ಕೆ ಬಂದ ಬುಕ್ಕರಾಯ ಮತ್ತು ಇಮ್ಮಡಿ ಹರಿಹರನ ಆಳ್ವಿಕೆಯ ಹತ್ತು ವರ್ಷದ ಘಟನೆಗಳನ್ನು ಸ್ಥೂಲವಾಗಿ ಚಿತ್ರಿಸಿದ್ದಾರೆ. ಅಷ್ಟೇ ಅಲ್ಲದೆ ಬಹುಮನಿ ಸುಲ್ತಾನ ಮಹಮ್ಮದನ ರಸಿಕತೆ, ಭೋಗಪ್ರಿಯತೆಯ ಜೊತೆಗೆ ಶ್ರೀ ವಿದ್ಯಾರಣ್ಯರ ತಪೋಬಲವೇ ವಿಜಯನಗರ ಸಾಮ್ರಾಜ್ಯಕ್ಕೆ ರಕ್ಷಾಕವಚವಾಗಿದ್ದು ವಿದ್ಯಾರಣ್ಯರ ಸಾವಿನೊಂದಿಗೆ ತಪೋಬಲ ಕಾದಂಬರಿ ಮುಕ್ತಾಯಗೊಳ್ಳುವುದು. ಇಲ್ಲಿ ಲೇಖಕರು ವಿಜಯನಗರದ ಚರಿತ್ರೆಯ ಘಟನೆಯನ್ನಾಧರಿಸಿ ಅದಕ್ಕೆ ತಮ್ಮ ಕಲ್ಪನೆಯ ನೀರನ್ನೆರೆದು ಜನರೆದುರಿಗೆ ಇಟ್ಟು, ಅದರ ಮೂಲಕವಾಗಿ ಜನರಲ್ಲಿ ನಾಡು ನುಡಿಯ ಮೇಲಿನ ಅಭಿಮಾನ ಹುಟ್ಟಿ, ಜನ ಜಾಗೃತರಾಗಿ ಅನ್ಯರ ಆಕ್ರಮಣದ ಆಡಳಿತದ ವಿರುದ್ಧ ಹೋರಾಡುವಂತೆ ಕರೆ ನೀಡುತ್ತಾರೆ.

ವಿಜಯವಿದ್ಯಾರಣ್ಯ ಹಾಗೂ ತಪೋಬಲ ಕಾದಂಬರಿಗಳಲ್ಲಿ ಇತಿಹಾಸದಲ್ಲಿ ಇಲ್ಲದೇ ಇರುವುದನ್ನು ತಮ್ಮ ಕಾಲ್ಪನಿಕ ಶಕ್ತಿಯ ಮೂಲಕ ತುಂಬುವ ಕೆಲಸವನ್ನು ಅ.ನ.ಕೃ ಮಾಡಿರುವರು. ವಿದ್ಯಾರಣ್ಯರು ರಾಜ್ಯವನ್ನು ಕಟ್ಟುವಲ್ಲಿ ಮುಂದಾಳತ್ವ ವಹಿಸಿಕೊಂಡು ಕಾದಂಬರಿಯಲ್ಲಿ ಮಹತ್ವದ ಪಾತ್ರವೇ ಆಗಿಬಿಡುವರು. ನವರಾತ್ರಿ ಮಹೋತ್ಸವದ ಸಂದರ್ಭದಲ್ಲಿ ಸರಸ್ವತಿಗೆ ಮಂಗಳಾರತಿ ಬೆಳಗುವಾಗ ಶಾರದಾಸ್ತವನವನ್ನು ಮೈದುಂಬಿ ಹಾಡುವರು. ಈಶಾನ್ಯದ ಆಂಧ್ರದ ಗಡಿಯಲ್ಲಿ ಕಂಪಣ್ಣನಾಯಕರು ಕಂಪಲಿ ರಾಜ್ಯದಲ್ಲಿದ್ದುಕೊಂಡು ವಿಜಯನಗರದ ಭದ್ರತೆಯನ್ನು ಕಾಯುವ ಕೆಲಸ ಮಾಡುವದು, ಬಹುಮನಿ ಸುಲ್ತಾನ ಮಹಮದನು ಇಸ್ತಾಂಬೂಲಿನ ಸುರೈಯಳನ್ನು ಅವಳ

ಗಂಡನಿಂದ ಅಗಲಿಸಿ ಬೇಗಂ ಮಹಲಿನ ರಾಣಿಯನ್ನಾಗಿ ಮಾಡಿದ ಕತೆಯನ್ನು ಕಾಣುತ್ತೇವೆ. ಇಲ್ಲಿ ಇಷ್ಟವಿಲ್ಲದ ಹೆಣ್ಣನ್ನು ಬಲವಂತವಾಗಿ ತನ್ನ ಜನಾನಾದ ಹೆಣ್ಣನ್ನಾಗಿ ಮಾಡುವ ಅವನ ಶೌರ್ಯ ಹಾಗೂ ಅಧಿಕಾರಶಾಹಿ ಪ್ರವೃತ್ತಿಯನ್ನು ಅನಾವರಣಮಾಡುತ್ತದೆ. ರೂ ಪರಿವಾರ, ವಾಲಿ ಮಹಮದ್, ಕುಲವಂತ ಹಾಫೀಜ್ ಜಲಂಧರಿ, ಸುರೈಯಾ, ಗುಲಷನ್ ಈ ಕಲ್ಪಿತ ಪಾತ್ರಗಳ ಮೂಲಕ ಅ.ನ.ಕೃ ಇತಿಹಾಸವನ್ನು ಪುನರ್‌ಲೇಖದಲ್ಲಿ ಚಿತ್ರಿಸಿರುವರು.

'ಪುಣ್ಯಪ್ರಭಾವ' ಕಾದಂಬರಿಯಲ್ಲಿ ಇಮ್ಮಡಿ ಹರಿಹರನ ಆಳ್ವಿಕೆಯ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ವೈಭವ ಉಚ್ಛ್ರಾಯ ಸ್ಥಿತಿಗೇರಿರುವ ವಿಷಯವನ್ನು ಪ್ರಸ್ತಾಪಿಸಿರುವರು. ಇವನ ಆಳ್ವಿಕೆಯ ಕಾಲದಲ್ಲಿ ವಿಜಯನಗರದ ಅರಸರಿಗೂ ಮತ್ತು ಬಹುಮನಿ ಸುಲ್ತಾನನಾದ ಫಿರೋಜ್‌ಷಾನ ನಡುವೆ ನಡೆದ ಯುದ್ಧದ ಸಮಗ್ರ ವಿವರಗಳನ್ನು ಕಾದಂಬರಿಯಲ್ಲಿ ಕೊಡುವರಲ್ಲದೆ ಬಹುಮನಿ ಸುಲ್ತಾನರ ಹಣದಾಸೆಗೆ ಮೋಹಿತನಾಗಿ ದುರಾಸೆಯಿಂದ ವಿಜಯನಗರದ ನೀರಾವರಿ ಯೋಜನೆಯನ್ನು ಹಾಳುಗೆಡುವಲು ಬಂದ ರಾಮಭಟ್ಟ ಪರಿವರ್ತಿತನಾಗಿ ವಿಜಯನಗರದ ಗೆಲುವಿನಲ್ಲಿ ಪ್ರಧಾನ ಪಾತ್ರವಹಿಸಿ ಪತ್ನಿಯಾದ ವಿಜಯಲಕ್ಷ್ಮಿಯ ಸಹಿತ ಹುತಾತ್ಮನಾದದ್ದು ಈ ಕಾದಂಬರಿಯ ಕಥಾವಸ್ತುವಾಗಿದೆ. ಅ.ನ.ಕೃ ಈ ಕಾದಂಬರಿಯಲ್ಲಿ ಅನೇಕ ಕಾಲ್ಪನಿಕ ವ್ಯಕ್ತಿಗಳನ್ನು ಸೃಷ್ಟಿಸುವ ಮೂಲಕ ಇತಿಹಾಸದ ಘಟನೆಗಳಿಗೆ ಸಂಬಂಧ ಕಲ್ಪಿಸುವರು. ರಾಮಭಟ್ಟ, ವಿಜಯಲಕ್ಷ್ಮೀ, ಜೈನಲಾಬುದ್ದೀನ್, ಖಾಜಾ ಕಮಲುದ್ದೀನ್, ರೇಜಾಖಾನ್, ರೋಷನಾರಾ, ಮೋಹನಾಂಬೆ, ಘನಶಾಮಲಾಲ್ ಇವರೆಲ್ಲ ಕಾಲ್ಪನಿಕ ವ್ಯಕ್ತಿಗಳು. ರಾಮಭಟ್ಟ ಮತ್ತು ವಿಜಯಲಕ್ಷ್ಮೀಯರ ಪಾತ್ರಗಳನ್ನು ಲೇಖಕರು ವೈಭವೀಕರಿಸಿ ಹೇಳಿದ್ದು, ರಾಷ್ಟ್ರಕ್ಕಾಗಿ ತಮ್ಮನ್ನು ಅರ್ಪಿಸಿಕೊಳ್ಳುವ ಆದರ್ಶ ಪಾತ್ರವಾಗಿ ಚಿತ್ರಿಸಿದ್ದಾರೆ. ಇತಿಹಾಸವನ್ನು ಪುನರ್‌ಸೃಷ್ಟಿಸುವ ಸಂದರ್ಭದಲ್ಲಿ ಅ.ನ.ಕೃ ಮುಸ್ಲಿಮರು ನಡೆಸಿದ ಲೂಟಿ, ದರೋಡೆ, ಮಾನಹಾನಿ ಕೊಲೆಗಳನ್ನು ವಿಸ್ತಾರವಾಗಿ ಹೇಳಿರುವರು. ಛಾಯಾಳ ಪಾತ್ರವನ್ನು ಸೃಷ್ಟಿಸಿ ಆಕೆ ದೇವರಾಯನನ್ನು ಮದುವೆಯಾಗಲು ನಿರಾಕರಿಸುವುದು, ದೇವರಾಯನು ಆಕೆಯನ್ನು ಹುಡುಕಲು ಮುದಕಲ್ಲಿನ ಲೂಟಿಗೆ ಆದೇಶ ಮಾಡುವುದು, ಬಹುಮನಿ ಸುಲ್ತಾನ ಆಕೆಯನ್ನು ಪತ್ತೆ ಹಚ್ಚಿ ತನ್ನ ಮಗನಿಗೆ ಮದುವೆ ಮಾಡಿಸುವುದು, ಆಕೆ ವಜ್ರದ ನತ್ತು ನುಂಗಿ ಪ್ರಾಣಕಳೆದುಕೊಳ್ಳುವುದು, ಛಾಯಾಳ ಬದುಕು ಎರಡು ರಾಜ್ಯಗಳ ವೈಷಮ್ಯದ ಫಲವಾಗಿ ದುರಂತ ಕಂಡದ್ದನ್ನು ಅ.ನ.ಕೃ ತಮ್ಮ ಕಲ್ಪನೆಯ ಮೂಲಕ ಇತಿಹಾಸದ ಘಟನೆಯನ್ನು ಪುನರ್‌ರೂಪಿಸುವ ಅಂದರೆ ಪುನರ್‌ಲೇಖದಲ್ಲಿ ಹೇಳುವ ಕಾರ್ಯ ಮಾಡಿರುವರು.

'ಪ್ರೌಢಪ್ರತಾಪಿ' ಕಾದಂಬರಿಯಲ್ಲಿ ವೀರ ವಿಜಯರಾಯನ ೨೨ ವರ್ಷಗಳ ಆಳ್ವಿಕೆ, ಪ್ರೌಢದೇವರಾಯನ ೨೨ ವರ್ಷಗಳ ಆಳ್ವಿಕೆ, ಮಲ್ಲಿಕಾರ್ಜುನನ ೨೦ ವರ್ಷಗಳ ಆಳ್ವಿಕೆ ಹೀಗೆ ಒಟ್ಟು ೬೪ ವರ್ಷಗಳ ಆಳ್ವಿಕೆಯ ವಿವರಗಳಿವೆ. ಇಲ್ಲಿ ಅ.ನ.ಕೃ ಈ ಕಾದಂಬರಿಯನ್ನು ಕೇವಲ ರಾಜಕೀಯ ಇತಿಹಾಸವಾಗಿ ಮಾತ್ರವಲ್ಲದೆ ರಸಘಟ್ಟಿಯಾದ ಕಾದಂಬರಿಯಾಗುವಂತೆ ಚಿತ್ರಿಸಿದ್ದಾರೆ. ಚಾಮರಸ ಮತ್ತು ಕುಮಾರವ್ಯಾಸರ ಪ್ರಸ್ತಾಪವನ್ನು ಇಲ್ಲಿ ಮಾಡಿದ್ದು, ತೆಲುಗು ಕವಿ ಶ್ರೀನಾಥನನ್ನು ದೊರೆಗಳು ಸನ್ಮಾನಿಸುವ ಪ್ರಸಂಗವಿದೆ. ವಿಜಯನಗರಕ್ಕೆ ಭೇಟಿ ಕೊಟ್ಟ ವಿದೇಶಿ ಪ್ರವಾಸಿಗರಾದ ನಿಕೋಲೊ ಕಾಂಟಿ, ಅಬ್ದುಲ್ ರಜಾಕ್ ಇಲ್ಲಿನ ವೈಭವವನ್ನು, ಜನಜೀವನವನ್ನು ಕುರಿತು ಬರೆದಿರುವ ವಿಷಯಗಳನ್ನು ಲೇಖಕರು ವಿವರಿಸಿದ್ದಾರೆ. ಹಿಂದೂ ಮುಸ್ಲಿಂ ಸಾಮರಸ್ಯದ ಸಂಕೇತವಾಗಿ ರಾಜಬ್‌ಅಲ್ಲಿಯ ಪಾತ್ರವನ್ನು ಚಿತ್ರಿಸುತ್ತಾರೆ. ಈತ ವಿಜಯನಗರದ ಸೈನ್ಯಕ್ಕೆ ಬಿಲ್ಲುವಿದ್ಯೆಯನ್ನು ಹೇಳಿಕೊಡುವನು. ಬಹುಮನಿ ಸುಲ್ತಾನ ಮತೀಯ ಪ್ರಲೋಭನೆಯೊಡ್ಡಿ ತಮ್ಮತ್ತ ಸೆಳೆದುಕೊಳ್ಳಬೇಕೆಂದು ಪ್ರಯತ್ನಿಸಿದರೂ ಸಹ ಆಶ್ರಯ ನೀಡಿದ ದೊರೆಗೆ ಮೋಸ ಮಾಡದೆ ಸುಲ್ತಾನರನ್ನು ನಿರಾಕರಿಸುವನು. ಪ್ರೌಢದೇವರಾಯರು ಕೊನೆಯುಸಿರೆಳೆದಾಗ ಒಂದು ಸಾವಿರ ಗರುಡರು ಅಗ್ನಿಪ್ರವೇಶ ಮಾಡಿದ ವಿವರವನ್ನು ಅ.ನ.ಕೃ ದಾಖಲಿಸುವರು. ಪ್ರೌಢದೇವರಾಯನ ಮರಣಾನಂತರ ರಾಜಧಾನಿಯಲ್ಲಿ ಅಧಿಕಾರಕ್ಕಾಗಿ ನಡೆದ ಆಂತರಕ ಕಲಹಗಳ ಚಿತ್ರಣವನ್ನು ಅ.ನ.ಕೃ ಈ ಕಾದಂಬರಿಯಲ್ಲಿ ಚಿತ್ರಿಸಿರುವರು. ಲಕ್ಕಣ್ಣ ದಂಡೇಶರು ಕಂಚಿಯ ಕಾಳಗದಲ್ಲಿ ಮೋಸದಿಂದ ಕೊಲ್ಲಲ್ಪಟ್ಟರು ಎಂದು ಊಹಾತ್ಮಕ ಚಿತ್ರಣವನ್ನು ಲೇಖಕರು ಕೊಡುತ್ತಾರೆ. ಇತಿಹಾಸ ಮೌನವಾಗಿರುವ ಸಂದರ್ಭದಲ್ಲಿ ಕಾಲ್ಪನಿಕ, ಊಹಾತ್ಮಕ ಚಿತ್ರಣ ಸಹಜ. ಆದರೆ ಇದು ಸತ್ಯಕ್ಕೆ ಸಮೀಪವಾಗಿರುತ್ತದೆ.

'ಮೋಹನಮುರಾರಿ' ಕಾದಂಬರಿಯಲ್ಲಿ ಸಂಗಮ ವಂಶವನ್ನು ನಿವಾರಿಸಿ ಸಾಳುವ ವಂಶವನ್ನು ಅಧಿಕಾರಕ್ಕೆ ತಂದವನು ಸಾಳುವ ನರಸಿಂಹ. ಮೋಹನ ಮುರಾರಿ ಎಂಬುದು ಸಾಳುವ ನರಸಿಂಹನಿಗಿರುವ ಬಿರುದಾಗಿರುವುದರಿಂದ ಆ ಬಿರುದಿನ ಹೆಸರನ್ನೇ ಅ.ನ.ಕೃ ಈ ಕಾದಂಬರಿಗೆ ಇಟ್ಟಿರುವರು. ಈ ಕಾದಂಬರಿಯಲ್ಲಿ ವಿರೂಪಾಕ್ಷರಾಯರ ೧೯ ವರ್ಷ, ಸಾಳುವ ನರಸಿಂಹನ ೪ ವರ್ಷ, ವೀರನರಸಿಂಹನ ೬ ವರ್ಷಗಳ ಆಳ್ವಿಕೆಯ ವಿವರವಿದೆ. ಮದಿರಾ ಮಾನಿನಿಯರ ವಶನಾಗಿ ರಾಜ್ಯದ ಕ್ಷೇಮಚಿಂತನೆಯನ್ನು ಮರೆತು ಕಾಲಕಳೆಯುತ್ತಿದ್ದ ವಿರೂಪಾಕ್ಷರಾಯನನ್ನು ಬಂಧಿಸಿ ಸಂಗಮ ವಂಶವನ್ನು ನಿರ್ಮೂಲನ ಮಾಡಿ ಸಾಳುವ ವಂಶದ ನರಸಿಂಹನಾಯಕ ತಾನೇ ಸಾಮ್ರಾಜ್ಯದ ಅಧಿಪತಿಯಾಗಿ ಕಾರ್ಯನಿರ್ವಹಿಸುವ ಕಥೆಯಾಗಿರುವುದು. ಈತನ ನಿಧನಾ ನಂತರ ಅವನ ಮಗನಾದ ಇಮ್ಮಡಿ ನರಸಿಂಹನು ಪಟ್ಟಕ್ಕೆ ಬರುವನು. ಆದರೆ ಇವನು ಭೋಗಪ್ರಿಯನಾಗಿದ್ದು

ಭಾಮೆಯೆಂಬ ಹೆಣ್ಣಿನ ಮೋಹಪಾಶಕ್ಕೆ ಒಳಗಾಗಿ ಆಕೆಯ ಅಣ್ಣನಾದ ಕೊಂಡಮನಾಯಡು ಕೈಯಲ್ಲಿ ಆಡಳಿತ ಸೂತ್ರ ಕೊಟ್ಟಾಗ ಈತ ತನಗೆ ಬೇಕಾದ ಹಾಗೆ ಆಡಳಿತ ಮಾಡುತ್ತಾ ಬೊಕ್ಕಸವನ್ನೆಲ್ಲ ಖಾಲಿ ಮಾಡುತ್ತಾನೆ. ಇದನ್ನೆಲ್ಲ ಸಹಿಸದೆ ಬೇಸತ್ತ ಮಹಾದಣ್ಣಾಯಕ ಈಶ್ವರರಾಯನ ಮಗ ತುಳುವ ನರಸನಾಯಕನು ಇಮ್ಮಡಿ ನರಸಿಂಹನಾಯಕನನ್ನು ಅಧಿಕಾರದಿಂದ ಪದಚ್ಯುತಗೊಳಿಸಿ ಈತ ಅಧಿಕಾರಕ್ಕೆ ಬಂದಾಗ ಸಾಳುವ ವಂಶದ ಆಡಳಿತ ಮುಗಿದು ತುಳುವ ವಂಶದ ಆಡಳಿತ ಪ್ರಾರಂಭವಾಗುವುದು. ನರಸನಾಯಕ ಅಕಾಲ ಮರಣ ಹೊಂದಿ ಆತನ ನಾಲ್ಕು ಮಕ್ಕಳಲ್ಲಿ ಹಿರಿಯ ಮಗ ವೀರನರಸಿಂಹನು ರಾಜ್ಯದ ಅಧಿಕಾರ ವಹಿಸಿಕೊಂಡು ತನ್ನ ನಂತರ ತನ್ನ ಮಗನನ್ನು ಯುವರಾಜನನ್ನಾಗಿ ಮಾಡುವ ಉದ್ದೇಶ ಹೊಂದಿ ಅದಕ್ಕೆ ತನ್ನ ಸಹೋದರ ಕೃಷ್ಣದೇವರಾಯ ಅಡ್ಡಿಯಾಗಬಹುದೆಂದು ಭಾವಿಸಿ ಆತನ ಕಣ್ಣು ಕಿತ್ತು ತರುವಂತೆ ಪ್ರಧಾನ ಮಂತ್ರಿ ತಿಮ್ಮಣ್ಣನಾಯಕನಿಗೆ ಹೇಳಿದಾಗ ಆತ ತನ್ನ ಮನೆಯಲ್ಲಿ ಕೃಷ್ಣದೇವರಾಯನನ್ನು ಬಚ್ಚಿಟ್ಟು ಆಡಿನ ಕಣ್ಣುಗಳನ್ನು ದೊರೆಗೆ ತೋರಿಸಿ ಕೃಷ್ಣದೇವರಾಯನನ್ನು ರಕ್ಷಿಸುವನು. ತದನಂತರ ವೀರನರಸಿಂಹನು ಮರಣಹೊಂದಿ ಕೃಷ್ಣದೇವರಾಯ ಅಧಿಕಾರಕ್ಕೆ ಬರುವನು. ಅ.ನ.ಕೃರವರು ಶ್ರೀಪಾದರಾಯರ ಸಮಗ್ರ ಜೀವನ ವೃತ್ತಾಂತವನ್ನು ಈ ಕಾದಂಬರಿಯಲ್ಲಿ ತರುವರು. ಇವರು ರಾಜಗುರುಗಳಾಗಿ ನರಸಿಂಹನಾಯಕರ ಶ್ರೇಯಸ್ಸನ್ನು ಕೋರುವರು. ಶ್ರೀಪಾದರಾಯರು ಬೃಂದಾವನಸ್ಥರಾದ ಮೇಲೆ ಅವರ ಶಿಷ್ಯ ವ್ಯಾಸರಾಯರು ರಾಜಗುರುಗಳಾಗುವರು. ಲೇಖಕರು ಬಹುಮನಿ ಸುಲ್ತಾನರ ವಜೀರನಾಗಿದ್ದ ಮಹಮದ್ ಗವಾನರ ವ್ಯಕ್ತಿತ್ವವನ್ನು ಎತ್ತರಕ್ಕೇರಿಸಿರುವರು. ಮಹಮದ್ ಗವಾನ ವಜೀರನಾಗಿದ್ದರೂ ಫಕೀರನಂತೆ ಬಾಳಿದ ಎಂದು ಕಾದಂಬರಿಯ ಮುನ್ನುಡಿಯಲ್ಲಿ ಪ್ರಸ್ತಾಪಿಸುತ್ತಾರೆ. ಈತ ಬಹುಮನಿ ಅರಸರ ಪರವಾಗಿ ಹೋರಾಡಿ ಮಹತ್ವದ ವಿಜಯಗಳನ್ನು ತಂದುಕೊಟ್ಟ ಸುಲ್ತಾನರ ಆತ್ಮೀಯನಾಗಿದ್ದನು. ಆದರೆ ಇದನ್ನು ಸಹಿಸದ ಕೆಲ ಜನರು ಈತನ ಮೇಲೆ ಸುಲ್ತಾನರಿಗೆ ಸಂದೇಹ ಬರುವಂತೆ ಮಾಡಿ ಮರಣದಂಡನೆಯ ಶಿಕ್ಷೆಯಾಗುವಂತೆ ಮಾಡುವರು. ಇಲ್ಲಿ ವ್ಯಕ್ತಿಗಳ ನಂಬಿಕೆಗಳನ್ನು ಹಾಳುಗೆಡುವ ಜನ ಎಲ್ಲ ಕಾಲದಲ್ಲೂ ಇರುವರೆಂಬುದನ್ನು ಕಾಣುತ್ತೇವೆ.

'ಯಶೋದುಂದುಭಿ' ಕಾದಂಬರಿಯಲ್ಲಿ ಕೃಷ್ಣದೇವರಾಯನ ೨೧ ವರ್ಷಗಳ ಆಳ್ವಿಕೆಯ ವಿಷಯ ಚಿತ್ರಿಸಿದ್ದಾರೆ. ಕೃಷ್ಣದೇವರಾಯನ ಆಡಳಿತದ ಕಾಲವನ್ನು 'ಸುವರ್ಣಯುಗ'ವೆಂದು ಕರೆಯುವರು. ಕೃಷ್ಣದೇವರಾಯನು ಬದುಕಿದ್ದು ೪೧ ವರ್ಷ. ತನ್ನ ಇಪ್ಪತ್ತನೆಯ ವಯಸ್ಸಿಗೆ ವಿಜಯನಗರ ಸಾಮ್ರಾಜ್ಯದ ಅಧಿಕಾರವಹಿಸಿಕೊಂಡ ಕೃಷ್ಣದೇವರಾಯ ಹಿಂದೂತ್ವದ ಸಂಕೇತವಾಗಿ ರಾಜ್ಯಭಾರ ಮಾಡುವನು. ಇವನ ಆಡಳಿತಕ್ಕೆಲ್ಲ ಸಹಾಯಕವಾಗಿ ನಿಂತ ಧರ್ಮಸಹಿಷ್ಣು ವ್ಯಾಸರಾಯರು ಕೃಷ್ಣದೇವರಾಯರು ಕೈಗೊಳ್ಳುತ್ತಿದ್ದ ಪ್ರತಿಯೊಂದು ಕಾರ್ಯಕ್ಕೂ

ಬೆಂಬಲಿಸುತ್ತಿದ್ದರೆಂದು ಅ.ನ.ಕೃ ವಿವರಿಸುವರು. ಕೃಷ್ಣದೇವರಾಯನ ರಾಜಕೀಯ ಹಾಗೂ ವೈಯಕ್ತಿಕ ಬದುಕು, ಕವಿಯಾಗಿ ಅವನ ನೈಜ ಸಾಹಿತ್ಯ ಪ್ರೇಮವನ್ನು ಈ ಕಾದಂಬರಿಯಲ್ಲಿ ಪ್ರಕಟಿಸಿರುವರು. ಪಟ್ಟಮಹಿಷಿ ತಿರುಮಲಾಂಬಾ ಆಗಿದ್ದರೂ, ಉಪಪತ್ನಿಯರಿದ್ದರು. ಮಾತ್ರವಲ್ಲ ವೇಶ್ಯಾಪುತ್ರಿಯೂ, ನಾಟ್ಯಗಾತಿಯೂ ಆದ ನಾಗಲಾಂಬಿಕೆಯನ್ನು ಎರಡನೆಯ ಪತ್ನಿಯಾಗಿ ಸ್ವೀಕರಿಸಿ ಚಿನ್ನಾದೇವಿಯೆಂದು ಹೆಸರಿಸಿ ಅವಳ ಹೆಸರಿನಲ್ಲಿ ನಾಗಲಾಪುರವೆಂಬ ಹೊಸದಾದ ನಗರವನ್ನೇ ನಿರ್ಮಾಣ ಮಾಡುವನು. ಅ.ನ.ಕೃ ಕತೆಯನ್ನು ಒಂದು ಕೌಟುಂಬಿಕ ನೆಲೆಯಲ್ಲಿ ಕಟ್ಟಿಕೊಡುವರು. ಪುರಂದರದಾಸರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಕೈಯಲ್ಲಿ ತಾಳ ತಂಬೂರಿ ಹಿಡಿದು 'ಕಂಡೆ ನಾ ಕನಸಿನಲಿ ಗೋವಿಂದನ' ಎಂಬುದನ್ನು ಕಾಲ್ಪನಿಕವಾಗಿ ಚಿತ್ರಿಸಿರುವರು. ತಿಮ್ಮಣ್ಣ ಕವಿಯನ್ನು ತಿರುಮಲಾಂಬಾರವರಿಗೆ ಪರಿಚಯಿಸುವುದು, ತಿಮ್ಮರಸರು ಗಜಪತಿಯ ಮಗಳು ಭುವನಮೋಹಿನಿಯನ್ನು ಮದುವೆಯಾಗಲು ಕೃಷ್ಣದೇವರಾಯರನ್ನು ಒಪ್ಪಿಸುವುದು ಹೀಗೆ ಕಲ್ಪಿತ ಪರಿಸರವನ್ನು ಸೃಷ್ಟಿಸುವರು. ಜೊತೆಗೆ ಬಹುಮನಿ ಸುಲ್ತಾನರ ವಿರುದ್ಧ ನಡೆಸಿದ ದಂಡಯಾತ್ರೆಗಳನ್ನು, ಅರಸನಿಗಿರುವ ಕಾವ್ಯಾಸಕ್ತಿಯಿಂದ ಅನೇಕ ಕವಿಗಳಿಗೆ ನೀಡಿದ ಆಶ್ರಯ, ಗೌರವ ಪುರಸ್ಕಾರಗಳ ಕುರಿತು ನಿರೂಪಿಸುವರು.

'ಅಭಯಪ್ರಧಾನ' ಕಾದಂಬರಿಯಲ್ಲಿ ಕೃಷ್ಣದೇವರಾಯನ ಸಾಧನೆಗಳು, ಅವನ ರಾಜ್ಯ ವಿಸ್ತರಣೆ ಕುರಿತು ನಿರೂಪಿಸಿರುವರಲ್ಲದೆ ಕನಕದಾಸರನ್ನು ಪರಿಚಯಿಸುವರು. ಜೊತೆಗೆ ಸಮಕಾಲೀನ ಇತಿಹಾಸವನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ವ್ಯಾಸರಾಯರನ್ನು ವೈಭವೀಕರಿಸಿ 'ಕುಹುಯೋಗ'ದ ಸಂದರ್ಭದಲ್ಲಿ ರಾಜನಿಗೆ ಆಗುತ್ತಿದ್ದ ಜೀವಹಾನಿಯನ್ನು ತಪ್ಪಿಸಲು ರಾಜ್ಯವನ್ನು ವ್ಯಾಸರಾಯರು ವಹಿಸಿಕೊಂಡು ರಾಜನನ್ನು ಈ ದೋಷದಿಂದ ಪಾರುಮಾಡಿದ ಪ್ರಸಂಗವನ್ನು ಅ.ನ.ಕೃ ವಿವರಿಸಿರುವರು. ನರಸಿಂಹಶರ್ಮನೆನ್ನುವ ಬ್ರಾಹ್ಮಣ ಲಕ್ಷ್ಮೀನರಸಿಂಹಸ್ವಾಮಿಯ ಭವ್ಯ ಮೂರ್ತಿಯನ್ನು ನಿರ್ಮಿಸಲು ಹೊರಟ ವಿಚಾರವನ್ನು ಹೇಳಿರುವರು. ಇದೊಂದು ಕಾಲ್ಪನಿಕ ಪ್ರಸಂಗವಾಗಿದ್ದು ಕಥನ ತಂತ್ರದ ದೃಷ್ಟಿಯಿಂದ ಈ ಮಾರ್ಪಾಟು ಮಾಡಿಕೊಂಡಿರುವರು. ತಿಮ್ಮಣ್ಣನಾಯಕ ಹಾಗೂ ಗೋವಿಂದ ದಣ್ಣಾಯಕರು ಅಂತಃಪುರದ ಸೇವಕಿ ನಾಗಿಯ ನೆರವು ಪಡೆದು ಯುವರಾಜರ ಕೊಲೆ ಮಾಡಿದರೆಂಬುದನ್ನು ಚಿತ್ರಿಸಿರುವರು. ಮಗನನ್ನು ಕಳೆದುಕೊಂಡ ಸಂದರ್ಭದಲ್ಲಿ ತೊಟ್ಟಿಲು ಕೂಸಾದ ಗೋವಿಂದರಾಜನಿಗೆ ಪಟ್ಟಕಟ್ಟದೆ ತಮ್ಮನಾದ ಅಚ್ಯುತರಾಯರಿಗೆ ಸಿಂಹಾಸನವೇರಿಸಿ ಅಳಿಯ ರಾಮರಾಯರಿಗೆ ಮಹಾಮಂತ್ರಿಯಾಗಿ ರಾಜ್ಯಾಡಳಿತ ನೋಡಿಕೊಳ್ಳುವಂತೆ ಹೇಳಿ ಅಸ್ತಂಗತರಾಗುವರು. ಈ ಎಲ್ಲ ವಿವರಗಳನ್ನು ಅಭಯಪ್ರಧಾನ ಕಾದಂಬರಿಯಲ್ಲಿ ಕಾಣುತ್ತೇವೆ.

'ತೇಜೋಭಂಗ' ಕಾದಂಬರಿಯಲ್ಲಿ ಅಚ್ಯುತರಾಯನ ೧೨ ವರ್ಷಗಳ ಆಳ್ವಿಕೆ, ಸದಾಶಿವರಾಯನ ೨೩ ವರ್ಷಗಳ ಆಳ್ವಿಕೆಯನ್ನು ಕುರಿತು ನಿರೂಪಿಸಲಾಗಿದ್ದು, ಆದರೆ ಈ ३೫ ವರ್ಷಗಳ ಅವಧಿಯಲ್ಲಿ ರಾಮರಾಯರೇ ಸರ್ವಾಧಿಕಾರಿಯಾಗಿದ್ದು, ವಿಜಯನಗರ ಸಾಮ್ರಾಜ್ಯಕ್ಕೆ ಪ್ರಭುವಾಗದೇ ಹೋದರೂ ಸಹ ಪ್ರಭುವಿನಂತೆಯೇ ಆಡಳಿತವನ್ನು ನಡೆಸುವರು. ರಾಮರಾಯ ಚೇರಭೂಪಾಲನ ಮೇಲೆ ದಂಡೆತ್ತಿ ಹೋದಾಗ ಹುಚ್ಚು ತಿರುಮಲ ಪೋತಯ್ಯ ಮತ್ತು ತಿಮ್ಮಯ್ಯನವರ ಸ್ನೇಹಬೆಳೆಸಿ ಅಚ್ಯುತರಾಯರನ್ನು ಪದಚ್ಯುತಗೊಳಿಸಿ ಗೋವಿಂದರಾಜರನ್ನು ಸಿಂಹಾಸನಕ್ಕೇರಿಸುವುದು, ಸಾಮ್ರಾಜ್ಯದ ಅಧಿಕಾರವನ್ನು ಪಡೆಯಲು ಪೋತಯ್ಯ ಮತ್ತು ಹುಚ್ಚು ತಿರುಮಲ ಬಿಜಾಪುರದ ಆದಿಲ್‌ಷಾನ ನೆರವು ಕೋರುವುದು, ತಿಮ್ಮಯ್ಯನನ್ನು ಕೊಲ್ಲುವುದು ಹೀಗೆ ಹಲವಾರು ಸನ್ನಿವೇಶಗಳನ್ನು ಚಿತ್ರಿಸಿರುವರು. ರಾಮರಾಯ ಬಲಿಷ್ಠನಾಗಿ ಆಡಳಿತ ನಡೆಸುತ್ತಿದ್ದು ಐನ್ ಉಲ್ ಮುಲ್ಕ್‌ನ ಸಹೋದರಿ ಆಯೇಷೆಯಲ್ಲಿ ಅನುರಕ್ತನಾದ ವಿಷಯವನ್ನು ಅ.ನ.ಕೃ ನಿರೂಪಿಸುವರು.

'ಅಳಿಯ ರಾಮರಾಯ' ಕಾದಂಬರಿಯಲ್ಲಿ ದಕ್ಷಿಣದ ಷಾಹಿ ಸಂಸ್ಥಾನಗಳ ಸುಲ್ತಾನರೆಲ್ಲ ಒಂದಾಗಿ ವಿಜಯನಗರ ಸಾಮ್ರಾಜ್ಯದ ಮೇಲೆ ದಾಳಿ ಮಾಡುವ ಸಂಚು, ಇಬ್ರಾಹಿಂ ಆದಿಲ್‌ಷಾನ ವಿರುದ್ಧ ಸಂಚು ರೂಪಿಸಿದ್ದನೆಂಬ ಕಾರಣದಿಂದ ಬುರ್ಹಾನ್‌ಖಾನ್‌ನನ್ನು ಮರಣದಂಡನೆಗೆ ಗುರಿ ಪಡಿಸುತ್ತಾರೆ. ಆತನ ಪತ್ನಿಯಾದ ಆಯೇಷಿಯೊಂದಿಗೆ ರಾಮರಾಯ ಸಂಬಂಧವನ್ನಿಟ್ಟುಕೊಂಡಿದ್ದು ವಿಜಯನಗರ ಪತನಕ್ಕೆ ಇದೂ ಸಹ ಒಂದು ಕಾರಣವಾಗಿದೆ. ಯಲಹಂಕದ ಕೆಂಪೇಗೌಡನ ಕುರಿತು ಈ ಕಾದಂಬರಿಯಲ್ಲಿ ಅ.ನ.ಕೃ ಪ್ರಸ್ತಾಪಿಸಿರುವರು. ರಕ್ಕಸ ತಂಗಡಿ ಯುದ್ಧದಲ್ಲಿ ರಾಮರಾಯನನ್ನು ಹತ್ಯೆ ಮಾಡಲಾಯಿತು. ರಾಮರಾಯನ ಸಾವಿನ ನಂತರ ಸದಾಶಿವರಾಯನು ತಿರುಮಲರಾಯನ ಅಧೀನನಾಗಿಯೇ ದುರ್ಬಲ ಆಡಳಿತ ನಡೆಸುತ್ತಾನೆ. ತದನಂತರ ತಿರುಮಲರಾಯನೇ ಪೆನುಗೊಂಡೆಯಲ್ಲಿ ತನ್ನ ಅಧಿಕಾರ ಸ್ಥಾಪಿಸುವನು. ಅ.ನ.ಕೃ ಈ ಕಾದಂಬರಿಯಲ್ಲಿ ಆಯೇಷಾಳನ್ನು ವೀರರಮಣಿಯಾಗಿ ಚಿತ್ರಿಸುತ್ತಾರೆ. ಧರ್ಮಕ್ಕೆ ದ್ರೋಹ ಬಗೆದು ಸುಲ್ತಾನರ ಪರವಾಗಿ ಯುದ್ಧದಲ್ಲಿ ಹೋರಾಡಿದ ಮಗನ ಬಗೆಗೆ ಆಯೇಷಾಳಿಗೆ ತೀವ್ರವಾದ ನಿರಾಶೆಯಾಗುತ್ತದೆ. ಕೋಪದಿಂದ ವಿಶ್ವಾಸದ್ರೋಹ ಮಾಡಿದ ಮಗನನ್ನು ಕಿರುಗತ್ತಿಯಿಂದ ಇರಿದು, ತಾನೂ ಇರಿದುಕೊಂಡು ಸಾವನ್ನಪ್ಪುವಳು. ಇಲ್ಲಿ ಲೇಖಕರು ಒಂದು ರುದ್ರ ಗಂಭೀರವಾದ ಸನ್ನಿವೇಶವನ್ನು ಸೃಷ್ಟಿ ಮಾಡಿದ್ದಾರೆ.

'ಪ್ರಳಯಾನಂತರ' ಕಾದಂಬರಿಯಲ್ಲಿ ರಕ್ಕಸ ತಂಗಡಿಯ ಯುದ್ಧದ ಹೊಡೆತದಿಂದ ವಿಜಯನಗರ ಸಾಮ್ರಾಜ್ಯ ಅವನತಿಯ ದಾರಿಯತ್ತ ಹೋಯಿತು. ಸುಲ್ತಾನರು ರಾಜಧಾನಿಯ ತುಂಬೆಲ್ಲ ಮಾರಣಹೋಮ ನಡೆಸುತ್ತಾರೆ. ಅರವೀಡು ವಂಶದ ತಿರುಮಲರಾಯ, ರಂಗರಾಯ, ವೆಂಕಟಪತಿ ಮತ್ತು ಶ್ರೀರಂಗರಾಯ ಇವರ ೪೬ ವರ್ಷಗಳ ಆಳ್ವಿಕೆಯ ಕಾಲದ ಕುರಿತು ವಿವರಿಸುತ್ತ ಸ್ವಾರ್ಥಕಲಹ, ವಂಚನೆ, ಮೋಸ, ದ್ರೋಹದ ವಿಚಾರಗಳನ್ನೆಲ್ಲ ಈ ಕಾದಂಬರಿಯಲ್ಲಿ ನಿರೂಪಿಸಿರುವರು. ಕ್ರಿಶ ೧೩೩೬ ರಲ್ಲಿ ಶ್ರೀ ವಿದ್ಯಾರಣ್ಯರ ಕೃಪಾಶಿರ್ವಾದದಿಂದ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯ ರಕ್ಕಸ ತಂಗಡಿ ಯುದ್ಧದೊಂದಿಗೆ ೧೫೬೫ ರಲ್ಲಿ ನಾಶಗೊಂಡಿತು. ಇಲ್ಲಿ ಲೇಖಕರು ತಮಗೆ ಸಿಕ್ಕ ಆಧಾರಗಳ ಹಿನ್ನೆಲೆಯಲ್ಲಿ ವಿಜಯನಗರದ ಇತಿಹಾಸವನ್ನು ಪುನರ್ರಚಿಸುವುದನ್ನು ಕಾಣುತ್ತೇವೆ.

ಹಿಂದೂ ಸಾಮ್ರಾಜ್ಯವನ್ನು ಮೊಘಲರ ಕೈವಶಮಾಡಬಾರದೆನ್ನುವ ಉತ್ಕಟ ಧರ್ಮಶ್ರದ್ಧೆ, ದೇಶಾಭಿಮಾನ ಹಿಂದೂಗಳದಾಗಿದ್ದರೆ, ಹೇಗಾದರೂ ಮಾಡಿ ತಾನು ಏಕೈಕ ಚಕ್ರಾಧಿಪತಿಯಾಗಬೇಕೆನ್ನುವ ತನ್ನ ಕನಸನ್ನು ಅಕ್ಬರ್ ಕಾರ್ಯಗತಗೊಳಿಸಿಕೊಳ್ಳುವದಕ್ಕಾಗಿ ಎಲ್ಲ ರಜಪೂತ ಸಂಸ್ಥಾನಗಳನ್ನು ಕೈವಶಪಡಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಏನಾದರೂ ಸರಿಯೇ ಚಿತ್ತೂರಿನ ಒಂದು ಒಣ ಹುಲ್ಲುಕಡ್ಡಿಯೂ ಸಹ ಅಕ್ಬರನಿಗೆ ದೊರೆಯಬಾರದೆನ್ನುವ ಪ್ರತಾಪಸಿಂಹನ ವೀರಪ್ರತಿಜ್ಞೆ, ಅದಕ್ಕಾಗಿ ನಡೆದ ತೀವ್ರವಾದ ಹೋರಾಟವೇ **'ರಣವಿಕ್ರಮ'**. ಅ.ನ.ಕೃ ಈ ಕಾದಂಬರಿಯನ್ನು ರಚಿಸಿದ್ದು, ಇದರಲ್ಲಿ ಪ್ರತಾಪಸಿಂಹನ ತಂದೆಯಾದ ಉದಯಸಿಂಹನ ಭೋಗವಿಲಾಸದ ಜೀವನ, ಪ್ರಧಾನಿ ಭೀಮಸಿಂಹರ ಚತುರತೆಯ ಆಡಳಿತ ವೈಖರಿ, ಉದಯಸಿಂಹರ ಇನ್ನಿಬ್ಬರು ಮಕ್ಕಳಾದ ಜಗಮಲ್ಲ ಮತ್ತು ಶಕ್ತಸಿಂಹರ ಆಡಳಿತದ ದುರಾಸೆಯಿಂದ ರಾಜಧಾನಿಯಲ್ಲಿ ಉಂಟಾದ ವೈಮನಸ್ಸು, ಪ್ರತಾಪಸಿಂಹನ ಶೂರತನದ ಆಡಳಿತ ನೀತಿ ಮುಂತಾದ ಅಂಶಗಳನ್ನು ಸಮರ್ಥವಾಗಿ ನಿರೂಪಿಸಿರುವರು. ಮೇವಾರನ್ನು ತನ್ನ ಕೈವಶಮಾಡಿಕೊಳ್ಳಬೇಕೆಂಬುದು ಅಕ್ಬರನ ಹಂಬಲ. ಅದಕ್ಕಾಗಿ ಸಾಕಷ್ಟು ಹೋರಾಟಗಳೇ ನಡೆಯುತ್ತವೆ. ವೀರನಾದ ಪ್ರತಾಪಸಿಂಹನನ್ನು ಸೆರೆಹಿಡಿಯಬೇಕೆಂಬ ಅಕ್ಬರನ ಆಸೆ ಕೈಗೂಡದೆ ಕೊನೆಗೆ ರಾಣಾ ಪ್ರತಾಪಸಿಂಹ ವೀರಸ್ವರ್ಗವನ್ನೇರುವನು. ರಜಪೂತ ಸ್ತ್ರೀಯರು ಸಹ ಎಂತಹ ವೀರರು ಎಂಬುದನ್ನು ಯೋಷಿದೇವಿ ಪಾತ್ರದ ಮೂಲಕ ಚಿತ್ರಿಸಿರುವರು.

ಬೆಂಗಳೂರು ಕೆಂಪೇಗೌಡನನ್ನು ಕುರಿತು **'ಯಲಹಂಕ ಭೂಪಾಲ'** ಕಾದಂಬರಿಯನ್ನು ರಚಿಸಿದ್ದು ಇದರಲ್ಲಿ ರಣಭೈರೇಗೌಡರು ಆವತಿ ಎಂಬ ಸಣ್ಣದಾದ ನಾಡೊಂದನ್ನು ಕಟ್ಟಿ ಆಡಳಿತ

ಮಾಡುತ್ತಿದ್ದು, ಮುಂದೆ ಅದರ ಆಡಳಿತವನ್ನು ವಂಶಸ್ಥರೆನೋ ಮುಂದುವರೆಸಿಕೊಂಡು ಹೋಗುತ್ತಾರೆ. ಕೆಂಪೇಗೌಡರು ಮಾತ್ರ ಮಹತ್ವಾಕಾಂಕ್ಷೆಯ ವ್ಯಕ್ತಿಯಾಗಿದ್ದು ಬೆಂಗಾಳೂರು ಎಂಬ ದೊಡ್ಡದಾದ ನಗರವನ್ನು ಕಟ್ಟಿ ಆಳುತ್ತಾರೆ. ಆದರೆ ಕೋಟೆಯ ಬಾಗಿಲು ನಿಲ್ಲದೆ ಹೋದ ಸಂದರ್ಭದಲ್ಲಿ ಸೊಸೆಯೇ ಅದಕ್ಕೆ ಬಲಿದಾನವಾಗುವ ಸನ್ನಿವೇಶ, ಎಂಟು ಸಾವಿರ ಕಾಲಾಳುಗಳನ್ನು ನೇಮಿಸಿದ್ದ ವಿಚಾರ, ಭೈರವ ನಾಣ್ಯಗಳನ್ನು ಮುದ್ರಿಸಿದ್ದು ಚಾಡಿಕೋರರ ಮಾತುಗಳಿಂದ ವಿಜಯನಗರದ ಅರಸು ಸದಾಶಿವರಾಯರು ಸೆರೆ ಇಟ್ಟ ಪ್ರಸಂಗ, ತದನಂತರ ಅಳಿಯ ರಾಮರಾಯರಿಂದ ನಿಜಾಂಶ ತಿಳಿದು ಬಿಡುಗಡೆಗೊಂಡ ವಿಚಾರಗಳನ್ನೆಲ್ಲ ಚಿತ್ರಿಸಿರುವರು. ವಿಜಯನಗರದ ಅರಸರಲ್ಲಿ ಅಧಿಕಾರಕ್ಕಾಗಿ ಒಳಜಗಳ, ದ್ವೇಷಾಸೂಯೆ ಆ ರಾಜ್ಯದ ಶೈಥಿಲ್ಯಕ್ಕೆ ಕಾರಣವೆಂಬ ಅಂಶವನ್ನು ಅ.ನ.ಕೃ ಕಾದಂಬರಿಯಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪಿಸವರು. ಈ ಕಾದಂಬರಿಗೆ ದೊರೆತ ವಿಷಯ ಸಾಮಗ್ರಿ ಕಡಿಮೆಯಿರುವುದರಿಂದ ಕಾಲ್ಪನಿಕ ಅಂಶಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಪಾಲಾರ್ ನದಿ ದೊಡ್ಡಭೈರೇಗೌಡನ ಮಗಳು ದೊಡ್ಡಮ್ಮಳ ಪ್ರಾರ್ಥನೆಗೆ ಓಗೊಟ್ಟು ಹಿಂದೆ ಸರಿದದ್ದು, ಜಯಗೌಡನು ತೊಟ್ಟಿಲಲ್ಲಿ ಮಲಗಿದ್ದಾಗ ಕಾಳಸರ್ಪ ಮಗುವಿನ ಮುಖದ ಮೇಲೆ ಬಿಸಿಲು ಬೀಳದಂತೆ ತನ್ನ ಹೆಡೆ ಬಿಚ್ಚಿದ್ದು, ಆವತಿ ಪಟ್ಟಣ ನಿರ್ಮಾಣಕ್ಕೆ ಏಳುಕೊಪ್ಪರಿಕೆ ಹಣ ದೊರೆತದ್ದು, ಬೆಂಗಳೂರಗೆ ಆ ಹೆಸರು ಹೇಗೆ ಬಂದಿತು? ಎಂಬ ವಿವರಗಳು ಈ ಕಾದಂಬರಿಗೆ ಪುಷ್ಠಿ ಕೊಡುತ್ತವೆ.

'ಸಂಗ್ರಾಮ ಧುರೀಣ' ಕಾದಂಬರಿಯಲ್ಲಿ ಹೆಚ್ಚು ಬೆಳಕಿಗೆ ಬಾರದಿರುವ ಒಂದು ಸಣ್ಣ ರಾಜ್ಯದ ದೇಸಾಯಿಯಾಗಿದ್ದ ಹನುಮಂತಗೌಡನ ಕುರಿತು ಬರೆದಿರುವರು. ಬಡತನ ಸಿರಿತನ ಎರಡನ್ನೂ ಕಂಡ ಹನುಮಂತಗೌಡ ಬದುಕಿನಲ್ಲಿ ಹಿಗ್ಗದೆ, ಕುಗ್ಗದೆ ತನ್ನ ಜೀವನವನ್ನು ಸಾಗಿಸಿದ ಕತೆಯನ್ನು ಚಿತ್ರಿಸಿರುವರು. ಹನುಮಂತಗೌಡನ ತಂದೆ ತಾಯಿ ರಂಗರಸಯ್ಯ ಮತ್ತು ಗೋದಾವರಿಯರ ಬದುಕಿನ ಕತೆ, ಹನುಮಂತಗೌಡ ಹೊನ್ನತ್ತಿಯ ಕುಲಕರ್ಣಿಕೆ ಮತ್ತು ಆಸ್ತಿ ಗಳಿಸಿದ ವಿಚಾರ, ಗುತ್ತಲದ ಕನ್ಯೆಯನ್ನು ಮದುವೆಯಾಗಿ ಗೌಡಿಕೆಯನ್ನು ವಹಿಸಿಕೊಂಡ ರೀತಿ, ಬಂಕಾಪುರದ ಸುಭಾದಾರನಾದ ಸರ್ಜಾಖಾನರ ಮೆಚ್ಚುಗೆಗೆ ಮಾತ್ರವಲ್ಲದೆ ವಿಜಾಪುರದ ಸುಲ್ತಾನರ ಪ್ರೀತಿಗೂ ಪಾತ್ರನಾಗಿ ಜಹಗೀರಿಯನ್ನು 'ಸಂಗ್ರಾಮ ಧುರೀಣ' ಬಿರುದನ್ನು ಪಡೆದುಕೊಂಡು ಹಾವನೂರನ್ನು ಮುಖ್ಯ ಕೇಂದ್ರವಾಗಿ ಆಳಿದ ರೀತಿ ಹೀಗೆ ಹಾವನೂರಿನ ಸಂಸ್ಥಾಪಕ ಹನುಮಂತಗೌಡನ ಕತೆಯನ್ನು ಸಮಗ್ರವಾಗಿ ನಿರೂಪಿಸಿರುವರು.

'**ವೀರರಾಣಿ ಕಿತ್ತೂರು ಚೆನ್ನಮ್ಮ**' ಕಾದಂಬರಿಯಲ್ಲಿ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರ ಕಥೆ ಇರುವುದು. ಕಿತ್ತೂರು ಸ್ವತಂತ್ರ ಸಂಸ್ಥಾನವಾಗಿ ಅದನ್ನು ೩೪ ವರ್ಷ ಆಳಿದ್ದ ಮಲ್ಲಸರ್ಜ ದೊರೆಯನ್ನು ಪೇಶ್ವೆ ಬಾಜಿರಾಯರು ಚಾಡಿಕೋರರ ಚಾಡಿ ಮಾತಿಗೆ ಒಳಗಾಗಿ ಮಲ್ಲಸರ್ಜನನ್ನು ಕರೆಯಿಸಿಕೊಂಡು ಪುಣೆಯಲ್ಲಿ ಗೃಹಬಂಧನಕ್ಕೊಳಪಡಿಸಿದನು. ಮಲ್ಲಸರ್ಜನ ಬಂಧವಿಮುಕ್ತತೆಗೆ ಪ್ರತಿವರ್ಷ ೧,೭೫,೦೦೦ ಕಾಣಿಕೆಯನ್ನು ಬಾಜಿರಾಯನಿಗೆ ಸಲ್ಲಿಸಬೇಕೆಂದೂ ಒಪ್ಪಂದವಾಯಿತು. ಈತನ ಮರಣಾನಂತರ ಕಿತ್ತೂರನ್ನು ಇಂಗ್ಲೀಷರು ವಶಪಡಿಸಿಕೊಂಡರು. ಕಿತ್ತೂರಿನ ಆಡಳಿತದಲ್ಲಿ ಮನ್ರೋ ಪ್ರವೇಶಿಸಿದ ಮೇಲೆ ಐದು ವರ್ಷ ಕಿತ್ತೂರು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿತು. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂದು ಕಿತ್ತೂರನ್ನು ಬ್ರಿಟೀಷ ಸರಕಾರ ವಶಪಡಿಸಿಕೊಂಡಿತು. ಚೆನ್ನಮ್ಮರಾಣಿ ಬ್ರಿಟೀಷರ ಜೊತೆ ಯುದ್ಧ ಸಾರಿದಾಗ ಯುದ್ಧದಲ್ಲಿ ಮನ್ರೋ ಸಾವನ್ನಪ್ಪುತ್ತಾನೆ. ಕಿತ್ತೂರಿಗೆ ದ್ರೋಹ ಬಗೆದ ಕಾರಣಕ್ಕಾಗಿ ಮಲ್ಲಪ್ಪಶೆಟ್ಟಿ ಹಾಗೂ ವೆಂಕಟರಾಯರಿಗೆ ಮರಣದಂಡನೆ ಶಿಕ್ಷೆಯಾಗುವುದು. ಆದರೆ ಎರಡನೆಯ ಬಾರಿ ಯುದ್ಧವಾಗಿ ಕಿತ್ತೂರಿಗೆ ಸೋಲಾಗಿ ಚೆನ್ನಮ್ಮ ಸೆರೆಯಾಗುತ್ತಾಳೆ. ಕಿತ್ತೂರಿನ ಸ್ವಾತಂತ್ರ್ಯ ರಕ್ಷಣೆಗಾಗಿ ಸಿಂಹಿಣಿಯಂತೆ ಹೋರಾಡಿದ ಚೆನ್ನಮ್ಮ ರಾಣಿಯ ಪಾತ್ರ ಚೆನ್ನಾಗಿ ಮೂಡಿ ಬಂದಿದೆ. ಗುರುಸಿದ್ಧಪ್ಪನಂತಹ ಸ್ವಾಮಿನಿಷ್ಠರು, ರಾಯಣ್ಣ, ಬಿಚ್ಚುಗತ್ತಿ ಚನ್ನಬಸಪ್ಪನಂತಹ ತ್ಯಾಗ ವೀರರು ಚೆನ್ನಮ್ಮ ರಾಣಿಯನ್ನು ಬೆಂಬಲಿಸಿ ನಿಂತರು. ಸದಾಶಿವಶಾಸ್ತ್ರೀ, ಚಿದಂಬರ ದೀಕ್ಷಿತರು ತುಳಜಮ್ಮನಂತಹ ಪಾತ್ರಗಳು ಅ.ನ.ಕೃ ಸೃಷ್ಟಿಸಿದ ಕಾಲ್ಪನಿಕ ಪಾತ್ರಗಳಾಗಿದ್ದು ಎಲ್ಲ ಪಾತ್ರಗಳೂ ಓದುಗರ ಮನಸೆಳೆಯುತ್ತವೆ.

ಐತಿಹಾಸಿಕ ಕಾದಂಬರಿಗಳ ರಚನೆಯಲ್ಲಿ ತ.ರಾ.ಸು ಅದ್ವಿತೀಯರಾಗಿದ್ದರು. ಕರ್ನಾಟಕದ ಉಜ್ವಲ ಇತಿಹಾಸವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿ ಚಿತ್ರದುರ್ಗ ಇತಿಹಾಸಕ್ಕೆ ಸಂಬಂಧಿಸಿದ ಐತಿಹಾಸಿಕ ವಿವರಗಳನ್ನು ಆಧರಿಸಿಕೊಂಡು ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಹೊಸಹಗಲು, ವಿಜಯೋತ್ಸವ, ರಾಜ್ಯದಾಹ, ಕಸ್ತೂರಿ ಕಂಕಣ, ದುರ್ಗಾಸ್ತಮಾನ, ಹಂಸಗೀತೆ ಕಾದಂಬರಿಗಳಲ್ಲದೇ ನೃಪತುಂಗ, ಸಿಡಿಲಮೊಗ್ಗು, ಕೀರ್ತಿನಾರಾಯಣ, ಶಿಲ್ಪಶ್ರೀ ಎಂಬ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ತ.ರಾ.ಸುರವರೇ ತಮ್ಮ ಹಂಸಗೀತೆ ಕಾದಂಬರಿಯಲ್ಲಿ ಹೇಳುವ ಹಾಗೆ 'ನಮಗೆ ನಮ್ಮ ನಾಡಿನ ಇತಿಹಾಸ ನಮ್ಮ ನೆಲವನ್ನು ಪವಿತ್ರಗೊಳಿಸಿದ ಮಹನೀಯರ ವಿಚಾರ ಏನೂ ತಿಳಿಯದು. ಅವರ ತ್ಯಾಗ, ಬಲಿದಾನ, ಸಾಹಸಗಳು ನಮ್ಮ ಮರೆವಿನ ಜಾಡ್ಯದಲ್ಲಿ ಕಣ್ಮರೆಯಾಗಿ ಹೋಗಿವೆ'[೩೧] (ಸುಬ್ಬರಾಯರು ತ.ರಾ, ೨೦೧೩, ಹಂಸಗೀತೆ, ಪುಟ-೧೭) ಇಂತಹ ಕಣ್ಮರೆಯಾಗಿ ಹೋಗಿರುವ ಇತಿಹಾಸವನ್ನು ಬೆಳಕಿಗೆ ತರುವ ಕೆಲಸ ಮಾಡಬೇಕಾಗಿರುವುದರಿಂದ ಐತಿಹಾಸಿಕ ಕಾದಂಬರಿಗಳ ಬರವಣಿಗೆ ಅಗತ್ಯವೆನಿಸುವುದು. ಭಾರತೀಯ ಇತಿಹಾಸದ ಪ್ರಮುಖ

ರಾಜ ರಾಣಿಯರು, ಮನೆತನಗಳು, ಮಹಾಪುರುಷರು ಇವರುಗಳ ಬಗೆಗೆ ಬರೆಯುವಲ್ಲಿ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನ ಇವರೆಲ್ಲರೂ ಭಾರತೀಯ ಸಂಸ್ಕೃತಿಯ ಬಗೆಗೆ ಆರಾಧ್ಯಭಾವ ಮತ್ತು ತನ್ಮಯತೆಯ ನಿಲುವನ್ನು ಪ್ರಕಟಿಸುವುದು ಕೂಡ ನವೋದಯಕ್ಕಿಂತ ಭಿನ್ನವಾದ ಗಟ್ಟಿಯಾದ ತಾತ್ವಿಕತೆ ಇರುವುದನ್ನು ಕಾಣುತ್ತೇವೆ.

ತ.ರಾ.ಸುರವರೇ ತಮ್ಮ ದುರ್ಗಾಸ್ತಮಾನ ಕಾದಂಬರಿಯ ಮುನ್ನುಡಿಯಲ್ಲಿ ಐತಿಹಾಸಿಕ ಕಾದಂಬರಿಗಳ ಕುರಿತಾಗಿ 'ಇತಿಹಾಸದಲ್ಲಿ ತಲೆ ಬುಡವೇ ಇಲ್ಲದ ಕಲ್ಪನಾ ಕುದುರೆಯ ಸವಾರಿ ಮಾಡುವುದು ನಾನು ತಿಳಿದಂತೆ ಐತಿಹಾಸಿಕ ಕಾದಂಬರಿಕಾರನ ಲಕ್ಷಣವಲ್ಲ. ಅಂಥ ಕೃತ್ಯ ಇತಿಹಾಸಕ್ಕೆ ಮತ್ತು ಸಮಕಾಲೀನ ಜನತೆಗೆ ಬಗೆದ ದ್ರೋಹ ಎಂದೇ ನಂಬಿದ್ದೇನೆ. ಇತ್ತೀಚೆಗೆ ಐತಿಹಾಸಿಕ ಕಾದಂಬರಿಗಳನ್ನು ಬರೆಯುವ ಕೆಲವರಲ್ಲಿ ಅಂದಿನ ಚಾರಿತ್ರಿಕ ಘಟನೆ, ಸಾಮಾಜಿಕ ಸಂಪ್ರದಾಯ, ನೀತಿ ನಿಯಮ, ನಂಬಿಕೆಗಳನ್ನು ನಮ್ಮ ಇಂದಿನ ಬದಲಾದ ವಿಚಾರಧಾರೆಯ ಒರೆಗಲ್ಲಿಗಿಟ್ಟು ವಿಮರ್ಶಾತ್ಮಕವಾಗಿ ಬರೆಯುವ, ಗತ ಇತಿಹಾಸದ ಮೇಲೆ ನ್ಯಾಯಾಧೀಶನಂತೆ ತೀರ್ಪುಕೊಡುವ ಪ್ರವೃತ್ತಿ ಕಂಡುಬರುತ್ತಿದೆ. ಕಾದಂಬರಿಕಾರ ಇತಿಹಾಸದ ನ್ಯಾಯಾಧೀಶನಲ್ಲ. "ಇಂದಿನ ನಂಬಿಕೆ ಅಂದಿನ ಜೀವನಕ್ಕೆ ಒರೆಗಲ್ಲು" ಎನ್ನುವುದು ನಾನು ಒಪ್ಪದ ಮಾತು. ಆ ಕಾಲವನ್ನು ಅಂದಿನ ನಂಬಿಕೆ, ನಡವಳಿಕೆ, ನೀತಿ ನಿಯಮಗಳು ಹೇಗಿದ್ದಿತೋ ಹಾಗೇ ಚಿತ್ರಿಸುವುದು ಮಾತ್ರ ನನ್ನ ಕರ್ತವ್ಯ'[೩೨] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೧೩,೧೪) ಎಂದಿರುವರು. ಸಾಮಾಜಿಕ ಕಾದಂಬರಿ ರಚನೆಯ ಮೂಲಕ ಕಾದಂಬರಿ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಇವರು ಪೌರಾಣಿಕ ಕಾದಂಬರಿಗಳ ರಚನೆಯಲ್ಲಿ ವಿಸ್ತಾರ ವೈವಿಧ್ಯತೆಯ ಉತ್ತುಂಗ ಶಿಖರವನ್ನು ಮುಟ್ಟಿದ್ದಾರೆ.

ಚಿತ್ರದುರ್ಗದವರೇ ಆದ ತ.ರಾ.ಸು ಚಿತ್ರದುರ್ಗ ಇತಿಹಾಸವನ್ನು ಕುರಿತು ೮ ಕಾದಂಬರಿಗಳನ್ನು ರಚಿಸಿದ್ದಾರೆ. ಚಿತ್ರದುರ್ಗದ ನಾಯಕರ ಏಳು ಬೀಳು, ಅವರ ಬದುಕಿನಲ್ಲಾದ ದೈವ ದುರ್ದೈವಗಳು, ಚಿತ್ರದುರ್ಗ ಇತಿಹಾಸದ ಎಲ್ಲ ವಿಷಯಗಳನ್ನು ಕುರಿತು ತಮ್ಮ ಐತಿಹಾಸಿಕ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. 'ಚಿತ್ರದುರ್ಗದ ಪಾಳೆಯಗಾರರ ಮೂಲಪುರುಷ ಚಿತ್ರನಾಯಕ. ಇವನು ಕಾರಣಾಂತರಗಳಿಂದ ದಿಲ್ಲಿಗೆ ಹೋದಾಗ ಮದಿಸಿದ ಆನೆಯನ್ನು ಪಳಗಿಸಿದ್ದರಿಂದ ದಿಲ್ಲಿ ಸುಲ್ತಾನರು ಇವನಿಗೆ 'ಮದಕರಿ' ಎಂಬ ಬಿರುದನ್ನು ನೀಡಿದ್ದರಿಂದ ಮುಂದೆ ಪಾಳೆಯಗಾರರೆಲ್ಲ ಮದಕರಿಗಳೆನಿಸಿದರು. ಚಿತ್ರನಾಯಕನು ಈ ಚಿತ್ರದುರ್ಗ ಸಂಸ್ಥಾನಕ್ಕೆ ಬಂದು ನೆಲೆಸಿದ. ಮುಂದೆ ಇವನ ವಂಶೀಕರು ಚಿತ್ರದುರ್ಗದ ಪಾಳೆಯಗಾರರಾದರು'[೩೩] (ಗಿರಿಜಾ ಟಿ, ೧೯೯೧, ಪುಟ-೧೧) ಎಂಬ ವಿಚಾರಗಳನ್ನು ಇತಿಹಾಸದಲ್ಲಿ ಕಾಣುತ್ತೇವೆ.

ಇಮ್ಮಡಿ ಮದಕರಿನಾಯಕನ ಸಾವಿನೊಂದಿಗೆ ಆರಂಭವಾಗುವ **'ಕಂಬನಿಯ ಕುಯಿಲು'** ಕಾದಂಬರಿ ದೇಸಣ್ಣ, ಓಬಣ್ಣನಾಯಕರ ಕಗ್ಗೊಲೆ, ಓಬವ್ವನಾಗತಿ, ಕಸ್ತೂರಿನಾಯಕರ ಆತ್ಮಹತ್ಯೆ, ಭುವನಪ್ಪನವರ ದುರ್ಮರಣ ಇವುಗಳೊಂದಿಗೆ ಕಂಬನಿಯ ಕುಯಿಲು ಪರಿಸಮಾಪ್ತಿಯಾಗುತ್ತದೆ. ಇಲ್ಲಿ ಗೌರಮ್ಮನಾಗತಿಯ ದುಃಖದ ಜೊತೆಗೆ ಭವಿಷ್ಯ ಚಿಂತನೆಯ ದೂರಾಲೋಚನೆ, ಭುವನಪ್ಪನಾಯಕರ ಮಂತ್ರಾಲೋಚನೆ, ಓಬವ್ವನಾಗತಿಯ ಸಾತ್ವಿಕ ರೀತಿಯ ಕಾರ್ಯಸಾಧನೆ, ಲಿಂಗಣ್ಣನಾಯಕರ ತ್ಯಾಗದ ಹಿರಿಮೆ ದಳವಾಯಿ ದೇಸಣ್ಣನ ರಾಜಭಕ್ತಿ, ದಳವಾಯಿ ಮುದ್ದಣ್ಣನ ಕ್ರೌರ್ಯತನ, ಕಸ್ತೂರಿನಾಯಕನ ಸ್ವಾಮಿನಿಷ್ಠೆ, ಗಿರಿಜೆಯ ಕರ್ತವ್ಯ ಪ್ರಜ್ಞೆ, ವೀರಣ್ಣನ ಅಧಿಕಾರ ಮೋಹ ಇವೆಲ್ಲವೂ ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿವೆ. ಈ ಕಾದಂಬರಿಯಲ್ಲಿ ಬರೀ ಸಾವು ನೋವು ದುಃಖ ದುಮ್ಮಾನಗಳನ್ನೇ ಹೆಚ್ಚಾಗಿ ಕಾಣುತ್ತೇವೆ.

'ರಾಜ್ಯದಾಹ' ಕಾದಂಬರಿಯ ಮಾಲೆಯಲ್ಲಿ ಎರಡನೆಯದು. ಚಿತ್ರದುರ್ಗವನ್ನು ಆಳಿದ ಚಿಕ್ಕಣ್ಣನಾಯಕರ ಜೀವನಕ್ಕೆ ಸಂಬಂಧಿಸಿದುದು ಓಬಣ್ಣನಾಯಕರ ಕೊಲೆಯಾದ ನಂತರ ಕಣಕುಪ್ಪೆಗೆ ಹೋಗಿದ್ದ ಚಿಕ್ಕಣ್ಣನಾಯಕನನ್ನು ದುರ್ಗಕ್ಕೆ ಕರೆಕಳಿಸಿ ರಾಜ್ಯದಾಹವಿದ್ದ ದಳವಾಯಿ ಮುದ್ದಣ್ಣ ಹೆಸರಿಗೆ ಮಾತ್ರ ಚಿಕ್ಕಣ್ಣನಾಯಕನನ್ನು ದೊರೆಯಾಗಿ ಪಟ್ಟಕ್ಕೆ ಕೂರಿಸಿ ತಾನು ಸರ್ವಾಧಿಕಾರಿತಂತೆ ಮೆರೆದ ವಿಚಾರಗಳಿರುವವು. ಚಿಕ್ಕಣ್ಣನಾಯಕ ಮುದ್ದಣ್ಣನ ಕುಟಿಲೋಪಾಯಗಳನ್ನು ಅರಿಯದೇ ಲಿಂಗಣ್ಣನಾಯಕನಿಗೆ ಆತ ಮಾಡಿರುವುದು ತಮ್ಮ ತಂದೆಯ ಮೇಲಿನ ಅಭಿಮಾನದಿಂದ ಎಂದೇ ಹೇಳುವನು.

ಲಿಂಗಣ್ಣನಾಯಕನನ್ನು ಪಟ್ಟಕ್ಕೆ ತರಲು ನಡೆದ ಪ್ರಯತ್ನದೊಂದಿಗೆ **'ರಕ್ತರಾತ್ರಿ'**ಯ ಅಧ್ಯಾಯ ಪ್ರಾರಂಭವಾಗುತ್ತದೆ. ಓಬಣ್ಣನಾಯಕನ ಕಗ್ಗೊಲೆ ನಂತರ ಚಿಕ್ಕಣ್ಣನಾಯಕನನ್ನು ಪಟ್ಟಕ್ಕೆ ತಂದು ತಾನೇ ಸರ್ವಾಧಿಕಾರಿಯಂತೆ ಮೆರೆಯುತ್ತಾನೆ. ಪುತ್ರಸಂತಾನವಿಲ್ಲದೆ ಚಿಕ್ಕಣ್ಣನಾಯಕ ವಿಧಿವಶನಾದಾಗ ಮುದ್ದಣ್ಣ ತಾನೇ ಪಟ್ಟಾಧಿಕಾರಿಯಾಗಬೇಕೆಂದು ಬಯಸುವನು. ಆದರೆ ಅದು ಲಿಂಗಣ್ಣನಾಯಕ ಇರುವವರೆಗೂ ಅಸಾಧ್ಯವಾದ ವಿಚಾರವಾದ್ದರಿಂದ ಲಿಂಗಣ್ಣನಾಯಕರನ್ನು ಪಟ್ಟಕ್ಕೆ ತರಲು ಒಪ್ಪುತ್ತಾನೆ. ಆದರೆ ತಾನೇ ಪ್ರಧಾನಿಯಾಗಿ ಅಧಿಕಾರ ಸೂತ್ರವನ್ನು ತನ್ನ ಕೈಯಲ್ಲಿಯೇ ಉಳಿಸಿಕೊಳ್ಳುತ್ತಾನೆ. ತನ್ನ ತಮ್ಮಂದಿರಿಗೆ ಅರಮನೆಯ ಮೇಲ್ವಿಚಾರಣೆಯ ಹೊಣೆ ಹೊರಿಸಿ ಲಿಂಗಣ್ಣನಾಯಕರನ್ನು ಅರಮನೆಯಲ್ಲಿಯೇ ಸೆರೆಮನೆಯಲ್ಲಿರುವಂತೆ ಮಾಡುತ್ತಾರೆ. ಮುದ್ದಣ್ಣ ಹೂಡಿದ ಕುತಂತ್ರದ ವ್ಯೂಹದಲ್ಲಿ ಒಂಟಿಯಾಗಿ ಹೋರಾಡಬೇಕಾದ ಸಂದರ್ಭ ಒದಗುವುದು. ಲಿಂಗಣ್ಣನಾಯಕರು ಅರಮನೆಯಲ್ಲಿಯೇ ಮುದ್ದಣ್ಣನ ಬಂಧಿಯಾದ ಪಂಜರದ ಬದುಕು,

ನಾಗತಿಯ ನೆರಳು ಎಂದು ಹೇಳಿಕೊಳ್ಳುತ್ತ ತಿರುಗಿದ ಗಿರಿಜೆಯ ಹುಚ್ಚು ಸಾಹಸ, ಪರಶುರಾಮಪ್ಪ ಮತ್ತು ಭರಮಣ್ಣರ ದಿಟ್ಟ ಹೋರಾಟ, ಉಗ್ರಚನ್ನವೀರಸ್ವಾಮಿಗಳ ಧರ್ಮಪ್ರಜ್ಞೆಯ ಜೊತೆಗೆ ದುರ್ಗದ ಶುಭಚಿಂತನೆ. ಮಲ್ಲವ್ವನಾಗತಿಯ ಆತ್ಮಹತ್ಯೆ, ಹೊರಕೆನಾಯಕನ ಅಚಲವಾದ ಭಕ್ತಿ, ಮುದ್ದಣ್ಣನ ಕ್ರೌರ್ಯತನ ಈ ಎಲ್ಲ ಅಂಶಗಳನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಮುದ್ದಣ್ಣ ತನ್ನ ಸ್ವಾರ್ಥಸಾಧನೆಗೆ, ದುರಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಮಾಡುವ ಲಿಂಗಣ್ಣನಾಯಕರ ಹತ್ಯೆ ಓದುಗರ ಹೃದಯವನ್ನೇ ಇರಿಯುವುದು.

'ತಿರುಗುಬಾಣ' ಹೆಸರೇ ಸೂಚಿಸುವಂತೆ ಮುದ್ದಣ್ಣನ ಕ್ರೌರ್ಯತನ, ರಾಕ್ಷಸೀ ಪ್ರವೃತ್ತಿಗಳೆಲ್ಲ ಅವನಿಗೆ ತಿರುಗುಬಾಣವಾಗುವವು. ಲಿಂಗಣ್ಣನಾಯಕನ ಕೊಲೆಯಾಗಿ ಮತ್ತಿವಂಶ ನಾಶವಾಗಿ ಇನ್ನೂ ತಾನು ಸರ್ವಾಧಿಕಾರತ್ವದಿಂದ ದುರ್ಗದ ಅಧಿಪತ್ಯವಹಿಸಿಕೊಳ್ಳಬಹುದೆಂದು ಭಾವಿಸಿದ ಮುದ್ದಣ್ಣನಿಗೆ ಸಾಧ್ಯವಾಗುವುದಿಲ್ಲ. ರಂಗಪ್ಪನಾಯಕರನ್ನು ಕರೆತಂದು ಮಲ್ಲವ್ವನಾಗತಿಗೆ ದತ್ತು ಸ್ವೀಕಾರ ಮಾಡಿಕೊಳ್ಳಬೇಕೆಂದು ಆಜ್ಞೆಮಾಡುತ್ತಾನೆ. ಮಲ್ಲವ್ವನಾಗತಿ ಯಾವ ನಿರ್ಧಾರಕ್ಕೂ ಬರದೇ ವಿಷಪಾನ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮುದ್ದಣ್ಣ ಉಗ್ರಚನ್ನವೀರಸ್ವಾಮಿಗಳನ್ನು ದುರ್ಗದಿಂದ ಹೊರಹಾಕಿದಾಗ ಚನ್ನಯ್ಯನ ಸಹಾಯದಿಂದ ಭರಮಣ್ಣ ಮತ್ತು ಪರಶುರಾಮಪ್ಪನವರು ತಮ್ಮ ಹತ್ತಿರ ಕರೆಸಿಕೊಂಡು ಮುದ್ದಣ್ಣನ ನಾಶಕ್ಕೆ ಒಂದುಗೂಡುತ್ತಾರೆ. ಹಳ್ಳಿ ಹಳ್ಳಿಗಳಲ್ಲಿ ದಳವಾಯಿಯ ವಿರುದ್ಧ ಜನಸೇನೆ ಸಿದ್ಧವಾಗುತ್ತದೆ. ರಂಗಪ್ಪನಾಯಕನನ್ನೇ ಪಟ್ಟಕ್ಕೆ ಕೂಡಿಸಬೇಕೆಂದು ಹಠ ತೊಟ್ಟು ಗೌಡರನ್ನೆಲ್ಲ ಕರೆಯಿಸಿ ಪಟ್ಟಗಾಣಿಕೆ ಕೇಳಿದಾಗ ಅವರೆಲ್ಲ ಅದನ್ನು ನಿರಾಕರಿಸುವುದು, ಪಟ್ಟಣ ಶೆಟ್ಟರನ್ನು ಕರೆಯಿಸಿ ಪೀಡಿಸಿ ಕೊಲೆಮಾಡುವುದು. ಇದನ್ನೆಲ್ಲವನ್ನು ಸಹಿಸದ ಜನತೆ ರೋಸಿಹೋಗುತ್ತಾರೆ. ಆದರೂ ರಂಗಪ್ಪನಾಯಕನ ಪಟ್ಟಾಭಿಷೇಕದ ಕಾರ್ಯ ನಡೆಸುವನು. ಕೊನೆಗೆ ಮುದ್ದಣ್ಣನ ಆಪ್ತನಂತಿದ್ದ ದಾಸನಾಯಕನಿಗೂ ಪಶ್ಚಾತ್ತಾಪವಾಗಿ ಮುದ್ದಣ್ಣನ ವಿರುದ್ಧವೇ ಸಂಚು ಹೂಡಿ ಪರಶುರಾಮಪ್ಪ, ಭರಮಣ್ಣನಿಗೆ ಸಹಾಯ ಮಾಡುವನು.ಕೊನೆಗೆ ಗಿರಿಜೆಯ ಸಾಹಸದ ಫಲವಾಗಿ ಗೌಡರೆಲ್ಲ ಒಂದಾಗುತ್ತಾರೆ. ಗಿರಿಜೆಯೇ ಕೊನೆಗೆ ಆತನನ್ನು ಸಂಹರಿಸುತ್ತಾಳೆ.

'ಹೊಸಹಗಲು' ಕಾದಂಬರಿಯ ಮಾಲೆಯಲ್ಲಿ ಐದನೆಯದು. ಮುದ್ದಣ್ಣನ ಸರ್ವಾಧಿಕಾರದ ಕಿಚ್ಚು ಸರ್ಪವನ್ನು ಧ್ವಂಸ ಮಾಡಿದ ಮೇಲೆ ಚಿತ್ರದುರ್ಗದ ಆಡಳಿತದಲ್ಲಿ ಹೊಸರಕ್ತ ಬಂದು ಜನತೆಗೆ ಹೊಸ ಚೈತನ್ಯವನ್ನು ತುಂಬುತ್ತದೆ. ಭರಮಪ್ಪನಾಯಕ ಕುರಿಮಂದೆಯನ್ನು ಕಾಯುತ್ತಿದ್ದರೂ ಸಹ ರಾಜನಾಗಬೇಕೆಂದು ಬಯಸಿದವನು. ದೇಶದ ಬಗೆಗೆ ಅಪಾರ ಪ್ರೀತಿ ಹೊಂದಿದ ಈತನಿಗೆ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ರಾಜಗುರುಗಳಾಗುವರು. ಪರಶುರಾಮಪ್ಪ ಪ್ರಧಾನಿಯಾಗಿ,

ಭರಮಣ್ಣ ದಳವಾಯಿಯಾಗುವನು. ಭರಮಪ್ಪನಾಯಕ ಚಿತ್ರದುರ್ಗದ ಕೀರ್ತಿಯನ್ನು ಓರಿಮೆಯ ಶಿಖರಕ್ಕೆ ಏರಿಸುತ್ತಾನೆ. ಚಿತ್ರದುರ್ಗದ ಕೋಟೆಯ ಕಲ್ಲು ಸಡಿಲಿಸುವ ಪ್ರಯತ್ನಗಳು ನಡೆದಾಗ ಅದನ್ನು ಭರಮಪ್ಪನಾಯಕ ಬುದ್ಧಿವಂತಿಕೆಯಿಂದ ನಿವಾರಿಸುತ್ತಾನೆ.

'ವಿಜಯೋತ್ಸವ' ಕಾದಂಬರಿಯಲ್ಲಿ ಸೀರ್ಯದ ದಿವಾನ ದುರ್ಗವನ್ನು ವಶಪಡಿಸಿಕೊಳ್ಳಬೇಕೆಂದು ನಡೆಸುವ ಹವಣಿಕೆ, ಭರಮಪ್ಪನಾಯಕನ ಧೈರ್ಯ, ಸಾಹಸಗಳು, ಪ್ರಧಾನಿ ಪರಶುರಾಮಪ್ಪನವರ ರಾಜತಂತ್ರ, ದಳವಾಯಿ ಭರಮಣ್ಣನ ವೀರತ್ವ, ಜಾನ್ ಡ್ಯೂವರೋನ ತಾಂತ್ರಿಕ ಸಹಕಾರ, ಮೆಹರ್‌ಬಾನುವಿನ ನಿಷ್ಕಲ್ಮಷ ಹೃದಯ ಇವುಗಳನ್ನೆಲ್ಲ ತ.ರಾ.ಸು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ವಿದೇಶದಿಂದ ಬಂದ ಜಾನ್‌ಡ್ಯೂವರೋ ತಾನು ಮರಾಠರ ಕ್ರೌರ್ಯವನ್ನು ಅನುಭವಿಸಿ ತನ್ನ ಸರ್ವಸ್ವವನ್ನು ಕಳೆದುಕೊಂಡ ವಿಚಾರವನ್ನು ಭರಮಪ್ಪನಾಯಕನಿಗೆ ಹೇಳುತ್ತಾನೆ. ಮರಾಠಾ ಸೈನಿಕರು ತಾವು ಲೂಟಿ ಮಾಡಿದ ನಂತರ ಅಲ್ಲಿ ಏನಾದರೂ ಹೊರಲಾಗದೆ ಉಳಿದಿದ್ದರೆ ಅದಕ್ಕೂ ಬೆಂಕಿ ಹಚ್ಚುವರೆಂಬ ವಿಚಾರ ತಿಳಿಸುವನು. ತಾನು ಅವರ ವಿರುದ್ಧ ಸೇಡು ತೀರಿಸಿಕೊಳ್ಳಲು ಸಹಾಯ ಮಾಡುವಂತೆ ಕೇಳಿಕೊಳ್ಳುವನು. ಅವರಿಬ್ಬರ ಸ್ನೇಹದ ಬಂಧವನ್ನು ಕಾದಂಬರಿಕಾರರು ಅರ್ಥವತ್ತಾಗಿ ನಿರೂಪಿಸಿರುವರು. ಯುದ್ಧಗಳು ಮನುಷ್ಯನನ್ನು ನಾಶಗೊಳಿಸುತ್ತವೆ ಎಂಬ ವಿಚಾರವನ್ನು ಲೇಖಕರು ಮೆಹರ್‌ಬಾನುವಿನ ಬಾಯಲ್ಲಿ ಹೀಗೆ ಹೇಳಿಸುತ್ತಾರೆ. "ಹಾಳಾಗಲಿ, ಈ ಯುದ್ಧ ಮಾರಿ ಹಾಳಾಗಲಿ; ದೇವಾ, ನಿನ್ನ ಸೃಷ್ಟಿಯ ಸೌಂದರ್ಯವೆಲ್ಲವನ್ನೂ ವಿನಾಶಗೊಳಿಸುವ ಸಮರದ ಶನಿಮುಷ್ಟಿಯಿಂದ ಈ ಜಗತ್ತನ್ನು ಮುಕ್ತಗೊಳಿಸು" ಎನ್ನುವಳು.

'ಕಸ್ತೂರಿ ಕಂಕಣ'ದಲ್ಲಿ ಕಸ್ತೂರಿ ರಂಗಪ್ಪನಾಯಕರ ಧೀರೋದಾತ್ತ ಪಾತ್ರಚಿತ್ರಣ ಬಂದರೂ 'ವಿಜಯೋತ್ಸವ'ದ ಬಿಚ್ಚುಗತ್ತಿ ಭರಮಪ್ಪನಾಯಕನಿಗೂ, ಇವನಿಗೂ ಇರುವ ಸಂಬಂಧವೇನು ಎಂಬುದನ್ನು ಕಾದಂಬರಿಕಾರರು ಸ್ಪಷ್ಟಪಡಿಸಿಲ್ಲ. ಈ ಕಾದಂಬರಿಯಲ್ಲಿ ಕಲ್ಪನೆಯೇ ಮೇಲುಗೈಯಾಗಿ ಇತಿಹಾಸದ ಅಂಶ ಬಹಳ ಕಡಿಮೆ ಎನಿಸುತ್ತದೆ. ಕೆಂಚಣ್ಣನಾಯಕನ ಹಾಗೂ ಅವನ ಹೆಂಡತಿ ಹನುಮವ್ವ ನಾಗತಿಯ ಪಾತ್ರಗಳು ಬಹಳ ಉದಾತ್ತವಾಗಿಯೂ, ಉತ್ತಮವಾಗಿಯೂ ಚಿತ್ರಿತವಾಗಿವೆ. ಬ್ರಾಹ್ಮಣಧರ್ಮದ ನಿಷ್ಠೆ ಯಜ್ಞನಾರಾಯಣ ಶಾಸ್ತ್ರಿಯ ಪಾತ್ರದಲ್ಲಿ ಕಾಣುತ್ತೇವೆ. ಆದರೆ ಅದೇ ಬ್ರಾಹ್ಮಣ ಧರ್ಮಕ್ಕೆ ಚಂದ್ರಶೇಖರ ಶಾಸ್ತ್ರೀ ಅಪಚಾರವೆಸಗುವನು. ಸುಳ್ಳು ಜಾತಕ ಸೃಷ್ಟಿಸಿ ಮದುವೆ ನಡೆದು ಹೋಗುವಂತೆ ಮಾಡುವನು. ಲೇಖಕರು ಇಲ್ಲಿ ಮನುಷ್ಯನಿಗಿಂತ ಕೆಟ್ಟಪ್ರಾಣಿ ಬೇರೊಂದಿಲ್ಲ ಎಂದು ಚಂದ್ರಶೇಖರ ಶಾಸ್ತ್ರೀ ಪಾತ್ರದ ಮೂಲಕ ಚಿತ್ರಿಸಿರುವರು. ಚಿತ್ರದುರ್ಗದ ರಕ್ಷಣೆಗಾಗಿ ಕೆಂಚಣ್ಣನಾಯಕ ಬದ್ಧ ಕಂಕಣನಾಗಿ ದುಡಿಯುತ್ತಾನೆ. ಸೀರ್ಯದವರು ದುರ್ಗದ ಮೇಲೆ ದಾಳಿ

ಮಾಡಿದಾಗ ಕಸ್ತೂರಿ ರಂಗಪ್ಪನಾಯಕ ಅವರನ್ನು ಬೀಗರಾದರೂ ಸಹ ಅವರನ್ನು ಹಿಮ್ಮೆಟ್ಟಿಸಿ ಕೆಂಚಣ್ಣನಾಯಕನಿಗೆ ಸಹಾಯ ಮಾಡುವನು. ಇಲ್ಲಿ ಲೇಖಕರು ಸಂಬಂಧಕ್ಕಿಂತ ಸ್ನೇಹಕ್ಕೆ ಪ್ರಾಧಾನ್ಯತೆ ಇರುವುದನ್ನು ಗುರುತಿಸಿದ್ದಾರೆ.

'ದುರ್ಗಾಸ್ತಮಾನ' ಕಾದಂಬರಿಯಲ್ಲಿ ದುರ್ಗದ ಕೊನೆಯ ದೊರೆ ಮದಕರಿನಾಯಕನ ಜೀವನದ ದುರಂತ ಆತನ ಶೌರ್ಯ, ಸಾಹಸ, ಕ್ರೌರ್ಯ, ಕಾಮಲೋಲುಪತೆಯ ವಿಚಾರಗಳ ಕುರಿತು ಚಿತ್ರಿಸಲಾಗಿದೆ. ಜಾನಕಲ್ಲಿನಲ್ಲಿ ತೊದಲು ಭರಮಣ್ಣನಾಯಕ ಮತ್ತು ನಿಂಗವ್ವಳ ಮಗನಾದ ಮದಕರಿ ದುರ್ಗದ ನಾಯಕನಾದ ಚಿತ್ರಣ, ನಾಯಕನಾದ ಮೇಲೆ ದುರ್ಗದ ಸುತ್ತಲಿನ ಶತ್ರುಗಳನ್ನು ಸದೆಬಡೆದ ವಿಚಾರಗಳು, ಹೈದರಾಲಿಗೆ ಮೊದಲು ಸಹಾಯ ಮಾಡಿ ನಂತರ ಆತ ಯಾರನ್ನೂ ನಂಬದ ನವಾಬನೆಂದು ತಿಳಿದ ಮೇಲೆ ಪೇಶ್ವೆಯವರೊಂದಿಗೆ ಸ್ನೇಹ ಮಾಡಿದಾಗ ಹೈದರಾಲಿ ಚಿತ್ರದುರ್ಗದ ಮೇಲೆ ದಾಳಿ ಮಾಡಿ ಮೋಸದಿಂದ ಜಾತಿ ಕಲಹ ಎಬ್ಬಿಸಿ ದುರ್ಗವನ್ನು ವಶಪಡಿಸಿಕೊಂಡ ವಿಚಾರಗಳು, ಮದಕರಿನಾಯಕ ವೀರಸ್ವರ್ಗವೇರಿದ ವಿಷಯಗಳೆಲ್ಲವನ್ನೂ ನಿರೂಪಿಸಿರುವರು. ಅಷ್ಟೇ ಅಲ್ಲದೇ ಪ್ರಧಾನಿಯಾಗಿದ್ದ ಕಳ್ಳಿನರಸಪ್ಪಯ್ಯ ಚಿತ್ರದುರ್ಗಕ್ಕೆ ದ್ರೋಹಮಾಡಿದ ಎಂಬುದು ಜನಜನಿತವಾದ ಮಾತಾಗಿದ್ದರೂ ಸಹ ಲೇಖಕರು ಮಾತ್ರ ಅದು ಸತ್ಯಕ್ಕೆ ದೂರವಾದ ವಿಚಾರಗಳೆಂದೇ ಹೇಳುವರು. ಕಳ್ಳಿನರಸಪ್ಪಯ್ಯ ಚಿತ್ರದುರ್ಗಕ್ಕೆ ದ್ರೋಹ ಬಗೆದ ಎಂಬ ಮಾತಿನ ಸ್ಪಷ್ಟ ಉಲ್ಲೇಖವಿಲ್ಲ ಎಂದಿರುವರು. ದುರ್ಗ ಎಂದರೆ ಮದಕರಿನಾಯಕ, ಮದಕರಿನಾಯಕನೆಂದರೆ ದುರ್ಗವೆಂದು ಹೇಳುವ ತ.ರಾ.ಸು ಮದಕರಿನಾಯಕನ ಅಂತ್ಯವನ್ನು 'ದುರ್ಗಾಸ್ತಮಾನ'ವೆಂದೇ ಕರೆದಿರುವರು.

'ಹಂಸಗೀತೆ' ಕಾದಂಬರಿಯಲ್ಲಿ ತ.ರಾ.ಸು ಇತಿಹಾಸದ ಒಂದು ಎಳೆಯನ್ನು ಹಿಡಿದುಕೊಂಡು ತಮ್ಮ ಕಲ್ಪನಾ ದೃಷ್ಟಿಯಿಂದ ಇಡೀ ಕಾದಂಬರಿಯನ್ನು ಹೆಣೆದಿರುವರು. ವೆಂಕಟಸುಬ್ಬಯ್ಯ ಭೈರವಿ ರಾಗವನ್ನು ಒಲಿಸಿಕೊಂಡ ಬಗೆ ತಾನೊಬ್ಬ ಸಂಗೀತಗಾರನಾಗಬೇಕೆಂದು ಪಟ್ಟ ಪಾಡು, ಗುರುವಾದ ತಿರುಮಲಯ್ಯ ಮತ್ತು ಶಿಷ್ಯನಾದ ವೆಂಕಟಸುಬ್ಬಯ್ಯರ ಮಧ್ಯೆ ನಡೆದ ಸಂಗೀತದ ಸ್ಪರ್ಧೆ, ಮನೆಯಿಂದ ದೂರಾಗಿ ಭೈರಾಗಿಯೊಬ್ಬನ ಹಿಂದೆ ಹೋಗಿ ಭಿಕ್ಷೆ ಬೇಡುವ ಪ್ರಸಂಗ, ಹಿಡಿಂಬೇಶ್ವರ ದೇವಾಲಯದ ಅರ್ಚಕನಾಗಿದ್ದ ವೀರಣ್ಣಜ್ಜನಾಡಿದ ಸುಳ್ಳಿನಿಂದ ಒದಗಿದ ಸತ್ವಪರೀಕ್ಷೆ, ವೆಂಕಟಸುಬ್ಬಯ್ಯ ವೇಶ್ಯೆಯಾದ ಚಂದ್ರಾಸಾನಿಗೋಸ್ಕರ ಎರಡು ರಾಗಗಳನ್ನು ಒತ್ತೆ ಇಟ್ಟ ಪ್ರಸಂಗ, ದುರ್ಗವನ್ನು ವಶಪಡಿಸಿಕೊಂಡ ಹೈದರಾಲಿಯ ಮಗ ಟಿಪ್ಪುವು ವೆಂಕಟಸುಬ್ಬಯ್ಯನಿಗೆ ಆಸ್ಥಾನಕ್ಕೆ ಬಂದು ಹಾಡಲು ಹೇಳಿದಾಗ ಅದನ್ನು ನಿರಾಕರಿಸಿ ಸ್ವಾಮಿನಿಷ್ಠೆಯಿಂದ ತನ್ನ ನಾಲಿಗೆಯನ್ನೇ

ಕತ್ತರಿಸಿಕೊಂಡ ವಿಚಾರ, ವೆಂಕಟಸುಬ್ಬಯ್ಯನಿಗೆ ಬಾಲ್ಯದಿಂದ ಕೊನೆಯವರೆಗೂ ಪ್ರೇರಕಶಕ್ತಿಯಾಗಿ ನಿಂತ ಸೋದರಮಾವನಾದ ಅನಂತಯ್ಯನ ವಿಚಾರಗಳನ್ನು ಸಮಗ್ರವಾಗಿ ನಿರೂಪಿಸಿರುವರು. ಈ ಕಾದಂಬರಿಯಲ್ಲಿ ಬರುವ ಚಂದ್ರಾಸಾನಿ ಕಲ್ಪನೆಯಲ್ಲಿ ಮೂಡಿದ ಹೆಣ್ಣಾದರೂ ಸಹ ಪ್ರೇಮ, ತ್ಯಾಗ, ರಸಿಕತೆಯ ಸುಂದರ ಸಮ್ಮಿಳನ ಇವಳು. ಮನಸ್ಸಿನಲ್ಲಿ ಜೀವಂತ ಹೆಣ್ಣಾಗಿಯೇ ಹೋಗುತ್ತಾಳೆ. ಈ ಪಾತ್ರದ ಮೂಲಕವಾಗಿಯೇ ತ.ರಾ.ಸು ಸೂಳೆ ಎನ್ನುವ ಮಾತಿಗೆ ಬಹಳ ಗೌರವಯುತವಾದ ಅರ್ಥ ಕಲ್ಪಿಸಿದ್ದಾರೆ. ವೆಂಕಟಸುಬ್ಬಯ್ಯನ ಮೇಲಿದ್ದ ಪ್ರೀತಿ, ಭಕ್ತಿಗಳನ್ನು ತೋರಿ, ಅವಳ ರೀತಿ ನೀತಿಗಳನ್ನು ಒಪ್ಪುವಂತೆ ಮಾಡಿದ್ದಾರೆ. ಸಂಗೀತಗಾರನೊಬ್ಬನ ಬಾಳಿನ ಹಂದರದ ಮೇಲೆ ಮತ್ತು ಇಂದಿನ ಸಂಸ್ಕೃತಿಯನ್ನು ವಿಶಿಷ್ಟ ತಂತ್ರದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ತ.ರಾ.ಸು ಅವರು ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳನ್ನಷ್ಟೇ ಅಲ್ಲದೇ ಅಮೋಘವರ್ಷ ನೃಪತುಂಗನನ್ನು ಕುರಿತು **'ನೃಪತುಂಗ'** ಕಾದಂಬರಿಯನ್ನೂ, ಹೊಯ್ಸಳ ವಿಷ್ಣುವರ್ಧನನನ್ನು ಕುರಿತು **'ಸಿಡಿಲ ಮೊಗ್ಗು'** ಮತ್ತು **'ಕೀರ್ತಿನಾರಾಯಣ'** ಕಾದಂಬರಿಗಳನ್ನೂ ಮತ್ತು ಚಾವುಂಡರಾಯನನ್ನು ಕುರಿತು **'ಶಿಲ್ಪಶ್ರೀ'** ಕಾದಂಬರಿಯನ್ನು ರಚಿಸಿದ್ದಾರೆ. ಒಂದು ಸಾವಿರ ವರ್ಷದ ಹಿಂದಿನ ಕರ್ನಾಟಕ, ಭಾರತೀಯ ಚರಿತ್ರೆಯಲ್ಲೆಲ್ಲ ಅಗ್ರಸ್ಥಾನವನ್ನು ಪಡೆದುಕೊಂಡ ನೃಪತುಂಗನ ಆಳ್ವಿಕೆ ಹೇಗಿತ್ತು, ಯುವರಾಜ ಕೃಷ್ಣನ ದಂಗೆಗೆ ಕಾರಣಗಳನ್ನು ಕಥಾರೂಪದಲ್ಲಿ ಚಿತ್ರಿಸಿರುವುದರ ಜೊತೆಗೆ ಉಜ್ವಲಾದೇವಿ, ಲಕ್ಷ್ಮೀ, ಖಾಜಿಸೈಯದ್ ಇಮಾಂ, ವಿಜಯಾದಿತ್ಯ, ಜಯಂತಿ ಎಂಬ ಕಾಲ್ಪನಿಕ ಪಾತ್ರಗಳಿಗೂ ಸಹ ಜೀವಂತಿಕೆಯನ್ನು ತಂದುಕೊಟ್ಟಿರುವರು. ವೆಂಗಿವಳ್ಳಿಯ ವಿಜಯದಿಂದ ಪ್ರಾರಂಭವಾದ ಕತೆ ರಾಜಪುತ್ರನ ಅಂದರೆ ಕೃಷ್ಣನ ಜನನ, ಅವನ ಲಾಲನೆ, ಪಾಲನೆ, ಬಾಲ್ಯದಲ್ಲಿಯ ಅವನ ಉದ್ಧಟತನ, ರಾಣಿ ಲಕ್ಷ್ಮೀದೇವಿಯ ಬಸಿರ ಬಯಕೆಯನ್ನು ತೀರಿಸಲು ನೃಪತುಂಗ ರಾಜ ಆಕೆಯನ್ನು ಬನವಾಸಿಗೆ ಕರೆದುಕೊಂಡು ಹೋಗುವನು. ಈಕೆಯು ಹೆಣ್ಣು ಮಗುವಿಗೆ ಜನ್ಮ ಕೊಟ್ಟ ಸಂದರ್ಭದಲ್ಲಿಯೇ ಈಕೆಯ ಹಿರಿಯ ಮಗಳು ಸಹ ತಾಯಿಯಾಗುವಳು. ಮಗಳನ್ನು ಕಾಣಲು ಹೋದ ಸಂದರ್ಭದಲ್ಲಿ ರಾಣಿ ವಿಧಿವಶಳಾದ ವಿಚಾರ, ಮಿಹಿರಭೋಜನ ದಾಳಿಯನ್ನೆದುರಿಸಲು ಸೇನಾಧಿಪತಿಯನ್ನು ಆರಿಸುವ ವಿಧಾನ, ಶಂಕರಗಣ ಮಂಗಿ ಜಯಂತಿಯರ ಕುತಂತ್ರದಿಂದ ಕೃಷ್ಣ ತಂದೆಯ ಮೇಲೆ ಎದುರು ಬಿದ್ದದ್ದು, ಕೊನೆಗೆ ರಾಜನಿಗೆ ಜಯ ಲಭಿಸಿ ಕೃಷ್ಣ ರಾಜದ್ರೋಹಿ, ಪ್ರಜಾದ್ರೋಹಿ ಎಂದು ತಿಳಿದಾಗ ನೃಪತುಂಗನ ಹೃದಯದಲ್ಲಿ ರಾಜಧರ್ಮ, ಪ್ರಜಾಧರ್ಮ ಮತ್ತು ವಿಶ್ವಧರ್ಮಗಳಿಗೆ ನಡೆದ ಹೋರಾಟ, ಬರಗಾಲದ ಬವಣೆಯನ್ನು ತಪ್ಪಿಸಲು ಕೊಲ್ಲಾಪುರದ ಮಹಾಲಕ್ಷ್ಮೀಗೆ ತನ್ನ ಬೆರಳನ್ನು ನೀಡಿದ ವಿಚಾರಗಳು ಹೀಗೆ ಪ್ರತಿಯೊಂದು ಸನ್ನಿವೇಶ, ಘಟನೆಗಳು ಓದುಗರ ಹೃದಯವನ್ನು ಕರಗಿಸುತ್ತವೆ. ಈ ಕಾದಂಬರಿಯಲ್ಲಿ ಅಂದಿನ ಸಾಮಾಜಿಕ, ರಾಜಕೀಯ

ಜೀವನ ಹೇಗಿತ್ತು ಎಂಬುದರ ಜೊತೆಗೆ ರಾಜನಾದವನ ಕರ್ತವ್ಯ ಎಂತಹದ್ದು ಎಂಬುದನ್ನು ಕಾಣುತ್ತೇವೆ.

ಸಿಡಿಲಮೊಗ್ಗು ಕಾದಂಬರಿಯಲ್ಲಿ ಹೊಯ್ಸಳರು ಚಾಲುಕ್ಯ ವಿಕ್ರಮಾದಿತ್ಯನ ಸಾಮಂತರಾಗಿದ್ದ ವಿಚಾರ, ಚಕ್ರವರ್ತಿ ವಿಕ್ರಮಾದಿತ್ಯನ ಆಜ್ಞೆಯಂತೆ ಬಿಟ್ಟಿಗ, ತಂದೆ ಎರೆಯಂಗ, ತಾತ ವಿನಯಾದಿತ್ಯ, ತಾಯಿ ಏಚಲಾದೇವಿ, ಅಣ್ಣ ಬಲ್ಲಾಳ ಎಲ್ಲರೂ ಬಳ್ಳಿಗಾಮೆಗೆ ಪ್ರಯಾಣ ಮಾಡುತ್ತಾರೆ. ಚಕ್ರವರ್ತಿಯ ಓಲಗದಲ್ಲಿ ಪ್ರಧಾನಿ ಕಾಳಿದಾಸಯ್ಯ ಬಿಟ್ಟಿಗನಿಗೆ ಅಭಿಮಾನ ಭಂಗವಾಗುವ ರೀತಿಯಲ್ಲಿ ಮಾತನಾಡಿದಾಗ ಅದಕ್ಕೆ ಪ್ರತಿ ಮಾತನಾಡುವನು. ತನ್ನ ತಂದೆ ಮತ್ತು ತಾತ ಚಕ್ರವರ್ತಿಯ ಮುಂದೆ ನಡುಬಗ್ಗಿಸಿ ನಮಸ್ಕರಿಸುವುದನ್ನು ಕಂಡ ವಿಷ್ಣುವರ್ಧನ ತಾನು ಕೂಡ ಯಾರ ಮುಂದೆಯೂ ತಲೆಬಾಗಿಸದ ಚಕ್ರವರ್ತಿಯೇ ಆಗಬೇಕೆಂದು ನಿರ್ಧರಿಸುವನು. ಇವನ ನಡವಳಿಕೆಯಿಂದ ಅಪಮಾನಿತರಾದ ತಾತ ಮತ್ತು ತಂದೆ ಗಂಗವಾಡಿಯ ಮಂಡಲಾಧಿಪತ್ಯವನ್ನು ಕಳೆದುಕೊಳ್ಳುವರು. ಆದರೂ ನಿರಾಶನಾಗದ ವಿಷ್ಣುವರ್ಧನ ತಾನು ಅಂದುಕೊಂಡಂತೆ ಸಾಧಿಸಿದ ವಿಚಾರಗಳನ್ನು ಕೀರ್ತಿನಾರಾಯಣದಲ್ಲಿ ವಿವರಿಸಿರುವರು.

ಶಿಲ್ಪಶ್ರೀ ಕಾದಂಬರಿಯಲ್ಲಿ ಚಾವುಂಡರಾಯನ ಚರಿತ್ರೆಯೊಂದಿಗೆ ಶ್ರವಣಬೆಳುಗೊಳದಲ್ಲಿ ನಿರ್ಮಾಣಗೊಂಡ ಭವ್ಯ ಕಲಾಕೃತಿ ಗೊಮ್ಮಟೇಶ್ವರನ ಉದಯದ ಕುರಿತು ರಚಿಸಲಾದ ಐತಿಹಾಸಿಕ ಕಾದಂಬರಿಯ ರಸವು ಮಡುಗಟ್ಟಿ ನಿಂತಿದೆ. ಚಾವುಂಡರಾಯನ ವ್ಯಕ್ತಿತ್ವ ಅತ್ಯಂತ ಸ್ಫುಟವಾಗಿ ಮೂಡಿ ಬಂದಿದೆ. ಚಾವುಂಡರಾಯನ ವೈರಾಗ್ಯ ಮನೋಭಾವನೆಯೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಈ ಕಾದಂಬರಿಯಲ್ಲಿ ಪಂಪನು ತನ್ನನ್ನು ನೋಡಲು ಬಂದ ಚಾವುಂಡರಾಯನಿಗೆ ಜಿನಧರ್ಮವನ್ನು ಪಾಲಿಸುವಂತೆ ಬೋಧಿಸಿ ಆಶೀರ್ವದಿಸುವುದು ಚಾವುಂಡರಾಯನ ಜೀವನದಲ್ಲಿ ಬಹುಮುಖ್ಯ ಘಟನೆ ಎಂಬಂತೆ ತ.ರಾ.ಸು ಅವರು ವರ್ಣಿಸಿದ್ದಾರೆ. ಭರತ ಬಾಹುಬಲಿಗಳ ಯುದ್ಧ ರಾಷ್ಟ್ರಕೂಟ ಗಂಗರ ಪ್ರಾರಂಭದ ವೈರ, ತರುವಾಯದ ಮೈತ್ರಿ; ರನ್ನ ಚಾವುಂಡರಾಯನ ಆಶ್ರಯ ಪಡೆದುದು ಈ ಎಲ್ಲ ವಿಚಾರಗಳನ್ನು ಸೊಗಸಾಗಿ ಚಿತ್ರಿಸಿರುವರು. ಈ ಕಾದಂಬರಿಯಲ್ಲಿ ತ.ರಾ.ಸು ಮಾಡಿಕೊಂಡಿರುವ ಬದಲಾವಣೆಯೆಂದರೆ ಚಾವುಂಡರಾಯನು ಸ್ವತಃ ಪುರಾಣ ರಚಿಸಿದ್ದು ಅಜಿತಸೇನ ಭಟ್ಟಾರಕರ ಶಿಷ್ಯನಾಗಿ ಆದರೆ ನೇಮಿಚಂದ್ರರ ಆಶೀರ್ವಾದ ಮೂಲಕ ಎಂಬುದು. ಇದು ಚಾರಿತ್ರಿಕ ಸತ್ಯವಲ್ಲ. ಕಾದಂಬರಿಗೆ ತಕ್ಕ ಹಾಗೆ ಲೇಖಕ ಮಾರ್ಪಾಟು ಮಾಡಿಕೊಂಡಿರುವರು. ಗೊಮ್ಮಟ ಮೂರ್ತಿಯ ನಿರ್ಮಾಣವೇ ಈ ಕಾದಂಬರಿಯ ಮುಖ್ಯ ಉದ್ದೇಶವಾಗಿರುವುದರಿಂದ ಕಾಲ್ಪನಿಕ ವ್ಯಕ್ತಿ ಭರತೋಜನ ಮೂಲಕ ಮಾಡಿಸಿರುವರು. ಪೌದನಪುರದಲ್ಲಿ ಬಾಹುಬಲಿಯ

ವಿಗ್ರಹವನ್ನು ಮೊದಲು ಮಾಡಿಸಿದ ವ್ಯಕ್ತಿ ಭರತ ಚಕ್ರವರ್ತಿ. ಆ ಭರತ ಚಕ್ರವರ್ತಿಯ ಅಂಶವೇ ಚಾವುಂಡರಾಯನ ಮುಂದೆ ಭರತೋಜನಾಗಿ ಭವ್ಯ ಕಲಾಕೃತಿಯನ್ನು ನಿರ್ಮಿಸಿ ಮಾಯವಾಗಿದೆ. ಚಾವುಂಡರಾಯನೇ ಬಾಹುಬಲಿ ಮೂರ್ತಿಗೆ ಮಹಾಮಸ್ತಕಾಭಿಷೇಕ ಮಾಡಿಸುವನು. ಕಾದಂಬರಿಯ ಗುರಿ ಚಾವುಂಡರಾಯನ ವ್ಯಕ್ತಿತ್ವವನ್ನು ಪುನರ್‌ಲೇಖದ ಸ್ವರೂಪದಲ್ಲಿ ರಚಿಸುವುದಾಗಿದೆ. ಇಲ್ಲಿ ಪಂಪ ರನ್ನರ ಕಾವ್ಯಭಾಗಗಳನ್ನು ಅತಿಯಾಗಿ ತುಂಬಿದ್ದಾರೆ. ಆದರೆ ಚಾವುಂಡರಾಯನ ವ್ಯಕ್ತಿತ್ವ ಸ್ಫುಟವಾಗಿ ಮೂಡಿಬಂದಿದೆ.

ಬಸವರಾಜ ಕಟ್ಟೀಮನಿಯವರು **'ಸ್ವಾತಂತ್ರ್ಯದೆಡೆಗೆ'** ಕಾದಂಬರಿಯಲ್ಲಿ ಸ್ವಾತಂತ್ರ್ಯ ಹೋರಾಟದ ಸೂಚನೆ, ಸುಳಿವು ಕೊಡುತ್ತಾರೆ. ಚಿಕ್ಕಮಕ್ಕಳಲ್ಲಿಯೂ ರಾಷ್ಟ್ರೀಯ ಪ್ರಜ್ಞೆ ಮೂಡಿಸುವ ಕಾದಂಬರಿ ಇದಾಗಿದ್ದು ಪ್ರಗತಿಪರ ಆಶಯಗಳನ್ನು ಬಿತ್ತರಿಸುತ್ತದೆ. ಅಜ್ಞಾನ, ಅನಾಚಾರ ಮತ್ತು ಬಡತನಗಳಿಂದ ದೇಶ ಬಿಡುಗಡೆ ಹೊಂದಿ ರಾಮರಾಜ್ಯವಾಗಬೇಕು ಎಂಬ ಗಾಂಧೀಜಿಯವರ ಕನಸನ್ನು ಕಟ್ಟೀಮನಿಯವರು ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಮಂಡಿಸಿದ್ದಾರೆ. ಇಲ್ಲಿ ವಸಾಹತುಶಾಹಿಯ ಆಡಳಿತ ಅವರ ವಿರುದ್ಧ ನಡೆದ ಹೋರಾಟಗಳನ್ನು ಹೇಳುತ್ತ 'ನಮ್ಮ ಜನರಿಗೆ ಹೊಟ್ಟೆ ತುಂಬ ಅನ್ನವಿಲ್ಲ. ನಮ್ಮ ಮಕ್ಕಳಿಗೆ ಮೈ ಮುಚ್ಚಿಕೊಳ್ಳಲು ಬಟ್ಟೆಯಿಲ್ಲ. ನಮ್ಮ ಅನ್ನ ಬಟ್ಟೆ ಎಲ್ಲವನ್ನೂ ಈ ಪರದೇಶಿ ಸರಕಾರ ಸೆಳೆದೊಯ್ಯುತ್ತಿದೆ. ನಮ್ಮ ನಾಡಿನಲ್ಲೇ ನಮಗೆ ಉಪವಾಸ, ಅವರಿಗೆ ಮೇಜುವಾನಿ ಎಂಥ ಹೀನ ಬಾಳು ನಮ್ಮದು?'[೩೪] (ಬಸವರಾಜ ಕಟ್ಟೀಮನಿ, ೨೦೧೧, ಸ್ವಾತಂತ್ರ್ಯದೆಡೆಗೆ, ಪುಟ–೧೫೨) ಕಾದಂಬರಿಯ ಆರಂಭದಲ್ಲಿಯೇ ಬರುವ ಈ ಮಾತುಗಳು ವಸಾಹತುಶಾಹಿಯ ದುರಾಡಳಿ ಹಾಗೂ ಅದರ ಪರಿಣಾಮವಾಗಿ ಬೆಳೆದ ವರ್ಗವೈರುಧ್ಯದ ಕುರಿತು ಹೇಳುವರು. ದೇಶದಲ್ಲಿ ಆರ್ಥಿಕ ಸಮಾನತೆ ಲಭಿಸಬೇಕೆಂಬ ಆಶಯ ವ್ಯಕ್ತಪಡಿಸುವರು. ಇದರ ಜೊತೆಗೆ ಹಳ್ಳಿಯ ದಾರುಣ ಚಿತ್ರ, ದಲಿತ ಕೇರಿಯ ವಿಕೃತ ಬದುಕು, ಅಲ್ಲಿ ನಿರಂತರವಾಗಿ ನಡೆಯುವ ಶೋಷಣೆ, ಶ್ರೀಮಂತರು, ಅಧಿಕಾರಿಶಾಹಿಗಳು ಬ್ರಿಟೀಷರೊಂದಿಗೆ ಶಾಮೀಲಾಗಿ ನಡೆಸುವ ದೌರ್ಜನ್ಯದ ಚಿತ್ರಣಗಳನ್ನು ಒಟ್ಟಾರೆಯಾಗಿ ಅಂದಿನ ಭಾರತದ ವಾಸ್ತವ ಸ್ಥಿತಿಯನ್ನು ಚಿತ್ರಿಸಿರುವರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಚಿತ್ರಣವನ್ನು ನೀಡುವ **'ಮಾಡಿ ಮಡಿದವರು'** ಕಾದಂಬರಿಯಲ್ಲಿ ವಸಾಹತುಶಾಹಿ ಆಡಳಿತ ವಿರುದ್ಧ ಧ್ವನಿಯೆತ್ತಿದೆ. ಈ ಕಾದಂಬರಿಗೆ ಕ್ವಿಟ್ ಇಂಡಿಯಾ ಚಳುವಳಿಯೇ ವಸ್ತು. ಇದು ಸ್ವಾತಂತ್ರ್ಯದೆಡೆಗೆ ಕೃತಿಯ ಮುಂದಿನ ಭಾಗ ಎನ್ನುವಷ್ಟರ ಮಟ್ಟಿಗೆ ಚಿತ್ರಿತವಾಗಿದೆ. ಶೇಖರ ಅವನ ಬೆಂಬಲಿಗರ ಕೆಚ್ಚೆದೆಯ ಹೋರಾಟ ಹಾಗೂ ಸ್ವಾತಂತ್ರ್ಯಕ್ಕಾಗಿ ಅವರು ಮಾಡಿ ಮಡಿದ ರೀತಿ ಮುಂತಾದ ಅಂಶಗಳನ್ನು ಕಾಣುತ್ತೇವೆ. 'ಮಾಡು ಇಲ್ಲವೇ ಮಡಿ'

ಎಂಬ ಗಾಂಧೀಜಿಯವರ ಕರೆಯನ್ನೇ ತಮ್ಮ ಉಸಿರನ್ನಾಗಿ ಮಾಡಿಕೊಂಡು, ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ಅಪ್ರತಿಮ ವೀರರ ವಾಸ್ತವಕತೆಯಿದೆ. ಈ ಹೋರಾಟದಲ್ಲಿ ರಾಷ್ಟ್ರೀಯ ಮುಖಂಡರು ಮಾತ್ರವಲ್ಲದೆ ವಕೀಲರು, ಶಿಕ್ಷಕರು, ಯೋಧರು, ರೈತರು, ಸಾಮಾನ್ಯ ಜನರೂ ಸಹ ಪಾಲ್ಗೊಂಡು ಬ್ರಿಟೀಷರ ವಿರುದ್ಧ ಸೆಟೆದು ನಿಂತರು. ಹಳ್ಳಿಯ ಮುದುಕ ಮುದುಕಿಯರಲ್ಲೂ ಮಿಂಚಿದ ಸ್ವಾತಂತ್ರ್ಯದ ಕೆಚ್ಚು, ಜಾತಿ ಮತಗಳನ್ನೆಣಿಸದ ರಾಷ್ಟ್ರೀಯ ಭಾವೈಕ್ಯತೆಯ ಅಂಶಗಳನ್ನು ಕಾಣುತ್ತೇವೆ. ಇಲ್ಲಿ ದೇಶದ್ರೋಹಿಗಳ ಕುಕೃತ್ಯವನ್ನು ಬಯಲಿಗೆಳೆದು ಬ್ರಿಟೀಷರ ಗುಲಾಮರಾಗಿ ಅವರು ಎಸೆಯುವ ಎಂಜಲು ಕಾಸಿಗಾಗಿ ಹೋರಾಟಗಾರರ ಸುಳಿವು ತಿಳಿಸುವ, ಪದವಿ, ಪ್ರಶಸ್ತಿ, ಇನಾಮುಗಳಿಗೆ ಕೈಚಾಚುವ, ಯೋಧರಂತೆ ನಟಿಸಿ ನಿಜವಾದ ಹೋರಾಟಗಾರರಿಗೆ ಮೋಸ ಮಾಡುವ ದೇಶದ್ರೋಹಿಗಳನ್ನು ಲೇಖಕರು ವಾಸ್ತವವಾಗಿ ಚಿತ್ರಿಸಿರುವರು.

ರಾಷ್ಟ್ರೀಯತೆಯ ಕಲ್ಪನೆ ಮೂಡಿಸುವ ಈ ಎರಡೂ ಕಾದಂಬರಿಗಳ ಮುಖ್ಯ ತುಡಿತವೆಂದರೆ ಭಾರತದ ಬಂಧ ವಿಮೋಚನೆ, ವಸಾಹತುಶಾಹಿ ಆಡಳಿತ ಕೊನೆಗೊಂಡು, ದೇಶ ಸ್ವತಂತ್ರವಾಗಿ ಪ್ರತಿಯೊಬ್ಬರೂ ಸಮಾನತೆಯಿಂದ ಬದುಕಬೇಕೆಂಬ ಅಭಿಲಾಷೆ ಇರುವುದು.

ನರಗುಂದದ ಇತಿಹಾಸವನ್ನು ಕುರಿತ ಕಟ್ಟೀಮನಿಯವರ ಕಾದಂಬರಿ **'ನರಗುಂದ ಬಂಡಾಯ'** ಅಥವಾ **'ಸಮರಭೂಮಿ'** ಇದು ಇತಿಹಾಸ ಪ್ರಸಿದ್ಧವಾದ ೧೮೫೭ ರ ನರಗುಂದ ಬಂಡಾಯವನ್ನು ಚಾರಿತ್ರಿಕ ಅಂಶಗಳೊಡನೆ ಕಲ್ಪನೆಯನ್ನು ಬೆರೆಸಿಕೊಂಡು ಚಿತ್ರಿತವಾದ ಕೃತಿ. ಆಂಗ್ಲರು ಭಾರತದ ವಿರುದ್ಧ ಬಂಡು ಹೂಡಿದಾಗ ನರಗುಂದದ ರಾಜನು ಯುದ್ಧ ಮಾಡುವ ಸನ್ನಾಹ ಮಾಡುತ್ತಾನೆ. ಕಂಪನಿ ಸರ್ಕಾರವು ಮಕ್ಕಳಿರದ ಭಾಸ್ಕರರಾಯನಿಗೆ ದತ್ತು ಸ್ವೀಕಾರಕ್ಕೆ ಅನುಮತಿ ಕೊಡದೆ ಹೋದಾಗ ಆಂಗ್ಲರ ವಿರುದ್ಧ ಬಂಡೇಳುತ್ತಾನೆ. ರಾಜನಾದ ಬಾಬಾಸಾಹೇಬನಿಗೆ ಉಳಿದ ರಾಜರಾರು ಸಹಾಯ ಮಾಡದಾದಾಗ ರಾಜ ಭಾಸ್ಕರರಾಯ ಹೋರಾಡಲಾಗದೇ ಅವರ ಕೈಯಲ್ಲೇ ಗಲ್ಲಿಗೇರುವ ವಸ್ತುಸ್ಥಿತಿ ಈ ಕಾದಂಬರಿಯದು. ಈ ಕಾದಂಬರಿಯಲ್ಲಿ ರಾಜನ ತಾಯಿ ಮತ್ತು ಪತ್ನಿ ಮಲಪ್ರಭೆಗೆ ಹಾರಿ ಪ್ರಾಣ ಕಳೆದುಕೊಳ್ಳುವ ಸನ್ನಿವೇಶ ಓದುಗರಲ್ಲಿ ಮರುಕವನ್ನುಂಟು ಮಾಡುತ್ತದೆ.

'ಪೌರುಷ ಪರೀಕ್ಷೆ' ಬಸವರಾಜ ಕಟ್ಟೀಮನಿಯವರ ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಕಾದಂಬರಿ. ಕಿತ್ತೂರಿನ ಪೂರ್ವ ಇತಿಹಾಸವನ್ನು ಚಿತ್ರಿಸುವುದೇ ಕಾದಂಬರಿಯ ಮೂಲ ಧೋರಣೆಯಾಗಿದೆ. ಇದೊಂದು ಕ್ರಿಯಾಪ್ರಧಾನ ಕಾದಂಬರಿಯಾಗಿದ್ದು 'ದೊರೆಯಾದವನು ಮಲಗಿದರೆ ಅವನ ರಾಜ್ಯವೂ ಮಲಗುತ್ತದೆ' ಎಂಬ ರಾಜನೀತಿಯ ಹಿನ್ನೆಲೆಯಲ್ಲಿ ಪರಾಕ್ರಮ

ತೋರುವ ಮಲ್ಲಸರ್ಜನ ಪಾತ್ರ ಗಟ್ಟಿಯಾಗಿ ಚಿತ್ರಿತವಾಗಿದೆ. ಮಲ್ಲಸರ್ಜ ದೊರೆ ಟಿಪ್ಪುಸುಲ್ತಾನನ ಸೆರೆಯಿಂದ ಪಾರಾಗಿ ಬಂದು ಪುನಃ ರಾಜ್ಯ ಪಡೆದುದೆ ಇದರ ಮುಖ್ಯ ವಸ್ತುವಾಗಿದೆ. ಈ ಕಾದಂಬರಿಯಲ್ಲಿ ದಿವಾನನೊಬ್ಬನ ಬೇಜವಾಬ್ದಾರಿಯಿಂದ ನಡೆದ ಅನಾಹುತ, ರಾಜನಾದವನು ಸ್ವಂತ ವಿವೇಚನೆಯಿಲ್ಲದೆ ಬೇರೆಯವರ ನಿರ್ಣಯದಂತೆ ನಡೆದುಕೊಂಡಾಗ ಸಂಭವಿಸುವ ವಿಪತ್ತು ಈ ಅಂಶಗಳನ್ನು ಅಮೂಲಾಗ್ರವಾಗಿ ಚಿತ್ರಿಸಿರುವರು. ಇದರಲ್ಲಿ ಮಡಿವಾಳನೆಂಬ ಕಾಲ್ಪನಿಕ ಪಾತ್ರ ಎಲ್ಲರ ಗಮನ ಸೆಳೆಯುವುದು. ಈ ಪಾತ್ರವನ್ನು ತುಸು ಎತ್ತರದ ಮಟ್ಟದಲ್ಲಿಯೇ ತೋರಿಸುವರು. ಸಾಮಾನ್ಯ ಜನತೆಯಲ್ಲಿದ್ದ ಅಪ್ರತಿಮ ಗುಣಗಳನ್ನು ಎತ್ತಿ ತೋರಿಸುತ್ತ ಈ ಪಾತ್ರಕ್ಕೆ ಉನ್ನತ ಸ್ಥಾನ ಕೊಟ್ಟಿರುವುದು ಲೇಖಕರ ಪ್ರಗತಿಪರ ಧ್ಯೇಯದ ಪ್ರತೀಕದಂತಿರುವುದು.

'ಸಂಗೊಳ್ಳಿ ರಾಯನಾಯಕ' ಕಾದಂಬರಿಯಲ್ಲಿ ಕಲ್ಪನೆಯಿದ್ದರೂ ಸತ್ಯಕ್ಕೆ ಸಮೀಪವಾದ ಹೃದಯಭೇದಕ ಸನ್ನಿವೇಶಗಳಿಂದ, ರಾಯಣ್ಣನ ವ್ಯಕ್ತಿತ್ವ ಧೀಮಂತವಾಗಿದೆ. ಈತ ರಾಜಮನೆತನದವನಲ್ಲ ಆದರೆ ರಾಜಮನೆತನಕ್ಕೆ ನಿಷ್ಠನಾಗಿ ಬ್ರಿಟೀಷರ ವಿರುದ್ಧ ಹೋರಾಡಿ ಪ್ರಾಣತೆತ್ತ ಅಸಾಮಾನ್ಯ ಪೌರುಷವಂತ. ರಾಯಣ್ಣನ ಸ್ನೇಹಿತರಾದ ಬಿಚ್ಚುಗತ್ತಿ ಚೆನ್ನಬಸಪ್ಪ ಅವರಾದಿ ವೀರಪ್ಪ, ಚೆನ್ನಮ್ಮನ ಆಪ್ತ ಸೇವಕಿ ಪಾರ್ವತಿ ಮುಂತಾದವರಲ್ಲದೆ ದೇಶದ್ರೋಹಿಗಳೆನಿಸಿದ ಖೋದಾನಪುರದ ಲಿಂಗನಗೌಡ, ನೇಗಿನಹಾಳ ವೆಂಕನಗೌಡರ ಆತ್ಮ ಚರಿತ್ರೆಗಳೇ ಕಾದಂಬರಿಯ ಬೆಳವಣಿಗೆಯ ಪ್ರಮುಖ ವೈಶಿಷ್ಟ್ಯವೆನಿಸಿದೆ. ರಾಯಣ್ಣನ ಕೌಟುಂಬಿಕ ಪರಿಸರದ ಸ್ಥಿತಿಗತಿ, ದೇಶಪ್ರೇಮ, ಸ್ವಾಮಿನಿಷ್ಠೆ, ಸ್ವಾತಂತ್ರ್ಯದ ಹಂಬಲಗಳೂ ಒಡಮೂಡಿವೆ. ಇಲ್ಲಿ ವಸಾಹತುಶಾಹಿ ಮತ್ತು ಸಾಮಾನ್ಯ ಜನರ ನಡುವೆ ನಡೆದ ಸಂಘರ್ಷವನ್ನು ಚಿತ್ರಿಸುವುದರ ಜೊತೆಗೆ, ಮೇಲ್ವರ್ಗದವರುಜನ ಪ್ರಜ್ಞಾವಂತರಾದರೆ ತಮ್ಮ ಗತಿ ಏನಾಗಬಹುದೆಂದು ಚಿಂತಿಸಿ, ಸಾಮಾನ್ಯರಿಗೆ ಶಿಕ್ಷಣ ಕೊಡಲಿಲ್ಲವೆಂದು ಕಾಣುತ್ತದೆ. ಹೋರಾಟಗಾರರ ಬಡತನ, ಹಸಿವು, ಮೇಲ್ವರ್ಗದವರಿಂದ ಅವರು ಪಡುತ್ತಿದ್ದ ಯಾತನೆಗಳನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಬ್ರಿಟೀಷರ ಪರವಾಗಿದ್ದ ಕುಲಕರ್ಣಿ, ಅಮಲ್ದಾರರಂತವರೇ ಜನರ ರಕ್ತ ಹೀರುವ ರಾಕ್ಷಸರಾಗಿ ಮೆರೆದದ್ದು ಆದರೂ ಸಾಮಾನ್ಯರು ಅವರ ದುಷ್ಕೃತ್ಯಗಳನ್ನು ಅನಿವಾರ್ಯವಾಗಿ ಸಹಿಸಿಕೊಂಡ ಅಂಶಗಳನ್ನು ಲೇಖಕರು ಚಿತ್ರಿಸಿದ್ದಾರೆ.

ಈ ಮೂರು ಕಾದಂಬರಿಗಳಲ್ಲಿ ವಸಾಹತುಶಾಹಿಯ ದೌರ್ಜನ್ಯ ಮತ್ತು ದುರಾಡಳಿತಕ್ಕೆ ಪ್ರತಿಭಟಿಸಿ ದೇಶೀಯ ಸಂಸ್ಥಾನಿಕರು ನಡೆಸಿದ ಹೋರಾಟದ ಘಟನೆಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಿದ್ದಾರೆ. ಎಂದಿಗೂ ಪ್ರಭುತ್ವ ಪರವಾದ ನಿಲುವನ್ನು ತಾಳದ ಲೇಖಕರು

ಜನಸಾಮಾನ್ಯರ ಹೋರಾಟಕ್ಕೆ ಪ್ರಾತಿನಿಧ್ಯತೆ ಕಲ್ಪಿಸಿಕೊಟ್ಟಿದ್ದಾರೆ. ಹೀಗಾಗಿ ಅನೇಕ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿಕೊಂಡು ಅಂದಿನ ಸಾಮಾಜಿಕ ಬದುಕನ್ನು ಚಿತ್ರಿಸಿರುವರು.

ನಿರಂಜನರ **'ಚಿರಸ್ಮರಣೆ'** ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ಕಯ್ಯೂರಿನಲ್ಲಿ ನಡೆದ ರೈತ ಚಳುವಳಿಯನ್ನು ಅದರ ಹುಟ್ಟು, ಬೆಳವಣಿಗೆಗಳಲ್ಲಿ ಸೆರೆಹಿಡಿದಿದೆ. ಕಯ್ಯೂರು ದೇಶದ ನಕಾಶೆಯಲ್ಲಿ ಕುಗ್ರಾಮ. ಭಾರತ ಭೂಮಿಯ ಸಹಸ್ರ ಸಹಸ್ರ ಹಳ್ಳಿಗಳಲ್ಲೊಂದು. ಇದು ಭಾರತದ ಕರಿನಾಡು ಕೇರಳದಲ್ಲಿದೆ. ಆದರೆ ಲೇಖಕರ ಪಾಲಿಗೆ ಅದೊಂದು ಮಹಾನಗರ. ಅಲ್ಲಿನ ರೈತ ಹೋರಾಟದ ಚಿತ್ರಣವನ್ನು ಕಣ್ಮುಂದೆ ಕಟ್ಟುವ ರೀತಿಯಲ್ಲಿ ಚಿತ್ರಿಸಿರುತ್ತಾರೆ. ಅಪ್ಪು, ಚಿರಕುಂಡ ಕ್ರಾಂತಿಕಾರರು. ತಮ್ಮನ್ನು ಪೂರ್ಣವಾಗಿ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಶಾಲಾ ಮಾಸ್ತರರೊಬ್ಬರಿಂದ ಹೊಸ ವಿಚಾರಗಳ ಶಿಕ್ಷಣ, ಅಲ್ಲಿಯ ಗ್ರಾಮಸ್ಥರಿಗೆ ಜಮೀನ್ದಾರರ ಶೋಷಣೆಗೆ ತುತ್ತಾಗಿ ಹಲವು ಹತ್ತು ಸಮಸ್ಯೆಗಳ ವಿಷವರ್ತುಲದಲ್ಲಿ ಸಿಕ್ಕ ಗ್ರಾಮಸ್ಥರು ಒಟ್ಟಾಗಿ ರೈತ ಸಂಘವೊಂದನ್ನು ಸ್ಥಾಪಿಸಿಕೊಳ್ಳುವಷ್ಟು ಪ್ರಭಾವ ಬೀರುವ, ಮಾರ್ಗದರ್ಶನ ತೋರುವ ಪರಿಯನ್ನು ಕಾದಂಬರಿ ದಟ್ಟವಾಗಿ ಚಿತ್ರಿಸುತ್ತದೆ.

'ಕಲ್ಯಾಣಸ್ವಾಮಿ' ಮತ್ತು **'ಸ್ವಾಮಿ ಅಪರಂಪಾರ'** ಕಾದಂಬರಿಗಳಲ್ಲಿ ಕೊಡಗಿನ ಬಂಡಾಯದ ಕಥೆಯನ್ನು ಕಾಣುತ್ತೇವೆ. ಕೊಡಗಿನ ರಾಜನ ಜೊತೆ ಇಂಗ್ಲೀಷರು ಸ್ನೇಹ ಸಂಪಾದನೆ ಮಾಡಿಕೊಂಡು ಟೀಪ್ಪುವನ್ನು ಸೋಲಿಸಿದ ಮೇಲೆ ಆತನ ವಿರುದ್ಧವೇ ತಿರುಗಿ ಬಿದ್ದು ಚಿಕವೀರರಾಜೇಂದ್ರನನ್ನು ಕೊಡಗಿನಿಂದಲೇ ಹೊರಹಾಕಿದ ಸಂದರ್ಭದಲ್ಲಿ ಕೊಡಗನ್ನು ಮತ್ತೆ ವಶಪಡಿಸಿಕೊಳ್ಳಲು ನಡೆದ ಹೋರಾಟದ ಕಥೆಯೇ ಈ ಕಾದಂಬರಿಯ ವಸ್ತುವಾಗಿದೆ. ಇಲ್ಲಿ ಪುಟ್ಟಬಸವನೆಂಬುವನು ತಾನೇ ಕಲ್ಯಾಣಸ್ವಾಮಿ ಎಂದು ಹೇಳಿಕೊಂಡು ತಾನು ಕೊಡಗಿನ ರಾಜವಂಶಕ್ಕೆ ಸೇರಿದವನು ಎಂದು ಜನರಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿ ಬಂಧಿತನಾದನು. ಕೊನೆಗೆ ಕಲ್ಯಾಣಸ್ವಾಮಿಯನ್ನು ಸೆರೆಹಿಡಿದು ಗಲ್ಲಿಗೇರಿಸಲಾಯಿತು. ಕೊಡಗಿನ ಅರಸು ವಂಶದ ವೀರಪ್ಪಾಜಿಯೇ ಸ್ವಾಮಿ ಅಪರಂಪಾರನಾಗಿ ಕೊಡಗಿನ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದ ಚಿತ್ರಣವೇ 'ಸ್ವಾಮಿ ಅಪರಂಪಾರ' ಕಾದಂಬರಿಯ ಕಥಾವಸ್ತು. ಸ್ವತಂತ್ರ ರಾಜ್ಯವಾಗಿದ್ದ ಕೊಡಗಿನ ಅರಸ ಚಿಕವೀರರಾಜೇಂದ್ರನನ್ನು ಆಂಗ್ಲರು ಪದಚ್ಯುತಗೊಳಿಸಿದ್ದು, ನಷ್ಟವಾದ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಅಪರಂಪಾರನ ನಾಯಕತ್ವದಲ್ಲಿ ನಡೆದ ಯತ್ನ, ಅನಂತರ ಹೃದಯ ವಿದ್ರಾವಕ ಘಟನೆಗಳು ಹೀಗೆ ಕ್ರಿಶ ೧೮೩೦ ರಿಂದ ೧೮೭೦ ರ ವರೆಗಿನ ಐದು ದಶಕಗಳ ಕಾಲಾವಧಿಯ ಒಂದು ಕಥೆ ಇಲ್ಲಿದೆ.

'ಮೃತ್ಯುಂಜಯ' ಇವರ ಇನ್ನೊಂದು ಪ್ರಮುಖ ಐತಿಹಾಸಿಕ ಕಾದಂಬರಿ. ಇತಿಹಾಸವನ್ನು ಕೇವಲ ರಾಜ ಮಹಾರಾಜರ ದೃಷ್ಟಿಯಿಂದ ನೋಡದೆ ಜನಸಾಮಾನ್ಯರ ದೃಷ್ಟಿಯಿಂದ ನೋಡಿರುವುದು ಇಲ್ಲಿಯ ವೈಶಿಷ್ಟ್ಯ. ತಮ್ಮ ಸಮಕಾಲೀನ ತಾತ್ವಿಕ ಧೋರಣೆ, ರಾಜಕೀಯ ಒಳನೋಟದ ಮೂಲಕ ಸುಮಾರು ೪,೫೦೦ ವರ್ಷಗಳಷ್ಟು ಹಿಂದೆ ಅಂದರೆ ಗತಕಾಲೀನ ಸಮಾಜವೊಂದರ ರಾಜಕೀಯ ಸ್ಥಿತಿಗಳ ವಿಶ್ಲೇಷಣೆ ನಡೆದಿರುವುದನ್ನು ಕಾಣುತ್ತೇವೆ. ಅದು ಈಜಿಪ್ತಿನ ಬಹು ಜನ ಸಮುದಾಯವೇ ಗುಲಾಮ ಜೀವನ ನಡೆಸುತ್ತಿದ್ದ ಕಾಲ. ಆಗ ನಡೆದ ಬಂಡಾಯ ಮಾನವ ನಾಗರಿಕತೆಯ ಇತಿಹಾಸದಲ್ಲೇ ಪ್ರಥಮ. ರೈತರ ದಂಗೆ, ರಾಜ ಮತ್ತು ಧರ್ಮಗುರುಗಳ ನಡುವಿನ ಸಂಘರ್ಷ, ಆಳುವ ವರ್ಗದ ಬಳಗ ಪರಸ್ಪರ ದ್ವೇಷ, ಮತ್ಸರ ಫಲವಾಗಿ ಸಂದೇಹ, ಶೋಷಣೆ ಕಂಡು ಬಂದಾಗ ಎಲ್ಲವನ್ನೂ ಮರೆತು ಅವರೆಲ್ಲ ಒಂದಾಗುವುದನ್ನು, ಮುಗ್ಧ ಸ್ವಭಾವವನ್ನು ವಿಶ್ಲೇಷಿಸಿದ್ದಾರೆ. ಮೆನೆಪ್‌ಟಾ ಇಲ್ಲಿಯ ಒಂದು ಪ್ರಮುಖ ಪಾತ್ರ. ಪ್ರಾಚೀನ ಕಾಲದ್ದೆಲ್ಲವೂ ದಾಯಾದಿ ನಾಗರಿಕತೆಗಳೇ. ವಿಶ್ವದ ಎಲ್ಲ ಜನರೂ ಸೋದರ ಸಂಬಂಧಿಗಳೇ. 'ಮೃತ್ಯುಂಜಯ'ದಲ್ಲಿರುವುದು ಆಧುನಿಕ ಮಾನವನ ಪೂರ್ವಜರ ಕಥೆ. ನಮಗೆ ಅದು ಪರಕೀಯವಲ್ಲ ಎಂದೇ ಹೇಳಿದ್ದಾರೆ ಲೇಖಕರು. ೪,೫೦೦ ವರ್ಷ ಹಿಂದೆ ಪ್ರಾಚೀನ ಐಗುಪ್ತದಲ್ಲಿ ಇದ್ದಂಥದೇ ದುಷ್ಟ ಸಮಾಜ ವ್ಯವಸ್ಥೆಯಲ್ಲಿ ಜನ ಹೋರಾಟಕ್ಕಿಳಿಯುತ್ತಾರೆ. ನ್ಯಾಯಕ್ಕೋಸ್ಕರ, ಒಳ್ಳೆಯ ಬದುಕಿಗೋಸ್ಕರ ಜನ ನಡೆಸುವ ಹೋರಾಟಕ್ಕೆ ಸಾವಿಲ್ಲ. ಅದು ಅಂದಿನಿಂದ ಇಂದಿಗೂ ನಿರಂತರವಾಗಿ ನಡೆಯುತ್ತಲೇ ಬಂದಿರುವುದು. ಅಷ್ಟೇ ಅಲ್ಲ ಈಜಿಪ್ಟ್‌ನಲ್ಲಿ ಪಿರಮಿಡ್ಡುಗಳಲ್ಲಿ ದೇಹವನ್ನು ರಕ್ಷಿಸಿಡುತ್ತಿದ್ದುದರ ಬಗ್ಗೆ ತುಂಬ ವಿವರವಾಗಿ ಬರೆದಿದ್ದಾರೆ.

ಪ್ರಗತಿಶೀಲ ಕಾದಂಬರಿಕಾರರು ಇತಿಹಾಸದ ವಿಷಯವನ್ನು ಆಯ್ಕೆ ಮಾಡಿಕೊಂಡು ಐತಿಹಾಸಿಕ ಕಾದಂಬರಿಗಳನ್ನು ಬರೆದಿರುವುದರ ಉದ್ದೇಶ ಅಂದಿನ ಸಮಾಜವನ್ನು ಚಿತ್ರಿಸಿರುವುದರ ಜೊತೆಗೆ ಅದರ ನಿಯಂತ್ರಣ ಶಕ್ತಿಗಳು, ಸಾಮಾಜಿಕ ಬದಲಾವಣೆಗೆ ಪೂರಕವಾದ ರಾಜಕೀಯ, ಧಾರ್ಮಿಕ ಪ್ರಭುತ್ವಗಳು, ಆರ್ಥಿಕ ಪ್ರಗತಿಗೆ ಸಂಪತ್ತಿನ ಕ್ರೋಢೀಕರಣಕ್ಕೆ ಕಾರಣವಾದ ಕೃಷಿ ವಿಸ್ತರಣೆ, ಉತ್ಪಾದನೆಯ ಹೆಚ್ಚಳ, ಮಾರುಕಟ್ಟೆಯ ಬೆಳವಣಿಗೆ, ಗ್ರಾಮ ಸಮುದಾಯದಲ್ಲುಂಟಾದ ಸಂಚಲನ, ಅಗ್ರಹಾರ ಪಟ್ಟಣಗಳ ನಿರ್ಮಾಣ, ನಗರೀಕರಣ ಈ ಎಲ್ಲ ಅಂಶಗಳನ್ನು ಸವಿಸ್ತಾರವಾಗಿ ಚಿತ್ರಿಸುವುದಾಗಿದೆ. ಈ ಎಲ್ಲ ಸಂಗತಿಗಳನ್ನು ಇಂದಿನ ವಾಸ್ತವ ಜಗತ್ತಿನಲ್ಲೂ ಕಾಣುತ್ತೇವೆ. ಜೊತೆಗೆ ರಾಜರ ಆಡಳಿತಾವಧಿಯಲ್ಲಿ ಉಂಟಾದ ಸಮಸ್ಯೆಗಳನ್ನು ತಮ್ಮ ಸಮಕಾಲೀನ ಸಂದರ್ಭದೊಂದಿಗೆ ಸಮೀಕರಿಸಿರುತ್ತಾರೆ. ಬ್ರಿಟೀಷರ ಆಡಳಿತಾವಧಿಯಲ್ಲಿ ನಾಯಕತ್ವದ ಕೊರತೆ, ರಾಜ್ಯ ಮತ್ತು ರಾಷ್ಟ್ರದ ಬಗೆಗಿನ ಅಭಿಮಾನವಾಗಲಿ, ಸೇವಾ ಮನೋಭಾವನೆ ಇಲ್ಲದಿರುವುದರಿಂದ ಉಂಟಾಗಬಹುದಾದ

ಸಮಸ್ಯೆಗಳ ಸ್ವರೂಪವನ್ನು ಹೇಳಬೇಕಾಗಿರುವುದರಿಂದ ಪ್ರಗತಿಶೀಲ ಕಾದಂಬರಿಕಾರರು ದೇವರಾಯರು, ವಿರೂಪಾಕ್ಷರಾಯರು, ಚಿಕ್ಕಣ್ಣನಾಯಕ, ಉದಯಸಿಂಹ, ಭಾಸ್ಕರರಾಯನಂತವರ ಆಡಳಿತವನ್ನು ಸಂಕೇತವಾಗಿಟ್ಟುಕೊಂಡು ತಮ್ಮ ಕಾಲದ ಸ್ಥಿತಿಗತಿಯನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಇವರ ವಿಲಾಸಪ್ರಿಯತೆ, ಸ್ತ್ರೀ ಲಂಪಟತನ, ಧಾರ್ಮಿಕ ಉದಾರತೆಯಂತಹ ಗುಣಗಳಿಂದ ಸಾಮ್ರಾಜ್ಯಕ್ಕೆ ಉಂಟಾಗಬಹುದಾದ ಪರಿಣಾಮಗಳಾವುವು, ಅಂತಹ ಸಂದರ್ಭದಲ್ಲಿ ಸಾಮ್ರಾಜ್ಯಕ್ಕೆ ಒದಗಿದ ಆಪತ್ತುಗಳನ್ನು ಸಾಮ್ರಾಜ್ಯನಿಷ್ಠರು, ಧರ್ಮಾಭಿಮಾನಿಗಳು, ರಾಷ್ಟ್ರ ಸೇವಕರು ಸಾಮ್ರಾಜ್ಯದ ಉಳಿವಿಗಾಗಿ ಮಾಡಿದ ತ್ಯಾಗ ಬಲಿದಾನಗಳಂತಹ ಸಂಗತಿಗಳನ್ನು ಹೇಳುವುದರ ಮೂಲಕ ಕನ್ನಡಿಗರನ್ನು ಒಂದುಗೂಡಿಸುವುದು, ರಾಷ್ಟ್ರವನ್ನು ಪಾರತಂತ್ರ್ಯದ ಆಡಳಿತದಿಂದ ಮುಕ್ತಗೊಳಿಸಲು ಜನರಲ್ಲಿ ರಾಜ್ಯ ಮತ್ತು ರಾಷ್ಟ್ರ ಕುರಿತಾದ ಸೇವಾ ಮನೋಭಾವನೆಯನ್ನು ಮೂಡಿಸುವುದಾಗಿದೆ.

ಅಧ್ಯಾಯ ೪

ಪ್ರಗತಿಶೀಲ ಕಾದಂಬರಿಗಳಲ್ಲಿ ಜೀವನ ಮೌಲ್ಯಗಳ ಪುನರ್‌ಲೇಖ

---

೧. ವೀರ

೨. ತ್ಯಾಗ

೩. ಪ್ರೇಮ

೪. ಕರುಣೆ

ಅಧ್ಯಾಯ ೪

ಪ್ರಗತಿಶೀಲ ಕಾದಂಬರಿಗಳಲ್ಲಿ ಜೀವನ ಮೌಲ್ಯಗಳ ಪುನರ್‌ಲೇಖ

ಜೀವನದ ಧ್ಯೇಯ ಸರ್ವತೋಮುಖ ಪರಿಪೂರ್ಣತೆ. ಜೀವನದ ಪ್ರತಿ ಮಜಲಿನಲ್ಲಿ ಪರಿಪೂರ್ಣತೆಯನ್ನು ಸಾಧಿಸುವುದು. ವ್ಯಕ್ತಿಗಳ ನಡುವಿನ ಸಂಬಂಧಗಳಲ್ಲಿ ಪರಿಪೂರ್ಣತೆ, ಆಲಿಸುವುದರಲ್ಲಿ ಪರಿಪೂರ್ಣತೆ, ಮಾತಿನಲ್ಲಿ ಪರಿಪೂರ್ಣತೆ, ವೃತ್ತಿಯಲ್ಲಿ ಪರಿಪೂರ್ಣತೆ, ಪೋಷಕರಾಗಿ ಅಥವಾ ಪಾಲಕರಾಗಿ ಪರಿಪೂರ್ಣತೆ, ನಾಗರಿಕರಾಗಿ ಪರಿಪೂರ್ಣತೆ ಇತ್ಯಾದಿ ಪ್ರಗತಿಯ ಈ ಶಿಖರವನ್ನು ಒಂದೊಂದೇ ಮೆಟ್ಟಿಲೇರುವುದು ನಮ್ಮ ಜೀವನದ ಪಯಣವಾಗಿದೆ. ರಸಋಷಿ ಕವಿ ರವೀಂದ್ರನಾಥ ಟ್ಯಾಗೋರರು 'ನಾನು ಇದ್ದೇನೆ ಎಂಬ ನಿರಂತರ ಸೋಜಿಗವೇ ಜೀವನ. ಜೀವನ ನಮಗೆ ಉಚಿತವಾಗಿ ಬಂದದ್ದು. ಅದನ್ನು ಕೊಡುವುದರಿಂದ ನಾವು ಅದನ್ನು ಗಳಿಸಿಕೊಳ್ಳುತ್ತೇವೆ. ಬದುಕು ಅಕ್ಷಯವೆಂಬುದನ್ನು ತಿಳಿಯಲು ನಾನು ಮರಳಿ ಮರಳಿ ಸಾಯಲು ಸಿದ್ಧ'[೧] (ದೊಡ್ಡಬಸಪ್ಪ ಬಳೂರಗಿ, ೨೦೧೧, ಪುಟ-೨೬) ಎಂದು ಹೇಳಿದ್ದಾರೆ. ಬದುಕು ವಿವೇಚನಾಯುತವಾಗಿರಬೇಕು. ವಿವೇಚನಾರಹಿತ ಬದುಕು ಬದುಕೇ ಅಲ್ಲ ಯಾವಾಗಲೂ ಪರರಿಗೆ ಆಶ್ರಯವಿತ್ತು ಬದುಕುವುದು ಉತ್ತಮ ಬದುಕು. ತನಗಾಗಿ ಬದುಕುವುದು ತಾಮಸ. ತಾನೂ ಬದುಕಿ ಇತರರನ್ನು ಬದುಕುವಂತೆ ಮಾಡುವುದು ರಾಜಸ. ತನಗೇನಾದರೂ ಚಿಂತೆಯಿಲ್ಲ ಲೋಕೋಪಕಾರವೇ ಸಾತ್ವಿಕ ಬದುಕು. ಅದು ನಿಜವಾದ ಬದುಕು.

ಮನುಷ್ಯರ ಬದುಕಿನ ಊರ್ಧ್ವಮುಖ ಬೆಳವಣಿಗೆಗೆ ಪೂರಕವಾದ ನಂಬಿಕೆಗಳಲ್ಲಿ ಮೌಲ್ಯ ಒಂದು. ಜೀವನದ ಅನೇಕ ಸಂದರ್ಭಗಳಲ್ಲಿ ಮೌಲ್ಯ ಎಂಬುದನ್ನು ಬಳಸುತ್ತೇವೆ. ಇದು ಬದುಕಿನಲ್ಲಿ ಅತ್ಯಂತ ಅವಶ್ಯಕವಾಗಿದ್ದು ವ್ಯಕ್ತಿ ಹಾಗೂ ಸಮಾಜದ ನಡುವೆ ಆರೋಗ್ಯಕರವಾದ ಬೆಳವಣಿಗೆಯನ್ನುಂಟು ಮಾಡುತ್ತದೆ. 'ವ್ಯಕ್ತಿಯೊಬ್ಬನ ಜೀವಮಾನದಲ್ಲಿ ಆದರ್ಶವೆಂದು ಭಾವಿಸುವ ಗುಣ ವಿಶೇಷತೆ, ಜ್ಞಾನ, ಕೌಶಲ್ಯಗಳ ಜೊತೆಗೆ ಸತ್ಪ್ರಜೆಯಾಗಲು ಪ್ರೇರಕವಾಗುವ ಅಂಶಗಳೆಲ್ಲ ಜೀವನಮೌಲ್ಯ ಎನಿಸಿಕೊಳ್ಳುತ್ತವೆ.'[೨] (ರಘುಶಂಕ ಭಾತ್ರಾಂಬಾ, ೨೦೧೦, ಪುಟ-೧೦) ಈ ಜೀವನ ಮೌಲ್ಯಗಳು ವ್ಯಕ್ತಿಯ ವೈಯಕ್ತಿಕ ಬದುಕು ಹಾಗೂ ಸಾಮಾಜಿಕ ಜೀವನ ವಿಧಾನಗಳಲ್ಲಿ ಗಮನಾರ್ಹವಾಗಿವೆ. ನಾವು ನಮ್ಮ ಜೀವನದಲ್ಲಿ ಎಷ್ಟೆಷ್ಟು ಶ್ರೇಷ್ಠ ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತೇವೆಯೋ ಅಷ್ಟಷ್ಟು ನಮ್ಮ ಬದುಕು ಎತ್ತರಕ್ಕೆ ಹೋಗುತ್ತದೆ. ನಮ್ಮ ವ್ಯಕ್ತಿತ್ವಕ್ಕೆ ಘನತೆ ಗಾಂಭೀರ್ಯಗಳು, ವ್ಯಕ್ತಿತ್ವದ ವಿಸ್ತಾರಗಳು ಉಂಟಾಗುತ್ತವೆ.

ಸರ್ವಕಾಲೀನ ಆದರ್ಶಕ್ಕಿಂತ, ಸಮಕಾಲೀನ ಮೌಲ್ಯವನ್ನು ಪ್ರತಿಪಾದಿಸುವಲ್ಲಿ ಒಂದು ಸಾಹಿತ್ಯ ತನ್ನ ಜನತೆಗೆ ತೀರ ಹತ್ತಿರವಾಗುತ್ತದೆ. ಯಾವುದೇ ಕಾಲದ ವ್ಯಕ್ತಿ ಮತ್ತು ಸಮಾಜಗಳ ವರ್ತನೆಯನ್ನು ನಿಯಂತ್ರಿಸುವಲ್ಲಿ, ಬದುಕನ್ನು ಸುಂದರವಾಗಿ ರೂಪಿಸುವಲ್ಲಿ ರೂಢಿ, ಪರಂಪರೆ, ಮೌಲ್ಯ, ನೈತಿಕಸ್ಥೈರ್ಯ, ಆದರ್ಶ, ನೈತಿಕ ಪ್ರಜ್ಞೆ ಮೊದಲಾದವು ಒಂದರೊಡನೊಂದು ಬೆಸೆದು ವ್ಯಕ್ತಿಯನ್ನು ರೂಪಿಸುತ್ತವೆ. ಸುಖ-ದುಃಖ, ನೋವು-ನಲಿವು, ಸತ್ಯಾಸತ್ಯೆ, ನಿಷ್ಠೆ, ಪ್ರಾಮಾಣಿಕತೆಗಳ ದಯೆ, ಪ್ರೇಮ, ಅನುರಾಗಗಳ ಸಮ್ಮಿಲನವಾದ ಜೀವನದಲ್ಲಿ ನಾವು ಎಷ್ಟು ಕಾಲ ಬಾಳಿದೆವು ಅನ್ನುವುದಕ್ಕಿಂತ ನಾವು ಹೇಗೆ ಬಾಳಿದೆವು ಅನ್ನುವುದೇ ಜೀವನವಾಗಿದೆ. ನಮ್ಮ ಜೀವನ ಗತಿಶೀಲವಾಗಿರಬೇಕು. ಸಾತ್ವಿಕವಾಗಿರಬೇಕು. ನಾವು ಎಷ್ಟೇ ವರುಷ ಬದುಕಿರಲಿ ಸಂತಸ ಸಂತೃಪ್ತಿ ಇರಬೇಕು. ಅದು ಸಮೃದ್ಧ ಸಾರ್ಥಕ ಬದುಕಾಗುತ್ತದೆ. ನಮ್ಮ ಜೀವನವು ಪರಿಮಳ ಸೂಚಿಸುವ ಮಲ್ಲಿಗೆಯಂತಾಗಬೇಕು. ನಮಗೂ ನಮ್ಮ ಸುತ್ತಲಿನವರಿಗೂ ಅದು ಆನಂದವನ್ನುಂಟುಮಾಡುವ ಸುಗಂಧ ನೀಡಬೇಕು. ಅದು ಸಾರ್ಥಕ ಜೀವನವಾಗುತ್ತದೆ. 'ಜೀವನಕ್ಕೆ ಒಂದು ಮೌಲ್ಯ ಸ್ಥಾಪನೆ; ಬದುಕಿನ ಪಾವಿತ್ರ್ಯವನ್ನು ಕಾಯ್ದುಕೊಳ್ಳುವುದು, ಸ್ವಾನುಭವ ಹಾಗೂ ಪ್ರಾಮಾಣಿಕವಾದ ವೈಚಾರಿಕತೆಯ ಗಟ್ಟಿತನದೊಂದಿಗೆ, ತಿಳುವಳಿಕೆ, ತಾಳ್ಮೆಗಳೂ ಅಗತ್ಯವಾಗುತ್ತವೆ. ಸಾಹಿತ್ಯ ಸೃಷ್ಟಿಗೆ ಅನುಭವದ ಪರಿಪಕ್ವತೆ ಕುರಿತು ಒತ್ತು ಕೊಟ್ಟು ಅನುಭವ ಪಕ್ವವಾದರೆ ಸಾಹಿತ್ಯ ಪಕ್ವವಾಗುತ್ತದೆ. ಸಂವೇದನೆಯಿಂದ ಭಾವ ಪಕ್ವಗೊಳ್ಳಬೇಕು. ಭಾವ ವೈವಿಧ್ಯಕ್ಕೆ ಶಬ್ದಗಳು ಹುಟ್ಟಬೇಕು, ಅವು ನಮ್ಮ ಜೀವನದ ಚಲನೆಗೆ ಬೇಕಾದ ಶಬ್ದಗಳು ಸಾಹಿತ್ಯಕ್ಕೆ ಪೋಷಕವೆನ್ನುತ್ತಾರೆ'[೩] (ಪುರದನಗೌಡರ ಎಂ.ಎಂ, ೨೦೦೮, ಪುಟ-೪೦) ವಿದ್ವಾಂಸರು.

'ಯಾವ ಸಮಾಜವೇ ಆಗಲಿ ನೀತಿ, ಧರ್ಮ, ಜೀವನಾದರ್ಶ ಇವುಗಳನ್ನು ಕುರಿತಂತೆ ತನ್ನದೇ ಆದ ಕೆಲವು ಪೂರ್ವ ಗ್ರಹಿಕೆಗಳನ್ನು ಹೊಂದಿರುತ್ತದೆ. ಈ ಪೂರ್ವಗ್ರಹಿಕೆಗಳನ್ನೇ ಆ ಸಮಾಜದ ಜೀವನಮೌಲ್ಯಗಳು ಎಂದು ಕರೆಯಲಾಗುತ್ತದೆ.'[೪] (ರಹಮತ್ ತರೀಕೆರೆ (ಸಂ), ೨೦೧೧, ಪುಟ-೧೬೦) 'ವಿಶಿಷ್ಟ ಜೀವನ ಮೌಲ್ಯಗಳನ್ನು ರೂಪಿಸುವ ಸಂಸ್ಕೃತಿ ಹಾಗೂ ಅದನ್ನು ತನ್ನ ಸಂಸ್ಥೆಗಳ ಮೂಲಕ ಸಕ್ರೀಯಗೊಳಿಸುವ ಸಮಾಜಗಳು ಐತಿಹಾಸಿಕ ಬೆಳವಣಿಗೆಯ ಫಲ. ಮನುಷ್ಯ ನಿರ್ಮಿತ ವ್ಯವಸ್ಥೆಗಳು ಪ್ರಗತಿ ವಿರೋಧಿಯಾಗಿ ಪರಿಣಮಿಸಿದಾಗ ಅದನ್ನು ನಿರಾಕರಿಸುವುದು ಸಹಜವಾದ ಬೆಳವಣಿಗೆ. ಇತಿಹಾಸದುದ್ದಕ್ಕೂ ಇಂತಹ ಪಲ್ಲಟಗಳು ಸಂಭವಿಸುತ್ತಲೇ ಬಂದಿವೆ. ಸಂಸ್ಕೃತಿ-ಸಮಾಜಗಳ ವಕ್ತಾರಿಕೆಯನ್ನು ಪಡೆದ ಪುರುಷ ಅದನ್ನು ತನ್ನ ಕಣ್ಣಿಂದ ಗ್ರಹಿಸಿ ನಿರ್ಮಿಸಿದ. ಅಲ್ಲಿ ಹೆಣ್ಣು ಅವನಿಗೆ ಅನುಕೂಲೆಯಾಗಿ ಪೂರಕ ಪಾತ್ರಗಳಲ್ಲಿ

ಪ್ರತಿಷ್ಠಾಪಿಸಲ್ಪಟ್ಟಳು. ಪುರುಷ ಪ್ರಧಾನ ಮೌಲ್ಯಗಳನ್ನು ವಿಜೃಂಭಿಸುವ ಭರದಲ್ಲಿ ಇತಿಹಾಸ ಅವನ ಇತಿಹಾಸವಾಯಿತು'[೫] (ಗೀತಾ ವಸಂತ, ೨೦೧೦, ಪುಟ-೧೮೫) ಎಂಬ ಅಂಶಗಳನ್ನು ಕಾಣುತ್ತೇವೆ.

ಬರೀ ಕಲೆಗಾಗಿ ಸಾಹಿತ್ಯ ನಿರ್ಮಾಣವಾದಾಗ ಅದು ಶುಷ್ಕ ಸಾಹಿತ್ಯವಾಗುತ್ತದೆ ಮತ್ತು ಬದುಕಿಗೆ ನಿರುಪಯೋಗಿಯಾಗುತ್ತದೆ. ಆದರೆ ಶುದ್ಧ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಸೇರಿಕೊಂಡಾಗ ಅದು ಜನಪರ ಸಾಹಿತ್ಯವೆನಿಸಿಕೊಳ್ಳುತ್ತದೆ, ಜನಹಿತ ಸಾಹಿತ್ಯವಾಗುತ್ತದೆ. 'ಸಮಾಜ ಎನ್ನುವುದು ಮಾನವ ಸಂಬಂಧಗಳ ಬಲೆ. ಈ ಸಂಬಂಧಗಳ ನೆಲೆ ಮನುಷ್ಯನ ಭಾವನೆಗಳು, ಭಾವನೆಗಳಿಲ್ಲದೇ ಸಂಬಂಧಗಳಿಲ್ಲ. ಸಂಬಂಧಗಳ ಗೈರು ಹಾಜರಿ ಸಮಾಜವನ್ನು ಸಧೃಡಗೊಳಿಸುವುದಿಲ್ಲ. ರಸಾನಂದವನ್ನು ಮೂಲ ಗುರಿಯಾಗಿರಿಸಿಕೊಂಡಿರುವ ಸಾಹಿತ್ಯಕ್ಕೆ ಭಾವನೆಗಳೇ ಪ್ರೇರಕಶಕ್ತಿಗಳು. ಆ ಭಾವನೆಗಳ ಅರಳುವಿಕೆ ಮತ್ತು ವಿರೇಚನೆಯೇ ಸಾಹಿತ್ಯದ ಕೇಂದ್ರ ಶಕ್ತಿ. ಭಾವನೆಗಳನ್ನು ಆಧರಿಸಿರುವ ಸಮಾಜ, ಅವುಗಳನ್ನು ಅಭಿವ್ಯಕ್ತಿಸುವ ಸಾಹಿತ್ಯ ಒಂದಕ್ಕೊಂದು ಹೊಕ್ಕುಳ ಬಳ್ಳಿ ಸಂಬಂಧ ಹೊಂದಿವೆ.'[೬] (ಕಲ್ಯಾಣರಾವ್ ಪಾಟೀಲ ಜಿ, ೨೦೧೧, ಪುಟ-೯೮) ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಪುನರ್‌ಲೇಖದಲ್ಲಿ ಪ್ರತಿಪಾದಿತವಾದ ಜೀವನ ಮೌಲ್ಯಗಳನ್ನು ನಾಲ್ಕು ಅಂಶಗಳಲ್ಲಿ ನೋಡಲಾಗಿದೆ. ವೀರ, ತ್ಯಾಗ, ಪ್ರೇಮ ಮತ್ತು ಕರುಣೆ.

೪.೧ ವೀರ :

ಒಬ್ಬ ವ್ಯಕ್ತಿಯ ಧೈರ್ಯ, ಶೌರ್ಯ, ಸಾಹಸ, ಶಕ್ತಿ, ಪರಾಕ್ರಮತೆ, ದಕ್ಷತೆ ಇತ್ಯಾದಿಗಳನ್ನು ಸಾಹಿತ್ಯದ ರೂಪಗಳಲ್ಲಿ ಪ್ರಚುರಪಡಿಸುವುದೇ ವೀರಸಾಹಿತ್ಯವೆನಿಸುತ್ತದೆ. ವೀರರ ಕುರಿತು ಅವರ ಸಮಗ್ರ ಜೀವನವನ್ನು ಚಾರಿತ್ರಿಕ ರೂಪದಲ್ಲಿ ಹೇಳುವುದು. ಅವರು ತೋರ್ಪಡಿಸಿದ ಪರಾಕ್ರಮಗಳನ್ನು ಹೊಗಳುತ್ತಾ, ಗುಣಗಾನ ಮಾಡುತ್ತಾ, ಅವರ ಜೀವನ ಸ್ಮರಿಸುವುದು ವೀರ ಸಾಹಿತ್ಯದ ಮುಖ್ಯ ಜೀವಾಳವಾಗಿದೆ. ವೀರರ ಬಿರುದಾವಳಿಗಳನ್ನು ಆಗಾಗ ಹಾಡಿ ಹೊಗಳುತ್ತ ರಾಜ ಮತ್ತು ಪ್ರಜೆಗಳನ್ನು ಸದಾ ಪರಾಕ್ರಮದ ಸ್ಥಿತಿಯಲ್ಲಿಡುವುದು ಸಹ ಈ ವೀರ ಸಾಹಿತ್ಯದಲ್ಲಿಯ ಒಂದು ಪ್ರಭೇದವೆನ್ನಬಹುದು. ಕನ್ನಡ ನಾಡು ರಾಜ ಮಹಾರಾಜರುಗಳಿಂದಲೂ ವೀರ, ಶೂರ, ಧೀರ, ಧೈರ್ಯಶಾಲಿಗಳಿಂದ, ಸಾಹಸಿಗಳಿಂದ ತುಂಬಿಕೊಂಡಿದೆ.

ನವರಸಗಳಲ್ಲಿ ವೀರರಸವು ಒಂದು ಪ್ರಮುಖ ರಸ. ಪ್ರತಾಪ, ವಿನಯ, ದೃಢನಿಶ್ಚಯ, ಸತ್ವ, ಮೋಹ, ನಯ, ವಿಸ್ಮಯ, ಶೌರ್ಯ ಇತ್ಯಾದಿಗಳಿಂದ ಪುಷ್ಟಗೊಂಡು ಉತ್ಸಾಹವನ್ನು ಮೂಲವಾಗಿ ಒಳಗೊಂಡು ಭಾವುಕರ ಚಿತ್ತವನ್ನು ವಿಸ್ತರಿಸುವ ರಸವು ವೀರರಸ. ವೀರಸಾಹಿತ್ಯ ಜನಪದಗೀತೆ, ಐತಿಹ್ಯ ಪುರಾಣ, ಕಥೆ, ಒಗಟು, ಒಡಪು ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ದೊರೆಯುತ್ತದೆ.

'ಸಾಹಿತ್ಯದಲ್ಲಿ "ವೀರ"ರಸವನ್ನು ಪ್ರಧಾನವಾಗಿ ರೂಪಿಸುವುದು ಕೂಡ ಪುರುಷರ ಮೌಲ್ಯಗಳನ್ನು ವಿಜೃಂಭಿಸುವ ಬಗೆಯೇ ಆಗಿದೆ. ಶೌರ್ಯ ಸಾಹಸಗಳು ಗಂಡುಗುಣಗಳು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಆತನ ಯುದ್ಧಾಕಾಂಕ್ಷೆ, ಸಾಮ್ರಾಜ್ಯ ವಿಸ್ತರಣೆ, ರಾಜಕೀಯ ಮಹತ್ವಾಕಾಂಕ್ಷೆಗಳೇ ಸಾಹಿತ್ಯದ ಸಂದರ್ಭದಲ್ಲೂ ಗುರುತಿಸಲ್ಪಡುತ್ತವೆ.'[೭] (ಗೀತಾ ವಸಂತ, ೨೦೧೦, ಪುಟ-೩೬)

ಹೊಯ್ಸಳರ ಮೂಲಪುರುಷ ಸಳರಾಯನು ಎಂತಹ ವೀರನಾಗಿದ್ದನೆಂಬುದನ್ನು ಎರೆಯಂಗದೇವನ ಬಾಯಿಂದ ವಿಷ್ಣುವರ್ಧನನು ಕೇಳಿ ಆನಂದಪಟ್ಟಿರುತ್ತಾನೆ. ಸೊಸೆವೂರಿನ ವಾಸನ್ತಿಕಾದೇವಿಯ ಮಂದಿರದಲ್ಲಿ ಬಂದ ಹುಲಿಯೊಂದನ್ನು ಸಳೆಯಿಂದ ಹೊಯ್ದು ಸುದತ್ತಯತಿಗಳ ಹರಕೆಯಿಂದ ಸಾಮ್ರಾಜ್ಯ ಕಟ್ಟಿ ವೀರಪುರುಷನೆನಿಸಿಕೊಂಡನು. ವಿಷ್ಣುವರ್ಧನನ ತಾತ ವಿನಯಾದಿತ್ಯ ಮಲೆಯರಸುಗಳ ಮೇಲೆ ದಂಡೆತ್ತಿ ಹೋದಾಗ ಆತನನ್ನು ಎದುರಿಸಿ ಸೋತ ಮಲೆಯರಸುಗಳ ಕತೆಯನ್ನು ಕವಿಗಳು ಈ ತೆರನಾಗಿ ಹಾಡಿರುವರು.

'ಮಲೆಯರಸು ಮಕ್ಕಳೆಲ್ಲಂ

ತಲೆಯಂತಡೆವುತ ಮೆರ್ದು ಪಾದಾಂಬುಜಮಂ

ತಲೆಯೊಳ್ತಳೆವಿನೆಗಂಭುಜ

ಬಲಮಂತಳೆದಿರ್ಪನಲ್ತೆ ವಿನಯಾದಿತ್ಯಂ॥'[೮] (ಸುಬ್ಬರಾಯರು ತ.ರಾ, ೨೦೧೪, ಸಿಡಿಲಮೊಗ್ಗು, ಪುಟ-೧೪)

ಚಕ್ರವರ್ತಿಯ ಮುಂದೆ ತಾತ ವಿನಯಾದಿತ್ಯ, ತಂದೆ ಎರೆಯಂಗದೇವ ತಲೆಬಾಗಿ ನಮಸ್ಕರಿಸುವುದನ್ನು ಕಂಡ ವಿಷ್ಣುವರ್ಧನನಿಗೆ ಅದು ಸರಿಯೆನಿಸದೆ ಸೆಟೆದು ನಿಂತಿರುತ್ತಾನೆ. ತಂದೆಯ ಒತ್ತಾಯಕ್ಕೆ ಮಣಿದು ನಮಸ್ಕರಿಸಿದಾಗ ಅದನ್ನು ಗಮನಿಸಿದ ಪ್ರಧಾನಿ ಕಾಳಿದಾಸಯ್ಯ ಅವಮಾನಪಡಿಸುವ ರೀತಿಯಲ್ಲಿ ಗುರುಗಳಿಗೆ ವಿನಯವನ್ನು ಕಲಿಸಿಕೊಡುವಂತೆ ಹೇಳಿ ಎಂದು ಎರೆಯಂಗದೇವನಿಗೆ ಹೇಳಿದಾಗ ಆಕ್ರೋಶಗೊಂಡ ವಿಷ್ಣುವರ್ಧನ 'ವಿನಯವನ್ನು ಕಲಿಸಲು ನಾವು ಬೌದ್ಧ ಸನ್ಯಾಸಿಗಳಲ್ಲ; ಕ್ಷತ್ರಿಯರು! ಆದುದರಿಂದ ನಮಗದನ್ನು ಕಲಿಸುವ ಅಗತ್ಯವಿಲ್ಲವೆಂದೇ ಗುರುಗಳು ನಮಗೆ ಅದನ್ನು ಹೇಳಿಕೊಟ್ಟಿಲ್ಲ'[೯] (ಸುಬ್ಬರಾಯರು ತ.ರಾ, ೨೦೧೪, ಸಿಡಿಲಮೊಗ್ಗು, ಪುಟ-೫೧) ಎಂಬ ವೀರತ್ವದ ನುಡಿಗಳಾನ್ನಾಡುತ್ತಾನೆ. ಇದರಿಂದ ತನ್ನ ತಾತ ಮತ್ತು ತಂದೆಗೆ ನೋವಾಗುವುದೆಂದು ಆಲೋಚಿಸಿದರೂ ಸಹ ಹೊಯ್ಸಳರು ಯಾರಿಂದಲೂ ಅಪಮಾನ ಸಹಿಸುವವರಲ್ಲ ಎಂಬ ಕೀರ್ತಿ ಉಳಿಯಿತು. ವೀರ ಪುರುಷತ್ವದ ಸ್ವಾಭಿಮಾನ ತಲೆ ಎತ್ತಿ ನಿಂತಿತು. ಅರಸನಾಗಿ ಬದುಕಿದರೆ ಚಕ್ರವರ್ತಿಯಾಗಿ ಯಾರೊಬ್ಬರಿಗೂ ಮಣಿಯದೆ ಬಾಳಬೇಕೆನ್ನುವ ಹೆಬ್ಬಯಕೆ

ಚಿಗುರೊಡೆಯುತ್ತದೆ. ಈ ಸನ್ನಿವೇಶದಿಂದ ವಿಷ್ಣುವರ್ಧನನಲ್ಲಿರುವ ವೀರತ್ವ, ಧಿರೋದಾತ್ತ ನಿಲುವು ಎಂತಹುದು ಎಂಬುದು ಮನವರಿಕೆಯಾಗುವುದು.

ಗಂಗಪೆರ್ಮಾಡಿಗೆ ಗಂಗವಾಡಿಯ ಮಂಡಲಾಧಿಪತ್ಯದ ಅಧಿಕಾರವನ್ನು ನೀಡಿದಾಗ ಏಚಲೆಯು ಕಣ್ಣೀರು ಹಾಕುವುದನ್ನು ಕಂಡು ವಿಷ್ಣುವರ್ಧನ 'ಇಂದು ನಿಮಗಾದ ಒಂದು ಮಂಡಲಾಧಿಪತ್ಯದ ನಷ್ಟಕ್ಕಾಗಿ, ನೂರು ಮಂಡಲಾಧೀಶ್ವರರನ್ನು ಹೆಡೆಮುರಿ ಕಟ್ಟಿ ಬಿಗಿದು ತಂದು ನಿಮ್ಮ ಚರಣದಲ್ಲಿ ಕೆಡಹಿ, ಇಂದಾದ ಅಪಮಾನವನ್ನು ತೀರಿಸುತ್ತೇನೆ. ನನ್ನ ಮಾತನ್ನು ನಂಬಿ ಅವ್ವೆ ನೀವು ಹಡೆದಿರುವುದು ಹೇಡಿ ಹುಳುವನ್ನಲ್ಲ. ಗಂಡು ಮಗನನ್ನು'[೧೦] (ಸುಬ್ಬರಾಯರು ತ.ರಾ, ೨೦೧೪, ಸಿಡಿಲಮೊಗ್ಗು, ಪುಟ-೯೬) ಇದೇ ಬಳ್ಳಿಗಾವೆಯಲ್ಲಿ ನಿಮ್ಮನ್ನು ಮಹಾರಾಜ್ಞಿಯಾಗಿ ಮೆರೆಸುತ್ತೇನೆ ಎಂಬ ವೀರತ್ವದ ನುಡಿಗಳನ್ನಾಡುವನು.

ಜಗದೇವರಾಯ ದ್ವಾರಸಮುದ್ರದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಬಲ್ಲಾಳರಾಯ ತಾನೇ ಯುದ್ಧದ ಮುಂದಾಳತ್ವ ವಹಿಸಿಕೊಂಡು ಜಗದೇವರಾಯನ ಪಾಳಯಕ್ಕೆ ನುಗ್ಗುತ್ತಾನೆ. ಸುತ್ತುವರಿದ ವ್ಯೂಹವನ್ನು ಭೇದಿಸಿಕೊಂಡು, ಅವನ ಆನೆಯ ಮೇಲೆ ಕುದುರೆಯನ್ನು ಹಾಯಿಸಿ, ಮೊದಲ ಏಟಿಗೆ ಆನೆಯ ಸೊಂಡಿಲನ್ನು ಕತ್ತರಿಸಿ ಕೆಡವುತ್ತಾನೆ. 'ನಭೂತೋ ನಭವಿಷ್ಯತಿ' ಎನ್ನುವಂತೆ ವೀರಾವೇಶದಿಂದ ಹೋರಾಡುತ್ತಾನೆ. ವಿಷ್ಣುವರ್ಧನ ಸಿಂಹಾಸನಾರೋಹಣ ಮಾಡಿದಾಗ ತನ್ನ ಅಣ್ಣ ಬಲ್ಲಾಳರಾಯನಿಗೆ ಕೊಟ್ಟ ಮಾತಿನಂತೆ ನೀಲಗಿರಿಯಿಂದ ಕೃಷ್ಣಾ ನದಿಯವರೆಗಿನ ಕನ್ನಡನಾಡನ್ನು ಒಂದಾಗಿ ಕಟ್ಟುವ ಕೆಲಸ ಮಾಡುತ್ತ, ಹೊಯ್ಸಳರ ಹೆಸರನ್ನು ನಿರ್ಭಯವಾಗಿ ನುಡಿಯುವಷ್ಟು ಕೆಚ್ಚು ಶತ್ರುಗಳಿಗೆ ಇರದಂತೆ ಮಾಡುತ್ತಾನೆ.

ಬಹಾವುದ್ದೀನನು ಆನೆಗೊಂದಿ ಸಂಸ್ಥಾನದ ದೊರೆ ಜಂಬುಕೇಶ್ವರನ ಆಶ್ರಯ ಪಡೆದುಕೊಂಡ ಸಂದರ್ಭದಲ್ಲಿ ದಿಲ್ಲಿಯ ಸುಲ್ತಾನರು ಸಂಧಾನದ ಪತ್ರವೊಂದನ್ನು ಕಳಿಸಿ ಅದರಲ್ಲಿ ಕೆಲವು ಷರತ್ತುಗಳನ್ನು ವಿಧಿಸಿರುತ್ತಾನೆ. ಅದರಲ್ಲಿ ಬಹಾವುದ್ದೀನರನ್ನು ಸುಲ್ತಾನರಿಗೆ ಒಪ್ಪಿಸುವುದು. ವರ್ಷಕ್ಕೆ ಹತ್ತು ಸಾವಿರ ಮೊಹರುಗಳನ್ನೊಪ್ಪಿಸಿ, ಸುಲ್ತಾನರ ಮಾಂಡಲಿಕತನ ಒಪ್ಪಿಕೊಂಡು, ವರ್ಷಕ್ಕೊಮ್ಮೆ ದಿಲ್ಲಿಯಾತ್ರೆ ಮಾಡಿ ಸುಲ್ತಾನರಿಗೆ ಸಲಾಮು ಮಾಡಿ ಬರಬೇಕು ಎಂಬ ವಿಚಾರಗಳನ್ನು ಬರೆದು ಕಳಿಸಿರುತ್ತಾನೆ. ಆದರೆ ಸಭೆಯಲ್ಲಿ ಈ ವಿಚಾರಗಳನ್ನೆಲ್ಲ ಪ್ರಸ್ತಾಪಿಸಿದಾಗ ಎಲ್ಲರೂ ಇದನ್ನು ವಿರೋಧಿಸುತ್ತಾರೆ. ರೋಷತಪ್ತನಾಗಿದ್ದ ಮುದ್ದಪ್ಪನಾಯಕ 'ಶಾಂತಿಸಂಧಾನಕ್ಕೆ ಯಾರು ಒಪ್ಪಿದರೂ ನಾನು ಒಪ್ಪುವುದಿಲ್ಲ ಮಹಾಸ್ವಾಮಿ. ಈ ವಿಷಯದಲ್ಲಿ ಪ್ರಭುತ್ವವನ್ನೇ ನಾನು ಎದುರಿಸಬೇಕಾಗಿ ಬಂದರೂ ಹಿಂಜರಿಯುವುದಿಲ್ಲ. ಹಿಂದೂಗಳ ಪವಿತ್ರ ಕ್ಷೇತ್ರಗಳನ್ನೆಲ್ಲಾ ವಿಧ್ವಂಸಗೊಳಿಸಿ, ಗೋರಕ್ತದ

ಹೊಳೆ ಹರಿಸಿರುವ ಈ ಮ್ಲೇಚ್ಛಸಖ್ಯ ಬೆಳೆಸುವುದೆಂದರೆ ನಾವು ಹಿಂದೂ ಧರ್ಮಕ್ಕೆ ತಿಲತರ್ಪಣ ಕೊಟ್ಟಂತೆ! ಆನೆಗೊಂದಿ ಸಂಸ್ಥಾನ ಹಿಂದೂ ಧರ್ಮದ ಚಿತೆಗೆ ಅಗ್ನಿ ಪ್ರತಿಷ್ಠೆಮಾಡುವುದನ್ನು ನಾನು ನೋಡಲಾರೆ'[೧೧] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೬೧) ಎಂದು ರೋಷದಿಂದ ನುಡಿಯುವನು.

ಸುಲ್ತಾನರು ಆನೆಗೊಂದಿ ಸಂಸ್ಥಾನ ವಶಪಡಿಸಿಕೊಂಡು ಅಲ್ಲಿ ಅಯೂಬ್‌ಖಾನ್‌ರನ್ನು ನೇಮಿಸಿದ ಕೆಲದಿನಗಳ ನಂತರ ಹಕ್ಕಬುಕ್ಕರು ಸಾವಿರಾರು ಸೈನ್ಯದೊಂದಿಗೆ ದಾಳಿ ಮಾಡಿ ವಶಪಡಿಸಿಕೊಂಡು ಸುಲ್ತಾನರಿಗೆ ಅಯೂಬ್‌ಖಾನ್‌ನೊಡನೆ ಕೆಲವು ಮಾತನ್ನು ಹೇಳಿಕಳಿಸುವರು. 'ಇದುವರೆಗೆ ಅವರು ದುರಾಕ್ರಮಣ ಮಾಡಿಕೊಂಡಿರುವ ಹಿಂದು ರಾಜ್ಯಗಳನ್ನೆಲ್ಲಾ ಬಿಟ್ಟು ಕೊಡಬೇಕು. ಉತ್ತರ ಹಿಂದೂಸ್ಥಾನದ ಪ್ರಭುತ್ವ ಅವರೇ ಮಾಡಿಕೊಂಡು ಹೋಗಬಹುದು. ನಮ್ಮೊಂದಿಗೆ ಸ್ನೇಹ, ವಿಶ್ವಾಸದಿಂದ ವರ್ತಿಸಲು ಅವರು ಇಚ್ಛಿಸುವುದಾದರೆ ನಾವು ಸ್ನೇಹ ಹಸ್ತ ನೀಡಲು ಸಿದ್ಧರಾಗಿದ್ದೇವೆ. ಸ್ನೇಹದ ಬದಲು ಯುದ್ಧವೇ ನಮ್ಮ ಬಲಾಬಲಗಳನ್ನು ನಿರ್ಧರಿಸಲಿ ಎಂದು ಸುಲ್ತಾನರು ಹೇಳುವುದಾದರೆ ಅದಕ್ಕೂ ಸಿದ್ಧರಾಗಿದ್ದೇವೆ'[೧೨] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೧೨೧) ಎಂಬ ವೀರತ್ವದ ನುಡಿಗಳನ್ನಾಡುವನು.

ಬಹುಮನಿ ಸುಲ್ತಾನರು ಗೋವೆಗೆ ಮುತ್ತಿಗೆ ಹಾಕಿದಾಗ ವಿಕ್ರಮಸಿಂಹ ಅಲ್ಪ ಸೇನೆ ತೆಗೆದುಕೊಂಡು ಬರುತ್ತಿರುವುದನ್ನು ಕಂಡು ಗವಾನ್ ಷಹಬಾಜ್‌ಖಾನ್‌ನನ್ನು ವಿಕ್ರಮಸಿಂಹನ ಪಾಳೆಯಕ್ಕೆ ಕಳಿಸಿಕೊಟ್ಟು ಇದು ಯುದ್ಧವಾಗುವುದು ಕಗ್ಗೊಲೆಯಾಗುವುದು ಸಂಧಾನ ಮಾಡಿಕೊಳ್ಳುವಂತೆ ಉಪದೇಶಿಸಿದಾಗ ವಿಕ್ರಮಸಿಂಹ ವೀರತ್ವದ ನುಡಿಗಳಾನ್ನಾಡುತ್ತಾನೆ. 'ಯುದ್ಧಮಾಡು ಎಂದು ನನ್ನ ಪ್ರಭುಗಳು ಆಜ್ಞೆ ಮಾಡಿದ್ದಾರೆ. ಯುದ್ಧ ಮಾಡುವುದಷ್ಟೇ ನನ್ನ ಕರ್ತವ್ಯ. ಅದರ ಫಲಾಫಲಗಳು ನನಗೆ ಸೇರಿದ್ದಲ್ಲ. ನಿಮ್ಮ ವಜೀರರು ದೊಡ್ಡ ವ್ಯಕ್ತಿಗಳೆಂದು ಕೇಳಿದ್ದೇನೆ. ಇಸ್ಲಾಮಿನ ನಿಜಭಕ್ತರಂತೆ ಅವರು ನನಗೆ ಕಳಿಸಿರುವ ಸಂದೇಶಕ್ಕಾಗಿ ನಾನು ಋಣಿಯಾಗಿದ್ದೇನೆ. ಯುದ್ಧರಂಗದಿಂದ ಹಿಮ್ಮೆಟ್ಟುವ ಕ್ಷತ್ರಿಯನನ್ನು ಲೋಕ ಗೌರವಿಸುವುದೇ? ಪ್ರಾಣದ ಮೇಲಣ ಆಸೆಗಾಗಿ, ನಾನು ಶರಣಾಗತನಾಗಿ, ತರುವಾಯ ಲೋಕನಿಂದೆಗೆ ಗುರಿಯಾಗಿ ನಾಯಿ ಬಾಳು ಬಾಳಲೆ? ವಜೀರ ಸಾಹೇಬರಿಗೆ ನನ್ನ ನಮಸ್ಕಾರ ತಿಳಿಸಿ, ಯುದ್ಧ ಆರಂಭಿಸಬೇಕೆಂದು ಪ್ರಾರ್ಥಿಸಿ'[೧೩] (ಕೃಷ್ಣರಾಯರು ಅ.ನ, ೨೦೦೪, ಮೋಹನ ಮುರಾರಿ ಮತ್ತು ಯಶೋದುಂದುಭಿ, ಪುಟ-೬೬) ಎಂಬ ವೀರೋಚಿತವಾದ ನುಡಿಗಳನ್ನಾಡುತ್ತಾನೆ. ಜೊತೆಗೆ ಯುದ್ಧ

ಆರಂಭವಾದುದು ನಿಮ್ಮಿಂದ. ಹುಟ್ಟು ಸಾವು ಎರಡೂ ಅನಿವಾರ್ಯ ಎಂದು ಹೋರಾಡುತ್ತಿರುವಾಗಲೇ ವೀರಮರಣವನ್ನಪ್ಪುವನು.

ಅರಮನೆಯ ಮಲ್ಲಶಾಲೆಯಲ್ಲಿ ಪಂಜಾಬಿನ ಶಾಂತಸಿಂಗ್ ಮತ್ತು ಬಲಬೀರಸಿಂಗ್ ಎಂಬ ಇಬ್ಬರು ಸಹೋದರರು ವಿಜಯನಗರದ ಜನತೆಗೆ ತಮ್ಮ ಜೊತೆ ಸೆಣಸುವ ಶೂರರು ಯಾರಿದ್ದೀರಿ ಎಂದು ಸವಾಲು ಹಾಕುತ್ತಾರೆ. ರಂಗಾಮಂತ್ರಿಗಳ ಮಕ್ಕಳಾದ ರಾಮರಾಯರು ಶಾಂತಸಿಂಗ್‌ನ ಜೊತೆಗೆ ಕಾದಾಡಲು ಮುಂದಾಗಿ ಹೋಗುವರು. ಇಲ್ಲಿ ಶಾಂತಸಿಂಗ್ ಕಾದುತ್ತಿದ್ದುದು ಆತ್ಮಗೌರವ ರಕ್ಷಣೆಗಾಗಿಯಾದರೆ, ರಾಮರಾಯರು ಕಾದುತ್ತಿದ್ದುದು ಸಾಮ್ರಾಜ್ಯ ಗೌರವ ರಕ್ಷಣೆಗೆ ಇಬ್ಬರೂ ಅರ್ಧಗಂಟೆ ಕಾದಾಡಿದರೂ ಕಾದಾಟ ಮುಗಿಯದೆ ಹೋದಾಗ ರಾಮರಾಯ ಉಪಾಯದಿಂದ ಶಾಂತ್‌ಸಿಂಗ್‌ನನ್ನು ನೆಲಕ್ಕೆ ಕೆಡವಿ ಸೋಲಿಸುತ್ತಾನೆ. ಬಲಬೀರಸಿಂಗ್ ಕಾದಾಟಕ್ಕೆ ಬಂದಾಗ ನೆರೆದ ಜನಸ್ತೋಮ ಒಬ್ಬನ ಮೇಲೆ ಇಬ್ಬರು ಕಾದುವುದೇ ಎಂದು ಆಕ್ಷೇಪಿಸಿದರೂ ಸಹ ರಾಮರಾಯ ವೀರಾವೇಶದಿಂದ ಬಲಬೀರಸಿಂಗ್‌ನನ್ನು ಸಹ ನೆಲಕ್ಕೆ ಕೆಡಹುವನು. ಕೊನೆಗೆ ಶಾಂತಸಿಂಗ್ ಕೈನೀಡಿ 'ನಿಮ್ಮಂಥ ವೀರರನ್ನೇ ನಾನು ನೋಡಿಲ್ಲ ಷೇರ್ ಶಾಂತಸಿಂಗ್‌ನೊಂದಿಗೆ ಕಾದಬಲ್ಲ ಕಲಿಯೊಬ್ಬನಿದ್ದಾನೆಂದು ತಿಳಿದು ನನಗೆ ಆನಂದವಾಗಿದೆ'[೧೪] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೩೩) ಎನ್ನುವನು. ಆಗ ರಾಮರಾಯರು ಸೋಲಾಯಿತೆಂದು ಬೇಸರಪಟ್ಟುಕೊಳ್ಳಬೇಡಿ ಮಹಾಪ್ರಭುಗಳ ಹತ್ತಿರ ಇಂದೇ ತಮ್ಮ ವಿಷಯ ಮಾತನಾಡುತ್ತೇನೆಂದು ಭರವಸೆ ಕೊಡುವನು.

ಇಮ್ಮಡಿ ಮದಕರಿನಾಯಕರು ಪುತ್ರಸಂತಾನವಿಲ್ಲದೇ ತೀರಿಹೋದ ಸಂದರ್ಭದಲ್ಲಿ ಅಂತ್ಯಕ್ರಿಯೆ ಮಾಡುವವರು ಯಾರು? ಉತ್ತರಾಧಿಕಾರಿ ಯಾರು? ಎಂಬ ಪ್ರಶ್ನೆಗಳು ತಲೆದೋರಿದಾಗ ದಳವಾಯಿ ದೇಸಣ್ಣ ಹಿಂದೆ ಆದ ಅನ್ಯಾಯವನ್ನು ಸರಿಮಾಡಬೇಕೆಂದು ತಾನೇ ನೆರೆದ ಜನಸ್ತೋಮದ ಎದುರು ಧೈರ್ಯದಿಂದ ಮಾತನಾಡುವನು. ದೊಡ್ಡ ನಾಯಕರು ಕಸ್ತೂರಿರಂಗಪ್ಪ ದೊರೆಗಳು ಶಿವಪಾದ ಸೇರಿದಾಗ ಈ ಸಿಂಹಾಸನ ನ್ಯಾಯವಾಗಿ ದೊಡ್ಡ ಮಕ್ಕಳು ಸರ್ಜೇನಾಯಕರದಾಗಬೇಕಾಗಿತ್ತು. ಆದರೆ ದೊಡ್ಡ ದೊರೆಗಳು ಬದುಕಿರುವಾಗಲೇ ಅವರು ಮೃತರಾದುದರಿಂದ ಅವರ ಮಕ್ಕಳು ಇನ್ನೂ ಚಿಕ್ಕವರಿದ್ದುದರಿಂದ ಮೂರನೆಯ ಮಗ ಇಮ್ಮಡಿ ಮದಕರಿನಾಯಕರ ಪಾಲಾಯಿತು ಈ ಸಿಂಹಾಸನ. ಪುತ್ರಸಂತಾನವಿಲ್ಲದೇ ಈಗ ಈ ನಾಯಕರು ತೀರಿಹೋದುದರಿಂದ ಹಿಂದೆ ನ್ಯಾಯವಾಗಿ ಹಿರಿಯ ಮಗ ಸರ್ಜೇನಾಯಕರ ಮಕ್ಕಳಿಗೆ ಸಿಗಬೇಕಾಗಿದ್ದ ಈ ಸಿಂಹಾಸನವನ್ನು ಅವರಿಗಿಂದು ದೊರಕಿಸಿಕೊಡಬೇಕೆಂದು ಹೇಳುವನು.

ಬದಲಾದ ರಾಜಕೀಯ ವಿದ್ಯಮಾನದಲ್ಲಿ ಓಬಣ್ಣನಾಯಕನ ಪಟ್ಟಾಭಿಷೇಕದ ಸಮಯದಲ್ಲಿ ಸೈನಿಕರಿಗೆ ಪಟ್ಟದ ಕಾಣಿಕೆಯಾಗಿ ತಿಂಗಳ ಸಂಬಳದ ಅರ್ಧ ಕೊಟ್ಟಾಗ ಅಸಮಾಧಾನಗೊಂಡ ಸೈನಿಕರೆಲ್ಲರೂ ಗುಂಪುಗೂಡಿ ಅರಮನೆಗೆ ನುಗ್ಗಿದಾಗ ಓಬಣ್ಣನಾಯಕ ಹಾಗೂ ಓಬವ್ವನಾಗತಿ ಕಂಗಾಲಾಗಿ, ಹತಾಶೆಯಿಂದ ದುಃಖವನ್ನನುಭವಿಸುತ್ತಿರುವ ಸಂದರ್ಭದಲ್ಲಿ ಗಿರಿಜವ್ವೆ ಅವರ ಸಂಕಟವನ್ನು ನೋಡಲಾಗದೇ ಕಣ್ಣೀರು ಹಾಕುತ್ತಾಳೆ. 'ಆದರೆ, ಆಕೆಯ ಕೈ ಗೋಡೆಗೆ ತೂಗಿಸಿದ್ದ ಕತ್ತಿಯನ್ನು ಹಿರಿದು ನಿಂತಿತ್ತು. ಕಂಬನಿಯ ಧಾರೆ ಹೊಳೆವ ಅವಳ ಮೊಗದ ಮೇಲೆ ಏನಾದರಾಗಲಿ, ಯಾರೂ ನನ್ನವರನ್ನು ನೋಯಿಸಲು ಬಿಡೆ ಎಂಬ ವೀರ ನಿರ್ಧಾರ ಮಾಡಿತ್ತು. ಬಾಗಿಲ ಬಳಿ ಹಿರಿದ ಕತ್ತಿ ಹಿಡಿದು ನಿಂತಿದ್ದಳು.'[೧೫] (ಸುಬ್ಬರಾಯರು ತ.ರಾ, ೨೦೧೩, ಕಂಬನಿಯ ಕುಯಿಲು, ಪುಟ–೧೬೩) ಲಿಂಗಣ್ಣನಾಯಕ ಬಂದು ಸೊಕ್ಕಿ ನುಡಿದವರ ನಾಲಗೆ ಕತ್ತರಿಸಿ ಹಾಕುತ್ತೇನೆ. ಎರಡು ತಲೆ ಉರುಳಿದರೆ ಇವರ ಪುಂಡಾಟವೆಲ್ಲ ನಿಲ್ಲುವುದು ಎಂದು ಆಕ್ರೋಶದಿಂದ ಹೇಳುವನು.

ಮುದ್ದಣ್ಣನ ಚಿತ್ರಹಿಂಸೆಯಿಂದ ಜರ್ಜರಿತನಾದ ವೀರಣ್ಣ ಗಿರಿಜವ್ವೆಯ ತೊಡೆಯ ಮೇಲೆ ನಿತ್ರಾಣವಾಗಿ ಮಲಗಿ ಇನ್ನೇನು ಸಾವಿನ ಮೆಟ್ಟಿಲೇರುವ ಸಂದರ್ಭದಲ್ಲಿ ವೀರತ್ವದ ಮಾತುಗಳನ್ನೇ ಆಡುತ್ತಾನೆ. 'ಬಿಡಬಾರದು ಗಿರಿಜಾ, ಆ ನಾಯಿ ನನ್ನ ಮಗ ಮುದ್ದಣ್ಣನನ್ನ ಜೀವಸಹಿತ ಬಿಡಬಾರದು. ನನ್ನ ಮಗ ತನಗಾಗದೋರ್ನೆಲ್ಲಾ ಕೊಂದು ಹದ್ದು ನಾಯಿಗೆ ಊಟ ಹಾಕಿದ್ಹಂಗೆ, ಅವನ ಹೆಣಾನೂ ಹಾಕಬೇಕು. ಭಗವಂತ ನನಗೆ ಆಯಸ್ಸು ಕೊಟ್ರೆ, ಅಷ್ಟು ಮಾಡ್ದೆ ಬಿಡೋದಿಲ್ಲ. ಅದ್ರಾಗೆ ನನ್ನ ತಲೆ ಹೋದ್ರು ಸರೀನೆ'[೧೬] (ಸುಬ್ಬರಾಯರು ತ.ರಾ, ೨೦೧೧, ರಾಜ್ಯದಾಹ, ಪುಟ–೩೦) ಎನ್ನುವನು. ಆದರೆ ತಾನು ಬದುಕುಳಿಯುವುದು ಅಸಾಧ್ಯ ಎಂದು ತಿಳಿದಾಗ ಗಿರಿಜವ್ವೆಗೆ ಆ ದಳವಾಯಿ ಜೀವ ತಗೊಂಡು ನಾನಿರೋತಾವಕ್ಕೆ ಬರಬೇಕು. ಅಲ್ಲಿಯವರೆಗೆ ನನ್ನ ಆತ್ಮಕ್ಕೆ ಸಮಾಧಾನ ಇರುವುದಿಲ್ಲ ಎಂದು ಪ್ರಾಣ ಬಿಡುವನು.

ರಾಜ್ಯದ ಮೇಲೆ ನನಗೆ ಯಾವ ವ್ಯಾಮೋಹವೂ ಇಲ್ಲ. ಈ ಕಿರೀಟ, ಸಿಂಹಾಸನದ ಮೇಲೆ ಎಳ್ಳಷ್ಟೂ ಆಸೆಯಿರದ ಲಿಂಗಣ್ಣನಾಯಕ ತಾನು ದೊರೆತನದ ಪಟ್ಟವನ್ನು ಸ್ವೀಕರಿಸುತ್ತಿರುವುದು ಸೇಡಿಗಾಗಿ ಎಂದು ಗುರುಗಳ ಮುಂದೆ ಪ್ರಸ್ತಾಪಿಸಿ ನಿಮ್ಮ ಆಶೀರ್ವಾದ ಬಲ ಬೇಕೆಂದು ಕೇಳುವನು. 'ಯಾರು ದೇಸಣ್ಣನವರ ತಲೆ ಕಡಿದರೋ, ಯಾರು ಭುವನಪ್ಪನವರ ಭಿಕಾರಿಯಂಥ ಸಾವಿಗೆ ಕಾರಣರಾದರೋ, ಯಾರ ಕೈ ನನ್ನ ಸೋದರ ಓಬಣ್ಣನಾಯಕನ ತಲೆಯನ್ನು ಕತ್ತರಿಸಿತೋ, ಯಾರ ರಕ್ತದಾಹ ನನ್ನ ತಾಯಿ ಹೊಂಡದಲ್ಲಿ ಹಾರಲು ಕಾರಣವಾಯಿತೋ ಆ ನಾಯಿಗಳ ರಕ್ತವನ್ನು ಅವರಿಗೆ ಕುಡಿಸುವುದೊಂದೇ ನನಗಿಂದು ಉಳಿದಿರುವ ಕರ್ತವ್ಯ. ಇಷ್ಟು ದಿನ ಅದನ್ನು ಮರೆತು

ಬದುಕಿದೆ. ಈಗ ನಾನೆಂತಹ ತಪ್ಪನ್ನು ಮಾಡಿದ್ದೆ ಎಂಬುದು ಅರಿವಾಗಿದೆ. ತನ್ನ ತಲೆ ಹೋದರೂ ಹಾಗೆಯೇ ಈ ಕೆಲಸವನ್ನು ಮಾಡಿ ಮುಗಿಸುತ್ತೇನೆ. ಸಿಂಹಾಸನಾರೋಹಣ ಅದಕ್ಕೆ ಮೊದಲ ಹೆಜ್ಜೆ. ಪರಶುರಾಮಪ್ಪನವರು ಪ್ರಧಾನಿಗಳಾಗುವುದು ಮುದ್ದಣ್ಣನಿಗೆ ನಾನು ಕೊಡುವ ಮೊದಲ ಪೆಟ್ಟು'[೧೭] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೮೪) ಎಂದು ವೀರಾವೇಶದಿಂದ ಮಾತನಾಡುವನು.

ದೊರೆಯಾದ ಲಿಂಗಣ್ಣನಾಯಕನನ್ನು ಸೆರೆಹಿಡಿದ ಮುದ್ದಣ್ಣ ವಿಚಿತ್ರ ಬಗೆಯ ಹಿಂಸೆಗಳನ್ನು ಕೊಟ್ಟು ಅಪಮಾನಗೊಳಿಸುತ್ತಿರುವ ಸಂದರ್ಭದಲ್ಲಿ ಆ ಎಲ್ಲ ನೋವುಗಳನ್ನು ತಡೆದುಕೊಂಡ ನಾಯಕ ತನ್ನನ್ನು ಪ್ರಭು ಎಂದು ಕರೆದು ನಾಯಕಪಟ್ಟಕ್ಕೆ ಅಪಮಾನಗೊಳಿಸದಂತೆ ಹೇಳುತ್ತಾನೆ. ಜೊತೆಗೆ 'ನೀನೂ ಯೋಧ, ಸಿಪಾಯಿಯಾಗಿದ್ದವನು. ವೀರ ಬಯಸುವ ಮರಣ ಎಂಥದೆಂದು ನಿನಗೆ ಗೊತ್ತಿದೆ. ನೀನು ನನ್ನ ಸಾವು ಬಯಸುತ್ತಿಯೇ ಎಂಬುದನ್ನು ನಾನು ಬಲ್ಲೆ. ಆ ತೃಪ್ತಿ ನಿನಗಾಗುವುದು. ಆದರೆ ನನ್ನ ಮೈಯನ್ನು ಬಿಗಿದ ಕಟ್ಟು ಬಿಚ್ಚಿ ಒಂದು ಕತ್ತಿ ಕೊಡು. ನಿನ್ನ ಸೈನಿಕರನ್ನು ನನ್ನ ಮೇಲೆ ಬಿಡು. ಅಷ್ಟೇ ನಾನು ಕೇಳುವುದು'[೧೮] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೧೯೧) ಎಂದಾಗ ಮುದ್ದಣ್ಣ ಜೋರಾಗಿ ನಗುವನು. ಆದರೆ ನಾಯಕ ಉಕ್ಕಿ ಬರುತ್ತಿರುವ ಕೋಪದಿಂದ ಥೂ ಹೇಡಿ ಎಂದು ಆತನ ಮುಖಕ್ಕೆ ಉಗಿಯುತ್ತಾನೆ. ಸಾವಿನ ಕೊನೆಯ ಅಂಚಿನಲ್ಲಿದ್ದರೂ ಸಹ ದೊರೆಯಲ್ಲಿರುವ ಪೌರುಷ, ವೀರತ್ವ ಎಂಥಹದು ಎಂಬುದನ್ನು ಕಾಣುತ್ತೇವೆ.

ಲಿಂಗಣ್ಣನಾಯಕರ ಸಾವಿನಿಂದ ಕುಪಿತನಾದ ಗೋಪಾಲಪುರದ ಗೌಡ ಆತನೇ ಮನೆಗೆ ತನ್ನನ್ನು ಕರೆಸಿದಾಗಲೇ ಆ ಮುದ್ದಣ್ಣನ ಕತ್ತು ಹಿಸುಕಿ ಬರುತ್ತಿದ್ದೆ. ಆದರೆ ನೀವೆಲ್ಲ ತಡೆದಿರಿ ಎಂದಾಗ ಗಿರಿಜವ್ವೆ ಪರಶುರಾಮಪ್ಪ ಹಾಗೂ ಗುರುಗಳ ಮಾತಿಗೆ ಕಟ್ಟುಬಿದ್ದೆ ಎನ್ನುವಳು. 'ಪರಶುರಾಮಪ್ಪ.....ಗುರುಗಳು! ಒಬ್ಬ ಹಾರುವಯ್ಯ, ಇನ್ನೊಬ್ಬರು ಜಂಗಮರು. ರಕ್ತದ ಓಕುಳಿಯಾಟ ಅವರಿಗೇನು ಗೊತ್ತು. ಅವರ ಮಾತು ಕೇಳಿಯೇ ನಾಯಕರು ಸತ್ತದ್ದು. ಕ್ರೋಧ ಬೇಡ, ದ್ವೇಷ ಬೇಡ, ಹಿಂಸೆ ಬೇಡ...ಬೇಡ...ಬೇಡ ಎಂದು ಹೇಳಿ ನಮ್ಮ ಕಾಲುಗಳಿಗೆ ಬೇಡಿ ಬಿಗಿದು ಬಿಟ್ಟರು. ಈಗ ಅವರೆಲ್ಲಿ? ಒಬ್ಬರು ಮಠದಲ್ಲೇ ಬಂದಿ, ಇನ್ನೊಬ್ಬರು ಕತ್ತಲ ಗವಿಯಲ್ಲಿ ಕೊಳೆಯುತ್ತಿದ್ದಾರೆ. ಅದೇ...ಅದೇ ಅವರು ದಳವಾಯಿಯನ್ನು ಉಳಿಸಿದುದಕ್ಕೆ ಸಿಕ್ಕಿದ ಬಹುಮಾನ. ಇನ್ನು ಅವರ ಹೆಸರನ್ನೇ ನನ್ನ ಮುಂದೆ ಎತ್ತಬೇಡ ಗಿರಿಜಾ! ಈಗ ಅವರು ಯಾರಾದರೂ ನನ್ನ ಎದುರಿಗೆ ಬಂದು ಅವರ ಹೇಡಿತನದ ಶಾಂತಿಯ ಮಾತಾಡಿದರೆ ಅವರ ಗಂಟಲನ್ನೇ ಹರಿದು ರಕ್ತ ಹೀರಿ ಬಿಟ್ಟೇನು'[೧೯] (ಸುಬ್ಬರಾಯರು ತ.ರಾ, ೨೦೧೫, ತಿರುಗುಬಾಣ, ಪುಟ-೧೮) ಎಂದು ಕ್ರೋಧದಲ್ಲಿ ಹೇಳುತ್ತಾನೆ.

ಗಿರಿಜವ್ವೆ ಮುದ್ದಣ್ಣನ ವಿಷಯವಾಗಿ ಊರಿನಲ್ಲಿನ ಜನರ ಅಭಿಪ್ರಾಯಗಳನ್ನು ತಿಳಿದುಕೊಂಡು ಬಂದು ಹೇಳುತ್ತೇನೆ ನೀವು ಮುಂದಿನ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದು ಗೌಡನಿಗೆ ಹೇಳಿ ಈ ಬಾರಿ ನನ್ನ ಬಯಕೆ ಸಫಲವಾಗಬೇಕು ಇಲ್ಲವೇ ನಾನು ಸಾಯಬೇಕು. ದಳವಾಯಿಯ ತಲೆ ನೆಲಕ್ಕುರುಳಿದಾಗಲೇ ಇದಕ್ಕೆ ಕೊನೆ ಎಂದು ಹೊರಟು ಹೋಗುವಳು.

ದಾಸನಾಯಕ ಭರಮಣ್ಣನನ್ನು ಸೆರೆಸಿಕ್ಕ ರೀತಿಯಲ್ಲಿ ನಾಟಕವಾಡಿ ಮುದ್ದಣ್ಣನ ಹತ್ತಿರ ಕರೆದುಕೊಂಡು ಬಂದಾಗ ಮುದ್ದಣ್ಣ ತನ್ನ ಬೇಟೆಯ ನಾಯಿಯನ್ನು ಭರಮಣ್ಣನ ಮೇಲೆ ಬಿಡುತ್ತಾನೆ. ಗಿರಿಜಾ ದೂರದಿಂದ ಯಾರಿಗೂ ಕಾಣದ ಹಾಗೆ ಬಂದು ಅದರ ಮೇಲೆ ಕತ್ತಿ ಎಸೆದು ನೆಲಕ್ಕುರುಳುವಂತೆ ಮಾಡಿ ಮುದ್ದಣ್ಣನ ಕೈಯನ್ನು, ನಾಲಗೆಯನ್ನು ಕತ್ತರಿಸಿ ತನ್ನ ಕಡೆಯವರಿಗೆ ಅವನನ್ನು ಹಿಡಿದುಕೊಂಡು ಬರುವಂತೆ ಹೇಳಿ ಮತ್ತಷ್ಟು ಚಿತ್ರಹಿಂಸೆಗಳನ್ನು ಕೊಟ್ಟು ಕೊಲ್ಲಲು ಸಿದ್ಧಳಾದಾಗ ಭರಮಣ್ಣ ಹೆಂಗಸಿಗೆ ಇಷ್ಟು ರಕ್ತದಾಹವಿರಬಾರದೆನ್ನುವನು. ಕೆರಳಿದ ಗಿರಿಜಾ ಸ್ವಾಮಿಗಳು ಪರಶುರಾಮಪ್ಪನವರ ಜೊತೆ ಬಿದ್ದು, ನಿಮ್ಮ ರಕ್ತವೂ ತೆಳ್ಳಗಾಗಿ ಹೋಗಿದೆ ಭರಮಣ್ಣ. ಓಬಣ್ಣನಾಯಕರ, ಲಿಂಗಣ್ಣನಾಯಕರ, ನಿಮ್ಮ ತಂದೆಯ ಸಾವನ್ನು ಸ್ವಲ್ಪ ನೆನಪಿಸಿಕೊಳ್ಳಿ ಸೇಡನ್ನು ತೀರಿಸಿಕೊಳ್ಳುವವರೆಗೂ ನನಗೆ ಶಾಂತಿಯಿಲ್ಲ ಎಂದು ಬಿರುಸಾದ ಧ್ವನಿಯಲ್ಲಿ ಹೇಳಿ ಮುದ್ದಣ್ಣ ಅವನ ತಮ್ಮ ಚುಕ್ಕಣ್ಣರನ್ನು ಎಳೆದುಕೊಂಡು ಹೋಗುತ್ತಾಳೆ.

ಮಾಯಕೊಂಡದ ಗೌಡನ ಹಾಗೂ ಹೊಳಲಕೆರೆಯ ಬೊಮ್ಮಣ್ಣನ ವೀರತ್ವ ಎಲ್ಲರೂ ಮೆಚ್ಚುವಂತಹುದೇ. ಚದುರುಗೊಳದ ಶಾನುಭೋಗ ಕೆಂಚಯ್ಯ ಹರಪನಹಳ್ಳಿಯವರ ಜೊತೆ ಸೇರಿ ದುರ್ಗವನ್ನು ನಾಶಮಾಡಲು ಸನ್ನಾಹ ಮಾಡಿ ಬೈರಾಗಿ ವೇಷ ಧರಿಸಿ ಮಾಯಕೊಂಡದ ಗೌಡನನ್ನು ಭೇಟಿಯಾಗಿ ಹರಪನಹಳ್ಳಿಯವರ ಜೊತೆ ಸೇರಲು ತಿಳಿಸಿ ಇಲ್ಲವಾದರೆ ಗಡಿಸೀಮೆಯಲ್ಲಿರುವ ನಿಮ್ಮ ಹಳ್ಳಿ ಉಳಿಯುವುದಿಲ್ಲವೆಂದು ಎಚ್ಚರಿಕೆಯ ರೀತಿಯಲ್ಲಿ ಹೇಳಿದಾಗ ಗೌಡ ಹರಪನಹಳ್ಳಿಯವರ ಒಳಗುಟ್ಟನ್ನು ಕೆಂಚಯ್ಯನ ಬಾಯಿಯಿಂದ ತಿಳಿದುಕೊಂಡು ಸಹಾಯ ಮಾಡುವುದಾಗಿ ಅಷ್ಟೇ ಅಲ್ಲದೇ ಹೊಳಲಕೆರೆಯ ಬೊಮ್ಮಣ್ಣನೂ ಸಹ ತಮಗೆ ನೆರವಾಗುವುದಾಗಿ ತಿಳಿಸಿ ತಮ್ಮ ಜನರನ್ನು ಕರೆದುಕೊಂಡು ಹೋಗಿ ಅವರ ಜೊತೆಯಲ್ಲಿಯೇ ಇರುವಂತೆ ನಟಿಸುತ್ತ ಬೊಮ್ಮಣ್ಣ ಜೈ ಏಕನಾಥೇಶ್ವರಿ ಎಂದು ರಂಗಪ್ಪನಾಯಕನ ತಲೆ ಕತ್ತರಿಸುತ್ತಾನೆ. ಹಾಗೆಯೇ ಮಾಯಕೊಂಡದವರು, ಹೊಳಲಕೆರೆಯವರು ಹರಪನಹಳ್ಳಿಯವರ ಮೇಲೆ ತಿರುಗಿ ಬೀಳುತ್ತಾರೆ. ಕೆಂಚಯ್ಯನನ್ನು ಸೆರೆ ಹಿಡಿದು ಮೆರವಣಿಗೆ ಮಾಡುತ್ತ ದುರ್ಗವನ್ನು ಪ್ರವೇಶಿಸುತ್ತಾರೆ.

ಯಾವ ಮೂನ್ಸೂಚನೆಯೂ ಇಲ್ಲದೇ ಏಕಾಏಕಿ ಸೀರ್ಯದವರು ಹಿರಿಯೂರಿನ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ವಿಶ್ರಾಂತಿಯಲ್ಲಿದ್ದ ಕೆಂಚಣ್ಣನಾಯಕನಿಗೆ ಏನು ಮಾಡಬೇಕೆಂದು ತೋಚದೆ ಆಲೋಚನಾ ಪರವಶನಾದಾಗ ಹನುಮವ್ವನಾಗತಿ ಬಂದು ಈಗೇನು ಮಾಡುವುದು "ಇದ್ದಕ್ಕಿದ್ದಂತೆ ನುಗ್ಗಿ ಬರುವ ಅಷ್ಟು ಬಲವನ್ನು ತಡೆಯುವ ಶಕ್ತಿ ನಮಗಿದೆಯೇ?" ಎನ್ನುವಷ್ಟರಲ್ಲಿಯೇ 'ಎದುರಿಸುವ ಶಕ್ತಿ ಇಲ್ಲವೆಂದು ಶರಣಾಗತನಾಗುವ ಯೋಚನೆ ಮಾಡಲೇ? ಅದೆಂದಿಗೂ ಸಾಧ್ಯವಿಲ್ಲ. ಕಡೆಯ ಸೈನಿಕ, ಕಡೆಯ ಹನಿರಕ್ತ ಇರುವವರೆಗೂ ಹೋರಾಟ; ಆಮೇಲೆ ವೀರಸ್ವರ್ಗ. ಅದೊಂದೆ ನಮಗೀಗ ಉಳಿದಿರುವ ಮಾರ್ಗ'[೨೦] (ಸುಬ್ಬರಾಯರು ತ.ರಾ, ೨೦೧೫, ಕಸ್ತೂರಿ ಕಂಕಣ, ಪುಟ-೨೩೫) ಎಂದು ದಳವಾಯಿಗಳು ಬಂದ ತಕ್ಷಣ ಯುದ್ಧವನ್ನು ಸಾರಿ, ಸೇನೆಯನ್ನು ಸಿದ್ಧಗೊಳಿಸುವಂತೆ ಹೇಳುವನು.

ಓಬವ್ವನಾಗತಿ ಮದಕರಿನಾಯಕನಿಗೆ ಮುಖ ತೊಳೆದುಕೊಳ್ಳಲು ಹುಚ್ಚವ್ವನ ಕೈಯಿಂದ ತಂಬಿಗೆ ತುಂಬ ರಕ್ತವನ್ನು ಕೊಟ್ಟಾಗ ಅದಕ್ಕೆ ಹೇಸಿಕೊಳ್ಳುವನು. ಅಸಹ್ಯಪಟ್ಟುಕೊಂಡು ಈತ ಬೇರೆ ನೀರು ಕೊಡುವಂತೆ ಕೇಳಿ ಕೈ ಕಾಲು ತೊಳೆದುಕೊಂಡರೂ ಸಹ ಆ ರಕ್ತದ ವಾಕರಿಕೆ ಹೋಗುವುದಿಲ್ಲ. ಹುಚ್ಚವ್ವನ ಜೊತೆ ನಾಗತಿಯನ್ನು ಕಾಣಲು ಹೋದಾಗ 'ರಕ್ತಕ್ಕೆ ಹೇಸಿದವನು ಅರಸನಾಗಲಾರ. ಆದರೆ ಬಹಳ ದಿನ ಅರಸನಾಗಿ ಉಳಿಯಲೂ ಆರ. ಅರಸು, ಅರಸುಪದವಿ ಎಂದರೇನುಕೊಂಡಿರಿ ಹತ್ತಾರು ಸಾವಿರ ಹೆಣಗಳ ಬುನಾದಿಯ ಮೇಲೆ ಕಟ್ಟಿದ್ದು ಈ ಅರಸು ಸಿಂಹಾಸನ. ಇದರ ಮೇಲೆ ಕುಳಿತು ಆಳುವಾತ ಹನಿರಕ್ತಕ್ಕೆ ಹೆದರಿದರೆ ಹೇಗೆ? ಯುದ್ಧದಲ್ಲಿ ರಕ್ತದ ಕೋಡಿ ಹರಿಸಬೇಕಾದ ನಿಮಗೆ ಹಾಗೆ ಮೈ ತಪ್ಪದಂತೆ, ಬುದ್ಧಿ ಕೆಡದಂತೆ ರಕ್ತದ ಅಭ್ಯಾಸವಾಗಬೇಕು. ರಕ್ತ ನೀರಿಗಿಂತ ಸದರವಾಗಬೇಕು. ಅರಸೇ ರಕ್ತಕ್ಕೆ ಹೆದರಿದರೆ, ಅವರ ಹಿಂದೆ ಬರುವ ಸೈನಿಕರೇನು ಮಾಡಬೇಕು. ಅವರು ನೀರಿಗೂ ಅಂಜಿ ಓಡಬೇಕೇ? ಸುತ್ತ ಹರಿವ ರಕ್ತವನ್ನು ಕಂಡೇ ನಿಮಗೆ ಅಮಲೇರಬೇಕು. ತೆನೆ ಕೊಯ್ದ ಹಾಗೆ ತಲೆ ಕಡೆಯಬೇಕು'[೨೧] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೭೯) ಎಂಬ ವೀರತ್ವದ ನುಡಿಗಳನ್ನಾಡುವಳು.

ರಾಯದುರ್ಗದ ತುರುಗಳ್ಳರು ನೂರು ಹಸುಗಳನ್ನು ದುರ್ಗದಿಂದ ಕದ್ದೊಯ್ದು ದುರ್ಗಕ್ಕೀಗ ಗಂಡಸರ ದಿಕ್ಕಿಲ್ಲ. ಪಟ್ಟದ ಮೇಲೆ ಚೋಟುದ್ದ ಹುಡುಗ, ಆಡಳಿತ ಮಾಡೋಳು ಮುದುಕಿ ಎಂದು ಹೇಳುತ್ತಾ ಹೋದ ವಿಷಯವನ್ನು ಮಾರಯ್ಯ ನಾಗತಿಯಾದಿಯಾಗಿ ಸಭೆಯ ಮುಂದೆ ಹೇಳಿದಾಗ 'ನಮ್ಮ ನಾಯಕರನ್ನು ಚೋಟುದ್ದದ ಹುಡುಗ ಎಂದರಲ್ಲವೇ ಆ ಕೊಳಕು ನಾಲಗೆಯವರು. ಆ ರಾಯದುರ್ಗದವರ ನೆತ್ತಿಯ ಮೇಲೆ ನಮ್ಮ ಹುಡುಗರ ಮೂತ್ರ ವಿಸರ್ಜನೆ ಮಾಡಿಸದಿದ್ದರೆ, ನನಗೆ

ದುರ್ಗದ ಬೀದಿಯಲ್ಲಿ ಹೆಣ್ಣುಡುಗೆ ಹಾಕಿ ಮೆರವಣಿಗೆ ಮಾಡಿಸಿ, ನನಗೆ ರಣವೀಳ್ಯ ಅಪ್ಪಣೆಯಾಗಬೇಕು'[೨೨] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೧೦೪) ಎಂದು ಬಾಣದ ಮದಕರಿನಾಯಕ ಹೇಳಿದರೆ, ಓಬವ್ವನಾಗತಿ 'ಇದು ನಿಮಗಲ್ಲ ನಮಗೆ ಸವಾಲು. ಈ ಬಾರಿಯ ರಣವೀಳ್ಯವನ್ನು ನಾವು ಯಾರಿಗೂ ಕೊಡುವುದಿಲ್ಲ. ನಾವೇ ತೆಗೆದುಕೊಂಡಿದ್ದೇವೆ. ನಮ್ಮ ಹಸು ಕದ್ದವರನ್ನು ಹಿಡಿದೆಳೆದು ತಂದು, ನಮ್ಮ ಅರಮನೆಯ ಗೋದಲಿಯಲ್ಲಿ ಕಟ್ಟದಿದ್ದರೆ ನಾವು ಗಂಡುಗಲಿ ಮದಕರಿನಾಯಕರ ಮಡದಿಯಲ್ಲ. ಹಸುಗಳನ್ನು ಕಟ್ಟುವುದು ಒಂದೇ, ಹೆಣ್ಣುಮಕ್ಕಳ ಸೆರಗಿಗೆ ಕೈ ಹಾಕುವುದೂ ಒಂದೇ. ಇಂಥ ನೀಚ ಮಾತು ಕೇಳಿ, ನಾವು ಸೇನೆಯ ಹಿಂದೆ ಅರಮನೆಯಲ್ಲಿ ಕೂತರೆ ನಮ್ಮ ಕುಲಕ್ಕೆ ಕಳಂಕ'[೨೩] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೧೦೫) ಎಂದು ವೀರತ್ವದ ನುಡಿಗಳನ್ನಾಡುವಳು.

ನವಾಬರ ಸೇನೆಗೆ ದುರ್ಗವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ಹೈದರಾಲಿ ವಕೀಲನನ್ನು ಮದಕರಿನಾಯಕನ ಹತ್ತಿರ ಕಳುಹಿಸಿ ತಮ್ಮ ಭೇಟಿಗೆ ಬರಬೇಕು. ಈ ಯುದ್ಧದಿಂದ ತಮಗಾದ ಖರ್ಚು ಆರು ಲಕ್ಷ ವರಹ ಕೊಡಬೇಕು. ಅಂದರೆ ಮಾತ್ರ ಸ್ನೇಹ ಉಳಿಯುತ್ತದೆ ಇಲ್ಲವಾದಲ್ಲಿ ಖಿಲ್ಲೆ ತೋಪಿನಿಂದ ಕಿತ್ತುಬಿಡುತ್ತೇವೆ ಎಂದು ಪತ್ರದಲ್ಲಿ ಬರೆದು ಕಳುಹಿಸಿದ್ದು ಅದನ್ನು ತಿಳಿದ ಮದಕರಿನಾಯಕ 'ಭೇಟಿಗೆ ಬರಬೇಕೆ ಅಗತ್ಯವಾಗಿ....ಹೇಳಿ, ಲಡಾಯಿಯಲ್ಲಿ ನಮ್ಮಿಬ್ಬರ ಭೇಟಿ ಆಗುತ್ತೆ. ಆರು ಲಕ್ಷ ವರಹ ಖರ್ಚು ಕೊಡಬೇಕೇ-ಏನು ಉದ್ಧಾರ ಮಾಡಿದ್ದಾರೆಂದು? "ಇಲ್ಲಿಗೆ ನಿಮ್ಮ ಸೇನೆಯೊಂದಿಗೆ ಬನ್ನಿ" ಎಂದು ನಾವೇನು ಆಹ್ವಾನ ಪತ್ರಿಕೆ ಕಳುಹಿಸಿದ್ದೇವೆಯೇ? ನಮ್ಮನ್ನು ಉಳಿಸಿ ಉದ್ಧಾರ ಮಾಡಲೆಂದು ಬಂದಿದ್ದಾರೆಯೋ ನಿಮ್ಮ ನವಾಬರು? ಖರ್ಚು ಕೊಡಬೇಕೆ? ಭಿಕ್ಷೆ ಕೇಳಿದ್ದರೆ ಕೊಡುತ್ತಿದೆವು. ಎರಡೇ ದಿನದಲ್ಲಿ ದುರ್ಗವನ್ನು ತೋಫಿನಿಂದ ಉಡಾಯಿಸುತ್ತೇನೆಂದು ಹೆದರಿಸಿದ್ದಾರೆ. ದುರ್ಗದಲ್ಲಿರುವವರು ಹೆಂಗಸರು ಮಕ್ಕಳಲ್ಲ, ಗಂಡಸರು. ನಿಮ್ಮಲ್ಲಿ ಗುಂಡು ಹೆಚ್ಚಾಗಿದ್ದರೆ, ಖರ್ಚು ಮಾಡಿ, ದುರ್ಗದ ಜನ ಹೊಸ ತರಹದ ದೀಪಾವಳಿ ನೋಡುತ್ತಾರೆ. ನವಾಬರಿಗೆ ಹೇಳಿ ಬೆದರಿಕೆಯ ಬೆಂಕಿಗೆ ಕರಗಲು ಚಿತ್ರದುರ್ಗ ಮೇಣದಿಂದ ಕಟ್ಟಿದ್ದಲ್ಲ'[೨೪] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೪೬೨) ಎಂಬ ವೀರತ್ವದ ನುಡಿಗಳನ್ನಾಡುವನು.

ಹೈದರಾಲಿ ದುರ್ಗವನ್ನು ವಶಪಡಿಸಿಕೊಂಡ ನಂತರ ಟಿಪ್ಪು ವೆಂಕಟಸುಬ್ಬಯ್ಯನವರನ್ನು ಆಸ್ಥಾನದಲ್ಲಿ ಹಾಡಬೇಕೆಂಬ ವಿಚಾರ ತಿಳಿಸಲು ಕರೆಸಿದಾಗ ಆತ ಸಭಾ ಮರ್ಯಾದೆ ಕೊಡದೆ ಟಿಪ್ಪುವಿಗೆ ನಜರ್‌ವನ್ನು ಒಪ್ಪಿಸದಿದ್ದಾಗ ಟಿಪ್ಪು ಕೋಪಗೊಳ್ಳುತ್ತಾನೆ. ಆಗ ಅಲ್ಲಿದ್ದ ಭಕ್ಷಿ ನವಾಬರನ್ನು

ರೇಗಿಸಬೇಡಿ ಎಂದಾಗ 'ನಾವು ಒಬ್ಬ ದೇವರು, ಒಬ್ಬ ದೊರೆಗೆ ತಲೆಬಾಗುವುದನ್ನು ಕಲಿತ ಜನ. ಇದ್ದರೂ ಅಷ್ಟೇ, ಸತ್ತರೂ ಅಷ್ಟೇ. ಆದ್ದರಿಂದ ಹಿಂದಿನ ದೊರೆಗಳಿಗೆ ಬಾಗಿಸಿದ ತಲೆಯನ್ನು ಇವರಿಗೆ ಬಾಗಿಸಲು ಸಾಧ್ಯವಿಲ್ಲ. ಅಲ್ಲದೆ ನಿಮ್ಮ ಸುಲ್ತಾನರಿಗೆ ಪರಾಕ್ರಮದಿಂದ ಪಡೆಯದೆ, ದ್ರೋಹದಿಂದ ಪಡೆದ ದೌಲತ್ತನ್ನು ಮೆರೆಸಲು ಇಷ್ಟು ಚಪಲವಿರಬಾರದು. ದ್ರೋಹದಿಂದ ಪಡೆದ ರಾಜ್ಯ, ದ್ರೋಹದಿಂದಲೇ ಹೋಗಬಹುದು. ಈ ಮಾತನ್ನು ನಿಮ್ಮ ನವಾಬರಿಗೆ ನೆನಪು ಮಾಡಿ ಕೊಡಿ'[೨೫] (ಸುಬ್ಬರಾಯರು ತ.ರಾ, ೨೦೧೩, ಹಂಸಗೀತೆ, ಪುಟ-೧೮೪) ಎಂದಾಗ ಆತನಲ್ಲಿರುವ ಧೈರ್ಯ ಎಂಥದ್ದು ಎಂಬುದನ್ನು ಕಾಣಬಹುದು. ಅಷ್ಟೇ ಅಲ್ಲ ಟಿಪ್ಪು ತನ್ನ ಆಸ್ಥಾನದಲ್ಲಿ ಹಾಡುವಂತೆ ಹೇಳಿದಾಗ ತನ್ನ ಸಂಗೀತ ಸೇವೆ ಆ ದೇವರಿಗೆ ಮಾತ್ರ ಮೀಸಲು ಎಂದು ಹೇಳಿ ನಿರಾಕರಿಸುತ್ತಾನೆ. ಒಂದು ದಿನದ ಕಾಲಾವಕಾಶ ಕೊಟ್ಟು ನಾಲಗೆ ಕತ್ತರಿಸುವುದಾಗಿ ಹೇಳಿದಾಗ 'ನನ್ನ ನಾಲಗೆಯ ಭೀತಿಗೆ, ತಾಯಿಯನ್ನು ಸುಲ್ತಾನನ ಭೋಗದ ಹೆಣ್ಣಾಗಿ ಮಾಡಲೇ? ಅಂಥ ಮಗ ಇದ್ದರೆಷ್ಟು ಸತ್ತರೆಷ್ಟು? ತಾಯಿಯ ಮಾನ ಹೋದ ಮೇಲೆ ಉಳಿದದ್ದೇನು? ಈ ಘಟ ಉರುಳಿದರೂ ಸರಿಯೆ ಅದು ಸಾಧ್ಯವಿಲ್ಲ'[೨೬] (ಸುಬ್ಬರಾಯರು ತ.ರಾ, ೨೦೧೩, ಹಂಸಗೀತೆ, ಪು.ಟ-೧೮೭) ಎಂಬ ಮಾತುಗಳನ್ನಾಡುವನು.

ಪ್ರಧಾನಿ ಭೀಮಸಿಂಹರು ಪ್ರತಾಪಸಿಂಹನಿಗೆ ತಮ್ಮಂದಿರಾದ ಜಗಮಲ್ಲ ಮತ್ತು ಶಕ್ತಸಿಂಹರು ಚಿತ್ತೂರಿನ ಸಿಂಹಾಸನಕ್ಕೆ ಬಡಿದಾಡುತ್ತಿರುವ ವಿಷಯ ಮನವರಿಕೆ ಮಾಡಿದರೂ ಸಹ ಸ್ವಲ್ಪವೂ ಕೋಪಗೊಳ್ಳದ, ತ್ಯಾಗ ಮನೋಭಾವದ ಪ್ರತಾಪನಿಗೆ ರಾಮನ ತ್ಯಾಗದಿಂದ ಅಯೋಧ್ಯೆ ಬದುಕಿತು. ಆದರೆ ನಿನ್ನ ತ್ಯಾಗದಿಂದ ಚಿತ್ತೂರು ನಾಶವಾಗುತ್ತದೆ ಎಂದಾಗ ಪ್ರತಾಪಸಿಂಹನು ಭೀಮಸಿಂಹನಿಗೆ 'ಚಿತ್ತೂರಿನ ಕೀರ್ತಿಗೆ ಕಳಂಕ ಒದಗುವ ಸನ್ನಿವೇಶ ಬಂದರೆ, ನಾನೇ ಬಲಪ್ರಯೋಗದಿಂದಲಾದರೂ ರಾಜ್ಯವನ್ನು ವಶಪಡಿಸಿಕೊಳ್ಳುತ್ತೇನೆ. ಜಗಮಲ್ಲನಾಗಲಿ, ಶಕ್ತನಾಗಲಿ ಚಿತ್ತೂರನ್ನು ಆಳಿದರೆ ನಾನು ವ್ಯಥೆ ಪಡುವುದಿಲ್ಲ. ಅಕ್ಬರ್‌ನಿಗೆ ಮಾತ್ರ ಚಿತ್ತೂರಿನ ಒಂದು ಒಣಗಿದ ಕಡ್ಡಿಯೂ ದೊರೆಯಬಾರದು'[೨೭] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೧೫) ಎಂದು ದೃಢವಾಗಿ ನುಡಿಯುತ್ತಾನೆ.

ರಾಣಾ ಉದಯಸಿಂಹರಿಗೆ ಪಾದಷಹ ಜಲಾಲುದ್ದೀನ್ ಫತ್ತೇ ಅಕ್ಬರ್ ಷಹಾ ಅವರ ದಳಪತಿ ಅಂಬರದ ರಾಜಾ ಶ್ರೀ ಮಾನಸಿಂಹರು ಒಂದು ಪತ್ರವನ್ನು ಬರೆದು ಕಳಿಸುವರು. ಆ ಪತ್ರದಲ್ಲಿ ಸ್ನೇಹತ್ವದ ವಿಚಾರಗಳಿರದೆ ಯುದ್ಧ ಸಾರುವ ರೀತಿಯಲ್ಲಿ ಇದ್ದಾಗ ಅದರ ಕುರಿತು ಸಭೆ ಕರೆದು ಸಮಾಲೋಚಿಸಿದಾಗ 'ಅಂಬರ್, ಬಿಕನೀರ್, ಮಾರವಾರಗಳನ್ನು ವಶಪಡಿಸಿಕೊಂಡಂತೆ ಚಿತ್ತೂರನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದೆಂದು ಪಾದಷಹ ನಂಬಿರುವಂತೆ ಕಾಣುತ್ತದೆ.

ರಜಪೂತರ ಕೃಪಾಣಗಳ ಸವಿಯನ್ನು ಪಾದಷಹ ಅಕ್ಬರ್ ಇನ್ನೂ ಕಾಣ. ಅವನ ಸವಾಲಿಗೆ ನಮ್ಮದು ಒಂದೇ ಉತ್ತರ. ಚಿತ್ತೂರು ನಾಶವಾದೀತಲ್ಲದೇ ಎಂದೆಂದಿಗೂ ಶರಣಾಗತವಾಗುವುದಿಲ್ಲ. ಪಾದಷಹರಿಗೆ ಯುದ್ಧಾಭಿಲಾಷೆಯಿದ್ದರೆ, ಚಿತ್ತೂರು ಅವರಿಗೆ ಸ್ವಾಗತ ಬಯಸುತ್ತದೆ ಎಂದು ಪಟ್ಟ ನುಡಿಯಲು, ಸಭಿಕರು "ಚಿತ್ತೂರು ಅಮರವಾಗಲಿ" ಎಂದು ಘೋಷಿಸಿದರು.'[೨೮] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೫೦)

ಜೈಮಲ್ ವೀರಾವೇಷದಿಂದ ಹೋರಾಡುತ್ತಿರುವ ಸಂದರ್ಭದಲ್ಲಿ ಪಾದಷಹನ 'ಸಂಗ್ರಾಮ್' ಆತನ ತೊಡೆಯನ್ನು ಸೀಳಿಬಿಡುತ್ತದೆ. ಕುದುರೆಯಿಂದ ನೆಲಕ್ಕುರುಳಿದ ಜೈಮಲ್ಲನನ್ನು ಆತನ ಬಂಧು ಸಹಯೋಧ ಕಲ್ಲಾ ಹಿಡಿದೆತ್ತುತ್ತಾನೆ. ತೊಡೆಯ ಮಾಂಸ ಖಂಡಗಳು ಛಿನ್ನ ಛಿನ್ನವಾಗಿ ರಕ್ತ ಸ್ರವಿಸುತ್ತಿದ್ದರೂ ಸಹ "ನನ್ನನ್ನೆತ್ತಿ ಹೆಗಲ ಮೇಲೆ ಕೂಡಿಸಿಕೋ" ಎಂದು ಕಲ್ಲಾನಿಗೆ ಹೇಳಿದ. ಆತ ಹೆಗಲ ಮೇಲೆ ಕೂಡಿಸಿಕೊಳ್ಳಲು, "ಜೈ ಏಕಲಿಂಗೇಶ್ವರಜೀ ಜೈ ಚಿತ್ತೂರು" ಎಂದು ವೀರಘೋಷ ಮಾಡಿ ಇಬ್ಬರೂ ಮೊಘಲ್ ಸೈನ್ಯದೊಳಗೆ ನುಗ್ಗಿಬಿಟ್ಟರು. ಮಹಾವೀರನೊಬ್ಬನ ಅವಸಾನ ನೋಡಲಾರದೇ ಭಾಸ್ಕರ ಕೂಡ ಅಸ್ತಂಗತನಾಗುತ್ತಾನೆ.

ಜೈಮಲ್ಲನ ಮರಣದಿಂದ ರಜಪೂತ ಪಾಳ್ಯದ ನೈತಿಕ ಬಲವೇ ಕುಸಿದು ಬಿದ್ದಂತಾದಾಗ ಪಟ್ಟನಿಗೆ ಸೇನೆಯ ನಾಯಕತ್ವ ಕಟ್ಟುತ್ತಾರೆ. ಆ ಸಂದರ್ಭದಲ್ಲಿ ಪಟ್ಟನ ತಾಯಿ ಪುತ್ಥಳಿಬಾಯ್ ರಜಪೂತ ವೀರರನ್ನು ಉದ್ದೇಶಿಸಿ 'ಚಿತ್ತೂರಿಗೆ ಬಲಿದಾನವಾಗರ್ಪಿಸಲು ಪಟ್ಟನಂಥ ಇನ್ನೂ ಹತ್ತು ಮಕ್ಕಳಿಲ್ಲವಲ್ಲಾ ಎಂದು ನಾನು ವ್ಯಸನಪಡುತ್ತಿದ್ದೇನೆ. ನನ್ನ ಮುಂದೆ ಸಾಲುಗಟ್ಟಿ ನಿಂತಿರುವ ನೀವೆಲ್ಲರೂ ನನ್ನ ಮಕ್ಕಳೇ. ನಿಮ್ಮೆಲ್ಲರನ್ನೂ ಶ್ರೀ ಏಕಲಿಂಗಸ್ವಾಮಿಯ ಪಾದಕ್ಕೆ ಅರ್ಪಿಸಿದ್ದೇನೆ. ಮೊಘಲರನ್ನು ಹೊಡೆದಟ್ಟಿದಲ್ಲದೇ ಹಿಂದಿರುಗಬೇಡಿ ಮುನ್ನುಗ್ಗಿ ನನ್ನ ವೀರಕುಮಾರರೇ ಎನ್ನುತ್ತ ಹತ್ತಿರವಿದ್ದ ಒಬ್ಬ ಸೈನಿಕನ ಭಲ್ಲೆಯನ್ನೆಳೆದುಕೊಂಡಳು. ವೀರಗಚ್ಚೆ ಧರಿಸಿ, ಖಡ್ಗಧಾರಿಯಾಗಿ ರಣರಂಗಕ್ಕೆ ಧಾವಿಸಿಬಂದ ಪಟ್ಟನ ಕಿಶೋರ ಪತ್ನಿ ಪ್ರಭಾವತಿ, "ಅಮ್ಮಾಜಿ ನಾನೂ ಸಿದ್ಧಳಾಗಿದ್ದೇನೆ'[೨೯] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೫೬) ಎಂದು ಹೇಳುವುದರ ಮೂಲಕ ರಜಪೂತ ಸ್ತ್ರೀಯರು ಸಹ ಎಂತಹ ಬಲಶಾಲಿಗಳು, ವೀರವನಿತೆಯರು ಎಂಬುದನ್ನು ತೋರ್ಪಡಿಸುತ್ತಾರೆ.

ಮೇವಾರದ ಸ್ವಾತಂತ್ರ್ಯದ ಕನಸು ಕಾಣುತ್ತ ಪ್ರತಾಪಸಿಂಹ ಆರಾವಳಿ ಪ್ರಾಂತ್ಯದ ದಟ್ಟವಾದ ಕಾಡಿನಲ್ಲಿರುವಾಗ ಪತ್ನಿ, ಮಕ್ಕಳು ಉಪವಾಸವಿರುವುದನ್ನು ನೋಡಲಾಗದೇ ತಾನು ಪಾದಷಹರಲ್ಲಿ ಕ್ಷಮಾಭಿಕ್ಷೆ ಯಾಚಿಸುತ್ತೇನೆಂದು ತೀರ್ಮಾನಿಸಿದಾಗ ಸಿಡಿದೆದ್ದ ಮಹಾರಾಣಿ ಲಕ್ಷ್ಮೀ ದುಡುಕಿನ

ನಿರ್ಧಾರ ಕೈಕೊಳ್ಳದಂತೆ ಪತಿಯ ಮನಃ ಪರಿವರ್ತನೆ ಮಾಡುವಳು. 'ಉಪವಾಸದಿಂದ ಮಕ್ಕಳು ಸತ್ತರೆ ಸಾಯಲಿ, ನಾನು ಸತ್ತರೂ ಚಿಂತೆಯಿಲ್ಲ. ನೀವು ಧೃತಿಗೆಡಬಾರದು. ಜೈಮಲ್, ಪಟ್ಟಾ, ಮಾನಾ, ರಾಮದಾಸ್, ರಾಮಪ್ರಸಾದ್ ಮೊದಲಾದ ಮಹಾವೀರರ ರಕ್ತ ತರ್ಪಣವನ್ನು ನೀವೇ ನಿಸ್ವಾರ್ಥಕಗೊಳಿಸುವಿರಾ? ಆತ್ಮಗೌರವಹೀನವಾದ ರಾಣಿ ಪದವಿಯಾಗಲಿ, ಸುಖ ಸಂಪತ್ತಾಗಲಿ ನನಗೆ ಬೇಕಿಲ್ಲ. ಪಾದಷಹರಿಗೆ ಶರಣಾಗತರಾಗಿ, ನೀವು ಮೇವಾರಿನ ಗಾದಿಯನ್ನು ಮತ್ತೆ ದೊರಕಿಸಿಕೊಳ್ಳುವುದಾದರೆ ನೀವೇ ಅಲ್ಲಿಗೆ ಏಕಾಂಗಿಗಳಾಗಿ ಹೋಗಬಹುದು. ನಿಮ್ಮ ಲಕ್ಷ್ಮೀ ಮೃತಳಾದಳೆಂದು ಭಾವಿಸಿಕೊಂಡು ನಿಮ್ಮ ಮನೋಭಾವಕ್ಕೊಪ್ಪುವ ಬೇರೊಬ್ಬಳನ್ನು ಲಗ್ನವಾಗಿ, ಮಾವಾರಿನ ರಾಣಾ ಪದವಿ ಅನುಭವಿಸಬಹುದು'[೩೦] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೧೩೩) ಎನ್ನುವ ವೀರತ್ವದ ಮಾತುಗಳನ್ನು ಆಡುವಳು.

ಕಿತ್ತೂರಿನ ಇತಿಹಾಸದಲ್ಲಿನ ದೊರೆಗಳ ಬದುಕನ್ನು ಗಮನಿಸಿದರೆ ಎಲ್ಲ ದೊರೆಗಳಲ್ಲಿ ವೀರತ್ವದ ಗುಣಗಳನ್ನು ಕಾಣುತ್ತೇವೆ. ಮಲ್ಲಸರ್ಜನ ತಂದೆ ವೀರಪ್ಪಗೌಡನು ಪೌರುಷವಂತರಾದವರು ಮಾತ್ರವೇ ಕಿತ್ತೂರಿನ ಕೋಟೆಯನ್ನುಳಿಸಿಕೊಳ್ಳಬಲ್ಲರು. ದಂಡಾಳುಗಳ ಸಂಗಡ ಭುಜಕ್ಕೆ ಭುಜ ಹಚ್ಚಿ ನಿಂತು ಕಾದಾಡಬಲ್ಲವನು ಮಾತ್ರವೇ ಇಲ್ಲಿ ದೊರೆಯಾಗಿರಬಲ್ಲ ಎಂಬ ಧೈರ್ಯ, ಶೌರ್ಯದ ಮಾತುಗಳನ್ನಾಡುತ್ತಿರುತ್ತಾನೆ

ಟಿಪ್ಪು ಕಿತ್ತೂರಿನ ಮೇಲೆ ದಾಳಿ ಮಾಡುವ ಸಂಭವದಲ್ಲಿ ದೊರೆ ಮಲ್ಲಸರ್ಜನಾದಿಯಾಗಿ ಸಭೆಯಲ್ಲಿ ಸೇರಿದ ಪ್ರತಿಯೊಬ್ಬರು ವೀರೋತ್ಸಾಹದ ನುಡಿಗಳನ್ನಾಡುವರು. 'ದೊರೆಯಾದವನು ಮಲಗಿದರೆ ಅವನ ರಾಜ್ಯವೂ ಮಲಗುತ್ತದೆ' ಎಂಬ ರಾಜನೀತಿಯ ಹಿನ್ನೆಲೆಯಲ್ಲಿ ಪರಾಕ್ರಮದ ಮಾತುಗಳನ್ನಾಡುವವನು ಮಲ್ಲಸರ್ಜ. ತಿಮ್ಮನಗೌಡ, ಗುರುಸಿದ್ಧಪ್ಪ, ಮಡಿವಾಳಪ್ಪ ಎಲ್ಲರೂ ಸೈನ್ಯದ ಬಗ್ಗೆ ವಿಶ್ವಾಸದ ಮಾತುಗಳನ್ನಾಡಿದಾಗ ಮಲ್ಲಸರ್ಜ ದೊರೆಯೂ ಸಹ 'ಕಿತ್ತೂರಿನ ಜನರು ಹೇಡಿಗಳಲ್ಲವೆನ್ನುವುದು ಆ ಸೊಕ್ಕಿನ ಶತ್ರುವಿಗೊಮ್ಮೆ ತಿಳಿದು ಹೋಗಲಿ. ಇದೇ ಈಗ ನಾಯಕರಾಡಿದ ಮಾತು ನೂರರಷ್ಟು ನಿಜ. ತಾಯಿನಾಡಿಗಾಗಿ ಜೀವದ ಹಂಗು ತೊರೆದು ಕಾರುವ ಸೇನೆಯ ಮುಂದೆ ಬಾಡಿಗೆಯ ಸೈನಿಕರ ಆಟವೇನೂ ನಡೆಯಲಾರದು'[೩೧] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೪೭) ಎಂಬ ಸಮ್ಮತದ ಮಾತುಗಳನ್ನಾಡುವವನು. ಗುರುಸಿದ್ಧಪ್ಪ ಆವೇಶದಿಂದೆದ್ದು 'ಅನುಮಾನ ಬೇಡ ಪ್ರಭು, ಅರಿಕೆ ಮಾಡಿಕೊಳ್ತೇನೆ ಯುದ್ದಕ್ಕೆ ಅಪ್ಪಣೆ ಕೊಡಿರಿ. ವೈರಿಗಳನ್ನೊಡಿಸದೇ ಹಿಂದಿರುಗಿ ಬಂದರೆ ಗುರುಸಿದ್ಧೇಶ ನಾಣೆ! ತಲೆದಂಡ! ತಲೆದಂಡ!'[೩೨] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೪೯) ಎಂಬ ವೀರಾವೇಶದ ಮಾತುಗಳನ್ನಾಡುವವನು.

ಟಿಪ್ಪು ಸುಲ್ತಾನ ಮಲ್ಲಸರ್ಜ ದೊರೆಗಳಾದಿಯಾಗಿ ಕೆಲವರನ್ನು ಸೆರೆಹಿಡಿದು ಒಯ್ದಾಗ ಅಲ್ಲಿ ಎಲ್ಲರನ್ನು ವಿಚಾರಣೆಗೊಳಪಡಿಸುತ್ತಿರುವ ವೇಳೆಯಲ್ಲಿ ಮಡಿವಾಳನನ್ನು ವಿಚಾರಣೆ ಮಾಡಿ 'ದರಬಾರದವರೆಲ್ಲಾ ಸುಮ್ಮನೆ ನಿಂತಿದ್ದರೂ ನೀನೊಬ್ಬ ಮಾತ್ರ ಕತ್ತಿ ಹಿರಿದು ನಮ್ಮ ಅಧಿಕಾರಿಗಳ ಮೇಲೇರಿ ಹೋಗಿದ್ದಿಯಂತೆ ನಿಜವೇ?' ಎಂದಾಗ 'ಅದು ಉದ್ಧಟತನವೆಂದು ನಾನೇನು ಒಪ್ಪುವುದಿಲ್ಲ ಮಹಾಪ್ರಭು. ಕಿತ್ತೂರ ರಾಜರ ಸೇವಕನಾಗಿರದೇ ನಾನು ತಮ್ಮ ಸೇವಕನೇ ಆಗಿದ್ದೇನೆಂದು ತಿಳಿಯೋಣ. ಕಿತ್ತೂರ ರಾಜರ ಮೇಲೆ ಬಂದಂಥ ಪ್ರಸಂಗ ತಮ್ಮ ಮೇಲೆ ಬಂದಿದ್ದರೆ ಹತ್ತಿರವಿದ್ದ ಸೇವಕನಾದ ನಾನು ಕತ್ತಿ ಹಿರಿಯದೆ ಸುಮ್ಮನಿದ್ದರೆ ತಮಗೇನು ಅನಿಸಬಹುದಿತ್ತು?'[೩೩] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೧೦೯) ಎನ್ನುತ್ತಲೇ ನೀನೊಬ್ಬನೇ ಒಬ್ಬ ಗಂಡುಗಲಿ ಎಂದು ಅವನ ಸ್ವಾಮಿನಿಷ್ಠೆಯನ್ನು ಮೆಚ್ಚಿಕೊಳ್ಳುತ್ತಾನೆ.

ಟಿಪ್ಪು ಮಲ್ಲಸರ್ಜನನ್ನು ಸೆರೆಹಿಡಿದ ವಿಷಯ ತಿಳಿದ ರಾಣಿ ರುದ್ರಮ್ಮ 'ಹೆಣ್ಣಾಗಿ ಹುಟ್ಟುವ ಬದಲು ನಾನು ಗಂಡಾಗಿದ್ದರೆಷ್ಟು ಚೆನ್ನಾಗಿರುತ್ತಿತ್ತು!' ಎನ್ನುವ ಆಕೆ ಮಲ್ಲಸರ್ಜನಂಥ ಶೂರ ಗಂಡನಿಗೆ ಶೂರ ಹೆಂಡತಿಯಾಗಿದ್ದಾಳೆ. ಸ್ವತಃ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ ಆಕೆ ಗೆಲುವು ಸಂಪಾದಿಸುತ್ತಾಳೆ. ಕಿತ್ತೂರು ಒಂದು ಗಂಡು ಮೆಟ್ಟಿನ ಕನ್ನಡ ನಾಡಿನ ಭಾಗವಾಗಿತ್ತು. ಅಚ್ಚಗನ್ನಡದ ಸಂಸ್ಕೃತಿ ಅಲ್ಲಿ ಚೆನ್ನಾಗಿ ಬೆಳೆದು ಬಂದಿತ್ತು. ಇದರ ಬೆಳವಣಿಗೆ ಮರಾಠರಿಗೆ ಅಸೂಯೆಯನ್ನುಂಟು ಮಾಡಿತ್ತು. ಅವರು ಹೇಗಾದರೂ ಮಾಡಿ ಇದನ್ನು ವಶಪಡಿಸಿಕೊಳ್ಳಬೇಕು ಎಂಬ ಆಸೆ ಹೊಂದಿದ್ದರು. ಅದರೆ ಸಾಧ್ಯವಾಗಲಿಲ್ಲ ಒಂದು ಮರಾಠಿ ದಾಖಲೆಯೇ ಹೇಳುತ್ತದೆ 'ಕಿತ್ತೂರಿನ ದೇಸಾಯಿ ಕರ್ನಾಟಕದಲ್ಲಿ ಪ್ರಬಲ ಕ್ರಾಂತಿಕಾರಿಯಾಗಿದ್ದ ಪೇಶ್ವೆಯವರು ಸತತ ೪೦ ವರ್ಷ ಕಿತ್ತೂರನ್ನು ಮೆಟ್ಟಿ ತಮ್ಮ ಅಧೀನಕ್ಕೆ ತೆಗೆದುಕೊಳ್ಳಲು ಯತ್ನಿಸಿದರೂ ಸಾಧ್ಯವಾಗಲಿಲ್ಲ.'[೩೪] (ವೃಷಭೇಂದ್ರಾಚಾರ್ಯ ಅರ್ಕಸಾಲಿ, ೨೦೦೯, ಪುಟ-೩೪) ಎಂಬ ವಿಚಾರಗಳನ್ನು ಕಾಣುತ್ತೇವೆ.

ಥ್ಯಾಕರೆ ದತ್ತಕದ ವಿಷಯದಲ್ಲಿ ಮೂಗುತೂರಿಸಿ ಹೇಗಾದರೂ ಮಾಡಿ ಕಿತ್ತೂರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಹವಣಿಸುತ್ತಾನೆ. ಕಪ್ಪಕಾಣಿಕೆ ಕೊಡಬೇಕೆಂದಾಗ ಆಕ್ರೋಶಿತಳಾದ ಚೆನ್ನಮ್ಮಾ

'ಕಪ್ಪ ಕಾಣಿಕೆ ಬೇಡಲಾಕ ಬಂದೀರಿ

ನಮ್ಮ ವಂಶಕ ಹುಟ್ಟಿರೇನು?

ಹಣ ಕೊಟ್ಟು ನಿಮ್ಮನ್ನ ಸಂತೈಸಲಾಕ

ಬೆನ್ನಿಗೆ ಬಿದ್ದ ಅಣ್ಣತಮ್ಮಂದಿರೇನು?

ಹಿಂದುಸ್ಥಾನ ಬಿಟ್ಟು ಎದ್ದೇಳ್ರಿ ಇಲದಿದ್ದ

ಜೀವಂತ ಒಡಿತಂತ ಸುಡುವೆ ನಾ[೩೫] (ವೃಷಭೇಂದ್ರಾಚಾರ್ಯ ಅರ್ಕಸಾಲಿ, ೨೦೦೯, ಪುಟ-೭೭) ಎಂದು ಕಿಡಿಕಿಡಿಯಾಗಿ ವೀರೋತ್ಸಾಹದ ನುಡಿಗಳನ್ನಾಡುತ್ತಾಳೆ.

ದತ್ತಕ ಪುತ್ರನನ್ನು ಸ್ವೀಕರಿಸಿದ ವಿಚಾರವನ್ನು ಕಂಪೆನಿ ಸರ್ಕಾರ ಅಂಗೀಕರಿಸಲಿಲ್ಲ ಎಂದು ಪತ್ರವನ್ನು ಹಿಡಿದುಕೊಂಡು ಬಂದ ಮಲ್ಲಪ್ಪಶೆಟ್ಟರಿಗೆ ಚೆನ್ನಮ್ಮಾ ಕಿತ್ತೂರು ಸರ್ವತಂತ್ರ ಸ್ವತಂತ್ರ ರಾಷ್ಟ್ರ ಕಂಪೆನಿ ಸರ್ಕಾರದ ಹೆಸರು ಹೇಳಿಕೊಂಡು ನಮ್ಮನ್ನು ಬೆದರಿಸಲು ಬಂದಿದ್ದೀರಾ ಎಂದಾಗ ಮಲ್ಲಪ್ಪಶೆಟ್ಟರು ಧಾರವಾಡದ ಕಲೆಕ್ಟರ್ ಸಾಹೇಬರು ಕಳಿಸಿದ ಪತ್ರ ಕೊಡುತ್ತಾರೆ. ಚೆನ್ನಮ್ಮಾ ಅದನ್ನು ಚಿಂದಿ ಚಿಂದಿಯಾಗಿ ಹರಿದು ತೂರುತ್ತಾ 'ಕಿತ್ತೂರನ್ನು ನಿಮ್ಮ ಕೈಯಲ್ಲಿಡುವುದೇ? ಕಿತ್ತೂರಿನ ರಾಜವಂಶವೇ ನಿರ್ನಾಮವಾಯಿತೆಂದು ಭಾವಿಸಿದಿರಾ? ಕಿತ್ತೂರಿನ ವೀರಪ್ರಜೆಗಳು ಮೃತರಾದರೆಂದೆಣಿಸಿದಿರಾ? ಕಿತ್ತೂರಿಗೆ ನಾನೇ ಕೈಯ್ಯಾರೆ ಬೆಂಕಿ ಇಟ್ಟು ಅದನ್ನು ಸುಟ್ಟು ಬಿಡುವೆನಲ್ಲದೇ ನಿಮ್ಮ ಕೈಗಾಗಲಿ, ನಿಮ್ಮ ದೊರೆಗಳ ಕೈಗಾಗಲಿ ಹಾಕುವೆನೆಂದು ಕನಸು ಮನಸ್ಸಿನಲ್ಲಿಯೂ ಭಾವಿಸಬೇಡಿ. ಚೆನ್ನಮ್ಮನ ದೇಹದಲ್ಲಿ ಒಂದೇ ಹನಿ ರಕ್ತವಿರುವವರೆಗೂ ಕಿತ್ತೂರು ಯಾರಿಗೂ ತಲೆಬಾಗಿಸುವುದಿಲ್ಲ'[೩೬] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೫೧) ಎಂಬ ವೀರೋತ್ಸಾದ ನುಡಿಗಳನ್ನಾಡುವಳು.

ಥ್ಯಾಕರೆ ಕಿತ್ತೂರಿನ ಮೇಲೆ ದಾಳಿ ಮಾಡುವ ವಿಷಯ ತಿಳಿದ ದೀಕ್ಷಿತರು ಎಲ್ಲರನ್ನು ಒಟ್ಟುಗೂಡಿಸಿ ವೀರೋತ್ಸಾಹದ ನುಡಿಗಳನ್ನಾಡುತ್ತ 'ಯುದ್ಧದಲ್ಲಿ ಸತ್ತರೂ ಚಿಂತೆಯಿಲ್ಲ. ನಿಮ್ಮ ಸಮಾಧಿಗಳ ಮಣ್ಣು ಕಣಗಳಿಂದ ವೀರಾದಿ ವೀರರು ಉದಯಿಸಿ ಧರ್ಮಯುದ್ಧವನ್ನು ಮುಂದುವರಿಸುತ್ತಾರೆ. ಆದರೆ ಶತ್ರುವಿಗೆ ಬೆನ್ನು ತಿರುಗಿಸಿ ಯಾರೂ ಹಿಂದಿರುಗಬೇಡಿ'[೩೭] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೫೫) ಎಂದು ಹುರಿದುಂಬಿಸಿದರೆ, ಚೆನ್ನಮ್ಮಾ 'ಕಿತ್ತೂರಿನ ವೀರರೇ, ಶತ್ರು ಸೈನ್ಯದ ಮೇಲೆ ಚಂಡಮಾರುತದಂತೆ ನುಗ್ಗಿ ಅವರ ಶಿರಗಳನ್ನು ಚೆಂಡಾಡಿರಿ ಬದುಕಿದರೆ ಸ್ವಾತಂತ್ರ್ಯ, ಸತ್ತರೆ ಸ್ವರ್ಗ'[೩೮] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ ಪು.ಸಂ ೭೮) ಎಂದು ಜನತೆಯಲ್ಲಿ ಆತ್ಮವಿಶ್ವಾಸವನ್ನು ತುಂಬುವಳು.

ಬ್ರಿಟೀಷರ ದುರ್ದೈವವೋ ಇಲ್ಲವೇ ಕಿತ್ತೂರ ಜನತೆಯ ಸುದೈವವೋ ಎನ್ನುವಂತೆ ಚೆನ್ನಮ್ಮಾ ಕಾಲವಶವಾದ ವರ್ಷವೇ ಕಿತ್ತೂರು, ಮಗದೊಂದು ಬಂಡಾಯಕ್ಕೆ ಸಜ್ಜುಗೊಂಡಿತು. ಈ ಎರಡನೆಯ ಬಂಡಾಯದ ರೂವಾರಿಗಳು ಕಿತ್ತೂರಿನ ರಾಜಮನೆತನಕ್ಕೆ ಸೇರಿದವರಲ್ಲ. ಅಲ್ಲಿನ ಶ್ರೀಮಂತ ವರ್ಗಕ್ಕೆ

ಸೇರಿದವರಲ್ಲ. ಬದಲಾಗಿ, ಆ ಪ್ರದೇಶಕ್ಕೆ ಸೇರಿದ ಓರ್ವ ಸಾಮಾನ್ಯ ಪ್ರಜೆ. ಸಂಗೊಳ್ಳಿ ರಾಯನಾಯಕನೆಂದು ಅವನ ಹೆಸರು. ಎಲ್ಲರೂ ಪ್ರೀತಿಯಿಂದ ಸಂಗೊಳ್ಳಿ ರಾಯಣ್ಣನೆಂದು ಕರೆಯುತ್ತಿದ್ದರು. ರಾಯಣ್ಣ ಒಬ್ಬ ಶೂರ, ಧೀರ, ಸ್ವಾತಂತ್ರ್ಯಪ್ರೇಮಿಯಾಗಿದ್ದನು. ಬೀಸುವ ಕಲ್ಲಿನ ಹಾಡೊಂದರಲ್ಲಿ

'ಗೆದ್ದು ಕಿತ್ತೂರ ತಂದು ಉದ್ದ ಬೀಳವೆ

ಕದ್ದ ಮಾತಲ್ಲ ನಿಮ್ಮಾಣೆ ಇಲದಿರಕ

ಬಿದ್ದ ಹೋಗುವೆ ಶರಣದಾಗ'[೩೯] (ಪಾಟೀಲ ವ್ಹಿ.ಎಲ್, ೨೦೧೨, ಪುಟ-೫೨) ಎಂಬ ಮಾತು ರಾಯಣ್ಣನ ವೀರತನಕ್ಕೆ ಸಾಕ್ಷಿಯಾಗಿವೆ.

ರಾಯಣ್ಣ ಯೋಧರ ಸಂಘಟನೆ ಮಾಡಿಕೊಳ್ಳುತ್ತಾ ವೀರಮ್ಮನವರ ಆಶೀರ್ವಾದ ಪಡೆದುಕೊಂಡು ಹೊರಟ ಆತ ಬಾಳೆಗುಂದದ ಕೊಳ್ಳದಲ್ಲಿದ್ದ ಹಬಸಿಯನ್ನು ತನ್ನ ಕಡೆ ಮಾಡಿಕೊಳ್ಳುತ್ತಾನೆ. ಆ ಭಾಗದಲ್ಲಿ ಕಂಟಕಪ್ರಾಯನಾಗಿದ್ದ ಕನಕೂರ ಒಕ್ಕುಳ ಭರಮನನ್ನು ಮಣ್ಣು ಮುಕ್ಕಿಸಿದ ರಾಯಣ್ಣ ಅವನಿಂದ ಹಾಗೂ ಚಂದ್ರಸೇನ ರಾಜನಿಂದ ಯೋಧರನ್ನು ಪಡೆಯುತ್ತಾನೆ. ದರೋಡೆಕೋರನೆಂದೇ ಹೆಸರಾಗಿದ್ದ ಬಂಡಾರಿ ಬಾಪು ತಾನಾಗೇ ಬಂದು ರಾಯಣ್ಣನಿಗೆ ಶರಣಾಗುತ್ತಾನೆ. ಅವರೆಲ್ಲ ಸೇರಿ ಶ್ರೀಮಂತರನ್ನು ಲೂಟಿ ಮಾಡುತ್ತಾರೆ. ಅನಂತರ ಇಂಗ್ಲೀಷರ ಖಜಾನೆ ಲೂಟಿ ಮಾಡಿ, ಅವರ ಕಂದಾಯ ಅಪಹರಿಸಿ ಸೈನ್ಯವನ್ನು ಬಲಗೊಳಿಸಿಕೊಂಡ ರಾಯಣ್ಣ ಇಂಗ್ಲೀಷರ ವಿರುದ್ಧ ತಮ್ಮ ಹೋರಾಟವನ್ನು ತೀವ್ರಗೊಳಿಸುತ್ತಾನೆ. ಸಂಪಗಾವಿಯ ಕಛೇರಿಯನ್ನು ಸುಡುತ್ತಾನೆ. ಬ್ರಿಟೀಷರ ಸೈನ್ಯ ಎಲ್ಲಿ ಸಿಗುತ್ತದೆಯೋ ಅಲ್ಲಿಯೇ ಬಗ್ಗು ಬಡಿಯುತ್ತಾನೆ. ರಾಯಣ್ಣನ ದಾಳಿ, ಕೊಳ್ಳೆ ಹೊಡೆಯುವ ರೀತಿ ಇವೆಲ್ಲವೂ ಅಬ್ಬರದ ಅಡ್ಡಮಳೆಯ ಭೀಕರತೆ ಮತ್ತು ಭಯಂಕರತೆಯನ್ನು ನೆನಪಿಸುತ್ತವೆ.

ಒಬ್ಬ ಸಾಮಾನ್ಯ ತಳವಾರನಾಗಿದ್ದ ರಾಯಣ್ಣ ನಿಸ್ವಾರ್ಥದಿಂದ, ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ಬಲಿಕೊಟ್ಟ. ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವಾತಂತ್ರ್ಯದಾಹ ಅವನಲ್ಲಿ ಸದಾ ಜಾಗೃತವಾಗಿದ್ದವು. ಮಹಾಸ್ವಾಭಿಮಾನಿ ಆಗಿದ್ದ ಆತ ಕುಲಕರ್ಣಿಗೆ ಏನೆಲ್ಲದಕ್ಕೆ ಎದುರುತ್ತರ ಕೊಡುತ್ತಾನೆ. ವೀರನಿಗೆ ತಕ್ಕ ಗುಣಗಳೆಲ್ಲವುಗಳ ಗಣಿ ಆತ. ಸಮಯಕ್ಕೆ ತಕ್ಕಂತೆ ವೇಷ ಬದಲಿಸಿ ಭಯಂಕರ ಕೇಡಿಗಳನ್ನೆಲ್ಲ ಹತ್ತಿಕ್ಕಿ, ಸೈನ್ಯ ಸಂಘಟಿಸಿ, ಬ್ರಿಟೀಷರ ಎದೆಯನ್ನೇ ನಡುಗಿಸುವಂಥ ದಂಗೆಗಳನ್ನು ನಡೆಸಿದ ಆತ ಇಡೀ ಕಿತ್ತೂರಿನ ಇತಿಹಾಸದಲ್ಲಿಯೇ ಎದ್ದು ಕಾಣುವ ವೀರಯೋಧ. ಗಲ್ಲಿಗೇರುವ ಮುಂಚೆ ಆತ ಹೇಳಿದ ಮಾತು ಆತನ ವೀರಗುಣಕ್ಕೆ ಸಾಕ್ಷಿ. 'ಅಳಬ್ಯಾಡ ಅವ್ವ

ಅಳಬ್ಯಾಡ. ನನಗ ಸಂತೋಷದಿಂದ ಅಪ್ಪಣೆ ಕೊಡು. ನಾನೊಬ್ಬ ಹೋದರೂ ಇನ್ನೊಬ್ಬ ಮಗ ಅದಾನ. ನಾನೇನು ಕಳ್ಳತನ ಸುಳ್ಳುತನ ಮಾಡಿ ಫಾಸೀ ಹೋಗುತ್ತಿಲ್ಲ. ಶೂರನಂಗ ಲಢಾಯಿ ಮಾಡಿ ವೀರಸ್ವರ್ಗ ಪಡೀತಿದೀನಿ'[೪೦] (ಬಸವರಾಜ ಕಟ್ಟೀಮನಿ, ೨೦೦೮, ಸಂಗೊಳ್ಳಿ ರಾಯನಾಯಕ ಪುಟ-೧೭೮) ಇಂಥ ಮಾತನ್ನು ರಾಯಣ್ಣ ಮಾತ್ರ ಹೇಳಬಲ್ಲ. ಇಂಥ ರಾಯಣ್ಣನ ಬಗ್ಗೆ ಅಪಾರ ಅಭಿಮಾನ ಇಟ್ಟುಕೊಂಡಿದ್ದ ಕಟ್ಟೀಮನಿಯವರು ಅವನ ವ್ಯಕ್ತಿತ್ವದ ವಿವಿಧ ಮುಖಗಳನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಿದ್ದಾರೆ.

ಬ್ರಿಟೀಷರು ಕೊಡಗುವಿನ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ವೀರರಾಜ ಯುದ್ಧವನ್ನು ಸಾರಿದಾಗ ಕೊಡಗಿನ ದಳಪತಿಗಳು 'ಪರದೇಶಿಯ ಸೊಕ್ಕು ಮುರಿಯಬೇಕು. ಆತನ ಮೊಮ್ಮಕ್ಕಳೂ, ಮರಿಮಕ್ಕಳೂ ಮರೆಯದಂಥ ಪಾಠ ಕಲಿಸಬೇಕು. ನಮ್ಮ ಭೂಮಿಯ ಜನರನ್ನು ಗುಲಾಮರಾಗಿ ಮಾಡೋದು ಬೊಂಬೆಯಾಟವಾಗಿ ಹೋಯ್ತೆ ಇವರಿಗೆ'[೪೧] (ನಿರಂಜನ, ೨೦೦೫, ಕಲ್ಯಾಣಸ್ವಾಮಿ, ಪುಟ-೩೪) ಎಂದು ವೀರತ್ವದ ನುಡಿಗಳನ್ನಾಡುತ್ತಾರೆ. ಬ್ರಿಟೀಷರ ಆಡಳಿತದಿಂದ ಕೊಡಗು ರಾಜ್ಯವನ್ನು ಮುಕ್ತಗೊಳಿಸಿ ಮತ್ತೆ ರಾಜರನ್ನು ಸಿಂಹಾಸನದ ಮೇಲೆ ಕೂಡಿಸಬೇಕೆಂದು ಪುಟ್ಟಬಸವನ ನೇತೃತ್ವದಲ್ಲಿ ಒಟ್ಟಾದ ಜನ ಹೋರಾಟ ಮಾಡುವಾಗ ಹುಲಿಕುಂದದ ನಂಜಯ್ಯ ಜನರಿಗೆ ಬ್ರಿಟೀಷರ ವಿರುದ್ಧ ಸಿಡಿದೇಳುವಂತೆ ವೀರತ್ವದ ಮಾತುಗಳನ್ನಾಡುತ್ತಾನೆ. 'ನನಗೆ ಈ ಸೈನಿಕ ಜೀವನ ಸಾಕಾಗಿದೆ ಹಳ್ಳಿಯಲ್ಲಿದ್ದು ಹೊಲ ಉಳುಮೆ ಮಾಡಬೇಕೂಂತ ಆಸೆ. ಆದರೆ ಇದೊಂದು ಧರ್ಮಯುದ್ದವನ್ನು ನಾನು ಮಾಡಲೇಬೇಕು. ನಾವೆಲ್ಲಾ ಹೋರಾಡಲೇಬೇಕು. ಸ್ವಾತಂತ್ರ್ಯವನ್ನು ಪುನಃ ಗಳಿಸಿ, ಸಿಂಹಾಸನದ ಮೇಲೆ ರಾಜರನ್ನು ಕೂಡ್ರಿಸಿ, ನಾನು ಖಡ್ಗ ಕೆಳಗಿಡ್ತೇನೆ. ಅಷ್ಟರವರೆಗೆ ನಿಮ್ಮ ಜತೆಯವನಾಗಿ ನಾನು ರಣಭೂಮಿಯಲ್ಲಿರುವವನೇ ಆಕಸ್ಮಾತ್ ಯುದ್ಧರಂಗದಲ್ಲಿ ನಾನೇನಾದರೂ ಸತ್ತರೆ ನನ್ನ ಪಾಲಿಗೆ ಅದು ವೀರಸ್ವರ್ಗ! ಹುಲಿಕುಂದ ನಂಜಯ್ಯ ಯಾವತ್ತೂ ಹೇಡಿಯಾಗಿರಲಿಲ್ಲ, ದ್ರೋಹಿಯಾಗಿರಲಿಲ್ಲ, ಆತ ವೀರನಾಗಿಯೇ ಮಡಿದ ಅಂತ ನನ್ನ ಮುಂದಿನ ಪೀಳಿಗೆಯವರು ಹೇಳಿಯಾರು!'[೪೨] (ನಿರಂಜನ, ೨೦೦೫, ಕಲ್ಯಾಣಸ್ವಾಮಿ, ಪುಟ-೧೦೬) ಎಂದು ಜನರನ್ನು ಒಗ್ಗೂಡಿಸುತ್ತಾನೆ.

ಕಟ್ಟೀಮನಿಯವರ ನರಗುಂದ ಬಂಡಾಯದಲ್ಲಿನ ಭೋಟುಸಿಂಗ್ ಜಮಖಂಡಿಯಲ್ಲಿ ಸೇನಾಪತಿಯಾಗಿದ್ದು ವೀರಪುರುಷ, ಧೈರ್ಯಶಾಲಿ, ಸಮರಪ್ರೇಮಿ, ಸ್ವಾತಂತ್ರ್ಯಪ್ರೇಮಿಯೂ ಆಗಿರುತ್ತಾನೆ. ನರಗುಂದದಲ್ಲಿ ಅವಮಾನಿತನಾದ ರಾಜಶೇಖರ ಜಮಖಂಡಿಗೆ ಹೋಗಿ ಭೋಟೂಸಿಂಗನ ಸ್ನೇಹ ಸಂಪಾದಿಸಿ ಎರಡು ವರ್ಷಗಳವರೆಗೆ ಅಲ್ಲಿಯೇ ಇರುತ್ತಾನೆ.

ಜಮಖಂಡಿಯ ದೊರೆ ರಾಜಾಸಾಹೇಬರು ಇಂಗ್ಲೀಷರ ವಿರುದ್ಧ ಬಂಡೇಳುವ ವಿಷಯ ತಿಳಿದ ಆಂಗ್ಲ ಅಧಿಕಾರಿಗಳು ಆತನನ್ನು ಸೆರೆಯಲ್ಲಿರಿಸಿ ವಿಚಾರಣೆ ಮಾಡುತ್ತಿರುವ ಸಂದರ್ಭದಲ್ಲಿ ಛೋಟುಸಿಂಗ್‌ನ ವಿಚಾರಣೆ ನಡೆದು ಈತ ಎಲ್ಲ ತಪ್ಪನ್ನು ತನ್ನ ಮೇಲೆಯೇ ಹಾಕಿಕೊಳ್ಳುತ್ತಾನೆ. ಇದರಿಂದ ರಾಜಾಸಾಹೇಬನಿಗೆ ಬಿಡುಗಡೆಯಾಗಿ ಚೋಟುಸಿಂಗ್‌ನಿಗೆ ಫಾಸೀ ಶಿಕ್ಷೆಯಾಗುವುದು. ಸಾವಿಗೂ ಹೆದರದ ವೀರತ್ವದ ಗುಣ, ರಾಜನನ್ನು ರಕ್ಷಿಸುವಲ್ಲಿ ತನ್ನನ್ನೇ ಸಮರ್ಪಣೆ ಮಾಡಿಕೊಂಡ ತ್ಯಾಗ ಗುಣವನ್ನು ಈತನಲ್ಲಿ ಕಾಣುತ್ತೇವೆ.

ಇಂಗ್ಲೀಷರ ದಂಡು ನರಗುಂದದ ಊರೊಳಕ್ಕೆ ಬಂದ ಸಂದರ್ಭದಲ್ಲಿ ಅದನ್ನು ಎದುರಿಸಲಾಗದ ಅಸಹಾಯಕನಾದ ರಾಜ ಪಲಾಯನಗೈಯ್ಯುವ ಮಾತುಗಳನ್ನಾಡಿದಾಗ ಆತನ ಅಂಗರಕ್ಷಕನಾದ ವಿಷ್ಣು 'ದೇವರ ಮನಸ್ಸಿನಲ್ಲಿದ್ದಂತೆ ಆಗುತ್ತದೆ ಮಹಾರಾಜ್. ಈಗಲೂ ನಾವು ವೈರಿಗಳನ್ನೋಡಿಸಲು ಸಾಧ್ಯವಿದೆ. ನಾವು ರಣರಂಗದಲ್ಲಿಲ್ಲವಾದ್ದರಿಂದ ನಮ್ಮ ಸೈನಿಕರಿಗೆ ಹುರುಪು ಕೊಡಲು ಯಾರೂ ಇಲ್ಲ. ನಾವು ಅಲ್ಲಿಗೆ ಹೋಗಿ ಕಾದಾಡುವಾ. ಅಂದರೆ ಯಾರೂ ಓಡಿಹೋಗಲಿಕ್ಕಿಲ್ಲ'[೪೩] (ಬಸವರಾಜ ಕಟ್ಟೀಮನಿ, ೧೯೬೯, ನರಗುಂದ ಬಂಡಾಯ, ಪುಟ-೧೩೨) ಎಂಬ ವೀರಾವೇಶದ ಮಾತುಗಳನ್ನು ಆಡುವನು. ರಾಜಶೇಖರ ಇಂಗ್ಲೀಷರ ದಂಡನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಕೃಷ್ಣಾಜಿಪಂತ ಇಪ್ಪತ್ತು ಮೂವತ್ತು ಸೈನಿಕರನ್ನು ಅವನ ಮೇಲೆ ಬಿಡುತ್ತಾನೆ. ಕೇವಲ ಐದು ಜನರಿರುವ ರಾಜಶೇಖರನ ಕಡೆಯವರು ಒಬ್ಬೊಬ್ಬರಾಗಿ ನೆಲಕ್ಕುರುಳಿ ಬೀಳುತ್ತಾರೆ. ರಾಜಶೇಖರನ ಕೈ, ತೋಳು, ಕೆನ್ನೆ, ಭುಜಗಳಿಗೆ ಚಿಕ್ಕ ಪುಟ್ಟ ಗಾಯಗಳಾಗಿ ನೆತ್ತರು ಹರಿಯತೊಡಗುತ್ತದೆ. ಅಂತಹ ಸ್ಥಿತಿಯಲ್ಲೂ ಎದೆಗುಂದದೆ ಕತ್ತಿ ತಿರುವುತ್ತ ವೀರಾವೇಶದಿಂದ ಹೋರಾಡುವುದನ್ನು ಕಂಡ ವೈರಿ ಸೈನಿಕರು ಸಹ "ಭಲೆ ಭಲೆ" ಎಂದು ಹಾಡಿಹೊಗಳುತ್ತಾರೆ. ತನ್ನ ಒಂದು ತೋಳು ಕತ್ತರಿಸಿ ಬಿದ್ದರೂ ಸಹ ಹೋರಾಡುವನು. ಕೃಷ್ಣಾಜಿಪಂತ ಈತನನ್ನು ಮೋಸದಿಂದ ಸೆರೆಹಿಡಿದಾಗ ಅವನ ಮೇಲೇರಿ ಹೋಗುವನು.

ನಿರಂಜನರ 'ಚಿರಸ್ಮರಣೆ' ಕಾದಂಬರಿಯಲ್ಲಿ ಜಮೀನ್ದಾರರು ರೈತರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆಯನ್ನು ಸಹಿಸದ ಪಂಡಿತರು ಅಪ್ಪು ಮತ್ತು ಚಿರಕುಂಡರನ್ನು ಕಯ್ಯೂರಿನ ರೈತ ಹೋರಾಟದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿ 'ದುಡಿಯುವ ಜನರೆಲ್ಲ ಒಂದಾದರೆ, ಸುಲಿಯುವ ಜನರೆಲ್ಲ ಸೋತು ಹೋಗ್ತಾರೆ. ನಮ್ಮನ್ನು ಬಿಗಿದಿರುವ ಬೇಡಿಗಳು ಪುಡಿ ಪುಡಿಯಾಗ್ತವೆ. ನಮ್ಮ ದೇಶದಲ್ಲಿ ಜನಕ್ರಾಂತಿ ಬೇರೆಯಲ್ಲ. ನಮ್ಮ ರೈತರೆಲ್ಲ ಎಚ್ಚರವಾಗ್ಬೇಕು, ಒಗ್ಗಟ್ಟಾಗ್ಬೇಕು.... ಹಳ್ಳಿ

ಹಳ್ಳಿಗಳಲ್ಲಿ ರೈತಸಂಘ ಸ್ಥಾಪಿಸ್ಬೇಕು'[೪೪] (ನಿರಂಜನ, ೨೦೦೧, ಚಿರಸ್ಮರಣೆ, ಪುಟ-೫೦) ಎಂದು ಅವರನ್ನು ಹುರಿದುಂಬಿಸುತ್ತಾರೆ.

ಕಟ್ಟೀಮನಿಯವರ 'ಮಾಡಿಮಡಿದವರು' ಕಾದಂಬರಿಯಲ್ಲಿನ ದೇಸಾಯಿಯವರು ಶೇಖರ ತನ್ನ ಮಗನನ್ನು ಹೋರಾಟದಿಂದ ಹಿಂದಕ್ಕೆ ಕಳಿಸುವಂತೆ ಪಾರ್ವತವ್ವನ ಹತ್ತಿರ ಬಂದು ತಾಕೀತು ಮಾಡುವುದಲ್ಲದೆ ತಮ್ಮ ಹೊಲದ ನಾಲ್ಕು ವರ್ಷದ ಲಾವಣಿ ಹಣವನ್ನು ಕೊಟ್ಟು ಹೊಲವನ್ನು ಬಿಡುವಂತೆ ಹೇಳಿ ಹೋದಾಗ ಚಿಂತೆಗೊಳಗಾದ ಪಾರ್ವತವ್ವ ಮಗನಾದ ಶೇಖರ ಮತ್ತು ಆತನ ಸ್ನೇಹಿತರ ಮುಂದೆ ಪ್ರಸ್ತಾಪಿಸುತ್ತ 'ಈ ತೋಳು ಇರುವತನಕಾ ಯಾರಿಗೂ ಅಂಜಬೇಕಾಗಿಲ್ಲ. ಕೂಲಿ ಮಾಡಿ ದುಡಿದು ಇರ್ತೀವಿ, ಆದರೆ ಯಾರಿಗೂ ಅಂಜಾಕಿಲ್ಲ'[೪೫] (ಬಸವರಾಜ ಕಟ್ಟೀಮನಿ, ೨೦೦೯, ಮಾಡಿಮಡಿದವರು, ಪುಟ-೧೦೭) ಎಂದು ಆವೇಶದಿಂದ ನುಡಿಯುತ್ತಾಳೆ. ಕನ್ನಡ ನಾಡಿನ ಕೆಚ್ಚು ಕಲಿತನಗಳೇ ಮೂರ್ತಿವೆತ್ತು ಬಂದಂತಿದ್ದ ಆ ತಾಯಿ ಪಾರ್ವತವ್ವನನ್ನು ಕಂಡು ಎಲ್ಲರಿಗೂ ಅಭಿಮಾನ ಉಕ್ಕಿ ಬರುತ್ತದೆ. ಆಗ ಸಂಗಣ್ಣ ತಲೆ ತಲಾಂತರಗಳಿಂದ ದುಡಿಯುತ್ತ ಬಂದ ಹೊಲವನ್ನು ಯಾಕೆ ಬಿಡಬೇಕು? ಲಿಂಗಣ್ಣ ಮಾಡಿದ ಅಪರಾಧವಾದರೂ ಏನು? 'ನೀನೇನೂ ಚಿಂತೀ ಮಾಡಬ್ಯಾಡವ್ವ, ಅವರು ಹ್ಯಾಂಗ ಹೊಲ ಬಿಡಿಸತಾರ ನಾ ನೋಡತೀನಿ. ಬಿಡಿಸಿದರೂ ನಾಳೆ ಅದನ್ನ ಯಾರು ಮಾಡಾಕ ಬರತಾರ ಅದನ್ನೂ ನೋಡತೀನಿ'[೪೬] (ಬಸವರಾಜ ಕಟ್ಟೀಮನಿ, ೨೦೦೯, ಮಾಡಿಮಡಿದವರು, ಪುಟ-೧೦೭) ಎಂದು ವೀರತ್ವದಿಂದ ಸವಾಲು ಹಾಕುವ ರೀತಿಯಲ್ಲಿ ಮಾತನಾಡುತ್ತಾನೆ.

ಪೋಲೀಸ್‌ನವರು ಸಂಗಣ್ಣ ಮನೆಗೆ ಬಂದಿರುವ ವಿಷಯ ತಿಳಿದು ಹುಡುಕಿಕೊಂಡು ಬಂದಾಗ ಅವನಿರುವ ಕೋಣೆಯೊಳಗೆ ಬಾಣಂತಿ ಇರುವುದಾಗಿ ತಡೆಯುವರು. ಸಂಶಯ ಬಂದ ಪೋಲೀಸ್‌ನವರು ಕೋಣೆಯೊಳಕ್ಕೆ ನುಗ್ಗಲು ಹೋದಾಗ 'ನರಳುತ್ತ ಬಿದ್ದುಕೊಂಡಿದ್ದ ಮುದುಕಿಗೂ ಇನ್ನು ತಡೆಯಲಾಗಲಿಲ್ಲ. ಕೊಂಚವೂ ಶಕ್ತಿಯಿಲ್ಲದಿದ್ದರೂ ಆಗ ಆಕೆಯ ಶರೀರದಲ್ಲಿ ಆವೇಶ ಬಂದಂತಾಯಿತು. ದಿಗ್ಗನೆ ಹಾಸಿಗೆಯಿಂದೆದ್ದು ಫೌಜುದಾರನಿಗೆ ಅಡ್ಡವಾಗಿ ತನ್ನ ಮೂಳೆಯ ದೇಹವನ್ನು ನಿಲ್ಲಿಸಿ ನಡುಗುವ ದನಿಯಲ್ಲಿ ನುಡಿದಳು. "ನನ್ನ ಪ್ರಾಣದಾಗ ತ್ರಾಣ ಇರೂತನಕ ಆ ಕೋಣೆಯೊಳಗ ನಿನಗ ಹೋಗಾಕ ಕೊಡಾಕಿಲ್ಲ. ಸುಮ್ಮನ ಹೋಗೋ ಮೂಳಾ!"'[೪೭] (ಬಸವರಾಜ ಕಟ್ಟೀಮನಿ, ೨೦೦೯, ಮಾಡಿಮಡಿದವರು ಪುಟ-೧೨೯) ಎಂದು ದಿಟ್ಟತನದಿಂದ ಹೇಳುತ್ತಾಳೆ. ಇಲ್ಲಿ ಆ ಮುದುಕಿಗೆ ಇಂಗ್ಲೀಷ್‌ರ ಸರ್ಕಾರದ ಬಗ್ಗೆ ಇರುವ ಆಕ್ರೋಶ ಎಂತಹುದು ಎಂಬುದು ವ್ಯಕ್ತವಾಗುವುದು.

೪.೨ ತ್ಯಾಗ :

ತ್ಯಾಗವೆಂದರೆ ತ್ಯಜಿಸುವುದು ಅಥವಾ ಬಿಡುವುದು ಎಂದರ್ಥ. ಅಂದರೆ ಸರ್ವಸಂಗ ಪರಿತ್ಯಾಗವಲ್ಲ. ಬದುಕಿಗೆ ಅಹಿತ ಎನಿಸಿದವುಗಳತ್ತ ಮನಸ್ಸನ್ನು ಹರಿಯಬಿಡದಿರುವುದು ತ್ಯಾಗ. ಮಾನವ ಜೀವನದ ಎಲ್ಲ ಸ್ಥಿತಿಗತಿಗಳ ಉತ್ಕರ್ಷೆಗೆ ತ್ಯಾಗಭಾವನೆಯ ಅಗತ್ಯವಿದೆ. ವ್ಯಕ್ತಿ, ಕುಟುಂಬ, ಸಂಸ್ಥೆ, ಸಮಾಜ, ರಾಷ್ಟ್ರ ಹಾಗೂ ಸಮಸ್ತ ಮಾನವಕುಲ ಸಂವರ್ಧನೆಗೆ ತ್ಯಾಗದ ಅಗತ್ಯವಿದೆ. ಜಗತ್ತಿನ ಯಾವುದೇ ಪ್ರದೇಶದ ಇತಿಹಾಸ ಮಹಾನ್ ವ್ಯಕ್ತಿ ಮಾಡಿದರೆ, ಮಹತ್ವದ ಮೂಲಕಾರಣ ತ್ಯಾಗದಲ್ಲಿ ಹುದುಗಿರುತ್ತದೆ. ಯಾವುದೇ ದೇಶ, ವ್ಯಕ್ತಿ, ಸಮಾಜದ ಉನ್ನತಿಯ ಇತಿಹಾಸ ನೋಡಿದರೆ ಅದು ತ್ಯಾಗದ ಇತಿಹಾಸವಾಗಿರುವುದು ಕಾಣಿಸುತ್ತದೆ. ವ್ಯಕ್ತಿ ಅಥವಾ ಸಮಾಜ ಜೀವನದಲ್ಲಿ ತ್ಯಾಗಭಾವನೆ ನೆಲೆಗೊಳ್ಳಲು ವಿವೇಕ, ಧೈರ್ಯ, ನಿರ್ಭಯತೆ ಹಾಗೂ ಪರಾಕ್ರಮ ಗುಣಗಳ ಅಗತ್ಯವಿದೆ. ಇವುಗಳಿರುವಲ್ಲಿ ಮಾತ್ರ ತ್ಯಾಗ ಸಾಧ್ಯ. ಹಿರಿಯರ ತ್ಯಾಗ, ಬಲಿದಾನಗಳು ಸ್ಮರಣಾರ್ಹ. ಅವು ಮುನ್ನಿನ ಇತಿಹಾಸವನ್ನು ಕಣ್ಣುಮುಂದೆ ತಂದು ನಿಲ್ಲಿಸುತ್ತವೆ. ಹೊಸತೊಂದು ಬೆಳಕನ್ನು ತೋರುತ್ತವೆ. ಆ ಬೆಳಕು ದುರ್ಗಮವಾದ ಹಾದಿಯನ್ನೂ ಸುಗಮಗೊಳಿಸುತ್ತದೆ ಜೀವನ ಅಧ್ಯಯನ ತನ್ನದರ ಜೊತೆಗೆ ಸಮಷ್ಟಿ ಪ್ರಜ್ಞೆಯನ್ನು ಮೂಡಿಸುತ್ತದೆ.

ಅಮೋಘವರ್ಷ ನೃಪತುಂಗನು ಹುಟ್ಟಿದಂದು ಆತನ ಕ್ಷೇಮಕ್ಕಾಗಿ ಭಟನೊಬ್ಬ ತಲೆಗೊಟ್ಟ ವೀರಕಥೆ ಸಾರುವ ಚಿನ್ನದ ಹಲಗೆಯನ್ನು ಗೋವಿಂದ ಚಕ್ರವರ್ತಿಗಳು ತೊಟ್ಟಿಲಿಗೆ ಕಟ್ಟಿಸಿರುತ್ತಾರೆ. ತದನಂತರ ಅದು ನೃಪತುಂಗ ಚಕ್ರವರ್ತಿಗಳ ಶಯ್ಯಾಗೃಹದಲ್ಲಿದ್ದು ತನ್ನ ತಂದೆ ಹೇಳಿದ ಮಾತುಗಳು ಆತನ ತಲೆಯಲ್ಲಿ ಕೊರೆಯುತ್ತಿರುತ್ತವೆ. 'ನಿನಗಾಗಿ ಪ್ರಾಣತ್ಯಾಗ ಮಾಡಿದವರನ್ನು ಮರೆಯಬೇಡ. ಅರಸೊತ್ತಿಗೆ ನಿತ್ಯ ಸುಖಸಮಾರಾಧನೆಯ ಸುಪ್ಪತ್ತಿಗೆಯಲ್ಲ. ಪ್ರಜೆಗಳ, ವೀರಭಟರ ತ್ಯಾಗದ ಹಾಲಿನಿಂದ ಬೆಳೆದ ರಾಜಶರೀರ ಅವರ ಸೇವೆಗೆ ಮೀಸಲಾಗಬೇಕು. ರಾಜಮಕುಟ ಆ ಸೇವಾವ್ರತದ ರತ್ನಕಂಕಣ. ನಿತ್ಯ ನಿತ್ಯ ನೆನಪಿರಲಿ ನಿನಗಾಗಿ ಒಬ್ಬನು ಜೀವವಿತ್ತ, ಅಖಂಡ ಪ್ರಜಾಕೋಟಿಗಾಗಿ ಸಮಯ ಬಂದಾಗ ಪ್ರಾಣಕೊಡಲು ನೀನು ಸಿದ್ಧವಿರು'[೪೮] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ ಪುಟ-೨೩) ಎಂಬ ಮಾತುಗಳು ಅವನನ್ನು ಬಾಧಿಸುತ್ತಲೇ ಇದ್ದು ಪ್ರಜೆಗಳಿಗೋಸ್ಕರ ತನ್ನ ಬದುಕನ್ನೇ ಮೀಸಲಿಡುತ್ತಾನೆ.

ರಾಜ್ಯಕ್ಕೆ ಹನ್ನೆರಡು ವರ್ಷಗಳ ಕಾಲ ಭೀಕರ ಕ್ಷಾಮ ಬಂದು ಕ್ಷಾಮದ ಮಾರಿಗಳಾದ ರೋಗ ರುಜಿನಗಳು ಪ್ರಜಾಕೋಟಿ ನಷ್ಟವಾಗುವುದೆಂದು ಗೋಲಯಭಟ್ಟರು ಹೇಳಿ, ಅದಕ್ಕೆ ಪರಿಹಾರವೆಂದರೆ ಶಾಂತಿಯಜ್ಞ ಮಾಡಲು ರಾಜಪುರುಷನೇ ಮುಂದೆ ಬರಬೇಕೆನ್ನುವರು. ಜೊತೆಗೆ

ರಾಜಪುರುಷನು ತನ್ನ ದೇಹದ ಯಾವುದಾದರೂ ಒಂದು ಅಂಗವನ್ನು ಮಾತ್ರ ಕೊಟ್ಟರೆ ಸಾಕೆಂದಾಗ ಕರವೀರಪುರದ ಮಹಾಲಕ್ಷ್ಮಿಗೆ ಚಕ್ರವರ್ತಿಗಳು ತಮ್ಮ ಎಡಗೈಯ ಬೆರಳನ್ನು ದಾನ ಮಾಡಿ ರಾಜ್ಯಕ್ಕೆ ಒದಗಬಹುದಾದ ಭೀಕರ ಕ್ಷಾಮದ ಸಂಕಷ್ಟವನ್ನು ದೂರ ಮಾಡುತ್ತಾರೆ. ರಾಜ್ಯದ ಜನತೆಗೋಸ್ಕರ ತನ್ನ ಬೆರಳನ್ನು ದಾನ ಮಾಡಿದ ಚಕ್ರವರ್ತಿಗಳನ್ನು ಕೊಂಡಾಡುತ್ತ ಗೋಲಯಭಟ್ಟರು 'ಲೋಕದಲ್ಲಿ ಶಿಬಿ, ದಧೀಚಿಗಳೇ ಮಹಾತ್ಯಾಗಿಗಳೆನ್ನುತ್ತಾರೆ ಪ್ರಭು. ತಮ್ಮ ತ್ಯಾಗ ಅವರಿಗಿಂತಲೂ ದೊಡ್ಡದು. ದಧೀಚಿ ತ್ಯಾಗ ಮಾಡಿದುದು ಒಬ್ಬ ಇಂದ್ರನಿಗಾಗಿ; ಶಿಭಿ ತ್ಯಾಗ ಮಾಡಿದುದು ಒಂದು ಪಾರಿವಾಳಕ್ಕಾಗಿ, ಜಿಮೂತವಾಹನ ಆತ್ಮಾರ್ಪಣೆ ಮಾಡಿದುದು ನಾಗಕುಲ ಬದುಕಲೆಂದು ಮಾತ್ರ, ಆದರೆ ಸಮಸ್ತ ಲೋಕ ಹಿತಾಕಾಂಕ್ಷೆಯಿಂದ ಮಾಡಿದ ತಮ್ಮ ತ್ಯಾಗ ಅವರೆಲ್ಲದಕ್ಕಿಂತಲೂ ಹಿರಿದು. ಚಕ್ರವರ್ತಿಗಳೆಂಬ ತಮ್ಮ ಹೆಸರು ಸಾರ್ಥಕವಾಯಿತು'[೪೯] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೧೭೨) ಎಂದು ಚಕ್ರವರ್ತಿಗಳ ತ್ಯಾಗ ಗುಣವನ್ನು ಕೊಂಡಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನರಾಯರು ಕಂಚಿಯನ್ನು ಮುತ್ತಿದ್ದ ಕಳಿಂಗದ ಗಜಪತಿರಾಯರನ್ನು ಹಿಮ್ಮೆಟ್ಟಿಸಲು ಲಕ್ಕಣ್ಣ ದಣ್ಣಾಯಕರ ಜೊತೆಗೂಡಿ ಸೈನ್ಯ ತೆಗೆದುಕೊಂಡು ಹೋದಾಗ ಲಕ್ಕಣ್ಣ ದಣ್ಣಾಯಕರನ್ನು ಮೋಸದಿಂದ ಕೊಲ್ಲುತ್ತಾರೆ. ವೀರಾವೇಶದಿಂದ ಹೋರಾಡಿ ಶ್ರೀ ಮಲ್ಲಿಕಾರ್ಜುನರಾಯರು ಗಜಪತಿರಾಯರನ್ನು ಹಿಮ್ಮೆಟ್ಟಿಸಿ ವಿಜಯಸಾಧಿಸುತ್ತಾರೆ. ಆದರೆ ವಿಜಯನಗರದ ರಾಜ್ಯಾಧಿಕಾರ ವಹಿಸಿಕೊಂಡಿದ್ದ ಶ್ರೀ ವಿರೂಪಾಕ್ಷರಾಯರು ದೂತನ ಕೈಯಲ್ಲಿ ಪತ್ರವೊಂದನ್ನು ಕಳಿಸಿ ವಿಜಯನಗರಕ್ಕೆ ಮರಳಿ ಬಂದರೆ ಯುದ್ಧ ಅನಿವಾರ್ಯವಾಗುತ್ತದೆ ಎಂದು ಬರೆದು ಕಳಿಸಿರುತ್ತಾರೆ. ವಿಷಯವನ್ನೋದಿದ ಮಲ್ಲಿಕಾರ್ಜುನರಾಯರು ಕಂಬನಿ ತುಂಬಿಕೊಳ್ಳುತ್ತಾರೆ. ಸೈನ್ಯ ತೆಗೆದುಕೊಂಡು ವಿಜಯನಗರದ ಮೇಲೆ ಹೋಗಲೇ? ಎಂದು ಆಲೋಚಿಸಿ ಮರುಕ್ಷಣದಲ್ಲಿಯೇ ವಿಜಯನಗರದ ಸೈನ್ಯ ವಿಜಯನಗರದ ಮೇಲೆಯೇ ಕಾದುವುದೇ ಎಂದುಕೊಳ್ಳುತ್ತ ತಾವು ವಿಜಯನಗರದಲ್ಲಿರುವ ಪಂಪಾನಾಥನಿಗೆ ಬೇಕಾಗಿರಲಿಲ್ಲವೆಂದೇ ಕಾಣುತ್ತದೆ. ಎಲ್ಲವೂ ದೈವೆಚ್ಛೆ. ಶ್ರೀ ಪಂಪಾವಿರೂಪಾಕ್ಷರಾಯರೇ ವಿಜಯನಗರದ ರಾಜ್ಯಾಧಿಕಾರ ನಿರ್ವಹಿಸಲಿ ಎಂದು ಸುಮ್ಮನಾಗುತ್ತಾರೆ. ವಿಜಯನಗರದ ಶ್ರೇಯೋಭಿವೃದ್ಧಿಗೆ ಶ್ರೀ ಮಲ್ಲಿಕಾರ್ಜುನರಾಯರ ತ್ಯಾಗ ಗುಣವನ್ನು ಕಾಣುತ್ತೇವೆ.

ಕೆಂಪೇಗೌಡರ ಸೊಸೆಯಾದ ಲಕ್ಷ್ಮಮ್ಮಳ ತ್ಯಾಗ ಎಂತವರೂ ಮೆಚ್ಚುವಂತಾಗಿರುವುದು. ಕೆಂಪೇಗೌಡ ಬೆಂಗಾಳೂರು ನಗರ ಸ್ಥಾಪನೆ ಮಾಡಬೇಕೆಂಬ ಉದ್ದೇಶದಿಂದ ಕೋಟೆಯೊಂದನ್ನು ಕಟ್ಟಿಸುತ್ತಾನೆ. ಆ ಕೋಟೆಯ ಬಾಗಿಲು ನಿಲ್ಲಿಸಿದರೆ ಬೆಳಗಾಗುವುದರಲ್ಲಿಯೇ ಅದು ನೆಲಕ್ಕೆ ಬೀಳುತ್ತದೆ.

ಹೀಗೆ ಸತತವಾಗಿ ಹದಿನೈದು ದಿವಸಗಳವರೆಗೆ ನಡೆಯುತ್ತದೆ. ಕೆಂಪೇಗೌಡ ಚಿಂತಾಕ್ರಾಂತರಾಗುತ್ತಾರೆ. ಕೆಲವರು ಗ್ರಾಮದೇವತೆಗೆ ನರಬಲಿ ಕೊಡಬೇಕೆಂದು ಮಾತನಾಡಿದರೆ, ಮತ್ತೆ ಕೆಲವರು ತುಂಬು ಗರ್ಭಿಣಿಯ ಬಲಿದಾನವಾಗಬೇಕು ಎಂದು ಸಲಹೆ ನೀಡುವರು. ಇದರಿಂದ ಬೇಸತ್ತ ಕೆಂಪೇಗೌಡ ಬೆಂಗಾಳೂರು ನಗರ ನಿರ್ಮಾಣವಾಗದಿದ್ದರೂ ಪರವಾಗಿಲ್ಲ ಹೆಣ್ಣನ್ನು ಬಲಿಕೊಟ್ಟು ಸ್ತ್ರೀದೋಷ ಹಚ್ಚಿಕೊಳ್ಳಲಾರೆನೆಂದು ನಿರ್ಧರಿಸಿದರೆ ಈ ಎಲ್ಲ ವಿಷಯ ತಿಳಿದ ಲಕ್ಷ್ಮಮ್ಮ ತನ್ನನ್ನು ಸಾಕಿದ ಕರಣಿಕರ ಹತ್ತಿರ ಪ್ರಸ್ತಾಪಿಸುತ್ತಾಳೆ. ಆದರೆ ಅದಕ್ಕೊಪ್ಪದಿದ್ದಾಗ ಯಾರಿಗೂ ತಿಳಿಯದೆ ಬಲಿದಾನವಾಗುತ್ತಾಳೆ. ಕೋಟೆಯ ಬಾಗಿಲು ನಿಲ್ಲುತ್ತದೆ. ಊರಿನ ಜನರೆಲ್ಲ ಈಕೆಯ ತ್ಯಾಗಗುಣವನ್ನು ಕೊಂಡಾಡುವರು.

ಲಿಂಗಣ್ಣನಾಯಕರ ತ್ಯಾಗಗುಣ ಅತ್ಯಂತ ದೊಡ್ಡದು. ಸರ್ಜೇನಾಯಕರ ಮಕ್ಕಳಾಗಿದ್ದು ಸಿಂಹಾಸನದ ಒಡೆತನ ತಮಗಿದ್ದರೂ ಕೂಡ ಚಿಕ್ಕಮ್ಮಳಾದ ಓಬವ್ವನಾಗತಿಯ ಮಾತಿನಂತೆ ದೊರೆತನದ ಅಧಿಕಾರವನ್ನು ಓಬಣ್ಣನಾಯಕನಿಗೆ ತ್ಯಾಗ ಮಾಡುತ್ತಾನೆ. ಹಾಗೆಯೇ ತಲೆತಲಾಂತರದಿಂದ ಬಂದ ಪ್ರಧಾನಿಯ ಪಟ್ಟವನ್ನು ತಮ್ಮ ಮಗನಿಗೆ ಎಂದು ಹೇಳದ ಭುವನಪ್ಪನವರು ಲಿಂಗಣ್ಣನಾಯಕರಿಗೆ ಆ ಪದವಿಯನ್ನು ದೊರಕಿಸಿಕೊಟ್ಟು ದೊಡ್ಡ ತ್ಯಾಗಮಯಿಗಳಾಗುವರು.

ಪರಶುರಾಮಪ್ಪನವರು ಎಂತಹ ತ್ಯಾಗದ ಮನೋಭಾವದವರಾಗಿದ್ದರೆಂಬುದು ಅವರಾಡುವ ಮಾತುಗಳಲ್ಲೇ ನೋಡಬಹುದು. ಅಧಿಕಾರವೆಂಬುದು ಹುಡುಕಿಕೊಂಡು ಬಂದಾಗ ಅದನ್ನು ಬೇಡವೆಂದು ನಿರಾಕರಿಸುವವರು ಅತ್ಯಂತ ವಿರಳ. ಆದರೆ ಲಿಂಗಣ್ಣನಾಯಕನು ಮುದ್ದಣ್ಣನ ಕೈಯಿಂದ ಪ್ರಧಾನಿಯ ಪಟ್ಟ ಕೊಡಿಸಿಕೊಡಬೇಕೆಂದರೂ ಪರಶುರಾಮಪ್ಪ ಮಾತ್ರ ತನಗೆ ಅಧಿಕಾರದ ಮೇಲೆ ವ್ಯಾಮೋಹವಿಲ್ಲ. ನನಗೆ ಬೇಕಾಗಿರುವುದು 'ನಾಯಕರ ವಂಶದವರಿಟ್ಟ ಉಪ್ಪಿನಿಂದ ನಮ್ಮ ಮನೆತನ ಬೆಳೆದಿದೆ. ನಮಗೆ ಉಪ್ಪಿಟ್ಟ ವಂಶ ಅಲ್ಲಿಗೆ ಮೊಟಕಾಗಿ ಯಾರೋ ಈ ಸಿಂಹಾಸನದ ಮೇಲೆ ಕುಳಿತುಕೊಳ್ಳದಂತೆ, ಆ ಚಂದ್ರಾರ್ಕಸ್ಥಾಯಿಯಾದ ಕೀರ್ತಿಯಿಂದ ಮೆರೆಯಬೇಕು. ಅಷ್ಟೇ ನನಗಿರುವ ಬಯಕೆ. ನಾಯಕರು ಇಂದು ನನ್ನಲ್ಲಿಟ್ಟಿರುವ ವಿಶ್ವಾಸವನ್ನೇ ಕಡೆಯವರೆಗೂ ನಡೆಸಿಕೊಂಡು ಬಂದರೆ, ನನಗೆ ಕೋಟಿ ಪ್ರಧಾನಿ ಪದವಿ ಕೊಟ್ಟಂತಾಗುತ್ತದೆ.'[೫೦] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ–೮೭) ನಮ್ಮ ಬೇಡಿಕೆಯನ್ನು ನಾಯಕರು ಮನ್ನಿಸಬೇಕೆನ್ನುವನು.

ಜನ ಒಡೆಯನಲ್ಲಿ ಇಟ್ಟ ಭಕ್ತಿ, ವಿಶ್ವಾಸ ಅಚಲ. ನಂಬಿದ ಜನ ತಮ್ಮ ಪ್ರಾಣವನ್ನು ಕೊಟ್ಟರಲ್ಲದೇ ವಿಶ್ವಾಸದ್ರೋಹ ಮಾಡಲಾರರು. ಕ್ರೌರ್ಯ, ದಬ್ಬಾಳಿಕೆಯನ್ನು ಎದುರಿಸುವ ಎಂಥ ತ್ಯಾಗಕ್ಕೂ ಸಿದ್ಧರು. ಅಂತೆಯೇ ಸರ್ವಾಧಿಕಾರಿಯಾದ ಮುದ್ದಣ್ಣನ ಮಹಾಸೇನೆಯನ್ನು

ಮಣ್ಣುಮುಕ್ಕಿಸುವಲ್ಲಿ ಹಳ್ಳಿಯ ಗೌಡರೆಲ್ಲರೂ ತಿರುಗಿ ಬಿದ್ದುದನ್ನು ಕಾಣುತ್ತೇವೆ. ಮೊದಲೆಲ್ಲ ಮುದ್ದಣ್ಣನೆಂದರೆ ಭಯದಿಂದ ನಡುಗುತ್ತಿದ್ದ ಜನ ಈಗ ತಿರುಗಿ ಬಿದ್ದು ದುರ್ಗದ ಕಲ್ಯಾಣವೇ ತಮ್ಮ ಗುರಿ ಎಂದು ಆ ಕಾರ್ಯಕ್ಕಾಗಿ ಏನೆಲ್ಲವನ್ನು ತ್ಯಾಗ ಮಾಡುವರು.

ಚಿಕ್ಕಣ್ಣನಾಯಕ ಕಣಕುಪ್ಪೆಯಿಂದ ದುರ್ಗಕ್ಕೆ ಮರಳಿ ಬಂದ ಕೆಲ ದಿನಗಳ ನಂತರ ಮುಂದಿನ ದೊರೆಯಾರು ಎಂದು ನಿರ್ಧರಿಸಲು ಸಭೆಗೆ ಭರಮಣ್ಣ ಹಾಗೂ ಪರಶುರಾಮಪ್ಪನವರನ್ನು ಮುದ್ದಣ್ಣ ಆಹ್ವಾನಿಸಿದಾಗ ಭರಮಣ್ಣ ಆ ಸಭೆಗೆ ಹೋಗಬಾರದೆಂದು ನಿರ್ಧರಿಸಿ ಪರಶುರಾಮಪ್ಪನ ಜೊತೆಗೆ ಚರ್ಚಿಸಿದಾಗ ತನ್ನ ತಂದೆಯ ಸಾವು ತನ್ನನ್ನು ಬಾಧಿಸುತ್ತಿದ್ದರೂ ಸಹ ನಮಗೆ ದುರ್ಗದ ಹಿತರಕ್ಷಣೆ ಮುಖ್ಯವಾದುದು ಎಂದು ಹೇಳುತ್ತ ತ್ಯಾಗ ಮನೋಭಾವನೆ ವ್ಯಕ್ತಪಡಿಸುತ್ತಾನೆ. 'ನನ್ನ ತಂದೆ, ನಿನ್ನ ತಂದೆ, ನಾನು ನೀನು ಇಂಥ ಲಕ್ಷಾಂತರ ಮಂದಿಗಿಂತಲೂ ಮಿಗಿಲಾದದ್ದು ದುರ್ಗದ ಹಿತರಕ್ಷಣೆ. ಲಕ್ಷಾಂತರ ಜನರ ಬಲಿದಾನದ ಮೇಲೆ ನಿರ್ಮಿತವಾಗಿರುವ ಈ ರಾಜ್ಯದ ಇದಿರು ನಮ್ಮ ನಿಮ್ಮ ಹಿತವೆನ್ನುವುದು ಯಾವ ಗಿಡದ ತೊಪ್ಪಲು. ನಾವು ಉಳಿದು, ದುರ್ಗ ಅಳಿದರೆ ಏನೂ ಉಳಿಯುವುದಿಲ್ಲ ಭರಮಣ್ಣ. ನಾವು ಅಳಿದು ದುರ್ಗ ಉಳಿದರೆ, ಎಲ್ಲವೂ ಉಳಿದಂತೆ'[೫೧] (ಸುಬ್ಬರಾಯರು ತ.ರಾ, ೨೦೧೧, ರಾಜ್ಯದಾಹ, ಪುಟ-೨೪) ಎಂಬ ತ್ಯಾಗದ ವಿಚಾರಗಳನ್ನು ವ್ಯಕ್ತಪಡಿಸುತ್ತಾನೆ.

ಬಿಳಿಚೋಡಿನ ಕಸ್ತೂರಿರಂಗಪ್ಪನ ಮಗನಾದ ಭರಮಣ್ಣನನ್ನು ದುರ್ಗದ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ನಿರ್ಧರಿಸಿ ಅವರ ಮನೆಗೆ ಬಂದ ಪ್ರಧಾನಿ ಪರಶುರಾಮಪ್ಪ ನಿಮ್ಮ ಮಗ ಸಿಂಹಾಸನವೇರಬೇಕಾದರೆ ನೀವು ಅವನ ಮೇಲಿನ ತಂದೆ ಎಂಬ ಅಧಿಕಾರವನ್ನು ಕಳೆದುಕೊಳ್ಳುವ ತ್ಯಾಗ ಮಾಡಬೇಕಾಗುವುದು. ಸನ್ಯಾಸಿಯಾದವನಿಗೆ ಹೇಗೆ ಯಾವ ಬಂಧಗಳಿರುವುದಿಲ್ಲವೋ ಹಾಗೆಯೇ ದೊರೆಯಾದವನಿಗೆ ಯಾವ ಬಂಧಗಳೂ ಇರಲಾರವು ಎಂದಾಗ ಕಸ್ತೂರಿರಂಗಪ್ಪ 'ಬೇಕೆಂದರೆ ದುರ್ಗಕ್ಕೆ ತಲೆ ಕೊಡೋಕೆ ಸಿದ್ಧವಾಗಿರೋ ಜನ ನಾವು. ಇನ್ನು ಇದಕ್ಕೆ ಹಿಂಜರಿತೀವಾ? ನನ್ನ ಹೊಟ್ಟೇಲಿ ಹುಟ್ಟಿದವನಿಂದ ದುರ್ಗಕ್ಕೆ ಅಷ್ಟು ಸೇವೆಯಾದರೆ ನಾನು ಹುಟ್ಟಿದ್ದು, ಅವನನ್ನು ಹಡೆದದ್ದು ಎರಡೂ ಸಾರ್ಥಕವಾದಂತಾಗುವುದು'[೫೨] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೫೧) ಎಂದು ದುರ್ಗಕ್ಕೊಸ್ಕರ ತನ್ನ ಮಗನನ್ನೇ ತ್ಯಾಗ ಮಾಡುವನು.

ದುರ್ಗದ ನಾಯಕನಾದ ಭರಮಣ್ಣನಾಯಕ ಪ್ರಜೆಗಳ ಹಿತಕ್ಕೊಸ್ಕರ, ದುರ್ಗದ ಅಭಿವೃದ್ಧಿ ಕಾರ್ಯಕ್ಕೊಸ್ಕರ ಅರಮನೆಯ ಭಂಡಾರದ ನೆಲಮಾಳಿಗೆಯಲ್ಲಿ ನೂರಾರು ವರ್ಷಗಳಿಂದ

ನಿರುಪಯೋಗಿಯಾಗಿ ಬಿದ್ದಿದ್ದ ಸಂಪತ್ತು, ನಾಯಕರ ವೈಭವದ ಪ್ರದರ್ಶನಕ್ಕೆ ದಿನಾ ಬೇಕಾಗದ, ಕೆಲಸಕ್ಕೆ ಬಾರದೆ ಕೊಳೆಯುತ್ತಿದ್ದ ಧನ. ಈ ಧನ ದೇಶದ ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗವಾಗಬೇಕು ಎಂಬ ಉದ್ದೇಶದಿಂದ ಪರಶುರಾಮಪ್ಪನವರಿಗೆ ಅದನ್ನು ಒಪ್ಪಿಸಿ ತುಂಬಿದ ಓಲಗದಲ್ಲಿ ತನ್ನ ಸದುದ್ದೇಶದ ವಿಚಾರವನ್ನು ವ್ಯಕ್ತಪಡಿಸುತ್ತಾನೆ. ನಾಯಕನ ತ್ಯಾಗದ ವಾರ್ತೆ ದುರ್ಗದ ಮೂಲೆ ಮೂಲೆಯ ಹಳ್ಳಿಗಳಿಗೂ ಹರಡಿ ಜನರು ತಾವು ಸಹ ತ್ಯಾಗಕ್ಕೆ ಸಿದ್ಧರಾಗುತ್ತಾರೆ. ಹೆಂಗಸರು, ಗಂಡಸರು ಎಂಬ ಭೇದ ಭಾವವಿಲ್ಲದೆ ಎಲ್ಲ ಕಸಬುಗಳ ಜನರು ದೇಶದ ನಿರ್ಮಾಣ ಕಾರ್ಯಕ್ಕೆ ದಾನ ನೀಡುವರು. ಹಣ ನೀಡಲಾಗದವರು ಉಪಯುಕ್ತವಾದ ವಸ್ತುಗಳನ್ನು ನೀಡಿದರು. ಅದನ್ನೂ ಕೊಡಲಾಗದಿದ್ದವರು ತಮ್ಮ ಕಾರ್ಯಶ್ರಮವನ್ನೇ ಕಾಣಿಕೆಯಾಗಿ ಕೊಟ್ಟು ತ್ಯಾಗವನ್ನು ಮಾಡುವರು.

ಕಸ್ತೂರಿರಂಗಪ್ಪನಾಯಕರ ಮಗಳನ್ನು ಸೀರ್ಯದ ರಂಗಪ್ಪನಾಯಕರು ತಮ್ಮ ಮಗನಾದ ಕೃಷ್ಣಪ್ಪನಾಯಕನಿಗೆ ತಂದುಕೊಳ್ಳುವ ವಿಚಾರವಾಗಿ ಪತ್ರವನ್ನು ಬರೆದಾಗ ನಾಯಕರು ಸಮಾಲೋಚನಾ ಸಭೆಯಲ್ಲಿ ಅದನ್ನು ಚರ್ಚಿಸಿ ಎಲ್ಲರ ಅಭಿಪ್ರಾಯಗಳನ್ನು ಕೇಳಲಾಗಿ ಒಬ್ಬೊಬ್ಬರು ಒಂದೊಂದು ತೆರನಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲಾಗಿ ಕೊನೆಗೆ ಬಾಲಯ್ಯ ಮಾತ್ರ ಇದು ರಾಜಕುಮಾರಿಯ ಮದುವೆಯ ವಿಷಯವಾಗಿರುವುದರಿಂದ ಮೊದಲು ನಾಗತಿಯವರನ್ನು ಮತ್ತು ರಾಜಕುಮಾರಿಯರನ್ನು ಕೇಳುವಂತೆ ಹೇಳಿದಾಗ ನಾಯಕರು ನಾವು ಮದುವೆ ಬೇಕು, ಬೇಡ ಎಂದು ಇತ್ಯರ್ಥ ಮಾಡುವುದು ದೇಶದ ಹಿತದೃಷ್ಟಿಯಿಂದವಾದುದರಿಂದ 'ದೇಶಕ್ಕಿಂತ ದೊಡ್ಡವಳೇ ದೊರೆಯ ಮಗಳು. ದೇಶದ ಹಿತದೃಷ್ಟಿಯಿಂದ ನೀವು ಯುದ್ಧ ನಿರ್ಧಾರ ಮಾಡಿದಾಗ, ಈ ಸಮರದಲ್ಲಿ ತಲೆ ಕೊಡಲು ನಮ್ಮ ಯೋಧರು ಕ್ಷಣ ಮಾತ್ರವಾದರೂ ಹಿಂಜರಿಯುತ್ತಾರೆಯೇ? ಈ ಯುದ್ಧದಲ್ಲಿ ಸತ್ತರೆ ನನಗೇನು ಸುಖ ಎಂದು ಯೋಚನೆ ಮಾಡುತ್ತಾರೆಯೇ? ಹಾಗೆ ಹಿಂದು ಮುಂದು ನೋಡಿದವರನ್ನು ನಾವು ಹೇಡಿ ಎಂದು ಹೀಯಾಳಿಸಿ, ಕೈಗೆ ಬಳೆ ತೊಡಿಸಿ ದೇಶದ್ರೋಹಿ ಎಂದು ಕತ್ತೆಯ ಮೇಲೆ ಕೂಡಿಸಿ ಅಪಮಾನಿಸಿ ತೋಫಿನ ಬಾಯಿಗೆ ಕಟ್ಟಿಸುವುದಿಲ್ಲವೇ? ಸಣ್ಣಪುಟ್ಟ ಸೈನಿಕರೂ, ದೇಶದ ಹಿತ ಎಂದಾಗ ಸಕಲ ತ್ಯಾಗಕ್ಕೂ ಸಿದ್ಧರಾಗುವಾಗ, ಆ ಸೈನಿಕರ ತ್ಯಾಗದ ಹಾಲು ಕುಡಿದೇ ಬದುಕಿರುವ ರಾಜಕುಮಾರಿ, ಸಮಯ ಬಂದಾಗ ತಾನೂ ತ್ಯಾಗಕ್ಕೂ ಸಿದ್ಧಳಾಗಬೇಡವೇ? ಅರಮನೆಯ ಜನರೆಂದರೆ, ಜನತೆಯ ತ್ಯಾಗದಿಂದ ನಿರ್ಮಿತವಾದ ಗೂಡಿನಲ್ಲಿ ತಾನು ಕ್ಷೇಮವಾಗಿ ಬದುಕುವ ಸರ್ಪಗಳಲ್ಲ. ಹಾಗೆ ನೋಡಿದರೆ, ಲಕ್ಷಾಂತರ ಜನ ನಮ್ಮ ಕಣ್ಣ ನೋಟವನ್ನು ಹಿಂಬಾಲಿಸಿ, ಸಾವನ್ನಪ್ಪಲು ಸಿದ್ಧರಾದಾಗ, ಅವರಿಗಾಗಿ, ಅವರ ಹಿತರಕ್ಷಣೆಗಾಗಿ, ಅವರಿಗಿಂತ ಮುಂಚಿತವಾಗಿಯೇ ಪ್ರಾಣಾರ್ಪಣೆ ಮಾಡಲು ಅರಸು, ಅವನ ಮನೆಯವರು ಸಿದ್ಧರಾಗಿರಬೇಕು.

ಅದೇ ಅರಸು ಮನೆತನದ ನಿಜವಾದ ಅರ್ಥ"[೫೩] (ಸುಬ್ಬರಾಯರು ತ.ರಾ, ೨೦೧೫, ಕಸ್ತೂರಿ ಕಂಕಣ, ಪುಟ-೧೭) ಎಂದು ಹೇಳುತ್ತಾನೆ.

ಹಂಸಗೀತೆ ಕಾದಂಬರಿಯಲ್ಲಿ ಚಂದ್ರಾಸಾನಿಯ ತ್ಯಾಗ ಗುಣವನ್ನು ಕಾಣುತ್ತೇವೆ. ಚಂದ್ರಾಸಾನಿ ಒಬ್ಬ ವೇಶ್ಯೆಯಾಗಿದ್ದರೂ ಸಹ ವೆಂಕಟಸುಬ್ಬಯ್ಯ ಅವಳ ಸಹವಾಸವನ್ನು ಅಪೇಕ್ಷಿಸಿದಾಗ ಅವನನ್ನು ತನ್ನ ಭಾಗದ ದೇವರೆಂದು ಕಾಣುವುದರೊಂದಿಗೆ ಅತಿಯಾಗಿ ಪ್ರೀತಿಸುತ್ತ ಅವನಿಗೋಸ್ಕರ ತನ್ನ ಬಾಳನ್ನು ಮೀಸಲಾಗಿಟ್ಟು ಉಳಿದ ಪುರುಷರಿಗೆ ತನ್ನ ಮನೆಯ ಬಾಗಿಲನ್ನು ಮುಚ್ಚಿಸುತ್ತಾಳೆ. ಆದರೆ ಅನಂತಯ್ಯ ಚಂದ್ರಾಸಾನಿಯ ಹತ್ತಿರ ಬಂದು ವೆಂಕಟಸುಬ್ಬಯ್ಯ ಸಂಗೀತದ ಸಾಧನೆ ಮಾಡಲು ಅವಕಾಶ ನೀಡಬೇಕೆಂದು ಹೇಳಿ ಅವನಿಂದ ದೂರವಾಗುವಂತೆ ತಿಳಿಸಿದಾಗ ಚಂದ್ರಾಸಾನಿ ಅವನ ಸಾಧನೆಗೋಸ್ಕರ ಒಪ್ಪಿಕೊಂಡು ವೆಂಕಟಸುಬ್ಬಯ್ಯನಿಗೆ ಸಂಗೀತದಲ್ಲಿ ಸಾಧನೆ ಮಾಡಲು ತಿಳಿಸಿ ಜೀವಕ್ಕೆ ಯಾವುದೇ ತೆರನಾಗಿ ಅನಾಹುತ ಮಾಡಿಕೊಳ್ಳದಂತೆ ಮಾತು ತೆಗೆದುಕೊಂಡು ತಾನು ಮಾತ್ರ ವಜ್ರದ ಮೂಗುತಿಯನ್ನು ನುಂಗಿ ಸಾಯುತ್ತಾಳೆ. ಇಲ್ಲಿ ಚಂದ್ರಾಸಾನಿ ಒಬ್ಬ ವೇಶ್ಯೆಯಾಗಿದ್ದರೂ ಸಹ ಎಂತಹ ವಿಶಾಲ ಮನೋಭಾವವಿತ್ತು, ತ್ಯಾಗ ಗುಣವಿತ್ತು ಎಂಬುದನ್ನು ನೋಡಬಹುದು.

ಚಿತ್ರದುರ್ಗದ ಕೋಟೆಯನ್ನು ಹೈದರಾಲಿ ವಶಪಡಿಸಿಕೊಂಡಾಗ ಟೀಪ್ಪು ವೆಂಕಟಸುಬ್ಬಯ್ಯನಿಗೆ ಆಸ್ಥಾನದಲ್ಲಿ ಹಾಡಲು ಹೇಳಿದಾಗ ಹಾಡಲೊಪ್ಪದ ವೆಂಕಟಸುಬ್ಬಯ್ಯ ನಿರಾಕರಿಸುತ್ತಾನೆ. ತನ್ನ ಸಂಗೀತದ ಸೇವೆ ಕೇವಲ ದುರ್ಗದ ಅರಸರಿಗೆ, ದೇವರಿಗೆ ಮೀಸಲಿರಿಸಿದ್ದ ಆತ ತನ್ನ ನಾಲಿಗೆಯನ್ನೇ ಕತ್ತರಿಸಿಕೊಂಡು ಟೀಪ್ಪುವನ್ನು ವಿರೋಧಿಸಿ ಪ್ರತಿಭಟಿಸುವ ರೀತಿ ದುರ್ಗದ ಬಗ್ಗೆ ಆತನಿಗಿರುವ ಅಭಿಮಾನ, ಪ್ರೀತಿ ತಿಳಿಯುತ್ತದೆ. ಈ ಅಭಿಮಾನದಿಂದಲೇ ವೆಂಕಟಸುಬ್ಬಯ್ಯನವರಿಗೆ ತಮ್ಮ ನಾಲಗೆಯನ್ನು ಕತ್ತರಿಸಿಕೊಂಡರೆ ಜೀವನದಲ್ಲಿ ತಾನೆಂದೂ ಹಾಡಲು ಅಸಾಧ್ಯ ಎಂಬುದು ತಿಳಿದಿದ್ದರೂ ಸಹ ನಾಲಗೆ ಕತ್ತರಿಸಿಕೊಳ್ಳುವ ರೀತಿ ಅವನಲ್ಲಿರುವ ತ್ಯಾಗ ಗುಣವನ್ನು ತೋರಿಸುತ್ತದೆ.

ಪ್ರತಾಪಸಿಂಹನ ತ್ಯಾಗ ಹಿರಿದಾದುದು. ತಮ್ಮಂದಿರಾದ ಜಗಮಲ್ಲ ಮತ್ತು ಶಕ್ತಸಿಂಹರು ಚಿತ್ತೂರಿನ ಗಾದೆಗಾಗಿ ಹೋರಾಡುತ್ತಿರುವ ವಿಷಯ ಪ್ರಧಾನಿ ಭೀಮಸಿಂಹರಿಂದ ತಿಳಿದರೂ ಸಹ ಅಸಮಾಧಾನಗೊಳ್ಳದೇ ಪ್ರಧಾನಿಗೆ ಚಿತ್ತೂರಿನ ಗಾದಿ ನನಗೆ ದೊರೆಯಬೇಕೆಂದು ನಾನು ಹಂಬಲಿಸುವುದಿಲ್ಲ. ಆದರೆ ಹಿಂದೂತ್ವವನ್ನೇ ಭಾರತದಲ್ಲಿ ನಾಶಗೊಳಿಸುವುದಾಗಿ ಪಣ ತೊಟ್ಟಿರುವ ಅಕ್ಬರ್‌ನ ಮುಂದೆ ಸ್ವಯೂಥ ಕಲಹ ಆರಂಭಿಸುವುದು ಮೂರ್ಖತನವಾಗುತ್ತದೆ. ಜಗಮಲ್ಲ ನನ್ನ ತಮ್ಮ ಅವನು ರಾಣಾ ಆದರೇನು? ನಾನಾದರೇನು? ಆದರೆ ಶೀಘ್ರಕೋಪಿಯಾದ ಶಕ್ತಸಿಂಹನು ಬಂಡಾಯವೇಳದಂತೆ ಅವನಿಗೆ ಬುದ್ಧಿ ಹೇಳಬೇಕೆಂದು ಕೇಳಿಕೊಳ್ಳುತ್ತಾನೆ.

ಮೆಹರುನ್ನಿಸಾಳು ಷಹಜಾದಾ ಸೆಲೀಂ ಜನಾನಾದಲ್ಲಿದ್ದ ಹೆಣ್ಣಾಗಿದ್ದು ಆತನ ಮಾತಿನಂತೆ ಆತನ ಸಾಮ್ರಾಜ್ಯ ಉಳಿಸಿ ಆತನನ್ನು ಮೆಚ್ಚಿಸಲು ಶಕ್ತಸಿಂಹನ ಎದುರು "ಮೊಹಬತ್ ಕೀ ರೋಷ್ನಿ" ನೃತ್ಯ ಮಾಡಲು ಒಪ್ಪುವಳು. ಶಕ್ತಸಿಂಹನನ್ನು ಏನೋ ಒಲಿಸಿಕೊಳ್ಳುವಳು. ಆದರೆ ಕಂಬನಿಗರೆಯುತ್ತ ಅರಮನೆಯ ದಾಸಿಯರು ತನ್ನ ದುರವಸ್ಥೆ ನೋಡಿ ಏನನ್ನುವರೋ? ಭಾವೀ ಮೊಘಲ್ ಸಾಮ್ರಾಟನ ಮಹಿಷಿಯಾಗಬೇಕೆಂದಿದ್ದ ತನಗೆ ಎಂತಹ ದುರವಸ್ಥೆ ಬಂದಿತು ಎಂದುಕೊಂಡರೂ ಸಹ ಹೃದಯದ ವೇದನೆಯನ್ನು ಅಡಗಿಸಿಕೊಂಡು ಒಂದು ಸಾಮ್ರಾಜ್ಯ ಕಟ್ಟಲು ತನ್ನ ಅನುಪಮ ಸೌಂದರ್ಯ, ಅನ್ಯಾದೃಶ ಭಕ್ತಿ, ತ್ಯಾಗ ನೆರವಾಗಲಿ ಎಂದುಕೊಳ್ಳುವಳು.

ಮೇವಾರಿನ ಕದನದಲ್ಲಿ ಪ್ರತಾಪಸಿಂಹನ ಕುದುರೆ ಚೈತಕ್‌ಗೆ ಗಾಯವಾಗಿ ಅಸುನೀಗಿದ ಸಂದರ್ಭದಲ್ಲಿ ಶಕ್ತಸಿಂಹ ಅಲ್ಲಿಗೆ ಬರುತ್ತಾನೆ. ಇಬ್ಬರೂ ಸೇರಿ ಅದರ ಅಂತ್ಯಕ್ರಿಯೆ ನೆರವೇರಿಸಿ ಪಶ್ಚಾತ್ತಾಪದಿಂದ ಶಕ್ತಸಿಂಹ ತನ್ನ ಅಣ್ಣನ ಹತ್ತಿರ ಕ್ಷಮೆ ಕೇಳಿ ಇಲ್ಲಿಂದ ಬೇಗ ಹೊರಡುವಂತೆ ಹೇಳುತ್ತಾನೆ. ಭಾವಾವೇಶಗೊಂಡಿದ್ದ ರಾಣಾ ಪ್ರತಾಪಸಿಂಹ ತಮ್ಮನ ಕೈಗಳನ್ನು ಹಿಡಿದು 'ಮೇವಾರಿನ ರಾಣನಾಗಿರುವುದೆಷ್ಟು ಗೌರವವೋ, ಅದರ ಸಾಮಾನ್ಯ ಪ್ರಜೆಯಾಗಿರುವುದೂ ಅಷ್ಟೇ ಗೌರವವೆಂದು ನಾನು ಭಾವಿಸಿದ್ದೇನೆ. ಶಕ್ತಾ ಮೊಘಲರ ವಜ್ರಮುಷ್ಟಿಯಿಂದ ಮೇವಾರನ್ನು ಭಾರತವನ್ನು ಬಿಡಿಸಬೇಕೆಂದು ನಾನು ಪ್ರಯತ್ನಿಸುತ್ತಿರುವೆನಲ್ಲದೇ, ಮೇವಾರಿನ ರಾಣಾ ಪದವಿ ಉಳಿಸಿಕೊಳ್ಳಬೇಕೆಂದಲ್ಲ. ಜಗಮಲ್ಲನ ವಿದ್ರೋಹದಿಂದ ಸೀಸೋದಿಯ ವಂಶವೇ ತಲೆತಗ್ಗಿಸಬೇಕಾಯಿತು. ನೀನೂ ಅವನ ಮೇಲ್ಪಂಕ್ತಿಯನ್ನೇ ಅನುಸರಿಸಿರುವೆ. ವಿದ್ರೋಹಕ್ಕೆ ಪ್ರತಿಫಲ ರೂಪವಾಗಿ ಅಕ್ಬರ್ ಪಾದಷಹ ನಿನಗೆ ಮೇವಾರನ್ನು ಕೊಡಬೇಕಾದ ಅಗತ್ಯವಿಲ್ಲ. ಸ್ವಸಂತೋಷದಿಂದ ನಾನೇ ಮೇವಾರನ್ನು ನಿನಗೆ ಕೊಡಲು ಸಿದ್ಧನಾಗಿದ್ದೇನೆ.'[೫೪] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೧೨೫) ಪ್ರತಾಪಸಿಂಹನು ತಮ್ಮನಾದ ಶಕ್ತಸಿಂಹನ ಜೊತೆ ಆಡಿದ ಮಾತುಗಳು ಭಾವಾವೇಶದಿಂದ ಕೂಡಿದ್ದರೂ ಮೇವಾರವು ಪಾದಷಹನ ಏಕಚಕ್ರಾಧಿಪತ್ಯದ ಕನಸಿಗೆ ಮಣಿಯಬಾರದೆನ್ನುವ ಕಳಕಳಿ ಇಲ್ಲಿ ವ್ಯಕ್ತವಾಗುತ್ತದೆ.

ಅಕ್ಬರ್ ಪಾದಷಹ ಮೇಲಿಂದ ಮೇಲೆ ಮೇವಾರಿನ ಮೇಲೆ ದಾಳಿ ಮಾಡುವ ಸಂದರ್ಭದಲ್ಲಿ ಆರಾವಳಿ ಬೆಟ್ಟದಲ್ಲಿ ಅಡಗಿ ಕುಳಿತ ಪ್ರತಾಪಸಿಂಹ ಅಧೀರನಾಗುತ್ತಾನೆ. ಸೈನ್ಯ ಕಟ್ಟಲು ಹಣ ಬೇಕು. ಸೈನ್ಯ ಕಟ್ಟುವುದಾದರೂ ಹೇಗೆ, ಅಕ್ಬರ್ ಪಾದಷಹನನ್ನು ಸದೆಬಡಿಯುವುದು ಹೇಗೆಂದು ಚಿಂತಿಸುತ್ತಿರುವ ಸಂದರ್ಭದಲ್ಲಿ ಪ್ರಧಾನಿ ಭೀಮಸಿಂಹರು ತಮ್ಮ ವಂಶದವರು ಈ ಪದವಿ, ಅಧಿಕಾರ, ಹಣ ಸಂಪಾದಿಸುವುದು ನೀವಿಟ್ಟಿರುವ ಉಪ್ಪಿನ ಋಣದಿಂದ. ಗತಿಸಿದ ಮಹಾರಾಣರು ಅವರ

ಪೂರ್ವಜರು ಮಕ್ಕಳಂತೆ ನಮ್ಮ ಮನೆತನದವರನ್ನು ಸಾಕಿ ಸಲುಹಿದ್ದಾರೆ. ವಂಶಪಾರಂಪರ್ಯವಾಗಿ ಕಾಯ್ದಿಟ್ಟುಕೊಂಡು ಬಂದ ಏಳು ಕೊಪ್ಪರಿಗೆ ಸುವರ್ಣ ಮೊಹರನ್ನು ಕೊಟ್ಟು ಅದನ್ನು ಸೈನ್ಯ ಕಟ್ಟಲು ಬಳಸಿಕೊಳ್ಳಬೇಕೆಂಬುದರ ಮಾತಿನಲ್ಲಿ ತ್ಯಾಗ ಗುಣವನ್ನು ಕಾಣುತ್ತೇವೆ. ಹಾಗೆಯೇ ಪೃಥ್ವಿಸಿಂಹ ಕೂಡ ಪಾದಷಹರನ್ನು ಹಾಡಿ ಹೊಗಳಿ ಸಂಪಾದಿಸಿದ ಅಮೂಲ್ಯ ರತ್ನಾಭರಣಗಳನ್ನು ಕೊಡುವುದರ ಮೂಲಕ ಎಲ್ಲರ ಪ್ರೀತಿಗೂ ಪಾತ್ರನಾಗುತ್ತಾನೆ. ಇಲ್ಲಿ ಭೀಮಸಿಂಹ ಮತ್ತು ಪೃಥ್ವಿಸಿಂಹರಲ್ಲಿರುವ ತ್ಯಾಗ ಗುಣವನ್ನು ಕಾಣುತ್ತೇವೆ.

ಬಸವರಾಜ ಕಟ್ಟೀಮನಿಯವರ 'ಪೌರುಷ ಪರೀಕ್ಷೆ' ಕಾದಂಬರಿಯಲ್ಲಿ ಮಡಿವಾಳ ಆತನ ತಂದೆ ಸಿದ್ಧರಾಮಪ್ಪ ಹಾಗೂ ಹೆಂಡತಿ ಸಿದ್ಧಮತಿಯ ಪಾತ್ರಗಳೂ ತಮ್ಮ ಆದರ್ಶ, ತ್ಯಾಗ, ಅನ್ಯೋನ್ಯ ಗುಣಗಳಿಂದ ಎದ್ದು ಕಾಣುತ್ತವೆ. ಮಡಿವಾಳ ಕಿತ್ತೂರಿನ ಮಲ್ಲಸರ್ಜ ದೊರೆಗಾಗಿ ತನ್ನ ಇಡೀ ಬದುಕನ್ನೇ ತ್ಯಾಗ ಮಾಡುತ್ತಾನೆ. ಹಾಗೆ ನೋಡಿದರೆ ಆತ ಕಿತ್ತೂರಿನ ಒಬ್ಬ ಸಾಮಾನ್ಯ ಸೈನಿಕ. ಆದರೆ ತನ್ನ ಮನೆ, ಮಾರು, ಹೆಂಡತಿ, ತಂದೆಯವರನ್ನೆಲ್ಲ ಬಿಟ್ಟು ಕಿತ್ತೂರಿನ ಉಳಿವಿಗಾಗಿ ಹಾಗೂ ಮಲ್ಲಸರ್ಜನ ರಕ್ಷಣೆಗಾಗಿ ಆತ ಮಾಡಿದ ತ್ಯಾಗ ಅಪೂರ್ವವಾದದ್ದು. ಕಪಾಳದುರ್ಗದ ನರಕಸದೃಶ ಸೆರೆಮನೆಯಲ್ಲಿ ಮಲ್ಲಸರ್ಜನ ಜೊತೆಗೆ ಆತ ಪಟ್ಟ ಯಾತನೆ ಅಷ್ಟಿಷ್ಟಲ್ಲ. ಸ್ವಾಮಿನಿಷ್ಠೆಯಿಂದ ಅಲ್ಲಿ ಆತ ತೋರಿಸಿದ ಶೌರ್ಯ ಕೂಡ ಅಪ್ರತಿಮ. ಅಲ್ಲಿಂದ ಮಲ್ಲಸರ್ಜನನ್ನು ಪಾರು ಮಾಡಿ ಪುನಃ ಕಿತ್ತೂರಿಗೆ ಬರುವವರೆಗೆ ಮೆರೆದ ಅವನ ಸಾಹಸಕ್ಕೆ ಎಣೆಯೇ ಇಲ್ಲ. ತನ್ನ ನೆರಳಂತೆ ಹಿಂಬಾಲಿಸಿ, ಅಪ್ರತಿಮ ಶೌರ್ಯ ಸಾಹಸ ಮೆರೆದ ಕಾರಣಕ್ಕಾಗಿಯೇ ಮಲ್ಲಸರ್ಜ ಆತನನ್ನು ಸಮಾನ ಸ್ಥಾನದಲ್ಲಿ ಕುಳಿಸಿಕೊಂಡೇ ಕಿತ್ತೂರಿನ ಜನರ ಸ್ವಾಗತ ಸ್ವೀಕರಿಸುತ್ತಾನೆ. ಅವನನ್ನು ತನ್ನ ಖಾಸಾ ಕಾರಭಾರಿಯನ್ನಾಗಿಯೂ ನಿಯಮಿಸಿಕೊಳ್ಳುತ್ತಾನೆ. ವೀರನೊಬ್ಬನಿಗೆ ದೊರೆಯಬೇಕಾದ ಯೋಗ್ಯ ಸನ್ಮಾನವೇ ಅದು. ನಾಡಪ್ರೇಮದಿಂದ ಜೀವಕ್ಕೆ ಜೀವವನ್ನೇ ಪಣಕ್ಕಿಟ್ಟು ಹೋರಾಡಿದ ಅಸಂಖ್ಯ ಸಾಮಾನ್ಯ ಜನರ ಪ್ರತಿನಿಧಿಯಾಗಿದ್ದಾನೆ ಮಡಿವಾಳ. ಚೆನ್ನಮ್ಮ ತನ್ನ ಮಗನೇ ಹಿರಿಯವನಾದರೂ, ಹಿರಿಯ ರಾಣಿಯ ಹಿರಿಯ ಮಗನೇ ಮುಂದಿನ ವಾರಸುದಾರನಾಗಬೇಕೆಂದು ತೀರ್ಮಾನಿಸಿದಳು. ಅದಕ್ಕಾಗಿ ಮುಂದೆಯಾದರೂ ತೊಂದರೆ ಆಗಬಾರದೆಂದು ತನ್ನ ಮಗ ಶಿವಬಸಪ್ಪನಿಗೆ ಭೈರವ ದೀಕ್ಷೆ ಕೊಡಿಸಿದಳು. ಆ ದೀಕ್ಷೆ ಹೊಂದಿದವರು ಅಧಿಕಾರಕ್ಕೆ ಬರುವಂತಿಲ್ಲ ಹಾಗೂ ರಾಜನ ರಕ್ಷಣೆಗಾಗಿ ತಮ್ಮ ದೇಹ ಜೀವಗಳನ್ನು ಮೀಸಲಾಗಿಡಬೇಕು. ಶಿವಬಸಪ್ಪನೂ ತನ್ನ ತಮ್ಮ ಶಿವಲಿಂಗರುದ್ರಸರ್ಜ ರಾಜನಾದ ಮೇಲೆ ಕಣ್ಣಲ್ಲಿ ಕಣ್ಣಿಟ್ಟು ಅವನನ್ನು ಕಾಪಾಡಿದ. ಇಬ್ಬರೂ ಕೂಡಿ ಭಾಗವಹಿಸಬೇಕಾಗಿ ಬಂದ ಒಂದು ಯುದ್ಧದಲ್ಲಿ ತಮ್ಮನನ್ನು ರಕ್ಷಿಸಲು ಹೋಗಿ ತನ್ನ ಪ್ರಾಣವನ್ನೇ ಬಲಿಕೊಟ್ಟ. ಈ ದೃಷ್ಟಿಯಿಂದ ನೋಡಿದರೆ ಚೆನ್ನಮ್ಮನ ತ್ಯಾಗಗುಣ ಎಂಥ ದೊಡ್ಡದು ಎಂದು ಎದೆ ತುಂಬಿ ಬರುತ್ತದೆ.

ಅ.ನ.ಕೃಅವರ 'ವೀರರಾಣಿ ಕಿತ್ತೂರು ಚೆನ್ನಮ್ಮ' ಕಾದಂಬರಿಯಲ್ಲಿಯ ಕಲಾವತಿಯ ಪಾತ್ರ ಬಹಳ ತ್ಯಾಗಮಯವಾದದ್ದು. ಮಲ್ಲಪ್ಪಶೆಟ್ಟಿ ಮಹಾಂತವ್ವ ಮೂಲಕವಾಗಿ ಚೆನ್ನಮ್ಮ ರಾಣಿಯನ್ನು ವಿಷ ಹಾಕಿ ಕೊಲ್ಲಿಸುವ ಸಂಚು ಮಾಡಿದಾಗ ಅದನ್ನು ಕೇಳಿಸಿಕೊಂಡ ಕಲಾವತಿ ಶಾಸ್ತ್ರಿಗಳಿಗೆ ವಿಷಯ ತಿಳಿಸಿ ಹೇಗಾದರೂ ಮಾಡಿ ರಾಣಿಯನ್ನು ಉಳಿಸಿ ರಾಣಿಸಾಹೇಬರ ಪ್ರಾಣ ನಿಮ್ಮ ಕೈಯಲ್ಲಿದೆ ಎಂದು ತಿಳಿಸಿದಾಗ ಶಾಸ್ತ್ರಿಗಳು ನಿನ್ನ ಪ್ರಾಣ ಎಂದಾಗ 'ನಾನೊಂದು ಕುಲಗೆಟ್ಟ ನಾಯಿ ನಾನು ಸತ್ತರೆ ಅಳುವವರು ಯಾರು? ಮೊದಲು ರಾಣಿಯವರನ್ನು ರಕ್ಷಿಸಿ' ಎನ್ನುವಳು. ಶಾಸ್ತ್ರಿಗಳು ಕಲಾವತಿಯಲ್ಲಿರುವ ಒಳ್ಳೆಯತನ, ತ್ಯಾಗ, ಉದಾರವಾದ ಗುಣವನ್ನು ಕಂಡು 'ನೀನು ಕುಲಗೆಟ್ಟ ನಾಯಿಯಲ್ಲ ಕಲಾವತಿ ಕಿತ್ತೂರಿನ ರಾಜ್ಯಲಕ್ಷ್ಮಿಯನ್ನು ಕಾಪಾಡಲು ಬಂದ ಧರ್ಮದೇವತೆ' ಎಂದು ಹಾಡಿ ಹೊಗಳುವರು.

ರಾಯಣ್ಣನ ನೇತೃತ್ವದಲ್ಲಿ ಜನಸಾಮಾನ್ಯರು ಸಂಘಟಿತ ಶಕ್ತಿಯಾಗಿ ಬ್ರಿಟೀಷರ ವಿರುದ್ಧ ನಡೆಸಿದ ಹೋರಾಟದ ವಾಸ್ತವ ಹಾಗೂ ರೋಮಾಂಚನಕಾರಿ ಘಟನೆಗಳನ್ನು ಅದು ಚಿತ್ರಿಸುತ್ತದೆ. ಗಮನಿಸಬೇಕಾದ ವಿಷಯವೆಂದರೆ ಈ ಹೋರಾಟಗಾರರು ಯಾರು ಸ್ವಾರ್ಥಕ್ಕಾಗಿ ಹೋರಾಟ ಮಾಡಿದವರಲ್ಲ. ನಾಡನ್ನು ಇಂಗ್ಲೀಷರಿಂದ ಬಿಡುಗಡೆ ಮಾಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಮನೆ ಮಾರುಗಳನ್ನೆಲ್ಲ ತ್ಯಾಗ ಮಾಡಿದ ಅವರು ಅತ್ಯಂತ ಕಷ್ಟತಮ ಸಮಸ್ಯೆಗಳನ್ನೆದುರಿಸಿ ಮುನ್ನುಗ್ಗಿದರು. ಅವರ ಸಂಘಟನೆ ಹೋರಾಟದ ಕೆಚ್ಚು, ಕೊಳ್ಳ ಕಣಿವೆಗಳಲ್ಲಿ ಕಳೆದ ಬದುಕು ನವಿರೇಳಿಸುವಂತವು.

ಬಿದನೂರಿನ ಗಂಗಾಧರನ ಪ್ರೇಯಸಿ ಪಾರ್ವತಿಯ ಪಾತ್ರ ತೀರ ಚಿಕ್ಕದಾದರೂ ಎದ್ದು ಕಾಣುತ್ತದೆ. ಪರಸ್ಪರರು ಹೃದಯಾಂತರಾಳದಿಂದ ಪ್ರೀತಿಸುತ್ತಿದ್ದರೂ 'ಕಿತ್ತೂರು ಸಂಸ್ಥಾನ ಸ್ವತಂತ್ರ ಆದ ಮ್ಯಾಲೇ ಮದುವೆ ವಿಚಾರ' ಎಂದು ದೃಢ ನಿಶ್ಚಯ ಅವಳ ಧ್ಯೇಯನಿಷ್ಠೆ, ತ್ಯಾಗ ಅಸಾಮಾನ್ಯವಾದುದು. ಕೊನೆಯವರಿಗೂ ರಾಣಿಯ ಜೊತೆಗಿದ್ದು ನಿಷ್ಠೆಯಿಂದ ಸೇವೆ ಮಾಡಿದ ಆಕೆ ಸಾಮಾನ್ಯಳಾಗಿದ್ದರೂ ಅಸಾಮಾನ್ಯಳಾಗಿ ಕಂಗೊಳಿಸುತ್ತಾಳೆ.

೪.೩ ಪ್ರೇಮ :

ಮಾನವ ಸಮಾಜವನ್ನು ಸದಾ ಕಾಡುವ ಎರಡು ಪ್ರಮುಖ ಭಾವಗಳೆಂದರೆ ಪ್ರೀತಿ ಮತ್ತು ದ್ವೇಷ. ಪ್ರೀತಿ ಅಥವಾ ಪ್ರೇಮ ಎನ್ನುವುದು ಸ್ವಾಭಾವಿಕವಾದುದು, ಸಹಜವಾದುದು. ಪ್ರೇಮ ಎಂಬುವುದು ಸ್ವಪ್ರವರ್ತಿತವಾಗಿ ಹುಟ್ಟಿಕೊಳ್ಳುವ ಕಾರಂಜಿಯಂತಿರುವುದರಿಂದ ಅದಕ್ಕೆ ಸ್ವಾರ್ಥ ಎಂಬುವುದಿಲ್ಲ. ಅದು ಪ್ರತಿಫಲವನ್ನು ಬಯಸುವುದಿಲ್ಲ. ಶುದ್ಧ, ನಿಷ್ಕಳಂಕ, ನಿಷ್ಕಲ್ಮಷವಾದ

ಪ್ರೇಮದಲ್ಲಿ ಯಾವುದೇ ಕಲಬೆರಕೆಗೆ, ಕೊಳಕಿಗೆ ಅವಕಾಶವಿಲ್ಲ. ಪ್ರೇಮಕ್ಕೆ ಜನರನ್ನು ಒಂದುಗೂಡಿಸುವ, ಸೇರಿಸುವ ಮತ್ತು ಅವರಲ್ಲಿ ಶಾಂತಿ ಸೌಹಾರ್ದಗಳನ್ನು ಉಂಟುಮಾಡುವ ಅಪೂರ್ವವಾದ ಶಕ್ತಿ ಅದಕ್ಕಿದೆ. ಪ್ರೇಮ ಎಂಬುವುದು ಮನುಷ್ಯನನ್ನು ರಚನಾತ್ಮಕ, ಸೃಜನಾತ್ಮಕ, ಧನಾತ್ಮಕ ಚಟುವಟಿಕೆಗಳ ಕಡೆಗೆ ಒಯ್ಯುತ್ತದೆ. ಅದು ಅನನ್ಯವಾದುದು, ಅನಂತಮುಖಿಯಾದುದು. ಅದರ ಮೋಡಿಗೆ, ಸೆಳೆತಕ್ಕೆ ಸಿಲುಕದ ವ್ಯಕ್ತಿಗಳೇ ಇಲ್ಲ. ವಯಸ್ಸಿಗೆ ಬಂದ ಹೆಣ್ಣು, ಗಂಡಿನ ನಡುವೆ ಸ್ಫುರಿಸುವ ಪ್ರೀತಿಯ ಭಾವವನ್ನು 'ಅನುರಾಗ', 'ಪ್ರಣಯ', 'ಪ್ರೇಮ', 'ಒಲವು' ಮುಂತಾದ ಹಲವು ಸೊಗಸಾದ ಪದಗಳಿಂದ ಗುರುತಿಸುತ್ತಾರೆ. ಇದು ಪರಸ್ಪರ ಸೆಳೆತದ ಅಪೂರ್ವ ಶಕ್ತಿಯಾಗಿದ್ದು ವ್ಯಯ ಮಾಡಿದಷ್ಟೂ ವೃದ್ಧಿಗೊಳ್ಳುತ್ತದೆ. ಆದರೆ ಯುವಕ ಯುವತಿಯರು ಒಲವಿನ ಆಂತರಂಗಿಕ ಆಳವನ್ನು ಗಮನಿಸದೆ ಬಾಹ್ಯ ಆಕರ್ಷಣೆಯಷ್ಟನ್ನೇ ಗಣನೆಗೆ ತೆಗೆದುಕೊಂಡರೆ ಅದು 'ಕಾಮ'ವಾಗಿ ಕ್ರಮೇಣ ಕಣ್ಮರೆಯಾಗುತ್ತದೆ. ಇತಿಹಾಸದ ಪುಟಗಳನ್ನು ತಿರುವಿದಾಗ ಇಂತಹ ಪ್ರೇಮ, ಕಾಮದ ಘಟನೆಗಳು ಎಷ್ಟೋ ನಡೆದು ಹೋಗಿವೆ. ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟಿಮನಿಯವರು ರಚಿಸಿರುವ ಐತಿಹಾಸಿಕ ಕಾದಂಬರಿಗಳಲ್ಲಿ ಇಂತಹ ಹಲವಾರು ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಇವರು ರಚಿಸಿರುವ ಐತಿಹಾಸಿಕ ಕಾದಂಬರಿಗಳಲ್ಲಿ ಕೆಲವರದು ನಿಷ್ಕಲ್ಮಶವಾದ ಪ್ರೇಮ ಭಾವವಿದ್ದರೆ ಕೆಲವರದು ಸಮಯ ಸಾಧಕರಾಗಿ ಹೆಣ್ಣು ಮಕ್ಕಳ ಅಸಹಾಯಕತೆ, ಬಲಹೀನತೆಯನ್ನು ತಿಳಿದುಕೊಂಡು ಅವರಿಗೆ ಮೋಸ ಮಾಡುವ ಕುತಂತ್ರದ ಪ್ರೇಮವನ್ನು ಕಾಣುತ್ತೇವೆ.

ಬಂಕರಸರಿಗೆ ಚಕ್ರವರ್ತಿ ನೃಪತುಂಗನ ಮೇಲೆ ಎಷ್ಟೊಂದು ಅಭಿಮಾನ, ಪ್ರೇಮವೆಂದರೆ ಆತನ ಬಲಗೈಯಾಗಿ ಎಲ್ಲ ಕಾರ್ಯಗಳನ್ನು ಮಾಡುವನು. ಚಕ್ರವರ್ತಿಗಳ ಮಗ ಕೃಷ್ಣ ಶಂಕರಗಣ ಮತ್ತು ಮಂಗಿಯರಸರ ಜೊತೆಗೂಡಿ ರಾಜ್ಯದಲ್ಲಿ ಬಂಡಾಯವೆದ್ದಾಗ ಸಾಕಷ್ಟು ನೊಂದುಕೊಂಡ ಚಕ್ರವರ್ತಿಗಳನ್ನು ಸಮಾಧಾನಪಡಿಸಿ ರಾಜಕುಮಾರರನ್ನು ತಾವು ಇನ್ನೊಂದು ವಾರದೊಳಗೆ ಕರೆದುಕೊಂಡು ಬರುವುದಾಗಿ ಇಲ್ಲವಾದರೆ ಅಗ್ನಿಪ್ರವೇಶ ಮಾಡುವುದಾಗಿ ಪ್ರಮಾಣ ಮಾಡಿ ಅನ್ನ, ಆಹಾರ ತ್ಯಜಿಸಿದ ಚಕ್ರವರ್ತಿಗಳಿಗೆ ತನ್ನ ಮೇಲೆ ನಂಬಿಕೆ ಇರುವುದಾದರೆ ಊಟ ಮಾಡುವಂತೆ ಕೇಳಿಕೊಂಡು ಅವರ ದುಃಖದಲ್ಲಿ ಭಾಗಿಯಾಗುವನು.

'ಶಿಲ್ಪಶ್ರೀ' ಕಾದಂಬರಿಯಲ್ಲಿ ಚಾವುಂಡರಾಯ ಖಡ್ಗಸನ್ಯಾಸ ಸ್ವೀಕರಿಸುವುದಾಗಿ ರಾಚಮಲ್ಲನಿಗೆ ಹೇಳಿದಾಗ ಅದಕ್ಕವನು ಒಪ್ಪದೇ ಮಾರಸಿಂಹ ಪೆರ್ಮಾಡಿ ಕೊನೆಯುಸಿರಿಡುವಾಗಲೂ "ನೀವಿರುವವರೆಗೂ ಗಂಗರಾಜ್ಯಕ್ಕೆ ಭಯವಿಲ್ಲ" ಎಂದು ನಂಬಿ, ಕೊನೆಯುಸಿರಿಟ್ಟಿರುವರು ಎಂಬ ವಿಚಾರಗಳನ್ನು ಹೇಳಿ, ಈ ತಬ್ಬಲಿ ರಾಜ್ಯದ ಮೇಲೆ ಪ್ರೇಮವನ್ನು ತ್ಯಜಿಸಬೇಡಿ. ಅವಶ್ಯಕತೆ

ಒದಗಿದಾಗ, ಸೂಕ್ತ ಮಾರ್ಗದರ್ಶನ ನೀಡುತ್ತಾ, ನಮಗೆಲ್ಲರಿಗೂ ಹಿರಿಯರಾಗಿದ್ದರೆ ಸಾಕು ಎಂಬ ಮಾತುಗಳನ್ನಾಡುತ್ತಿದ್ದಂತೆಯೇ ಚಾವುಂಡರಾಯ 'ತಮ್ಮ ಸಿಂಹಾಸನಕ್ಕೆ ವೃದ್ಧಾಪ್ಯ ಅಡರಿದ ನನ್ನ ತೋಳು ಸಲ್ಲಿಸಲಾಗದ ಸೇವೆಯನ್ನು ಇನ್ನು ಮುಂದೆ ನನ್ನ ಮಗ ಜಿನದೇವಣ್ಣ ಮುಂದುವರಿಸಿಕೊಂಡು ಹೋಗಬೇಕೆಂದೇ ಆತನನ್ನಿಲ್ಲಿಗೆ ಬರಹೇಳಿದ್ದೇನೆ. ಆತನನ್ನು ತಮ್ಮ ಸೇವೆಗೆ ಒಪ್ಪಿಸಿಕೊಳ್ಳಬೇಕು. ಅದು ಸಾಲದು, ನಾನೇ ಸೇವೆ ಸಲ್ಲಿಸಬೇಕೆಂದರೆ ಅದಕ್ಕೂ ನಾನು ಸಿದ್ಧನಾಗಿದ್ದೇನೆ. ನನ್ನ ಸುಖದ ಚಿಂತೆಯಲ್ಲಿ ಪ್ರಭುಗಳು ದೇಶದ ಹಿತವನ್ನು ಮರೆಯಬಾರದು. ನನ್ನ ಎರಡು ಹನಿ ರಕ್ತ ಈ ದೇಶಮಾತೆಗೆ ಬೇಕಾಗಿದ್ದರೆ, ಅದನ್ನು ನೀಡಲು ನಾನು ಸದಾ ಸಿದ್ಧನಾಗಿದ್ದೇನೆ. ನನ್ನ ಮನ ನೊಂದೀತೆಂದು, ಪ್ರಭುಗಳು ನನಗೆ ಬಿಡುವು ಕೊಡುವ ಯೋಚನೆ ಮಾಡಬಾರದು'[೫೫] (ಸುಬ್ಬರಾಯರು ತ.ರಾ, ೨೦೧೪, ಶಿಲ್ಪಶ್ರೀ, ಪುಟ–೧೨೭) ಎಂಬ ಮಾತುಗಳನ್ನಾಡುತ್ತಾನೆ.

ವೀರ ಬೈಚಪ್ಪ ನಾಯಕರು ಕೊಂಕಣ, ಗೋವೆ, ರಂಗಿನಿ ಕಾಳಗದಲ್ಲಿ ವಿಜಯವನ್ನು ಸಾಧಿಸಿರುವುದಕ್ಕಾಗಿ ಉಚಿತ ಸನ್ಮಾನವಾಗಬೇಕೆಂದು ಮಂತ್ರಿ ಪದವಿ ಸ್ವೀಕರಿಸಿದ ಸಾಯಣಾಚಾರ್ಯರು ಹೇಳಿದಾಗ ಅದಕ್ಕೊಂದು ದಿನ ಗೊತ್ತು ಮಾಡಿ ಸನ್ಮಾನಿಸಿ ರತ್ನಖಚಿತವಾದ ಒಂದು ಕತ್ತಿಯನ್ನು ಪ್ರಭುಗಳು ಕೊಟ್ಟಾಗ, ಬೈಚಪ್ಪ ನಾಯಕರು ತಮ್ಮ ಕತ್ತಿಯನ್ನು ಒರೆಯಿಂದ ಹಿರಿದು ಪ್ರಭುಗಳ ಪಾದಗಳ ಮೇಲಿಟ್ಟು ನಮಸ್ಕರಿಸಿ 'ಮಹಾಪ್ರಭೂ, ಈ ಸಾಮ್ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ನಿರ್ವಹಿಸಿರುವ ಕರ್ತವ್ಯವನ್ನೇ ನಾನು ನಿರ್ವಹಿಸಿರುವುದು. ಪರಮೋದಾರಿಗಳಾದ ತಾವು ನನ್ನನ್ನು ಬಹುವಾಗಿ ಆದರಿಸಿ ಗೌರವಿಸಿದ್ದೀರಿ. ಕೊಂಕಣ, ಗೋವೆ, ರಂಗಿನಿ ಕಾಳಗದಲ್ಲಿ ನನಗೆ ಭುಜಕ್ಕೆ ಭುಜ ಕೊಟ್ಟು ನಿಂತು, ತಮ್ಮ ರಕ್ತತರ್ಪಣದಿಂದ ವಿಜಯಗಳಿಸಿಕೊಟ್ಟ ಎಲ್ಲ ವೀರರ ಪ್ರತಿನಿಧಿಯಾಗಿ ನಾನು ಈ ಗೌರವ ಸ್ವೀಕರಿಸುತ್ತಿದ್ದೇನೆ. ನಮ್ಮ ಮಹಾಸಾಮ್ರಾಜ್ಯದ ಸೇವೆ ಮಾಡುವುದು ಅದಕ್ಕಾಗಿ ಪ್ರಾಣ ಒಪ್ಪಿಸುವುದೂ ಪುಣ್ಯಪ್ರದವಾದುದು.'[೫೬] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ–೨೦) ಎಂಬ ಮಾತುಗಳನ್ನಾಡುವನು.

ರಾಮಭಟ್ಟರಿಗೆ ಶಿಕ್ಷೆ ವಿಧಿಸುವ ಅಧಿಕಾರವನ್ನು ಇಮ್ಮಡಿ ಹರಿಹರರಾಯರು ಸಿಂಗಮಭಟ್ಟರಿಗೆ ಕೊಟ್ಟಾಗ, ಅವನ ಅಪರಾಧವನ್ನು ಕ್ಷಮಿಸಿ ಅವನಲ್ಲಿರುವ ತಂತ್ರ ವಿಶಾರತೆಯನ್ನು ಉಪಯೋಗಿಸಿಕೊಳ್ಳಬೇಕೆಂದಾಗ, ವಿಜಯನಗರ ಸಾಮ್ರಾಜ್ಯವನ್ನು ಧ್ವಂಸಗೊಳಿಸಲೆತ್ನಿಸಿದ ಪರಮದ್ರೋಹಿ ರಾಮಭಟ್ಟರಿಗೆ ಮರಣದಂಡನೆಯ ಶಿಕ್ಷೆಯಾಗಬೇಕೆಂದು ಹೆಣ್ಣಿನ ಧ್ವನಿಯೊಂದನ್ನು ಕೇಳಿ ಎಲ್ಲರೂ ಅತ್ತ ಕಡೆ ಲಕ್ಷ್ಯ ಹರಿಸಿದಾಗ ಆಕೆ ಬೇರಾರು ಆಗಿರದೆ ರಾಮಭಟ್ಟರ ಪತ್ನಿಯೇ ಆಗಿರುತ್ತಾಳೆ. ಆಕೆ ತನ್ನ ಅಣ್ಣನಾದ ಸಿಂಗಮಭಟ್ಟನಿಗೆ 'ಇಂಥವರ ಉಸಿರಿನಿಂದ ವಿಜಯನಗರದ

ಪವಿತ್ರ ಗಾಳಿ ವಿಷಪೂರಿತವಾಗುತ್ತದೆ. ನನಗವರು ಬಗೆದಿರುವ ದ್ರೋಹವನ್ನು ಕ್ಷಮಿಸಬಲ್ಲೆ, ಆದರೆ ವಿಜಯನಗರಕ್ಕೆ ಬಗೆದಿರುವ ದ್ರೋಹವನ್ನು ಕ್ಷಮಿಸಲಾರೆ. ಅಣ್ಣಾ ನಾನು ನಿನ್ನ ತಂಗಿ, ರಾಮಭಟ್ಟರ ಪತ್ನಿ, ಹಾಗೇ ಹಿಂದೂ ಸ್ತ್ರೀಯಾಗಿದ್ದೇನೆ. ನನ್ನ ದೇವರು, ದೇಶ, ದೊರೆಯ ಬಗ್ಗೆ ಅಭಿಮಾನವುಳ್ಳವಳಾಗಿದ್ದೇನೆ'[೫೭] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೫೩) ಎಂದು ಹೇಳುವ ಮಾತುಗಳು ಇವಳಲ್ಲಿರುವ ದೇಶಪ್ರೇಮವನ್ನು ಎತ್ತಿ ತೋರಿಸುತ್ತವೆ. ಪತಿಯೇ ಪರದೈವ ಎನ್ನುವ ಭಾರತೀಯ ಸಂಸ್ಕೃತಿಯ ಹೆಣ್ಣೊಂದು ತನ್ನ ಪತಿಗೆ ಮರಣದಂಡನೆಯ ಶಿಕ್ಷೆಯಾಗಲಿ ಎನ್ನುತ್ತಾಳೆಂದರೆ ಆಕೆಗೆ ರಾಜ್ಯದ ಬಗ್ಗೆ ಅಭಿಮಾನ ಎಷ್ಟಿತ್ತೆಂಬುದು ವ್ಯಕ್ತವಾಗುವುದು.

ಶ್ರೀ ಪ್ರೌಢದೇವರಾಯರು ಹಾಸಿಗೆ ಹಿಡಿದು ಮಲಗಿರುವ ವಿಷಯ ತಿಳಿದ ಬಹುಮನಿ ಸುಲ್ತಾನರು ವಿಜಯನಗರದ ಮೇಲೆ ದಾಳಿ ಮಾಡಲು ಸಿದ್ಧರಾಗಿರುತ್ತಾರೆ. ಅವರನ್ನು ಎದುರಿಸಲು ಬಿಲ್ಲಾಳುಗಳನ್ನು ಸಿದ್ಧಗೊಳಿಸಲು ರಾಜಬ್ ಅಲ್ಲಿಯವರನ್ನು ಕರೆಸಿ ವಿಚಾರಿಸಲಾಗಿ ರಾಜಬ್ ರಾಜ್ಯದಲ್ಲಿ ಕೆಲವರು ತಮ್ಮ ಬಗ್ಗೆ ಸಂಶಯ ಮನೋಭಾವ ತಾಳಿರುವ ವಿಚಾರವನ್ನು ವ್ಯಕ್ತಪಡಿಸುತ್ತ 'ಸಾಮಾನ್ಯ ಬಿಲ್ಲುಗಾರನಾಗಿದ್ದ ನನ್ನನ್ನು ಬರಮಾಡಿಕೊಂಡು ಬಿಲ್ಲೋಜಸ್ಥಾನ ಕೊಟ್ಟು ಕಾಪಾಡಿರುವಿರಿ. ನನ್ನ ಜತೆ ಬಂದ ಎರಡು ಸಹಸ್ರ ಮುಸ್ಲಿಂ ಬಿಲ್ಲಣಿಗಳನ್ನೂ ಅವರ ಸಂಸಾರಗಳನ್ನೂ ಕಾಪಾಡುತ್ತಿರುವಿರಿ. ಈ ದೇಶದ ಅನ್ನ ತಿಂದು, ನೀರು ಕುಡಿದು ನಾವು ಬದುಕಿದ್ದೇವೆ. ಅನ್ನವಿಟ್ಟ ಧಣಿಗೆ ವಿಷವಿಟ್ಟರೆ, ಇಸ್ಲಾಂ ನನ್ನನ್ನು 'ಕಾಫಿರ್' ಎಂದು ಕರೆಯುತ್ತದೆ. ಧರ್ಮಪ್ರಭುಗಳಾದ ತಾವು ರಾಜ್ಯವಿಸ್ತರಿಸಲು ಬಹುಮನಿಯ ಮೇಲೆ ಯುದ್ಧಕ್ಕೆ ಹೊರಟಿಲ್ಲ. ಸ್ವದೇಶವನ್ನು ರಕ್ಷಿಸಿಕೊಳ್ಳಲು ಹೊರಟಿದ್ದೀರಿ. ಯಾರಿಗೂ ಹಿಂಸೆ, ಅನ್ಯಾಯವಾಗದಂತೆ ನಡೆದುಕೊಳ್ಳಬೇಕೆಂದು ಇಸ್ಲಾಂ ಸಾರಿ ಸಾರಿ ಹೇಳುತ್ತದೆ. ಈ ದೃಷ್ಟಿಯಿಂದ ತಾವೇ ನಿಜವಾದ ಮುಸಲ್ಮಾನರು ಬಹುಮನಿ ಸುಲ್ತಾನರಲ್ಲ'[೫೮] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೨೦೦) ಎಂದು ಹೇಳುತ್ತ ತನಗೆ ವಿಜಯನಗರ ಸಾಮ್ರಾಜ್ಯದ ಮೇಲೆ ಇರುವ ಪ್ರೇಮ ಎಂತಹುದು ಎಂಬುದನ್ನು ಹೇಳುತ್ತಾನೆ.

ಕೆಂಪೇಗೌಡ ವಿದ್ಯೆ ಕಲಿಯಲು ಗುರುಕುಲಾಶ್ರಮಕ್ಕೆ ಬಂದ ಸಂದರ್ಭದಲ್ಲಿ ಗುರುಪತ್ನಿ ಶಾರದಾಂಬೆಯವರು ಅವನಿಗೆ ನೀನು ಯಲಹಂಕ ರಾಜ್ಯದ ದೊರೆಯಾದ ಮೇಲೆ ಏನು ಮಾಡುವೆ ಎಂದು ಕೇಳುತ್ತಾ, ತನಗೆ ವಿಜಯನಗರದ ಮೇಲಿರುವ ಅಭಿಮಾನ ತೋರ್ಪಡಿಸಿಕೊಳ್ಳುತ್ತಾಳೆ. ಉತ್ತರ ದೇಶದಲ್ಲಿ ತುರುಕರು ಹೆಚ್ಚಿಕೊಂಡು ಹಿಂದೂ ಧರ್ಮವನ್ನು ಹಾಳು ಮಾಡುತ್ತಿದ್ದಾರೆ.

ಮಹರ್ಷಿ ವಿದ್ಯಾರಣ್ಯರು ಸ್ಥಾಪಿಸಿದ ವಿಜಯನಗರಕ್ಕೆ ಇವರ ಕಿರುಕುಳ ಅತಿಯಾಗಿದೆ. ನೀನು ಅವರಿಗೆ ನೆರವಾಗಬೇಕು 'ವಿಜಯನಗರ ವಿಜಯನಗರದ ಪ್ರಭುಗಳು ನಮ್ಮ ಎರಡು ಕಣ್ಣುಗಳಿದ್ದಂತೆ ಕೆಂಪಯ್ಯ. ನೀನು ಎಷ್ಟೇ ಬಲಿಷ್ಟನಾದರೂ ವಿಜಯನಗರದ ವಿರುದ್ಧ ನಿಲ್ಲಬೇಡ. ವಿಜಯನಗರ ನಾಶವಾದರೆ ನಮ್ಮ ಧರ್ಮವೇ ನಾಶವಾಗುತ್ತದೆ'[೫೯] (ಕೃಷ್ಣರಾಯರು ಅ.ನ, ೨೦೦೭, ಯಲಹಂಕ ಭೂಪಾಲ, ಪುಟ-೨೩) ಎಂಬ ಮಾತುಗಳನ್ನು ಹೇಳುವುದರ ಮೂಲಕ ವಿಜಯನಗರದ ಮೇಲೆ ತನಗಿರುವ ಪ್ರೇಮವನ್ನು ವ್ಯಕ್ತಪಡಿಸುತ್ತಾಳೆ.

ಇಮ್ಮಡಿ ಮದಕರಿನಾಯಕರು ದಿವಂಗತರಾದಾಗ ಓಬವ್ವನಾಗತಿಯು ಸಹಗಮನ ಮಾಡಿಕೊಳ್ಳಲು ನಿರ್ಧರಿಸಿದ ಸಂದರ್ಭದಲ್ಲಿ ಭುವನಪ್ಪನವರು ತಾವು ಸಹಗಮನ ಮಾಡಬಾರದು 'ನೀವು ನಿಮ್ಮ ಧರ್ಮಕ್ಕೆ ಕಟ್ಟುಬಿದ್ದು ಕಿಚ್ಚೇರಿದರೆ, ದುರ್ಗವನ್ನೇ ಬೆಂಕಿಯಲ್ಲಿ ಹಾಕಿದಂತಾಗುತ್ತದೆ. ದುರ್ಗದ ಕೋಟೆ ಒಳಜಗಳದ ಸಿಡಿಲು ಬಿದ್ದು ಸಿಡಿದು ಹೋಗುತ್ತದೆ. ಅದನ್ನು ತಪ್ಪಿಸಲು ನೀವು ಇರಬೇಕು'[೬೦] (ಸುಬ್ಬರಾಯರು ತ.ರಾ, ೨೦೧೩, ಕಂಬನಿಯ ಕುಯಿಲು, ಪುಟ-೩೧) ಎಂದು ಹೇಳಿ ದುರ್ಗವನ್ನು ಕಾಪಾಡಲು ಪ್ರಯತ್ನಿಸುತ್ತಾನೆ. 'ನಾಯಕರು ಮಲಗಿದ ಕಿಚ್ಚಿನ ಕುಂಡದಲ್ಲಿ ಮಲಗಲು ನೀವೂ ನಿಶ್ಚಯ ಮಾಡಿದ್ದೀರಿ ತಾಯಿ. ಆದರೆ ಅದನ್ನು ಬಿಟ್ಟು ನಾಯಕರ ಅನಿರ್ಧಾರ ನಿರ್ಮಿಸಿದ ಈ ಅಗ್ನಿಕುಂಡದಲ್ಲಿ ತಾವು ಧುಮುಕಬೇಕು. ಅವರ ಹೃದಯ ಬಯಸಿದ ದಾರಿಯಲ್ಲಿ ನಡೆದು ತಾವು ಸಹಗಮನ ಮಾಡಬೇಕು. ಇದು ನಿಮ್ಮನ್ನುಳಿದು ಬೇರಾರಿಗೂ ಸಾಧ್ಯವಿಲ್ಲ. ಈ ಮಾತನ್ನು ಕೇಳಿ ತಮ್ಮ ಚಿತ್ತಕ್ಕೆ ಎಷ್ಟು ವ್ಯಥೆಯಾಗುತ್ತದೆ ಎಂಬುದನ್ನು ನಾನು ಬಲ್ಲೇ ತಾಯಿ, ನನ್ನನ್ನು ನಂಬಿ. ಅಷ್ಟೇ ವ್ಯಥೆ ನನಗೂ ಆಗುತ್ತದೆ. ಆದರೂ... ಅದರೂ, ಇಂದು ನೀವು ಹೀಗೆ ಮಾಡದೇ ಬೇರೆ ದಾರಿಯೇ ಇಲ್ಲ'[೬೧] (ಸುಬ್ಬರಾಯರು ತ.ರಾ, ೨೦೧೩, ಕಂಬನಿಯ ಕುಯಿಲು, ಪುಟ-೩೨) ಎನ್ನುವನು. ನಾಯಕರ ವಿಚಾರದಲ್ಲಿ ಭುವನಪ್ಪನವರನ್ನು ದೇಸಣ್ಣ ಅನುಮಾನದಿಂದ ಕಂಡು ವಿಷಯ ಪ್ರಸ್ತಾಪಿಸಿದಾಗ ತನಗೆ ದುರ್ಗದ ಮೇಲಿರುವ ಅಭಿಮಾನ ಪ್ರೇಮವನ್ನು ಹೇಳುವುದರ ಜೊತೆಗೆ ತನ್ನ ಮೈಯಲ್ಲಿ ಕೊನೆಯ ಹನಿ ರಕ್ತ ಇರುವವರೆಗೂ ದುರ್ಗಕ್ಕೆ ಕೇಡಾಗಲು ಬಿಡುವುದಿಲ್ಲ ಎನ್ನುವಳು. ಓಬವ್ವನಾಗತಿಯು ಕಸ್ತೂರಿನಾಯಕನನ್ನು ಕಾವಲುಗಾರನನ್ನಾಗಿ ನೇಮಿಸುವಾಗ ಕುಡಿಯಲು ಹಾಲು ಕೊಟ್ಟು ಪರೀಕ್ಷಿಸುವ ಸಂದರ್ಭದಲ್ಲಿ ತನಗಿರುವ ಸ್ವಾಮಿನಿಷ್ಠೆಯ ಬಗ್ಗೆ ಹೇಳಿ ಹಾಲಾಹಲವನ್ನು ಕೊಟ್ಟಾದರೂ ಈ ನಾಯಿಯನ್ನು ಪರೀಕ್ಷಿಸಬಹುದು ಎಂದು ಹೇಳುವ ಮಾತುಗಳು ದುರ್ಗದ ಮೇಲೆ ಆತನಲ್ಲಿರುವ ಪ್ರೇಮಭಾವವನ್ನು ವ್ಯಕ್ತಪಡಿಸುತ್ತವೆ.

ಪರಶುರಾಮಪ್ಪನವರು ರಾಜ್ಯವು ಸುಭದ್ರವಾಗಿರಬೇಕೆಂಬ ಕಾರಣದಿಂದ ಬರಿದಾದ ಸಿಂಹಾಸನದ ಮೇಲೆ ಅದರ ಬಗ್ಗೆ ಹನ್ನೆರಡು ವರ್ಷಗಳಿಂದ ಆಲೋಚನೆಯೂ ಮಾಡದ ಲಿಂಗಣ್ಣನಾಯಕರನ್ನು ಕೂಡಿಸಬೇಕೆಂದು ಯೋಚಿಸಿ ಮುದ್ದಣ್ಣ ಓಬಣ್ಣನಾಯಕರ ಕೊಲೆ ಮಾಡಿ ಚಿಕ್ಕಣ್ಣನಾಯಕರನ್ನು ಪಟ್ಟಕ್ಕೆ ತಂದುದು ಅವನ ಮೇಲಿನ ಪ್ರೀತಿ, ವಿಶ್ವಾಸದಿಂದಲ್ಲ. ತನ್ನ ಮಾತು ಕೇಳುವ ಅವರ ನೆರಳಲ್ಲಿ ತನ್ನ ಗರಿ ಬಲಿಸಿಕೊಂಡು ತಾನು ಬಲವಾಗಬೇಕೆಂಬುದು ಅವನ ದುರಾಸೆಯಿಂದ. ಈಗ ಆಗಿರುವುದು ಹಾಗೆಯೇ. ಆದರೆ ಪುತ್ರಸಂತಾನವಿಲ್ಲದೇ ಚಿಕ್ಕಣ್ಣನಾಯಕ ಸತ್ತಿದ್ದುದರಿಂದ ಮತ್ತೊಂದು ಸಲ ಸಿಂಹಾಸನದ ಸಮಸ್ಯೆ ಬಂದಿರುವುದು. ಬೇರೆಯವರು ಇದನ್ನು ಆಕ್ರಮಿಸಿ ದುರ್ಗದ ದುರಂತತೆಗೆ ಕಾರಣವಾಗುವುದರ ಬದಲು ಈ ಸಿಂಹಾಸನ ಸ್ವೀಕರಿಸುವಂತೆ ಸಲಹೆ ನೀಡುತ್ತಾನೆ.

ಭರಮಣ್ಣನು ಸಹ ದುರ್ಗದ ಮೇಲಿನ ಅಪಾರವಾದ ಪ್ರೇಮದಿಂದ ಪಟ್ಟಾಧಿಕಾರಿಯಿಲ್ಲದೆ ಎಲ್ಲಿ ಸಿಂಹಾಸನ ದಳವಾಯಿಗಳ ಪಾಲಾಗುವುದೋ ಎಂಬ ಭಯ ಕಾತರವುಂಟಾಗುತ್ತಿದೆ ದಳವಾಯಿಗಳ ಕಡೆಯವರು ಅಲ್ಲಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. 'ಹುಟ್ಟಿನಿಂದ ಯಾರೂ ಅರಸರಾಗಿರುವುದಿಲ್ಲ; ಪರಾಕ್ರಮವಿದ್ದವನ ಮಡದಿಯಾಗುತ್ತಾಳೆ ಈ ರಾಜ್ಯಲಕ್ಷ್ಮಿ. ಮೂಲಪುರುಷ ತಿಮ್ಮಣ್ಣನಾಯಕರಿಗೆ ಈ ದುರ್ಗ ಒಲಿದದ್ದು ಹೀಗೆ ಅಲ್ಲವೇ? ಅವರಿಗೆ ಪಟ್ಟವಾದಾಗಲೇ ಸಿದ್ಧರು ಹೇಳಿದರು "ಅರಿತು ನಡೆದರೆ ಆರು ತಲೆ ಎಂದು. ಆ ಆರು ತಲೆಯ ಕಾಲ ಮುಗಿಯಿತು" ಎಂದು ಹೀಗೆ ಏನೇನೋ ಸುದ್ದಿ ಹರಡುತ್ತಿದ್ದಾರೆ'[೨] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ–೧೪) ಆದ್ದರಿಂದ ನೀವೇ ದೊರೆಯಾಗಬೇಕೆಂದು ಹೇಳುವನು.

ಪರಶುರಾಮಪ್ಪನಿಗೆ ದುರ್ಗದ ಮೇಲೆ ಎಷ್ಟೊಂದು ಅಗಾಧವಾದ ಪ್ರೇಮಭಾವವೆಂದರೆ ಮುದ್ದಣ್ಣನ ವಧೆಯ ನಂತರ ದುರ್ಗಕ್ಕೆ ಉತ್ತರಾಧಿಕಾರಿಯನ್ನು ಹುಡುಕಲು ಸಭೆ ಸೇರಿಸಿ ಎಲ್ಲರ ಅಭಿಪ್ರಾಯ ತಿಳಿದುಕೊಳ್ಳುತ್ತಾನೆ. ಹರಪನಹಳ್ಳಿಯವರು ಮಧ್ಯಸ್ಥಿಕೆ ವಹಿಸಿ ಕರಣಿಕರೊಬ್ಬರನ್ನು ದುರ್ಗಕ್ಕೆ ಕಳುಹಿಸಿದಾಗ ಪರಶುರಾಮಪ್ಪ ದುರ್ಗದವರು ಎಂದೂ ಹರಪನಹಳ್ಳಿಯವರ ವೈರಿಗಳಲ್ಲ. ನೆರೆಹೊರೆಯ ದೊರೆಗಳು ನೆರೆಯವರಿಗೆ ಹೊರೆಯಾಗದೆ ನೆರೆಯಾಗಿ ನೆರವಾಗಿ ಬಾಳಬೇಕೆಂದು ಹೇಳುವನು. ದಳವಾಯಿ ಭರಮಣ್ಣನಿಗೆ ದೊರೆ ಇಲ್ಲದ ರಾಜ್ಯವೆಂದರೆ ಗಂಡನಿಲ್ಲದ ಹೆಣ್ಣಿದ್ದ ಹಾಗೆ ಬೇಗನೆ ಸಿಂಹಾಸನಕ್ಕೆ ದೊರೆ ತರಬೇಕೆನ್ನುವನು. ಬಿಳಿಚೋಡಿಗೆ ಕಸ್ತೂರಿರಂಗಪ್ಪನಾಯಕರ ಮಕ್ಕಳ ಸ್ವಭಾವವನ್ನು ತಿಳಿದುಕೊಳ್ಳಲು ಬೇಹುಗಾರರನ್ನು ಕಳುಹಿಸುವರು. ಏಕೆಂದರೆ ಪಟ್ಟಕ್ಕೆ ಬರುವವರು

ನವರಾತ್ರಿಯ ಗೊಂಬೆಯಂತೆ ಸಿಂಹಾಸನದ ಮೇಲೆ ಕುಳಿತರೆ ಸಾಲದು ಕುಳಿತ ಸಿಂಹಾಸನವನ್ನು ಕಾಪಾಡಿಕೊಳ್ಳುವ ಶಕ್ತಿ ಇರುವಂತವರಾಗಿರಬೇಕೆಂಬುದು ಪರಶುರಾಮಪ್ಪನವರ ವಿಚಾರವಾಗಿತ್ತು.

ದೊರೆಯಾದವನು ಸಮರ್ಥ ನಾಯಕನಾದಾಗ ಆತನು ಪ್ರಜಾಪ್ರೇಮವನ್ನು ಇಟ್ಟುಕೊಂಡು ಪ್ರಜೆಗಳ ಮನೋಭಾವಕ್ಕೂ, ಅವರ ಅಭಿಪ್ರಾಯಗಳಿಗೂ ಮನ್ನಣೆ ಕೊಟ್ಟಾಗ ಅಂತಹ ರಾಜ್ಯ ಮತ್ತು ರಾಜ್ಯದ ಮೇಲೆ ಪ್ರೀತಿ, ಅಭಿಮಾನವಿರುವುದು ಸಹಜ. ಕಸ್ತೂರಿ ರಂಗಪ್ಪನಾಯಕರು ತಮ್ಮ ಮಗಳ ಮದುವೆಯ ವಿಚಾರದಲ್ಲೂ ಸಹ ಹಿರಿಯರ, ಪ್ರಜೆಗಳ ಅಭಿಪ್ರಾಯಗಳನ್ನು ಕೇಳಿ ಇದು ವೈಯಕ್ತಿಕ ವಿಷಯವಾಗಿದ್ದರೂ ಸಹ ದುರ್ಗದ ಹಿತರಕ್ಷಣೆ ಎಂಬುವುದು ಇಲ್ಲಿ ಮುಖ್ಯ ಎಂದಾಗ ನಾಯಕರಿಗೆ ದುರ್ಗದ ಬಗ್ಗೆ ಇದ್ದ ಅಭಿಮಾನ ಕಂಡು ಎಲ್ಲರೂ ಹೆಮ್ಮೆಯಿಂದ ಬೀಗುತ್ತಾರೆ. ಪ್ರಧಾನಿ ವಿರೂಪಾಕ್ಷಪ್ಪನವರು ಪ್ರಜೆಗಳ ಹಿತದೃಷ್ಟಿ ಇಲ್ಲದ ಅರಸನಾದಲ್ಲಿ ಹೇಗಾದರಾಗಲಿ ಎಂದು ಆತುರದ ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ರಾಜ್ಯವೇ ನಾನು ಎಂಬ ಆತ್ಮೀಯತೆ ಇರುವ ಅರಸನ ಬಗ್ಗೆ ಆತುರದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತಾನೆ.

ಯಜ್ಞನಾರಾಯಣ ಜೋಯಿಸರು ಸೀರ್ಯದ ಅರಮನೆಯ ಪುರೋಹಿತರಾಗಿದ್ದು ಕೃಷ್ಣಪ್ಪನಾಯಕನ ಜಾತಕ ಮತ್ತು ದುರ್ಗದ ರಾಜಕುಮಾರಿ ಓಬವ್ವನಾಗತಿಯ ಜಾತಕಗಳನ್ನು ವೆಂಕಪ್ಪಯ್ಯ ಮತ್ತು ರಾಮಾಶಾಸ್ತ್ರೀಗಳು ತಂದು ತೋರಿಸಿದಾಗ ಈ ಜಾತಕಗಳು ಸರಿ ಹೊಂದುವುದಿಲ್ಲ ಎಂದು ಎಷ್ಟೇ ಬಗೆಯಾಗಿ ಹೇಳಿದರೂ ಸಹ ಜಾತಕ ಸರಿಮಾಡುವಂತೆ ಅದು ರಾಜಾಜ್ಞೆಯೆಂದು ಹೇಳಿದಾಗ 'ಸೀರ್ಯದ ನೀರು ಕುಡಿದು, ಅರಮನೆಯ ಅನ್ನ ತಿಂದು ಬೆಳೆದವರು ಪ್ರಭುಗಳನ್ನು ರಕ್ಷಿಸುವ, ಅವರ ಉಪ್ಪಿನ ಋಣ ತೀರಿಸುವ ಬಯಕೆ ನಿಮಗಿದ್ದರೆ, ಶತಾಯಗತಾಯ ಪ್ರಭುಚಿತ್ತವನ್ನು ಈ ವಿವಾಹದ ಯೋಚನೆಯಿಂದ ಕದಲಿಸಿ, ಹೇಗಾದರೂ ಈ ಮದುವೆ ತಪ್ಪುವಂತೆ ಮಾಡಿ ಈ ಮನೆಯ ಪಾಲಿಗೆ ದುರ್ಗದ ರಾಜಕುಮಾರಿ ಸೊಸೆಯಾಗುವುದಿಲ್ಲ. ಈ ಮನೆತನದಲ್ಲಿ ರಕ್ತದ ಹೊಳೆ ಹರಿಸುವ ರಣದುರ್ಗಿಯಾಗುತ್ತಾಳೆ. ಬೇಕಾದರೆ ನಿಮ್ಮ ಕಾಲಿಗೆ ಬಿದ್ದು ಕೇಳಿಕೊಳ್ಳುತ್ತೇನೆ. ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಇದೊಂದು ಕೆಲಸ ಮಾಡಿ ನಿಮ್ಮ ಇಹಪರದ ಪಥ ಸುಗಮವಾಗುತ್ತದೆ; ನೀವು ತಿಂದ ಅನ್ನ ಅಮೃತವಾಗುತ್ತದೆ. ನನಗಾಗಿಯಲ್ಲ, ನಮ್ಮೆಲ್ಲರಿಗೂ ತಾಯಿಯಾದ ಸೀರ್ಯಕ್ಕಾಗಿ ಅಷ್ಟು ಮಾಡುತ್ತೀರಾ, ರಾಮಾಶಾಸ್ತ್ರೀಗಳೇ'[೬೩] (ಸುಬ್ಬರಾಯರು ತ.ರಾ, ೨೦೧೫, ಕಸ್ತೂರಿ ಕಂಕಣ, ಪುಟ-೪೩) ಎಂದು ಕಕ್ಕುಲತೆ ತುಂಬಿದ ಧ್ವನಿಯಲ್ಲಿ ಪ್ರಾರ್ಥಿಸುತ್ತಾರೆ.

ಕಟ್ಟೀಮನಿಯವರ ಪೌರುಷ ಪರೀಕ್ಷೆ ಕಾದಂಬರಿಯಲ್ಲಿ ದೊರೆಯಾದ ಮಲ್ಲಸರ್ಜನ ಮೇಲೆ ಜನತೆ ಎಷ್ಟೊಂದು ಆದರ, ಅಭಿಮಾನ, ಪ್ರೇಮವನ್ನು ಇಟ್ಟುಕೊಂಡಿದ್ದರೆಂಬುದಕ್ಕೆ ಸಾಕ್ಷಿಯಾಗಿ ಈ

ಮಾತುಗಳನ್ನು ನೋಡಬಹುದು. 'ನಿಜವಾಗಿಯೂ ನಮ್ಮ ಸೇನೆ ಇನ್ನಾವ ಸೇನೆಗೂ ತಲೆಬಾಗುವಂಥದಲ್ಲ ಪ್ರಭು. ನಮ್ಮ ಸೇನೆಯ ಸಂಖ್ಯಾಬಲ ಕಡಿಮೆಯೆಂಬ ಮಾತೇನೋ ನಿಜ. ಟೀಪುವಿನ ದಂಡಿನಲ್ಲಿರುವಷ್ಟು ಯುದ್ಧ ಸಾಮಗ್ರಿಗಳೂ ನಮ್ಮಲ್ಲಿಲ್ಲ ಅದೂ ನಿಜ. ಆದರೂ ಶಿಸ್ತಿನಲ್ಲಿ, ವ್ಯವಸ್ಥೆಯಲ್ಲಿ, ಪರಾಕ್ರಮದಲ್ಲಿ ನಮ್ಮ ಸೈನಿಕರು ಟೀಪುವಿನ ಸೈನಿಕರಿಗೇನೂ ಕಡಿಮೆಯಿಲ್ಲ. ಅಲ್ಲದೇ ಯುದ್ಧದಲ್ಲಿ ಮಹತ್ವದ್ದಾದ ಇನ್ನೊಂದು ವಿಷಯವಿದೆ. ತಮ್ಮ ಊರಿಗಾಗಿ, ನಾಡಿಗಾಗಿ, ಅರಸನಿಗಾಗಿ ಅಭಿಮಾನದಿಂದ ಕಾದಾಡುವ ನೂರು ಮಂದಿ ಸೈನಿಕರು ಬರಿಯ ಸಂಬಳಕ್ಕಾಗಿ ಕತ್ತಿ ಹಿರಿಯುವ ಸಾವಿರ ಮಂದಿ ಸೈನಿಕರನ್ನೂ ಸುಲಭವಾಗಿ, ಸೋಲಿಸಿ ಓಡಿಸಬಲ್ಲರು. ದಿವಾನರು ಈ ವಿಷಯ ಮರೆತಿರುವ ಹಾಗೆ ಕಾಣುತ್ತದೆ'[೬೪] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೪೭) ಎಂದು ತಿಮ್ಮನಗೌಡನು ಹೇಳಿದನು. ಮಡಿವಾಳಪ್ಪನು ಸಹ ಅದಕ್ಕೆ ಅನುಮೋದಿಸುವನು.

ದೊರೆಗಳು ಮಡಿವಾಳನನ್ನು ತಮ್ಮ ಖಾಸಾ ಕಾರಭಾರಿಯನ್ನಾಗಿ ನೇಮಿಸಿಕೊಂಡು ಅದಕ್ಕೆ ಮಡಿವಾಳನ ಒಪ್ಪಿಗೆ ಕೇಳಿದಾಗ ದೊರೆಗಳ ಮೇಲಿನ ಅಗಾಧ ಗೌರವ, ಪ್ರೇಮಭಾವದಿಂದಲೇ 'ಒಪ್ಪಿಗೆಯ ಪ್ರಶ್ನೆಯೇ ಇಲ್ಲ ಪ್ರಭು ನಿಮಗಾಗಿ ನನ್ನ ಜೀವನವೇ ಮೀಸಲು' ಎಂದು ಹೇಳುವನು. ಹೀಗೆ ಇಡೀ ಜೀವವೇ ಮೀಸಲು ಎಂದ ಮಡಿವಾಳ ಟಿಪ್ಪು ಮಲ್ಲಸರ್ಜ ದೊರೆಗಳನ್ನು ಮೋಸದಿಂದ ಸೆರೆ ಹಿಡಿದು ಮೂರು ವರ್ಷಗಳವರೆಗೆ ಸೆರೆಯಲ್ಲಿಟ್ಟಾಗ ಆತನ ಜೊತೆಗೆಯೇ ಇದ್ದು ಅರಸನ ಸ್ಥಿತಿಗೆ ಮರುಕ ಪಡುತ್ತಾನೆ. ಹೇಗಾದರೂ ಮಾಡಿ ಇಲ್ಲಿಂದ ಪಾರಾಗುವ ಮಾರ್ಗವನ್ನು ಕಂಡುಕೊಳ್ಳಬೇಕೆಂದು ಒಂದು ಸಂದರ್ಭದಲ್ಲಿ ಅಲ್ಲಿಂದ ಪಾರಾಗುತ್ತಾರೆ.

ಮಲ್ಲಸರ್ಜನ ಕಾಲದಲ್ಲಿ ಕಿತ್ತೂರಿನಲ್ಲಿ ಅಸಮಾಧಾನದ ಹೊಗೆಯಾಡುತ್ತಿದ್ದಾಗ ಮೈಸೂರು ಪ್ರಾಂತ್ಯದಿಂದ ಬಂದ ಸದಾಶಿವಶಾಸ್ತ್ರಿಗಳನ್ನು ದೀಕ್ಷಿತರು ಕಿತ್ತೂರಿನಲ್ಲಿದ್ದು ಅಲ್ಲಿನ ಎಲ್ಲ ಚಟುವಟಿಕೆಗಳ ಮೇಲೆ ನಿಗಾ ಇಡುವಂತೆ ಸೂಚಿಸಿ ಅವರನ್ನು ವೆಂಕಟರಾಯರ ಮನೆಗೆ ಕಳುಹಿಸುತ್ತಾರೆ. ಸದಾಶಿವಶಾಸ್ತ್ರಿಗಳು ತನಗಾವುದರ ಬಂಧವೂ ಬೇಡ ಎಂದು ಹಕ್ಕಿಯಂತೆ ಹಾರಾಡುತ್ತಿದ್ದ ತನ್ನನ್ನು ಮತ್ತೆ ಪಂಜರದೊಳಗೆ ಕೂಡಿಸುತ್ತಿರುವಿರಿ ಎಂದಾಗ 'ಕಿತ್ತೂರಿನಲ್ಲಿ ದೇಸಾಯರ ಸಮೀಪದಲ್ಲಿ ಯೋಗ್ಯರಾದವರಿಲ್ಲ. ಕಾರಭಾರಿಗಳಾದ ಮಲ್ಲಪ್ಪಶೆಟ್ಟರೂ, ವೆಂಕಟರಾಯರೂ ಸ್ವಾರ್ಥಿಗಳು, ಪ್ರಧಾನಿ ಗುರುಸಿದ್ಧಪ್ಪನವರು ನೈಷ್ಠಿಕ ಸ್ವಾಮಿಭಕ್ತರು. ಆದರೆ ಅವರಿಗೆ ವಯಸ್ಸಾಗಿದೆ. ಪ್ರಬಲರಾದ ಮಲ್ಲಪ್ಪಶೆಟ್ಟಿ, ವೆಂಕಟರಾಯರ ಸಂಚಿಗೆ ಪ್ರತಿಕ್ರಿಯೆ ಮಾಡುವಷ್ಟು ತ್ರಾಣ ಅವರಲ್ಲಿ ಉಳಿದಿಲ್ಲ. ನೀವು ದೊರೆಗಳ ಹಿತೈಷಿಗಳಾಗಿ ರಾಜಧಾನಿಯಲ್ಲಿದ್ದರೆ ಸಾಕು. ಮುಂದಿನ ಕೆಲಸ ಕಿತ್ತೂರಿನ ವೀರರು ನಿರ್ವಹಿಸುತ್ತಾರೆ'[೬೫] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೨೨)

ಎಂದು ಸದಾಶಿವಶಾಸ್ತ್ರಿಗಳನ್ನು ಒಪ್ಪಿಸುತ್ತಾರೆ. ದೊರೆಗಳು ಮಡಿದಾಗ ಸಾಯಲು ನಿರ್ಧರಿಸಿದ ರುದ್ರಮ್ಮ ರಾಣಿಯ ಮನಃ ಪರಿವರ್ತಿಸಲು ದೀಕ್ಷಿತರು ಆಡುವ ಮಾತುಗಳು ನಾಡಿನ ಬಗ್ಗೆ ಅವರಿಗಿರುವ ಪ್ರೇಮ ಎಂತಹುದೆಂಬುದು ತಿಳಿಯುತ್ತದೆ.

ಕಿತ್ತೂರು ಇಂಗ್ಲೀಷರ ಕೈವಶವಾದಾಗ ರಾಯಣ್ಣ ಜನರನ್ನು ಒಟ್ಟುಗೂಡಿಸಿ ಕಿತ್ತೂರನ್ನು ಸ್ವತಂತ್ರಗೊಳಿಸಲು ಪ್ರಯತ್ನಿಸುವ ಸಂದರ್ಭದಲ್ಲಿ ದಂಡು ಕಟ್ಟುವುದು ಹೇಗೆ ಅವರಿಗೆಲ್ಲ ಸಂಬಳಾ ಕೊಡಾಕ ರೊಕ್ಕ ಬೇಕು ಊಟ ಉಡಿಗಿ ಕತ್ತಿ ಢಾಲು ಮದ್ದು ಗುಂಡು ಒಂದ ಎರಡ ಎಂದು ಒಡ್ಡರ ಯಲ್ಲನಾಯಕ ಉದ್ಗಾರ ತೆಗೆದಾಗ 'ಎಲ್ಲಿ ಸಿಗತೈತ್ಯೋ ಅಲ್ಲಿಂದ ತರೂದು. ಶಿವಾಜಿ ಮಹಾರಾಜರು ರಾಜ್ಯ ಸ್ಥಾಪನಾ ಮಾಡಿದ ಕಥಿ ನಿನಗ ಗೊತ್ತಿರಬೇಕಲ್ಲ ಯಲ್ಲಣ್ಣಾ? ಸೆಟ್ಟಿ ಸಾಹುಕಾರರನ್ನು ಸುಲಿದು, ಹಣಾ ಕೂಡಿಸಿ ದಂಡು ತಯಾರು ಮಾಡಿದರವರು. ವಿಜಯನಗರ ರಾಜ್ಯ ಸುರೂ ಆದದ್ದು ಹಿಂಗೇ ಅಲ್ಲೇನ? ಹಕ್ಕಬುಕ್ಕ ಎನ್ನುವ ಕುರುಬರೇ ಅಂಥಾದ್ದೊಂದು ದೊಡ್ಡ ರಾಜ್ಯ ಕಟ್ಟಿ ಆಳಿದರು. ನಾವೂ ಪ್ರಯತ್ನ ಮಾಡಿದರೆ ದಂಡು ಕೂಡಿಸಿ ಪರದೇಶಿಗಳನ್ನು ಹೊರಗೆ ಹಾಕಿ ಕಿತ್ತೂರು ರಾಜ್ಯ ಮತ್ತೆ ಗಳಿಸಬಹುದು'[೬೬] (ಬಸವರಾಜ ಕಟ್ಟೀಮನಿ, ೨೦೦೮, ಸಂಗೊಳ್ಳಿ ರಾಯನಾಯಕ, ಪುಟ-೯೯) ಎಂದು ರಾಯಣ್ಣ ಕಿತ್ತೂರನ್ನು ಪುನಃ ಸ್ವತಂತ್ರಗೊಳಿಸುವ ಆಸೆ ನಿರೀಕ್ಷೆಗಳಿಂದ ತನ್ನ ಜೀವವನ್ನೇ ಸವೆಸಿ ಬಲಿದಾನ ಮಾಡಿದನು. ಹೇಗೂ ಕಿತ್ತೂರು ಮುಳುಗಿ ಹೋಯಿತು, ಇನ್ನು ತನ್ನ ಹಳ್ಳಿಗೆ ತೆರಳಿ ವ್ಯವಸಾಯವೋ, ವ್ಯಾಪಾರವೋ ಮಾಡಿಕೊಂಡಿದ್ದರಾಯಿತು ಎಂಬ ಸ್ವಾರ್ಥಪರ ಆಲೋಚನೆಗಳು ಅವನಿಗೆ ಅಪ್ಪಿ ತಪ್ಪಿಯೂ ಬರಲಿಲ್ಲ. ಕಿತ್ತೂರನ್ನು ಸ್ವತಂತ್ರಗೊಳಿಸಬೇಕೆಂಬ ರಾಜ್ಯದ ಮೇಲಿನ ಪ್ರೇಮ ಅಗಾಧವಾಗಿತ್ತು. ಅದಕ್ಕೆಂದೇ ಬಿದ್ದುಹೋದ ಕಿತ್ತೂರಿನ ರಾಜಗದ್ದುಗೆಯನ್ನು ಪುನಃ ಪ್ರತಿಷ್ಠಾಪಿಸುವ ಹಂಬಲದವನಾಗಿದ್ದ ರಾಯಣ್ಣ

'ಗೆದ್ದ ಕಿತ್ತೂರ ತಂದು ಉದ್ದ ಬೀಳುವೆ ತಾಯಿ

ಕದ್ದ ಮಾತಲ್ಲ ನಿಮ್ಮಾಣೆ/ ಇಲ್ಲದಿದ್ರ

ಬಿದ್ದು ಹೋಗುವೆ ರಣದಾಗ'[೬೭] (ಪಾಟೀಲ ವ್ಹಿ.ಎಲ್, ೨೦೧೨, ಪುಟ-೩೦) ಎಂಬ ವೀರ ಪ್ರತಿಜ್ಞೆಯನ್ನು ಮಾಡಿ ಸಂಸ್ಥಾನದ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟಕ್ಕೆ ಅಣಿಯಾಗುತ್ತಾನೆ.

ಕಲ್ಯಾಣಸ್ವಾಮಿ ಕಾದಂಬರಿಯಲ್ಲಿ ಬಸವರಾಜಪ್ಪ ನಾಲ್ಕು ನಾಡಿಗೆ ಹೋಗಿದ್ದಾಗ ಯಾರೋ ಒಬ್ಬ ರಾಜನ ಬಗ್ಗೆ ಹಗುರವಾಗಿ ಮಾತನಾಡಿದಾಗ ಆತನ ಕತ್ತು ಕತ್ತರಿಸಿ ಪಾರಾಗಿ ಹೋಗುವ ಪ್ರಸಂಗ, ಕೊಡಗು ಇಂಗ್ಲೀಷರ ವಶವಾಗಿ ರಾಜ ಕಾಶಿಗೆ ಹೋಗುವ ಸಂದರ್ಭದಲ್ಲಿ ಜನರು ಪ್ರಲಾಪಿಸುವ ರೀತಿ ರಾಜನ ಮೇಲಿರುವ ಪ್ರೀತಿ ಎಂತಹುದೆಂಬುದು ವ್ಯಕ್ತವಾಗುವುದು.

ಮಾತೃ ದೇವತೆಯ ಸ್ವರೂಪಳು ಒಬ್ಬ ವ್ಯಕ್ತಿಗೆ ಆತನ ಬದುಕಿನಲ್ಲಿ ಯಾರು ಎಷ್ಟೇ ಪ್ರೀತಿಯನ್ನು ತೋರಿಸಿದರೂ ಸಹ ತಾಯಿಯ ಪ್ರೀತಿಯಂತಾಗುವುದಿಲ್ಲ. ಅಂತೆಯೇ ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ ಎಂಬ ಗಾದೆಯೇ ಇದೆ. ತಾಯಿ ನಿಜವಾದ ತ್ಯಾಗ ಜೀವಿ. ತನ್ನ ಬದುಕಿನುದ್ದಕ್ಕೂ ಯಾವ ಸ್ವಾರ್ಥವೂ ಇಲ್ಲದೇ ಮಕ್ಕಳ ಏಳ್ಗೆಗೆ ಇಡೀ ಬದುಕನ್ನೇ ತ್ಯಾಗ ಮಾಡುತ್ತಾಳೆ. 'ಅಮ್ಮ ಎಂದರೆ ವಾತ್ಸಲ್ಯದ ಮೂಲಧಾತು. ಮಾನವೀಯತೆಯ ಸಂಕಲನ. ಅಮ್ಮಾ ಎಂದರೆ ಕರುಣೆ. ತಾಯಿ ಸಂಯಮಶೀಲೆ, ಛಲಗಾತಿ, ಬಂಡುಕೋರಳು, ವಿಧೇಯಳು. ಎತ್ತರೆತ್ತರಕ್ಕೇರುತ್ತಲೇ ನಮ್ಮನ್ನು ಕುಬ್ಜಳಾಗಿಸುವವಳು. ಅಮ್ಮಾ ಎಂದರೆ ದಿಟ್ಟ ಮಾನಸಿ. ವೀರಯೋಗಿಣಿ ಸಕಲರನ್ನು ಸಂತೈಸುವ ಪ್ರೇಮಗಂಧಿನಿ. ಮುಗಿಲನಗೆಯ ಮನದವಳು. ಅಮ್ಮಾ ಎಂದರೆ ಜ್ಞಾನ, ಭಕ್ತಿ, ಸಾಮರಸ್ಯ, ಪರಿಪೂರ್ಣತೆಗಳ ಪ್ರತಿನಿಧಿ ಎನ್ನುತ್ತಾರೆ ಶ್ರೀ ಅರವಿಂದರು'[೬೮] (ಸುಶೀಲಾ ಸೋಮಶೇಖರ, ೨೦೧೦, ಪುಟ-೪೭)

ತಾಯಿಯ ಪ್ರೀತಿ ಎಂಥಹದ್ದು ತಾಯಿಗಿಂತಲೂ ಮಿಗಿಲಾದ ದೈವ ಮತ್ತೊಂದು ಯಾವುದೂ ಇಲ್ಲ ಎಂಬ ಅರ್ಥದಲ್ಲಿಯೇ ಜನಪದರು

"ಕಾಶಿಗೆ ಹೋಗಲಿಕೆ ಏಸೊಂದು ದಿನಬೇಕು

ತಾಸೊತ್ತೆ ನಾರಿ ತವರೂರು ಮನೆಯಲ್ಲಿ

ಕಾಶಿ ಕುಂತವಳೆ ಹಡೆದವ್ವ"

ಹೆತ್ತ ತಾಯಿಯ ಪಾವಿತ್ರ್ಯವನ್ನು ಪ್ರಾಶಸ್ತ್ಯವನ್ನು ಇದಕ್ಕಿಂತ ಸೊಗಸಾದ ರೀತಿಯಲ್ಲಿ ಚಿತ್ರಿಸಲು ಅಸಾಧ್ಯವೆಂಬಂತೆ ಈ ತ್ರಿಪದಿ ಮೂಡಿ ಬಂದಿದೆ. ಭಾರತೀಯ ಸಂಸ್ಕೃತಿಯಲ್ಲಿ ಕಾಶಿಕ್ಷೇತ್ರ ಅತ್ಯಂತ ಪವಿತ್ರವೆಂಬ ಭಾವನೆ ಬೇರೂರಿದೆ. ಆದರೆ ಜನಸಾಮಾನ್ಯರು ಜೀವನದಲ್ಲಿ ಒಮ್ಮೆ ಆ ಕ್ಷೇತ್ರವನ್ನು ಕಂಡು ಬರಲು ಸಾಧ್ಯವಿಲ್ಲ. ಆದರೆ ಅದರ ಪ್ರತಿರೂಪವನ್ನು ಹತ್ತಿರದಲ್ಲೇ ಗುರುತಿಸಿಕೊಳ್ಳುವ ಸೊಗಸನ್ನು ಈ ಅರ್ಥಪೂರ್ಣವಾದ ತ್ರಿಪದಿಯಲ್ಲಿ ಕಾಣಬಹುದು.

ಮಾತೃಪ್ರೇಮವನ್ನು ಚಾವುಂಡರಾಯನ ತಾಯಿ ಕಾಳಲಾದೇವಿ, ವಿಷ್ಣುವರ್ಧನನ ತಾಯಿ ಏಚಲಾದೇವಿ, ಯಲಹಂಕ ಭೂಪಾಲ ಕಾದಂಬರಿಯಲ್ಲಿನ ಗುರುಪತ್ನಿ ಶಾರದಾಂಬೆ, ಮೈದುನನಲ್ಲಿಯೇ ಮಗನನ್ನು ಕಾಣುವ ಕಸ್ತೂರಿನಾಯಕನ ಪತ್ನಿ ಗಂಗವ್ವ, ಇಡೀ ಹಳ್ಳಿಯನ್ನೇ ನಾಶ ಮಾಡಲು ಬರುವ ದಾಸನಾಯಕನನ್ನು ಪರಿವರ್ತಿಸುವ ಮಲ್ಲಭಟರ ಗೌಡನ ಪತ್ನಿ, ಭರಮಣ್ಣನ ತಾಯಿ ನಿಂಗವ್ವ, ಪ್ರಧಾನಿ ನರಸಪ್ಪಯ್ಯನವರ ಪತ್ನಿ ಭಾಗೀರಥಿಬಾಯಿ, ವೆಂಕಟಸುಬ್ಬಯ್ಯನ ತಾಯಿ ಜಾನಕಮ್ಮ, ರಾಯಣ್ಣನ ತಾಯಿ ಕೆಂಚವ್ವ, ಕಲ್ಯಾಣಸ್ವಾಮಿ ಕಾದಂಬರಿಯಲ್ಲಿನ ಪುಟ್ಟಬಸ್ಯಾನ ತಾಯಿ

ಗಂಗವ್ವ, ನರಗುಂದ ಬಂಡಾಯದ ಭಾಸ್ಕರರಾಯನ ತಾಯಿ ಯಮುನಾಬಾಯಿ, ಸಂಗ್ರಾಮಧುರೀಣದ ಹನುಮಂತನ ತಾಯಿ ಗೋದಾದೇವಿ, ಸ್ವಾತಂತ್ರ್ಯದೆಡೆಗೆ ಶೇಖರನ ತಾಯಿ ಪಾರ್ವತಮ್ಮ ಇವರೆಲ್ಲರೂ ತಮ್ಮ ಮಕ್ಕಳ ಏಳ್ಗೆಗಾಗಿ ತಮ್ಮ ಬದುಕನ್ನೇ ತ್ಯಾಗ ಮಾಡಿದವರು. ಮಾತೃ ಹೃದಯದ ಸಂಕೇತಗಳಾಗಿ ಕಾದಂಬರಿಗಳಲ್ಲೆಲ್ಲ ಬಿಂಬಿತವಾಗಿದ್ದು ಕಾದಂಬರಿಕಾರರು ಪುನರ್‌ಲೇಖದ ಸ್ವರೂಪದಲ್ಲಿ ಇವರ ವ್ಯಕ್ತಿತ್ವವನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಚಿತ್ರಿಸಿದ್ದಾರೆ.

ನಮ್ಮ ಸಮಾಜ ವಿಧಿಸಿರುವ ಅನೇಕ ಕಟ್ಟುಪಾಡುಗಳಲ್ಲಿ ವಿವಾಹವೂ ಒಂದು. ಈ ವಿವಾಹದ ಮೂಲಕ ಗಂಡು ಹೆಣ್ಣುಗಳಲ್ಲಿ ದಾಂಪತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಒಂದು ಗಂಡು ಒಂದು ಹೆಣ್ಣು ಜೀವನ ಪರ್ಯಂತ ಒಟ್ಟಾಗಿ ಬಾಳ್ವೆ ನಡೆಸುವುದೇ ದಾಂಪತ್ಯ. ಪರಸ್ಪರ ಅವಲಂಬನೆಯು ಗಂಡು ಹೆಣ್ಣಿನ ಭಾವನಾತ್ಮಕ ಸಂಬಂಧಗಳಲ್ಲಿ ಮೊದಲಿಗೇ ಕಂಡು ಬರುವ ಸಂಗತಿ. ಕ್ರಮೇಣ ಈ ಅವಲಂಬನೆಯು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಭಾದಕವೆನಿಸತೊಡಗಿದಾಗ, ತನ್ನತನವನ್ನು ಸ್ಥಾಪಿಸಿಕೊಳ್ಳುವ ಹಂಬಲ ಬೆಳೆಯುತ್ತದೆ. ಕೊನೆಗೆ ತನ್ನತನವನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಂಡು ತನ್ನ ಸಹಚರಿಯ ವ್ಯಕ್ತಿತ್ವಕ್ಕೆ ಪೂರಕವಾಗಿ ನಿಲ್ಲುವ ಶಕ್ತಿಯನ್ನು ಸಂಪಾದಿಸಿಕೊಂಡಾಗ ದಾಂಪತ್ಯ ಜೀವನವು ತನ್ನ ಆದರ್ಶ ಸ್ಥಿತಿಯನ್ನು ತಲುಪಿದಂತೆ ಆಗುತ್ತದೆ.

ದಾಂಪತ್ಯದ ಬದುಕಿನಲ್ಲಿ ದಂಪತಿಗಳಿಬ್ಬರೂ ಒಂದು ರಥದ ಎರಡು ಚಕ್ರಗಳು. ಆ ಚಕ್ರಗಳು ಒಂದೇ ತೆರನಾಗಿ ಸಮನಾಗಿ ಹೊರಟಾಗ ಮಾತ್ರ ನಿರಾತಂಕವಾಗಿ ರಥವು ಮುನ್ನಡೆಯುವ ರೀತಿಯಲ್ಲಿ ದಂಪತಿಗಳಿಬ್ಬರು ಪರಸ್ಪರ ಅನ್ಯೋನ್ಯತೆ, ಪ್ರೇಮಭಾವದಿಂದ ಹದವರಿತು ಬದುಕು ಸಾಗಿಸಿದಾಗಲೇ ದಾಂಪತ್ಯ ಧರ್ಮಕ್ಕೊಂದು ಬೆಲೆ ಬರುತ್ತದೆ. ಶರಣರು ಸಹ ದಾಂಪತ್ಯಕ್ಕೆ ಪ್ರಾಧಾನ್ಯತೆ ಕೊಟ್ಟು ಪ್ರಾಪಂಚಿಕದಿಂದ ಪಾರಮಾರ್ಥಿಕದೆಡೆಗೆ ಹೋಗುವ ದಾರಿಯನ್ನು ತೋರಿಸಿಕೊಟ್ಟರು. ಸಂಸಾರ ತ್ಯಾಜ್ಯವಲ್ಲ, ಸನ್ಯಾಸ ಶ್ರೇಷ್ಠವಲ್ಲ. ನೈಸರ್ಗಿಕವಾದ ಇಂದ್ರಿಯ ಸುಖವನ್ನು ಸಾತ್ವಿಕವಾಗಿ ಅನುಭವಿಸುವುದೇ ಪರಿಪೂರ್ಣ ಬದುಕಿನ ಲಕ್ಷಣ. ಸಂಸಾರವೆಂಬುದು ಎಂದಿಗೂ ವ್ಯಕ್ತಿಯ ಸಾಧನೆಗೆ ಆತಂಕಕಾರಿಯಾದುದಲ್ಲ. ದಂಪತಿಗಳು ಆದರ್ಶ ದಾಂಪತ್ಯ ಬದುಕನ್ನು ನಡೆಸಿ ಸಿದ್ಧಿಯ ಶಿಖರವನ್ನೇರಬೇಕೆಂದು ಸೂಚಿಸಿದರು.

ಜನಪದರು ಕೂಡ ಸಂಸಾರಿಕ ಬದುಕು ಅಥವಾ ದಾಂಪತ್ಯ ಪ್ರೇಮಕ್ಕೆ ಮಹತ್ವಕೊಟ್ಟು ಬದುಕಿನಲ್ಲಿ ಎಲ್ಲವನ್ನೂ ಹೇಗೆ ನಿಭಾಯಿಸಬೇಕು. ದಂಪತಿಗಳು ತಾಳ್ಮೆ, ಸಹನೆಯಿಂದ ಹೇಗೆ ವರ್ತಿಸಬೇಕೆಂದು ಹೇಳಿರುವರು.

"ಸಂಸಾರವೆಂಬುದು ಸಾಗರ ಹೊಳೆಯವ್ವ

ಈಸ ಬಲ್ಲವಗ ಎದಿಯುದ್ದ । ಗಿಳಿರಾಮ

ಓದು ಬಲ್ಲವಗ ಕೈಲಾಸ ॥"

ಅಂದರೆ ಜನಪದರ ದೃಷ್ಟಿಯಲ್ಲಿ ಸಂಸಾರವೆಂಬುದು ಹೇಯವಾಗಿರದೇ ವಿಶಾಲ ಸಾಗರವಾಗಿದೆ. ಸಂಸಾರದಲ್ಲಿ ಯಾವ ರೀತಿ ಬದುಕಬೇಕೆಂದು, ಹೇಗಿರಬೇಕೆಂದು ಮತ್ತು ಯಾವ ರೀತಿ ವ್ಯವಹರಿಸಬೇಕೆಂಬ ಕಲೆ ಕಲಿತರೆ ಅದು ನಮ್ಮನ್ನು ಮುಳುಗಿಸುವುದಿಲ್ಲ. ಅಂದರೆ ಕಷ್ಟಗಳು ಬರುವುದಿಲ್ಲ. ಪುರಂದರದಾಸರೂ ಸಹ "ಕಲ್ಲಾಗಿರಬೇಕು ಈ ಭವಸಾಗರದೊಳಗೆ, ಬಿಲ್ಲಾಗಿರಬೇಕು ಬಲ್ಲವರೊಳಗೆ" ಎಂಬ ಅಮೃತದಂತಹ ವಾಣಿಯನ್ನು ಅರಿತು ನಡೆದವರು ನಮ್ಮ ಜನಪದರು. ದಾಂಪತ್ಯ ಅಂದ ಮೇಲೆ ಮಾತಿಗೆ ಮಾತು ಬರುವುದುಂಟು. ಆದರೆ ಇದೇ ದಾಂಪತ್ಯದ ಧ್ಯೇಯವಾಗಬಾರದು.

"ಮಾಡದಿರು ಬಾಳನ್ನು ಬೇಳೆಯಂತೆ

ಕೂಡಿರಲಿ ಬಾಳು ಇಡಿಗಾಳಿನಂತೆ"

ಎನ್ನುವ ಬೇಂದ್ರೆಯವರ ನುಡಿ ಸುಖ ದಾಂಪತ್ಯಕ್ಕೆ ಜಾಗ್ರತೆ ನೀಡುತ್ತದೆ. ಇತಿಹಾಸದ ಪುಟಗಳನ್ನು ತಿರುವಿದಾಗ ಎಷ್ಟೋ ಜನರು ಗಂಡ ಹೆಂಡತಿಗೋಸ್ಕರ, ಹೆಂಡತಿ ಗಂಡನಿಗೋಸ್ಕರ ಎಂತಹ ತ್ಯಾಗಗಳನ್ನು ಮಾಡಿರುವುದನ್ನು ಕಾಣುತ್ತೇವೆ. ತಪೋಬಲ ಕಾದಂಬರಿಯಲ್ಲಿನ ಸುರೈಯಾ ಮತ್ತು ಬಹಾದೂರರ ದಾಂಪತ್ಯ ಅನ್ಯೋನ್ಯತೆಯಿಂದ ಕೂಡಿದ್ದು ಸುಲ್ತಾನರು ಸುರೈಯಾಳ ಮೇಲೆ ಮೋಹಪಟ್ಟಾಗ ಗಂಡನ ಪ್ರಾಣ ಉಳಿಸಲು ಅನಿವಾರ್ಯವಾಗಿ ಸುಲ್ತಾನರ ಜನಾನಾ ಸೇರುತ್ತಾಳೆ.

ಶ್ರೀಕೃಷ್ಣದೇವರಾಯ ಮತ್ತು ಚಿನ್ನಾದೇವಿಯರದು ಅನುರೂಪ ದಾಂಪತ್ಯ. ಚಿನ್ನಾದೇವಿ ವೇಶ್ಯಾಕುಲದಲ್ಲಿ ಬೆಳೆದ ನಾಗಲಾಂಬಿಕೆ. ಈಕೆಯಲ್ಲಿ ಮೋಹಿತರಾದ ದೊರೆಗಳು ಎರಡನೆಯ ಪತ್ನಿಯಾಗಿ ಸ್ವೀಕರಿಸಲು ಮುಂದಾದಾಗ ಅದಕ್ಕೊಪ್ಪದೆ ತಾವು ತನ್ನನ್ನು ಮದುವೆಯಾದರೆ ಸಮಾಜದವರು ಏನೆನ್ನಬೇಡ ಎಂದು ನಿರಾಕರಿಸುತ್ತಾಳೆ. ಪ್ರಭುಗಳು ಬಲವಂತಪಡಿಸಿದಾಗ ಆಕೆ ಮೊದಲ ಪತ್ನಿ ತಿರುಮಲಾಂಬಾರವರು ಹಾಗೂ ಮಂತ್ರಿಗಳು ಕೇಳುವ ಪ್ರಶ್ನೆಗಳಿಗೆಲ್ಲ ಉತ್ತರಿಸುತ್ತ ರಾಜ್ಯದ ಅಭಿವೃದ್ಧಿಗಾಗಿ ತಾವು ಬಲಿದಾನವಾಗಲು ಸಿದ್ಧ ಎಂದು ಹೇಳುತ್ತ ಎಲ್ಲರ ಒಪ್ಪಿಗೆಯನ್ನು ಪಡೆದುಕೊಂಡೇ ಮದುವೆಯಾಗಿ ಪ್ರಭುಗಳ ಮೆಚ್ಚಿನ ಮಡದಿಯಾಗುತ್ತಾಳೆ.

ಇಮ್ಮಡಿ ಮದಕರಿನಾಯಕರ ಕಿರಿಯ ಪತ್ನಿ ಗೌರವ್ವನಾಗತಿ, ಭರಮಣ್ಣನಾಯಕರ ಪತ್ನಿ ಸಿದ್ಧವ್ವನಾಗತಿ, ಮದಕರಿನಾಯಕರ ಪತ್ನಿ ಬಂಗಾರವ್ವನಾಗತಿಯರ ದಾಂಪತ್ಯ ಪ್ರೇಮ ಎಲ್ಲರೂ ಮೆಚ್ಚುವಂತಹದಾಗಿದ್ದು, ಬಂಗಾರವ್ವನಾಗತಿಯ ಅಣ್ಣ ಮಲ್ಲಿಕಾರ್ಜುನನು ಬಂದು ತಂಗಿಗೆ ನೀನು ಅರಮನೆಯಲ್ಲಿ ಸರ್ವಾಧಿಕಾರತ್ವದಿಂದ ಇರು. ಇಲ್ಲವಾದರೆ ಪರಿಚಾರಿಕೆಯ ತರಹ ಇರಬೇಕಾಗುವುದೆಂದು ಹೇಳಿದಾಗ ಆಕೆ ಮಾತ್ರ ಕೈಹಿಡಿದವರೊಬ್ಬರು ಮಾತ್ರ ತನ್ನನ್ನು ನಂಬಿ ತನ್ನ ಜೊತೆಗಿದ್ದರೆ ಸಾಕೆಂದು ಮುಖಕ್ಕೆ ಹೊಡೆದ ಹಾಗೆ ಹೇಳುವಳು. ಇದೆಲ್ಲವನ್ನು ಕೇಳಿಸಿಕೊಂಡ ಮದಕರಿನಾಯಕನಿಗೆ ಬಂಗಾರವ್ವನಾಗತಿಯ ಮೇಲಿನ ಪ್ರೇಮ ಇನ್ನಷ್ಟು ಹೆಚ್ಚಾಗುವುದು.

ರುದ್ರಮ್ಮಳಿಗೆ ಪತಿಯಾದ ಮಲ್ಲಸರ್ಜ ದೊರೆಯ ಮೇಲೆ ಎಷ್ಟೊಂದು ಪ್ರೇಮವಿತ್ತೆಂದು ಆಕೆಯು ತನ್ನ ಪತಿಗೆ ಮುಂದೆ ಒದಗಬಹುದಾದ ದುರಂತವನ್ನು ತನ್ನ ಕನಸಿನಲ್ಲಿ ಕಾಣುತ್ತಾಳೆ. ಆದರೆ ಆ ದುರಂತವನ್ನು ತಪ್ಪಿಸಲು ಆಕೆಯಿಂದ ಸಾಧ್ಯವಾಗುವುದಿಲ್ಲ. ಕನಸಿನಲ್ಲಿ ಯಾವುದೋ ಅಸ್ಪಷ್ಟ ವ್ಯಕ್ತಿಯೊಡನೆ ಮಲ್ಲಸರ್ಜ ದೊರೆ 'ಗುಡ್ಡ ಬೆಟ್ಟ ಏರಿ, ಕಣಿವೆಯಿಳಿದು, ಕಡಿದಾದ ಕಂದರವೊಂದರಲ್ಲಿ ಕಾಲು ಜಾರಿ ಬೀಳುವುದರಲ್ಲಿದ್ದಾಗ ತಾನು ಅವರನ್ನು ಹಿಡಿದುಕೊಳ್ಳಲು ಧಾವಿಸಿದ್ದಳು. ಆದರೆ ಅವರು ತನ್ನ ಕೈಗೆ ಸಿಕ್ಕಿರಲಿಲ್ಲ. ಆ ವ್ಯಕ್ತಿಯೊಡನೆ ಅವರೂ ಅದೃಶ್ಯವಾಗಿದ್ದರು. ಅವರು ಪ್ರಪಾತಕ್ಕುರುಳಿದರೆಂದು ಹೆದರಿ ತಾನು ಚೀರಿಕೊಂಡಿದ್ದಳು'[೬೯] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೬೯) ಎಂಬ ಮಾತುಗಳನ್ನು ತನ್ನ ತಂದೆಗೆ ಹೇಳುತ್ತಾಳೆ. ಮುಂದೆ ಟೀಪುವೇನೋ ದೊರೆಯನ್ನು ಸೆರೆಹಿಡಿದು ಬಂಧಿಸಿ ಒಯ್ದು ಕಿತ್ತೂರಿನ ಕೋಟೆಯನ್ನು ವಶಪಡಿಸಿಕೊಳ್ಳುತ್ತಾನೆ. ರುದ್ರಮ್ಮನು ಕಿತ್ತೂರನ್ನು ಮತ್ತೆ ತನ್ನ ವಶಪಡಿಸಿಕೊಳ್ಳಲು ಸಾಕಷ್ಟು ಪರಿಶ್ರಮ ಪಟ್ಟು ಕೋಟೆಯಲ್ಲಿ ಬೀಡು ಬಿಟ್ಟಿದ್ದ ಬದ್ರುಲ್ ಜಮಾನಖಾನನನ್ನು ಓಡಿಸುತ್ತಾಳೆ. ಆ ವಿಷಯವನ್ನು ವೀರಸಂಗಪ್ಪನು ಮಲ್ಲಸರ್ಜ ದೊರೆಗೆ ಆಕೆ ಉತ್ಸಾಹದಿಂದ ಕತ್ತಿ ಹಿಡಿದು ಹೋರಾಡಿದ ಸಮಾಚಾರವನ್ನು ತಿಳಿಸಿದಾಗ ಪತ್ನಿಯ ಶೌರ್ಯದ ಬಗ್ಗೆ ಹೆಮ್ಮೆಯೆನಿಸುತ್ತದೆ. ಅವಳ ಮೇಲಿನ ಪ್ರೀತಿ ಇಮ್ಮಡಿಯಾಗುತ್ತದೆ.

ಮಲ್ಲಸರ್ಜ ದೊರೆ ದಾಂಪತ್ಯದ ಬದುಕಿನಲ್ಲಿ ಸವಿ ಸುಖವನ್ನುಂಡು ರುದ್ರಮ್ಮನಿಂದ ಎರಡು ಮಕ್ಕಳನ್ನು ಹಾಗೂ ಚೆನ್ನಮ್ಮನಿಂದ ಒಬ್ಬ ಮಗನನ್ನು ಪಡೆದುಕೊಂಡು ಅವರಿಬ್ಬರ ಜೊತೆ ಅನ್ಯೋನ್ಯತೆಯಿಂದಲೇ ಬಾಳ್ವೆ ನಡೆಸುವನು. ಆದರೆ ಇತಿಹಾಸದ ಪುಟಗಳನ್ನು ತಿರುವಿದಾಗ ರಾಜರಿಗೆ ಎಷ್ಟು ಪತ್ನಿಯರಿದ್ದರೊ, ಜನಾನಾದಲ್ಲಿರುವ ಸ್ತ್ರೀಯರೆಷ್ಟೋ ಲೆಕ್ಕಕ್ಕೆ ಇರಲಿಲ್ಲ. ಕಾದಂಬರಿಕಾರರು ಸಹ ಒಬ್ಬ ರಾಜನ ಇತಿಹಾಸವನ್ನೇ ಒಂದೊಂದು ತೆರನಾಗಿ ಉಲ್ಲೇಖಿಸಿರುವುದು

ಕಂಡುಬರುತ್ತದೆ. ಕಿತ್ತೂರು ಸಂಸ್ಥಾನದ ಮಲ್ಲಸರ್ಜ ದೊರೆಗಳಿಗೆ ಇಬ್ಬರು ಪತ್ನಿಯರಿದ್ದರೆಂದು ಬಸವರಾಜ ಕಟ್ಟೀಮನಿಯವರು 'ಪೌರುಷ ಪರೀಕ್ಷೆ' ಕಾದಂಬರಿಯಲ್ಲಿ ಪ್ರಸ್ತಾಪಿಸಿದರೆ, ಅ.ನ.ಕೃ ಅವರು 'ವೀರರಾಣಿ ಕಿತ್ತೂರು ಚೆನ್ನಮ್ಮಾ' ಕಾದಂಬರಿಯಲ್ಲಿ ನಾಲ್ವರು ಪತ್ನಿಯರಿದ್ದರೆಂದು ತಿಳಿಸಿದ್ದಾರೆ. ಆದರೆ ಮಲ್ಲಸರ್ಜ ದೊರೆ ಪೇಶ್ವೆಯ ಎರಡನೆಯ ಬಾಜಿರಾಯನನ್ನು ಭೇಟಿಯಾಗಲು ಹೋಗುವ ಸಂದರ್ಭದಲ್ಲಿ ಅವನ ಮಡದಿ ಚೆನ್ನಮ್ಮ ಪತಿಯ ಅಗಲುವಿಕೆಯಿಂದ ಅಳಲು ಪ್ರಾರಂಭಿಸಿದಾಗ

'ಅಳಬ್ಯಾಡ ನೀ ನನ್ನ ಕಳೆಯುಳ್ಳ ಸತಿಯೇ

ಎಳೆಯ ಮಕ್ಕಳ ಮ್ಯಾಲ ಇರಬೇಕು ರತಿಯೇ

ಬಳಗಕ್ಕ ಕೊಡುತಿರು ನೀ ಮೇಲು ಮತಿಯೇ

ಬಾಳಲೋಚನ ಶಿವನ ಪಾದವೆ ಗತಿಯೇ'[೨೦] (ಶಿವಾನಂದ ಗುಬ್ಬಣ್ಣವರ, ೨೦೧೧, ಪುಟ-೬೪) ಎಂದು ಸಂತೈಸುವನು. ಅರಮನೆಯಲ್ಲಿ ಅತ್ತೆ ನೀಲವ್ವ ಹಾಗೂ ಮಕ್ಕಳಿರುವಾಗ ನೀನು ದುಃಖಿಸುವದು ಹಿತವಲ್ಲವೆಂದು ಮಲ್ಲಸರ್ಜ ಮಡದಿಗೆ ಬುದ್ಧಿ ಹೇಳುವದನ್ನು ನೋಡಿದಾಗ ಆತನಿಗೆ ಪತ್ನಿ ಚೆನ್ನಮ್ಮಳ ಮೇಲೆ ಇದ್ದ ಪ್ರೇಮ ಎಂತಹದೆಂಬುದು ವ್ಯಕ್ತವಾಗುತ್ತದೆ.

ಭಾಸ್ಕರರಾಯ ಮತ್ತು ಸಾವಿತ್ರಿಬಾಯಿಯದು ಅನ್ಯೋನ್ಯವಾದ ದಾಂಪತ್ಯವಾಗಿದ್ದು ರಾಜನಿಗೆ ಮದುವೆಯಾಗಿ ಇಪ್ಪತ್ತು ವರ್ಷಗಳಾದರೂ ಸಹ ಮಕ್ಕಳಾಗಲಿಲ್ಲ. ತಾಯಿಯಾದಿಯಾಗಿ ಪತ್ನಿ, ಮಂತ್ರಿಗಳು, ಆತ್ಮೀಯ ಸಂಸ್ಥಾನಿಕರು ಮತ್ತೊಂದು ಮದುವೆಯಾಗುವಂತೆ ಸಲಹೆ ನೀಡಿದರೂ ಸಹ ಅದಕ್ಕೊಪ್ಪದ ರಾಜ ಪತ್ನಿ ಬದುಕಿರುವಾಗ ಮತ್ತೊಂದು ಮದುವೆಯಾಗುವುದೆಂದರೆ ಅದೊಂದು ದೊಡ್ಡ ಅಪರಾಧವೆಂದೇ ಭಾವಿಸಿರುತ್ತಾನೆ. ಸಾವಿತ್ರಿಬಾಯಿಯೂ ಸಹ ಪತಿಗೆ ತಕ್ಕ ಹಾಗೆ ಒಂದು ದಿನವೂ ಜಗಳವಾಡದೆ ಆತನಿಗೆ ಅಸಂತೋಷವಾಗದ ಹಾಗೆ ನಡೆದುಕೊಂಡು ಪತಿಯೇ ಪರದೈವ ಎಂದು ಬಾಳಿದವಳು. ರಾಜನು ಸಹ ಅದಕ್ಕೆ ತಕ್ಕಂತೆ ನಡೆದುಕೊಂಡು, ಇತರ ರಾಜರಂತೆ ನೂರಾರು ಜನಾನಾ ನಿರ್ಮಿಸುವ ರಸಿಕತನಕ್ಕೂ ತೊಡಗಿಸಿಕೊಂಡವನಲ್ಲ. ಸಾವಿತ್ರಿಯನ್ನಲ್ಲದೆ ಬೇರಾವ ಹೆಣ್ಣುಗಳು ಇವನ ಗಮನ ಸೆಳೆಯದೆ ಅವಳಿಗೆ ನಿಷ್ಠವಾಗಿಯೇ ನಡೆದುಕೊಳ್ಳುತ್ತಾನೆ.

'ಸಂಗ್ರಾಮಧುರೀಣ' ಕಾದಂಬರಿಯಲ್ಲಿನ ಹನುಮಂತಗೌಡ ಮತ್ತು ತುಳಜಮ್ಮರ ದಾಂಪತ್ಯ ಪ್ರೇಮವನ್ನು ಕಂಡು ಎಲ್ಲರೂ ಮೆಚ್ಚಿಕೊಳ್ಳುವರು. ಗಂಡನ ಎಲ್ಲ ಕಾರ್ಯಗಳಲ್ಲೂ ಭಾಗಿಯಾಗುತ್ತ ಪ್ರೋತ್ಸಾಹಿಸುವ ಈಕೆ ಗಂಡನ ಅಭ್ಯುದಯವನ್ನೇ ಬಯಸುವುದಷ್ಟೇ ಅಲ್ಲ ಹರಪನಹಳ್ಳಿಯ ಭೀಮಪ್ಪಗೌಡರ ಸಹೋದರಿ ಪದ್ಮಾವತಿಯನ್ನು ತನ್ನ ಗಂಡನಿಗೆ ಮದುವೆ ಮಾಡಿಸುವಲ್ಲಿ

ಸಫಲಳಾಗುತ್ತಾಳೆ. ಹನುಮಂತಗೌಡ ತನ್ನ ಬಾಳಿನ ಗೃಹಲಕ್ಷ್ಮೀ ತುಳಜಮ್ಮಳೊಬ್ಬಳೇ ಎಂದು ಮದುವೆ ನಿರಾಕರಿಸಿದರೂ ಸಹ ಹಟ ಬಿಡದ ಈಕೆ ತಾನಾಗಲೇ ಮಾತು ಕೊಟ್ಟಾಗಿದೆ ಎಂದು ಮದುವೆಗೆ ಒಪ್ಪಿಸುವಳು. ಇಷ್ಟೇ ಅಲ್ಲದೆ ಕಾದಂಬರಿಗಳಲ್ಲಿ ಬರುವ ತಿಮಣ್ಣದಣ್ಣಾಯಕ–ರಂಗಾಂಬಿಕೆ, ಮಾಧವಭಟ್ಟರು–ಶಾರದಾಂಬೆ, ಕಸ್ತೂರಿನಾಯಕ–ಗಂಗವ್ವ, ಮಡಿವಾಳ–ಸಿದ್ಧಮತಿ, ಪುಟ್ಟಬಸವ–ಗಿರಿಜವ್ವಳ ದಾಂಪತ್ಯಪ್ರೇಮವನ್ನು ಕಾದಂಬರಿಕಾರರು ಬಣ್ಣಿಸಿರುವರು.

ಮಾನವನ ಬದುಕು ವಿವಿಧ ಬಾಂಧವ್ಯಗಳಿಂದ ಕೂಡಿದೆ. ಅವುಗಳಲ್ಲಿ ಸ್ನೇಹ ಒಂದು. ಸ್ನೇಹ ಎಂಬ ಎರಡು ಪದಗಳಲ್ಲಿಯೇ ಮಾನವ ಬದುಕಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿ ನಿಂತಿದೆ. ಸ್ನೇಹಕ್ಕಾಗಿ ತಮ್ಮ ಇಡೀ ಬದುಕನ್ನೇ ತ್ಯಾಗ ಮಾಡಿದ ತ್ಯಾಗಮಯಿಗಳನ್ನು ನಮ್ಮ ಜಗತ್ತಿನಲ್ಲೆಲ್ಲ ಕಾಣುತ್ತೇವೆ. ಒಬ್ಬರ ಸುಖ–ದುಃಖಗಳಲ್ಲಿ ಮತ್ತೊಬ್ಬರು ನೆರವಾಗುವುದು, ಸಾಂತ್ವನ ಹೇಳುವುದು, ಪರಸ್ಪರ ಹೊಂದಾಣಿಕೆ, ಅನ್ಯೋನ್ಯತೆಯ ಗುಣಗಳನ್ನು ಸ್ನೇಹದಲ್ಲಿ ಕಾಣುತ್ತೇವೆ. ನಿಜವಾದ ಸ್ನೇಹದಲ್ಲಿ ನಿಷ್ಕಲ್ಮಶವಾದ, ಸ್ವಾರ್ಥ ರಹಿತವಾದ ಪ್ರೇಮವನ್ನು ಕಾಣುತ್ತೇವೆ. 'ಸ್ನೇಹ ಬಾಂಧವ್ಯಗಳಲ್ಲೇ ಹಿರಿದಾದುದು; ಸ್ನೇಹ ವಿಶ್ವಪ್ರೇಮದ ಸಂಕೇತ. ಸ್ನೇಹ ಜೀವಂತಿಕೆಯ ಹೆಗ್ಗುರುತು. ಸ್ನೇಹದ ಬಗ್ಗೆ ಹಲವರ ಅನುಭವೋಕ್ತಿಗಳಿವೆ. "ನೋಡುವಾಗ, ಮುಟ್ಟುವಾಗ, ಕೇಳುವಾಗ, ಮಾತಾಡುವಾಗ ಅಂತಃಕರಣವು ಕರಗುವುದೇ ಸ್ನೇಹದ ಲಕ್ಷಣ" ಇದು ಎಚ್.ಕೆ.ದೇಶಪಾಂಡೆಯವರ ಮಾತು. "ಸ್ನೇಹವೇ ಮನದ ಜೀವನದ ಉತ್ತಮಾಂಶ" ಎಂದಿದ್ದಾರೆ ಲಿಂಕನ್. "ಜೀವನದ ಬೆಂಗಾಡಿಯಲ್ಲಿ ಬೀಸುವ ತಂಗಾಳಿ ಸ್ನೇಹವೊಂದೇ" ಎಂಬುದು ಎಪಿಕ್ಯೂರಸ್ ಮಾತು. ಕವಿ ಚೆನ್ನವೀರ ಕಣವಿಯವರು "ಗೆಳೆತನವೇ ಚಿರಬಾಳ ಸಂಜೀವಿನಿ ವಿಶ್ವದಂತಃಕರಣ ಮಂದಾಕಿನಿ" ಎಂದು ನುಡಿದು ಸ್ನೇಹದ ಮಹತ್ವವನ್ನು ಹೇಳಿದ್ದಾರೆ.'[೨೧] (ಸುಶೀಲಾ ಸೋಮಶೇಖರ, ೨೦೧೦, ಪುಟ–೯೫)

ಲಿಂಗಣ್ಣನಾಯಕರಿಗೂ ದಳವಾಯಿ ಭರಮಣ್ಣ ಮತ್ತು ಪರಶುರಾಮಪ್ಪನವರ ಮಧ್ಯೆ ಎಂತಹ ಅಗಾಧವಾದ ಸ್ನೇಹವಿತ್ತೆಂದರೆ ಪರಸ್ಪರ ಒಬ್ಬರಿಗೊಬ್ಬರು ಪ್ರಾಣಕೊಡಲು ಹಿಂಜರಿಯದವರು. ಲಿಂಗಣ್ಣನಾಯಕರನ್ನು ದೊರೆಯನ್ನಾಗಿ ಮಾಡಲು ಪರಶುರಾಮಪ್ಪ ಮತ್ತು ಭರಮಣ್ಣ ಸಾಕಷ್ಟು ಶ್ರಮಿಸುತ್ತಾರೆ. ಆದರೆ ತದನಂತರದ ದಿನಗಳಲ್ಲಿ ದೊರೆಯನ್ನು ಭೇಟಿಯಾಗಲು ಪರಶುರಾಮಪ್ಪ ಹಾಗೂ ಭರಮಣ್ಣನಿಗೆ ಮುದ್ದಣ್ಣ ಅವಕಾಶವನ್ನೇ ಕಲ್ಪಿಸಿಕೊಡುವುದಿಲ್ಲ. ಇವರು ಮುದ್ದಣ್ಣನನ್ನು ಹಿಂದಿನ ದಿನ ಕಾಣಲು ಹೋದಾಗ ಅವರನ್ನು ಸೆರೆಯಲ್ಲಿ ಇಡಿಸಿರುತ್ತಾನೆ. ಅವರು ಕಾಣದಿರುವ ವಿಷಯ ತಿಳಿದ ಲಿಂಗಣ್ಣನಾಯಕ ಮುದ್ದಣ್ಣನಿಗೆ 'ನಮಗೂ ಪರಶುರಾಮಪ್ಪನವರಿಗೂ

ಭರಮಣ್ಣನವರಿಗೂ ಇರುವ ಸ್ನೇಹ ಬಾಂಧವ್ಯ ನಿಮಗೆ ತಿಳಿದಿದೆ. ಅವರ ಕೂದಲು ಕೊಂಕಿದರೂ ಅದಕ್ಕೆ ಕಾರಣರಾದವರ ತಲೆ ಉಳಿಸುವುದಿಲ್ಲ ಎಂದು ಹಿರಿಯರ ಹೆಸರಿನ ಮೇಲೆ ಆಣೆ ಮಾಡಿದ್ದೇವೆ'[೨] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೧೭೪) ಎನ್ನುವನು.

ಹಿರಿಯೂರಿನ ಕೆಂಚಣ್ಣನಾಯಕನಿಗೆ ದುರ್ಗದ ಕಸ್ತೂರಿ ರಂಗಪ್ಪನಾಯಕನೆಂದರೆ ಅಪಾರ ಪ್ರೇಮ. ಆತನಿಗೆ ಎಂದೂ ಕೆಡುಕಾಗದಿರಲಿ ಎಂದು ಬಯಸುವ ಈತ ಸೀರ್ಯದ ರಂಗಪ್ಪನಾಯಕನು ತಮ್ಮ ಮಗ ಕೃಷ್ಣಪ್ಪನಾಯಕನಿಗೆ ದುರ್ಗದ ರಾಜಕುಮಾರಿಯನ್ನು ತಂದುಕೊಳ್ಳಬೇಕೆಂದಿರುವ ವಿಷಯ ತಿಳಿದಾಗ ಅನುಮಾನ ವ್ಯಕ್ತಪಡಿಸುತ್ತಲೇ ಸೀರ್ಯಕ್ಕೆ ಬೇಹುಗಾರ ಪಡೆಯ ನಾಯಕನಾದ ವೆಂಕಟನಾಯಕನನ್ನು ಕಳುಹಿಸಿ, ಚಂದ್ರಶೇಖರಶಾಸ್ತ್ರೀಗಳ ಸಂಬಂಧಿಯಾದ ಸುಬ್ಬರಾಯಶಾಸ್ತ್ರೀಗಳ ಕಡೆಯಿಂದ ವಿಷಯ ತಿಳಿದುಕೊಂಡು ಬಂದು ಅಲ್ಲಿಯ ವಿದ್ಯಮಾನಗಳ ಕುರಿತು ತಿಳಿಸುವಂತೆ ಹೇಳುವನು. ಜೊತೆಗೆ ಮದುವೆ ಕಾರ್ಯ ಮುಗಿದು ಸೀರ್ಯದ ಔತಣಕೂಟಕ್ಕೆ ಕರೆ ಬಂದರೂ ಸಹ ಕೆಂಚಣ್ಣನಾಯಕ ಹೋಗದೇ ದುರ್ಗದಲ್ಲಿಯೇ ಇದ್ದು, ಸೀರ್ಯಕ್ಕೆ ಹೋಗುವ ಕಸ್ತೂರಿರಂಗಪ್ಪನಾಯಕನಿಗೆ ಅಲ್ಲಿ ರಕ್ಷಣೆ ಒದಗಿಸಬೇಕೆಂದು ಆಲೋಚಿಸುವನು. ಕಸ್ತೂರಿರಂಗಪ್ಪನಾಯಕನೂ ಸಹ ಇಡೀ ದುರ್ಗದ ರಕ್ಷಣೆಯ ಜವಾಬ್ದಾರಿಯನ್ನು ಕೆಂಚಣ್ಣನಾಯಕನಿಗೆ ವಹಿಸಿಕೊಟ್ಟು ಸೀರ್ಯಕ್ಕೆ ಹೋಗುವನು. ಅಂದರೆ ಇಲ್ಲಿ ಕೆಂಚಣ್ಣನಾಯಕನಿಗೆ ಕಸ್ತೂರಿರಂಗಪ್ಪನಾಯಕನ ಮೇಲೆ ಇರುವ ಸ್ನೇಹ ಎಂತಹದ್ದು ಎಂಬುದು ತಿಳಿಯುವುದು.

ಪ್ರತಾಪಸಿಂಹನನ್ನು ಸೆರೆಹಿಡಿಯದೇ ಆತನನ್ನು ಮೊಘಲರ ಕೈಗೆ ಸಿಕ್ಕದಂತೆ ಪಾರಾಗಿಸಿದ ಶಕ್ತಸಿಂಹನ ವಿಚಾರವನ್ನು ಪತ್ತೆ ಹಚ್ಚಿದ ಮಿಹಿತಾರ್‌ಖಾನ್ ಷಹಜಾದಾ ಸೆಲೀಂನಿಗೆ ಬಂದು ತಿಳಿಸುತ್ತಾನೆ. ಶಕ್ತಸಿಂಹನನ್ನು ಕೇಳಲಾಗಿ ಅದನ್ನು ಒಪ್ಪಿಕೊಂಡ ಆತ ಶಿಕ್ಷೆ ಅನುಭವಿಸಲು ಸಿದ್ಧವಿರುವುದಾಗಿ ಹೇಳುವನು. ಮಿತ್ರನದು ಕ್ಷಮಿಸಲಾಗದ ತಪ್ಪಾಗಿದ್ದರೂ ಗಾಢ ಗೆಳೆತನ ಮತ್ತು ಗೆಳೆಯನ ಭಾವನಾತ್ಮಕ ಸಂಬಂಧವನ್ನು ಗೌರವಿಸುವ ಸೆಲೀಂ ಅವನನ್ನು ಕ್ಷಮಿಸುವನು. "ಇಲ್ಲಿಂದ ಹೊರಟು ಹೋಗಿ, ಈ ಗೊಂದಲವೆಲ್ಲಾ ಅಡಗಿದ ಮೇಲೆ ನಿಮ್ಮ ಮಿತ್ರನ ಬಳಿಗೆ ಬನ್ನಿ" ಎಂದು ಹೇಳುವುದರ ಮೂಲಕ ಸೆಲೀಂನ ನಿಜವಾದ ಸ್ನೇಹ, ತ್ಯಾಗದ ಗುಣವನ್ನು ಅ.ನ.ಕೃ ಚಿತ್ರಿಸಿದ್ದಾರೆ.

ರಾಯಣ್ಣ ವೀರಪ್ಪನವರನ್ನು ಭೇಟಿಯಾಗಲು ಬಂದ ಸಂದರ್ಭದಲ್ಲಿ ಪ್ರೀತಿಯಿಂದ ರಾಯಣ್ಣನನ್ನು ಎದೆಗೊತ್ತಿಕೊಳ್ಳುತ್ತ 'ಐದಾರು ತಾಸು ಒಂದೇ ಸವನೆ ನಡೆದು ಬಹಳ ದಣಿವಾಗಿರಬೇಕು. ಮೊದಲು ಜಳಕ ಮುಗಿಸಿಕೊಂಡು ಬಾ. ಅಷ್ಟರೊಳಗೆ ಗಂಜಿ ಮಾಡಿರ್ತಾನೆ ಕರವೀರ. ಅದಷ್ಟನ್ನು ಉಂಡರೆ ಆರಾಮ ಆಗತೈತಿ. ಆಮ್ಯಾಲ ಕುಂತು ಮಾತಾಡೋಣ'[೭೩]

(ಬಸವರಾಜ ಕಟ್ಟೀಮನಿ, ೨೦೦೮, ಸಂಗೊಳ್ಳಿ ರಾಯನಾಯಕ, ಪುಟ-೧೨) ಎಂದು ಪ್ರೀತಿ, ಕಾಳಜಿಯ ಮಾತುಗಳನ್ನಾಡುವನು.

ರಾಯಣ್ಣನ ಆಪ್ತಮಿತ್ರನಾದ ಬಿಚ್ಚುಗತ್ತಿ ಚೆನ್ನಬಸಪ್ಪ ಆತನ ಎಲ್ಲ ಸಾಹಸದ ಕೃತ್ಯಗಳಲ್ಲಿಯೂ ನೆರವಾಗಿದ್ದಾನೆ. ಅವನ ಮನೆತನದ ಸುಖ-ದುಃಖಗಳಲ್ಲಿಯೂ ಪಾಲ್ಗೊಳ್ಳುತ್ತಿರುತ್ತಾನೆ. ಈ ಸಲುಗೆ ಸಹಕಾರದಿಂದಲೇ ರಾಯಣ್ಣ ತನ್ನೂರಿನಿಂದ ಹೊರಗಡೆ ಹೊರಟಾಗ ತನ್ನ ಮನೆಯ ಜವಾಬ್ದಾರಿಯನ್ನು ಚೆನ್ನಬಸಪ್ಪನಿಗೆ ಒಪ್ಪಿಸುತ್ತಿದ್ದನು.

'ಬಿಚ್ಚುಗತ್ತಿ ಚನಬಸ್ಯಾ ತಮ್ಮಾ ಜೋಕೆಪ್ಪ ಮನೀಕಡಿಗೀಗ

ಸಂಪಗಾವಿಗ ಚಾಕರಿ ಬಂದೈತಿ ತಮ್ಮಾ ನನಗೆ'[೭೪] (ಪಾಟೀಲ ವ್ಹಿ.ಎಲ್, ೨೦೧೨, ಪುಟ-೩೩)

ಹೀಗೆ ರಾಯಣ್ಣ ಮತ್ತು ಚೆನ್ನಬಸಪ್ಪ ಈರ್ವರ ನಡುವೆ ಅತ್ಯಂತ ಆತ್ಮೀಯ ವಿಶ್ವಾಸಭರಿತವಾದ ಸ್ನೇಹವಿತ್ತು. ಒಮ್ಮೆ ಕುಲಕರ್ಣಿ ಬಾಳಪ್ಪ ರಾಯಣ್ಣನಿಲ್ಲದ ಸಮಯದಲ್ಲಿ ಆತನ ತಾಯಿಯ ಡುಬ್ಬದ ಮೇಲೆ ಕಲ್ಲು ಹೇರಿದ ಸುದ್ಧಿ ತಿಳಿದು ಚಾವಡಿಗೆ ಓಡಿ ಬಂದು ಹೀಗೆ ಹೇಳುತ್ತಾನೆ.

'ಏ ಕತ್ತಿ ಮಗನ ಕುಲಕರ್ಣಿ ಎಂತಾ ಸೊಕ್ಕು

ಬಂತ ನಿನಗ ಅಳಗಾಲ ಆಗುವ ಕಾಲ

ಒದ್ದ ಮುರಿದೇನ ಸೂಳೊಯ ಮಗನ ಹಲ್ಲ

ಮುದುಕಿ ಡುಬ್ಬದ ಮ್ಯಾಗ ಹೇರುದೇನ ಕಲ್ಲ

ಅನ್ಯಾಯ ಮಾಡಿದವರನ್ನು ನಮ್ಮ ಕಣ್ಣ ನೋಡ್ಯಾವ

ಮಣ್ಣಗೂಡಿ ಹೋಗಿದಾರ ಭೂಮಿಮ್ಯಾಲ

ಹಿಂಗ ಅದ್ದೂರಿ ಮಾಡಿದವರು ಆಗತಾರ ಅಳಗಾಲ'[೭೫] (ಪಾಟೀಲ ವ್ಹಿ.ಎಲ್, ೨೦೧೨, ಪುಟ-೩೪) ಈ ತೆರನಾಗಿ ರಾಯಣ್ಣನ ಅಪ್ರಸ್ತುತದಲ್ಲಿ ಚೆನ್ನಬಸಪ್ಪ ಆತನ ಸ್ಥಾನವನ್ನು ತುಂಬಿಕೊಟ್ಟು ರಾಯಣ್ಣನ ಮನೆತನದ ಸುಖ ದುಃಖಗಳಲ್ಲೂ ನೆರವಾಗುತ್ತಿದ್ದನು.

ಸೈನಿಕರನ್ನು ಕೂಡಿಸಿಕೊಂಡು ಬರಲೆಂದು ಬಿಚ್ಚುಗತ್ತಿ ಚೆನ್ನಬಸಪ್ಪ ಅಂಬಡಗಟ್ಟಿಗೆ ಹೋದಾಗ ಇತ್ತ ರಾಯಣ್ಣನನ್ನು ಮೋಸದಿಂದ ಬಂಧಿಸಿದ ವಿಷಯ ತಿಳಿದು ಯಾವುದಕ್ಕೂ ಏನೂ ಉತ್ಸಾಹವಿಲ್ಲದೆ ಕಿತ್ತೂರ ನಾಡಿನ ಗಂಡುಗಲಿ ರಾಯಣ್ಣನಂಥವನೇ ಬಂದಿಯಾದ ಮೇಲೆ ಅವನ

ಜೊತೆಗಾರನಾದ ನಾನಾದರೂ ಹೊರಗೆ ಇದ್ದು ಮಾಡುವದೇನಿದೆ. ನನ್ನ ಪ್ರೀತಿಯ ಗೆಳೆಯನಿದ್ದಲ್ಲಿ ನಾನಿರುವವನು. ಅವನು ಸೆರೆಮನೆಯಲ್ಲಿದ್ದರೆ ನಾನೂ ಅಲ್ಲಿಯೇ. ಅವನಿಗೆ ಗಲ್ಲಿನ ಶಿಕ್ಷೆಯಾದರೆ ನನಗೂ ಅಗಬೇಕು ಅವನ ಜೊತೆಯಲ್ಲಿಯೇ. ಕೂಡಿ ಬೆಳೆದವರು, ಕೂಡಿ ಆಡಿದವರು, ಕೂಡಿ ಲಢಾಯಿ ಮಾಡಿದವರು, ಕೂಡಿಯೇ ಸಾಯಬೇಕು ಎಂದು ಎಲ್ಲಿಲ್ಲದ ಕಳವಳ ವ್ಯಕ್ತಪಡಿಸುತ್ತಾನೆ. ಆತ್ಮೀಯ ಗೆಳೆಯನ ಅವಸ್ಥೆಗಾಗಿ ಕಣ್ಣೀರು ಸುರಿಸುತ್ತಾನೆ. ರಾಯಣ್ಣನ ಮರಣದ ನಂತರ ಬಿಚ್ಚುಗತ್ತಿ ಚೆನ್ನಬಸಪ್ಪ ಬಾವಾನ (ಸಾಧು) ವೇಷ ಧರಿಸಿ ನಂದಗಡದಲ್ಲಿದ್ದ ರಾಯಣ್ಣನ ಗದ್ದುಗೆಯ ಪೂಜೆ ನೆರವೇರಿಸಿ ಅಮರ ಮಿತ್ರತ್ವವನ್ನು ಮೆರೆಯುತ್ತಾನೆ.

'ಸಂಗ್ರಾಮಧುರೀಣ' ಕಾದಂಬರಿಯಲ್ಲಿ ಗುತ್ತಲದ ಮಹಾದೇವಗೌಡರದು ಹಾಗೂ ಬಂಕಾಪುರದ ಸುಭಾದಾರನಾದ ಸರ್ಜಾಖಾನರದು ಅನ್ಯೋನ್ಯತೆಯ ಸ್ನೇಹ. ಸರ್ಜಾಖಾನ್‌ರು ಮುಸ್ಲಿಂನಾಗಿದ್ದು ಮಹಾದೇವಗೌಡ ಬ್ರಾಹ್ಮಣನಾಗಿದ್ದರೂ ಸಹ ಒಬ್ಬರಿಗೊಬ್ಬರು ಯಾವ ಜಾತಿ ತಾರತಮ್ಯತೆಯಿಲ್ಲದೆ ನಂಬಿಕೆ, ಸ್ನೇಹ, ಪ್ರೇಮ, ವಿಶ್ವಾಸದಿಂದಲೇ ಇರುತ್ತಾರೆ. ಮಹಾದೇವಗೌಡನ ಬದಲಾಗಿ ಕಂದಾಯದ ಹಣವನ್ನು ಕೊಡಲು ಅಳಿಯನಾದ ಹನುಮಂತಗೌಡ ಹೋದಾಗ ವಿಷಯ ತಿಳಿದ ಸುಭಾದಾರನಾದ ಸರ್ಜಾಖಾನ್‌ರು ಆತನನ್ನು ಆದರದಿಂದ ಬರಮಾಡಿಕೊಂಡು ಪ್ರೀತಿಯಿಂದ ಅಪ್ಪಿಕೊಳ್ಳುವರು. ಹನುಮಂತಗೌಡ ತನ್ನ ಮಾವ ಹೇಳಿದ ಸುಭಾದಾರರ ಒಳ್ಳೆಯತನದ ವಿಚಾರಗಳನ್ನು ಹೇಳಿದಾಗ ಆನಂದಭಾಷ್ಪ ಸುರಿಸುತ್ತ 'ದೋಸ್ತ್ ನಾನು ಹೇಳುವ ಮಾತನ್ನು ಮನಸ್ಸಿಟ್ಟು ಕೇಳಿ. ನಾನು ಮುಸಲ್ಮಾನ್, ಮಹಾದೇವಪ್ಪ ಬೊಮ್ಮನ್. ನಾನು ಗುತ್ತಲಕ್ಕೆ ಹೋದಾಗ ಅವರು ದಾವತ್ ಕೊಡುತ್ತಾರೆ. ನಾನು ಸಂತೋಷವಾಗಿ ಊಟ ಮಾಡುತ್ತೇನೆ. ಅವರು ಇಲ್ಲಿಗೆ ಬಂದರೆ ಒಂದು ಲೋಟಾ ಷರಬತ್ ಕೂಡ ತೆಗೆದುಕೊಳ್ಳುವುದಿಲ್ಲ. ಅದು ಸಣ್ಣ ವಿಷಯ! ಆದರೆ ನಾವು ಭಾಯ್ ಭಾಯ್‌ಗಳಂತಿದ್ದೇವೆ. ಹಾಗೆ ನಮ್ಮ ಜನ ಎಲ್ಲಾ ಇರಬೇಕೂಂತ ನನ್ನ ಆಸೆ. ಜಾತಿ ಹೆಸರಿನಲ್ಲಿ ಲಡಾಯಿ ಮಾಡೋದು, ಒಬ್ಬರನ್ನು ಒಬ್ಬರು ದ್ವೇಷಿಸುವುದು, ಗರೀಬರನ್ನು ಹಿಂಸೆ ಮಾಡುವುದು ಖರಾಬ್ ಕಾಮ್. ಇಂಥವರನ್ನು ಖುದಾ ಹತ್ತಿರ ಸೇರಿಸುವುದಿಲ್ಲ'[೭೬] (ಕೃಷ್ಣರಾಯರು ಅ.ನ, ೨೦೦೬, ಸಂಗ್ರಾಮಧುರೀಣ ಪುಟ-೩೮) ಎಂದು ನಿಜವಾದ ಸ್ನೇಹದ ಕುರಿತು ಹೇಳುವನು. ಮಾತ್ರವಲ್ಲದೆ ಗಿರಿಜವ್ವೆ-ವೀರಣ್ಣ, ಮೆಹರ್‌ಬಾನು-ಜಾನ್‌ಡ್ಯೂವರೋ, ಗಂಗಾಧರ-ಪಾರ್ವತಿ, ರಾಜಶೇಖರ-ಕೆಂಚಣ್ಣ, ಹನುಮಪ್ಪ-ಬಾಳಪ್ಪ ಹೀಗೆ ಇನ್ನೂ ಅನೇಕ ಪಾತ್ರಗಳಲ್ಲಿ ನಿಜವಾದ ಸ್ನೇಹವನ್ನು ಕಾಣುತ್ತೇವೆ. ಇವರೆಲ್ಲರೂ ಒಬ್ಬರಿಗೊಬ್ಬರು ಪ್ರಾಣಕೊಡುವ ಆತ್ಮೀಯ ಸ್ನೇಹಿತರಾಗಿದ್ದವರು.

ಇಲ್ಲಿ ಸಹೋದರ ಮತ್ತು ಸಹೋದರಿಯರ ಮಧ್ಯೆ ಅನ್ಯೋನ್ಯತೆ, ಪ್ರೀತಿ, ವಿಶ್ವಾಸ, ಪ್ರೇಮವನ್ನು ಕಾಣುತ್ತೇವೆ. ಒಬ್ಬರಿಗೋಸ್ಕರ ಒಬ್ಬರು ಮಾಡುವ ತ್ಯಾಗ ಅಪಾರವಾದುದು. ಸೋದರತೆ ಎಂದರೆ ಆತ್ಮೀಯತೆಯ ಭಾವನೆಗೆ ಇನ್ನೊಂದು ಹೆಸರು. ಅದು ವ್ಯಕ್ತಿ ತನ್ನನ್ನು ಇತರರ ಒಳಿತಿನೊಂದಿಗೆ ಗುರುತಿಸಿಕೊಳ್ಳುವಂತೆ ಮಾಡುವ ಭಾವನೆಯಾಗಿದೆ. ಆ ಭಾವನೆ ಇರುವವನಿಗೆ ಇತರರ ಒಳಿತನ್ನು ನೋಡಿಕೊಳ್ಳುವುದು ಕೂಡ ನಮ್ಮ ಅಸ್ತಿತ್ವದ ಇತರ ನಿಯಮಗಳ ಹಾಗೆ ಒಂದು ಸ್ವಾಭಾವಿಕ ಹಾಗೂ ಆವಶ್ಯಕ ವಿಷಯ ಆಗಿ ಬಿಡುತ್ತವೆ. ಸಂತೃಪ್ತಿಯ ಸಾಧನಗಳಿಗಾಗಿರುವ ಹೆಣಗಾಟದಲ್ಲಿ ವ್ಯಕ್ತಿ ತನ್ನ ಸಹ ಜೀವಿಗಳನ್ನು ಪ್ರತಿಸ್ಪರ್ಧಿಗಳೆಂದು ತಿಳಿದು ಅಲ್ಲಿ ತಾನೊಬ್ಬನೇ ಜಯಿಸಬೇಕು. ಅವರೆಲ್ಲ ಸೋಲಬೇಕೆಂದು ಬಯಸದಿರುವುದಕ್ಕೆ ಸೋದರತೆಯ ಭಾವನೆಯೇ ಕಾರಣ.

ಶ್ರೀ ಪ್ರೌಢದೇವರಾಯ ಹಾಗೂ ಶ್ರೀಗಿರಿ ಭೂಪಾಲರದು ಅನ್ಯೋನ್ಯತೆಯ ಸಹೋದರತ್ವದ ಪ್ರೇಮ. ಶ್ರೀಗಿರಿ ಭೂಪಾಲರು ತನ್ನ ಅಣ್ಣನೆಂದರೆ ಪಂಪಾನಾಥನೇ ಎಂದು ಭಾವಿಸಿರುತ್ತಾನೆ. ಸಾಮ್ರಾಜ್ಯದ ಶ್ರೇಯೋಭಿವೃದ್ಧಿಗೆ ಅಣ್ಣನಿಗೆ ಸಹಾಯಕನಾಗಿ ಹಗಲಿರುಳು ದುಡಿಯುತ್ತಾನೆ. ಪ್ರೌಢದೇವರಾಯರು ಹಾಸಿಗೆ ಹಿಡಿದು ಮಲಗಿರುವ ಸಂದರ್ಭದಲ್ಲಿ ಶ್ರೀಗಿರಿ ಭೂಪಾಲರಿಗೆ ರಾಜ್ಯಾಧಿಕಾರ ನೋಡಿಕೊಳ್ಳುವ ಹೊಣೆಗಾರಿಕೆ ಹೊರಿಸುತ್ತಾನೆ. ಮುಂದೆ ತನ್ನ ಮಗ ಮಲ್ಲಿಕಾರ್ಜುನ ಚಿಕ್ಕವನಾಗಿರುವುದರಿಂದ ನೀನು ಸಿಂಹಾಸನದ ಮೇಲೆ ಕೂಡಬೇಕೆಂದು ಶ್ರೀಗಿರಿಭೂಪಾಲರಿಗೆ ಹೇಳಿದರೆ ಅದನ್ನು ಸಾರಾಸಗಟಾಗಿ ನಿರಾಕರಿಸುತ್ತಾನೆ. ಪ್ರೌಢದೇವರಾಯರು ಅಸ್ತಂಗತರಾದ ಸಂದರ್ಭದಲ್ಲಿ ಜನತೆಗೆ ಮಲ್ಲಿಕಾರ್ಜುನನೇ ಉತ್ತರಾಧಿಕಾರಿ ಎಂದು ಸಾರಿ ತನ್ನ ಮಗನಾದ ವಿರೂಪಾಕ್ಷನಿಗೆ ನಿನ್ನ ದೊಡ್ಡಪ್ಪನ ಮಗನಾದ ಅಣ್ಣ ಮಲ್ಲಿಕಾರ್ಜುನನ ವಿರುದ್ಧ ನಿಲ್ಲದೆ ಆತನಿಗೆ ಸಹಾಯಕವಾಗಿರಬೇಕೆಂದು ಮಾತು ತೆಗೆದುಕೊಂಡು, ಅಣ್ಣನನ್ನು ಬಿಟ್ಟು ಬದುಕಿರುವುದು ತನ್ನಿಂದ ಸಾಧ್ಯವಿಲ್ಲವೆಂದು ಸಾಕಷ್ಟು ನೊಂದುಕೊಂಡು ಅಣ್ಣ ಸತ್ತ ಐದನೆಯ ದಿನಕ್ಕೆ ಸಾವನ್ನಪ್ಪುತ್ತಾರೆ.

ತಿರುಮಲಾದೇವಿಯವರ ಪುತ್ರಿ ತಿರುಮಲಾಂಬಾ, ಚಿನ್ನಾದೇವಿಯವರ ಪುತ್ರಿ ವೆಂಗಲಾಂಬಾರವರುಗಳ ಮಧ್ಯೆ ಅನ್ಯೋನ್ಯತೆಯ ಸಹೋದರಿತ್ವದ ಪ್ರೇಮವನ್ನು ಕಾಣುತ್ತೇವೆ. ತಿರುಮಲಾಂಬಾಗಿಂತ ಒಂದೇ ವರ್ಷಕ್ಕೆ ಚಿಕ್ಕವಳಾದ ವೆಂಗಲಾಂಬಾ ಒರಗೆಯವರಾಗಿದ್ದು ಇಬ್ಬರಲ್ಲೂ ಗಾಢವಾದ ಮೈತ್ರಿ ಬೆಳೆದಿತ್ತು. ದಿನಕ್ಕೊಮ್ಮೆಯಾದರೂ ಇಬ್ಬರೂ ಒಬ್ಬರಿಗೊಬ್ಬರು ಮುಖ ನೋಡಿಕೊಳ್ಳಲೇಬೇಕು. ಇಲ್ಲದಿದ್ದರೆ ಮನಸ್ಸಿಗೆ ತೃಪ್ತಿಯಿಲ್ಲ. ತಿರುಮಲಾಂಬಾ ಬಂದರೆ ಅವಳನ್ನು ಮೂರು ನಾಲ್ಕು ದಿನಗಳ ಕಾಲ ವೆಂಗಲಾಂಬಾ ತನ್ನ ಜೊತೆಯಲ್ಲಿ ಇಟ್ಟುಕೊಂಡಿರುತ್ತಿದ್ದಳು.

ತಿರುಮಲಾಂಬಳು ಕೂಡ ತನ್ನ ತಂಗಿಯಾದ ವೆಂಗಲಾಂಬಳನ್ನು ತನ್ನೊಂದಿಗೆ ಕರೆದೊಯ್ದು ಕೆಲ ದಿನಗಳ ಕಾಲ ಇಟ್ಟುಕೊಂಡಿರುತ್ತಿದ್ದಳು. ಜತೆಯಲ್ಲಿದ್ದಷ್ಟು ಕಾಲ ಒಬ್ಬರನ್ನೊಬ್ಬರು ಬಿಟ್ಟು ಅಗಲುತ್ತಿರಲಿಲ್ಲ. ಒಂದೇ ತಣಿಗೆಯಲ್ಲಿ ಇಬ್ಬರೂ ಊಟ ಮಾಡುವುದು, ಒಂದೇ ಶಯ್ಯೆಯಲ್ಲಿ ಮಲಗುವುದು, ಒಂದೇ ಬಗೆಯ ವಸ್ತ್ರಾಭರಣಗಳನ್ನು ಧರಿಸುವುದು. ಅಕ್ಕತಂಗಿಯರ ಅನ್ಯೋನ್ಯತೆಯನ್ನು ಚಿನ್ನಮ್ಮಾಜಿ ಮೆಚ್ಚಿಕೊಳ್ಳುದುದಲ್ಲದೆ ಪ್ರೋತ್ಸಾಹಿಸುತ್ತಿರುತ್ತಾಳೆ. ಆದರೆ ರಾಣಿ ತಿರುಮಲಾದೇವಿಯವರು ಮಾತ್ರ ಅಸಮಾಧಾನ ವ್ಯಕ್ತಪಡಿಸುತ್ತಿರುತ್ತಾಳೆ.

ಕಸ್ತೂರಿನಾಯಕನಿಗೆ ತನ್ನ ತಮ್ಮನಾದ ವೀರಣ್ಣನೆಂದರೆ ಅಭಿಮಾನ. ತಾನು ಮೊದಲು ಮನೆಗೆ ಬಂದರೂ, ಎಷ್ಟೇ ಹೊತ್ತಾಗಲಿ ತನ್ನ ತಮ್ಮನಿಗಾಗಿ ಊಟಕ್ಕೆ ಕಾಯುತ್ತಿದ್ದ. ಒಂದು ವೇಳೆ ಬರುವ ಹೊತ್ತು ಕೊಂಚ ಮೀರಿದರೆ ಏಕೋ ಬರಲಿಲ್ಲ ಎನ್ನುತ್ತಾ ಅರ್ಧ ದಾರಿಯವರೆಗೂ ಹೋಗಿ ಕಾಯುತ್ತಿದ್ದ. ತೀರ ತಡವಾಗಿ ಅವನ ಸುದ್ದಿ ತಿಳಿಯದಿದ್ದರೆ, ನಡುರಾತ್ರಿಯಾದರೂ ದುರ್ಗದವರೆಗೂ ಓಡುತ್ತಿದ್ದನು.

ಚಿಕ್ಕಣ್ಣನಾಯಕ ತನ್ನ ಪಟ್ಟಾಭಿಷೇಕದ ಮಹೋತ್ಸವಕ್ಕೆ ಲಿಂಗಣ್ಣನಾಯಕನನ್ನು ಸ್ವತಃ ತಾನೇ ಆಮಂತ್ರಿಸಲು ಬಂದಾಗ ನನ್ನ ಪಾಲಿಗೆ ಅರಮನೆ, ಸಿಂಹಾಸನ, ಕಿರೀಟ ಯಾವುದೂ ಇಲ್ಲ. ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡು ಎಂದು ಹೇಳುತ್ತಾ 'ನಿನ್ನ ಮೇಲೆ ನನಗೆ ಪ್ರೀತಿಯಿದೆ. ನಿನಗೆ ಒಳಿತಾಗಬೇಕು. ನಿನ್ನ ರಾಜ್ಯಭಾರ ಕೀರ್ತಿಪ್ರದವಾಗಬೇಕು ಎಂದು ನಾನೂ ಹೃತ್ಪೂರ್ವಕವಾಗಿ ಹಾರೈಸುತ್ತೇನೆ ಚಿಕ್ಕಣ್ಣ. ಇದಕ್ಕೂ ಹೆಚ್ಚಿನ ಹರಕೆ ನಿನಗೆ ಬೇಕಾಗಿದ್ದರೆ, ಚಿಕ್ಕಮ್ಮಾಜಿಯವರ ಸಮಾಧಿಗೆ ನಮಸ್ಕರಿಸಿ, ಅವರ ಆಶೀರ್ವಾದ ಪಡೆದುಕೋ. ನಿನ್ನೊಂದಿಗೆ ನಾನೂ ಅವರ ಶ್ರೀಚರಣಕ್ಕೆ ಕೈಮುಗಿದು, "ಚಿಕ್ಕಮ್ಮ, ನನ್ನ ತಮ್ಮನಿಗೆ ಸಕಲವೂ ಶ್ರೇಯಸ್ಕರವಾಗುವಂತೆ ಹರಸು" ಎಂದು ಪ್ರಾರ್ಥಿಸುತ್ತೇನೆ'[22] (ಸುಬ್ಬರಾಯರು ತ.ರಾ, ೨೦೧೧, ರಾಜ್ಯದಾಹ ಪುಟ-೪೨) ಎಂದು ಹೇಳುವನು.

ಮದಕರಿನಾಯಕನಿಗೆ ತನ್ನ ತಮ್ಮ ಪರಶುರಾಮನಾಯಕ ಎಂದರೆ ಅತೀವ ಪ್ರೇಮ. ಇಬ್ಬರಲ್ಲೂ ಪರಸ್ಪರ ಅನ್ಯೋನ್ಯತೆ ಇದ್ದು ಸಹೋದರರ ಹಾಗಿರದೇ ಸ್ನೇಹಿತರ ಹಾಗೆ ಇರುವರು. ಮದಕರಿ ರಾಯದುರ್ಗದ ಮೇಲೆ ವಿಜಯ ಸಾಧಿಸಿ ಬಂದಾಗ ಪರಶುರಾಮನಾಯಕ ಜಟ್ಟಿಗಳು ಕೊಟ್ಟು ಕಳುಹಿಸಿದ ಬೆಳ್ಳಿಯ ಹನುಮಂತನ ತಾಯತ ಹಾಗೂ ಸ್ನೇಹಿತರು ಕೊಟ್ಟ ಬೆಳ್ಳಿಯ ಕಡಗವನ್ನು ತಂದು ಕೊಡುವನು. ಅತ್ತಿಗೆಯ ಕ್ಷೇಮ ಸಮಾಚಾರದ ಕುರಿತು ಕೇಳಲಾಗಿ ನೋಡೋಕೆ ಬಣ್ಣದ ಗೊಂಬೆ ಮಾತನಾಡಿಸಿದರೆ ಮೂಕಿಯಾಗಿ ಹೋಗುತ್ತಾಳೆನ್ನುವನು. ನಿನ್ನ ಸೊಸೆಗೆ ಮಾತು

ಕಲಿಸೆಂದು ಅವ್ವನಿಗೆ ಹೇಳು, ಎಂದು ಪರಶುರಾಮನಾಯಕನಿಗೆ ಹೇಳುವುದರಲ್ಲಿ ಸಹೋದರರ ಮಧ್ಯೆ ಎಂತಹ ನಂಬಿಕೆ ವಿಶ್ವಾಸಗಳಿದ್ದವು ಎಂಬುದನ್ನು ಅರಿಯಬಹುದು. ತಮ್ಮನೆಂದರೆ ಸರ್ವಸ್ವವೆಂದೇ ಭಾವಿಸಿ ಆತನನ್ನು ಪ್ರಧಾನಿಗಳನ್ನಾಗಿ ಮಾಡಿದುದಲ್ಲದೇ ಸ್ವತಂತ್ರವಾಗಿ ಯಾವ ನಿರ್ಧಾರಗಳನ್ನಾದರೂ ತೆಗೆದುಕೊಳ್ಳಬಹುದಾದ ಅಧಿಕಾರವನ್ನು ನೀಡಿರುತ್ತಾನೆ. ಹೈದರಾಲಿ ದುರ್ಗದ ಮೇಲೆ ಯುದ್ಧ ಹೂಡಿ ಏಳೆಂಟು ತಿಂಗಳಾದರೂ ಅದು ಮುಗಿಯುವ ಲಕ್ಷಣಗಳೇ ಕಾಣದಿದ್ದಾಗ ಜನರು ಕಂಗಾಲಾಗಿ ಅನೇಕ ಕಷ್ಟಗಳೆಡೆಗೆ ಸಿಲುಕುತ್ತಾರೆ. ಆ ಕಷ್ಟಗಳನ್ನು ನೋಡಲಾಗದ ಸಹೋದರರಿಬ್ಬರೂ ಕಂಬನಿ ಸುರಿಸುತ್ತಾರೆ. ಕೊನೆಗೆ ಹೈದರಾಲಿ ಯುದ್ಧ ಮುಗಿಸಬೇಕಾದರೆ ಹಣವನ್ನು ಮಾತ್ರವಲ್ಲದೇ ಪರಶುರಾಮನಾಯಕನನ್ನು ತನ್ನ ಹತ್ತಿರ ಒತ್ತೆ ಇಡಬೇಕೆಂದು ಕೇಳುತ್ತಾನೆ. ಅದಕ್ಕೊಪ್ಪದ ಮದಕರಿನಾಯಕನನ್ನು ಒಪ್ಪಿಸಲು ತಾಯಿಯಾದ ನಿಂಗವ್ವಳನ್ನು ಮಧ್ಯದಲ್ಲಿಟ್ಟು ಪರಶುರಾಮನಾಯಕ ಜನರನ್ನು ಕಷ್ಟಕ್ಕೆ ಸಿಲುಕಿಸುವುದಕ್ಕಿಂತ ತನ್ನನ್ನು ಒತ್ತೆ ಇಡುವುದು ದೊಡ್ಡದಲ್ಲ, ನೀನು ಅದಕ್ಕೆ ಒಪ್ಪಿಕೋ ಎಂದು ಸಲಹೆ ನೀಡುತ್ತಾನೆ. ಆದರೆ ಮದಕರಿನಾಯಕ ತನ್ನ ತಮ್ಮನನ್ನು ಹೇಗೆ ಆ ಕಟುಕನಿಗೆ ಒಪ್ಪಿಸಲಿ ಎಂದು ವ್ಯಥೆಪಡುತ್ತಾನೆ.

ಪ್ರತಾಪಸಿಂಹನಿಗೆ ತನ್ನ ಸಹೋದರರಾದ ಜಗಮಲ್ಲ ಮತ್ತು ಶಕ್ತಸಿಂಹರೆಂದರೆ ಅಪಾರ ಪ್ರೇಮ. ತಂದೆಯಾದ ರಾಣಾ ಉದಯಸಿಂಹ ಮೂರು ಕತ್ತಿಗಳನ್ನು ತರಿಸಿ, ಮೊದಲ ಮಗ ಪ್ರತಾಪಸಿಂಹನಿಗೆ ಒಂದನ್ನಾಯ್ದುಕೊಳ್ಳುವಂತೆ ಹೇಳಿದರೆ, ತನ್ನ ತಮ್ಮಂದಿರು ಮೊದಲು ಆಯ್ಕೆ ಮಾಡಿಕೊಂಡು ಬಿಟ್ಟ ಕತ್ತಿಯನ್ನು ತೆಗೆದುಕೊಳ್ಳುತ್ತಾನೆ. ಜಗಮಲ್ಲ ಮತ್ತು ಶಕ್ತಸಿಂಹರು ರಾಣಾ ಪದವಿಗೇರಲು ಹಾತೊರೆಯುತ್ತಿರುವ ವಿಷಯ ತಿಳಿದರೂ ಸಹ ವ್ಯಥೆ ಪಡುವುದಿಲ್ಲ. ಚಿತ್ತೂರು ಮೊಘಲರ ಕೈವಶವಾಗಿ ರಾಣಾ ಉದಯಸಿಂಹ ಉದಯಪುರದ ಗಾದಿಯನ್ನು ಜಗಮಲ್ಲನಿಗೆ ಏರಿಸಿ ಉತ್ತರಾಧಿಕಾರತ್ವದ ಪಟ್ಟವನ್ನು ಜಗಮಲ್ಲನಿಗೆ ಕಟ್ಟಿ ಪರಲೋಕ ಯಾತ್ರೆ ಕೈಕೊಂಡಾಗ ಅದನ್ನು ಎಲ್ಲರೂ ಖಂಡಿಸುತ್ತಾರೆ. ರಾವತ್ ಕೃಷ್ಣದಾಸ್ ಜಗಮಲ್ಲನಿಗೆ ಉದಯಪುರದ ಗಾದಿ ಏರುವ ಅಧಿಕಾರವಿಲ್ಲ. ಇದು ರಾಜ್ಯದ್ರೋಹ ಅರಮನೆಗೆ ನಡೆಯಿರಿ ಎಂದು ಝೂಲೇರಿರಾಯರಿಗೆ ಹೇಳಿದಾಗ ಪಿತೃವಿಯೋಗದಿಂದ ಪರಿತಪ್ತನಾಗಿದ್ದ ಪ್ರತಾಪಸಿಂಹ ಕೃಷ್ಣದಾಸನಿಗೆ 'ಅರಮನೆಗೆ ಹೋಗಬೇಡಿ ತಾತಾ ಜಗಮಲ್ಲ ನನ್ನ ಸೋದರ. ಅವನು ಗಾದಿಯೇರಿದರೇನು, ನಾನು ಗಾದಿಯೇರಿದರೇನು? ಈ ಅಲ್ಪ ವಿಷಯಕ್ಕಾಗಿ ಉದಯಪುರದಲ್ಲಿ ಸ್ವಯೂಥ ಕಾಳಗವಾಗುವುದು ಬೇಡ'[೨೮] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೬೫) ಎಂದು ಸಹೋದರನ ಪರವಾಗಿಯೇ ಮಾತನಾಡುತ್ತಾನೆ.

ಚೆನ್ನಮ್ಮ ಮಲ್ಲಸರ್ಜನನ್ನು ಮದುವೆಯಾಗಿ ಕಿತ್ತೂರಿಗೆ ಬಂದ ಮೇಲೆ ಅಕ್ಕ ರುದ್ರಮ್ಮನನ್ನು ತವರಿನಿಂದ ಕರೆಸಿ ಪ್ರೀತಿ ಗೌರವಗಳಿಂದ ಆಕೆಯ ಮನಗೆದ್ದಳು. ಅವರಿಬ್ಬರಲ್ಲಿ ಅನ್ಯೋನ್ಯತೆ ಬೆಳೆಯಿತು. ಇಬ್ಬರೂ ಮಲ್ಲಸರ್ಜನ ಎರಡು ಕಣ್ಣುಗಳಾಗಿ ಬಾಳಿದರು. ಹಾಲು ಜೇನು ಸಕ್ಕರೆ ಬೆರೆತಂತೆ ಅವರ ದಾಂಪತ್ಯವಾಯಿತು. ಚೆನ್ನಮ್ಮನಿಗೆ ಒಂದು ಗಂಡು ಹಾಗೂ ರುದ್ರಮ್ಮನಿಗೆ ಎರಡು ಗಂಡು ಮಕ್ಕಳಾಗುತ್ತವೆ. 'ಚೆನ್ನಮ್ಮನ ಮಗನ ಹೆಸರು ಶಿವಬಸವರಾಜ, ರುದ್ರಮ್ಮನ ಹಿರಿಯ ಮಗ ಶಿವಲಿಂಗರುದ್ರ, ಎರಡನೆಯ ಮಗ ವೀರಭದ್ರ, ಎಲ್ಲರೂ ಪ್ರೀತಿಯಿಂದ ಅವರನ್ನು ಕ್ರಮವಾಗಿ ಬಾಬಾಸಾಹೇಬ, ಬಾಪೂಸಾಹೇಬ ಮತ್ತು ಬಾಳಾಸಾಹೇಬ'[೭೯] (ವೃಷಭೇಂದ್ರಾಚಾರ್ಯ ಅರ್ಕಸಾಲಿ, ೨೦೦೯, ಪುಟ-೩೮) ಎಂದು ಕರೆಯುತ್ತಿದ್ದರು. ಚೆನ್ನಮ್ಮ ಮತ್ತು ರುದ್ರಮ್ಮಳ ಮದ್ಯೆ ಸವತಿ ಮತ್ಸರವನ್ನು ಕಾಣದೇ ಒಡಹುಟ್ಟಿದ ಸಹೋದರಿಯರಂತೆಯೇ ಅನ್ಯೋನ್ಯತೆಯಿಂದ ಕೊನೆಯವರೆಗೂ ಬಾಳುತ್ತಾರೆ. ಇವರಿಬ್ಬರ ಮದ್ಯೆ ಮನಸ್ತಾಪ ಎಂದಿಗೂ ಬಾರದೇ ಹಿರಿಯ ರಾಣಿ ರುದ್ರಮ್ಮಳಾಗಿದ್ದರೂ ಸಹ ಚೆನ್ನಮ್ಮನಿಗೆ ರಾಜ್ಯಭಾರ ಮಾಡಲು ಸೂಚಿಸಿ ತಾನು ದೇವರ ಪೂಜೆ, ಧ್ಯಾನದಲ್ಲಿಯೇ ನಿರತಳಾಗುತ್ತಾಳೆ. ಮಾತ್ರವಲ್ಲದೆ ಶ್ರೀಕೃಷ್ಣದೇವರಾಯರ ಮಡದಿಯರಾದ ಚಿನ್ನಾದೇವಿ ಮತ್ತು ಜಗನ್ಮೋಹಿನಿ, ಇಮ್ಮಡಿ ಮದಕರಿನಾಯಕರ ಪತ್ನಿಯರಾದ ಓಬವ್ವನಾಗತಿ ಮತ್ತು ಗೌರವ್ವನಾಗತಿಯರ ಮಧ್ಯೆ ಸವತಿ ಮತ್ಸರವನ್ನು ಕಾಣದೆ ಸಹೋದರತ್ವದ ಪ್ರೇಮವನ್ನು ಕಾಣುತ್ತೇವೆ. ಇವರು ಒಬ್ಬರಿಗೊಬ್ಬರು ತ್ಯಾಗಜೀವಿಗಳಾಗಿ ಬದುಕಿರುವುದನ್ನು ಕಾದಂಬರಿಕಾರರು ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಿರುವರು.

ರಾಜನೆಂಬುವನು ಯಾವಾಗಲೂ ಗೆಲ್ಲುವ ಸರದಾರನೇ ಆಗಿರಬೇಕು. ಅವನು ಪ್ರಜೆಗಳ ಸಮ್ಮುಖದಲ್ಲಿ ಯಾವಾಗಲೂ ಸೋಲಬಾರದೆಂಬ ಮನೋಭಾವ ಪ್ರಜೆಗಳದಾಗಿರುತ್ತದೆ. ಹಾಗೆಯೇ ರಾಜನಾದವನು ಸಹ ಪ್ರಜೆಗಳೆ ತನ್ನ ಬದುಕು ಎಂದು ಭಾವಿಸಿ ಅವರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತ ಅವರ ಜೊತೆ ಪ್ರೀತಿಯಿಂದ ವರ್ತಿಸುತ್ತಾನೆ. ರಾಜನೆಂಬುವವನು ಪ್ರಜಾಪ್ರೇಮ ಇಟ್ಟುಕೊಂಡರೆ ಮಾತ್ರ ತನ್ನ ಸಾಮ್ರಾಜ್ಯ ವಿಸ್ತರಿಸಲು ಹಾಗೂ ಯಾವುದೇ ಅಡೆತಡೆಗಳಿಲ್ಲದೆ ಕಾರ್ಯ ನಿರ್ವಹಿಸಲು ಸಾಧ್ಯ.

ಭರಮಣ್ಣನಾಯಕನಿಗೆ ಪ್ರಜೆಗಳು ಸುಖವಾಗಿರಬೇಕೆಂಬ ಅತಿಯಾದ ಪ್ರಜಾಪ್ರೇಮವನ್ನು ಹೊಂದಿದ್ದು ಪ್ರಧಾನಿಗಳಾದ ಪರಶುರಾಮಪ್ಪನವರ ಹತ್ತಿರ 'ಇತಿಹಾಸದ ದಿಗಂತದಲ್ಲಿ ದುರ್ಗದ ಹೆಸರನ್ನು ನಕ್ಷತ್ರಾಕ್ಷರಗಳಿಂದ ಕೊರೆಯುವವರೆಗೂ ನನಗೆ ವಿಶ್ರಾಂತಿ ಇಲ್ಲ. ನಮ್ಮ ಆಳ್ವಿಕೆಯಲ್ಲಿ ದುರ್ಗದ ಪ್ರಜೆಗಳಿಗೆ ಯಾವ ಕೊರತೆಯೂ ಇರಬಾರದು. ಅರಮನೆಯನ್ನೆಲ್ಲಾ ಬರಿದು ಮಾಡಿದರೂ

ಸರಿಯೆ ದುರ್ಗದ ಬೀದಿ ಬೀದಿಗಳಲ್ಲೂ ಬಂಗಾರದ ಹೊಳೆ ಹರಿಯಬೇಕು. ನನ್ನ ಜನ ಹಾಲಿನಲ್ಲಿ ಕಾಲು ತೊಳೆಯಬೇಕು. ನಮ್ಮ ಸ್ನೇಹ ಅದನ್ನು ಬಯಸಿದವರ ಪಾಲಿಗೆ ಕಾಮಧೇನುವಾಗಲೇಬೇಕು. ದುರ್ಗದ ಮೇಲೆ ಬೀಸಿ ಬರುವ ಗಾಳಿಗೂ, ಸುತ್ತಲ ರಾಜರು ನಡುಗಿ ತಲೆಬಾಗಿಸುವಂತಾಗಬೇಕು'[೮೦] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೭೭) ಎಂದು ಹೇಳುವನು.

ಆತುರಾತುರವಾಗಿ ಓಲಗವನ್ನು ಕರೆದ ಭರಮಪ್ಪನಾಯಕ ಸಭೆಯ ಉದ್ದೇಶವನ್ನು ತಾನೇ ನೇರವಾಗಿ ಹೇಳುತ್ತಾ ತನ್ನ ಪ್ರೀತಿಯ ಪ್ರಜೆಗಳು ಹೇಗಿರಬೇಕು ಎಂಬುದನ್ನು ತಿಳಿಸುವನು. ಅತ್ಯಂತ ಸಾಮಾನ್ಯ ಪ್ರಜೆಯೂ, ದೊರೆಯಷ್ಟು ಹಿರಿಯನಾಗಬೇಕು. ಚಿತ್ರದುರ್ಗದ ಜನ ಎಂದಿಗೂ ಅನ್ನಕ್ಕೆ ಬವಣೆ ಪಡದೆ, ಮಕ್ಕಳು ಹಾಲಿಗಾಗಿ ಹಸಿಯದೆ, ಹಸು ಕರು ಮೇವಿಲ್ಲದೆ ಅಲೆಯದೆ ನಮ್ಮ ಮನೆಯ ಬಾಗಿಲಿಗೆ ಬಂದವರಾರು ಹಸಿದು ಹೋಗದೇ ಇರಬೇಕು. ಯಾರಾದರೂ ಒಪ್ಪತ್ತಿನ ಅನ್ನ ಬೇಡಿದರೆ ಅಕ್ಷಯ ನಿಧಿಯನ್ನು ಕೊಡುವಂತಹ ಶಕ್ತಿ ಸಾಮರ್ಥ್ಯ ನಮ್ಮ ದುರ್ಗದ ಪ್ರಜೆಗಳದಾಗಿರಬೇಕು ಎಂಬ ಮಾತುಗಳು ನಾಯಕನಿಗೆ ಪ್ರಜೆಗಳ ಮೇಲೆ ದುರ್ಗದ ಮೇಲೆ ಇರುವ ಪ್ರೇಮ ಎಂತಹುದು ಎಂಬುದು ವ್ಯಕ್ತವಾಗುತ್ತದೆ.

ಹೈದರಾಲಿಯ ಸೈನಿಕರನ್ನು ಮೆಟ್ಟಿ ಬಂದು ವಿಜಯ ಸಾಧಿಸಿದ ದುರ್ಗದ ಸೇನೆಗೆ ಮದಕರಿನಾಯಕ ಪ್ರೀತಿಯಿಂದ 'ತಾನು ನಾಯಕ ಅವರು ಸೈನಿಕರು' ಎಂಬುದನ್ನು ಮರೆತು ಹತ್ತಿರವಿದ್ದ ನಾಲ್ಕು ಜನರನ್ನು ಬಿಗಿದಪ್ಪಿ, ಅವರ ಮೈ ಕೈಗಳನ್ನು ನೇವರಿಸುತ್ತಾನೆ. ಜೊತೆಗೆ ದೊಡ್ಡ ಹರಿವಾಣಗಳಲ್ಲಿದ್ದ ಹೊನ್ನಿನ ವರಹಗಳನ್ನು ನಿಮ್ಮ ಕೈ ಹಿಡಿಯುವಷ್ಟು ತೆಗೆದುಕೊಳ್ಳಿ ಎಂದರೆ ಯಾವೊಬ್ಬ ಸೈನಿಕರು ಅದನ್ನು ಮುಟ್ಟದೇ ಇದ್ದಾಗ ನಾಯಕ ನಿಮ್ಮ ಸಾಹಸಕ್ಕೆ ಇದು ನಮ್ಮ ಪ್ರೀತಿಯ ಕಾಣಿಕೆ ಎಂದು ಒತ್ತಾಯ ಮಾಡಿದಾಗ, ಆ ಸೇನೆಯ ಮುಂದಾಳಾದ ಪರಶುರಾಮನಾಯಕ 'ಮಾ ಸ್ವಾಮಿಯವರು ಪಟ್ಟಕ್ಕೆ ಬಂದದ್ದು ಆಷಾಢ ಶುದ್ಧ ದ್ವಾದಶಿ ದಿನ. ಇವತ್ತು ಆಷಾಢ ಶುದ್ಧ ದಶಮಿ. ಮಾಮೂಲಿನಂತೆ ನಾವು ನಾಳಿದ್ದು ಮಾ ಸ್ವಾಮಿಯವರಿಗೆ ಪಟ್ಟಗಾಣಿಕೆ ಕೊಡಬೇಕಾಗಿತ್ತು. ಎರಡು ದಿನ ಮೊದಲೇ ಈ ನವಾಬನ ಸೇನೆ ಬಂತು. ಕಣಿವೆ ಮಾರಮ್ಮನ ಕೃಪೆ. ಇವತ್ತು ನಾವು ಗೆದ್ದು ತಂದದ್ದೆಲ್ಲ ನಮ್ಮ ಪಡೆಯ ಜನ ಕೊಟ್ಟ ಪಟ್ಟಗಾಣಿಕೆ ಅಂತ ಸೈನಿಕರ ಸೇವೆ ಒಪ್ಪಿಸಿಕೊಳ್ಳಬೇಕು'[೮೧] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೪೬೨) ಎನ್ನುವಷ್ಟರಲ್ಲಿಯೇ ನಾಯಕ ಅವನನ್ನು ಬಿಗಿದಪ್ಪಿ ನಿಮ್ಮ ವಿಶ್ವಾಸಕ್ಕೆ ನಾವು ಹೇಳುವುದಿಷ್ಟೇ; ಬದುಕಿರುವಷ್ಟು ದಿನವೂ ನಿಮ್ಮ ಪ್ರೀತಿಯನ್ನು ಮರೆಯುವುದಿಲ್ಲ; ನಿಮ್ಮ ಪ್ರೀತಿಗೆ ನಮ್ಮ ಜೀವ ಮೀಸಲು ಎನ್ನುವನು.

ಯುದ್ಧ ನಡೆದ ಸಂದರ್ಭದಲ್ಲಿ ದುರ್ಗದಲ್ಲಿ ಜನಕ್ಕೆ ಹೊಟ್ಟೆ ತುಂಬ ಊಟ ಮಾಡಲು ಅನ್ನವಿಲ್ಲದೆ ಅಳತೆಮಾಡಿ ಮುಗ್ಗಲು ರಾಗಿ ಕೊಡುವ ಪರಿಸ್ಥಿತಿ ಬಂತೆಂಬ ವಿಚಾರವನ್ನು ಒಂದು ಮನೆಯ ಹೆಂಗಸಾಡುವ ಮಾತಿನಿಂದ ತಿಳಿದುಕೊಂಡು ನೊಂದುಕೊಂಡ ನಾಯಕ ಅರಮನೆಗೆ ಹೋಗಿ ಮೃಷ್ಟಾನ್ನಭೋಜನ ಯಾವದೂ ಬೇಡವೆಂದು ದೂರ ಸರಿಸಿ ಕಂಚಿನ ತಣಿಗೆಯಲ್ಲಿ ಊಟ ಮಾಡುತ್ತ ಕಂಬನಿ ಸುರಿಸುವುದನ್ನು ಕಂಡ ತಾಯಿಯಾದ ನಿಂಗವ್ವಳಿಗೆ ಕರುಳು ಕಿತ್ತು ಬಂದಂತಾಗಿ ಏಕೆ ಹೀಗೆಂದು ಕೇಳಲಾಗಿ ದುರ್ಗದಲ್ಲಿ ಬಂದ ಹೀನ ಸ್ಥಿತಿಯ ಕುರಿತು ಹೇಳುವನು. ಪ್ರಜೆಗಳಿಗಿಲ್ಲದ ಸುಖ ತನಗೆ ಬೇಡವೆಂದು ನಿರಾಕರಿಸುವನು.

ಆ ಸಂದರ್ಭದಲ್ಲಿ ದುರ್ಗದಲ್ಲಿ ಕೆಲವರು ಜಾತಿಯ ಮಾತೆತ್ತಿ ವಿಷಬೀಜ ಬಿತ್ತಿದ ಸಂದರ್ಭದಲ್ಲಿ ಎಲ್ಲ ಜಾತಿಯ ಪ್ರಮುಖರನ್ನು ಉತ್ಸವಾಂಬಾ ದೇವಾಲಯದ ಮುಂದೆ ಸಭೆ ಸೇರಿಸಿದ ನಾಯಕ, ಈಗ ಕಳೆದೊಂದು ವರ್ಷದಿಂದ ಶತ್ರು ದಾಳಿಯಿಂದ ಜರ್ಜರಿತವಾಗಿದ್ದರೂ ಸಹ ಶತ್ರುವಿಗೆ ತಲೆಬಾಗದೇ ಎದೆಸೆಟಸಿ ನಿಲ್ಲಲು ನೀವುಗಳೇ ಕಾರಣ. ಆದರೆ ಪಿಸುಣರ ಮಾತಿನಿಂದ 'ಹಿಂದೂ-ಮುಸ್ಲಿಂ' ಎಂಬ ವಿಷಬೀಜ ಹುಟ್ಟುತ್ತಿದೆ. ಆದರೆ ಉತ್ಸವಾಂಬಾ ತಾಯಿಯ ಸಾಕ್ಷಿಯಾಗಿ ನಮ್ಮಲ್ಲಿ ಆ ತೆರನಾದ ಯಾವ ಭೇದ ಭಾವವೂ ನಮ್ಮೊಳಗಿಲ್ಲ. 'ಸಾವಿರ ತೋಳು ಸೋಲಿಸಲಾಗದ ಈ ದುರ್ಗವನ್ನು ಈ ಅಲ್ಪ ಜಾತಿಯ ಮಾತು ಸೋಲಿಸದಿರಲಿ. 'ನೂರು ಸಾವಿರ ಸೇನೆಗೆ ಸೋಲದ ದುರ್ಗ ಮೂರು ಮಾತಿಗೆ ಹೋಯಿತು' ಎಂಬ ಅಪಖ್ಯಾತಿ ಬರದಿರಲಿ. ಆದ್ದರಿಂದ ನಿಮ್ಮನ್ನೊಂದೇ ಪ್ರಶ್ನೆ ಕೇಳಲು ನಾವಿಲ್ಲಿಗೆ ನಿಮ್ಮನ್ನು ಕರೆಸಿರುವುದು, ಮನಬಿಚ್ಚಿ ಹೇಳಿ ನೀವು ಹಿಂದೂಗಳೋ, ಮುಸ್ಲಿಮರೋ, ಬ್ರಾಹ್ಮಣರೋ, ನಾಯಕರೋ ಅಥವಾ ನೀವೆಲ್ಲಾ ಜಾತಿ ಮತ ಭೇದವಿಲ್ಲದ ಈ ಚಿತ್ರದುರ್ಗದ ಮಕ್ಕಳೋ? ಎಂದಾಗ ಒಕ್ಕೊರಲಿನಿಂದ ಎಲ್ಲರೂ ಚಿತ್ರದುರ್ಗದ ಮಕ್ಕಳು'[೮೨] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೫೯೨) ಎಂದಾಕ್ಷಣ ನಾಯಕರಿಗೆ ಪ್ರಜೆಗಳ ಮೇಲಿನ ಪ್ರೇಮ ಇಮ್ಮಡಿಗೊಳ್ಳುತ್ತದೆ.

ಅ.ನ.ಕೃರವರ 'ವೀರರಾಣಿ ಕಿತ್ತೂರು ಚೆನ್ನಮ್ಮ' ಕಾದಂಬರಿಯಲ್ಲಿ ಬರುವ ದೀಕ್ಷಿತರು ಒಳ್ಳೆಯ ಕಲಿಗಳಾಗಿರುತ್ತಾರೆ. ಪ್ರಸಂಗವೊಂದರಲ್ಲಿ ವಿನೋದಕ್ಕಾಗಿ ಮಲ್ಲಸರ್ಜ ದೊರೆಗಳು ಮತ್ತು ದೀಕ್ಷಿತರು ಕತ್ತಿ ಕಾಳಗ ಮಾಡುತ್ತಿರುವಾಗ ದೀಕ್ಷಿತರ ಕೈಯಿಂದ ಕತ್ತಿ ಕಳಚಿ ಬೀಳುತ್ತದೆ. ತಾವು ಸೋತುದಾಗಿ ದೀಕ್ಷಿತರು ಒಪ್ಪಿಕೊಂಡರೂ ಈ ಬಗೆಯ ಜಯಕ್ಕೆ ಸಮ್ಮತಿಸುವುದಿಲ್ಲವೆಂದು ಹೇಳಿ ಕತ್ತಿಯನ್ನು ಕೈಗೆ ತೆಗೆದುಕೊಳ್ಳಲು ಹೇಳಿದಾಗ 'ಸರ್ಕಾರ್, ಪ್ರಜೆಯಿಂದ ಪ್ರಭುವಿಗೆ ಸೋಲಾಗಬಾರದು' ಎಂದಾಗ 'ಇಲ್ಲಿ ನಾವು ಪ್ರಭು ಪ್ರಜೆಯ ಭಾವದಲ್ಲಿ ಸೇರಿಲ್ಲ. ಸಮಬಲದ

ಕಲಿಗಳಾಗಿ ಕಾದುತ್ತಿದ್ದೇವೆ. ನೀವು ಕತ್ತಿಯನ್ನು ಕೈಗೆತ್ತಿಕೊಳ್ಳದಿದ್ದರೆ ನಮ್ಮ ಮೈತ್ರಿಯನ್ನು ಅಪಮಾನಗೊಳಿಸಿದಂತಾಗುತ್ತದೆ'[೮೩] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ–೩೨) ಎಂದ ತಕ್ಷಣ ದೀಕ್ಷೀತರು ಕೈಗೆ ಕತ್ತಿ ತೆಗೆದುಕೊಂಡು ಕಾದಿದಾಗ ಸಮಬಲ ಹೋರಾಟವಾಗುತ್ತದೆ. ಇಲ್ಲಿ ರಾಜ ಶ್ರೇಷ್ಠ ಎಂಬ ಅಹಂನ್ನು ಕಾಣದೇ ಪ್ರಜೆಗಳ ಮೇಲೆ ರಾಜನಿಗಿರುವ ಪ್ರೇಮವನ್ನು ಕಾಣುತ್ತೇವೆ. ರಾಜ ದೀಕ್ಷಿತರನ್ನು ಹೊಗಳುತ್ತಾ ಅವರ ಹೋರಾಟದ ವೈಖರಿಯನ್ನು ಏನೆಂದು ವರ್ಣಿಸಲಿ, ಆ ಪಟ್ಟುಗಳು, ಆ ಚಬಕಿನ ಹೊಡೆತ, ಆ ಆತ್ಮರಕ್ಷಣೆ ಮಾಡಿಕೊಳ್ಳುವ ಜಾಣ್ಮೆ ಯಾರಲ್ಲಿ ಕಾಣಬೇಕು ಶಾಸ್ತ್ರಿಗಳೇ ಕಾಳಗ ಸಮವಾಯಿತು ಎಂದು ಹಾಡಿ ಹೊಗಳಿದಾಗ ರಾಜನಾದವನು ಹೇಗೆ ಪ್ರಜೆಗಳಲ್ಲಿರುವ ಪ್ರತಿಭೆಯನ್ನು ಗುರುತಿಸುತ್ತ ಅವರ ಮೇಲೆ ಎಂಥಹ ಅಗಾಧವಾದ ಪ್ರೇಮವನ್ನು ಇಟ್ಟುಕೊಂಡಿದ್ದ ಎಂಬುದನ್ನು ಕಾಣಬಹುದು. ಇಲ್ಲಿ ದೀಕ್ಷಿತರೆಂಬ ಕಾಲ್ಪನಿಕ ಪಾತ್ರವನ್ನು ಸೃಷ್ಟಿಸಿಕೊಂಡು ಪುಟಗಳ ಸಂಖ್ಯೆ ಹೆಚ್ಚಿಸಲು ಕಥೆ ಎಳೆದು ಬರೆದಂತಿದೆ.

ಮಲ್ಲಸರ್ಜನ ಮರಣಾ ನಂತರ ಆಡಳಿತದ ಚುಕ್ಕಾಣಿ ಹಿಡಿದ ರಾಣಿ ಚೆನ್ನಮ್ಮಳಿಗೆ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಾಗ, ಅವರನ್ನು ಆಂತರಿಕವಾಗಿ ಹೊಂದಾಣಿಕೆ ಮಾಡುವಾಗ ಮತ್ತು ಅವರನ್ನು ಒಗ್ಗೂಡಿಸಿ ಬ್ರಿಟೀಷರ ವಿರುದ್ಧ ಹುರಿದುಂಬಿಸುವಾಗ ಇಂಥ ಎಲ್ಲಾ ಪ್ರಸಂಗಗಳಲ್ಲಿ ಮಲ್ಲಸರ್ಜನನ ಆದರ್ಶ ಚರಿತ್ರೆ, ಆತನ ಪ್ರಜಾಪ್ರೇಮ ಸಹಾಯಕ್ಕೆ ಬಂದಿದೆ. ಚೆನ್ನಮ್ಮಳು ಆಗಾಗ ಮಲ್ಲಸರ್ಜನನ ವ್ಯಕ್ತಿತ್ವವನ್ನು ಉಗ್ಗಡಿಸುತ್ತಲೇ ಜನರನ್ನು ರಾಷ್ಟ್ರಪ್ರೇಮಿಗಳನ್ನಾಗಿ ಮಾಡಿ ಬ್ರಿಟೀಷರನ್ನು ಓಡಿಸಲು ಪ್ರಯತ್ನಿಸಿದ್ದಾಳೆ. ಈ ಸಂದರ್ಭ ಸಿಕ್ಕಾಗಲೆಲ್ಲ ಚೆನ್ನಮ್ಮಳು ತನ್ನ ಪತಿಯ ವ್ಯಕ್ತಿತ್ವವನ್ನು ವ್ಯಕ್ತಪಡಿಸುತ್ತಾ ಭಾವನಾತ್ಮಕ ಸಂಬಂಧವನ್ನು ಜನರೊಡನೆ ಬೆಳೆಸುತ್ತಾಳೆ.

೪.೪ ಕರುಣೆ :

ಶೋಕದ ಸನ್ನಿವೇಶಗಳನ್ನು ನೋಡಿದಾಗ ಇಲ್ಲವೇ ಶೋಕದ ವಿವರಗಳನ್ನು ಓದಿದಾಗ ಅಥವಾ ಶೋಕದ ಸುದ್ದಿಗಳನ್ನು ಕೇಳಿದಾಗ ಸಹಜವಾಗಿ ತನ್ನಿಂದ ತಾನೇ ಎಂಥವರಲ್ಲೂ ಅಯ್ಯೋ! ಎಂಬ ಭಾವನೆ ಉಂಟಾಗಿ ಕರುಣೆ ಉಕ್ಕಿ ಬರುತ್ತದೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕರುಣ ರಸಕ್ಕೆ ತನ್ನದೇ ಆದ ಒಂದು ಸ್ಥಾನವುಂಟು. ಕನ್ನಡ ಸಾಹಿತ್ಯದಲ್ಲಿ ಹಲವಾರೆಡೆಗಳಲ್ಲಿ ಕರುಣ ರಸದ ತಾಣಗಳು ಸಹೃದಯನಿಗೆ ಸಿಕ್ಕುತ್ತವೆ. ಪ್ರಗತಿಶೀಲ ಐತಿಹಾಸಿಕ ಕಾದಂಬರಿಗಳಲ್ಲೂ ಸಹ ಹಲವಾರು ಪಾತ್ರ, ಸನ್ನಿವೇಶಗಳಲ್ಲಿ ಕರುಣೆ ಓದುಗನಲ್ಲಿ ತಾನೇ ತಾನಾಗಿ ಹುಟ್ಟುತ್ತದೆ. ಇಂತಹ ಹಲವಾರು

ಕರುಣೆಯ ಪ್ರಸಂಗಗಳನ್ನು ಕಾದಂಬರಿಕಾರರು ತಮ್ಮ ಐತಿಹಾಸಿಕ ಕಾದಂಬರಿಗಳಲ್ಲಿ ಪುನರ್‌ಲೇಖಿದ ಸ್ವರೂಪದಲ್ಲಿ ಚಿತ್ರಿಸಿರುವರು.

'ಶಿಲ್ಪಶ್ರೀ' ಕಾದಂಬರಿಯಲ್ಲಿ ಇಂದ್ರದೇವನು ಸಲ್ಲೇಖನ ದೀಕ್ಷಾ ಸ್ವೀಕಾರಕ್ಕೆ ನೇಮಿಚಂದ್ರಾಚಾರ್ಯರ ಅನುಮತಿ ಪಡೆದು 'ತನ್ನದೆಲ್ಲವನ್ನು ಮುಕ್ತ ಹಸ್ತದಿಂದ, ನಗೆ ಮೊಗದಿಂದ ದಾನ ಮಾಡಿ, ಸಂಸಾರದ ಸಕಲ ವ್ಯಾಮೋಹಗಳನ್ನು ತನ್ನ ಬುದ್ಧಿಯಿಂದ ಕಡಿದೊಗೆದಂತೆ, ತಲೆಯ ಮೇಲಿನ ಕೇಶವನ್ನು ಮುಂಡನ ಮಾಡಿಸಿ, ಧವಳ ಸರೋವರದಲ್ಲಿ ಮಿಂದು, ದಿಗಂಬರನಾಗಿ ನೇಮಿಚಂದ್ರಾಚಾರ್ಯರಿಂದ ಮಂತ್ರೋಪದೇಶವನ್ನು ಪಡೆಯುವ ಸಲುವಾಗಿ ಚಂದ್ರಗಿರಿಯನ್ನೇರಿದ'[೮೪] (ಸುಬ್ಬರಾಯರು ತ.ರಾ, ೨೦೧೪, ಶಿಲ್ಪಶ್ರೀ ಪುಟ-೧೧೭) ಚಕ್ರವರ್ತಿ ದೇವಲೋಕ ದಿಗ್ವಿಜಯಕ್ಕಾಗಿ ಹೊರಟ ಆ ದೃಶ್ಯ ಎಲ್ಲರ ಕಣ್ಣುಗಳಲ್ಲೂ ಕಂಬನಿ ತರಿಸುತ್ತವೆ. ಕೆಲವರು ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಇಹಲೋಕ ವ್ಯಾಮೋಹಗಳನ್ನು ತ್ಯಜಿಸಿ, ವೈರಾಗ್ಯದಿಂದ ದೀಕ್ಷೆ ತೆಗೆದುಕೊಳ್ಳವುದನ್ನು ಮುಕ್ತ ಕಂಠದಿಂದ ಹಾಡಿ ಹೊಗಳಿದರೆ, ಕೆಲವರು ಇನ್ನೂ ಬಲಿಯದ ಮಿಡಿ ಹಣ್ಣಾಗ ಹೊರಟುದನ್ನು ಕಂಡು ಕಂಬನಿ ಮಿಡಿಯುವರು. ಜನರಷ್ಟೇ ಅಲ್ಲದೆ ಇಂದ್ರದೇವನ ಪಟ್ಟದ ಕುದುರೆಯೂ ಕೆನೆಕೆನೆದು ಕಂಬನಿಗರೆಯುವುದು. ಗಂಗ ರಾಚಮಲ್ಲ ಬರುವಷ್ಟರಲ್ಲಿಯೇ ಇಷ್ಟೆಲ್ಲ ಘಟನೆಗಳು ಸಂಭವಿಸಿರುವುದನ್ನು ಕಂಡು "ನಾವು ಬರುವವರೆಗಾದರೂ ಕಾಯುವಂತೆ ಮಾಡಬಾರದಿತ್ತೇ?" ಎಂದು ಕಂಬನಿ ಮಿಡಿಯುವನು.

ವಾಲಿಮಹಮ್ಮದ್ ಮತ್ತು ಕುಲವಂತಸಿಂಗ್‌ನ ನಡುವೆ ಹೋರಾಟ ನಡೆದ ಸಂದರ್ಭದಲ್ಲಿ ಕುಲವಂತನಿಗೆ ಇರಿತವಾಗಿ ಸಾವನ್ನಪ್ಪಿದನು. ವಾಲಿ ಮಹಮ್ಮದ್ ಓಡಿ ಬಂದವನೆ ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ದುಃಖಿಸುತ್ತ ಕಂಬನಿ ಸುರಿಸುತ್ತಾನೆ. ಆಗ ಕುಲವಂತ ಜಯಾಪಜಯ ಯಾರ ಅಧೀನವೂ ಅಲ್ಲ. ನನಗೆ ಅವಕಾಶ ಸಿಕ್ಕಿದ್ದರೆ ನಾನೆ ನಿನ್ನನ್ನು ಕೊಲ್ಲುತ್ತಿದ್ದೆ. ರಣರಂಗವೆಂದರೆ ಮೃತ್ಯುದೇವತೆಯ ಮಹಾಮನೆ. ನಾನು ನಿನ್ನ ತೊಡೆಯ ಮೇಲೆ ಸಾಯುತ್ತಿರುವುದಕ್ಕೆ ಹೆಮ್ಮೆಯೆನಿಸುತ್ತದೆ. ಯುದ್ಧ, ಜಗಳ, ಅಶಾಂತಿಯಿಲ್ಲದ ಲೋಕದಲ್ಲಿ ನಾವಿಬ್ಬರೂ ಮತ್ತೆ ಹುಟ್ಟೋಣ ಎಂದು ಹೇಳುತ್ತ ಕಣ್ಣು ಮುಚ್ಚುವ ಸನ್ನಿವೇಶ ಎಂತವರಲ್ಲೂ ಕರುಣೆ ಹುಟ್ಟಿಸಿ ಕಂಬನಿ ಸುರಿಯುವಂತೆ ಮಾಡುತ್ತದೆ.

ಶ್ರೀಕೃಷ್ಣದೇವರಾಯನ ಮಗನಾದ ತಿರುಮಲರಾಯರಿಗೆ ವಿಷವುಣಿಸಿ ಸಾಯಿಸಲ್ಪಟ್ಟಾಗ ಆ ವಿಷಯ ಕೇಳಿದಾಕ್ಷಣ ಪ್ರಭುಗಳು ಸ್ಮೃತಿ ತಪ್ಪಿ ಬೀಳುತ್ತಾರೆ. ಒಂದು ಗಂಟೆಯ ಬಳಿಕ ಸುಧಾರಿಸಿಕೊಂಡು ಇದಕ್ಕೆಲ್ಲ ಯಾರು ಹೊಣೆಯೆಂದು ವಿಚಾರಿಸುತ್ತಾರೆ.

ತಿರುಮಲಾದೇವಿಯವರಂತೂ ಹಾಸಿಗೆ ಹಿಡಿದೇ ಮಲಗುತ್ತಾರೆ. ಅವರ ಸಂಕಟ, ರೋಧನ ಎಂತವರಲ್ಲೂ ಕರುಣೆ ಉಕ್ಕಿಸುತ್ತದೆ. ಹುಚ್ಚು ತಿರುಮಲ ಮಂತ್ರಿಗಳು ಮತ್ತು ಅವರ ಮಕ್ಕಳು ಅಪರಾಧಿಗಳೆಂದು ಸಾಬೀತುಪಡಿಸಿದಾಗ ಪ್ರಭುಗಳು 'ಅಪ್ಪಾಜಿಯವರಿಗೆ ನಾವು ಮರಣದಂಡನೆ ವಿಧಿಸಲು ಸಾಧ್ಯವಿಲ್ಲ. ಅಯ್ಯಪ್ಪರಸರೇ ತೀರ್ಪು ಬದಲಾಯಿಸಿ ಆಪಾದಿತರೆಲ್ಲರ ಕಣ್ಣು ಕೀಳಿಸಿ ಸಾಮ್ರಾಜ್ಯದ ಗಡಿಯಾಚೆ ಕಳಿಸಿಬಿಡಿ ಎಂದು ಹೇಳಿ ಒಳಗೆದ್ದು ಹೋದರು. ಅಪ್ಪಾಜಿಯವರು ನಮಗೆ ಕಣ್ಣುಗಳನ್ನಿತ್ತರು! ನಾವು ಅವರ ಕಣ್ಣುಗಳನ್ನು ಕೀಳಿಸಿದೆವು!'[೮೫] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೧೨೭) ಎಂದು ಕಂಬನಿ ಸುರಿಸುತ್ತಾರೆ. ಅದೇ ಕೊರಗಿನಲ್ಲಿಯೇ ದೊರೆಗಳು ಇಹಲೋಕ ತ್ಯಜಿಸಿದಾಗ ರಾಜಧಾನಿಗೆ ರಾಜಧಾನಿಯೇ ಶೋಕಿಸುತ್ತದೆ.

ರಾಮರಾಯರು ಮತ್ತು ಅಚ್ಯುತರಾಯರು ತೊಂಡಮಂಡಲದಿಂದ ರಾಜಧಾನಿಗೆ ಮರಳುತ್ತಿರುವ ವಿಷಯ ತಿಳಿದ ಹುಚ್ಚುತಿರುಮಲ ಎಳೆಯ ಕಂದ ಗೋವಿಂದರಾಜನನ್ನು ಇರಿದು ಕೊಂದು, ಕಳೇಬರವನ್ನು ಹೊರಗೆಸೆದು, ಅರಮನೆಯ ಮಹಾದ್ವಾರಗಳನ್ನು ಬಂಧಿಸಿ, ಅರಮನೆಯ ಪ್ರಾಂಗಣದಲ್ಲಿದ್ದ ಆನೆ ಕುದುರೆಗಳ ಕಣ್ಣು ಕೀಳಿಸುವ ದೃಶ್ಯಗಳಂತೂ ಎಲ್ಲರ ಮನಃಕಲಕುತ್ತದೆ. ರಾಮರಾಯರು ಗೋವಿಂದರಾಜರ ಶವವನ್ನು ಕಂಡು ಪ್ರಲಾಪಿಸುವ ರೀತಿ ಎಂತವರಲ್ಲೂ ಕರುಣೆ ಉಕ್ಕಿಸುತ್ತದೆ. ನಿಮ್ಮನ್ನು ಕಾಪಾಡಲಾರದ ಈ ಕೈಗಳಿದ್ದು ಏನು ಪ್ರಯೋಜನ ಎಂದು ಕಂಬನಿ ಸುರಿಸುತ್ತಾನೆ. ಇದೇ ಕೈಗಳಿಂದಲೇ ನಿಮ್ಮನ್ನೆತ್ತಿ ಸಿಂಹಾಸನದ ಮೇಲೆ ಕೂಡಿಸುತ್ತೇನೆಂದು ವಾಗ್ದಾನ ಮಾಡಿದ್ದೆ. ಅದನ್ನು ನೆರವೇರಿಸದ ಈ ಹಾಳು ಕೈಗಳಿದ್ದು ಏನು ಉಪಯೋಗ ಎನ್ನುತ್ತಾ 'ನನ್ನನ್ನು ಚಿರಂತನ ದುಃಖದಲ್ಲಿ ಕೆಡಹಿ ಹೋಗಿ ಬಿಟ್ಟೆಯಾ ನನ್ನಯ್ಯ ನನ್ನ ಚಿಕ್ಕದೊರೆ. ನವಮನ್ಮಥನಂತಿದ್ದ ನಿನ್ನ ಮುಖ ಕಪ್ಪಿಟ್ಟುಕೊಂಡಿರುವುದನ್ನು ನೋಡಿ ಹೇಗೆ ಸಹಿಸಲಿ. ಇನ್ನು ಯಾರನ್ನು ಚಿಕ್ಕದೊರೆ ಎಂದು ಕರೆಯಲಿ? ನಾನು ಬಂದೊಡನೆಯೇ ಹೌಹಾರಿ ಬಂದು ನನ್ನನ್ನಪ್ಪುತ್ತಿದ್ದೆ. ರಾಮರಾಯರೇ ಎಂದು ನೀನು, ಸಂಬೋಧಿಸಿದಾಗ 'ಬೇಡ ನನ್ನ ದೊರೆ ರಾಮರಾಯ ಎನ್ನಿ ಸಾಕು' ಎಂದು ನಾನನ್ನಲು ಉಂಟೆ? ನೀವು ನನ್ನ ಭಾವಂದಿರು. ನನ್ನ ತೀರ್ಥರೂಪ ಸಮಾನ. ನಾನು ನಿಮಗಿಂತ ಚಿಕ್ಕವನು ಎಂದೆ. ಆಳಿದ ಮಹಾಪ್ರಭು ಶ್ರೀ ಶ್ರೀಕೃಷ್ಣದೇವರಾಯರ ಕೀರ್ತಿ, ಪ್ರತಾಪಗಳನ್ನು ಮೆರೆಸುವ ಪ್ರಭು ಅವತರಿಸಿದ್ದಾನೆ ಎಂದು ನಾನು ಹಿರಿಹಿರಿ ಹಿಗ್ಗುತ್ತಿದ್ದೆ. ಅಯ್ಯೋ ನಿರ್ಭಾಗ್ಯ ಸಾಮ್ರಾಜ್ಯವೇ? ನನ್ನ ದೊರೆಯನ್ನು ಕಾಪಾಡಲಾರದೆ ಹೋದೆಯಾ?'[೮೬] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೨೩೪) ಎಂದು ಪ್ರಲಾಪಿಸುತ್ತ ಮೂರ್ಛಿತರಾಗಿ ಬಿದ್ದುಬಿಡುವ ದೃಶ್ಯ ಕಂಬನಿ ತರಿಸುತ್ತದೆ.

ಇಮ್ಮಡಿ ಮದಕರಿನಾಯಕರು ಮಡಿದಾಗ ಜನರು ಆಕ್ರೋಶಭರಿತರಾಗಿ ದುಃಖಿಸುವ ರೀತಿ ಎಂತವರಲ್ಲೂ ಕರುಣೆ ಉಕ್ಕಿಸುತ್ತದೆ. 'ಕಂಬನಿದುಂಬಿ ಕುರುಡಾದ ಜನ, ತಾಯಗಲಿದ ಕರುವಿನಂತೆ, ಗುಡ್ಡದ ಕೋಡುಗಲ್ಲುಗಳು ಮಾರ್ದನಿಸುವಂತೆ ರೋದಿಸುತ್ತಿದ್ದರು. ಕೆಲವರು ದುಃಖೋನ್ಮಾದದಲ್ಲಿ ತಾವೂ ಚಿತೆಗೆ ಹಾರಲು ಯತ್ನಿಸುತ್ತಿದ್ದರು. ಕೆಲವರು ನೆತ್ತಿಯ ಕೂದಲನ್ನು ಕಿತ್ತು ತೂರಿ, ತಾವೂ ಚಿತೆಯ ಮೇಲೆ ಮಲಗಿದವರಂತೆ ಧೂಳಿನಲ್ಲಿ ಹೊರಳಾಡುತ್ತಿದ್ದರು. ಒಬ್ಬೊಬ್ಬರು, ಹೆಣ್ಣು, ಗಂಡು, ಸ್ವಕೀಯರು, ಪರಕೀಯರು ಎಂಬ ಭೇದ ಭಾವವಿಲ್ಲದೇ ತಬ್ಬಿ, ಉಕ್ಕಿಬಂದ ದುಃಖವನ್ನು ಹತ್ತಿಕ್ಕಲಾರದೇ ಚೀರುತ್ತಿದ್ದರು'[೮೭] (ಸುಬ್ಬರಾಯರು ತ.ರಾ, ೨೦೧೩, ಕಂಬನಿಯ ಕುಯಿಲು, ಪುಟ-೩೫) ಎಂಬ ಸನ್ನಿವೇಶವನ್ನು ತ.ರಾ.ಸು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಹುಚ್ಚಿ ಹನುಮವ್ವಳು ಒಂದು ಕಾಲದಲ್ಲಿ ಸುಖವಾಗಿ ನೆಮ್ಮದಿಯಿಂದ ಗಂಡ ಮಕ್ಕಳೊಂದಿಗೆ ವಾಸವಾಗಿದ್ದಳು. ಯುದ್ಧದಲ್ಲಿ ತನ್ನವರನ್ನೆಲ್ಲ ಕಳೆದುಕೊಂಡು ಈಗ ಬೀದಿ ಬೀದಿಗಳಲ್ಲಿ ಹುಚ್ಚಿಯಾಗಿ ಅಲೆಯುತ್ತಾ ಆಕೆಯು ಹಾಡುವ ಪದ ಶಿಲೆಯ ಎದೆಯಲ್ಲೂ ಕಂಬನಿಯೊಸರುವಂತೆ ಮಾಡುತ್ತದೆ. 'ಹೊಂಟ್ರಣ್ಣಾ ಹೊಂಟ್ರು ಯುದ್ಧಕ್ಕೊಂಟ್ರು.... ಹಾಲು ಅನ್ನ ಉಂಡ್ಕೊಂಡು ಮನ್ಯಾಗಿರೋ ಮಗನೇ ಅಂದ್ರೆ ಜೀವಾ ತಿಂದು ಜೀವಾ ಕೊಡಾಕೆ ಹೊಂಟ್ರು ಬ್ಯಾಡೀಕಣೋಂದ್ರೆ ಕೇಳ್ಳಿಲ್ಲ ಹೋದ ಹೋಗೇಬಿಟ್ಟ....

"ಆಳು ಕುದುರೇ ದಂಡು ಲಗ್ಗೇಯ ಮಾಡಿ

ರಣಹದ್ದು ಚೀರೀತು ಮುಗಿಲಾಗೆ ಆಡಿ

ಮಣ್ಣಾಗೆ ಬಿದ್ದೀತೋ ಮಾಸತಿಯ ಕೈಗಡಗ

ದುರ್ಗದಾ ಬೀದೀಲಿ ಹರಿದೀತೋ ದುಃಖದಾಹಡಗ"'[೮೮] (ಸುಬ್ಬರಾಯರು ತ.ರಾ, ೨೦೧೩, ಕಂಬನಿಯ ಕುಯಿಲು, ಪುಟ-೮೯) ಎಂದು ಹಾಡುತ್ತಾ ವಿಕಟಾಟ್ಟಹಾಸದಿಂದ ನಗುತ್ತಾ ಹೋಗುವ ರೀತಿ ಮನ ಮಿಡಿಯುತ್ತದೆ.

ತುಂಬಿದ ಓಲಗ ಸಭೆಯಲ್ಲಿ ಪಟ್ಟಾಭಿಷಕ್ತ ದೊರೆಯಾದ ಓಬಣ್ಣನಾಯಕರ ಕಗ್ಗೊಲೆ ಅದನ್ನು ನೋಡಲಾರದೆ ಓಬವ್ವನಾಗತಿಯು ಗೋಪಾಲಸ್ವಾಮಿಯ ಹೊಂಡಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ರೀತಿ, ವಿಷಯ ತಿಳಿದು ಅರಮನೆಯತ್ತ ದೌಡಾಯಿಸುತ್ತಿದ್ದ ಪ್ರಧಾನಿ ಭುವನಪ್ಪನವರು ಜನರ ಕಾಲ್ತುಳಿತದಿಂದ ಸತ್ತ ರೀತಿ ಕರುಣೆ ಉಕ್ಕಿಸಿ ಕಂಬನಿ ತರಿಸುತ್ತವೆ. ದುರ್ಗದ ತುಂಬೆಲ್ಲ ಸರ್ವಾಧಿಕಾರತ್ವ ಸ್ಥಾಪಿತವಾಗಿ ಜನ ನಾಯಕರಿಗೆ, ನಾಗತಿಯರಿಗೆ ಅಂತಿಮ ನಮನ ಸಲ್ಲಿಸುವುದಕ್ಕೆ ಅಡ್ಡಿಯಾದ ಸಂದರ್ಭದಲ್ಲಿ ಜನರನ್ನೆಲ್ಲ ಪರಶುರಾಮಪ್ಪ ಈಗಾಗಿರುವ ರಕ್ತಪಾತವೇ ಸಾಕು.

ತಾಯಿಯವರ ದೇಹವನ್ನು ರಕ್ತದಿಂದ ತೋಯಿಸಬೇಡಿ ಎಂದು ತಡೆಯುತ್ತಾನೆ. ಸ್ವಾಮಿನಿಷ್ಠನಾಗಿಯೇ ಇದ್ದ ಕಸ್ತೂರಿನಾಯಕ ತನ್ನನ್ನು ನಂಬಿದ ನಾಗತಿ ಹಾಗೂ ದೊರೆಯಾದ ಓಬಣ್ಣನಾಯಕನನ್ನು ಉಳಿಸಲಾಗಲಿಲ್ಲ ಎಂಬ ವ್ಯಥೆಯಿಂದ ಕತ್ತಿಯ ಮೇಲೆ ಬಿದ್ದು ಸಾವನ್ನಪ್ಪುತ್ತಾನೆ.

ಗಿರಿಜೆ ವೀರಣ್ಣನನ್ನು ಕಳೆದುಕೊಂಡಾಗ ಪಡುವ ಸಂಕಟ, ವೇದನೆ ಕರುಣೆ ಉಕ್ಕಿಸುತ್ತದೆ. ಮೂರು ದಿನಗಳಿಂದ ಊಟ ಮಾಡದೇ ಇದ್ದ ಮಗಳಿಗೆ ತಂದೆಯಾದ ಭೀಮಪ್ಪಯ್ಯ ಊಟ ಮಾಡಲು ಹೇಳಿ ಮನುಷ್ಯನಿಗೆ ದುಃಖ ಬರದೇ ಮರಕ್ಕೆ ಬರುತ್ತದೆಯೇ ಎಂದಾಗ ಗಿರಿಜವ್ವೆ ನನಗಾದದ್ದೆಲ್ಲ ಮರಕ್ಕೆ ಬಂದಿದ್ರೆ, ಅದು ಸುಟ್ಟು ಬೂದಿಯಾಗೋದು. ನನ್ನದು ಭಂಡ ಜೀವ, ಅದಕ್ಕೆ ಇನ್ನೂ ಉಳಿದಿದೆ ಎನ್ನುವಳು. ಅಷ್ಟರಲ್ಲೇ ಹುಚ್ಚಿ ಹನುಮವ್ವಳು ಪದಗಳನ್ನು ಹೇಳುತ್ತಾ

'ಬಡೀಬ್ಯಾಡಣ್ಣ ಬಡೀಬ್ಯಾಡಣ್ಣ ರಣಡೋಲ

ಭೂತಗಳೆಲ್ಲಾ ಎದ್ದು ಬರ್ತಾವೆ ದುರ್ಗದ ಮ್ಯಾಲ

ಮನೆ ಮಠ ಹೊಲ ಜಲ ಕೋಟೆ ಪೇಟೆ

ಹುಡುಕಿಕೊಂಡು ಅಲೀತಾವೆ ನರಬೇಟೆ'[೮೯] (ಸುಬ್ಬರಾಯರು ತ.ರಾ, ೨೦೧೧, ರಾಜ್ಯದಾಹ, ಪುಟ-೩೪) ಎಂದು ಹಾಡುತ್ತಿರುವಾಗಲೇ ಗಿರಿಜವ್ವೆ "ನರಬೇಟೆ" ಎಂಬ ಪದ ಕಿವಿಗೆ ಬಿದ್ದೊಡನೆಯೇ ಓಡಿ ಹೋಗುವಳು. ಭೀಮಪ್ಪಯ್ಯ ಹೌದು ನಿಟ್ಟುಸಿರೊಂದೇ ತನಗೆ ಉಳಿದಿರುವುದು ಎಂದು ಕಂಬನಿಗರೆಯುವನು. ದೊರೆಯಾದ ಲಿಂಗಣ್ಣನಾಯಕನ ದುರಂತದ ಸಾವು ಎಂತಹ ಕಲ್ಲೆದೆಯವರಲ್ಲೂ ಕಂಬನಿ ತರಿಸುತ್ತದೆ. ಅವನ ಜೀವನದ ಕೊನೆಯ ದೃಶ್ಯವಂತೂ ಅತ್ಯಂತ ಕರುಣಾಜನಕವಾದುದು. ಸೆರೆಹಿಡಿದ ಮುದ್ದಣ್ಣ ಕತ್ತಿ ಹಿರಿದು ನಿಂತ ಆತನ ಒಂದು ಕೈಯನ್ನು ಕತ್ತರಿಸಿ ಇರುವ ಒಂದು ಕೈಗೆ ಕೋಳ ತೊಡಿಸಿ ಬರಿಗಾಲು, ಬರಿನೆತ್ತಿಯಲ್ಲಿ, ಅವನ ಹಣೆಗೆ ಕುಂಕುಮವನ್ನಿಟ್ಟು ಕತ್ತಿಗೆ ಕೆಂಪು ಕಣಗಿಲೆ, ದಾಸವಾಳದ ಹೂಗಳ ಮಾಲೆಯನ್ನು ಹಾಕಿ ಮೆರವಣಿಗೆ ಮಾಡಿಸುವ ರೀತಿ ಮುದ್ದಣ್ಣನ ಪಿಶಾಚತನದ ಭೀಕರ ದೃಶ್ಯ ಕೊನೆಗೆ ಅವನ ಕತ್ತನ್ನು ಕತ್ತರಿಸಿ ಅದನ್ನು ಕಾಲಿನಿಂದ ಒದೆಯುವ ರೀತಿ ಇವುಗಳನ್ನೆಲ್ಲ ನೋಡಿದಾಗ ದೊರೆಯಾದ ಲಿಂಗಣ್ಣನಾಯಕನಿಗೆ ಎಂಥ ಹೀನ ಸ್ಥಿತಿ ಬಂತಲ್ಲ ಎಂಬ ಮರುಕವುಂಟಾಗುತ್ತದೆ.

ಮದಕರಿನಾಯಕ ಬದುಕಿನುದ್ದಕ್ಕೂ ವೀರೋತ್ಸಾಹದಿಂದ ಹೋರಾಡಿ ಗಂಡುಗಲಿ ವೀರಮದಕರಿನಾಯಕನೆಂದೇ ಪ್ರಖ್ಯಾತನಾಗಿರುತ್ತಾನೆ. ಆದರೆ ನವಾಬರ ಸೇನೆಯನ್ನು ಎದುರಿಸಲು ಎಷ್ಟೇ ಯುದ್ಧ ತಂತ್ರವನ್ನು ಹೂಡಿದರೂ ಸಹ ಪಿಸುಣರ ಮಾತಿಗೆ ದುರ್ಗದಲ್ಲಿ ಅಪಸ್ವರ ಹುಟ್ಟಿ ಕೊನೆಗೆ ನಾಯಕ ಯುದ್ಧಭೂಮಿಗೆ ಇಳಿದು ಹೋರಾಡುತ್ತಿರುವ ಸಂದರ್ಭದಲ್ಲಿ ಹಾಕಿಕೊಂಡಿದ್ದ

ರಕ್ಷಾ ಕವಚ ಕಿತ್ತು ದೇಹದಲ್ಲೆಲ್ಲಾ ರಕ್ತ ಹರಿಯುತ್ತಿದ್ದರೂ ಸಹ ಲೆಕ್ಕಿಸದೇ ಹೋರಾಡುತ್ತಾನೆ. ಆದರೆ ಒಮ್ಮೆಲೆ ಸಿಡಿದು ಬಂದ ಗುಂಡುಗಳು, ಹರಿದು ಬಂದ ಕತ್ತಿಗಳು ಆತನ ಎದೆ ಸೀಳುತ್ತವೆ. ನಾಯಕ ನೆಲಕ್ಕುರುಳಿದ ರೀತಿ ಕಂಬನಿ ಬರಿಸುತ್ತದೆ. ತಾಯ ತೊಡೆಯ ಮೇಲೆ ಮಲಗಿದಂತೆ ನೆಲದ ಮೇಲೊರಗುತ್ತಾನೆ ಮದಕರಿನಾಯಕ. ದುರ್ಗಕ್ಕೆ ರಕ್ತಸಿಕ್ತವಾದ ದೇಹದಿಂದ ಬರುವ ಜಾನ್‌ಡ್ಯೂವರೋ, ಹಂಸಗೀತೆ ಕಾದಂಬರಿಯಲ್ಲಿ ಬರುವ ಬೈರಾಗಿ ಸದಾನಂದ ಬುವಾ, ಚಂದ್ರಾಸಾನಿಯರ ಕಥೆಗಳೂ ಸಹ ಕರುಣಾಜನಕವಾಗಿವೆ.

ದುರ್ಗದ ಕೋಟೆ ಮೋಸದಿಂದ ಹೈದರಾಲಿಯ ಕೈವಶವಾದಾಗ ಟಿಪ್ಪುಸುಲ್ತಾನ ವೆಂಕಟಸುಬ್ಬಯ್ಯನನ್ನು ಕರೆಸಿ ತನ್ನ ಆಸ್ಥಾನದಲ್ಲಿ ಹಾಡಬೇಕೆಂದು ಹೇಳಿದಾಗ ಅದನ್ನು ನಿರಾಕರಿಸಿ ತನ್ನ ನಾಲಗೆಯನ್ನೇ ಕತ್ತರಿಸಿಕೊಳ್ಳುವ ಸನ್ನಿವೇಶ ಕಲ್ಲೆದೆಯವರನ್ನು ಕರಗಿಸುತ್ತದೆ. ಅಷ್ಟೇ ಅಲ್ಲದೆ ಸ್ವತಃ ಟಿಪ್ಪುವೂ ಕೂಡ ಕಂಬನಿಗರೆಯುತ್ತಾನೆ.

ಕಪಾಳದುರ್ಗದಲ್ಲಿ ಮಲ್ಲಸರ್ಜ ಮಡಿವಾಳರು ಅನುಭವಿಸಿದ ನರಕಯಾತನೆಯನ್ನು ಚಿತ್ರಿಸುವ ಭಾಗವಂತೂ ಹೃದಯವನ್ನೇ ಭೇದಿಸುವಂತಿದೆ. ‘ಅಂಥ ಅವಸ್ಥೆಯಲ್ಲೂ ಭಾರಿ ನೇಗಿಲು ಎಳೆಯಬೇಕು. ದೊಡ್ಡ ದೊಡ್ಡ ಬೀಸುವ ಕಲ್ಲು ತಿರುವಬೇಕು. ಮೊಟ್ಟೆಯಿಂದ ನೀರು ಹೊತ್ತು ಹಾಕಬೇಕು. ಎಷ್ಟೋ ಬಾರಿ ಉಸಿರು ಕಟ್ಟಿ ಬೀಳುವಂತಾಗುತ್ತಿತ್ತು. ಸ್ವಲ್ಪ ಹೊತ್ತು ಕುಳಿತು ಆಯಾಸ ಪರಿಹರಿಸಿಕೊಳ್ಳಲೂ ಆಸ್ಪದವಿರಲಿಲ್ಲ. ಕೆಲಸದಲ್ಲಿ ಸ್ವಲ್ಪ ತಡವಾದರಾಯಿತು ಬಾರಕೋಲು ಚಿಣಗಿಯ ಹಾವಿನಂತೆ ಬಂದೆರಗುತಿತ್ತು. ಉಸಿರೇ ನಿಂತು ಹೋಗುವಂತ ಸ್ಥಿತಿಯಲ್ಲೂ ಹೇಗೋ ಭಾರ ಹೊತ್ತು ಮುನ್ನಡೆಯಬೇಕು. ಬೂದಿ ಮಿಶ್ರಿತ ಮುದ್ದೆ ಗಂಟಲಲ್ಲಿಳಿಯಲು ಶಕ್ಯವಾಗುತ್ತಿರಲಿಲ್ಲ. ಹೇಗೋ ಅದನ್ನು ನುಂಗಿ, ಹೊಲಸು ನಾರುವ ನೀರನ್ನೇ ಕುಡಿದು ನೆಲದ ಮೇಲೆ ದೇಹ ಚೆಲ್ಲುತ್ತಿದ್ದರು’[೦] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ–೧೪೦) ಭಾಷೆಯ ನೇರ ನಿರೂಪಣೆಯಲ್ಲಿಯೇ ಒಂದು ದಾರುಣ ಚಿತ್ರ ಕಟ್ಟಿಕೊಡುವ ಜಾಣ್ಮೆ ಕಟ್ಟೀಮನಿಯವರಲ್ಲಿರುವುದು ಮಹತ್ವದ ಸಂಗತಿ.

ಮಲ್ಲಸರ್ಜ ದೊರೆ ಎರಡನೆಯ ಬಾಜಿರಾಯನ ಕುತಂತ್ರಕ್ಕೆ ಒಳಗಾಗಿ ಮೂರು ವರ್ಷಗಳ ಕಾಲದ ಬಂಧನದಿಂದಾಗಿ ಮಾನಸಿಕವಾಗಿ ಜರ್ಜರಿತಗೊಂಡು ಕಾಯಿಲೆಗೆ ತುತ್ತಾಗಿ ಅಸ್ತಂಗತನಾದಾಗ ಅರಸು ಪರಿವಾರದವರು ಶೋಕಸಾಗರದಲ್ಲಿ ಮುಳುಗುತ್ತಾರೆ. ಮಲ್ಲಸರ್ಜನ ಶವ ನೋಡುತ್ತಿದ್ದಂತೆ ಅವನ ಮಕ್ಕಳು ಇಂದಿಗೆ ತಮಗೆ ವನವಾಸ ಪ್ರಾಪ್ತಿಯಾಯಿತೆಂದು ದುಃಖಿಸತೊಡಗಿದರು.

'ಅರಿಷಿಣ ಹಚಗೊಂಡ ಅರಸಿ, ನನ ರುದ್ರವ್ವ

ಅರಸರಿಗೆ ಬಳೆಯ ತಗಿಬಾರ ।ಕೋ। ಮಲಸರ್ಜ

ವನವಾಸ ನಮಗ ತೋರ್‍ಯಾವ ।ಕೋ।

ಗಂಧ ಹಚ್ಚಿದ ಗಮನೆ ಬಾ ತಾಯಿ ಚನ್ನವ್ವ

ಗಂಡಸರಿಗೆ ಬಳೆಯ ತಗಿಬಾರ ।ಕೋ। ಮಲಸರ್ಜ

ಇಲ್ಲಿಗೆ ವನವಾಸ ಒದಗ್ಯಾವ ।ಕೋ।'[೧೧] (ಶಿವಾನಂದ ಗುಬ್ಬಣ್ಣವರ, ೨೦೧೧, ಪುಟ-೪೧) ಮಲ್ಲಸರ್ಜನ ಅಂತ್ಯಕ್ರಿಯೆಗೆ ಮೊದಲು ಅವನ ಸತಿಯರಾದ ರುದ್ರವ್ವ ಹಾಗೂ ಚನ್ನಮ್ಮ ಮುಖಕ್ಕೆ ಅರಿಷಿಣ ಹಾಗೂ ಗಂಧ ಪೂಸಿಕೊಂಡು ತಮ್ಮ ಮಾಂಗಲ್ಯ ಸಂಕೇತಗಳಾದ ಬಳೆ, ಮೂಗುತಿಗಳನ್ನು ತೆಗೆದು ವೈಧವ್ಯ ಆರೋಪಿಸಿಕೊಳ್ಳುತ್ತಿದ್ದಂತೆ ತಮಗಿಂದು ವನವಾಸ ಬಂತೆಂದು ಶೋಕಿಸಿದರು.

ವೀರರಮಣಿಯಾದ ಚೆನ್ನಮ್ಮ ಸ್ವಜನರ ಪಿತೂರಿಯಿಂದ ಬ್ರಿಟೀಷರ ಕೈ ಸೆರೆಯಾದಳು. ಮೊದಲ ಯುದ್ಧದಲ್ಲಿ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿ, ಅವರನ್ನು ಹಿಮ್ಮೆಟ್ಟಿಸಿದ ವೀರವನಿತೆ ಚೆನ್ನವ್ವ ಸೆರೆ ಸಿಕ್ಕ ದುಃಸ್ಥಿತಿಗೆ ಚಿತ್ರದ ಗೊಂಬೆಗಳು ಅಳಲಾರಂಬಿಸಿದುವಂತೆ. ಸುದ್ಧಿ ತಿಳಿದ ಕಿತ್ತೂರಿನ ಹಿಂಡುವ ಎಮ್ಮೆ, ಹಸು ಹಾಗೂ ಎಳಗರುಗಳೂ ದುಃಖಿಸಿದುವಂತೆ.

'ಕಿತ್ತೂರ ಶರಶೂರಿ ಮತ್ತೇನ ಹೇಳಲಿ।

ಚಿತ್ತರದ ಗೊಂಬಿ ಅಳತಾವ। ಚೆನ್ನವ್ವಗ

ಹಿಂಡೆಮ್ಮಿ ಹಸುವು ಎಳಗರು॥'[೧೨] (ನಾವಲಗಿ ಸಿ.ಕೆ, ೨೦೧೧, ಪುಟ-೩೭) ಇದು ಕಾವ್ಯದ ಉತ್ಪ್ರೇಕ್ಷೆಯಾದರೂ ಕಿತ್ತೂರ ನಾಡಿಗೆ ನಾಡೇ ಕಣ್ಣೀರಿಟ್ಟಿತು. ಚೆನ್ನವ್ವನ ಕಣ್ಣೀರ ಕಟ್ಟೆಯೂ ಒಡೆದು ಖೋಡಿಯಾಗಿ, ಹೊಳೆಯಾಗಿ ಹರಿಯಿತೆಂದು ಲಾವಣಿಕಾರ ಹಾಡಿದ್ದಾನೆ.

ಚೆನ್ನಮ್ಮ ಬಂಧನಕ್ಕೊಳಗಾದ ಮೇಲೆ ನಿರಶನ ವ್ರತ ಕೈಗೊಳ್ಳುತ್ತಾಳೆ. ಕ್ಯಾಪ್ಟನ್ ಹ್ಯಾರಿಸ್ ಅವಳಿಗೆ ಉಪವಾಸ ನಿಲ್ಲಿಸುವಂತೆ ಕೇಳಿಕೊಳ್ಳುತ್ತಾನೆ. ಜೊತೆಗೆ 'ಕೆಲಸದಿಂದ ನಿವೃತ್ತನಾಗಿ ನಾನು ಇಂಗ್ಲಂಡಿಗೆ ಹೋದ ಮೇಲೆ ನಿಮ್ಮ ದಿವ್ಯ ಚರಿತ್ರೆಯನ್ನು ಬರೆದು ಪ್ರಸಿದ್ಧ ಪಡಿಸುವೆನು. ಫ್ರಾನ್ಸಿನ ಬಂಧನವನ್ನು ಕೊನೆಗಾಣಿಸಿದ ಜೋನ್ ಆಫ್ ಆರ್ಕ್ ಚರಿತ್ರೆಗೂ ಅದ್ಭುತವಾದ ಚರಿತ್ರೆ ತಮ್ಮದು'[೧೩] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೮೭) ಎಂದು ಹೇಳಿ ಆಕೆಯ ಮನಃ ಪರಿವರ್ತಿಸುವಲ್ಲಿ ಶ್ರಮಿಸುವನು.

ಕಡುಗಲಿ ರಾಯಣ್ಣನನ್ನು ಮೋಸದಿಂದ ಹಿಡಿದು ಗಲ್ಲಿಗೇರಿಸಿದಾಗ ಆ ದೃಶ್ಯ ನೋಡುತ್ತಿದ್ದ ವೀರವ್ವ ತನ್ನ ಸೊಂಟದಲ್ಲಿದ್ದ ಕಿರುಗತ್ತಿಯನ್ನು ಹಿರಿದು, ಚಿಕ್ಕದೇಸಾಯರ ಎದೆಗೆ ನೆಟ್ಟು, ತನ್ನ ಎದೆಗೂ ಇರಿದುಕೊಂಡು "ದಾಸ್ಯ ಕಿತ್ತೂರಿನಲ್ಲಿ ಬದುಕುವುದು ಬೇಡ" ಎಂದು ಹೇಳಿ ಅಸುನಿಗಿದಳು ಎಂದು ಅ.ನ.ಕೃ ಚಿತ್ರಿಸಿದ್ದರೆ ಕಟ್ಟೀಮನಿಯವರು ಇಂಗ್ಲೀಷರು ಅವರಿಗೆ ವಿಷದ ಗುಳಿಗೆ ಕೊಟ್ಟು ಸಾಯುವಂತೆ ಮಾಡಿದ ಪ್ರಸಂಗವನ್ನು ಎದೆ ಬಿರಿಯುವಂತೆ ಚಿತ್ರಿಸಿದ್ದಾರೆ.

ಕಟ್ಟೀಮನಿಯವರು ಚೆನ್ನಮ್ಮನ ನಿಧನದ ನಂತರ ರಾಯಣ್ಣನ ಹೋರಾಟ ತೀವ್ರಗೊಂಡಿರುವುದಾಗಿ ಚಿತ್ರಿಸಿದರೆ ಅ.ನ.ಕೃ ರಾಯಣ್ಣನನ್ನು ಗಲ್ಲಿಗೇರಿಸಿದ ವಿಷಯ ತಿಳಿದ ಚೆನ್ನಮ್ಮ 'ಎಲ್ಲರೂ ಮಡಿದರು. ನಾನೊಬ್ಬಳೇ ಜೀವಂತಳಾಗಿದ್ದೇನೆ. ರಾಯಣ್ಣ ರಾಯಣ್ಣ! ನನ್ನ ಆಸೆಯ ಕೊನೆಯ ಕಿಡಿಯೇ ನೀನು ನಂದಿ ಹೋದೆಯಾ? ಹೋದರು ಎಲ್ಲ ಹೋದರು! ಕಿತ್ತೂರಿನ ಪ್ರಾಣಾಧಿಕರೆಲ್ಲರೂ ದಾಸ್ಯವನ್ನು ಧಿಕ್ಕರಿಸಿ ಹೋದರು. ಚೆನ್ನಮ್ಮ ಇನ್ನೂ ಯಾವ ಭಾಗ್ಯಕ್ಕಾಗಿ ಜೀವ ಹೊತ್ತಿರುವೆ. ಕಿತ್ತೂರೇ ಭಾರತ ವರ್ಷವೇ, ಇಂದು ಚೆನ್ನಮ್ಮನು ತನ್ನ ಬಾಳಿನ ಭರತವಾಕ್ಯ ಹಾಡಲಿದ್ದಾಳೆ. ಆದರಿದು ನಾಳಿನ ಪಲ್ಲವಿಗೆ ಪೀಠಿಕೆ. ಒಬ್ಬ ರಾಯಣ್ಣನ ಸ್ಥಾನದಲ್ಲಿ ನೂರಾರು ರಾಯಣ್ಣಗಳು ಹುಟ್ಟುವರು. ಒಬ್ಬ ಚೆನ್ನಮ್ಮಳ ಬದಲು ಸಾವಿರಾರು ಚೆನ್ನಮ್ಮಗಳು ಹುಟ್ಟುವರು. ಕಿತ್ತೂರು ಬಹುಕಾಲ ಬಂಧನದಲ್ಲಿರಲು ಶಕ್ಯವಿಲ್ಲ. ಈ ಹೋರಾಟ ಸತತವಾಗಿ, ಅವಿಶ್ರಾಂತವಾಗಿ ಸಾಗುವುದು. ಭಾರತ ಸ್ವತಂತ್ರವಾಗುವವರೆಗೆ ಜಗತ್ತಿಗೆ ಶಾಂತಿಯಿಲ್ಲ ಮುಕ್ತಿಯಿಲ್ಲ. ಕಿತ್ತೂರನ್ನು ಭಾರತವನ್ನು ಬಂಧವಿಮುಕ್ತ ಮಾಡಲು ಚೆನ್ನಮ್ಮ ಇಂದು ಈ ಜೀರ್ಣಕಾಯ ತೊರೆದು ಮತ್ತೆ ಮತ್ತೆ ಹುಟ್ಟಿ ಹೋರಾಡುವಳು-ಹೋರಾಡುವಳು. ಕಿತ್ತೂರಿಗೆ ಜಯವಾಗಲಿ, ಕಿತ್ತೂರಿನ ವೀರರು ಅಮರರಾಗಲಿ"[೪] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೧೦೦) ಎಂದು ಕಣ್ಣು ಮುಚ್ಚಿದಳು ಎಂದು ಚಿತ್ರಿಸಿದ್ದಾರೆ.

ವೀರಮ್ಮನನ್ನು ಕುಸುಗಲ್ಲಿಗೆ ಸ್ಥಳಾಂತರಿಸುವ ಸನ್ನಿವೇಶ ಆಕೆಯು ಅದಕ್ಕಾಗಿ ಪಡುವ ಯಾತನೆ ಕರುಣೆ ಉಕ್ಕಿಸುತ್ತದೆ. ತನ್ನ ಗಂಡ ಮಡಿದ ದಿನವೇ ತಾನು ಪ್ರಾಣ ಬಿಟ್ಟಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಇಲ್ಲವೇ ತನ್ನ ಹೊಟ್ಟೆಯಿಂದ ಪುತ್ರರತ್ನವೊಂದು ಜನಿಸಿದ್ದರೆ ತಮ್ಮ ದೇಸ್ಗತಿ ಮುಳುಗುತ್ತಿದ್ದಿಲ್ಲ ಅಂದುಕೊಳ್ಳುತ್ತ "ನೀರು ಇಲ್ಲದ ಮಲ್ಲಿಗೆ ಬೇರು ಒಣಗಿ ಹೋದಂತೆ ತನ್ನ ಸ್ಥಿತಿ" ಎನ್ನುವಳು.

ಸ್ವಾಭಿಮಾನ, ಸ್ವಾತಂತ್ರ್ಯಪ್ರಿಯತೆಯ ಸಂಕೇತವಾಗಿದ್ದ ಕೊಡಗಿನ ಅರಸ ವೀರರಾಜೇಂದ್ರ ಅಪ್ಪಾರಂಡ ಬೋಪು ದಿವಾನನ ಸಲಹೆಗಳನ್ನು ಕೇಳಿ ಬ್ರಿಟೀಷರ ಜೊತೆ ಒಪ್ಪಂದ ಮಾಡಿಕೊಳ್ಳಲು

ಹೋಗಿ ಅವರ ಕೈದಿಯಾದ ಕತೆ ಕೇಳಿದರೆ ಮರುಕವುಂಟಾಗುವುದು. ಇನ್ನೂರು ವರ್ಷಗಳಿಗೂ ಮೇಲ್ಪಟ್ಟು ಆಳಿದ ಕೊಡಗುದೇಶದ ರಾಜಮನೆತನವನ್ನು ಮೂಲೆಗೊತ್ತಿ 'ಗುಲಾಮಗಿರಿಯನ್ನು ಅರಿಯದ ಜನಾಂಗದ ಬಾಹುಗಳಿಗೆ ಅವರು ಬೇಡಿ ತೊಡಿಸಿದರು. ಬಾಯಿಗೆ ಅರಿವೆ ತುರುಕಿಸಿ, ಅಂಗಾತ ಮಲಗಿಸಿ, ಶರೀರದ ಮೇಲೆ ಕರಿಯ ಮುಸುಕೆಳೆದರು'[೫] (ನಿರಂಜನ, ೨೦೦೫, ಕಲ್ಯಾಣಸ್ವಾಮಿ, ಪುಟ-೩೫) ಎಂದು ನಂಜಯ್ಯ ಹೇಳುವಾಗ ಆತನ ಗಂಟಲಿನ ನರಗಳು ಉಬ್ಬಿದವು ಎಂದರೆ ಎಂತಹ ದುಃಖವಾಗಿರಬೇಡ.

ಬಂಧನದಲ್ಲಿದ್ದ ವೀರರಾಜನಿಗೆ ಬ್ರಿಟೀಷ ಅಧಿಕಾರಿಗಳು ಕಾಶೀಯಾತ್ರೆ ಮಾಡಬಹುದೆಂದು ಸೂಚಿಸಿದಾಗ ರಾಜ ಮತ್ತು ಅವನ ಪರಿವಾರ ಹೊರಟು ನಿಲ್ಲುತ್ತದೆ. ಬೀದಿಯುದ್ದಕ್ಕೂ ನಿಂತ ಪ್ರಜೆಗಳು ಕಂಬನಿಗರೆಯುತ್ತಾರೆ. ಶವದ ಮೆರವಣಿಗೆಯಂತೆ ರುದ್ರವೂ ಸಂಕಟವೂ ಆಗಿತ್ತು ಆ ದೃಶ್ಯ. ಕೆದರಿದ ಕೂದಲುಗಳೂ, ತೇವ ತುಂಬಿದ ಕಣ್ಣುಗಳು, ನಿಸ್ತೇಜವಾದ ಮುಖ ನೋಡಿದರೇ ಸಂಕಟವಾಗಿ ಅಳು ರೋಧನವಾಯಿತು. ವೀರರಾಜನೂ ಎಳೆಗರುವಿನಂತೆ ಚೆಟ್ಟಿ, ಕರ್ತು ಹೀಗಾಯಿತಲ್ಲ ಎಂದು ಅಳುವ ದೃಶ್ಯ ಕರುಣೆಯನ್ನು ಉಕ್ಕಿಸುವುದು.

ಕಲ್ಯಾಣಸ್ವಾಮಿಯ ಸೇನೆಯ ಮೇಲೆ ಕುಂಪಣಿ ಸರಕಾರದವರು ಮುತ್ತಿಗೆ ಹಾಕಿ ನೂರಾರು ಜನರನ್ನು ಬಲಿತೆಗೆದುಕೊಳ್ಳುವರಲ್ಲದೆ ಕಲ್ಯಾಣಸ್ವಾಮಿ ಆತನ ಸೇನೆಯ ಮುಖಂಡರಾದ ಬಂಗರಾಜ, ರಾಮಗೌಡ, ಅಣ್ಣೀಗೌಡರನ್ನು ಸೆರೆಮನೆಗೆ ಕಳುಹಿಸಿ ಮರುದಿನ ಕಲ್ಯಾಣಸ್ವಾಮಿ ಮತ್ತು ಬಂಗರಾಜರನ್ನು ಶೂಲಕ್ಕೇರಿಸುವ ಸನ್ನಿವೇಶ ಕರುಣೆ ಉಕ್ಕಿಸುತ್ತದೆ. ದೇಶದ ಸ್ವಾತಂತ್ರ್ಯಗಳಿಸಬೇಕೆನ್ನುವ ಇವರ ಆಸೆ ಆಸೆಯಾಗಿಯೇ ಉಳಿಯುತ್ತದೆ. ಕೊರಳಿಗೆ ಉರುಳು ಹಾಕಿದಾಗ ಕಲ್ಯಾಣಸ್ವಾಮಿ ಮುಷ್ಟಿಗಳನ್ನು ಬಿಗಿ ಹಿಡಿದು ಏನನ್ನೋ ಹೇಳಬೇಕೆನ್ನುವಷ್ಟರಲ್ಲಿಯೇ ಕಾಲಕೆಳಗಿನ ಆಧಾರ ತಪ್ಪಿ ದೇಹ ಕೆಳಕ್ಕೆ ತೂಗಾಡುತ್ತದೆ. ಉರುಲು ಬಿಗಿಯಾಗಿ ಉಸಿರು ಕಟ್ಟಿ ಸಂಕಟದಿಂದ ಚಡಪಡಿಸಿ ತಾಯಿಯ ಸ್ವರ ಕೇಳಿದಂತಾಗಿ ಸ್ವಾತಂತ್ರ್ಯದ ಸೇನೆಗೆ ಜಯವಾಗಲಿ. ಅಮ್ಮ ಎನ್ನುವುದರೊಳಗೆ ಆತನ ಮಾತುಗಳು ಗಾಳಿಯೊಡನೆ ಲೀನವಾಗಿ ಹೋಗುತ್ತವೆ. ಈ ಸನ್ನಿವೇಶ ಕರುಣಾಜನಕವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಗಿರಿಜಾಳಿಗೆ ಎಲ್ಲ ವಿಷಯ ತಿಳಿದಿದ್ದರೂ ಸಹ ತನ್ನ ಹೊಟ್ಟೆಯಲ್ಲಿನ ಮಗುವಿಗೋಸ್ಕರ ಬದುಕುತ್ತಾಳೆ. ತನ್ನ ಅತ್ತೆಗೆ ತಿಳಿಯದಂತೆ ಗಂಡ ಬರುವ ಹಾದಿಯನ್ನೇ ಕಾಯುತ್ತ ಕುಳಿತಿರುವಂತೆ ಕುಳಿತು ಅತ್ತೆಗೆ ಸಮಾಧಾನ ಹೇಳುವ ಆಕೆಯ ಗುಣ ಮನಮಿಡಿಯುತ್ತದೆ.

ಕೊಡಗಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ವಾಮಿ ಅಪರಂಪಾರ ಹೆಸರಿನ ವೀರಪ್ಪಾಜಿ ಇಂಗ್ಲೀಷರ ಕೈಗೆ ಸಿಕ್ಕು ಸೆರೆಮನೆವಾಸ ಅನುಭವಿಸಬೇಕಾಗುತ್ತದೆ. ಈತನ ಎರಡು ಕಣ್ಣುಗಳನ್ನು ಕೀಳಬೇಕೆಂದು ಆಜ್ಞೆಯಿತ್ತಾಗ ಈಟಿಯಿಂದ ಈತನ ಕಣ್ಣುಗಳನ್ನು ಕೀಳುವ ಚಿತ್ರಣ ಎಂತಹ ಕಲ್ಲು ಹೃದಯವೂ ಕರಗಿ ಕಂಬನಿ ತರಿಸುತ್ತವೆ.

ಭಾಸ್ಕರರಾಯ ಪಲಾಯನಗೈಯ್ಯುವ ಉದ್ದೇಶದಿಂದ ತಾಯಿ ಮತ್ತು ಪತ್ನಿಯನ್ನು ಭೇಟಿಯಾಗಿ ತಮ್ಮ ಮಾರ್ಗವನ್ನು ತಾವೇ ನೋಡಿಕೊಳ್ಳಬೇಕೆಂದಾಗ ನೊಂದ ಪತ್ನಿ ಸಾವಿತ್ರಿಬಾಯಿ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಯಮುನಾಬಾಯಿ ತನ್ನ ದುಃಖವನ್ನು ನುಂಗಿಕೊಳ್ಳುತ್ತಾಳೆ. ‘ಅಯ್ಯೋ ದೇವರೇ, ವೆಂಕಟೇಶಾ, ಎಂಥಾ ಹೊತ್ತು ತಂದೆಯಪ್ಪಾ! ನಾನೇನು ತಪ್ಪು ಮಾಡಿದ್ದೆ? ಪೂರ್ವಜನ್ಮದಲ್ಲಿ ನಾನಾವ ಅಪರಾಧ ಮಾಡಿದ್ದೆನೆಂದು ನನಗೀಗ ಈ ಶಿಕ್ಷೆ?’[೬] (ಬಸವರಾಜ ಕಟ್ಟೀಮನಿ, ೧೯೬೯, ನರಗುಂದ ಬಂಡಾಯ ಪುಟ-೧೩೭) ಎಂದು ಹಲಬುವ ಸನ್ನಿವೇಶ ಪತಿಯ ಪಾದಗಳ ಮೇಲೆರಗಿ ನನ್ನನ್ನು ಹೀಗೆ ಬಿಟ್ಟು ಹೋಗಬೇಡಿರಿ. ನಿಮ್ಮ ಕೈಯಿಂದಲೇ ನನ್ನನ್ನು ಕೊಂದು ಹೋಗಿರಿ ಎನ್ನುವ ರೀತಿ ಕರುಣೆ ಉಕ್ಕಿಸುತ್ತದೆ.

ಚಿರಸ್ಮರಣೆ ಕಾದಂಬರಿಯಲ್ಲಿನ ಕಯ್ಯೂರಿನಲ್ಲಿ ರೈತ ಸಂಘದ ಸ್ವಯಂ ಸೇವಕರ ಮೇಲೆ, ರೈತರ ಮೇಲೆ ಪೋಲೀಸನವರು ನಡೆಸಿದ ದೌರ್ಜನ್ಯ, ದರ್ಪದ ನಡವಳಿಕೆಯ ಮೇಲೆ ಆಕ್ರೋಶ ಉಕ್ಕಿ ಬರುತ್ತದೆ. ಉರಿಯುವ ಸಿಗರೇಟನ್ನು ಮೂಗಿಗೆ ತುರುಕುವುದು, ಉಗುರುಗಳಿಗೆ ಸೂಜಿ ಚುಚ್ಚುವುದು, ಕೈಕಾಲು ಬಿಗಿದು ಬಾಯಿಗೆ ಹೊಲಸನ್ನು ಸುರಿಯುವುದು, ಹೆಂಗಸರ ಮಾನಭಂಗ ಮಾಡುವುದು ಈ ತೆರನಾಗಿ ಅಮಾನುಷವಾಗಿ ನಡೆದುಕೊಳ್ಳುವುದು ಕರುಣಾಜನಕ ದೃಶ್ಯವಾಗಿರುವುದು.

ಪೋಲೀಸ್ ಕೊಲೆಯ ಅಪರಾಧಕ್ಕಾಗಿ ಅಪ್ಪು, ಚಿರಕುಂಡ, ಕುಞಂಬು, ಅಬೂಬಕರ ಇವರಿಗೆ ಮರಣದಂಡನೆ ಶಿಕ್ಷೆಯಾದಾಗ ಈ ನಾಲ್ವರು ವೀರರು ಒಬ್ಬರು ಇನ್ನೊಬ್ಬರ ಕೈಹಿಡಿದು ನಗುತ್ತಲೇ ಗಲ್ಲಿಗೇರೋಣ ಎನ್ನುವ ಅಪ್ಪು, ತಾಯಿಯನ್ನು ಅಳಬೇಡಮ್ಮಾ ಎಂದು ಸಮಾಧಾನಪಡಿಸುವ ಚಿರಕುಂಡ, ಕುಞಂಬು, ಅಬೂಬಕರ್ ಎಲ್ಲರೂ ತಮ್ಮ ಮನೆಯವರನ್ನೆಲ್ಲ ಸಂತೈಸುವ ಸನ್ನಿವೇಶಗಳು ಮನಮಿಡಿಯುತ್ತವೆ. “ಸಾಮ್ರಾಜ್ಯಶಾಹಿ ನಾಶವಾಗಲಿ; ಕ್ರಾಂತಿಗೆ ಜಯವಾಗಲಿ” ಎನ್ನುತ್ತಿರುವಾಗಲೇ ನೇಣುಬಿಗಿದು ಸ್ವರ ನಿಲ್ಲುವುದು ಈ ಸನ್ನಿವೇಶ ಓದುಗರಲ್ಲಿ ಕರುಣೆ ಉಕ್ಕಿಸುತ್ತದೆ.

'ಸ್ವಾತಂತ್ರ್ಯದೆಡೆಗೆ' ಕಾದಂಬರಿಯಲ್ಲಿ ಬೆಳಗಾವಿಯ ಕೊಳಗೇರಿಯಲ್ಲಿ ವಾಸಮಾಡುವ ಬಡಜನರ ಧಾರುಣ ಚಿತ್ರಣ ಹಾಗೂ ಈ ಕಾದಂಬರಿಯಲ್ಲಿ ಬರುವ ಭಾಗೀರಥವ್ವನ ಕಥೆಯೂ ಕೂಡ ಕರುಣಾಜನಕವಾದದ್ದು. ಈಕೆಯ ಗಂಡ ಸತ್ತಾಗ ಮಕ್ಕಳಿನ್ನೂ ಇರಲಿಲ್ಲ. ಗಂಡನ ಮಣ್ಣು ಮಾಡಲು ಇರುವ ತಾಳಿಯೊಂದನ್ನು ಸಹ ಮಾರುತ್ತಾಳೆ. ತನ್ನ ಜೀವನ ನಿರ್ವಹಣೆಗಾಗಿ ಗಿರಣಿಯೊಳಗೆ ಕೆಲಸಕ್ಕೆ ಸೇರುತ್ತಾಳೆ. ಆದರೆ ಅಲ್ಲಿನ ಮ್ಯಾನೇಜರ್ ದುಡ್ಡಿನಾಸೆ ತೋರಿಸಿ, ಪುಸಲಾಯಿಸಿ ಒಂದು ಮಗು ಕೊಡುವನು. ತದನಂತರ ಈಕೆಯನ್ನು ಕೆಲಸದಿಂದ ತೆಗೆದು ಹೊರ ಹಾಕುವನು. ಸಣ್ಣ ಕೂಸನ್ನು ಕಟ್ಟಿಕೊಂಡು ಶ್ರೀಮಂತರ ಮನೆಗೆ ಮುಸುರಿ ತಿಕ್ಕಲು ಹೋಗಿ ಎರಡನೆಯ ಮಗುವನ್ನು ಪಡೆದುಕೊಳ್ಳುವಳು. ಶ್ರೀಮಂತರ ದೌರ್ಜನ್ಯಕ್ಕೆ ಒಬ್ಬ ಅಸಹಾಯಕ ಹೆಣ್ಣು ಬಲಿಪಶುವಾದ ಕಥೆ ಎಂತವರ ಮನಸ್ಸಿಗೂ ನೋವನ್ನುಂಟು ಮಾಡುತ್ತದೆ.

ನಿರಂಜನರ 'ಮೃತ್ಯುಂಜಯ' ಕಾದಂಬರಿಯಲ್ಲಿ ನೀರಾನೆ ಪ್ರಾಂತದ ನಾಯಕ ಮೆನೆಪ್‌ಟಾ ತಮ್ಮ ಜನಾಂಗಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಕೇಳಲಾಗಿ ಪೆರೋ ನ್ಯಾಯಾನ್ಯಾಯವನ್ನು ನೋಡದೆ ಆತನಿಗೆ ಶಿರಚ್ಛೇದನದ ಶಿಕ್ಷೆ ವಿಧಿಸುವನು. ಆತನ ದೇಹವನ್ನು ಹದಿನಾಲ್ಕು ಭಾಗ ಮಾಡಿಸುವನು. ನ್ಯಾಯ ಕೇಳಲು ಹೋದ ಮೆನೆಪ್‌ಟಾನ ಸ್ಥಿತಿ ಎಂಥವರಿಗೂ ಕರುಣೆ ಉಕ್ಕಿಸುವುದು. ಆತನ ಪತ್ನಿ ನೆಫಿಸ್ ತುಂಬು ಗರ್ಭಿಣಿಯಾಗಿದ್ದು ಛಿದ್ರ ಛಿದ್ರವಾದ ಪತಿಯ ಶವವನ್ನು ನೋಡಿದಾಗ ಅರೆಪ್ರಜ್ಞಾಸ್ಥಿತಿಗೆ ಹೋಗುವಳು. ಅಳು ಒತ್ತರಿಸಿ ಬರುತ್ತಿದ್ದ ಗಂಟಲುಗಳನ್ನು ಹತ್ತಿಕ್ಕಿಟ್ಟುಕೊಂಡು ನೆರೆದವರೆಲ್ಲರೂ ಪ್ರಜ್ಞೆ ತಪ್ಪಿ ಬಿದ್ದಿದ್ದ ನೆಫಿಸ್‌ಳನ್ನು ಉಪಚರಿಸುವರು.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಪ್ರಗತಿಶೀಲರ ಐತಿಹಾಸಿಕ ಕಾದಂಬರಿಗಳಿಗೆ ಸಂಬಂಧಿಸಿದಂತೆ ಜೀವನ ಮೌಲ್ಯಗಳಾದ ವೀರ, ತ್ಯಾಗ, ಪ್ರೇಮ, ಕರುಣೆಯ ವಿಚಾರಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಲಾಗಿದ್ದು ಅವುಗಳನ್ನು ಕುರಿತು ಸಮಗ್ರವಾಗಿ ನೋಡಲಾಗಿದೆ.

ಅಧ್ಯಾಯ ೫

ಪ್ರಗತಿಶೀಲ ಕಾದಂಬರಿಗಳಲ್ಲಿ ಧಾರ್ಮಿಕ ಪುನರ್‌ಲೇಖ

೧. ಮಠಾಧೀಶರ ಪ್ರಭಾವ

೨. ಹಬ್ಬಗಳ ಆಚರಣೆ

ಅಧ್ಯಾಯ ೫

ಪ್ರಗತಿಶೀಲ ಕಾದಂಬರಿಗಳಲ್ಲಿ ಧಾರ್ಮಿಕ ಪುನರ್‌ಲೇಖ

ನಮ್ಮ ದೇಶದಲ್ಲಿ ರಾಜ್ಯಕ್ರಾಂತಿಗಳು ಜನತೆಯ ಮೇಲೆ ಅಷ್ಟೊಂದು ಪರಿಣಾಮವನ್ನುಂಟು ಮಾಡಿಲ್ಲ. ಅಂದರೆ ರಾಜ್ಯಕ್ರಾಂತಿಗಳ ಪರಿಣಾಮಗಳಿಂದ ಸಾಹಿತ್ಯಕ್ಷೇತ್ರವು ಕದಡಿಲ್ಲ. ಆದರೆ ಇದು ಧರ್ಮಕ್ರಾಂತಿಯ ವೀರಭೂಮಿ. ಜೈನ, ವೀರಶೈವ (ಲಿಂಗಾಯತ), ಶಂಕರ, ರಾಮಾನುಜ, ಮಧ್ವರಿಂದ ಮತಗಳ ಕ್ರಾಂತಿಗಳು ಎಡಬಿಡದೆ ನಡೆದವು. ಧರ್ಮಕ್ರಾಂತಿಗೆ ಸಾಮಾನ್ಯ ಜನರ ಮನಸ್ಸೇ ಸಾಧನ. ಆದುದರಿಂದ ಈ ಧರ್ಮಕ್ರಾಂತಿಗಳ ಪರಿಣಾಮವು ಸಾಹಿತ್ಯದ ಮೇಲೆ ಆಗುವುದು ಸ್ವಾಭಾವಿಕ.

ಧರ್ಮ ಎಂದರೇನು? ಎಂದು ಕಾಲಕಾಲಕ್ಕೆ ಸಾಧಕರು, ಜಿಜ್ಞಾಸುಗಳು ಕೇಳುತ್ತಾ ಬಂದಿದ್ದಾರೆ. ಉಪನಿಷತ್ತಿನ ಋಷಿಗಳು, ಒಡಂಬಡಿಕೆಗಳು, ಪ್ರವಾದಿಗಳು, ಖುರಾನಿನ ಖಲೀಫರು ಈ ಪ್ರಶ್ನೆ ಬಿಡಿಸಲು ಪ್ರಯತ್ನಿಸಿದ್ದಾರೆ. ತಿಳಿದವರು ಸಾಕಷ್ಟು ಗ್ರಂಥಗಳನ್ನು ಬರೆದಿದ್ದಾರೆ. ಆದರೆ ಇಂದಿಗೂ ಈ ಪ್ರಶ್ನೆ ನಿತ್ಯ ನೂತನವಾಗಿ ಸಜೀವವಾಗಿದೆ. ನಾವು ಧರ್ಮ ಎಂದರೇನು? ಧರ್ಮದ ನೆಲೆಗಳಾವವು? ಎಂಬುದನ್ನು ಅರಿಯಲು ನಮ್ಮ ಶಕ್ತ್ಯಾನುಸಾರ ವಿಚಾರ ಮಾಡುತ್ತೇವೆ. ಧರ್ಮದ ಅಡಿಗಲ್ಲಿನ ಮೇಲೆ ನಮ್ಮ ರಾಷ್ಟ್ರ ನಿಂತಿದೆ. ಧರ್ಮಕ್ಕೆ ಚ್ಯುತಿ ಬಂದರೆ ರಾಷ್ಟ್ರ ಹಾಳಾಗುತ್ತದೆ. ರಾಷ್ಟ್ರದ ಪತನದೊಂದಿಗೆ ಶೀಲ ಪತನವಾಗುತ್ತದೆ. 'ಧರ್ಮಾಚರಣೆಯೇ ಧರ್ಮರಕ್ಷಣೆಯ ರಾಜಮಾರ್ಗ. ಉಪದೇಶ ಪ್ರಸಾರಗಳಿಂದಾಗಲಿ, ಸೈನ್ಯ ಬಲದಿಂದಾಗಲಿ ಧರ್ಮ ರಕ್ಷಣೆ ಮಾಡಲು ಸಾಧ್ಯವಿಲ್ಲ. ಧರ್ಮ ರಾಷ್ಟ್ರದ ಮೈಗೂಡಬೇಕು. ವ್ಯಕ್ತಿಯ ಬಾಳಿನ ಉಸಿರಾಗಬೇಕು.'[೧] (ಕೃಷ್ಣರಾಯ ಶಾ.ಮಂ(ಸಂ), ೨೦೦೮, ಪುಟ-೨೧೫)

ಧರ್ಮ ಮಾನವನ ಎಲ್ಲ ಸಮಸ್ಯೆಗಳಿಗೆ ಸಂಕಷ್ಟಗಳಿಗೆ ಪರಿಹಾರವನ್ನು ಕೊಡಬಲ್ಲ ದುಃಖದಿಂದ ಪಾರು ಮಾಡಬಲ್ಲ ಸಾಧನೆಯಲ್ಲ. ಧರ್ಮ ಎನ್ನುವುದು ನಿರಂತರ ಕ್ರಿಯೆ, ಶೋಧನೆ ಎನ್ನಬಹುದು. ಧರ್ಮ ನುಡಿಯಲ್ಲ ನಡೆ, ಮಾತಲ್ಲ ಕೃತಿ, ಒಂದು ಸಂಸ್ಕೃತಿ ಎಂಬುದು ಸರ್ವಕಾಲಿಕ ಸತ್ಯ. ಮೌಲ್ಯಗಳ ಅನುಷ್ಠಾನವೇ ಧರ್ಮದ ತಿರುಳು. ಧರ್ಮ ಕಾಲಾತೀತ, ಧರ್ಮಪ್ರಜ್ಞೆ ಎನ್ನುವುದು ಒಂದು ಬೆಳಕಾಗಿದ್ದು ಅದು ಕತ್ತಲೆಯಿಂದ ಬೆಳಕಿಗೆ ಅಸತ್ಯದಿಂದ ಸತ್ಯದೆಡೆಗೆ ಕೈಹಿಡಿದು ನಡೆಸುವ ಚೈತನ್ಯ ಶಕ್ತಿಯಾಗಿರುವುದು ಧರ್ಮವೆಂದರೆ ಬದುಕಿನ ರೀತಿ. ಅಂದರೆ ವ್ಯಕ್ತಿಯೊಬ್ಬ ತಾನು ಒಪ್ಪಿಕೊಂಡು ಅನುಸರಿಸಬಯಸುವ ಜೀವನದ ರೀತಿ-ನೀತಿ ಮತ್ತು ಉತ್ತಮವಾದ ಚಿಂತನೆಗಳು.

ಇವೆಲ್ಲವನ್ನು ಒಳಗೊಂಡ ಆತನ ಸಮಗ್ರ ಬದುಕು. 'ಧರ್ಮ ಶಬ್ದ ಸಂಸ್ಕೃತದ್ದು ಧಾರಯತೀ ಧರ್ಮ. ಧರಿಸುವುದು ಧರ್ಮ. ನಮ್ಮ ಮೈಮೇಲೆ ನಾವು ಬಟ್ಟೆ ಧರಿಸಿದಂತೆ ನಮ್ಮ ಬದುಕನ್ನು ಧರಿಸುವುದು ಧರ್ಮ. ಧರ್ಮದಿಂದ ಬದುಕು ಉಳಿದಿದೆ. ಧರ್ಮದ ಇನ್ನೊಂದು ಅರ್ಥ ಪೋಷಿಸುವುದು. ಗಿಡಕ್ಕೆ ಮಣ್ಣು ಗೊಬ್ಬರ ನೀರು ಕೊಟ್ಟಂತೆ ಬದುಕಿಗೆ ಧರ್ಮ ಪೋಷಿಸುವುದು'[೨] (ಸಂಗನಾಳಮಠ ಯು.ಎನ್, ೨೦೧೧, ಪುಟ-೩೭) "'ಧರ್ಮದ ತಳಹದಿಯಿಲ್ಲದ ರಾಜಕೀಯ ಕುರುಡು. ರಾಜಕೀಯವಿಲ್ಲದ ಧರ್ಮ ಕುಂಟು" ಎನ್ನುವಂತೆ ಧರ್ಮದ ಧಮನವಾದರೆ ದೇಶ ಅಧೋಗತಿಗಿಳಿಯುತ್ತದೆ ಆಗ ಧರ್ಮ ಸೊರಗುತ್ತದೆ. ಅದಕ್ಕೆ ಆದರ್ಶ ಜೀವನ ನಮ್ಮದಾದಲ್ಲಿ ಆ ಧರ್ಮ ನಮ್ಮನ್ನು ಕಾಯುತ್ತದೆ. ಆದರ್ಶಗಳನ್ನು ಬಲಿಗೊಟ್ಟರೆ ಧರ್ಮವೇ ನಮ್ಮನ್ನೂ ತುಳಿಯುತ್ತದೆ. ಆದ್ದರಿಂದ ರಾಜಕೀಯ ನಾಯಕರು ಧರ್ಮವನ್ನು ರಾಜಕೀಯದಿಂದ ದೂರ ಇಡುವುದನ್ನಾಗಲಿ, ಮಠಾಧೀಶರು ರಾಜಕಾರಣಿಗಳು ಧರ್ಮದ ವಿಷಯದಲ್ಲಿ ತಲೆ ಹಾಕಬಾರದು ಎನ್ನುವುದಾಗಲಿ ಮರಳಿನ ಮೇಲೆ ಮನೆ ಕಟ್ಟಿದಂತೆ.'[೩] (ಸಂಗನಾಳಮಠ ಯು.ಎನ್, ೨೦೧೧, ಪುಟ-೪೨) ಹರ್ಬರ್ಟ್ ಸ್ಪೆನ್ಸ್‌ರ ಧರ್ಮದ ವಿಚಾರವಾಗಿ ಹೇಳುತ್ತ ಧರ್ಮ ಎಂದರೆ "'ಇತಿಹಾಸದ ಉದ್ದ ನೂಲನ್ನು ಎಲ್ಲಾ ಕಡೆಗಳಲ್ಲೂ ಹಾದು ಹೋಗುವ ಅಡ್ಡನೂಲು" ಎಂದಿರುವರು. ಇದು ಪ್ರತಿಯೊಂದು ಸಮಾಜಕ್ಕೂ ಅನ್ವಯಿಸುತ್ತದೆ. ಭಾರತಕ್ಕೂ ಆದರೆ ಭಾರತದಲ್ಲಿ ಧರ್ಮ ಇತಿಹಾಸದ ಉದ್ದ ನೂಲನ್ನು ಎಲ್ಲಾ ಕಡೆಗಳಲ್ಲೂ ಹಾದುಹೋಗುವುದಕ್ಕಷ್ಟೇ ಸೀಮಿತವಾಗಿಲ್ಲ. ಅದು ಹಿಂದೂ ಮನೋವೃತ್ತಿಯ ಉದ್ದನೂಲು ಹಾಗೂ ಅಡ್ಡನೂಲು ಎರಡೂ ಆಗಿದೆ'[೪] (ಅಂಬೇಡ್ಕರ್ ಬಿ.ಆರ್, ೨೦೧೭, ಪುಟ-೪೫) ಎಂದು ಅಂಬೇಡ್ಕರ್ ಹಿಂದೂ ಧರ್ಮದ ತತ್ವದ ಕುರಿತು ಪ್ರಸ್ತಾಪಿಸುತ್ತಾರೆ.

ಪ್ರಗತಿಶೀಲ ಕಾದಂಬರಿಕಾರರು ಬರೆದ ಐತಿಹಾಸಿಕ ಕಾದಂಬರಿಗಳನ್ನು ಅವಲೋಕಿಸಿದಾಗ ಪ್ರತಿಯೊಬ್ಬ ದೊರೆಯೂ ಪರಧರ್ಮ ಸಹಿಷ್ಣುಗಳಾಗಿ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುತ್ತಾ ಪ್ರಜೆಗಳೊಂದಿಗೆ ಅನ್ಯೋನ್ಯತೆಯಿಂದ ಬಾಳುವುದನ್ನು ಕಾಣುತ್ತೇವೆ. ಹಾಗೆಯೇ ಆ ರಾಜ್ಯದಲ್ಲಿ ವಾಸಮಾಡುವ ಪ್ರಜೆಗಳೂ ಸಹ ತಾವು ಯಾವ ಧರ್ಮದವರಾಗಿದ್ದರೂ ಸಹ ಮತ್ತೊಂದು ಧರ್ಮವನ್ನು ಕೀಳಾಗಿ ಕಾಣದೇ ಎಲ್ಲ ಧರ್ಮದ ಜನರೊಂದಿಗೆ ಭಾವೈಕ್ಯತೆಯಿಂದ ಬಾಳುವುದನ್ನು ಕಾಣುತ್ತೇವೆ.

ಹಿಂದೂ ಮುಸ್ಲಿಂರು ವಿಜಯನಗರದ ಅರಸರ ಕಾಲಕ್ಕೆ ಹೇಗಿದ್ದರೆಂಬುದನ್ನು ಅಲ್ಲಿಯ ಮುಸ್ಲಿಂರು ಆಡುವ ಮಾತುಗಳನ್ನು ನೋಡಬಹುದು. ವಾಲಿ ಮಹಮ್ಮದನಿಗೆ ಮೌಲ್ವಿ ಸಾಹೇಬರು ಹೇಳುವರು. ಜಾತಿ ದ್ವೇಷಕ್ಕಾಗಲಿ, ಮತಕಲಹಗಳಿಗಾಗಲಿ ನಮ್ಮ ರಾಜ್ಯದಲ್ಲಿ ಅವಕಾಶವೇ ಇಲ್ಲ.

ನಾವೂ ಹಿಂದೂಗಳು ಅಣ್ಣ ತಮ್ಮಂದಿರಂತೆ ಬಾಳ್ವೆ ಮಾಡುತ್ತ ಬಂದಿದ್ದೇವೆ. ನಮ್ಮ ಮೊಹರಂ ಹಬ್ಬದಲ್ಲಿ ಹಿಂದೂಗಳು ವೇಷ ಹಾಕಿದರೆ ಅವರ ಗಣಪತಿ ಹಬ್ಬದಲ್ಲಿ ನಮ್ಮ ಜನ ವೇಷ ಹಾಕುತ್ತಾರೆ. ನಾವಿಬ್ಬರೂ ಸೇರಿ ನವರಾತ್ರಿ ಮಹೋತ್ಸವವನ್ನು ವೈಭವದಿಂದ ಆಚರಿಸುತ್ತೇವೆ. ಕೆಲವು ಸಾರಿ ರಾಜನಾದವನು ಸರ್ವಧರ್ಮವನ್ನು ಸಮಾನತೆಯಿಂದ ಕಂಡರೂ ಕೂಡ ಅಲ್ಪರು ತಮ್ಮ ಅಲ್ಪ ಬುದ್ಧಿಯಿಂದ ಧರ್ಮದ ಹೆಸರಿನಲ್ಲಿ ಕಲಹಗಳನ್ನೆಬ್ಬಿಸಿದಾಗ ರಾಜನಾದವನು ಆ ಕಲಹಗಳನ್ನು ಬಗೆಹರಿಸುತ್ತಿದ್ದನು.

ಕಿತ್ತೂರಿನ ಅರಸರು ವೀರಶೈವ (ಲಿಂಗಾಯತ) ಧರ್ಮದವರಾಗಿದ್ದರೂ ಅವರ ನಾಡಿನಲ್ಲಿ ಎಲ್ಲ ಧರ್ಮದವರನ್ನು ಸಮಾನತೆಯಿಂದ ನೋಡಿಕೊಳ್ಳುತ್ತಿದ್ದರು. ಅಮಟೂರಿನ ಸೈದನ್ ಸಾಹೇಬ ಕಿತ್ತೂರಿನಲ್ಲಿರುವ ಮಸೀದಿಯ ಜೀರ್ಣೋದ್ಧಾರಕ್ಕೆ ರಾಣಿ ಚೆನ್ನಮ್ಮಳ ಹತ್ತಿರ ಹೋಗಿ ಸಹಾಯ ಕೇಳಿದಾಗ ಅವರು ತಮ್ಮ ಖಾಸಾ ಬೊಕ್ಕಸದಿಂದ ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಸೈದನ್ ಸಾಹೇಬನ ಕೈಗಿತ್ತು ಗುಡಿಗಳಲ್ಲಿ, ಬಸದಿಗಳಲ್ಲಿ, ಇಗರ್ಜಿಗಳಲ್ಲಿ ಪೂಜೆ ಸಲ್ಲಿಸಿಕೊಳ್ಳುವ ಭಗವಂತನೇ ಮಸೀದಿಗಳಲ್ಲಿಯೂ ಪೂಜೆ ಸಲ್ಲಿಸಿಕೊಳ್ಳುತ್ತಾನೆ. ಯಾರು ಯಾವ ಹೆಸರಿನಲ್ಲಿ ಕರೆದರೂ ಅದೇ ಭಗವಂತನೇ ಅಲ್ಲವೇ ಎಂಬ ಮಾತುಗಳನ್ನಾಡಿದಾಗ ರಾಣಿಯವರ ಉದಾರ ದೃಷ್ಟಿ ಮುಸ್ಲಿಂ ಜನಾಂಗಕ್ಕೆ ತೃಪ್ತಿಯನ್ನುಂಟು ಮಾಡಿ ರಾಣಿಯ ಬಗ್ಗೆ ಗೌರವ ಭಾವನೆ ಹೆಚ್ಚುವುದರ ಜೊತೆಗೆ ಆಕೆಯಲ್ಲಿರುವ ಧರ್ಮ ಸಮನ್ವತೆಯ ಗುಣವನ್ನು ಕೊಂಡಾಡುತ್ತಾರೆ.

೫.೧ ಮಠಾಧೀಶರ ಪ್ರಭಾವ :

'ಮಠ' ಎಂಬ ಪದವು ಮೂಲತಃ ಸಂಸ್ಕೃತ ಪದವಾಗಿದ್ದು, ಕನ್ನಡಕ್ಕೆ ಎತ್ತಿಕೊಳ್ಳಲಾಗಿದೆ. ಶ್ರೀ ರಾಜಾರಾಧಾ ಕಾಂತದೇವ ಅವರು 'ಶಬ್ದಕಲ್ಪಧ್ರುಮ'ದ ಮೂರನೇ ಸಂಪುಟದಲ್ಲಿ ಈ ಪದದ ಅರ್ಥವಿವರಣೆಯನ್ನು ಹೀಗೆ ಹೇಳಿದ್ದಾರೆ. 'ಮಠ (ಮಠತಿ) ಅಂದರೆ 'ವಾಸಿಸು', 'ವಾಸಮಾಡು' ಎಂದಿದೆ. 'ಮಠ ಚಾತ್ರಾದಿ ನಿಲಯ ಇತಿ ಅಮರ' ಛಾತ್ರಾದಿಗಳ ನಿಲಯವನ್ನು ಮಠವೆಂದು ಕರೆಯಲಾಗಿದೆ. 'ಛಾತ್ರ' ಎಂದರೆ 'ಶಿಷ್ಯ' ಅಥವಾ 'ವಿದ್ಯಾರ್ಥಿ' ಎಂದರ್ಥ. ಆದುದರಿಂದ ಅಮರಕೋಶದ ಪ್ರಕಾರ ಛಾತ್ರಾದಿಗಳು ವಾಸಿಸುವ ನಿಲಯಗಳೇ ಮಠಗಳು. ನಿಲಯವೆಂದರೆ ವಾಸ ಮಾಡುವ ಸ್ಥಳ. ಇಂಥ ನಿಲಯಕ್ಕೆ ಮಠವೆಂದು ಹೆಸರು.'[೫] (ಗಂಗಾಧರ ನಿಂಬಾಳ ಎನ್, ೨೦೧೫, ಪುಟ–೧೩) ಮಠಾಧೀಶರು ಮಠಗಳನ್ನು ಕಟ್ಟಿ ಅದರಲ್ಲಿ ತಾವು ವಾಸಿಸುತ್ತ ಧರ್ಮಜಾಗೃತಿಯ ಸಂದೇಶವನ್ನು ಬಿತ್ತುತ್ತ ಜನತೆ ಜಾತಿ ಭೇದ, ಮೇಲು ಕೀಳೆಂಬ ಭೇದ ಭಾವಗಳಿಲ್ಲದೆ ಪರಸ್ಪರ ಸಹಮತ ಅನ್ಯೋನ್ಯತೆಯಿಂದ ಬಾಳುವಂತೆ ಸನ್ಮಾರ್ಗವನ್ನು ತೋರಿಸುವ ಕೆಲಸವನ್ನು ಈ

ಮಠಮಾನ್ಯಗಳು ಮಾಡುತ್ತವೆ. 'ಕಲ್ಲಿನಿಂದ ಮಠಗಳು ಆಗುವುದಿಲ್ಲಾ, ಮಠ ಆಗುವುದು ನಮ್ಮ ಹೃದಯದಿಂದ. ಮಠಗಳ ಮೂಲ ಉದ್ದೇಶ ಊರೊಟ್ಟಿಗಿನ ಸಾಂಸ್ಕೃತಿಕ ಕೇಂದ್ರ, ಅದಕ್ಕೆಂದೆ ಹಿಂದಿನ ಹಿರಿಯರು, ರಾಜರು ಪಾಳೆಯಗಾರರು ತಮ್ಮ ಸಂಪತ್ತಿನಿಂದ ಬೃಹತ್ತಾದ ದೇವಾಲಯ ಮಠಗಳನ್ನು ನಿರ್ಮಿಸಿದರು. ಮಠಗಳಿರುವುದು ಸ್ವಾಮಿಗಳ ಪ್ರತಿಷ್ಠೆಗಲ್ಲ. ಸಮಷ್ಠಿಯ ಒಳಿತಿಗಾಗಿ. ಇಲ್ಲಿನ ಮಠ ಕರ್ಮಠವಾಗಬಾರದು. ಅರ್ಪಿತ ಭಾವದಿಂದ ಅಹಮ್ಮಿಕೆಯನ್ನು ಕಳೆದುಕೊಳ್ಳುವ ಕ್ರಿಯಾ ಸಂಪನ್ನತೆಗೆ ಸಾಧುವಾಗಬೇಕು. ಈ ದೃಷ್ಟಿಯಿಂದ ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯದ ಪೋಷಣೆಯಲ್ಲಿ ಮಠಮಾನ್ಯಗಳ ಪಾತ್ರ ಜೀವಂತ ಸಾಕ್ಷಿಯಾಗಿವೆ' (ರಾಜಶೇಖರ ಇಚ್ಚಂಗಿ, ೨೦೦೩, ಪುಟ-೧೨೦) ಎಂಬ ವಿಚಾರಗಳನ್ನು ಡಾ.ಕೆ.ರವೀಂದ್ರನಾಥರ 'ಮಠಮಾನ್ಯಗಳು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ' ಎಂಬ ಕೃತಿಯಲ್ಲಿನ ವಿಚಾರಗಳನ್ನು ರಾಜಶೇಖರ ಇಚ್ಚಂಗಿಯವರು 'ಸಂಸ್ಕೃತಿ ಶೋಧ' ಎಂಬ ಕೃತಿಯಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

ಭಾರತೀಯ ಧರ್ಮ, ಸಂಸ್ಕೃತಿ ಮತ್ತು ಜನಜೀವನಕ್ಕೆ ಪ್ರಾಣಾಂತಿಕವಾದ ಅಪಾಯವು ಬಂದಾಗ ಸರ್ವವೂ ನಾಶವಾಗಿ ಬಿಡುತ್ತದೆಯೇನೋ ಎಂಬ ಭೀತಿ, ಕಳವಳ ಮೂಡಿದಾಗ, ಅತ್ಯಂತ ವಿಪನ್ನಾವಸ್ಥೆಯಲ್ಲಿ ದೇಶವು ಸಿಲುಕಿ ಸಂಕಟದಲ್ಲಿದ್ದಾಗ ಇಂತಹ ನಿರ್ಣಾಯಕವಾದ ಐತಿಹಾಸಿಕ ಘಟ್ಟದಲ್ಲಿ ಮಹಾಪುರುಷರು ಅವತಾರ ಮಾಡಿ ಧರ್ಮ ಸಂಸ್ಕೃತಿ ಜನಜೀವನವನ್ನು ರಕ್ಷಿಸಿ, ಉದ್ಧರಿಸಿ ಪ್ರಾಣಾಪಾಯದಿಂದ ಪಾರು ಮಾಡುತ್ತಾರೆಯಷ್ಟೇ. ಅಂತಹ ಅಪಾಯಕಾರಿ ಘಟ್ಟವೊಂದು ನಮ್ಮ ಭರತಖಂಡಕ್ಕೆ ೧೩-೧೪ನೇ ಶತಮಾನಗಳಲ್ಲಿ ಬಂದಾಗ ಧರ್ಮ, ಸಂಸ್ಕೃತಿ, ಜನಜೀವನವನ್ನು ಪ್ರಾಣಾಂತಿಕವಾದ ಗಂಡಾಂತರದಿಂದ ಪಾರುಮಾಡಿ ಉದ್ಧರಿಸಿದ ಯುಗಾವತಾರಿಯೇ ಶ್ರೀ ವಿದ್ಯಾರಣ್ಯರು.

೩.೧.೧ ಶ್ರೀ ವಿದ್ಯಾರಣ್ಯರು :

ಇಡೀ ಭಾರತದ ತುಂಬೆಲ್ಲ ಮುಸ್ಲಿಂರ ಹಾವಳಿ ಹೆಚ್ಚಾಗಿ ಹಿಂದೂಗಳನ್ನೆಲ್ಲ ಬಲವಂತವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿ ಇಲ್ಲಿಯ ದೇವಾಲಯಗಳನ್ನು ನಾಶಪಡಿಸಿ ಸರ್ವಾಧಿಕಾರತ್ವವನ್ನು ಸ್ಥಾಪಿಸಲು ಹೊರಟ ಸುಲ್ತಾನರನ್ನು ಸದೆ ಬಡಿಯಲೆಂದೇ ದಕ್ಷಿಣ ಭಾರತದಲ್ಲಿ ಹಿಂದೂ ಸಾಮ್ರಾಜ್ಯವೊಂದು ಸ್ಥಾಪಿಸಲ್ಪಟ್ಟಿತು. ಈ ಸಾಮ್ರಾಜ್ಯದ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿ ನಿಂತವರು ಶ್ರೀ ವಿದ್ಯಾರಣ್ಯರು. 'ಮಾನವನ ಸಂಸ್ಕೃತಿಯ ವಿಕಾಸವೇ ಇತಿಹಾಸ ಎಂಬ ಭಾವನೆ ನಮ್ಮಲ್ಲಿ ಬೆಳೆಯುತ್ತಿರುವಾಗ, ಉಚ್ಚಸಂಸ್ಕೃತಿಯ ವಿಕಾಸವನ್ನು ಸಾಧಿಸಿ, ವಿಶ್ವಸಂಸ್ಕೃತಿಗೆ ತನ್ನ ವಿಶಿಷ್ಟ ಕಾಣಿಕೆ ನೀಡಿದ ವಿಜಯನಗರದ ಇತಿಹಾಸ ನಮಗೆ ಮಾರ್ಗದರ್ಶಕವಾಗಿರುತ್ತದೆ. ದೇಶ

ಅನಾಯಕವಾಗಿ, ನಾಥರಿಲ್ಲದೆ ತೊಳಲುತ್ತಿದ್ದ ಕಾಲದಲ್ಲಿ ತಪೋಧನನೊಬ್ಬನ ಪುಣ್ಯಪ್ರಭಾವದಿಂದ ಹುಟ್ಟಿದ ಈ ಸಾಮ್ರಾಜ್ಯ ತನ್ನ ಬದುಕಿನಿಂದ ನಮ್ಮ ನಾಡಿನ ಧರ್ಮ, ಸಂಸ್ಕೃತಿ, ಜೀವನವನ್ನೇ ಬದುಕಿಸಿತು ಎಂಬುದು ಗಮನಾರ್ಹ ವಿಷಯ'[೭] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಕೃತಿಯ ನಿವೇದನೆ ಭಾಗ) ಎಂದು ಪ್ರಸ್ತಾಪಿಸಿರುವರು.

ಶ್ರೀ ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವಶರ್ಮ. ಶ್ರೀಮತಿ ಮತ್ತು ಮಾಯಣಶರ್ಮರ ಪುತ್ರರು. ಶಂಕರಾನಂದರೆಂಬ ಗುರುಗಳ ಹತ್ತಿರ ವಿದ್ಯಾರ್ಜನೆ ಮಾಡಿದ ಮಾಧವಶರ್ಮ ಮತ್ತು ಆತನ ಸಹೋದರ ಸಾಯಣ ವೇದಶಾಸ್ತ್ರ ಪಾರಂಗತರಾಗಿ ಆ ವಿದ್ಯೆಯನ್ನು ಯಾವ ಸಂಸ್ಥಾನದ ಆಶ್ರಯ ಪಡೆದುಕೊಂಡು ಅದನ್ನು ಮಾರಿಕೊಳ್ಳದೇ ಸ್ವತಂತ್ರವಾಗಿ ಬಾಳುತ್ತ ಬಡತನದ ಬವಣೆಯನ್ನು ಅನುಭವಿಸುತ್ತಾರೆ. ಗಳಗನಾಥರು ತಮ್ಮ ಮಾಧವ ಕರುಣಾವಿಲಾಸ ಕೃತಿಯಲ್ಲಿ ಮಾಧವಶರ್ಮರ ಗುರುಗಳು ವಿಷ್ಣುಶರ್ಮರೆಂದು ಮಾಧವನು ಸಹ ಗೃಹಸ್ಥಾಶ್ರಮದಲ್ಲಿದ್ದು ತಂದೆ ಮಾಯಣ, ತಾಯಿ ಶ್ರೀಮತಿ, ತಮ್ಮಂದಿರು ಸಾಯಣ, ಭೋಗನಾಥರು ಮತ್ತು ಪತ್ನಿ ವೈತಿಹೋತ್ರಿ ಎಂದು ಪ್ರಸ್ತಾಪಿಸುತ್ತಾರೆ. ಆದರೆ ಅ.ನ.ಕೃ ತಮ್ಮ ಕಾದಂಬರಿಯ ಯಾವ ಭಾಗದಲ್ಲಿಯೂ ಮಾಧವಶರ್ಮರ ಪತ್ನಿಯ ಹೆಸರನ್ನು ಪ್ರಸ್ತಾಪಿಸುವುದಿಲ್ಲ. 'ಮಾಧವನು ಜನ್ಮದರಿದ್ರನಾಗಿದ್ದರೂ, ಪ್ರಭಾವಶಾಲಿಯೂ, ಘನಪಂಡಿತನೂ, ಗುಣನಿಧಿಯೂ ಆದದ್ದರಿಂದ ವಾತಾಪಿಪುರದ ಚಾಲುಕ್ಯ ಕುಲದಮಾತ್ಯನಾದ ವೀತಿಹೋತ್ರನು ತನ್ನ ಮಗಳನ್ನು ಆತನಿಗೆ ಲಗ್ನ ಮಾಡಿ ಕೊಟ್ಟಿದ್ದನು'[೮] (ಗಳಗನಾಥ, ೧೯೯೯, ಪುಟ-೧೯) ಎಂಬ ವಿಚಾರಧಾರೆಗಳನ್ನು ಗಳಗನಾಥರ ಕೃತಿಯಲ್ಲಿ ಕಾಣುತ್ತೇವೆ.

ಶ್ರೀ ಶಂಕರಾನಂದರು ಮಾಧವ ಮತ್ತು ಸಾಯಣರನ್ನು ಕಂಚಿಯ ಕಾಮಕೋಟಿ ಪೀಠದ ಶ್ರೀ ವಿದ್ಯಾತೀರ್ಥರಲ್ಲಿಗೆ ಕಳಿಸುತ್ತಾರೆ. ಅಲ್ಲಿ ಅವರು ಸಾಯಣನಿಗೆ "ವೇದಗಳಿಗೆ ಭಾಷ್ಯ" ಬರೆಯಲು, ಮಾಧವನಿಗೆ "ಸರ್ವದರ್ಶನ ಸಂಗ್ರಹ" ಬರೆಯಲು ಪ್ರೇರೆಪಿಸುವರು. ಸಾಯಣ ಶೃಂಗೇರಿಗೆ ಮರಳಿದರೆ ಮಾಧವ ಕಂಚಿಯಲ್ಲಿಯೇ ಉಳಿಯುತ್ತಾನೆ. ಶ್ರೀ ವಿದ್ಯಾತೀರ್ಥರು ಮಾಧವನಿಗೆ ನೀನು ಸನ್ಯಾಸಾಶ್ರಮ ಸ್ವೀಕರಿಸಿ, ದೇಶಕ್ಕಾಗಿ ನಿನ್ನ ಸರ್ವಸ್ವವನ್ನೂ ಬಲಿದಾನವಾಗಿ ಒಪ್ಪಿಸಬೇಕು. ಪರಮ ತಪೋನಿಷ್ಠರಾದ ಶ್ರೀ ಭಾರತಿಕೃಷ್ಣಸ್ವಾಮಿಗಳವರು ನಿನಗೆ ದೀಕ್ಷೆ ಕೊಡುತ್ತಾರೆ ಎಂದು ಹೇಳುವರು. 'ಈಗ ಮಾಧವನ ವಯಸ್ಸು ನಾಲ್ವತ್ತರ ಮೇಲೆ ಐವತ್ತರ ಒಳಗೆ ಇರಬಹುದು. ಆದರೆ ಗುರುಕುಲ ವಾಸದಿಂದ ಬ್ರಹ್ಮಚರ್ಯವನ್ನು ಯಥಾವಿಧಿ ಪಾಲಿಸಿದ ಆತನ ತಾರುಣ್ಯವು ಅಚ್ಚಳಿದಿದ್ದಿಲ್ಲ. ಆತನು

ಇಪ್ಪತ್ತೈದು ವರ್ಷದ ತರುಣನಂತೆ ಪ್ರಕಾಶಮಾನನಾಗಿದ್ದನು’[೯] (ಗಳಗನಾಥ, ೧೯೯೯, ಪುಟ-೨೦) ಎಂದು ಹೇಳಿರುವರು.

ಮಾಧವ ಭುವನೇಶ್ವರಿಯನ್ನು ಕುರಿತು ಘೋರ ತಪಸ್ಸನ್ನಾಚರಿಸುವ ಪೂರ್ವದಲ್ಲಿ ತನ್ನ ಪತ್ನಿಯಾದ ವೈತಿಹೋತ್ರಿಯ ಜೊತೆಗೆ ಚರ್ಚಿಸುವನು. ಆತನು ತನ್ನ ಪತ್ನಿಗೆ ಯವನರನ್ನು ತರುಬಲಿಕ್ಕೆ ಸೈನ್ಯವನ್ನು ಕೂಡಿಸಲು ವಿಪುಲವಾದ ಸಂಪತ್ತು ಬೇಕು. ಭುವನೇಶ್ವರಿಯ ಹೊರತಾಗಿ ಅದನ್ನು ಮತ್ತಾರು ಕೊಡಲಾರರು. ಘೋರವಾದ ತಪಸ್ಸಿನಿಂದ ಶ್ರೀ ಭುವನೇಶ್ವರಿಯನ್ನು ಮೆಚ್ಚಿಸುವನು. ಅದಕ್ಕೋಸ್ಕರ ನೀನು ನನಗೆ ಪಂಪಾಕ್ಷೇತ್ರಕ್ಕೆ ಹೋಗಲು ಅನುಮತಿಸಬೇಕು ಮತ್ತು ನಮ್ಮ ಸಂಸಾರದ ಭಾರವನ್ನು ನೀನು ವಹಿಸಿಕೊಳ್ಳಬೇಕೆಂದು ಹೇಳುವನು. ‘ಈಗ ಹೊರಗೆ ಒಂದೇ ಸವನೆ ಮಳೆಯು ಸುರಿಯುತ್ತಿರುವಂತೆ, ಸ್ವದೇಶಕಾರ್ಯಕ್ಕಾಗಿ ಬಂಗಾರದ ಮಳೆ ಸುರಿಸದಿದ್ದರೆ ನಾನು ಮಾಧವನೇ ಅಲ್ಲ’[೧೦] (ಗಳಗನಾಥ, ೧೯೯೯, ಪುಟ-೨೬) ಎಂದು ಹೇಳಿ ಕಠಿಣವಾದ ವ್ರತ ನೇಮಾದಿ ತಪಸ್ಸು ಮಾಡಿ ಭುವನೇಶ್ವರಿದೇವಿಯನ್ನು ಒಲಿಸಿಕೊಳ್ಳುತ್ತಾನೆ. ದೇವಿ ಪ್ರತ್ಯಕ್ಷಳಾದಾಗ “ದಾರಿದ್ರ್ಯದಿಂದ ಮುಕ್ತಿ, ಅಪಾರ ಸಂಪತ್ತು” ಬೇಕು ‘ವಿಧರ್ಮಿಯರ ಆಘಾತಕ್ಕೆ ಸಿಕ್ಕಿ ಈ ದೇಶ ನುಚ್ಚು ನೂರಾಗಿದೆ. ಜನ ತಪ್ತರಾಗಿದ್ದಾರೆ. ಪ್ರಬಲವಾದ ಹಿಂದೂ ಸಾಮ್ರಾಜ್ಯ ನಿರ್ಮಾಣವಾಗದಿದ್ದರೆ ಸನಾತನ ಧರ್ಮ ನಾಮಾವಶೇಷವಾಗುತ್ತದೆ. ಒಂದು ಸಾಮ್ರಾಜ್ಯ ನಿರ್ಮಾಣಕ್ಕೆ ಸಾಲುವಷ್ಟು ನನಗೆ ಹಣ ಬೇಕು’[೧೧] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೪೭) ಎಂದು ಬೇಡಿಕೊಳ್ಳುತ್ತಾನೆ. ಆಗ ಭುವನೇಶ್ವರಿ ವಿಪುಲ ಸಂಪತ್ತೇ? ಆ ಸಂಪತ್ತಿನಿಂದಾಗುವ ಅನರ್ಥ ಪರಂಪರೆಯನ್ನು ಅರಿಯದಷ್ಟು ಮೂಢನು ಹೇಗಾದೆ ನೀನು? ‘ಮಹಾಸಾಧುವಾದ ಮಾಯಣನ ಹೊಟ್ಟೆಯಲ್ಲಿ ಹುಟ್ಟಿದ ನೀನು ಅಧಮಾಧಿಕಾರಿಯೇ? ನೀನು ವಿಪುಲ ಸಂಪತ್ತನ್ನು ಬಯಸುವೆಯಾ? ತಂದೆಯಾದ ಮಾಯಣ ತಾಯಿಯಾದ ಶ್ರೀಮತಿ, ನಿನ್ನ ಬಂಧುಗಳಾದ ಸಾಯಣ, ಭೋಗನಾಥರು ನಿನ್ನ ಪ್ರಿಯ ಪತ್ನಿಯಾದ ವೈತಿಹೋತ್ರಿ ಇವರೆಲ್ಲರು ಪರಮ ವೈರಾಗ್ಯಶಾಲಿಗಳಾಗಿರಲು, ನೀನು ಮತ್ತೆ ಯಾರ ಸಲುವಾಗಿ ವಿಪುಲ ಸಂಪತ್ತನ್ನು ಬಯಸುವೆಯಪ್ಪಾ’[೧೨] (ಗಳಗನಾಥ, ೧೯೯೯, ಪುಟ-೭೯) ಎಂದಾಗ ಮಾಧವಶರ್ಮರು ತಾವು ಕಟ್ಟಬೇಕಾಗಿರುವ ಹಿಂದೂ ಸಾಮ್ರಾಜ್ಯದ ಕುರಿತು ಹೇಳಿ ಯವನರಿಂದ ದೇಶಕ್ಕಾಗುತ್ತಿರುವ ಅನ್ಯಾಯದ ಬಗ್ಗೆ ಹೇಳುವರು. ಶ್ರೀ ಮಾಧವಾಚಾರ್ಯರು ಭುವನೇಶ್ವರಿ ದೇವಿಗೆ ಕೇಳಿದ ವರ ‘ಮೂರು ಮುಕ್ಕಾಲು ಗಳಿಗೆಗಳವರೆಗೆ ಸುವರ್ಣವೃಷ್ಟಿಯಾಗಬೇಕು; ಮತ್ತು ಆಪದ್ಧನವೆಂದು ನನಗೊಂದು ಗುಪ್ತನಿಧಿಯು ದೊರೆಯಬೇಕು; ಎಂದು ಬೇಡಿಕೊಳ್ಳಲು “ತಥಾಸ್ತು” ಎಂಬ ಗಂಭೀರ ಧ್ವನಿಯು ಗುಹೆಯನ್ನು ತುಂಬಿ ಹೊರಬಿದ್ದಿತು.’[೧೩] (ಗಳಗನಾಥ, ೧೯೯೯, ಪುಟ-೮೬) ತದನಂತರ

ದೇವಿಯ ಅನುಗ್ರಹದಂತೆ ಶೃಂಗೇರಿಗೆ ಹೋಗಿ ಭಾರತೀಕೃಷ್ಣಸ್ವಾಮಿಗಳ ಶಿಷ್ಯನಾಗಿ ಸನ್ಯಾಸ ಸ್ವೀಕರಿಸುತ್ತಾನೆ. ಶ್ರೀ ಶ್ರೀ ಗಳವರು ಒಂದು ಶುಭ ಮೂಹುರ್ತ ಗೊತ್ತು ಮಾಡಿ ವಿಧ್ಯುಕ್ತವಾಗಿ ಮಾಧವಶರ್ಮನಿಗೆ ಸನ್ಯಾಸ, ಶೃಂಗೇರಿಯ ಪಟ್ಟಾಧಿಕಾರ ಕೊಟ್ಟು "ವಿದ್ಯಾರಣ್ಯ" ಎಂಬ ಹೆಸರನ್ನಿಡುತ್ತಾರೆ.

ಭಾರತೀಕೃಷ್ಣಸ್ವಾಮಿಗಳು ಮಾಧವನಿಗೆ ಸನ್ಯಾಸ ದೀಕ್ಷೆ ಕೊಟ್ಟಿದ್ದಲ್ಲದೆ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ 'ವಿದ್ಯಾರಣ್ಯ' ಎಂಬ ಹೊಸ ಹೆಸರನ್ನು ಅನುಗ್ರಹಿಸುವರು. ಹೀಗೆ ಅ.ನ.ಕೃ ಅವರು ಪರಂಪರೆಯಿಂದ ಬಂದ ನಂಬುಗೆಯನ್ನು ಮಾಧವನಿಗೆ ಲೋಕಾಂಬಿಕೆ ದರ್ಶನವಿತ್ತು ಆಶೀರ್ವದಿಸಿದುದನ್ನು ಬಳಸಿಕೊಳ್ಳುವರು. ಮಾಧವನೇ ವಿದ್ಯಾರಣ್ಯರು, ವಿಜಯನಗರ ಸ್ಥಾಪನೆಯಲ್ಲಿ ಶೃಂಗೇರಿಯ ಪೀಠಾಧಿಪತಿಗಳಾದ ವಿದ್ಯಾರಣ್ಯರ ಪ್ರಮುಖ ಪಾತ್ರವಿದೆ ಎಂದು ಅ.ನ.ಕೃ ಬಲವಾಗಿ ನಂಬಿರುವರು ಮತ್ತು ಆ ರೀತಿಯಲ್ಲಿಯೇ ಕಾದಂಬರಿಯಲ್ಲಿ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹಕ್ಕ-ಬುಕ್ಕ ಸಹೋದರರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ ಆಡಳಿತ ನಡೆಸಿದರೆಂದು ನಿರೂಪಿಸಿರುವರು. 'ಶೃಂಗೇರಿಯಿಂದ ವಿದ್ಯಾರಣ್ಯರನ್ನು ಹರಿಹರ ಆನೆಗೊಂದಿಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೊಲವೊಂದನ್ನು ಬೇಟೆ ನಾಯಿಯು ಬೆನ್ನಟ್ಟಿ ಬಂದಾಗ ಮೊಲವು ನಾಯಿಗೆ ಹೆದರದೆ ಅದನ್ನು ಧೈರ್ಯವಾಗಿ ಇದಿರಿಸಿದ ಸ್ಥಳವೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮುಖ್ಯ ತಾಣವಾಗಬೇಕೆಂದು ವಿದ್ಯಾರಣ್ಯರು ಸೂಚನೆ ನೀಡುವರು. ಮುಂದೆ ಅರಣ್ಯದಿಂದಾವೃತವಾದ ಹಂಪಿಯಲ್ಲಿ ಒಂದು ಬೃಹತ್ ಹಿಂದೂ ಸಾಮ್ರಾಜ್ಯದ ರಾಜಧಾನಿ ನಿರ್ಮಾಣವಾಯಿತು ಎಂಬ ಪಾರಂಪರಿಕ ನಂಬುಗೆಯನ್ನು ಅ.ನ.ಕೃ ಒಪ್ಪಿ ಅದನ್ನು ತಮ್ಮ ಕಾದಂಬರಿಯಲ್ಲಿ ತಂದಿರುವರು.'[೧೪] (ವಿದ್ಯಾಶಂಕರ ಎಸ್(ಸಂ), ೨೦೧೦, ಪುಟ-೩೫೪) 'ಆದರೆ ಅವರು ಆ ಪೀಠವನ್ನೇರುವ ವೇಳೆಗಾಗಲೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಎರಡು ದಶಕಗಳು ಸಂದಿದ್ದವು. ಶೃಂಗೇರಿಯ ಶಾಸನದಲ್ಲಿ ಹರಿಹರಾದಿಗಳಿಗೆ ಗುರುಗಳಾಗಿದ್ದವರು ಭಾರತೀತೀರ್ಥ ಶ್ರೀಪಾದರೆಂದಿದೆ. ಆ ಸಂದರ್ಭದಲ್ಲಿ ವಿದ್ಯಾರಣ್ಯರು ಶೃಂಗೇರಿಯಲ್ಲಿ ಇರಲೇ ಇಲ್ಲ. ೧೩೫೬ರ ಸುಮಾರಿಗೆ ಬುಕ್ಕನ ಪ್ರಾರ್ಥನೆಯ ಮೇರೆಗೆ, ವಿದ್ಯಾತೀರ್ಥರ ಆದೇಶದಂತೆ ಆಗ ವಾರಣಾಸಿಯಲ್ಲಿದ್ದ ವಿದ್ಯಾರಣ್ಯರು ವಿಜಯನಗರಕ್ಕೆ ಬಂದು, ಅಲ್ಲಿಂದ ಶೃಂಗೇರಿಗೆ ತೆರಳಿದರು'[೧೫] (ನಾಯಕ ಹಾ.ಮಾ(ಸಂ), ೧೯೭೪, ಪುಟ-೪೩೮) ಎಂಬ ವಿಚಾರಗಳನ್ನು ಕಾಣುತ್ತೇವೆ. ಇದರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಳಿಕ ಆ ಅರಸರ ಮೊದಲ ಗುರುಗಳಾಗಿದ್ದವರು ವಿದ್ಯಾತೀರ್ಥ ಶ್ರೀಪಾದರೆಂಬುದು ಸ್ಪಷ್ಟ. ಆಗಿನ್ನೂ ಕಿರಿಯ ಸನ್ಯಾಸಿಗಳಾಗಿದ್ದ ವಿದ್ಯಾರಣ್ಯರು

ಅಧ್ಯಯನಕ್ಕೆಂದು ವಾರಣಾಸಿಯಲ್ಲಿ ನೆಲೆಸಿದ್ದರು. ಆದ್ದರಿಂದ ವಿದ್ಯಾರಣ್ಯರನ್ನು ಕುರಿತು ಪ್ರಚಲಿತವಾಗಿರುವ ಕಥೆಗಳಲ್ಲಿ ಐತಿಹಾಸಿಕ ಸತ್ಯವಿಲ್ಲ.

'ವಿದ್ಯಾರಣ್ಯ ಕಾಲಜ್ಞಾನ ಕೃತಿಯು ವಿದ್ಯಾರಣ್ಯರಿಂದಲೇ ರಚಿಸಲ್ಪಟ್ಟಿದೆ ಎಂದು ಹೇಳಲಾಗುತ್ತಿದೆ. ಈ ಕೃತಿಯನ್ನು ಆಧರಿಸಿ ಪಿತಾಮಹ ಸಂಹಿತ ರಚಿಸಲ್ಪಟ್ಟಿದೆ. ಕಾಲಜ್ಞಾನವು ವಿಜಯನಗರ ಸಂಸ್ಥಾಪನೆಯೊಂದಿಗೆ ಅದರ ಅವಸಾನದವರೆಗೆ ವೆಂಕಟಪತಿದೇವನ (ಕ್ರಿ.ಶಕ ೧೩೩೬-೧೬೧೫) ಆಳ್ವಿಕೆವರೆಗೆ ವಿವರಗಳನ್ನು ನೀಡುವುದು. ಅಂದರೆ ವಿದ್ಯಾರಣ್ಯ ಯತಿಗಳು ೩೦೦ ವರ್ಷಗಳಾದರೂ ಮಿಕ್ಕಿ ಬದುಕಿದ್ದರೆ? ಎಂಬ ಅಸಹಜ ಪ್ರಶ್ನೆ ಅಸಹಜ ಸಂಗತಿಯನ್ನು ಕುರಿತು ಹೇಳುತ್ತದೆ. ಈ ಎರಡು ಕೃತಿಗಳು ಮೊದಲನೆಯ ಹರಿಹರರಾಯನು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ವಿಜಯನಗರ ರಾಜಧಾನಿಯನ್ನು ನಿರ್ಮಿಸಿದನೆಂದು ಹೇಳುತ್ತವೆ. ಆದರೆ ಇದು ವಾಸ್ತವಿಕ ಸತ್ಯವಲ್ಲ. ವಿಜಯನಗರದ ಸುತ್ತಮುತ್ತ ದೊರಕಿರುವ ಕಲ್ಲಿನ ಶಾಸನಗಳ ಪ್ರಕಾರ ಮೊದಲನೆಯ ಬುಕ್ಕರಾಯನು ವಿಜಯನಗರ ರಾಜಧಾನಿಯನ್ನು ಸ್ಥಾಪಿಸಿದನು ಎಂದೂ ಬಿ.ಎ.ಸಾಲೆತ್ತೂರರು ವಾದಿಸುತ್ತಾರೆ.'[೧೬] (ಹೆಗ್ಗಡೆ ಒಡೆಯರ ಡಿ, ೨೦೦೮, ಪುಟ-೪೪) ಅಂದರೆ ಸಾಲೆತ್ತೂರರ ಪ್ರಕಾರ ವಿಜಯನಗರದ ಸ್ಥಾಪನೆಯಲ್ಲಿ ವಿದ್ಯಾರಣ್ಯರ ಪಾತ್ರವಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಹಾಗೆಯೇ ಇತಿಹಾಸದ ಖ್ಯಾತ ವಿದ್ವಾಂಸರಾದ ಜರ್ಮನಿಯ ಪಾದ್ರಿಯೂ ಸಹ 'ಶೃಂಗೇರಿಗೂ, ವಿಜಯನಗರಕ್ಕೂ, ವಿದ್ಯಾರಣ್ಯರಿಗೂ ಯಾವ ಸಂಬಂಧವೂ ಇಲ್ಲ. ಈ ಸಂಬಂಧ ಕಲ್ಪನೆ ೧೬ನೇ ಶತಮಾನದಿಂದ ಈಚೆಗೆ ಸೃಷ್ಟಿಸಲ್ಪಟ್ಟಿತು ಎಂದು ವಾದಿಸುತ್ತಾರೆ. ಅದಕ್ಕೆ ಸಂಬಂಧಪಟ್ಟ ತಾಮ್ರ ಶಿಲಾಶಾಸನಗಳೆಲ್ಲವೂ ಕೃತಕವೆಂದು ಬರೆಯುತ್ತಾರೆ. ಅವರ ವಾದವು ಸಮರ್ಥನೀಯವಲ್ಲ. ಪಾದ್ರಿಗಳ ಹುಟ್ಟುಗುಣವಾದ ಅನ್ಯಮತದ ಅಸಹನೆ ದ್ವೇಷದಿಂದ, ಅವರು ಹೀಗೆ ಬರೆದಿದ್ದಾರೆಂದು ಊಹಿಸಬೇಕಾಗಿದೆ.'[೧೭] (ಹುರಗಲವಾಡಿ ಲಕ್ಷ್ಮೀ ನರಸಿಂಹಶಾಸ್ತ್ರೀ, ೨೦೧೦, ಪುಟ-೧೧)

ಅ.ನ.ಕೃ ತಮ್ಮ ಕಾದಂಬರಿಯಲ್ಲಿ ಪ್ರಸ್ತಾಪಿಸಿರುವಂತೆ ಆನೆಗೊಂದಿಯ ಮೇಲೆ ಆಕ್ರಮಣ ಮಾಡಿದ ಸುಲ್ತಾನರು ಅಲ್ಲಿಯ ಜಂಬುಕೇಶ್ವರನನ್ನು ಹತ್ಯೆಗೈದಾಗ ಅವನ ಮಗಳು ಪದ್ಮಾವತಿ ತಪ್ಪಿಸಿಕೊಳ್ಳುತ್ತಾಳೆ. ಇತ್ತ ಹರಿಹರ, ಬುಕ್ಕರೆಂಬ ಸಹೋದರರು ತಲೆಮರೆಸಿಕೊಂಡು ಕುರುಬರಂತೆ ವೇಷ ಧರಿಸಿ ಬಲ್ಲಾಳನ ಸಲಹೆಯ ಮೇರೆಗೆ ಶೃಂಗೇರಿಗೆ ಬಂದು ಶ್ರೀ ವಿದ್ಯಾರಣ್ಯರನ್ನು ಕಾಣುತ್ತಾರೆ. ಅಲ್ಲಿ ಶ್ರೀ ವಿದ್ಯಾರಣ್ಯರು ಹಿಂದೂ ಸಾಮ್ರಾಜ್ಯವನ್ನು ಕಟ್ಟಿ ಮ್ಲೇಚ್ಛರನ್ನು ಭಾರತದಿಂದ ಓಡಿಸಬೇಕೆಂದು ಹಕ್ಕ ಬುಕ್ಕರಿಗೆ ಉಪದೇಶಿಸುವರು. ಆನೆಗೊಂದಿಯಲ್ಲಿ ಸುಲ್ತಾನರ ಪ್ರತಿನಿಧಿಗಳಂತೆ ಮನಸ್ಸಿಲ್ಲದ

ಮನಸ್ಸಿನಿಂದ ಕಾರ್ಯನಿರ್ವಹಿಸುತ್ತಿದ್ದ ದೇವರಾಯ ಮತ್ತು ನರಸಿಂಹನಾಯಕರನ್ನು ಕರೆಸಿಕೊಂಡು ಹಕ್ಕ ಬುಕ್ಕರಿಗೆ ನಿಜಸಂಗತಿ ತಿಳಿಯುವಂತೆ ಮಾಡಿ ಅವರ ಮಧ್ಯೆ ಇದ್ದ ವೈಮನಸ್ಸಿನ ಕಂದಕವನ್ನು ದೂರ ಮಾಡಿ ಹಿಂದೂ ಸಾಮ್ರಾಜ್ಯ ಕಟ್ಟಿ ಮ್ಲೇಚ್ಛರನ್ನು ಓಡಿಸಬೇಕೆಂದು ಸೂಚಿಸುವರು. ಸನ್ಯಾಸಿಗಳಾಗಿದ್ದರೂ ಸಹ ಧರ್ಮರಕ್ಷಣೆಯ ಕಾರ್ಯದ ನಿಮಿತ್ತ ರಾಜಕಾರಣಕ್ಕಿಳಿದ ಶ್ರೀ ವಿದ್ಯಾರಣ್ಯರು ಯೋಗೇಶ್ವರಿ ಎಂಬ ಹೆಸರಿನಲ್ಲಿ ಮಾರುವೇಷದಲ್ಲಿದ್ದ ಆನೆಗೊಂದಿಯ ರಾಜಕುಮಾರಿ ಪದ್ಮಾವತಿಯನ್ನು ಕಂಡು ಆಕೆಗೆ ನಿಜಸ್ಥಿತಿಯನ್ನು ಅರುಹಿ ನೀನು ಆನೆಗೊಂದಿಗೆ ಹಿಂದಿರುಗಬೇಕೆಂದು ಹೇಳುವರು. ಒಂದು ದಿನ ಶಿಷ್ಯನಾದ ಶ್ರೀಕಂಠನ ಜೊತೆಗೆ ಮೇನೆಯೊಂದನ್ನು ಕಳುಹಿಸಿ ಮಾರುವೇಷದಲ್ಲಿದ್ದ ಪದ್ಮಾವತಿಯನ್ನು ಕರೆಸಿಕೊಂಡು ಎಲ್ಲರಿಗೂ ರಾಜಕುಮಾರಿಯ ದರ್ಶನ ಭಾಗ್ಯವಿತ್ತವರು ಗುರುಗಳಾದ ಶ್ರೀ ವಿದ್ಯಾರಣ್ಯರು.

ಶ್ರೀ ವಿದ್ಯಾರಣ್ಯರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಸೇರಿಸಿ ಎಲ್ಲರೂ ಆಸೀನರಾದ ಸಂದರ್ಭದಲ್ಲಿ ಗುರುಗಳೇ 'ದಕ್ಷಿಣ ಭಾರತದಲ್ಲಿ ಹಿಂದೂಗಳ ಕೈಬಿಟ್ಟುಹೋಗಿರುವ ರಾಜ್ಯಗಳನ್ನೆಲ್ಲಾ ಮೊದಲು ದೊರಕಿಸಿಕೊಂಡು, ನಾವು ಉತ್ತರದ ಕಡೆಗೆ ತಿರುಗಬೇಕು. ಈಗಾಗಲೇ ಇಸ್ಲಾಂಶಾಹಿಯಿಂದ ಆಗಬಾರದಷ್ಟು ಅನರ್ಥಗಳಾಗಿವೆ. ಇದನ್ನು ಹೀಗೇ ಬೆಳೆಯಗೊಟ್ಟರೆ ಭಾರತದಲ್ಲಿ ಹಿಂದೂತ್ವದ ಹೆಸರೇ ಅಳಿಸಿ ಹೋಗುತ್ತದೆ. ದಕ್ಷಿಣವನ್ನು ರಕ್ಷಿಸುವ ಒಂದು ಸಾಮ್ರಾಜ್ಯ ಸ್ಥಾಪಿಸಿದಲ್ಲದೇ ಈ ಕೆಲಸ ಮುಂದುವರಿಸುವುದಕ್ಕಾಗುವುದಿಲ್ಲ. ಯಾವ ಲೋಭ ಮೋಹಕ್ಕೂ, ರಾಗದ್ವೇಷಕ್ಕೂ ಪಕ್ಕಾಗದೇ ಇಡಿಯ ಹಿಂದೂ ಜನಾಂಗ ಈ ಮಹತ್ಕಾರ್ಯ ಸಾಧನೆಗೆ ನೆರವು ನೀಡಬೇಕು.'[೧೮] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ–೧೨೭) ಇನ್ನೊಂದು ಸಂವತ್ಸರದೊಳಗೆ ರಾಜಧಾನಿಯನ್ನು ಹಂಪೆಗೆ ಸ್ಥಳಾಂತರಿಸಬೇಕೆಂದು ಸೂಚಿಸುವರು.

ಹರಿಹರ ಪದ್ಮಾವತಿ ಮತ್ತು ಬುಕ್ಕರಾಯ ಗೌರಾಂಬಿಕೆಯ ಮದುವೆಗೆ ಬಂದ ಎಲ್ಲ ಹಿಂದೂ ರಾಜರನ್ನು ಉದ್ದೇಶಿಸಿ ಶ್ರೀ ವಿದ್ಯಾರಣ್ಯರು ಎಲ್ಲರೂ ರಾಷ್ಟ್ರದ ಐಕ್ಯತೆಯನ್ನು ಸಾಧಿಸಿಕೊಂಡು ಹೋಗಬೇಕು. ನಿಮಗೆ ಕಷ್ಟ ಬಂದಾಗ ಈ ರಾಜ್ಯವೂ, ಈ ರಾಜ್ಯಕ್ಕೆ ಕಷ್ಟ ಬಂದಾಗ ನೀವೂ ನೆರವು ನೀಡಬೇಕು ಎಂದಾಗ ಹರಿಹರರಾಯರು ಶ್ರೀ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳವರ ಹೆಸರನ್ನೇ ನಮ್ಮ ನೂತನ ರಾಜಧಾನಿಗೆ ಇಟ್ಟು ವಿದ್ಯಾನಗರವೆಂದು ಕರೆಯಬೇಕೆಂದಾಗ ಗುರುಗಳೇ 'ನಮ್ಮ ರಾಜ್ಯ ವಿದ್ಯಾನಗರ ಆಗಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ವಿದ್ಯೆಯ ಜೊತೆಗೆ ಇದು ಪೌರುಷ, ಪರಾಕ್ರಮ, ಸಂಪತ್ತುಗಳ ಆಗರವೂ ಆಗಬೇಕು. ವ್ಯಕ್ತಿ ಎಷ್ಟೇ ದೊಡ್ಡವನಾದರೂ ಅಲ್ಪಾಯು; ತತ್ತ್ವ

ಎಷ್ಟೇ ಸಣ್ಣದಾದರೂ ಚಿರಾಯು. ನಮ್ಮ ರಾಜ್ಯ ಅಮರವಾಗಿರಬೇಕೆಂದು ಬಯಸುವ ನಾವು, ಅಲ್ಪಾಯುವಿನ ಹೆಸರಿಡಬಾರದು. ಈ ರಾಜ್ಯ "ವಿಜಯನಗರ"ವೆಂಬ ಅಭಿದಾನದಿಂದ ವರ್ಧಿಸಲೆಂದು ನಮ್ಮ ಹಾರೈಕೆ'[೧೯] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೧೪೮) ಅದಕ್ಕೆ ನೆರೆದವರೆಲ್ಲರೂ ಒಪ್ಪುವರು.

ಆರು ತಿಂಗಳು ಕಳೆಯುವುದರಲ್ಲಿಯೇ ರಾಜಧಾನಿಯಲ್ಲಿ ಹಣದ ಮುಗ್ಗಟ್ಟು ತಲೆದೋರಿದಾಗ ಶ್ರೀ ವಿದ್ಯಾರಣ್ಯರು ಶ್ರೀ ಭುವನೇಶ್ವರಿದೇವಿ ಒದಗಿಸುತ್ತಾಳೆ ಯೋಚಿಸಬೇಡಿ ಎಂದು ಬುಕ್ಕರಾಯರಿಗೆ ಸಲಹೆ ಇತ್ತರು. ನಾಲ್ಕನೆಯ ದಿನ ರಾಜಧಾನಿಯ ತುಂಬೆಲ್ಲ ಚಿನ್ನದ ಮಳೆಯಾಯಿತು. ಜನತೆ ಬಂದು ಗುರುಗಳಿಗೆ ಕೇಳಿದಾಗ ನವಮಾಂಶ ನಿಮ್ಮ ಸ್ವಂತಕ್ಕೆ ಉಪಯೋಗಕ್ಕಿಟ್ಟುಕೊಂಡು, ಉಳಿದ ಸುವರ್ಣವನ್ನು ರಾಜಭಂಡಾರಕ್ಕೆ ಸೇರಿಸಿಬಿಡಲು ಸೂಚಿಸುವರು. ವಿಜಯನಗರದ ಭಂಡಾರ ಚಿನ್ನದಿಂದ ತುಂಬಿ ತುಳುಕಿತು. 'ವಿಜಯನಗರದ ಸ್ಥಾಪನೆ, ಅಭ್ಯುದಯದ ವಿವರಗಳನ್ನು ಶ್ರೀ ವಿದ್ಯಾರಣ್ಯರಿಂದಲೇ ಕೇಳಿ ತಿಳಿದುಕೊಂಡ, ಭಾರತೀಕೃಷ್ಣತೀರ್ಥರು ಸಂತೃಪ್ತರಾಗಿ ಶ್ರೀ ವಿದ್ಯಾರಣ್ಯರಿಗೆ ಸಕಲರ ಸಮ್ಮುಖದಲಿ "ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ" ಎಂಬ ಪ್ರಶಸ್ತಿ ಕೊಟ್ಟು ಗೌರವಿಸಿದರು.'[೨೦] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೧೫೫)

ಹರಿಹರರಾಯರು ನಿಧನರಾದ ಮೇಲೆ ಶ್ರೀ ವಿದ್ಯಾರಣ್ಯರ ನೇತೃತ್ವದಲ್ಲಿಯೇ ಬುಕ್ಕರಾಯರಿಗೆ ಪಟ್ಟಾಭಿಷೇಕವಾಗುತ್ತದೆ. ವಿಜಯದಶಮಿ ಮುಗಿದ ಕೂಡಲೇ ಶ್ರೀಗುರುಗಳು ಕಾಶೀಕ್ಷೇತ್ರಕ್ಕೆ ಹೋಗಿ ಬರಬೇಕೆಂದು ನಿರ್ಧರಿಸಿ ಬುಕ್ಕರಾಯನಿಗೆ ತಿಳಿಸುತ್ತಾರೆ. ಆದರೆ ಬುಕ್ಕರಾಯನು ತಮ್ಮನ್ನು ಅಗಲಿ ನಾನಾಗಲಿ, ರಾಜಧಾನಿಯಾಗಲಿ ಇರಲು ಹೇಗೆ ಸಾಧ್ಯ ಎಂದಾಗ ಶ್ರೀಗುರುಗಳು ರಾಜಧಾನಿಯಲ್ಲಿ ನಾವು ಇರಲಿ, ಇಲ್ಲದಿರಲಿ ಸತತವಾಗಿ ವೇದಘೋಷ ನಡೆಯುತ್ತಿರಬೇಕೆಂದು ತಮ್ಮ ಬಯಕೆಯನ್ನು ವ್ಯಕ್ತಪಡಿಸಿ 'ಗೀರ್ವಾಣ ಮಹಾವಿದ್ಯಾಪೀಠ' ಆರಂಭಿಸುವಂತೆ ಪ್ರೇರೇಪಿಸುವರು. ಮತ್ತೊಂದು ಗಳಿಗೆ ಶ್ರೀ ವಿದ್ಯಾರಣ್ಯರೇ ಶ್ರೀ ಶ್ರೀ ಬುಕ್ಕರಾಯರು ಈಗ ತಾನೇ ಪಟ್ಟಕ್ಕೆ ಬಂದಿದ್ದಾರೆ. ಎಲ್ಲ ಉತ್ತರಾಧಿತನವನ್ನು ಅವರ ಹೆಗಲ ಮೇಲೆ ಒರಗಿಸಿ ನಾನು ಕಾಶೀ ಪ್ರಯಾಣ ಬೆಳೆಸುವುದು ಉಚಿತವೇ ಎಂಬ ಧರ್ಮಸಂಕಟಕ್ಕೆ ಸಿಲುಕುತ್ತಾರೆ. ಕೊನೆಗೆ ಶ್ರೀಕಂಠನೊಂದಿಗೆ ಕಾಶಿಗೆ ಪ್ರಯಾಣ ಬೆಳೆಸುತ್ತಾರೆ. ಕಾಶಿಯಿಂದ ಮರಳಿದ ಮೇಲೆ ಅಲ್ಲಿಯ ಜನರ ವ್ಯಾಪಾರಿ ಮನೋಭಾವ ಕಂಡು ನಿರಾಶರಾಗುತ್ತಾರೆ. ಸುಲ್ತಾನ್ ಮಹಮದ್ ಷಹಾರವರ ಪ್ರತಿನಿಧಿಗಳಾಗಿ ಬಂದ ವಾಲಿ ಮಹಮದ್‌ನು ಶ್ರೀ ವಿದ್ಯಾರಣ್ಯರ ಜೊತೆಗೆ ಧರ್ಮ, ರಾಜಕಾರ್ಯ, ಜ್ಯೋತಿಷ್ಯ, ಸಂಗೀತ, ವೈದ್ಯ

ಮುಂತಾದ ವಿಷಯಗಳನ್ನು ಮುಕ್ತವಾಗಿ ಚರ್ಚಿಸುತ್ತಾನೆ. ವಿಜಯನಗರದಲ್ಲಿನ ಸ್ನೇಹ, ಸಹಬಾಳ್ವೆಯ ಗುಣಗಳ ಕುರಿತಾಗಿ ಹಾಗೂ ಇದಕ್ಕೆಲ್ಲ ಪ್ರೇರಕ ಶಕ್ತಿಯಾಗಿ ನಿಂತಿರುವ ಮಹಾನ್ ಸಾಧಕ ಶ್ರೀಗುರು ವಿದ್ಯಾರಣ್ಯರೆಂದು ತನ್ನ ವರದಿ ಒಪ್ಪಿಸುತ್ತಾನೆ.

ದೊರೆಯಾದ ಬುಕ್ಕರಾಯನು ಯಾವುದೇ ಕೆಲಸ ಮಾಡಬೇಕಾದರೂ ಸಹ ಶ್ರೀಗುರು ವಿದ್ಯಾರಣ್ಯರ ಜೊತೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳುತ್ತಿರುತ್ತಾನೆ. ಶ್ರೀಗುರು ವಿದ್ಯಾರಣ್ಯರನ್ನು ಕುರಿತು ದೊರೆಯಾದಿಯಾಗಿ ಸಮಸ್ತರು ಅತ್ಯಂತ ಭಕ್ತಿ, ಗೌರವದ ಭಾವನೆಗಳನ್ನು ತಳೆದಿರುತ್ತಾರೆ. ಬುಕ್ಕರಾಯರು ನಿಧನರಾದ ಸಮಯದಲ್ಲಿ ಶ್ರೀ ವಿದ್ಯಾರಣ್ಯರೇ ಸಮಸ್ತರನ್ನು ಸಂತೈಸುತ್ತಾರೆ. ಅವರ ಮಗ ಇಮ್ಮಡಿ ಹರಿಹರನು ಉತ್ತರಾಧಿಕಾರಿಯಾದ ಸಂದರ್ಭದಲ್ಲಿ ಆರು ತಿಂಗಳ ನಂತರ ದೊರೆಯ ಅಪ್ಪಣೆ ಪಡೆದು ಸಾಯಣರೊಂದಿಗೆ ಶೃಂಗೇರಿಗೆ ಹೋಗುವುದಾಗಿ ತಿಳಿಸಿದಾಗ ಇಮ್ಮಡಿ ಹರಿಹರನು ತಾವು ಅನನುಭವಿಗಳು ನೀವೇ ನಮಗೆ ಶಕ್ತಿಭಂಡಾರ ಎಂದಾಗ 'ತಾವಾಗಲಿ ಸಾಮ್ರಾಜ್ಯವಾಗಲಿ ನಮ್ಮ ಮೇಲೆ ಅವಲಂಬಿಸಬಾರದು. ನಮ್ಮ ಜೀವನವೂ ಶಾಶ್ವತವಾದುದಲ್ಲ ನಾವು ಎಲ್ಲಿದ್ದರೇನು ವಿಜಯನಗರ ನಮ್ಮ ಮನಸ್ಸಿನಿಂದ ದೂರವಾಗುವುದೇ?'[೨೧] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೨೮೧) ಎಂದು ಹೇಳಿ ಶೃಂಗೇರಿಗೆ ಹೊರಡುತ್ತಾರೆ.

ಶ್ರೀ ಇಮ್ಮಡಿ ಹರಿಹರರಾಯರ ವಿವಾಹ ಮುಹೂರ್ತ ನಿಶ್ಚಯವಾದೊಡನೆಯೇ ಮೊದಲನೆಯ ಆಮಂತ್ರಣ ಪತ್ರಿಕೆ ಶೃಂಗೇರಿಗೆ ಕಳಿಸಲ್ಪಟ್ಟು ಶ್ರೀ ವಿದ್ಯಾರಣ್ಯರು ಸಾಯಣ, ಶ್ರೀಕಂಠರೊಡನೆ ಆಗಮಿಸುತ್ತಾರೆ. ಯಾವ ಗಲಭೆಗಳೂ ಇಲ್ಲದೇ ಮೂರು ವರ್ಷಗಳು ಕಳೆದ ಮೇಲೆ ಇಮ್ಮಡಿ ಹರಿಹರರಾಯರ ಪತ್ನಿಯರಾದ ಪಂಪಾದೇವಿ, ಮಲ್ಲಾದೇವಿಯರಿಗೆ ಇಮ್ಮಡಿ ಬುಕ್ಕರಾಯ ಮತ್ತು ದೇವರಾಯರೆಂಬ ಪುತ್ರರತ್ನರು ಜನಿಸಿದರು. ಅಷ್ಟರಲ್ಲಿಯೇ ಶ್ರೀಗುರು ವಿದ್ಯಾರಣ್ಯರ ಮತ್ತು ಸಾಯಣರ 'ಸರ್ವದರ್ಶನ ಸಂಗ್ರಹ' ಮತ್ತು 'ವೇದಭಾಷ್ಯ'ಗಳು ಸಂಪೂರ್ಣಗೊಂಡು ಒಂದು ವರ್ಷದವರೆಗೆ ಶ್ರೀಗುರುಗಳು ಮತ್ತು ಸಾಯಣರು ಪ್ರವಚನ ಕೊಡುತ್ತಾರೆ. ಶ್ರೀಕಂಠನಿಗೆ "ಗಿರ್ವಾಣ ವಿದ್ಯಾಪೀಠದ ವೇದಾಂತಾಚಾರ್ಯ ಪದವಿ"ಯನ್ನು ಸ್ವೀಕರಿಸುವಂತೆ ಒಪ್ಪಿಸುತ್ತಾರೆ. 'ಶಾಲಿವಾಹನ ಶಕ ೧೩೨೯ (ಕ್ರಿ.ಶಕ ೧೩೮೬) ನೆಯ ಕ್ಷಯ ಸಂವತ್ಸರ ಜೇಷ್ಠ ಬಹುಳ ತ್ರಯೋದಶಿ ಶನಿವಾರ ಉಷಃಕಾಲಕ್ಕೆ ಮುನ್ನವೇ ಎದ್ದು ಶ್ರೀಗುರು ವಿದ್ಯಾರಣ್ಯರು ಪಂಪಾಸರೋವರಕ್ಕೆ ಹೋಗಿ ಶುಭ್ರಸ್ನಾತರಾಗಿ ಉದಯಾದಿತ್ಯನಿಗೆ ಅರ್ಘ್ಯ ಅರ್ಪಿಸಿ, ಪಂಪಾನಾಥನ ದೇವಾಲಯಕ್ಕೆ ಬಂದು, ಭಗವಂತನನ್ನೂ, ಭಗವತಿಯನ್ನೂ ಕಣ್ತುಂಬ ನೋಡಿ ಆನಂದ ಭಾಷ್ಪ ಸುರಿಸುತ್ತಾರೆ.'[೨೨] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೨೯೪)

ಅರಮನೆಗೆ ಹೋಗಿ ರಾಜಕುಮಾರರನ್ನು ನೋಡಿ ಆಶೀರ್ವದಿಸಿ ಪರ್ಣಕುಟಿಗೆ ಹಿಂದಿರುಗಿ ಬಂದು 'ಸಾಯಣರೇ ಇವತ್ತು ದಿನ ಶುದ್ಧಿ ಚೆನ್ನಾಗಿದೆ. ನನಗೆ ತಿಳಿದ ಮಟ್ಟಿಗೆ ನನ್ನ ಕರ್ತವ್ಯ ಪೂರೈಸಿದ್ದೇನೆ. ಅಪೂರ್ಣವಾಗಿರುವುದನ್ನು ಪೂರ್ಣಗೊಳಿಸುವುದು ನಿಮ್ಮ ಭಾರ'[೨೩] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೨೯೫) "ಸಕಲರಿಗೂ ಶ್ರೇಯಸ್ಸಾಗಲಿ ವಿಜಯನಗರ ಚಿರಾಯುವಾಗಲಿ" ಎಂದು ಹರಸಿ ಸಮಾಧಿ ಸ್ಥಿತಿಗೇರಿದರು.

'ವಿದ್ಯಾರಣ್ಯರು ಕರ್ನಾಟಕ ರಾಜ್ಯದ ಶಿಲ್ಪಿ; ನಾಸ್ತಿಕ್ಯ ರೋಗಕ್ಕೆ ವೈದ್ಯರು. ವೇದಾಂತದಲ್ಲಿ ಮುಂದುವರಿದವರು; ವೇದಧರ್ಮವನ್ನು ಉದ್ಧರಿಸಿದವರು. ಮ್ಲೇಚ್ಛರಿಂದ ಆವೃತವಾಗಿದ್ದ ಭಾರತದ ಆಕಾಶದ ಕತ್ತಲಿಗೆ ಸೂರ್ಯರು; ಕನ್ನಡ ತಾಯ್ನುಡಿಯಾಗಿದ್ದರೂ ತಮ್ಮನಾದ ಸಾಯಣನೊಡಗೂಡಿ ವೇದಗಳಿಗೆ ಭಾಷ್ಯ ಬರೆದವರು. ಧರ್ಮಗ್ಲಾನಿಯನ್ನು ಬ್ರಹ್ಮಜ್ಞಾನದಿಂದ ಹೋಗಲಾಡಿಸಿದವರು. ಕ್ಷಾತ್ರತೇಜದಿಂದ ಮ್ಲೇಚ್ಛಸೇನೆಯನ್ನು ಇದಿರಿಸಿದವರು. ಕನ್ನಡದ ಭಾಗ್ಯವಾಗಿ ಹುಟ್ಟಿ ನಾಡಿಗೆ ಒಳಿತನ್ನು ಮಾಡಿದವರು. ಇಂದು ಕನ್ಯಾಕುಮಾರಿಯಿಂದ ಹಿಮಾಲಯದ ತನಕ ನಮಗೆ ನಿಮ್ಮಂತಹ ಇನ್ನೋರ್ವ ಕಾಣುತ್ತಿಲ್ಲ. ಇದ್ದರೆ ನಾಡಿಗೆ ಈ ಬಡ ಪಾಡು ಬರುತ್ತಿತ್ತೇ? ನಿಮ್ಮ ಮನೆಯಾದ ಈ ಪುಣ್ಯಭಾರತದೇಶವನ್ನು ನಮಗಾಗಿ ಮರೆಯಬೇಡಿ; ನಮಗೆ ತುಂಬಿದ ಭಾಗ್ಯೋದಯವಾಗುವಂತೆ ಮಾಡಲು ನಿಮಗಲ್ಲದೆ ಇನ್ಯಾರಿಗೆ ಸಾಧ್ಯ? ಆದ್ದರಿಂದಲೇ ಕರ್ನಾಟಕ ರಾಜ್ಯ ಎಲ್ಲಿಯವರೆಗಿರುವುದೋ, ಈ ನಮ್ಮ ಭಾರತ ಎಲ್ಲಿಯವರೆಗಿರುವುದೋ ಅಲ್ಲಿಯವರೆಗೆ ನಿಮ್ಮ ಸ್ಮರಣೆ ಉಳಿಯುವುದು'[೨೪] (ಕಯ್ಯಾರ ಕಿಞ್ಞಣ್ಣ ರೈ, ೧೯೮೯, ಪುಟ-೨೪) ಎಂದು ಹಾರೈಸುತ್ತಾರೆ.

೫.೧.೨ ಶ್ರೀ ಸಾಯಣಾಚಾರ್ಯರು :

ಶ್ರೀ ವಿದ್ಯಾರಣ್ಯರ ಸಹೋದರರಿಂದ ಸಾಯಣಾಚಾರ್ಯರು ಹಿಂದೂ ಧರ್ಮ ಉಳಿಸುವುದಕ್ಕಾಗಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಹಾಗೂ ಅದರ ಶ್ರೇಯೋಭಿವೃದ್ಧಿಗಾಗಿ ಅವಿರತ ಶ್ರಮಿಸುತ್ತಾ ಶ್ರೀ ವಿದ್ಯಾರಣ್ಯರ ಜೊತೆಗೆ ಎಲ್ಲ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ಶ್ರಮಿಸಿದರು. ಶ್ರೀ ವಿದ್ಯಾರಣ್ಯರು ಸಮಾಧಿ ಸ್ಥಿತಿಗೆ ಹೋದ ನಂತರ ಶ್ರೀ ಸಾಯಣಾಚಾರ್ಯರು ವಿಜಯನಗರದ ಆಗುಹೋಗುಗಳ ಬಗ್ಗೆ ಅದರ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಸಲಹೆ ಸೂಚನೆಗಳನ್ನು ಕೊಡುವುದರ ಜೊತೆಗೆ ವಿಜಯನಗರದ ರಾಜಗುರುಗಳಾಗುತ್ತಾರೆ. ಶ್ರೀ ಹರಿಹರರಾಯರು ಮತ್ತು ಶ್ರೀ ಬುಕ್ಕರಾಯರು ಶ್ರೀಗುರು ವಿದ್ಯಾರಣ್ಯರ ಸಲಹೆಗಳನ್ನು ಕೇಳದೇ ಯಾವೊಂದು ಕೆಲಸಗಳನ್ನು ಮಾಡುತ್ತಿರಲಿಲ್ಲ. ಹಾಗೆಯೇ ಅವರ ನಂತರ ದೊರೆಯಾದ ಶ್ರೀ

ಇಮ್ಮಡಿ ಹರಿಹರರಾಯರು ಸಾಯಣಾಚಾರ್ಯರ ಸಲಹೆಗಳನ್ನು ಕೇಳದೇ ಯಾವುದೇ ಕಾರ್ಯಕ್ಕೆ ಕೈ ಹಾಕುತ್ತಿರಲಿಲ್ಲ.

ಬಹುಮನಿ ಸುಲ್ತಾನರ ಮೇಲೆ ರಂಜಾನ್ ತಿಂಗಳಲ್ಲಿಯೇ ಮೇಲೇರಿ ಹೋಗಿ ಅದನ್ನು ವಶಪಡಿಸಿಕೊಳ್ಳಬೇಕೆಂದು ಮಂತ್ರಾಲೋಚನಾ ಸಭೆಯಲ್ಲಿ ಒಬ್ಬೊಬ್ಬರು ಒಂದೊಂದು ತೆರನಾಗಿ ಅಭಿಪ್ರಾಯಗಳನ್ನು ಸೂಚಿಸಿದಾಗ ದೊರೆಯಾದ ಇಮ್ಮಡಿ ಹರಿಹರನು ಎದುರು ಪಕ್ಷದವರು ಪೂಜೆ, ಪ್ರಾರ್ಥನೆ, ಉಪವಾಸ ವ್ರತದಲ್ಲಿರುವಾಗ ನಾವು ಅವರ ಮೇಲೆ ಹೋಗುವುದು ವೀರೋಚಿತವಲ್ಲ ಎನ್ನುವರು. ಈ ರಾಕ್ಷಸರಿಗೆ ಧರ್ಮ, ನೀತಿ ನೋಡಬಾರದೆಂದು ನೆರೆದವರು ಹೇಳಿದಾಗ ಸಾಯಣಾಚಾರ್ಯರು 'ಜಯಾಪಜಯಗಳು ಅಶಾಶ್ವತ. ಧರ್ಮವೊಂದೇ ಅನಂತವಾದುದು. ವಿಜಯನಗರ ಸ್ಥಾಪನೆಯಾದುದು ಒಬ್ಬ ವೀರಸನ್ಯಾಸಿಯ ತಪಃಪ್ರಭಾವದಿಂದ; ಈಗಿರುವ ಸ್ಥಿತಿ ಮುಟ್ಟಿ ಇಡಿಯ ಆರ್ಯಾವರ್ತದ ಕಣ್ಮಣಿಯಾದುದು ಗತಿಸಿದ ಧರ್ಮ ಪ್ರಭುಗಳಾದ ಶ್ರೀ ಹರಿಹರರಾಯರು, ಶ್ರೀ ಬುಕ್ಕರಾಯರು ಇವರ ಪುಣ್ಯಪ್ರಭಾವದಿಂದ! ಈ ಮಹಾಸಾಮ್ರಾಜ್ಯದ ಹುಟ್ಟು, ಬೆಳವಣಿಗೆಗೆ ಪಾಶವೀಶಕ್ತಿಗಿಂತಲೂ ತಪೋಶಕ್ತಿಯೇ ಕಾರಣವೆಂಬುದು ಸ್ವತಃಸಿದ್ಧವಾಗಿದೆ. ಧರ್ಮದ ಅಡಿಗಲ್ಲಿನ ಮೇಲೆ ನಿಂತ ರಾಜ್ಯ, ಧರ್ಮಮಾರ್ಗದಲ್ಲಿ ನಡೆದರೆ ಶ್ರೇಯಸ್ಸು; ಧರ್ಮಕ್ಕೆ ಗ್ಲಾನಿ ಬಂದರೆ ಯಾವ ಶಕ್ತಿಯೂ ವಿಜಯನಗರವನ್ನು ಉಳಿಸಲಾರದು'[೨೫] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೧೬) ಎನ್ನುವರು. ಮುದ್ದಪ್ಪ ದಂಡನಾಯಕರು ಶ್ರೀ ಸಾಯಣಾಚಾರ್ಯರು ರಾಜ್ಯಸೂತ್ರಗಳನ್ನು ವಹಿಸಿಕೊಳ್ಳಬೇಕೆಂದು ಪ್ರಾರ್ಥಿಸಿದಾಗ ದೊರೆಗಳು ಸಹ ಅದನ್ನೇ ಸೂಚಿಸುವರು.

ಸಾಯಣಾಚಾರ್ಯರು 'ಪೂಜ್ಯ ಹಿರಿಯರು ಶ್ರೀ ಶ್ರೀ ವಿದ್ಯಾರಣ್ಯರು ಒಮ್ಮೆ ವೇದಭಾಷ್ಯ ಗ್ರಂಥಗಳನ್ನು ಬದಿಗಿರಿಸಿ ನನ್ನನ್ನು ರಾಜಕಾರಣಕ್ಕೆ ಎಳೆದರು. ಎರಡನೆಯ ಬಾರಿ ಕಂಪಣ್ಣನಾಯಕರ ತೃಪ್ತ್ಯರ್ಥವಾಗಿ ನಾನು ಮಂತ್ರಿಪದವಿಯನ್ನು ನಿರ್ವಹಿಸಬೇಕಾಯಿತು. ಇನ್ನು ನನ್ನ ಮೂರನೆಯ ಪರೀಕ್ಷೆ ಲೌಕಿಕ ಜೀವನವನ್ನರಿಯದ ನಾನು ಈ ಮಹಾಸಾಮ್ರಾಜ್ಯದ ಮಹಾಮಂತ್ರಿತ್ವ ನಿರ್ವಹಿಸಲು ಸಮರ್ಥನೇ? ಮಹಾಪ್ರಭು, ತಾವು ನಮ್ಮ ನಾಯಕ ಮಣಿಗಳೂ ಅಭಿಮಾನಕ್ಕೆ ಕಟ್ಟುಬಿದ್ದು ಈ ಗೌರವವನ್ನು ನನಗೆ ಸಲ್ಲಿಸುತ್ತಿದ್ದೀರಿ. ಅಭಿಮಾನ ತೊರೆದು ವಿಚಾರ ಮಾಡಿ ನೋಡಿ ವಿಜಯನಗರ ಸಾಮ್ರಾಜ್ಯದ ಅಭ್ಯುದಯವೊಂದನ್ನಲ್ಲದೇ ನಾವು ಬೇರೆ ಯಾವ ಯೋಚನೆಯನ್ನೂ ಮಾಡತಕ್ಕದಲ್ಲ, ಯಾರನ್ನೂ ಮೆಚ್ಚಿಸತಕ್ಕದ್ದಲ್ಲ'[೨೬] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೧೮) ಎಂದು ಅದಕ್ಕೆ ಒಪ್ಪಿಗೆ ಸೂಚಿಸುವರು. ಆದರೆ ಮಂತ್ರಿಪದವಿಯ

ಯಾವ ಆಡಂಬರ, ರಕ್ಷಣೆಗೆ ಸೇವಕರನ್ನಿಟ್ಟುಕೊಳ್ಳಲು ಒಪ್ಪದ ಸಾಯಣಾಚಾರ್ಯರು ತಾನೊಬ್ಬ ಸನ್ಯಾಸಿ ತನಗಾವುದು ಬೇಕಿಲ್ಲ ಎಂದೇ ವಾದಿಸುತ್ತಾರೆ. ಕೊನೆಗೆ ದೊರೆಗಳ ಒತ್ತಾಯಕ್ಕೆ ಮಣಿದು ದೇಜಣ್ಣ ಎಂಬ ವ್ಯಕ್ತಿಯನ್ನು ಕಾಪಿನಭಟತ್ವಕ್ಕಿಟ್ಟುಕೊಳ್ಳುತ್ತಾರೆ. ಇಲ್ಲಿ ದೇಜಣ್ಣ ಎಂಬ ಕಾಲ್ಪನಿಕ ವ್ಯಕ್ತಿಯನ್ನು ಅ.ನ.ಕೃ ಚಿತ್ರಿಸಿದ್ದಾರೆ.

ಜಲತಂತ್ರ ವಿಶಾರದರಾದ ಸಿಂಗಮಭಟ್ಟನ ಭಾವನಾದ ರಾಮಭಟ್ಟ 'ಅ.ನ.ಕೃ ಚಿತ್ರಿಸಿದ ಕಾಲ್ಪನಿಕ ಪಾತ್ರ' ವಿಜಯನಗರದ ನೀರಾವರಿ ಯೋಜನೆಯನ್ನು ಹಾಳುಗೆಡವಲು ಬಂದವನು. ತದನಂತರ ಅವನು ಹಾಗೂ ಆತನ ಸ್ನೇಹಿತರ ಪರಿವಾರ ಸಿಕ್ಕಿಕೊಂಡಾಗ ತಾನು ಮಾಡಿದ ತಪ್ಪಿನ ಅರಿವಾಗಿ ಪ್ರಾಯಶ್ಚಿತ ಪಡುತ್ತಾನೆ. ರಾಜಧಾನಿಗೆ ಅನೇಕ ರೀತಿಯ ಉಪಕಾರಗಳನ್ನು ಮಾಡುತ್ತಾನೆ. ಆದರೂ ತಾನು ಮಾಡಿದ ಅಪರಾಧಿ ಭಾವನೆ ಕಾಡುತ್ತಿರುವ ಸಮಯದಲ್ಲಿ ಶ್ರೀ ಸಾಯಣರ ಆಶೀರ್ವಚನ ದೊರೆತ ಮೇಲೆ ರಾಮಭಟ್ಟನಲ್ಲಿ ಸೂಕ್ಷ್ಮ ಪರಿವರ್ತನೆಯಾಗುತ್ತದೆ. ಅವನ ದುಗುಡ, ಒಳಗುದಿ ಅಡಗಿ ಶಾಂತಿ ನೆಲೆಸುತ್ತದೆ. ಮಹಾಮಂತ್ರಿತ್ವದ ಜವಾಬ್ದಾರಿ ಅತ್ಯಧಿಕವಾಗಿದ್ದರೂ ಶ್ರೀ ಸಾಯಣರು 'ಗೀರ್ವಾಣ ವಿದ್ಯಾಪೀಠ'ದ ಪುರೋಭಿವೃದ್ಧಿಯಲ್ಲಿ ವಿಶೇಷ ಆಸಕ್ತರಾಗಿದ್ದರು.

ಮಾತೋಶ್ರೀ ಗೌರಾಂಬಿಕಾದೇವಿಯವರು ಶ್ರೀ ಸಾಯಣರನ್ನು ಬರಹೇಳಿ ರಾಜ್ಯದಲ್ಲಿ ನಡೆಯುತ್ತಿರುವ ಕೆಲವು ಅಸಮಾಧಾನಕರ ವಿಷಯಗಳನ್ನು ಪ್ರಸ್ತಾಪಿಸಿ ಯುವರಾಜಕುಮಾರ ಶ್ರೀ ಬುಕ್ಕರಾಯರು ತನ್ನನ್ನು ಉತ್ತರಾಧಿಕಾರಿಯಾಗಿ ಮಾಡುವಂತೆ ಸ್ಪಷ್ಟವಾಗಿ ನುಡಿಯುತ್ತಿದ್ದಾರೆ. ಇದನ್ನು ಹೇಗಾದರೂ ಮಾಡಿ ಸರಿಪಡಿಸುವಂತೆ ಕೇಳಿಕೊಳ್ಳುವರು. ದೊರೆಯಾದ ಇಮ್ಮಡಿ ಹರಿಹರನ ಹತ್ತಿರ ಉತ್ತರಾಧಿಕಾರಿಯನ್ನು ಘೋಷಿಸುವುದರ ಬಗ್ಗೆ ಪ್ರಸ್ತಾಪಿಸುವರು. ರಾಜಮಾತೆಯವರ ನಿಧನಾ ನಂತರ ಮಹಾಪ್ರಭುಗಳಲ್ಲಿ ವೈರಾಗ್ಯ ಮೂಡಿ ರಾಜ್ಯಾಡಳಿತವನ್ನು ಯುವರಾಜ ಬುಕ್ಕರಾಯರಿಗೆ ವಹಿಸಿಕೊಟ್ಟು ಹೆಚ್ಚಿನ ಸಮಯ ಗಿರಿವನದಲ್ಲಿಯೇ ಕಳೆಯುತ್ತಾ ಶ್ರೀಕಂಠಶರ್ಮರ ಹತ್ತಿರ ಧರ್ಮಗ್ರಂಥಗಳನ್ನು ಓದಿಸಿಕೊಳ್ಳುತ್ತಾರೆ. ಒಂದು ದಿನ ಶ್ರೀಕಂಠಶರ್ಮ ಮತ್ತು ಪ್ರಭುಗಳ ಮಧ್ಯೆ ತ್ಯಾಗದ ವಿಷಯವಾಗಿ ಧರ್ಮಜಿಜ್ಞಾಸೆ ನಡೆದ ಸಂದರ್ಭದಲ್ಲಿ ಶ್ರೀ ಸಾಯಣರು ಮಧ್ಯ ಪ್ರವೇಶಿಸಿ 'ಬೆಂಕಿಯಲ್ಲಿ ಕಾವು, ವಾಯುವಿನಲ್ಲಿ ವೇಗ, ಜಲದಲ್ಲಿ ಅಗ್ನಿ ಹೇಗೆ ಸಮಾವೇಶಗೊಂಡಿವೆಯೋ ಹಾಗೆ ಮನುಷ್ಯನಲ್ಲಿ ತ್ಯಾಗ ಸಮಾವೇಶಗೊಂಡಿರಬೇಕು. ಅದು ನೈಸರ್ಗಿಕ ಗುಣದಿಂದಲೇ ಅಭಿವ್ಯಕ್ತವಾಗಿ, ಪ್ರಭಾವ ಬೀರಬೇಕು'[೨೭] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೯೯) ಎಂದು ಉಪದೇಶಿಸುವರು. ಸಾಯಣರು ಮಹಾಪ್ರಭುಗಳಿಗೆ ತಾವು ಶೃಂಗೇರಿಗೆ ಹೋಗಬೇಕಾಗಿರುವುದರ ನಿರೂಪ ಬಂದ ವಿಷಯ ತಿಳಿಸಿ ಶ್ರೀ ವಿರೂಪಾಕ್ಷ, ಶ್ರೀ

ಭುವನೇಶ್ವರಿಯರ ಅನುಗ್ರಹದಿಂದ ಸಾಮ್ರಾಜ್ಯ ಭದ್ರವೂ, ಸುಭಿಕ್ಷವೂ ಆಗಿದೆ. ನಾವಿಲ್ಲಿ ಮಾಡಬೇಕಾದ ಕೆಲಸ ಮುಗಿದಂತಾಗಿದೆ. ಶೃಂಗೇರಿಗೆ ಹೋಗಲು ಅಪ್ಪಣೆ ದಯಪಾಲಿಸಬೇಕು ಎಂದಾಗ ದೊರೆಗಳು ಮನಸಿಲ್ಲದ ಮನಸ್ಸಿನಿಂದ ಅವರನ್ನು ಬೀಳ್ಕೊಟ್ಟರು.

೫.೧.೩ ಶ್ರೀ ವ್ಯಾಸತೀರ್ಥರು :

ವ್ಯಾಸತೀರ್ಥ ಗುರುಗಳು ಶ್ರೀಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ರಾಜಗುರುಗಳಾಗಿದ್ದವರು. ಇವರು ರಾಜಕಾರ್ಯದಲ್ಲಿ ಕೃಷ್ಣದೇವರಾಯರಿಗೆ ಸಲಹೆ ಸೂಚನೆಗಳನ್ನು ಕೊಡುವುದಷ್ಟೇ ಅಲ್ಲ ದೊರೆಯಾದ ಕೃಷ್ಣದೇವರಾಯರಿಗೆ ಒದಗಿದ್ದ ಕುಹುಯೋಗದ ಗಂಡಾಂತರವನ್ನು ಹೋಗಲಾಡಿಸುತ್ತಾರೆ. ಒಂದು ದಿನ ಶ್ರೀಕೃಷ್ಣದೇವರಾಯರು ಸಂಸಾರ ಸಮೇತರಾಗಿ ಶ್ರೀಮಠಕ್ಕೆ ಬಂದಾಗ ಗುರುಗಳಾದ ಶ್ರೀವ್ಯಾಸತೀರ್ಥರು ರಾಜಕುಮಾರ, ರಾಜಕುಮಾರಿಯನ್ನು ಹತ್ತಿರ ಕರೆದು ಕೂಡಿಸಿಕೊಂಡು ಪ್ರೀತಿಯಿಂದ ಯುವರಾಜ ತಿರುಮಲಯ್ಯನನ್ನು ಏನಾಗುವೆ? ಎಂದಾಗ ಯುವರಾಜ ಸ್ವಲ್ಪವೂ ಅನುಮಾನ ಪಡದೇ ದೊರೆಗಳಾಗುತ್ತೇವೆ. ಬಹುಮನಿ ಸುಲ್ತಾನರೊಂದಿಗೆ ಕಾದಾಡುತ್ತೇವೆ. ಅವರು ವಿಜಯನಗರದ ಶತ್ರುಗಳು ಎನ್ನುವನು. ಆಗ ಗುರುಗಳು 'ನಿಮ್ಮ ಅಪ್ಪಾಜಿಯವರು ದೈತ್ಯರೊಂದಿಗೆ ಕಾದಾಡುತ್ತಿರುವಂತೆ ನಾವೂ ಕಾದಾಡುತ್ತಿದ್ದೇವೆ ಯುವರಾಜಕುಮಾರರೇ. ಅವರ ಶತ್ರುಗಳು ಕಣ್ಣಗೆ ಕಾಣಿಸತಕ್ಕವರು; ನಮ್ಮ ಶತ್ರುಗಳು ಕಣ್ಣಿಗೆ ಕಾಣಿಸತಕ್ಕವರಲ್ಲ. ಪ್ರತಿಯೊಬ್ಬ ಮನುಷ್ಯನ ಬಾಳುವೆಯೂ ಸಂಗ್ರಾಮಗಳ ಮಾಲೆ. ಶಾಂತಿ ಎನ್ನುವುದು ಎರಡು ಸಂಗ್ರಾಮಗಳ ಮಧ್ಯೆ ಇರುವ ಯುದ್ಧಸ್ತಂಭನ'[೨೮] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೦೯) ಎಂಬ ವಿಚಾರಗಳನ್ನು ತಿಳಿಸುತ್ತಾ ಕನಕದಾಸರ ಪರಿಚಯವನ್ನು ಮಾಡಿಕೊಟ್ಟು ಆತನಲ್ಲಿರುವ ದೈವಭಕ್ತಿಯನ್ನು ಕುರಿತು ಹೇಳುತ್ತಾರೆ. ಆಗ ಮಹಾಪ್ರಭುಗಳು ರಾಜ್ಯ, ಕೋಶ, ಲೋಕದ ಜಂಜಡಗಳನ್ನೆಲ್ಲ ತೊರೆದು ಕನಕದಾಸರಂತೆ ತಮ್ಮ ಚರಣಕಮಲಗಳಲ್ಲಿ ಆಶ್ರಯಪಡೆಯಬೇಕೆಂದು ನಮ್ಮ ಮನಸ್ಸು ತವಕಿಸುತ್ತಿದೆ ಎಂದಾಗ ಗುರುಗಳಾದ ವ್ಯಾಸತೀರ್ಥರು 'ರಾಜ್ಯ ರಕ್ಷಕರು ಸನ್ಯಾಸಿಗಳಾದರೆ ರಾಜ್ಯದ ಗತಿಯೇನು? ನೀವು ವಿಜಯನಗರ ಸಿಂಹಾಸನವನ್ನಲಂಕರಿಸಿರುವುದರಿಂದಲ್ಲವೇ ನಮ್ಮ ತಪಸ್ಸು ನಿರ್ಭಾದಿತವಾಗಿ ವರ್ಧಿಸುತ್ತಿರುವುದು. ಲೋಕವನ್ನು ಬಿಟ್ಟು ದೂರ ನಿಂತು, ಲೋಕ ಕಲ್ಯಾಣವನ್ನು ಬಯಸುವುದು ನಮ್ಮ ಧರ್ಮ. ಲೋಕವನ್ನು ಕಟ್ಟಿಕೊಂಡು, ಅದರ ಕಷ್ಟ ಸುಖಗಳಲ್ಲಿ ತಾದಾತ್ಮ್ಯ ಹೊಂದಿ, ಲೋಕ ಕಲ್ಯಾಣ ಸಾಧಿಸುವುದು ನಿಮ್ಮ ಧರ್ಮ'[೨೯] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು

ತೇಜೋಭಂಗ, ಪುಟ-೧೩) ತಾತ್ಕಾಲಿಕವಾಗಿ ಈಗ ವಿಜಯನಗರಕ್ಕೆ ಯಾವ ಶತ್ರುಬಾಧೆಯ ಭಯವೂ ಇಲ್ಲ. ತಾವು ತಿರುಪತಿ ಕ್ಷೇತ್ರಕ್ಕೆ ಹೋಗಿ, ತಿರುವೆಂಕಟನಾಥನ ಸೇವೆ ಮಾಡಬೇಕೆಂದಿರುವ ಇಚ್ಛೆಯನ್ನು ವ್ಯಕ್ತಪಡಿಸಿ, ಇಲ್ಲಿಯ ಕೆಲಸ ಕಾರ್ಯಗಳನ್ನು ತಮ್ಮ ಸ್ಥಾನದಲ್ಲಿ ನಿಂತು ಶಿಷ್ಯನಾದ ವಿಜಯದಾಸರು ನಿರ್ವಹಿಸುವರು ಎನ್ನುವರು.

ಒಂದು ದಿನ ಹೊಯ್ಸಳನಾಡಿನಿಂದ ನರಸಿಂಹಶರ್ಮನೆಂಬ ಬ್ರಾಹ್ಮಣೋತ್ತಮನು ವಿಜಯನಗರಕ್ಕೆ ಬಂದು ಶ್ರೀ ಲಕ್ಷ್ಮೀಸಮೇತನಾಗಿ ನನ್ನ ಮೂರ್ತಿಯನ್ನು ಸ್ಥಾಪಿಸು ಅದು ವಿಜಯನಗರಕ್ಕೆ ರಕ್ಷಾಕವಚವಾಗುತ್ತದೆ ಎಂದು ಅಪ್ಪಣೆ ಕೊಡಿಸಿರುವನು ಎಂಬ ತಮ್ಮ ಆಕಾಂಕ್ಷೆಯನ್ನು ವ್ಯಾಸತೀರ್ಥರಲ್ಲಿ ನಿವೇದಿಸಿಕೊಂಡಾಗ ಅವರು ದೊರೆಯ ಹತ್ತಿರ ಆ ವಿಷಯ ಪ್ರಸ್ತಾಪಿಸಿ ಬ್ರಾಹ್ಮಣನಿಗೆ ಅವಕಾಶ ಕಲ್ಪಿಸಿಕೊಡುವರು. ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಮೂರ್ತಿ ಸ್ಥಾಪನೆಯಾಗುವವರೆಗೆ ತಾವು ತಿರುಪತಿಗೆ ಪ್ರಯಾಣ ಬೆಳೆಸದೆ ರಾಜ್ಯದಲ್ಲಿಯೇ ಇರುವುದಾಗಿ ತಿಳಿಸುವರು. ದೊರೆಗೆ 'ಭಗವತ್ಪಾದರಾದ ಶ್ರೀ ಶ್ರೀ ವಿದ್ಯಾರಣ್ಯ ಮುನಿಗಳು ರಾಜನೀತಿ ಶಾಸ್ತ್ರ ರಚಿಸಿ ಈಗ್ಗೆ ಎರಡು ಶತಮಾನಗಳಾದವು. ಈ ದೀರ್ಘಕಾಲಾವಧಿಯಲ್ಲಿ ರಾಜಕೀಯ ರಂಗದಲ್ಲಿ ಮಾರ್ಪಾಟುಗಳೂ, ಕ್ರಾಂತಿಗಳೂ ಆಗಿವೆ. ರಾಜನೀತಿ ವಿಶಾರದರಾದ ನೀವು ಮುಂದಿನ ಪೀಳಿಗೆಯ ಸಲುವಾಗಿ ರಾಜನೀತಿ ಶಾಸ್ತ್ರ ರಚಿಸಬೇಕು'[೩೦] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೧೭) ಎಂದು ಹೇಳುವರು. ರಾಜಪುರೋಹಿತರಾದ ಮೃತ್ಯುಂಜಯ ಶಾಸ್ತ್ರೀಗಳು ಶ್ರೀಕೃಷ್ಣದೇವರಾಯರಿಗೆ 'ಕುಹುಯೋಗ'ದ ಗಂಡಾಂತರವಿರುವ ವಿಷಯವನ್ನು ಮಹಾಮಂತ್ರಿಗಳಿಗೆ ತಿಳಿಸಿ ಆ ಗಂಡಾಂತರವಿರುವುದು 'ಮಾಘ ಬಹುಳ ಅಮವಾಸ್ಯೆ ಗುರುವಾರ ಎರಡು ಗಂಟೆ ನಲವತ್ತು ನಿಮಿಷದಿಂದ ಎರಡು ಗಂಟೆ ಐವತ್ತೈದು ನಿಮಿಷಗಳವರೆಗೆ ಅಂದರೆ ಹದಿನೈದು ನಿಮಿಷಗಳು ಕುಹುಯೋಗವಿದೆ. ಈ ಯೋಗದ ದುಷ್ಪ್ರಭಾವ ಮತ್ತೆ ಹದಿಮೂರು ನಿಮಿಷಗಳಿವೆ. ಕುಹುಯೋಗದ ಕಾಲಾವಧಿ ಇಪ್ಪತ್ತೆಂಟು ನಿಮಿಷಗಳೆಂದು'[೩೧] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೭೯) ಹೇಳಿದಾಗ ಎಲ್ಲರೂ ಚಿಂತೆಗೊಳಗಾಗುವರು. ಮಹಾಪ್ರಭುಗಳಿಂದ ಯಾರಾದರೂ ರಾಜ್ಯದಾನ ಪಡೆದು ಸಿಂಹಾಸನಾಸೀನರಾದರೆ ಪ್ರಭುಗಳಿಗೆ ಕುಹುಯೋಗದ ಕಂಟಕ ಕಳೆದು ಅದನ್ನು ಪಡೆದುಕೊಂಡವರಿಗೆ ಆ ಕಂಟಕ ಬರುವುದು ಎನ್ನುವರು. ಆದರೆ ಯತಿಗಳಿಗೆ ಈ ನಿಯಮ ಅನ್ವಯಿಸುವುದಿಲ್ಲವಾದ್ದರಿಂದ ಶ್ರೀ ವ್ಯಾಸ ಭಗವಾನರೊಬ್ಬರೇ ನಮ್ಮನ್ನು ಈ ಸಂಕಟದಿಂದ ಪಾರು ಮಾಡಬಲ್ಲವರು ಎಂದು ಹೇಳಿದಾಗ ಮಹಾಮಂತ್ರಿಗಳು ಕೂಡಲೇ ಬರುವಂತೆ ತಿರುಪತಿಗೆ ವ್ಯಾಸತೀರ್ಥರಿಗೊಂದು ಪತ್ರ ಕಳುಹಿಸಿಕೊಡುತ್ತಾರೆ. ಭಗವಾನ ವ್ಯಾಸತೀರ್ಥರು ತಾವು ಬಂದು

'ಕುಹುಯೋಗ'ದ ನಿವಾರಣೆ ಮಾಡುವುದಾಗಿ ತಿಳಿಸುವರು. ಮಾಘ ಶುದ್ಧ ಅಮವಾಸ್ಯೆಯ ದಿನ ಶ್ರೀಕೃಷ್ಣದೇವರಾಯರು ಭಗವಾನ ಶ್ರೀ ವ್ಯಾಸತೀರ್ಥರಿಗೆ ರಾಜ್ಯದಾನ ಮಾಡಲು ಮುಂದಾಗಿ ಒಮ್ಮೆ ಕೊಟ್ಟ ದಾನವನ್ನು ಹಿಂದಕ್ಕೆ ಪಡೆಯುವುದು ಕ್ಷತ್ರಿಯೋಚಿತವೇ ಎಂದು ಮಹಾಮಂತ್ರಿಗಳ ಜೊತೆಗೆ ಚರ್ಚಿಸುವರು. ರಾಜ್ಯದಾನ ಮಹೋತ್ಸವಕ್ಕೆ ಬರಲು ಎಲ್ಲರಿಗೂ ಆಮಂತ್ರಣ ಪತ್ರಗಳು ಕಳಿಸಲ್ಪಟ್ಟು ಮುಹೂರ್ತಕ್ಕೆ ಸ್ವಲ್ಪ ಪೂರ್ವದಲ್ಲಿ ಮಹಾಪ್ರಭುಗಳು ಒಂದು ಚಿನ್ನದ ತಣಿಗೆಯಲ್ಲಿ ಗುರುದೇವರ ಪಾದಗಳನ್ನಿಟ್ಟು ಅದನ್ನು ತೊಳೆದು ತರುವಾಯ ಅಸಂಖ್ಯಾತ ನವರತ್ನಗಳಿಂದ ಶ್ರೀಗಳವರನ್ನು ಪೂಜಿಸಿದರು. ಭಗವಾನರನ್ನು ಸಿಂಹಾಸನದ ಮೇಲೆ ಕೂಡಿಸಿ, ಮಹಾಪ್ರಭುಗಳು ತಮ್ಮ ರಾಜಖಡ್ಗ ಹಿಡಿದು, ಮೊಣಕಾಲೂರಿ ರಾಜಭಕ್ತಿ ಸಲ್ಲಿಸಿದರು.

ಬದ್ಧಪದ್ಮಾಸನದಲ್ಲಿ ಕುಳಿತ ಶ್ರೀ ವ್ಯಾಸತೀರ್ಥ ಭಗವಾನರು ಕಣ್ಮುಚ್ಚಿ ಧ್ಯಾನಪರವಶರಾದಾಗ ಎಲ್ಲರೂ ಭಯಭ್ರಾಂತರಾಗುವರು. ಮಹಾಪ್ರಭುಗಳಿಗೆ ಒಂದೊಂದು ಕ್ಷಣವೂ ಒಂದೊಂದು ಯುಗವಾಗಿ ಪರಿಣಮಿಸಿ ಕುಹುಯೋಗದ ಕಾಲಾವಧಿ ಇಪ್ಪತ್ತೆಂಟು ನಿಮಿಷಗಳು ಕಳೆದ ಕೂಡಲೇ ಕಣ್ಣುಬಿಟ್ಟು ಪ್ರಸನ್ನವದನರಾಗಿ ಶ್ರೀ ಭಗವಾನರು 'ನಾರಾಯಣ ನಾರಾಯಣ' ಎಂದರು. ಭಗವಾನರು ಮಹಾಪ್ರಭುಗಳನ್ನು ಹತ್ತಿರ ಕರೆದು ತಲೆಯ ಮೇಲೆ ಅಭಯಹಸ್ತವನ್ನಿಟ್ಟು 'ನಮಗಾಗಿ ಎಷ್ಟು ಯೋಚನೆ ಮಾಡುತ್ತೀರಿ ದೊರೆ ಶ್ರೀ ಮನ್ನಾರಾಯಣ ಅನುಗ್ರಹದಿಂದ ಎಲ್ಲ ಅರಿಷ್ಟಗಳೂ ನಿವಾರಣೆಯಾದವು ಇನ್ನು ನೀವು ನಿಶ್ಚಿಂತರಾಗಿರಬಹುದು'[೩೨] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ–೯೮) ಎಂದು ಅಲ್ಲಿ ಸಂಗ್ರವಾಗಿದ್ದ ರತ್ನರಾಶಿಯನ್ನು ಸಮಸ್ತರಿಗೂ ಹಂಚಿಕೊಡುತ್ತಾರೆ. ಭಗವಾನರು ಸಿಂಹಾಸನ ಬಿಟ್ಟೆದ್ದು ತಮ್ಮ ಸಿಂಹಾಸನ ತಾವು ಒಪ್ಪಿಸಿಕೊಳ್ಳಬೇಕೆಂದು ಮಹಾಪ್ರಭುಗಳಿಗೆ ಹೇಳುವರು.

ಹಲವು ವರ್ಷಗಳವರೆಗೆ ವಿಜಯನಗರಕ್ಕೆ ಶ್ರೀ ವ್ಯಾಸತೀರ್ಥರು ಬಾರದೇ ಇದ್ದಾಗ ದೊರೆಯಾದ ಶ್ರೀ ಅಚ್ಯುತರಾಯರು ಅವರಿಗೊಂದು ಪ್ರಾರ್ಥನಾ ಪತ್ರವನ್ನು ಕಳಿಸಿಕೊಡುತ್ತಾರೆ. ಶ್ರೀ ಭಗವಾನರು ಸಹ ಮಾಘಮಾಸದ ವೇಳೆಗೆ ಅಲ್ಲಿಗೆ ಬಂದು ಶ್ರೀ ಮಾಧ್ವನವಮಿ ಮಹೋತ್ಸವವನ್ನು ವಿಜಯನಗರದಲ್ಲಿಯೇ ನೆರವೇರಿಸಬೇಕೆಂದಿರುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿ ಉಡುಪಿಯ ಕೆಲಸ ಕಾರ್ಯಗಳನ್ನು ತಮ್ಮ ಶಿಷ್ಯ ವಾದಿರಾಜರಿಗೆ ವಹಿಸಿ ಮಿತಪರಿವಾರದೊಂದಿಗೆ ವಿಜಯನಗರಕ್ಕೆ ಬರುವರು. ಅಲ್ಲೆಲ್ಲ ಜನ ಉತ್ಸಾಹಗೊಂಡು ಶ್ರೀ ವ್ಯಾಸತೀರ್ಥರನ್ನು ಮುಖ್ಯ ಬೀದಿಗಳಲ್ಲೆಲ್ಲ ಮೆರವಣಿಗೆ ಮಾಡುವರು. ಶ್ರೀಗಳು ರಾಮರಾಯರನ್ನು ಹತ್ತಿರ ಕರೆದು ನಾಳೆ ಮಧ್ಯಾಹ್ನ ನಂತರ ಮಠಕ್ಕೆ ಬನ್ನಿ. ಕೆಲವೊಂದು ರಹಸ್ಯ ವಿಷಯಗಳನ್ನು ಮಾತನಾಡಬೇಕಾಗಿದೆ ಎಂದು ಸೂಚಿಸುವರು.

'ಭಗವಾನ್ ಮಾರುತಿಯಂತೆ ಜಿತೇಂದ್ರಿಯರೂ, ನೈಷ್ಠಿಕ ಬ್ರಹ್ಮಚಾರಿಗಳೂ, ಮಹಾತಪಸ್ವಿಗಳೂ ಆದ ಶ್ರೀ ವ್ಯಾಸತೀರ್ಥರಿಗೆ ತೊಂಬತ್ತೆರಡನೆಯ ವಯಸ್ಸು ನಡೆಯುತ್ತಿದ್ದರೂ ಅದು ಅವರ ಉತ್ಸಾಹ, ಸೇವಾಕಾಂಕ್ಷೆ ದೇಶವಾತ್ಸಲ್ಯಗಳನ್ನು ಸ್ವಲ್ಪವೂ ಕುಂದಿಸಿರಲಿಲ್ಲ'[೩೩] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೧೯೮) ಭಗವಾನರು ಸ್ನಾನ, ಪೂಜೆ, ಮುಗಿಸಿ ಭಗವದ್ಪ್ರಸಾದ ಸ್ವೀಕರಿಸಿ, ಪುರಂದರದಾಸರಿಗೆ ಭಾಗವತಸೇವೆ ಆರಂಭವಾಗಲಿ ಎಂದು ಅದರಲ್ಲಿಯೇ ತಲ್ಲೀನರಾಗಿ ಎದ್ದು ನಿಂತು ಒಂದು ಹಾಡನ್ನು ಹಾಡಿದಾಗ ಕನಕದಾಸರು "ಶ್ರೀಕೃಷ್ಣಾರ್ಪಣಮಸ್ತು" ಎನ್ನುವರು. ತದನಂತರ ಕನಕದಾಸರು ಪುರಂದರದಾಸರಿಗೆ ಶ್ರೀಗಳು ಪೂರ್ಣತ್ವವನ್ನು ಪಡೆಯುವ ಕಾಲ ಬಹಳ ದೂರವಿಲ್ಲ ಎಂದರು. ರಾಮರಾಯರು ಶ್ರೀಗಳನ್ನು ಭೇಟಿಯಾಗಲು ಬಂದ ಸಂದರ್ಭದಲ್ಲಿ ಭಗವಾನರು ಶ್ರೀ ಶ್ರೀಕೃಷ್ಣದೇವರಾಯರ ವೈಕುಂಠಯಾತ್ರೆಯ ನಂತರ ರಾಜಧಾನಿಯಲ್ಲಿ ನಡೆದ ವಿದ್ಯಮಾನಗಳನ್ನೆಲ್ಲ ಕೇಳಿ ದುಃಖಿತರಾಗುತ್ತಾರೆ. 'ಶ್ರೀ ಶ್ರೀ ವಿದ್ಯಾರಣ್ಯ ಭಗವಾನರ ದಿವ್ಯಸಂದೇಶ ಜನಗಳ ಮನಸ್ಸಿನಿಂದ ಇಷ್ಟು ಬೇಗ ಮರೆಯಾಗಬೇಕೆ? ನಾನು-ನನ್ನದು-ನನಗೆ ಎನ್ನುವ ಸ್ವಾರ್ಥ ಭೂತ ಎದ್ದು ಕುಳಿತರೆ, ಅದರ ಹಸಿವು ತೃಷೆಗಳನ್ನು ಯಾರಣಗಿಸಲು ಸಾಧ್ಯ. ವಿಜಯನಗರ ಸಾಮ್ರಾಜ್ಯದ ಹುಟ್ಟು, ಬೆಳವಣಿಗೆ, ಉಚ್ಛ್ರಾಯಕ್ಕೆ ತ್ಯಾಗ, ತಪಸ್ಸೇ ಕಾರಣ. ಅದು ಯಾವಾಗ ಶಿಥಿಲವಾಗುವುದೋ ಸಾಮ್ರಾಜ್ಯ ಒಡೆದು ನುಚ್ಚು ನೂರಾಗುತ್ತದೆ.'[೩೪] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೨೦೦) ಸಾಮ್ರಾಜ್ಯದ ಭದ್ರತೆಗೆ ಐಕಮತ್ಯ ಅತ್ಯಗತ್ಯ ಎಂದೆಲ್ಲ ಚರ್ಚಿಸಿ ಶ್ರೀ ಭಗವಾನರು ಶ್ರೀ ಅಚ್ಯುತದೇವರಾಯರ ನಂತರದ ಉತ್ತರಾಧಿಕಾರಿಯನ್ನು ನೇಮಿಸಬೇಕು. ಅವರ ಪುತ್ರ ಅಲ್ಪಾಯು ಎಂದು ರಾಮರಾಯರಿಗೆ ತಿಳಿಸುತ್ತ ಶ್ರೀ ಅಚ್ಯುತದೇವರಾಯರ ತಮ್ಮನಾದ ಶ್ರೀ ಸದಾಶಿವರಾಯರ ಕುರಿತು ಅವರ ವಿಚಾರಗಳನ್ನು ಕೇಳುತ್ತಾರೆ. ಕ್ಷಣಾರ್ಧದಲ್ಲಿಯೇ ಶ್ರೀ ಭಗವಾನರು ರಾಮರಾಯರಿಗೆ ಪ್ರತಿರೋಧವಿಲ್ಲದಿದ್ದರೆ ಸಾಮ್ರಾಜ್ಯದ ವಜ್ರಕಿರೀಟವನ್ನೆತ್ತಿ ನಾವೇ ನಿಮ್ಮ ಮಸ್ತಕದ ಮೇಲಿಡುತ್ತಿದ್ದೆವು. ಆ ಸ್ಥಾನಕ್ಕೆ ಅರ್ಹರಾದವರು ತಾವೊಬ್ಬರೇ ಆದರೆ ಸಮಸ್ಯೆಗಳು ಉದ್ಭವಿಸುತ್ತವೆ ಎಂದಾಗ ರಾಮರಾಯರು ನನಗೆ ಸಾಮ್ರಾಜ್ಯ ಸಿಂಹಾಸನಕ್ಕಿಂತಲೂ ಮಿಗಿಲಾದುದು ತಮ್ಮ ಕೃಪಾಶೀರ್ವಾದ ಎನ್ನುವನು.

ಪರೋಕ್ಷ ಜ್ಞಾನಿಗಳಾದ ಭಗವಾನ ಶ್ರೀ ವ್ಯಾಸತೀರ್ಥರು ತಮ್ಮ ಉತ್ತರಾಧಿಕಾರಿಯನ್ನಾಗಿ ಶ್ರೀನಿವಾಸತೀರ್ಥರನ್ನು ಮಾಡಿ, 'ಫಾಲ್ಗುಣ ಬಹುಳ ಚತುರ್ಥಿ ದಿನ ಸೂರ್ಯೋದಯಕ್ಕೆ ಮುನ್ನವೇ ಎದ್ದ ಭಗವಾನರು ತುಂಗಭದ್ರೆಯಲ್ಲಿ ಮಿಂದು, ನಿತ್ಯಪೂಜೆ ನೆರವೇರಿಸಿ,

"ಪುಟ್ಟ ಮಾಡೋ ಸೃಷ್ಟೀಶ ಪರಿಕೃಷ್ಣ

ಪಟ್ಟಾಭಿರಾಮನೆ ಪರಮ ನಾ ಭುವಿಯೊಳಗೆ ಬಹುದಿನ ಕಳೆಯಿತೋ

ಪುಟ್ಟದಂತೆ ಪುರುಷೋತ್ತಮನೆ

ಗಟ್ಟ್ಯಾಗಿ ನಿನ್ನ ಪಾದಗಳ ನಂಬಿದೆ ದೇವಾ"[೩೫]

ಎಂದು ಹಾಡುತ್ತ ನಾರಾಯಣ ನಾಮಸ್ಮರಣೆ ಮಾಡುತ್ತ ನಾರಾಯಣನಲ್ಲಿ ಲೀನವಾದರು. (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೨೦೫)

೫.೧.೪ ಶ್ರೀ ಉಗ್ರಚನ್ನವೀರ ಸ್ವಾಮಿಗಳು :

ಉಗ್ರಚನ್ನವೀರ ಸ್ವಾಮಿಗಳು ಚಿತ್ರದುರ್ಗದ ದೊರೆಯಾದ ಚಿಕ್ಕಣ್ಣನಾಯಕನಿಗೆ ಶಿವದೀಕ್ಷೆಯನ್ನು ಕೊಟ್ಟ ಗುರುಗಳು. ಒಮ್ಮೆ ಸ್ವಾಮಿಗಳು ದುರ್ಗಕ್ಕೆ ದಯಮಾಡಿಸಿದ ಸಂದರ್ಭದಲ್ಲಿ ವಿರಕ್ತ ಪಂಥದ ಜಂಗಮರಿಂದ ವಚನ ವ್ಯಾಖ್ಯಾನವನ್ನು ಕೇಳಿ ತಾನೂ ಕೂಡ ವೀರಶೈವನಾಗಬೇಕೆಂಬ ಹಂಬಲದಿಂದ ಶಿವದೀಕ್ಷೆ ಪಡೆದುಕೊಂಡಾಗ ಆತನ ನಾಗತಿಯರೂ ಸಹ ಅದೇ ಮಾರ್ಗ ತುಳಿಯುತ್ತಾರೆ. ಯಾವ ಧೃಡವಾದ ಶ್ರದ್ಧೆಯ ಬಲವೂ ಇಲ್ಲದ ಈ ಮತಾಂತರ ಬಹುದಿನ ಬಾಳದೇ ಶಿವದೀಕ್ಷೆ ಕಟ್ಟಿಸಿಕೊಂಡ ಕೆಲವೇ ತಿಂಗಳುಗಳಲ್ಲಿಯೇ ಚಿಕ್ಕಣ್ಣನಾಯಕ ಅದನ್ನು ತ್ಯಜಿಸಿಯೂ ಬಿಡುತ್ತಾನೆ. ಉಳಿದ ನಾಗತಿಯರೂ ಸಹ ನಾಯಕನ ದಾರಿಯನ್ನೇ ತುಳಿದರೆ ಹಟ್ಟಿ ಮಲ್ಲಮ್ಮ ನಾಗತಿ ಮಾತ್ರ ಶ್ರದ್ಧೆಯಿಂದ ಸ್ವೀಕರಿಸಿದ ಶಿವದೀಕ್ಷೆಯನ್ನು ನಾಯಕನ ಚಪಲ ಚಿತ್ತಕ್ಕೆ ಬಲಿಗೊಡಲು ಒಪ್ಪದೇ ನಾಯಕನ ಕೋಪಕ್ಕೆ ಒಳಗಾಗಿ ಅರಮನೆಯಿಂದ ದೂರವಾಗುತ್ತಾಳೆ.

ಚಿಕ್ಕಣ್ಣನಾಯಕರು ಅಪುತ್ರ ಸಂತಾನದಿಂದ ನಿಧನರಾದ ಸಂದರ್ಭದಲ್ಲಿ ದುರ್ಗದ ದೊರೆಯ ವಿಚಾರ ಪ್ರಸ್ತಾಪವಾದಾಗ ಉಗ್ರಚನ್ನವೀರಸ್ವಾಮಿಗಳು ಮಧ್ಯಪ್ರವೇಶಿಸುವ ಸಂದರ್ಭ ಒದಗಿ ಬರುತ್ತದೆ. ಯಾವ ನಿರ್ಧಾರ ತೆಗೆದುಕೊಳ್ಳಲು ಹಕ್ಕು ಬಾಧ್ಯತೆಗಳಿರುವುದು ಮಲ್ಲಮ್ಮ ನಾಗತಿಗೆ ಮಾತ್ರವಾಗಿರುವುದರಿಂದ ಪ್ರಧಾನಿ ಪರಶುರಾಮಪ್ಪ ಮತ್ತು ದಳವಾಯಿ ಮುದ್ದಣ್ಣ ಆಕೆಯನ್ನು ಕಾಣಲು ಹೋದಾಗ ಮಠಕ್ಕೆ ಹೋಗಿರುವ ವಿಷಯ ತಿಳಿದು ಅಲ್ಲಿಗೆ ಹೋದ ಸಂದರ್ಭದಲ್ಲಿ ಉಗ್ರಚನ್ನವೀರಸ್ವಾಮಿಗಳನ್ನು ಭೇಟಿಯಾಗುತ್ತಾರೆ. 'ಕಾವಿಯನ್ನುಟ್ಟ ಸ್ವಾಮಿಗಳ ವ್ಯಕ್ತಿತ್ವ ಸರಳವಾಗಿದ್ದರೂ ಅಷ್ಟು ಭವ್ಯವಾಗಿತ್ತು. ಜಪತಪಯೋಗಗಳಿಂದ ಪುಟವಿಕ್ಕಿದ ಚಿನ್ನದಂತೆ ಕಾಂತಿಯುಕ್ತವಾದ, ಶಾಂತಿಯ ಬೆಳದಿಂಗಳು ಹರಡಿದ ಇವರ ತ್ರಿಪುಂಡಭೂಷಿತವಾದ ಮುಖವನ್ನು ಕಂಡು ಪರಶುರಾಮಪ್ಪನವರ ಹೃದಯದಲ್ಲಿದ್ದ ಎಲ್ಲ ಭಾವನೆಗಳೂ ಮಾಯವಾಗಿ, ಹೃದಯದಲ್ಲೂ

ಶಾಂತಿ ನೆಲೆಸಿತು.'[೩೬] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೨೬) ಗುರುಗಳು ಆಡುವ ಪ್ರತಿಯೊಂದು ಮಾತುಗಳನ್ನು ಕೇಳುತ್ತಾ ತಾವು ಬಂದ ರಾಯಭಾರದ ವಿಷಯವನ್ನು ತಿಳಿಸುತ್ತಾನೆ. ಗುರುಗಳಿಗೆ ಕಸ್ತೂರಿರಂಗನಾಯಕರ ಮರಣದ ದಿನದಿಂದ ಆರಂಭವಾದ ದುರ್ಗದ ಸಿಂಹಾಸನಾಧಿಕಾರದ ಸಮಸ್ಯೆ ಅದರ ದುರಂತ ಪರಿಣಾಮವನ್ನು ಸವಿವರವಾಗಿ ತಿಳಿಸುತ್ತಾನೆ. ಆಗ ಸ್ವಾಮಿಗಳು ದುರ್ಗದ ರಾಜಕಾರಣ ತಮಗೆ ತಿಳಿದಿರಲಿಲ್ಲ. ಎಲ್ಲವೂ ಹಿತವಾಗಿಲ್ಲ ಎಂಬುದಷ್ಟೇ ತಿಳಿದಿತ್ತು. ಆದರೆ ಇದು ಇಷ್ಟೊಂದು ಭಯಂಕರವಾದ ತೊಡಕಾಗಿದೆ ಎಂದು ಗೊತ್ತಿರಲಿಲ್ಲ. ಶಿವಾನುಗ್ರದಿಂದ ಎಲ್ಲವೂ ಸರಳವಾಗಿ ಬಗೆಹರಿಯಲಿ ಎಂಬುದಷ್ಟೇ ತಮ್ಮ ಬಯಕೆ. ನೀವು ಹೇಳಿರುವ ವಿಚಾರಗಳನ್ನು ನಾಗತಿಗೆ ತಿಳಿಸುತ್ತೇನೆ ಎನ್ನುವ ಭರವಸೆಯನ್ನು ಕೊಡುವರು. ಆದರೆ ಪೂಜೆ ಮುಗಿಸಿಕೊಂಡು ಬಂದ ಮಲ್ಲವ್ವ ನಾಗತಿ ಯಾವುದೇ ವಿಷಯಕ್ಕೂ ಸರಿಯಾಗಿ ಪ್ರತಿಕ್ರಿಯಿಸದೇ ಕೋಪಗೊಂಡ ಸಂದರ್ಭದಲ್ಲೂ ಸಹ ಗುರುಗಳು ಶಾಂತಚಿತ್ತರಾಗಿ ತಿಳುವಳಿಕೆ ಹೇಳಿ ಪರಿಸ್ಥಿತಿಯ ಮನವರಿಕೆ ಮಾಡಿಕೊಡುತ್ತಾರೆ. ಕೋಪಗೊಂಡ ಮಲ್ಲವ್ವ ನಾಗತಿಯರಿಂದ ನಿರಾಶನಾದ ಪರಶುರಾಮಪ್ಪನಿಗೆ ಗುರುಗಳು ಉಪದೇಶದ ಮಾತುಗಳನ್ನಾಡುತ್ತಾರೆ. 'ತಂಗಾಳಿಯೇ ಬರಲಿ, ಬಿರುಗಾಳಿಯೇ ಬರಲಿ, ಅದನ್ನು ಕಳಿಸಿದವನು ಶಿವನೇ ಎಂಬ ನಂಬಿಕೆಯೊಂದಿರಲಿ. ತಂಗಾಳಿ ಬಂದರೆ ನಮ್ಮ ಮೈ ತಂಪು ಮಾಡಲು ಬರುತ್ತದೆ. ಬಿರುಗಾಳಿ ಎನ್ನುವುದು ಯಾವುದು? ಅದೇನು ಪ್ರತ್ಯೇಕವಾದ ವಸ್ತುವೇ? ಅದೂ ನಾವು ಉಸಿರಾಡುವ ನಮ್ಮ ಬದುಕಿಗೆ ಅಗತ್ಯವಾದ ಪ್ರಾಣದೇವನೇ ಅಲ್ಲವೇ? ಅದೇ ಆದರೆ ಅದರ ಉಗ್ರರೂಪ. ಬಲವಾದ ಆಹಾರ ತಿನ್ನುವ ಸಂದರ್ಭ ಬಂದಾಗ ಕೊಂಚ ವ್ಯಾಯಾಮ ಮಾಡಿ, ನಮ್ಮ ದೇಹದ ಪಚನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಂತೆ, ಬಿರುಗಾಳಿ ಬೀಸಿದಾಗ ಅವನ್ನು ತಡೆಯಲು ಬೇಕಾದಷ್ಟು ಶಕ್ತಿಯನ್ನು ಮೈಯಲ್ಲಿ ತಂದುಕೊಳ್ಳೋಣ. ಬಿರುಗಾಳಿಯಲ್ಲಿ ಮೈಮುರಿದು ಬಿದ್ದರೆ ಅದಕ್ಕೆ ಕಾರಣ ಗಾಳಿಯ ಬಿರುಸೇ ಅಲ್ಲ. ಅದಕ್ಕಿಂತ ಹೆಚ್ಚಾಗಿ ಮೈಯ ದುರ್ಬಲತೆ. ಸಣ್ಣ ಮರವನ್ನು ಮುರಿದು ಬಿರುಗಾಳಿ ಕೋಡುಗಲ್ಲನ್ನು ನೇವರಿಸಿ ಹೋಗುತ್ತದೆ ಅಲ್ಲವೇ? ಹಾಗೇ ನಾವು ಬಿರುಗಾಳಿಯಲ್ಲಿ ಮುರಿಯದಿರಬೇಕು ಎಂದರೆ ಗಾಳಿಯನ್ನು ದೂಷಿಸಿ ಫಲವಿಲ್ಲ ಕೋಡುಗಲ್ಲಾಗಬೇಕು. ಈಗ ದುರ್ಗಕ್ಕೆನೋ ಘೋರ ವಿಪತ್ತಿನ ಬಿರುಗಾಳಿ ಬೀಸಲಿದೆ ಎಂದು ನಿಮಗೆ ಭಯವಾಗಿದೆಯಲ್ಲವೇ? ಬರಲಿ ಬಿಡಿ. ಅದೆಂಥ ಬಿರುಗಾಳಿ ಬರಬೇಕೆಂದು ಶಿವನಿಚ್ಛೆ ಇದೆಯೋ ಬರಲಿ ನೀವು ಕೋಡುಗಲ್ಲಾಗಿ ನಿಲ್ಲಿ'[೩೭] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೩೩) ಎಂದು ಧೈರ್ಯ ತುಂಬುತ್ತಾರೆ.

ಕೋಪಗೊಂಡು ಹೋದ ನಾಗತಿ ಪಶ್ಚಾತ್ತಾಪವಾಗಿ ಸಾಯಂಕಾಲ ಮತ್ತೆ ಗುರುಗಳಲ್ಲಿಗೆ ಬಂದು ವಿಷಯ ಪ್ರಸ್ತಾಪಿಸಿದಾಗ ಗುರುಗಳು ನಾಗತಿಗೆ ಪರಶುರಾಮಪ್ಪನವರ ಹತ್ತಿರ ಕ್ಷಮೆ ಕೇಳಲು

ಸೂಚಿಸುತ್ತಾರೆ. ಅದಕ್ಕೆ ನಾಗತಿ ಅಹಂಕಾರ ತೋರ್ಪಡಿಸಿದಾಗ 'ಅಹಂಕಾರದ ಮಾಯೆಗೆ ಸೋಲುವುದು ಶಿವಭಕ್ತರಲ್ಲಿ ಸಲ್ಲದ ನಡತೆ. ನೀವೀಗ ಆ ತಪ್ಪು ದಾರಿಯಲ್ಲಿ ನಡೆಯುತ್ತಿದ್ದೀರ ನೀವು ನಾಗತಿ ಕ್ಷಮಾಪಣೆ ಕೇಳುವುದೇ ಎಂದು ನಿಮ್ಮ ಮನಸ್ಸು ಅಳಕುತ್ತಿದೆ ಅಲ್ಲವೇ? ಅದೇ ಅಹಂಕಾರ. ಈ ಅಹಂಕಾರ ಮಮಕಾರಗಳನ್ನು ಮುರಿಯದೇ ಎಲ್ಲರ ದೇಹವೂ ಶಿವನಿರುವ ದೇವಾಲಯ ಎಂಬ ಅರಿವು ಮೂಡದೇ ನೀವು ಶರಣಾಗುವುದೆಂತು? ಕಲ್ಯಾಣದ ಪ್ರಧಾನಿಗಳಾಗಿದ್ದ ಬಸವಣ್ಣನವರು ತಪ್ಪಾದಾಗ ಕಿನ್ನರಿ ಬೊಮ್ಮಯ್ಯನ ಪಾದಕ್ಕೆ ಬಿದ್ದು 'ಪ್ರಭೋ ಕ್ಷಮೆ' ಬೇಡಿದ ದೃಷ್ಟಾಂತ ಮರೆತುಹೋಯಿತೇ? ಅಣ್ಣನವರು ಮಾಡಿದ ಹಾಗೆ ಮಾಡಲು ನಮಗೆ ನಾಚಿಕೆಯಾಗಬೇಕೇ? ಭಕ್ತಿಭಂಡಾರಿ ಅಣ್ಣನವರಿಗಿಂತ ನಾವು ದೊಡ್ಡವರೇ?'[೩೮] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೪೦) ಎಂದು ಹೇಳುತ್ತಾರೆ.

ದುರ್ಗದ ಸಿಂಹಾಸನಕ್ಕೆ ಮುಂದೆ ಯಾರು ಉತ್ತರಾಧಿಕಾರಿಗಳಾಗಬೇಕೆಂಬ ವಿಚಾರದಲ್ಲಿ ಮಧ್ಯ ಪ್ರವೇಶಿಸಬೇಕೆಂದು ಮಲ್ಲಮ್ಮ ನಾಗತಿಗೆ ಸೂಚಿಸುತ್ತಾ ಉಗ್ರಚನ್ನವೀರಸ್ವಾಮಿಗಳು ನಾಯಕರಿರುವಾಗ ನಿಮ್ಮನ್ನು ತಾತ್ಸಾರದಿಂದ ಅಲಕ್ಷಿಸಿದರೆಂಬುದೇನೋ ನಿಜ. ಆದರೆ ತಪ್ಪಿಗೆ ಪ್ರತಿ ತಪ್ಪು ಔಷಧವಲ್ಲ. ಆ ಬುದ್ಧಿ ಸರಿಯಲ್ಲ. ಅವಿನಯದ ಇದಿರು ವಿನಯ, ಕೋಪದ ಇದಿರು ಪ್ರೀತಿ, ದ್ವೇಷದ ಇದಿರು ಸ್ನೇಹ, ತಪ್ಪಿನ ಇದಿರು ನ್ಯಾಯ ಇರಬೇಕೆಂದು ಹೇಳುವರು. ಜೊತೆಗೆ ಯಾವುದೇ ತೆರನಾದ ಭಯ, ಆತಂಕ ಪಡದೆ ಮುದ್ದಣ್ಣನನ್ನು ಕರೆಯಿಸಿ ಹೀಗಾಗಬೇಕೆಂದು ಸೂಚಿಸಿ, ಶಿವಾರ್ಪಣವೆಂದುಕೊಂಡ ಜೀವಕ್ಕೆ ಹೆದರಿಕೆ ಶೋಭಿಸುವುದಿಲ್ಲ. 'ಛಲವಿರಬೇಕು ಶರಣಂಗೆ' ಎಂದ ಅಣ್ಣನವರ ಮಾತನ್ನು ಜ್ಞಾಪಿಸಿಕೊಳ್ಳಿ ಎಂದು ಧೈರ್ಯ ತುಂಬುವರು.

ದಳವಾಯಿ ಮುದ್ದಣ್ಣನನ್ನು ಮಠಕ್ಕೆ ಕರೆಯಿಸಿ ಸ್ವಾಮಿಗಳು ದುರ್ಗದ ನಾಯಕನ ವಿಚಾರದಲ್ಲಿ ಪೀಠಿಕೆ ಹಾಕುವ ರೀತಿಯಲ್ಲಿ ನಾಗತಿಯವರು ಏನೋ ಒಂದು ರಾಜಕಾರಣದ ಮಾತನ್ನು ಹೇಳಬೇಕೆಂದು ನಿಮ್ಮನ್ನು ಕಾಣಬೇಕು ಎಂದರು. ಅವರ ಮನೆಯಲ್ಲೇ ಈ ಮಾತು ಆಗಬಹುದಿತ್ತು. ಆದರೂ ಏನು ಮಾತಾದರೂ ಶಿವಸಾನಿಧ್ಯದಲ್ಲಿ ನಡೆದರೆ ಚೆನ್ನ ಎಂದು ಇಲ್ಲೇ ಆಗಲಿ ಎಂದರು. ಅದಕ್ಕಾಗಿ ತಮ್ಮನ್ನು ಬರ ಹೇಳಿದ್ದೆಂದು ಹೇಳುವರು. ಸಮಾಲೋಚನೆಯ ಸಂದರ್ಭದಲ್ಲಿ ದಳವಾಯಿ ಭರಮಣ್ಣ ಮತ್ತು ದಳವಾಯಿ ಮುದ್ದಣ್ಣನ ಮಧ್ಯೆ ಮಾತಿಗೆ ಮಾತು ಬೆಳೆಯುವ ಸಂದರ್ಭದಲ್ಲಿ ಅಪಾಯದ ಅಡ್ಡದಾರಿ ಹಿಡಿಯುತ್ತಿದ್ದ ಮಾತನ್ನು ಸ್ವಾಮಿಗಳು ಮಾರ್ಗಕ್ಕೆ ತಂದರು. ಲಿಂಗಣ್ಣನಾಯಕ ಗುರುಗಳನ್ನು ಭೇಟಿಯಾಗಲು ಬಂದ ಸಂದರ್ಭದಲ್ಲಿ ತಾನು ಸಿಂಹಾಸನಾರೋಹಣ ಮಾಡುತ್ತಿರುವುದು ಸೇಡಿಗಾಗಿ, ಮುದ್ದಣ್ಣನನ್ನು ನಾಶಮಾಡಲು ಎಂಬ

ವಿಚಾರಗಳನ್ನು ವ್ಯಕ್ತಪಡಿಸಿದಾಗ ಗುರುಗಳು ಅದಕ್ಕೆ ಅಸಮ್ಮತಿಯನ್ನು ಸೂಚಿಸುತ್ತಾರೆ. ಸೇಡು, ರಕ್ತಪಾತ, ಹಿಂಸೆ, ದ್ವೇಷಗಳಿಗೆ ನಮ್ಮ ಹರಕೆಯಿಲ್ಲ. ಅವೆಲ್ಲವು ನಮ್ಮ ಶತ್ರು ಪಕ್ಷ ಎಂದು ಹೇಳುತ್ತಾ ಲಿಂಗಣ್ಣನಾಯಕರಿಗೆ ನೀವು ಸಿಂಹಾಸನವನ್ನೇರಿ ಶಾಂತಿ, ದಯೆ, ಸ್ನೇಹ, ಪ್ರೇಮಗಳಿಂದ ಪ್ರಜೆಗಳ ಪರಿಪಾಲನೆ ಮಾಡಿ, ಈ ಸಿಂಹಾಸನಕ್ಕೆ ಅಂಟಿರುವ ರಕ್ತದ ಕೊಳೆಯನ್ನು ತೊಡೆಯುವಂತೆ ಹೇಳುವರು. ದುಃಖ, ಕ್ರೋಧ ಎರಡೂ ಮನುಷ್ಯನನ್ನು ತಪ್ಪು ದಾರಿಯಲ್ಲಿ ನಡೆಸುವ ಮಾಯೆಗಳು ಅವಕ್ಕೆ ಸೋಲಬಾರದು ಎಂದು ತಿಳುವಳಿಕೆ ಹೇಳುವರು.

ಅವಿವಾಹಿತನಾಗಿದ್ದ ಲಿಂಗಣ್ಣನಾಯಕರಿಗೆ ಮದುವೆಮಾಡಿ ಒಂದು ಗಂಡುಸಂತಾನವಾದರೆ ಮತ್ತಿ ತಿಮ್ಮಣ್ಣನ ವಂಶ ಉಳಿಯುವುದೆಂದು ದಳವಾಯಿ ಮುದ್ದಣ್ಣನ ಆಟ ಕಡಿಮೆಯಾಗುವುದೆಂದು ಆಲೋಚಿಸಿ ಗುರುಗಳು ಈ ವಿಷಯವನ್ನು ಪರಶುರಾಮಪ್ಪ ಮತ್ತು ದಳವಾಯಿ ಭರಮಣ್ಣನವರ ಹತ್ತಿರ ಪ್ರಸ್ತಾಪಿಸಿ ಮಲ್ಲವ್ವ ನಾಗತಿಯನ್ನು ಸಹ ಕರೆಯಿಸಿ ಮದುವೆಯ ವಿಷಯದಲ್ಲಿ ಮುತುವರ್ಜಿ ವಹಿಸುವಂತೆ ತಿಳಿಸುವರು. ಆದರೆ ಎಲ್ಲದಕ್ಕೂ ನಾಗತಿ ನಿರಾಸಕ್ತಿ ವ್ಯಕ್ತಪಡಿಸಿದಾಗ ಗುರುಗಳು ಈ ನಾಯಕ ಪಟ್ಟ, ದುರ್ಗ ಉಳಿಯುವುದು ಶಿವನಕೃಪೆಯಿಂದ. ಇದು ಉಳಿಯಬೇಕೆಂದು ಆತನ ಇಚ್ಛೆ ಇದ್ದರೆ ಉಳಿಯುತ್ತದೆ, ಇಲ್ಲದಿದ್ದರೆ ಇಲ್ಲ "ಹರಕೊಲ್ವೆಡೆ ಪರ ಕಾಯ್ವನೇ" ಎಂದು ಹೇಳುವರು.

ಇತ್ತ ಮುದ್ದಣ್ಣ ಲಿಂಗಣ್ಣನಾಯಕರ ಆಡಳಿತ, ಮದುವೆಯ ವಿಷಯದಲ್ಲಿ ಮಧ್ಯಪ್ರವೇಶಿಸುತ್ತಿರುವ ವಿಷಯವನ್ನು ತಿಳಿದುಕೊಂಡು ಸ್ವಾಮಿಗಳನ್ನು ಭೇಟಿಯಾಗಲು ಕಲ್ಲುಮಠಕ್ಕೆ ಬರುತ್ತಾನೆ. ಗುರುಗಳಿಗೆ ರಾಜಕಾರ್ಯದ ವಿಷಯದಲ್ಲಿ ಮಧ್ಯಪ್ರವೇಶಿಸದೆ ಎಲ್ಲರ ಕ್ಷೇಮ ಚಿಂತನೆ ಮಾಡಿಕೊಂಡು ಶಿವಪೂಜೆ ಧ್ಯಾನದಲ್ಲಿ ನಿರತರಾಗಿರಿ ಎಂದು ಎಚ್ಚರಿಕೆ ಕೊಡುವ ರೀತಿಯಲ್ಲಿ ಹೇಳುತ್ತಾನೆ. ಆದರೆ ಗುರುಗಳು ತಾಳ್ಮೆಯಿಂದ ವರ್ತಿಸುತ್ತಾ ಇಲ್ಲಿಗೆ ಬರುವ ಯಾರನ್ನೂ ಬರಬೇಡಿ ಎಂದು ಹೇಳುವ ಅಧಿಕಾರ ತಮಗಿಲ್ಲ. ಇದು ಶಿವನ ಮನೆ. ಇಲ್ಲಿ ನಡೆಯುವುದು ಶಿವನ ಚಿತ್ತ ಎನ್ನುವರು.

ಮುದ್ದಣ್ಣನು ಅಧಿಕಾರ, ಕ್ರೌರ್ಯದ ಅಟ್ಟಹಾಸದಿಂದ ದುರ್ಗದ ಪಟ್ಟಾಭಿಷಕ್ತ ಪ್ರಭುವಾದ ಲಿಂಗಣ್ಣನಾಯಕರ ಕೈಕಾಲುಗಳಿಗೆ ಸರಪಳಿ ಹಾಕಿ ಊರ ತುಂಬ ಮೆರವಣಿಗೆ ಮಾಡುವುದನ್ನು ಕಂಡ ಗುರುಗಳಾದ ಉಗ್ರಚನ್ನವೀರಸ್ವಾಮಿಗಳು ಮರುಗುತ್ತಾರೆ. ಶಿವನಿಗೆ ನಿನ್ನ ಅರ್ಪಣೆ ಎಂದು ನಾಯಕರಿಗೆ ಶಾಂತಿಯನ್ನು ಬೋಧಿಸಿ, ಅವರ ತಲೆ ಶೂಲದ ಮರದ ಮೇಲೆ ಜೋತಾಡುವಂತೆ ಮಾಡಿದೆನಲ್ಲ ಎಂದು ನೋವು ಪಡುತ್ತಾರೆ. ಮುದ್ದಣ್ಣನು ವಿಷಸಮುದ್ರದ ರಂಗಪ್ಪನಾಯಕರನ್ನು ದತ್ತು ಸ್ವೀಕಾರ ಮಾಡಬೇಕೆಂದು ಮಲ್ಲವ್ವ ನಾಗತಿಗೆ ಅಧಿಕಾರ ವಾಣಿಯಿಂದ ಆಜ್ಞೆ ಮಾಡುವ

ರೀತಿಯಲ್ಲಿ ಹೇಳಿದಾಗ ತಾನು ಒಂದು ಬಾರಿ ಮಠಕ್ಕೆ ಹೋಗಿ ಗುರುಗಳನ್ನು ಕಾಣುತ್ತೇನೆಂದು ಹೇಳಿ ಮಠಕ್ಕೆ ಹೋಗಿ ಉಗ್ರಚನ್ನವೀರಸ್ವಾಮಿಗಳ ಪಾದಗಳನ್ನು ಹಿಡಿದು ಗುರುದೇವಾ ನೀವೇ ನನ್ನ ಮಾರ್ಗದರ್ಶಕರು ನಾನೇನು ಮಾಡಲಿ ಎಂದು ಮುದ್ದಣ್ಣ ಬಂದು ಹೇಳಿದ ದತ್ತು ಕಾರ್ಯದ ಸಮಾಚಾರವನ್ನು ತಿಳಿಸುತ್ತಾಳೆ. ಆಗ ಗುರುಗಳು ನನಗೇನೂ ತೋಚುತ್ತಿಲ್ಲ. ನನ್ನ ಬುದ್ಧಿಗೆ ಕತ್ತಲು ಕವಿದಿದೆ. ಆದರೆ ನಾನು ಹೇಳುವುದು ಒಂದೇ ಮಾತು 'ಶರಣ ಯಾರಿಗೂ ಹೆದರಿ ಸತ್ಯಕ್ಕೆ ಅಪಚಾರ ಮಾಡಬಾರದು, ಶರಣನಿಗೆ ಮರಣವಾದರೂ ಸತ್ಯಕ್ಕೆ, ನ್ಯಾಯಕ್ಕೆ, ಧರ್ಮಕ್ಕೆ ಚ್ಯುತಿ ಬರಬಾರದು. ಹರನೆಂಬುದೇ ಸತ್ಯ. ಸತ್ಯವೆಂಬುದೇ ಹರನು ಎಂದು ಹಿರಿಯರು ಅಪ್ಪಣೆ ಕೊಡಿಸಿದ್ದಾರೆ. ನಾನು ಹೇಳುವುದು ಅಷ್ಟೇ. ಭೀತಿವಶಳಾಗಿ ಧರ್ಮದ ಮಾರ್ಗ ಬಿಡಬೇಡ'[೩೯] (ಸುಬ್ಬರಾಯರು ತ.ರಾ, ೨೦೧೫, ತಿರುಗುಬಾಣ, ಪುಟ-೭೧) ಎನ್ನುವರು. ಒಮ್ಮಿಂದೊಮ್ಮೆಲೇ ಮಲ್ಲವ್ವ ನಾಗತಿ ಇದ್ದಕ್ಕಿದ್ದಂತೆ ಏನೋ ಒಂದು ನಿರ್ಧಾರಕ್ಕೆ ಬಂದಂತೆ ಹಾಗಾದರೆ ನನ್ನನ್ನು ಆಶೀರ್ವದಿಸಿ ಎಂದು ಕಂಬನಿ ತುಂಬಿ ಅವರ ಪಾದಗಳಿಗೆ ನಮಸ್ಕರಿಸಿ ಹೊರಡುವಳು. ಹೀಗೆ ಹೋದ ಮಲ್ಲವ್ವ ನಾಗತಿ ವಿಷಪಾನದಿಂದ ರಾತ್ರಿಯೇ ಸಾವನ್ನಪ್ಪುತ್ತಾಳೆ. ವಿಷಯ ತಿಳಿದ ಮುದ್ದಣ್ಣ ಕ್ರೋಧದಿಂದ ಕಲ್ಲುಮಠಕ್ಕೆ ಹೋಗಿ ಉಗ್ರಚನ್ನವೀರಸ್ವಾಮಿಗಳಿಗೆ ನಿಮ್ಮಿಂದಲೇ ಅವರು ಸತ್ತದ್ದು ಎಂಬ ಆರೋಪ ಹೊರಿಸುತ್ತಾನೆ. ಬೇರೆ ಯಾರಾದರಾಗಿದ್ದರೆ ತಲೆ ಉರುಳುತ್ತಿತ್ತು ಎಂದು ಬೆದರಿಸಿದಾಗ ಗುರುಗಳು 'ಶಿವಭಕ್ತ ಸಾವಿಗಂಜುವುದಿಲ್ಲ ದಳವಾಯಿಗಳೇ. ನಮ್ಮ ಪಾಲಿಗೆ ಸಾವು ಶಿವನ ಕರೆ. ಸಾವಿಗೆ ಹೆದರುವವರು, ತಮ್ಮ ಜೀವ ಎಲ್ಲಿ ಹೋಗುತ್ತದೋ ಎಂಬ ಹೆದರಿಕೆಯಿಂದ ಪರರ ಕೊಲೆಗೆ ಧಾವಿಸುತ್ತಾರೆ. ಹಾಗಲ್ಲದೇ ಸಾವಿನ ಭೀತಿ ಇಲ್ಲದವರು ತಾವು ಸಾಯಲು ಹೆದರುವುದಿಲ್ಲ. ಪರರ ಕೊಲೆಗೂ ಆತುರ ಪಡುವುದಿಲ್ಲ. ಆದುದರಿಂದ ನಮಗೆ ಸಾವಿನ ಭೀತಿ ತೋರಿಸಬೇಡಿ ದಳವಾಯಿಗಳೇ. ಹಾಗೆ ಮಾಡುವುದು ತಮ್ಮ ಇಚ್ಛೆಯಾದರೆ, ತಮ್ಮ ಕತ್ತಿಯಷ್ಟೇ ನಮ್ಮ ತಲೆಯೂ ಸಿದ್ಧವಾಗಿದೆ'[೪೦] (ಸುಬ್ಬರಾಯರು ತ.ರಾ, ೨೦೧೫, ತಿರುಗುಬಾಣ, ಪುಟ-೭೮) ಎಂದು ಗಂಭೀರವಾದ ಧ್ವನಿಯಲ್ಲಿ ಹೇಳಿದಾಗ ಮುದ್ದಣ್ಣ ಮತ್ತಷ್ಟು ಕ್ರೋಧಗೊಳ್ಳುತ್ತಾನೆ. ಗುರುಗಳು ದುರ್ಗದ ಸಿಂಹಾಸನ ಪಾಳೆಯಗಾರರ ಮನೆತನದವರಿಗೆ ಸಿದ್ಧರಿಂದ ಲಭ್ಯವಾದುದು. ಅದರಿಂದ ಅವರನ್ನು ತಪ್ಪಿಸಿ ಅದರ ಮೇಲೆ ನಾನು ಕೂಡುತ್ತೇನೆ, ನನಗೆ ಬೇಕಾದವರನ್ನು ಕೂಡಿಸುತ್ತೇನೆ ಎನ್ನುವ ಭ್ರಮೆ ಸಫಲವಾಗುವುದಿಲ್ಲ ಎಂದು ಬದುಕುವ ಮಾರ್ಗ ಹೇಳಿದರೆ ಮುದ್ದಣ್ಣ ಅವರಿಗೆ ದುರ್ಗದ ಗಡಿ ದಾಟಿಸುತ್ತಾನೆ. ಶಿವನಿಚ್ಛೆ ನಡೆಯಲಿ ಎಂದು ತಮ್ಮ ಸೇವಕ ಶಿವಯ್ಯನನ್ನು ಕರೆದುಕೊಂಡು ಹೋಗುತ್ತಾರೆ. ಆದರೆ ಸ್ವಾಮಿಗಳನ್ನು ಗಡಿ ದಾಟಿಸಿ ಸೆರೆಯಲ್ಲಿಡಬೇಕೆಂಬ ಮುದ್ದಣ್ಣನ ತರ್ಕ ಬುಡಮೇಲಾಗುತ್ತದೆ. ಅತ್ತ ಸ್ವಾಮಿಗಳನ್ನು ಭರಮಣ್ಣ ಮತ್ತು ಪರಶುರಾಮಪ್ಪ ಅಲ್ಲಿಂದ ತಪ್ಪಿಸಿ

ಅವರನ್ನು ಕರೆದುಕೊಂಡು ಹೋಗುತ್ತಾರೆ. ಮುಂದೆ ಮುದ್ದಣ್ಣ ಹಾಗೂ ಅವನ ತಮ್ಮಂದಿರ ಸಂಹಾರವಾದ ಮೇಲೆ ಉಗ್ರಚನ್ನವೀರಸ್ವಾಮಿಗಳು ಅಲ್ಲಿ ನಿಲ್ಲಲಾರದೆ ತಮ್ಮ ಜೊತೆಗೆ ಗಿರಿಜೆಯನ್ನು ಕರೆದುಕೊಂಡು ಇನ್ನು ತಮ್ಮ ಕೆಲಸವಾಯಿತೆಂದು ದುರ್ಗ ಬಿಟ್ಟು ಹೊರಡುತ್ತಾರೆ. ಹೊರಡುವಾಗ ಮುರುಘರಾಜೇಂದ್ರ ಸ್ವಾಮಿಗಳು ಬರುತ್ತಾರೆ. ಬರುವಾಗ ಈ ಸಿಂಹಾಸನಕ್ಕೆ ಬರಬೇಕಾದವರನ್ನು ಕರೆತರುತ್ತಾರೆ ಎಂದು ತಿಳಿಸುತ್ತಾರೆ.

೫.೧.೫ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು :

'ಇವರು ಹುಟ್ಟಿ ಬೆಳೆದ ಸ್ಥಳ ಅಪ್ಪನಹಳ್ಳಿ, ಬಿಜ್ಜಾವರ, ಮಧುಗಿರಿ, ದೊಡ್ಡೇರಿಗಳು. ತಾಯಿ ಗಿರಿಜಾಂಬಿಕೆ, ಅಜ್ಜಿ ನುಜಾಂಬಿಕೆ, ಅಜ್ಜ ವೀರಣಾರಾಧ್ಯ, ತಂದೆ ಚೆನ್ನವೀರದೇವ. ತಂದೆ ಹುಲ್ಲಳ್ಳಿಮಠವನ್ನು ಕಟ್ಟಿದ್ದರು. ತಂದೆಯ ಮರಣಾ ನಂತರ ಶ್ರೀ ಶಾಂತವೀರರು ಗುರುಮಠದಲ್ಲಿದ್ದು, ಸಂಸಾರಿಯಾಗಲಿಚ್ಛಿಸದೆ, ಪರಿವ್ರಾಜಕರಂತೆ ದೇಶ ಸಂಚಾರ ಮಾಡುತ್ತಿದ್ದ ಕಾಲದಲ್ಲಿ, ಸದ್ಗುರು ಶ್ರೀ ಕಟ್ಟಿಗೆಹಳ್ಳಿ ಸಿದ್ದಲಿಂಗಯತಿಗಳ ಶಿಷ್ಯರಾಗಿ ತಪೋಸಾಧನೆ ಮಾಡಿ ಕ್ರಿ.ಶ ೧೬೪೦ ರಲ್ಲಿ ಸ್ವಾಮಿಗಳಿಂದ ದೀಕ್ಷಾಬದ್ಧರಾಗಿ ಷಟ್‌ಸ್ಥಲ ಬ್ರಹ್ಮರೆನಿಸಿ, ದೇಶ ಸಂಚಾರ ಮಾಡಿ ಕೊನೆಗೆ ಮುರುಗೀ ಸ್ವಾಮಿಗಳಾಗಿ, ಮುರುಗಿಮಠ ಸ್ಥಾಪನೆಗೆ ಕಾರಣಕರ್ತರಾದರು.'[೪೧] (ಗಿರಿಜಾ ಟಿ, ೧೯೯೧, ಪುಟ-೬೦)

ಬಿಳಿಚೋಡಿನ ಕಸ್ತೂರಿರಂಗಪ್ಪನ ಮಗನಾದ ಭರಮಣ್ಣ ಕುರಿಕಾಯುವ ಕೆಲಸ ಮಾಡುತ್ತಿದ್ದು ತಾನು ದುರ್ಗದ ದೊರೆಯಾಗಬೇಕು. ಮತ್ತಿ ತಿಮ್ಮಣ್ಣನಾಯಕನಿಗೆ ಸಿದ್ಧರ ಅನುಗ್ರಹವಾದ ಹಾಗೆ, ತನಗೂ ಯಾರಾದರೊಬ್ಬರ ಸಿದ್ಧರ ಅನುಗ್ರಹವಾಗಬೇಕೆಂದು ಕನಸು ಕಾಣುತ್ತಿದ್ದನು. ಒಂದು ದಿನ ಮಲಗಿದ ಸಮಯದಲ್ಲಿ ಕನಸಿನಲ್ಲಿ ಸರ್ಪವೊಂದು ಹೆಡೆಯನ್ನು ಬಿಚ್ಚಿ ದುರ್ಗದ ದೊರೆಯಾಗಬೇಕೆನ್ನುವವನಿಗೆ ಭಯಬೇಡ ಎಂದು ಹೇಳಿದಂತೆ ಅನಿಸಿತು. ಎಚ್ಚರಗೊಂಡಾಗ ಅವನ ನೆತ್ತಿಯ ಬಳಿಯಲ್ಲಿ ಕಾವಿಯನ್ನು ಧರಿಸಿದ ಸನ್ಯಾಸಿಗಳೊಬ್ಬರು ಕುಳಿತಿರುತ್ತಾರೆ. ಕನಸಿನಲ್ಲಿ ಕಂಡಂತ ಮುಖದ ಲಾವಣ್ಯ, ತೇಜಸ್ಸು ಆ ಸ್ವಾಮಿಗಳ ಮುಖದಲ್ಲಿ ಕಂಡಾಗ ಭರಮಣ್ಣ ಆಶ್ಚರ್ಯ ವ್ಯಕ್ತಪಡಿಸುತ್ತಾನೆ. ಅವನ ಕನಸಿನ ವಿಚಾರಗಳೆಲ್ಲವನ್ನು ತಿಳಿದುಕೊಂಡ ಸ್ವಾಮಿಗಳು ನಿನಗೆ ದೊರೆಯಾಗಬೇಕಂತ ಇಷ್ಟವೇ. ನೀನು ದೊರೆಯಾಗುತ್ತಿ 'ನೀನು ದೊರೆಯಾದಾಗ ಇಷ್ಟು ನೆನಪಿಟ್ಟುಕೊ- ಅದು ಬಯಸಬೇಕಾದ ವಸ್ತುವಲ್ಲ. ಅದಕ್ಕೆ ಹೆದರಿ ಕತ್ತಿಯ ಮೇಲೆ ನಡೆದಂತೆ ಎಚ್ಚರವಾಗಿ, ಭೀತಿಯಿಂದ ರಾಜ್ಯವಾಳಬೇಕು. ಅಷ್ಟೇ ನನ್ನ ಮಾತು ತಿಳಿಯಿತೆ?'[೪೨] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೧೬) ಆಗ ಭರಮಣ್ಣ ಅರ್ಥವಾಗದೇ ಹೋದರೂ ಅರ್ಥವಾಯಿತೆಂದು ತಲೆ ಅಲ್ಲಾಡಿಸುತ್ತಾನೆ. ಸ್ವಾಮಿಗಳು ನೀನು ಇವತ್ತು ಭರಮಣ್ಣ ನಾಳೆಯ ದಿನ

ದುರ್ಗದ ಪಾಳೆಯಗಾರ ಭರಮಪ್ಪನಾಯಕ ಎಂದು ಆಶೀರ್ವದಿಸಿ ಹೊರಟಾಗ ಮನೆಗೆ ಬಂದು ಆತಿಥ್ಯ ಸ್ವೀಕರಿಸುವಂತೆ ಕೇಳಿಕೊಳ್ಳುವನು. ದುರ್ಗದ ದೊರೆಯಾದಾಗ ಬರುವೆನೆಂದೂ ತಮ್ಮ ಹೆಸರು ಮುರುಘರಾಜೇಂದ್ರಸ್ವಾಮಿ ಎಂದು ಹೇಳಿ ಹೊರಟು ಹೋಗುವರು. ಇತ್ತ ದುರ್ಗದ ಸಿಂಹಾಸನಕ್ಕೆ ಉತ್ತರಾಧಿಕಾರಿ ಯಾರು ಎಂಬ ಸಂದಿಗ್ಧತೆಯಲ್ಲಿ ಪರಶುರಾಮಪ್ಪ ಹಾಗೂ ದುರ್ಗದ ಜನ ಇರುವಾಗ ಬಿಳಿಚೋಡಿನ ಕಸ್ತೂರಿರಂಗಪ್ಪನವರ ಮಗನಾದ ಭರಮಣ್ಣನನ್ನು ದುರ್ಗದ ದೊರೆ ಮಾಡಬೇಕೆಂದು ನಿರ್ಧರಿಸಿ ಅವರ ಮನೆಗೆ ಬಂದಾಗ ಮುರುಘರಾಜೇಂದ್ರ ಸ್ವಾಮಿಗಳು ತನಗೆ ದುರ್ಗದ ದೊರೆಯಾಗುತ್ತಿ ಎಂದು ಆಶೀರ್ವದಿಸಿ ಹೋದ ವಿಷಯ ತಿಳಿಸುತ್ತಾನೆ. ಉಗ್ರಚನ್ನವೀರಸ್ವಾಮಿಗಳು ದುರ್ಗ ಬಿಟ್ಟು ಹೋಗುವಾಗ ತಮಗಿಂತ ತಪೋಬಲದಲ್ಲಿ ಹಿರಿಯರಾದ ಮುರುಘರಾಜೇಂದ್ರ ಸ್ವಾಮಿಗಳು ಬರುತ್ತಾರೆ. ಬರುವಾಗ ಈ ಸಿಂಹಾಸನಕ್ಕೆ ಬರಬೇಕಾದವರನ್ನು ಕರೆತರುತ್ತಾರೆ ಎಂದು ಹೇಳಿ ಹೋದ ವಿಷಯವನ್ನು ಪರಶುರಾಮಪ್ಪನವರು ಜ್ಞಾಪಿಸಿಕೊಳ್ಳುತ್ತಾರೆ. ಭರಮಣ್ಣನನ್ನು ದುರ್ಗದ ದೊರೆಯನ್ನಾಗಿ ಮಾಡುತ್ತಾರೆ.

ಅಣಜಿಯ ಕಾಳಗದಲ್ಲಿ ಹರಪನಹಳ್ಳಿಯವರು ದುರ್ಗವನ್ನು ಮೆಟ್ಟಿ ನಿಂತು ವಿಜಯ ಸಾಧಿಸುತ್ತಾರೆ. ಈ ಘೋರ ಅಪಜಯದಿಂದಾಗಿ ತನ್ನ ಆಳ್ವಿಕೆಯ ಮೊದಲ ಸಮರದಲ್ಲೇ, ದುರ್ಗದ ನೆತ್ತಿಯ ಮೇಲೆ ಅಪಜಯದ ಕರಾಳ ಬಾವುಟ ಎಂದು ತತ್ತರಿಸಿ ಹೋಗುತ್ತಾನೆ. ಹಾಸಿಗೆ ಹಿಡಿದು ಮಲಗುತ್ತಾನೆ. ಊಟ, ತಿಂಡಿ, ಉಪಚಾರ, ನೀರು ಸಹ ಮುಟ್ಟದೇ ಇದ್ದಾಗ ಪರಶುರಾಮಪ್ಪಾದಿಯಾಗಿ ಎಲ್ಲರೂ ಚಿಂತಾಕ್ರಾಂತರಾದಾಗ ಸನ್ಯಾಸಿಯೊಬ್ಬರು ತನ್ನನ್ನು ಒಳಗೆ ಬಿಡು ದೊರೆಯನ್ನು ಕಾಣಬೇಕೆಂದು ಬರುತ್ತಾರೆ. ಕಾವಲುಗಾರನು ಕರಣಿಕನಿಗೆ ತಿಳಿಸಿದಾಗ ಕರಣಿಕನು ಪರಶುರಾಮಪ್ಪನವರಿಗೆ ತಿಳಿಸಿ ಸನ್ಯಾಸಿಗಳನ್ನು ಒಳಗೆ ಕರೆತರುತ್ತಾರೆ. ಹಕ್ಕಿಯಂತೆ ಮುದುರಿಕೊಂಡು ಮಲಗಿದ್ದ ಭರಮಣ್ಣನಾಯಕನ ಹಣೆಯನ್ನು ಮೃದುವಾಗಿ ನೇವರಿಸಿದ ಸನ್ಯಾಸಿಗಳು ಭರಮಣ್ಣ ಎಂದಾಗ ಎಚ್ಚರಗೊಂಡ ಆತ ಮಗುವಿನಂತೆ ಅಳುತ್ತಾನೆ. ಆಗ ಗುರುಗಳು 'ದುರ್ಗದ ಗಂಡುಮೆಟ್ಟಿನ ದೊರೆಯೆನ್ನಿಸಿಕೊಂಡು, ಈ ರೀತಿ ಹೆಂಗಸಿನ ಹಾಗೆ ಕಂಬನಿಗರೆಯಲು ನಿನಗೆ ನಾಚಿಕೆಯಾಗಬೇಕು, ಭರಮಣ್ಣ. ಇಂಥ ಮಾತು ಕೇಳಲೆಂದೇ ನಮ್ಮನ್ನು ದುರ್ಗಕ್ಕೆ ಬರಹೇಳಿದೆಯಾ? ದೊರೆಯಾಗಬೇಕೆಂದು ಹಾರೈಸುತ್ತಿದ್ದೆಯಲ್ಲಾ ಅದೆಲ್ಲವೂ ಇದಕ್ಕಾಗಿಯೇನೇ? ನಿನ್ನ ಸೊಂಟದಲ್ಲಿ ಕತ್ತಿ ಕಟ್ಟಿದವರ ಇದಿರು ಕಣ್ಣಿರು ಹಾಕಲು ನಿನಗೆ ಹೇಸಿಗೆಯಾಗುವುದಿಲ್ಲವೇ? ಕಣ್ಣೀರು ಅಬಲೆಯ ಅಸ್ತ್ರ, ಪುರುಷರ ಪರಾಕ್ರಮದ ಪತಾಕೆಯಲ್ಲ'[೪೩] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ–೧೪೦) ಎಂದು ಸ್ವಾಮಿಗಳು ಗಡುಸಾಗಿಯೇ ಹೇಳುತ್ತಾರೆ. ನೀನು ನನ್ನ ಶಿಷ್ಯನಾಗಲು ಅನರ್ಹ. ಇಷ್ಟು ದಪ್ಪ ಮೀಸೆಯ ಹುಲಿರೂಪದ ನರಿ ಬೇರಾವುದೂ ಸಿಗಲಿಲ್ಲವೇ ಎಂದು ಪರಶುರಾಮಪ್ಪನಿಗೆ

ಕೇಳಿದಾಗ ಕ್ರೋಧದಿಂದ ಭರಮಣ್ಣ ನಾಯಕ ಗುರುಗಳಾಗದಿದ್ದರೆ ನನ್ನ ಉಕ್ಕಿನ ತೋಳು ಉತ್ತರಕೊಡುತ್ತಿತ್ತು ಎನ್ನುವನು. ಇಷ್ಟು ಹೊತ್ತಾದರೂ ಒಂದು ಗಂಡು ಮಾತು ನಿನ್ನ ಬಾಯಿಂದ ಬಂತಲ್ಲ ನನ್ನ ಶ್ರಮ ಸಾರ್ಥಕವಾಯಿತೆಂದು ಹೇಳುವರು. 'ಈ ರಾಜ್ಯವೆನ್ನುವುದು ಒಂದು ವೃಕ್ಷ. ದೊರೆ ಈ ಮರದ ಕಾಂಡ; ಪ್ರಜೆಗಳೇ ಬೇರುಗಳು. ಗಾಳಿ ಬೀಸಿದಾಗ ರೆಂಬೆಗಳು ಹೊಯ್ದಾಡುವಂತೆ ದೇಶಕ್ಕೆ ಏನೋ ಒಂದು ವಿಪತ್ತು ಬಂದಾಗ ಸೇನೆ, ಮಂತ್ರಿಗಳು, ಊಳಿಗದವರು ಎಲ್ಲರೂ ಹೊಯ್ದಾಡುತ್ತಾರೆ. ಆ ಹೊತ್ತಿನಲ್ಲಿ ಕಾಂಡ ಬಲವಾಗಿ ನಿಂತರೆ ಗಿಡ ಉಳಿಯುತ್ತದೆ. ಇಲ್ಲವಾದರೆ ಮರ ಉರುಳುವುದಷ್ಟೇ ಅಲ್ಲ, ಅಷ್ಟು ಕಾಲ ಮರವನ್ನು ಕಾಪಾಡಿದ ಬೇರೂ ಬಿಸಿಲಿಗೆ ಸಿಕ್ಕಿ ಬಾಡುತ್ತದೆ. ಹಾಗೆಯೇ ದೊರೆ ದುರ್ಬಲವಾದಾಗ ಆಡಳಿತವೂ ಕೆಡುತ್ತದೆ. ಪ್ರಜೆಗಳಿಗೂ ಕೇಡಾಗುತ್ತದೆ'[೪೪] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೧೪೨) ಆದ್ದರಿಂದ ದೊರೆ ಗಟ್ಟಿಯಾಗಿರಬೇಕೆಂದು ಸೂಚಿಸುವರು. ಅಣಜಿಯ ಯುದ್ಧದಲ್ಲಿ ಸೋಲಾಯಿತೆಂದು ಹೆದರಿದರೆ ದೇಶದ ಜನತೆಗೆ ಧೈರ್ಯ ತುಂಬುವರಾರು. ಒಂದು ಸೋಲಿಗೆ ಇಷ್ಟು ಕಂಗೆಡುವುದೇ ಒಂದು ಸಲವಲ್ಲ, ಹತ್ತು ಸಲ ಸೋತರೂ ಹನ್ನೊಂದನೆಯ ಸಲ ಗೆಲುವು ನನ್ನದೇ ಎಂಬ ಆತ್ಮವಿಶ್ವಾಸವಿರಬೇಕು. ನೀನು ಹಿಡಿದಿರುವುದು ಕುರಿಕಾಯುವ ಕೋಲಲ್ಲ. ರಾಜ್ಯವನ್ನು ಕಾಯುವ ಖಡ್ಗ ನೆನಪಿರಲಿ ಎಂದು ಹೇಳುವರು. 'ರಾಜ್ಯ ಬೇಕು, ದೊರೆತನ ಬೇಕು ಎಂದು ಕನಸು ಕಾಣುತ್ತಿದ್ದೆಯಲ್ಲಾ ಭರಮಣ್ಣ ರಾಜ್ಯದ ಸುಖ ಹೇಗಿದೆ?'[೪೫] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೧೪೫) ಮನುಷ್ಯನಿಗೆ ಆತ್ಮವಿಶ್ವಾಸವಿರಬೇಕು ದೊರೆಗೆ ಆತ್ಮವಿಶ್ವಾಸವಿಲ್ಲದಿದ್ದರೆ ಹೊರಗಿನ ಬಲಗಳು ಎಷ್ಟಿದ್ದರೂ ನಿರುಪಯೋಗಿಯಾಗುತ್ತವೆ ಎಂದು ಹುರಿದುಂಬಿಸುತ್ತಾರೆ. ಮತ್ತೊಂದು ಸಾರಿ ಅಣಜಿಯ ಕಾಳಗದಲ್ಲಿ ಜಯಸಾಧಿಸಿದಾಗ ಮುರುಘರಾಜೇಂದ್ರ ಸ್ವಾಮಿಗಳು ಭರಮಣ್ಣ ನಾಯಕನಿಗೆ ಈ ಮೆರವಣಿಗೆಯನ್ನು ಹಿಂಬಾಲಿಸಿ ದುರ್ಗದೊಳಗೆ ಬರುತ್ತಿರುವ ಕಂಕಾಳಗಳ ಕರಾಳ ಛಾಯೆ ತಮ್ಮ ಕಣ್ಣಿಗೆ ಕಾಣುತ್ತಿದೆ ಎಂದು ಹೇಳಿ ಪೂಜಾ ಮಂದಿರದೊಳಗೆ ಹೋಗಿ ಮರೆಯಾಗುವರು.

'ಮುರಘರಾಜೇಂದ್ರ ಸ್ವಾಮಿಗಳು ಧರಿಸಿದ್ದ ವಸ್ತ್ರಗಳು ಮುರಿಗೆ ಮುರಿಗೆಯಾಗಿದ್ದುದ್ದರಿಂದ, ಅವರ ಕೈಯಲ್ಲಿ ಮುರಿಗೆಯ ಮುದ್ಗರವಿದ್ದುದರಿಂದ, ಷಣ್ಮುಖ ಲಾಂಛನದವರಾಗಿದ್ದರಿಂದ ಮುರುಗೇಶ, ಮುರುಗ, ಮುರುಗಿ ಮಠವೆನ್ನುವ ಅಭಿದಾನ ಶ್ರೀ ಮಠಕ್ಕೆ ನಡೆದು ಬಂದಿತು. 'ರಾಜೇಂದ್ರ' ಎನ್ನುವುದು ಶೂನ್ಯ ಸಿಂಹಾಸನದ ಅಲ್ಲಮನ ಗುರು ಅನಿಮಿಷನನ್ನು ನೆನಸುವುದಕ್ಕಾಗಿ ಸೇರಿತು. 'ಮುರುಘರಾಜೇಂದ್ರ'ನೆನ್ನುವ ಅಭಿದಾನ ಶ್ರೀ ಸ್ವಾಮಿಗಳಿಗೆ, ಶ್ರೀ ಮಠಕ್ಕೆ ಅಂಟಿಕೊಂಡೇ ಉಳಿಯಿತು. ಶ್ರೀ ಶಾಂತವೀರಸ್ವಾಮಿಗಳು ಏಕೋನ ವಿಶಂತಿ, ಪ್ರಭುಲಿಂಗ ಕಂದ, ವೈರಾಗ್ಯ ಷಟ್ಪದಿ

ಮುಂತಾದ ಆಧ್ಯಾತ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ. ಇವರು ತಮ್ಮ ಶಿಷ್ಯರಾದ ಇಮ್ಮಡಿ ಮಹಾಗುರುಸಿದ್ಧ ಪ್ರಭುಗಳಿಗೆ ಪಟ್ಟ ಕಟ್ಟಿ ೫-೭-೧೭೦೩ ರಲ್ಲಿ ಬ್ರಾಹ್ಮಿ ಮುಹೂರ್ತದ ಮೂರು ಮೂವತ್ತು ಘಳಿಗೆಯಲ್ಲಿ ಶ್ರೀಗಳು ಜೀವಂತ ಸಮಾಧಿಯಾದರು'[೪೬] (ಗಿರಿಜಾ ಟಿ, ೧೯೯೧, ಪುಟ-೬೧) ಎಂದು ತಿಳಿದು ಬರುವುದು.

೫.೧.೬ ಶ್ರೀ ಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು :

ಶ್ರೀ ಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು ದುರ್ಗದ ಗುರುಪೀಠದವರಾಗಿದ್ದು, ಬಿಚ್ಚುಗತ್ತಿ ಭರಮಣ್ಣನಾಯಕರ ಕಾಲದಿಂದಲೂ ಹಿರೇಮದಕರಿನಾಯಕ ಹಾಗೂ ದುರ್ಗದ ಕೊನೆಯ ದೊರೆ ಮದಕರಿನಾಯಕನ ಕಾಲದಲ್ಲಿಯೂ ಅರಮನೆಯ ಎಲ್ಲ ವಿಚಾರಗಳಲ್ಲಿಯೂ ಸಲಹೆ ಸೂಚನೆಗಳನ್ನು ಕೊಡುತ್ತಿರುತ್ತಾರೆ. ಬಿಚ್ಚುಗತ್ತಿ ಭರಮಣ್ಣನಾಯಕರ ಮಗನಾದ ಹಿರೇಮದಕರಿನಾಯಕ ತಾಯಿಯ ಒತ್ತಾಯಕ್ಕೆ ಮಣಿದು ಬೃಹನ್ಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗುರುಗಳ ಆಶೀರ್ವಾದ ಪಡೆದುಕೊಂಡ ತಕ್ಷಣವೇ ಹೋಗಲು ಆತುರಪಟ್ಟಾಗ 'ಪ್ರಸಾದ ಸ್ವೀಕರಿಸದೆ ಹೋಗಬಾರದಯ್ಯ' ಎಂದು ನಯವಾಗಿ ಹೇಳುವುದರಲ್ಲಿಯೇ ಆಕ್ಷೇಪವಿದ್ದು ನಾಯಕ ತಮ್ಮ ಆಶೀರ್ವಾದವೇ ಪ್ರಸಾದವೆಂದು ಹೇಳಿ ಇನ್ನೂ ಹಲವು ಮಠಗಳಿಗೆ ಭೇಟಿ ನೀಡುವುದಿದೆ ಎಂದು ಅವಸರಿಸಿದಾಗ 'ಎಲ್ಲದರಲ್ಲೂ ನಿನ್ನದು ಆತುರದ ಬುದ್ಧಿಯಯ್ಯ. ನಿಮ್ಮ ತಂದೆ ಭರಮಣ್ಣನಾಯಕ ಬೃಹನ್ಮಠಕ್ಕೆ ಬಂದರೆ ನಾವೇ ಹೋಗಿಬಾರಯ್ಯ ದೊರೆ, ಅರಮನೆ ನಿನಗಾಗಿ ಕಾಯುತ್ತಿದೆ ಎಂದೆಚ್ಚರಿಸಬೇಕು. ಗುರುಸಾನಿಧ್ಯವೆಂದರೆ ಪಟ್ಟ, ಪದವಿ, ಅರಮನೆ, ಅಂತಃಪುರ ಎಲ್ಲಾ ಮರೆತುಬಿಡುತ್ತಿದ್ದ ಕಣೋ ಮಹರಾಯ'[೪೭] (ವೇಣು ಬಿ.ಎಲ್, ೨೦೦೩, ಪುಟ-೪೯) ಎಂಬ ಮಧುರವಾದ ನೆನಪುಗಳನ್ನು ಮಾಡಿಕೊಳ್ಳುವರು.

ಮಹಾಸ್ವಾಮಿಗಳ ನಡೆ ಹೇಗೆಂದರೆ ಪುರುಷಾಕಾರ ಧರಿಸಿದ ಯೋಗಶಕ್ತಿಯಂತೆ, ಮಾನವರೂಪುವೆತ್ತ ತಪೋಬಲರಂತೆ, ಕಾಷಾಯ ಧರಿಸಿದ ಸಾರ್ವಭೌಮರಂತೆ, ಕಾವಿಯುಟ್ಟ ಇಬ್ಬರು ಮರಿದೇವರುಗಳು ದಾರಿ ತೋರುತ್ತಿರಲು, ಕಾವಿಯ ಬಣ್ಣದ ಮುಂಡಾಸು, ಅದೇ ಬಣ್ಣದ ನಿಲುವಂಗಿ, ಅಂಥದೇ ದಟ್ಟಿಯನ್ನುಟ್ಟು ಮರದ ಪಾದುಕೆಗಳನ್ನು ಧರಿಸಿ ಬಂಗಾರದ ರಾಜಲಾಂಛನವನ್ನುಳ್ಳ ಕೋಲನ್ನು ಹಿಡಿದು, ಧೀರಗಂಭೀರ ನಡೆಯುಳ್ಳವರಾಗಿರುವರು'[೪೮] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೨೯) ಗಂಡೋಬಳವ್ವನಾಗತಿ ಪುತ್ರಸಂತಾನವಿಲ್ಲದೆ ಅಸುನೀಗಿದ ಕಸ್ತೂರಿರಂಗಪ್ಪನಾಯಕರ ನಂತರ ಪಟ್ಟಾಧಿಕಾರಿ ಯಾರೆಂಬ ಚರ್ಚೆಯಲ್ಲಿ ಪಾಲ್ಗೊಂಡಿರುತ್ತಾರೆ. ಸಿಂಹಾಸನಕ್ಕೆ ಉತ್ತರಾಧಿಕಾರಿ ಯಾರಾದರೂ ಅವರಿಗೆ ನಮ್ಮ

ಆಶೀರ್ವಾದ ಇದ್ದೇ ಇರುತ್ತದೆ. ತಮಗೆ ಬಂದ ಮಾಹಿತಿಯ ಮೇರೆಗೆ ಹೇಳುವುದಾದರೆ ಹೊಸದುರ್ಗದ ಸೇನಾಧಿಪತಿಗಳೂ, ಕೈಲಾಸವಾಸಿಗಳಾದ ರಾಜಾ ಹಿರೇಮದಕರಿನಾಯಕರ ತಮ್ಮಂದಿರೂ ಆಗಿರುವ ದಂಡಿನ ದಳವಾಯಿ ಜಂಪಣ್ಣನಾಯಕರ ಕುಮಾರ ಭರಮಪ್ಪನಾಯಕರಿಗೆ ಪಟ್ಟಕಟ್ಟಿದರೆ ಆದೀತೆನ್ನುವ ಅಭಿಪ್ರಾಯ ಸೂಚಿಸುವರು. ಆದರೆ ನಾಗತಿ ತನ್ನ ಪತಿ ಕನಸಿನಲ್ಲಿ ಬಂದು ಜಾನಕಲ್ಲಿನ ತೊದಲು ಭರಮಣ್ಣನಾಯಕನ ಮಗ ಮದಕರಿಯನ್ನು ಪಟ್ಟಕ್ಕೆ ತರುವಂತೆ ಸೂಚಿಸಿರುವರು ಎಂದು ಹೇಳಿದಾಗ ಗುರುಗಳು ಸುಮ್ಮನಾಗುವರು.

ತರೀಕೆರೆಯ ಸಂಸ್ಥಾನಾಧೀಶ್ವರರಾದ ಸರ್ಜಾ ಹನುಮಪ್ಪನಾಯಕರ ಮಗಳಾದ ಲಕ್ಕಾಂಬೆಯನ್ನು ಮದಕರಿಗೆ ತಂದುಕೊಳ್ಳುವ ವಿಚಾರದಲ್ಲಿ ಗುರುಗಳ ಅಪ್ಪಣೆ ಕೇಳಲು ಬಂದ ನಾಗತಿ ಮೊದಲು ಕ್ಷಮಾಪಣೆ ಕೇಳಿದಾಗ, ಗುರುಗಳು ಹೆಣ್ಣಿಗೆ ಪತಿಯೇ ಶಿವನಸ್ವರೂಪ. ಪತಿಯ ಆಜ್ಞೆಯಂತೆ ನಡೆಯುವುದು ಹೆಣ್ಣಿನ ಕರ್ತವ್ಯ. ಅದರಲ್ಲಿ ತಮಗಾವ ಬೇಸರವೂ ಇಲ್ಲ. ಪಿಸುಣರ ಮಾತಿಗೆ ಬೆಲೆ ಕೊಡದೆ ಧರ್ಮದ ಮಾರ್ಗದಲ್ಲಿ ನಡೆಯಿರಿ ಎಂದು ಉಪದೇಶಿಸುವರು. ನಾಗತಿ ಕೂಡಲಿ ಶೃಂಗೇರಿಯ ಶ್ರೀ ಶ್ರೀಗಳವರು ತರೀಕೆರೆ ಪಾಳೆಯಗಾರರ ಮಗಳನ್ನು ಸೊಸೆಯನ್ನಾಗಿ ಮಾಡಿಕೊಳ್ಳಲು ಹೇಳಿಕಳುಹಿಸಿದ್ದಾರೆ ಎಂದು ಗುರುಗಳಲ್ಲಿಗೆ ಭಿನ್ನವಿಸಿಕೊಂಡಾಗ ಅದಕ್ಕೆ ಒಪ್ಪಿಗೆ ಸೂಚಿಸಿ ಒಳ್ಳೆಯ ಕಾರ್ಯಕ್ಕೆ ಒಳ್ಳೆಯ ಮಾತಿಗೆ ಇಲ್ಲವೆನ್ನುವರಾರು? 'ಈ ಸಂಸಾರದ ಮಾತು, ರಾಜಕಾರಣದ ಮಾತು ವಿರಕ್ತರಿಗಲ್ಲ. ನಿಮ್ಮ ಹಿರಿಯರ ಭಕ್ತಿಗೆ ಕಟ್ಟುಬಿದ್ದು ಚರಮೂರ್ತಿಗಳಾಗಿದ್ದ ಕತೃಗಳು ಸ್ಥಿರಮೂರ್ತಿಗಳಾಗಿ ಇಲ್ಲಿ ನಿಲ್ಲಬೇಕಾಯಿತು. ಹತ್ತು ಜನಕ್ಕೆ ಒಳಿತು ಹೇಳುವ, ಅನ್ನವಿಕ್ಕುವ ಪುಣ್ಯಕಾರ್ಯ ನೀವು ಮಾಡಬೇಕಾದದ್ದನ್ನು ನಮ್ಮಿಂದ ಮಾಡಿಸುತ್ತಿದ್ದೀರ. ಅದು ಶಿವ ಮೆಚ್ಚುವ ಕೆಲಸ. ಅಸುರ ರಾವಣನಿಗೆ, ಬೇಡರ ಕಣ್ಣಪ್ಪನಿಗೆ, ವಿಟ ನಂಬಿಯಣ್ಣನಿಗೆ ಓ ಎಂದು ಕೂಗಿದ ಕೂಡಲೇ ಬಂದು ಒಲಿದ ನಮ್ಮ ಶಿವ; ಅವನ ಭಕ್ತರು ನಾವು. ಶಿಷ್ಯರು, ಭಕ್ತರು ಮಾಡುವ ತಪ್ಪುಗಳ ಲೆಕ್ಕಹಾಕುತ್ತಾ ಕೂಡುವ ಕಾರಕೂನರಲ್ಲ ನಾವು. ಎಲ್ಲದಕ್ಕೂ ನಮ್ಮ ಮಾತೇ ಆಗಬೇಕೆಂದು ಬಂದು ಗುರುಮನೆಯನ್ನು ಅರಮನೆಯನ್ನಾಗಿ ಮಾಡಬೇಡಿ. ಧರ್ಮದ ಮಾತಿದ್ದರೆ ಬಂದು ಕೇಳಿ ಹೇಳುತ್ತೇವೆ. ಉಳಿದ ಮಾತು ಹೇಳುವುದೂ ಬಿಡುವುದೂ ನಿಮ್ಮ ವಿಶ್ವಾಸ. ನಾವು ಹೇಳುವುದಿಷ್ಟೇ ತಾಯಿ, ನಮ್ಮೊಳಗಿರುವ ಶಿವ ನಿಮ್ಮಲ್ಲೂ ಇದ್ದಾನೆ. ಆತ ಒಪ್ಪುವಂತ ಕೆಲಸ ಮಾಡಿ, ಅದಕ್ಕೆ ಸದಾ ನಮ್ಮ ಆಶೀರ್ವಾದವಿದೆ. ಆದದ್ದು ಒಳಿತಾಯಿತು. ಬೇಗ ಸೊಸೆ ಬರಲಿ, ವಂಶ ಬೆಳೆಯಲಿ'[೪೯] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೪೯) ಎಂದು ಹರಿಸಿದರು. ಅರಮನೆಯವರಿಗೆ ಉಪದೇಶಿಸುವ ಗುರುಪೀಠದವರಾದ ಇವರು ಕೋಗುಂಟೆಯೆಂಬಲ್ಲಿ ಅಚಾತುರ್ಯದ ಪ್ರಮಾದವೊಂದು ನಡೆದು ಗುರುಗಳು ನಾಲ್ಕು ಜನರನ್ನು ಊರಿನಿಂದ

ಬಹಿಷ್ಕರಿಸಿದಾಗ ಅವರು ಸೇನೆಯವರಾಗಿದ್ದು ಮದಕರಿನಾಯಕನನ್ನು ಭೇಟಿಯಾಗಿ ತಮ್ಮನ್ನು ಕ್ಷಮಿಸಿ ಬಹಿಷ್ಕಾರ ಹಿಂತೆಗೆದುಕೊಳ್ಳುವಂತೆ ಗುರುಗಳಿಗೆ ಹೇಳಬೇಕೆಂದು ಅರಿಕೆ ಮಾಡಿಕೊಳ್ಳುವರು. ರಾಜನು ಆ ಪ್ರಮಾದದ ಹಿನ್ನಲೆ ಕೇಳಲಾಗಿ ಊರಿಗೆ ಒಬ್ಬ ಅಯ್ಯನವರು ಬಂದು ಚೆನ್ನಬಸವಣ್ಣನವರ ಕುರಿತು ಪುರಾಣ ಹೇಳಿ ಬಸವಣ್ಣನವರು ಎಲ್ಲರಿಗೂ ಲಿಂಗದೀಕ್ಷೆ ಕೊಟ್ಟ ವಿಷಯ ಪ್ರಸ್ತಾಪಿಸಿ ಎಲ್ಲರಿಗೂ ಲಿಂಗಧಾರಣೆ ಮಾಡಿಸುವರು. ಆದರೆ ಅಲ್ಲಿನ ಸೂಳೆಯೊಬ್ಬಳು ಸೊಕ್ಕಿನಿಂದ ತನಗೂ ಲಿಂಗಧಾರಣೆ ಮಾಡಬೇಕೆಂದಾಗ ಅಯ್ಯನವರು ಸೊಕ್ಕಿನಿಂದ ಮೆರೆಯುವ ಹೆಣ್ಣಿಗೆ ಅದು ಸಾಧ್ಯವಿಲ್ಲವೆಂದು ಅಪಮಾನಗೊಳಿಸಿದಾಗ ಆಕೆ ನಾಲ್ಕು ಜನ ಪ್ರಾಯದ ಹುಡುಗರಿಂದ ಆ ಲಿಂಗವನ್ನು ತೆಗೆದುಕೊಂಡು ಕೊರಳಲ್ಲಿ ಹಾಕಿಕೊಂಡು ಊರ ತುಂಬೆಲ್ಲ ಮೆರವಣಿಗೆ ಮಾಡುತ್ತಾಳೆ. ಹಿರಿಯರು ಆ ನಾಲ್ವರಿಗೆ "ತಪ್ಪು ಕಾಣಿಕೆ ಕಟ್ಟಿ ಪ್ರಾಯಶ್ಚಿತ ಮಾಡಿಕೊಳ್ಳಿ" ಎಂದರೆ ಆ ಹೆಂಗಸು ಹಾಗೇನಾದರೂ ಮಾಡಿದರೆ ತನ್ನ ಸಂಗ ಮಾಡಲು ಸಾಧ್ಯವಿಲ್ಲವೆಂದು ಷರತ್ತು ಹಾಕಿದಾಗ ಆ ಹುಡುಗರು ಆಕೆಯ ಮಾತನ್ನೇ ಕೇಳುತ್ತಾರೆ. ವಿಷಯ ತಿಳಿದ ಗುರುಗಳು ಅವರಿಗೆ ಬಹಿಷ್ಕಾರ ಹಾಕುತ್ತಾರೆ. ಹೀಗಾಗಿ ಆ ನಾಲ್ವರು ರಾಜರನ್ನು ಭೇಟಿಯಾಗಿ ಕ್ಷಮಾಪಣೆ ಕೇಳಿಕೊಂಡು ಗುರುಗಳಿಂದ ಬಹಿಷ್ಕಾರ ಮರಳಿ ಪಡೆಯುವಂತೆ ವಿನಂತಿಸಿಕೊಂಡಾಗ ರಾಜ ಅದಕ್ಕೊಪ್ಪಿ ಗುರುಗಳ ಹತ್ತಿರ ಬಂದು ವಿಷಯ ಪ್ರಸ್ತಾಪಿಸಿ ಮೊದಲು ವಿನಯವಾಗಿ ಕೇಳಿಕೊಂಡಾಗ ಧರ್ಮವೆಂಬುದು ಎಲ್ಲರಿಗೂ ಒಂದೇ ಎಂದು ರಾಜನ ಮಾತನ್ನು ತಿರಸ್ಕರಿಸುವರು. 'ಕುರುಡು ಉತ್ಸಾಹದಲ್ಲಿ ಲಿಂಗಧಾರಣೆ ಮಾಡಿಸಿಕೊಂಡದ್ದು ಹುಡುಗುಬುದ್ಧಿ. ಆದರೆ ಮಂಗಲಮಯ ಶಿವಲಿಂಗವನ್ನು ಸೂಳೆಯಾಟದ ಸದರ ಮಾಡಿದ ತಪ್ಪು ಸಣ್ಣದಲ್ಲ. ಒಮ್ಮೆ ಧರಿಸಿದ ಶಿವಲಿಂಗ ಕೈ ತಪ್ಪಿ ಕೆಳಗೆ ಜಾರಿದರೂ ಮಹಾಪಾತಕ ಎನ್ನುತ್ತದೆ ಶಾಸ್ತ್ರ. ಧರಿಸಿದ ಲಿಂಗಕ್ಕೆ ದ್ರೋಹ ಬಗೆದವರಿಗೆ ತಲೆದಂಡ ಎಂದಿದ್ದಾರೆ ಹಿರಿಯರು. ಸಮಯಾಚಾರವರಿತು, ಭಯಭಕ್ತಿಗಳಿಂದ ಪೂಜಿಸಬೇಕಾದ ಶ್ರೀಲಿಂಗವನ್ನು ಕವಡೆಗಿಂತ ಕಡೆ ಎಂಬಂತೆ ಸೂಳೆಯ ಸೊಂಟಕ್ಕೆ ಸುತ್ತಿದುದು ಸಣ್ಣ ತಪ್ಪಲ್ಲ. ಕಾಳಸರ್ಪವನ್ನು ಕೆಣಕಿದಂಥ ಘೋರಾಪರಾಧ. ಅಂಥ ತಪ್ಪು ಮಾಡಿದವರನ್ನು ಒಮ್ಮೆ ಒಬ್ಬರನ್ನು ಕ್ಷಮಿಸಿದರೆ, ದಿನವೂ ಅಂಥ ಪಾಪದ ಕೆಲಸ ನಡೆಯಲು ರಹದಾರಿ ಕೊಟ್ಟಂತಾದೀತು. ಆದ್ದರಿಂದ ಆ ಮಾತು ಬಿಡಿ. ಬೇರೆ ವಿಷಯವಿದ್ದರೆ ಆಡಿ'[೫೦] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ–೨೦೧) ಎಂದು ಸೂಚಿಸಿದಾಗ ದೊರೆ ಅರಸುತನದ ಅಹಂಕಾರದಿಂದ ಹೆಡೆ ತುಳಿದ ಹಾವಿನಂತೆ ಈ ಗುರುಮನೆಯ ವೈಭವವೆಲ್ಲ ದೊರೆಗಳ ಹಂಗು ಎನ್ನುವ ರೀತಿಯಲ್ಲಿ ಮಾತನಾಡುತ್ತಾನೆ. ಇದರಿಂದ ಕೋಪಗೊಂಡ ಗುರುಗಳು ಮುನಿಸು ಎಂಬುದು ತಮ್ಮ ಮನಸ್ಸನ್ನು ಮೈಲಿಗೆ ಮಾಡಿತು.

ಸ್ನಾನ ಮಾಡಿ ಶಿವಪೂಜೆ ಮಾಡಬೇಕು ಶಿವನಿಚ್ಛೆ ಇದ್ದಂತಾಗಲಿ ಎಂದು ಮಾತು ಅಲ್ಲಿಗೆ ಮುಗಿಸಿ ಎದ್ದು ಹೋಗುವರು. ಆದರೆ ಮರುದಿನ ಗುರುಗಳು ಬೃಹನ್ಮಠವನ್ನು ಬಿಟ್ಟು ಹೋಗುತ್ತಾರೆ.

೫.೧.೭ ಶ್ರೀ ಪ್ರಭುಸ್ವಾಮಿಗಳು :

ಕಿತ್ತೂರು ಸಂಸ್ಥಾನದ ಚರಿತ್ರೆಯಲ್ಲಿ ಹೊಸದೊಂದು ಮನ್ವಂತರ ಆರಂಭವಾದದ್ದು ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಮೊದಲ ರಾಜಗುರುಗಳಾಗಿ ಧಾರ್ಮಿಕ ಆಚರಣೆಗಳಿಗೆ ಅಸ್ತಿವಾರ ಹಾಕಿದಾಗ. ಅವರು ರಾಜಕೀಯವಾಗಿಯೂ, ಕೌಟುಂಬಿಕವಾಗಿಯೂ ದೇಸಾಯಿಗಳಿಗೆ ಮಾರ್ಗದರ್ಶನ ಮಾಡುತ್ತ ಕಿತ್ತೂರಿನ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತ ಸಂಸ್ಥಾನದ ಒಂದು ಭಾಗವಾಗಿ ಸೇರಿ ಹೋದರು. ದೇಸಾಯಿಗಳ ಪರಂಪರೆಯ ಜೊತೆಜೊತೆಗೆ ಕಿತ್ತೂರಿನ ಕಲ್ಮಠದ ಗುರುಗಳ ಪರಂಪರೆಯೂ ಸಾಗಿ ಬಂದಿದೆ. 'ಕಲ್ಮಠವು ರಾಜಗುರುಗಳ ವಾಸಕ್ಕೆ ನಿರ್ಮಾಣವಾದರೆ ಚೌಕಿಮಠವೆಂಬ ಇನ್ನೊಂದು ಮಠವು ಗುರುಗಳ ರಾಜಕಾರ್ಯಗಳಿಗಾಗಿ ನಿರ್ಮಾಣವಾಯಿತು. ಅಲ್ಲಿ ಗುರುಗಳ ನೇತೃತ್ವದಲ್ಲಿ ರಾಜನು ಮಂತ್ರಿ, ಸರದಾರರು, ಮುಖಂಡರೊಡನೆ ರಾಜಕೀಯ ಸಮಾಲೋಚನೆ ಮತ್ತು ತೀರ್ಮಾನಗಳನ್ನು ಕೈಗೊಳ್ಳುವ ಕಾರ್ಯ ನಡೆಯಲು ಅನುಕೂಲವಾಗುವಂತಿತ್ತು.'[೫೧] (ವೃಷಭೇಂದ್ರಾಚಾರ್ಯ ಅರ್ಕಸಾಲಿ, ೨೦೦೯, ಪುಟ-೨೧)

ಕಿತ್ತೂರು ಸಂಸ್ಥಾನಕ್ಕೆ ಟಿಪ್ಪು ಮುತ್ತಿಗೆ ಹಾಕಿ ದೊರೆಯಾದ ಮಲ್ಲಸರ್ಜನನ್ನು ಜೊತೆಗೆ ಗುರುನಾಥಪಂಥ, ಸಣ್ಣಚೆನ್ನಪ್ಪ, ಮುಂತಾದವರನ್ನು ಸೆರೆ ಹಿಡಿಯುತ್ತಾನೆ. ವಿಷಯ ತಿಳಿದ ಮಠದ ಸ್ವಾಮಿಗಳಾದ ಪ್ರಭುಸ್ವಾಮಿಗಳು ಅದೇ ಯೋಚನೆಯಲ್ಲಿಯೇ ತಮ್ಮ ಪ್ರೀತಿಯ ಹೋರಿಗರುವಿಗೆ ಹುಲ್ಲುಹಾಕುತ್ತ ಕೋಟೆಯಲ್ಲಿ ಮತ್ತೇನು ಅನಾಹುತಗಳು ನಡೆದಿವೆಯೋ ಹಿರಿಯಳಾದ ನೀಲಮ್ಮಾಜಿಯ ಗತಿಯೇನಾಗಿರಬಹುದು ಎಂದು ಆಲೋಚಿಸುವರು. ರಾತ್ರಿಯೆಲ್ಲ ನಿದ್ರೆ ಬಾರದೇ ಮೂಲಸ್ವಾಮಿಗಳ ಗದ್ದುಗೆಯ ಬಳಿ ಕುಳಿತುಕೊಂಡು ಶಿವನಾಮಸ್ಮರಣೆ ಮಾಡುತ್ತ ಇರುಳು ಕಳೆಯುವರು. ಬೆಳಗಾಗುತ್ತಲೇ ನೀಲಮ್ಮಾಜಿ ಅರಮನೆಯಿಂದ ತಪ್ಪಿಸಿಕೊಂಡು ಮಠಕ್ಕೆ ಬಂದು ಸ್ವಾಮಿಗಳನ್ನು ಕಾಣುತ್ತಾಳೆ. ತಾನು ರಾತ್ರಿಯೇ ಬಂದು ಮಠದಲ್ಲಿ ಅಡಗಿ ಕುಳಿತ ವಿಷಯವನ್ನು ಸ್ವಾಮಿಗಳಿಗೆ ತಿಳಿಸಿದಾಗ ಪ್ರಭುಸ್ವಾಮಿಗಳು ಆಕೆಗೆ ಸಮಾಧಾನ ಹೇಳಿ ಅಮ್ಮಾಜಿ ಸದ್ಯಕ್ಕಂತೂ ನೀವು ಹೊರಗೆ ಸುಳಿಯಬೇಡಿ ಸ್ನಾನ, ಪೂಜೆ ಮುಗಿಸಿ ಪ್ರಸಾದ ಸ್ವೀಕರಿಸಿ ಎನ್ನುವರು.

ನೀಲಮ್ಮಾಜಿ ಸ್ವಾಮಿಗಳನ್ನು ಮಧ್ಯಾಹ್ನ ಮತ್ತೆ ಭೇಟಿಯಾದಾಗ ಸ್ವಾಮಿಗಳು ಇದೆಲ್ಲ ಹೇಗಾಯಿತು ಎಂದು ಕೇಳುವರು. ನೀಲಮ್ಮಾಜಿ ನಡೆದ ಸಂಗತಿ ತಿಳಿಸಿ ದಿವಾನರು ಪ್ರತಿಭಟನೆ ಮಾಡಬಾರದೆಂದು ಸಲಹೆ ಕೊಟ್ಟಿದ್ದ ವಿಷಯವನ್ನು ಪ್ರಸ್ತಾಪಿಸುವಳು. ಧೈರ್ಯದಿಂದ ಯುದ್ಧ

ಮಾಡಿದ್ದರೆ ಜಯ ಕಿತ್ತೂರಿಗೆ ಲಭಿಸುತ್ತಿತ್ತು. ದಿವಾನರು ಯಾಕೆ ಹೀಗೆ ಮಾಡಿದರೆಂದು ಕಾಣಲಿಲ್ಲವಲ್ಲ. 'ಒಬ್ಬ ದಿವಾನನ ಮಾತನ್ನೇ ನಡೆಸಲು ಹೋಗಿ ಎಂಥಾ ಅನಾಹುತವಾಯಿತಲ್ಲ ನೀಲಮ್ಮಾಜೀ. ಅವರೂ ಹೀಗ್ಯಾಕೆ ಮಾಡಿದರೊ. ಕಿತ್ತೂರನ್ನು ಅವರಾಗಿಯೇ ವೈರಿಗಳ ಕೈಗೆ ಕೊಟ್ಟ ಹಾಗಾಯಿತಲ್ಲ?'[೫೨] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೮೯) ಎಂಬ ಕಳವಳ ವ್ಯಕ್ತಪಡಿಸುವರು. ನೀಲಮ್ಮಾಜಿಯ ಜೊತೆ ಸ್ವಾಮಿಗಳು ಇದರಲ್ಲಿ ಗುರುನಾಥ ಪಂಥನದೇನೋ ಕೈವಾಡವಿರಬೇಕೆಂದು ಅನುಮಾನ ವ್ಯಕ್ತಪಡಿಸಿ, ಟೀಪುವಿನ ಚಿತ್ತ ಹೇಗಿದೆಯೋ ಹೇಗಾದರೂ ಮಾಡಿ ಮಲ್ಲಸರ್ಜನನ್ನು ಪಾರುಮಾಡುವ ಬಗೆಯೆಂತು ಎಂದು ಚರ್ಚಿಸುವರು.

ಇತ್ತ ತವರಿನಲ್ಲಿದ್ದ ಮಲ್ಲಸರ್ಜನ ಮಡದಿ ರುದ್ರಮ್ಮಾಜಿ ವಿಷಯ ತಿಳಿದು, ಸಮಯ ನೋಡಿ ಟೀಪುವಿನ ಸೇನೆಯ ಜೊತೆಗೆ ಕಾದಾಡಿ ಬೆಳಗಾಗುವುದರಲ್ಲಿಯೇ ಕೋಟೆಯ ಮೇಲಿನ ಟೀಪುವಿನ ಬಾವುಟ ಕೆಳಗಿಳಿದು ಕಿತ್ತೂರಿನ ಧ್ವಜ ಹಾರಾಡುತ್ತದೆ. ಗಂಡುಗಾಸೆಯನ್ನು ಉಟ್ಟ ರುದ್ರಮ್ಮಾಜಿ ಕಲ್ಲುಮಠಕ್ಕೆ ಬಂದು ಗುರುಗಳ ಪಾದಕ್ಕೆರಗುತ್ತಾಳೆ. ಪ್ರಭುಸ್ವಾಮಿಗಳು 'ಎದ್ದೇಳು ರುದ್ರಾಣೀ, ನೂರು ವರ್ಷ ಬಾಳಿ ಈ ರಾಜ್ಯವನ್ನು ಸುಖದಿಂದ ಆಳು'[೫೩] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೧೮೭) ಎಂದು ಆಶೀರ್ವದಿಸುವರು.

ಟೀಪುವಿನ ಸೆರೆಯಲ್ಲಿದ್ದ ಮಲ್ಲಸರ್ಜ ದೊರೆಗಳು ಬಂದು ರಾಜ್ಯಾಧಿಕಾರ ವಹಿಸಿಕೊಳ್ಳುವವರೆಗೆ ಅಧಿಕಾರ ಸೂತ್ರವನ್ನು ಯಾರಾದರೂ ವಹಿಸಿಕೊಳ್ಳಬೇಕೆಂದು ನೆರೆದ ಸಭೆಯನ್ನುದ್ದೇಶಿಸಿ ಗುರುಗಳಾದ ಪ್ರಭುಸ್ವಾಮಿಗಳು ಹೇಳಿದಾಗ ಎಲ್ಲರೂ ಪ್ರಭುಸ್ವಾಮಿಗಳ ಹೆಸರನ್ನೇ ಪ್ರಸ್ತಾಪಿಸುವರು. ಆಗ ಸ್ವಾಮಿಗಳು 'ನಮ್ಮ ಬಗ್ಗೆ ಇರುವ ವಿಶ್ವಾಸದಿಂದ ನೀವೆಲ್ಲರೂ ಈ ಹೊಣೆಯನ್ನು ನಮ್ಮ ತಲೆಗೆ ಕಟ್ಟಲು ಸಿದ್ಧವಾಗಿದ್ದೀರಿ. ಆದರೆ, ನಾವು ಧಾರ್ಮಿಕ ರಂಗದವರು ಆ ರಂಗದಲ್ಲಿದ್ದುಕೊಂಡೇ ಈ ರಾಜ್ಯದ ಅಭಿವೃದ್ಧಿಗಾಗಿ ಸಾಧ್ಯವಾದಷ್ಟು ಕೆಲಸ ಮಾಡಬಲ್ಲೆವು. ಪ್ರತ್ಯಕ್ಷವಾಗಿ ರಾಜಕೀಯ ರಂಗಕ್ಕೆ ಮಾತ್ರ ನಾವು ಇಳಿಯಲಾರೆವು. ನೀವೂ ನಮಗೆ ಅದಕ್ಕಾಗಿ ಒತ್ತಾಯ ಮಾಡಬೇಡಿರಿ. ನಿಮ್ಮಲ್ಲಿಯೇ ಒಬ್ಬ ಸಮರ್ಥನನ್ನಾರಿಸಿ ಅವರಿಗೆ ಈ ಜವಾಬುದಾರಿ ಒಪ್ಪಿಸಿರಿ'[೫೪] (ಬಸವರಾಜ ಕಟ್ಟೀಮನಿ, ೨೦೧೧, ಪೌರುಷ ಪರೀಕ್ಷೆ, ಪುಟ-೧೯೦) ಎಂದು ಹೇಳಿದಾಗ ಕೊನೆಗೆ ಎಲ್ಲರೂ ಸೇರಿ ದೊರೆಗಳು ಬರುವವರೆಗೆ ರುದ್ರಮ್ಮ ರಾಣಿಯೇ ಆಡಳಿತ ನಡೆಸಬೇಕೆಂದು ತೀರ್ಮಾನಿಸುವರು. ಜನರ ಒಕ್ಕೊರಲಿನ ಅಭಿಪ್ರಾಯದಂತೆ ರುದ್ರಮ್ಮರಾಣಿಯು ಸಮರ್ಥವಾಗಿ ಆಡಳಿತವನ್ನು ನಡೆಸುತ್ತ ಪತಿಯ ಆಗಮನದ ಹಾದಿಯನ್ನೇ ಕಾಯುತ್ತಿರುತ್ತಾಳೆ. ಗುರುಗಳಾದ ಪ್ರಭುಸ್ವಾಮಿಗಳು ಇವಳಿಗೆ ಮಾರ್ಗದರ್ಶಕರಾಗಿ ನೆರವಾಗುವರು.

ಮಲ್ಲಸರ್ಜನ ಮರಣದ ವಾರ್ತೆ ಕೇಳುತ್ತಿದ್ದಂತೆ ಸ್ಥಳೀಯ ಕಲ್ಮಠದ ಪ್ರಭುದೇವ ಸ್ವಾಮಿಗಳು ಅರಮನೆಗೆ ಆಗಮಿಸಿ ಅಳುತ್ತಿರುವ ಮಲ್ಲಸರ್ಜನ ಮಕ್ಕಳನ್ನು ಒಳಗೆ ಕರೆದೊಯ್ದು ಮಲ್ಲಸರ್ಜ ಮುಕ್ತಿ ಹೊಂದಿರುವನೆಂದು ಹೇಳಿ ಅವರನ್ನು ಸಮಾಧಾನ ಪಡಿಸಿದರು.

'ಕಲ್ಲುಮಠದ ಪ್ರಭುದೇವರು ಬಂದು

ಎಲ್ಲ ಮಕ್ಕಳನು ಒಳಯಕ್ಕೆ ತಂದು

ಎಲ್ಲರಿಗೂ ಬುದ್ಧಿ ಹೇಳಿದರು ಬಂದು

ಮಲ್ಲಸರ್ಜನು ಮುಕ್ತಿ ಅದನು ಇಂದು'[೫೫] (ಶಿವಾನಂದ ಗುಬ್ಬಣ್ಣವರ, ೨೦೧೧, ಪುಟ-೭೩)

ವೀರಪ್ಪನವರು ಗಂಗಾಧರ ಮತ್ತು ರಾಯಣ್ಣನನ್ನು ಮಾರುವೇಷದಲ್ಲಿ ಕಲ್ಮಠಕ್ಕೆ ಕರೆದುಕೊಂಡು ಬಂದ ಸಂದರ್ಭದಲ್ಲಿ ಸ್ವಾಮಿಗಳಿಗೆ ಮಠದ ಮೇಲೆ ಕುಂಪಣಿ ಸರ್ಕಾರದವರು ಕಣ್ಣಿಟ್ಟಿರುವ ವಿಷಯದ ಕುರಿತು ಕೇಳಲಾಗಿ ಸ್ವಾಮಿಗಳು 'ಅದೇನೋ ಮೊದಲಿನಿಂದಲೂ ಅದೆ. ಕಿತ್ತೂರು ರಾಜರ ಗುರುಪೀಠ, ನಮ್ಮ ಸಲಹೆ ಕೇಳಿಕೊಂಡೇ ಹೊಸ ಹೊಸ ಕಾರ್ಯ ಮಾಡತಕ್ಕವರು. ಈಗಲೂ ರಾಣಿ ಸಾಹೇಬರು ಮ್ಯಾಲಿಂದ ಮ್ಯಾಲ ನಮ್ಮನ್ನ ಕರೆಸಿಕೊಳ್ಳುತ್ತಿರ್ತಾರ. ನಾವೇನಾದರೂ ಹೊಸ ಹಂಚಿಕೆ ಹಾಕಿ ಕುಂಪಣಿಯವರ ವಿರುದ್ಧ ಲಢಾಯಿ ಸುರು ಮಾಡಬಹುದಂತ ಸಂಶಯ ಇದ್ದೇ ಇರಬೇಕು ಅವರಿಗೆ. ಅದಕ್ಕೆ ನಮ್ಮ ಚಲನವಲನಗಳನ್ನೆಲ್ಲ ಹದ್ದಿನ ಕಣ್ಣಿಂದ ಕಾಯ್ತಾ ಇರ್ತಾರ. ಮಠಕ್ಕೆ ಯಾರು ಬರ್ತಾರೆ, ಯಾರು ಹೋಗ್ತಾರೆ ಎಲ್ಲಾ ಎಲ್ಲಾ ವರದಿಯಾಗ್ತದ ಮಾಮಲೆದಾರರಿಗೆ'[೫೬] (ಬಸವರಾಜ ಕಟ್ಟೀಮನಿ, ೨೦೦೮, ಸಂಗೊಳ್ಳಿ ರಾಯನಾಯಕ, ಪುಟ-೫೦) ಎನ್ನುವರು.

ಚೆನ್ನಮ್ಮ ರಾಣಿಯವರು ಅನಾರೋಗ್ಯದಿಂದ ಬಳಲುತ್ತಿರುವ ಸಂದರ್ಭದಲ್ಲಿ ಶಿರಸ್ತೇದಾರರ ಅಪ್ಪಣೆ ಪಡೆದು ಕಲ್ಮಠದ ಸ್ವಾಮಿಗಳು ಹೊಂಗಲಕ್ಕೆ ಹೋಗಿ ರಾಣಿಯವರನ್ನು ಕಂಡು ಬರುತ್ತಾರೆ. ಅವರು ಜೀವಿಸುವುದು ಕಠಿಣವೆಂದೇ ಸ್ವಾಮಿಗಳಿಗೆ ತೋರುತ್ತದೆ. ಕಡೆಗೆ ಒಂದು ಶುಕ್ರವಾರ ಅವರು ಅಂತ್ಯವಸ್ಥರಾದಾಗ ಕಲ್ಮಠದ ಸ್ವಾಮಿಗಳು ಮತ್ತೆ ಹೊಂಗಲಕ್ಕೆ ಹೋಗುವರು. 'ಕಿತ್ತೂರಿನ ಚರಿತ್ರೆಯಲ್ಲಿ ಅಂದು ಪ್ರಾರಂಭವಾದ ಕಲ್ಮಠ ಮತ್ತು ಚೌಕಿಮಠಗಳು ಅವುಗಳ ಗುರುಪರಂಪರೆಯು ಆ ಚರಿತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನ ಮಾಡುತ್ತ ಸಂಸ್ಥಾನವನ್ನು ನಡೆಸಿಕೊಂಡು ಬಂದದ್ದನ್ನು ನೋಡುತ್ತೇವೆ. ಕಲ್ಮಠದ ಪೀಠಸ್ತರು ಕಿತ್ತೂರಿನ ರಾಜಗುರುಗಳಾಗಿ ಕಿತ್ತೂರಿನ ಇತಿಹಾಸದ ಅವಿಭಾಜ್ಯ ಅಂಗವಾಗಿ ಸಾಗಿ ಬಂದಿದ್ದಾರೆ'[೫೭] (ವೃಷಭೇಂದ್ರಾಚಾರ್ಯ ಅರ್ಕಸಾಲಿ, ೨೦೦೯, ಪುಟ-೪೪) ಸಂಸ್ಥಾನಗಳು, ರಾಜಮನೆತನಗಳು ಅಳಿದು ಹೋದರೂ ಮಠಗಳ ಪರಂಪರೆ ಇಂದಿನವರೆಗೂ

ಮುಂದುವರೆದು ಬಂದಿದೆ. ಧಾರ್ಮಿಕ, ಶೈಕ್ಷಣಿಕ ಕಾರ್ಯಗಳನ್ನು ಮಾಡುತ್ತಲೇ ಬಂದಿವೆ. ಇದು ಕಿತ್ತೂರಿನ ಮಠವೊಂದೇ ಅಲ್ಲ ಇಡೀ ಕರ್ನಾಟಕದ ಎಲ್ಲ ಮಠಗಳಿಗೂ ಅನ್ವಯಿಸುತ್ತದೆ.

ಧರ್ಮಪ್ರಚಾರಕ್ಕಾಗಿ ವೈದಿಕ ದೇವಾಲಯಗಳಲ್ಲಿ ಅವುಗಳ ಪೂಜೆ ಪುನಸ್ಕಾರಕ್ಕೆಂದು ಸ್ಥಾನಪತಿಗಳು, ಸ್ಥಾನಾಚಾರ್ಯರು, ಪಂಡಿತರು, ಮಹಾಜನರಿರುವಂತೆ ಜೈನರಲ್ಲಿಯೂ ಸಹ ಆಚಾರ್ಯ, ಪಂಡಿತ ಮುನಿಗಳು ಇರುತ್ತಿದ್ದರು. ಅವರು "ಅಹಿಂಸೆಯೇ ಪರಮ ಧರ್ಮ"ವೆಂದು ನಂಬಿ ಅದನ್ನು ಉಪದೇಶಿಸಿ ಅದರಂತೆಯೇ ಬಾಳಿದವರು. 'ಜೈನಧರ್ಮದ ಗುರುಪರಂಪರೆಯನ್ನು ಮುನ್ನಡಿಸಿದವರಲ್ಲಿ ನಾಗನಂದಿ, ದೇವೇಂದ್ರಮುನಿ, ವರ್ಧಮಾನ, ಋಷಭನಂದಿ, ಮಹೇಂದ್ರಪಂಡಿತ, ಗುಣಚಂದ್ರಪಂಡಿತ, ಕನಕಸೇನ, ಪದ್ಮನಂದಿಗಳಲ್ಲದೇ ಇವರಲ್ಲಿ ಹೆಚ್ಚು ಪ್ರಖ್ಯಾತಿ ಪಡೆದ ಅಮೋಘವರ್ಷನ ಗುರುವಾದ ಜಿನಸೇನ ಮತ್ತು ಎರಡನೆಯ ಕೃಷ್ಣನ ಗುರುವಾದ ಗುಣಭದ್ರರು ರಾಜಗುರುಗಳಾಗಿ ಪ್ರಾಮುಖ್ಯತೆ ಪಡೆದಿದ್ದರು'[೫೮] (ಕುಲಕರ್ಣಿ ಜಿ.ಬಿ, ೨೦೧೨, ಪುಟ-೧೪೪) ಎಂಬ ಅಂಶಗಳು ಇತಿಹಾಸದಿಂದ ತಿಳಿದು ಬರುತ್ತದೆ.

೫.೧.೮ ಜಿನಮುನಿ ಜಿನಸೇನಾಚಾರ್ಯರು:

ಜಿನಸೇನಾಚಾರ್ಯರು ರಾಷ್ಟ್ರಕೂಟ ಚಕ್ರವರ್ತಿಯಾದ ಅಮೋಘವರ್ಷ ನೃಪತುಂಗನಿಗೆ ಅಹಿಂಸೆಯ ಕುರಿತು ಬೋಧನೆ ಮಾಡಿದ್ದರು. ಹೀಗಾಗಿ ಜಿನಸೇನಾಚಾರ್ಯರ ಶಿಷ್ಯನಾದ ನೃಪತುಂಗ ಚಕ್ರವರ್ತಿಗಳಿಗೆ "ಅಹಿಂಸೆ ಗರ್ವಶ್ರೇಷ್ಠವಾದ ಧರ್ಮ" ಎಂದು ಮನವರಿಕೆಯಾಗಿತ್ತು. ಜಿನಸೇನಾಚಾರ್ಯರು ತಮ್ಮ ಪ್ರಶಾಂತ, ಗಂಭೀರ, ದೃಢವಾದ ವಾಣಿಯಲ್ಲಿ 'ತಾವಾಗಿ ಯಾರೂ ಯುದ್ಧಕ್ಕೆ, ರಕ್ತಪಾತಕ್ಕೆ ಹಾತೊರೆಯಬಾರದು. ಅಂಥ ಅಧರ್ಮ ಯುದ್ಧ ಇಹಪರಗಳ ವೈರಿ. ಆದರೆ ಪ್ರಜಾಪಾಲನೆಗೆ ಅಗತ್ಯವಾದಾಗ ಯುದ್ಧಕ್ಕೆ ಹಿಂಜರಿಯುವ ಅರಸನನ್ನು ರಾಜ್ಯಲಕ್ಷ್ಮಿ ಹೇಸಿ ದೂರವಾಗುತ್ತಾಳೆ. ನಿಗ್ರಯೋಗ್ಯವಾದ ಶತ್ರುವನ್ನಾಗಲಿ, ದುಷ್ಟಪುತ್ರನನ್ನಾಗಲಿ ಸಮಾನವಾಗಿ ನಿಗ್ರಹಿಸಿ, ಪ್ರಜಾಪರಿಪಾಲನೆ ಮಾಡುವ ದೊರೆಯೇ ಸಮಂಜಸನು.'[೫೯] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೨೩)

ನೃಪತುಂಗ ಚಕ್ರವರ್ತಿ ರಾಜ್ಯಕ್ಕಾಗಿ ಪ್ರಜೆಗಳ ಹಿತಚಿಂತನೆಗಾಗಿ ತಮ್ಮ ಪ್ರಾಣವನ್ನು ಪಣ ಒಡ್ಡಿದ್ದರೂ ಸಹಿತ ಸಾಹಿತ್ಯ ಚರ್ಚೆಯಲ್ಲಿ, ಧರ್ಮಜಿಜ್ಞಾಸೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ನೃಪತುಂಗನಿಗೆ ಬಾಲ್ಯದಿಂದಲೂ ಧರ್ಮದ ಬಗ್ಗೆ ಇರುವ ಆಸಕ್ತಿಯನ್ನು ಕಂಡು ಜಿನಸೇನಾಚಾರ್ಯರೇ ಒತ್ತಾಯಪೂರ್ವಕವಾಗಿ ಶಸ್ತ್ರಾಭ್ಯಾಸಕ್ಕೆ ಕಳಿಸಿಕೊಡುತ್ತಿದ್ದರು. ದಿನದಿನವೂ ಆಚಾರ್ಯರು ಅರಸುಕುಮಾರನಾದ ನೃಪತುಂಗನನ್ನು ಈ ರೀತಿಯಾಗಿ ಎಚ್ಚರಿಸುತ್ತಿದ್ದರು.

'ರಾಜಕುಮಾರ, ನಿನ್ನ ಆಸೆ ಅಭಿಲಾಷೆಗಳು ಮುಖ್ಯವಲ್ಲ. ಅರಸುಕುಮಾರನಾಗಿ ಹುಟ್ಟಿದವನಿಗೆ, ತನ್ನ ರಕ್ಷಣೆಗೆ ಒಪ್ಪಿಸಲ್ಪಟ್ಟ ರಾಜ್ಯದ ಕ್ಷೇಮ ಚಿಂತನೆ ಮುಖ್ಯ. ಧರ್ಮದ ಬಗ್ಗೆ ನಿನಗೆ ತುಂಬಾ ಆಸಕ್ತಿ ಇದೆ. ಆದರೆ ಆ ಆಸಕ್ತಿಯಲ್ಲಿ ರಾಜಧರ್ಮವನ್ನು ಮರೆಯಬೇಡ. ಸ್ವಧರ್ಮ ಪರಿಪಾಲನೆ ಮಾಡದವನು, ಇಹ ಪರಗಳೆರಡರಲ್ಲೂ ಕೇಡಿಗೆ ಗುರಿಯಾಗುವನು. ನಿನ್ನ ಕುಲಧರ್ಮವನ್ನು, ಆಶ್ರಮಧರ್ಮವನ್ನು ಮರೆಯಬೇಡ. ಇಹವನ್ನು ಮರೆತು ಪರಕ್ಕೆ ಎಳೆಸುವುದು ಮುಗಿಲಿಗೆ ಏಣಿ ಹಾಕಲು ಯತ್ನಿಸಿದಂತೆ ಪ್ರತಿಯೊಬ್ಬರೂ ಅವರವರ ಮಾರ್ಗದಲ್ಲಿಯೇ ಮುಕ್ತಿ ಸಾಧನೆಗೆ ಯತ್ನಿಸಬೇಕು. ನಾನು ಶ್ರಮಣ ನಿನಗೆ ಅದು ದಾರಿ. ನೀನು ದೊರೆ, ಸಂಸಾರಿ. ನೀನು ಆ ದಾರಿಯಲ್ಲೇ ನಡೆದು ಗುರಿ ಸೇರಬೇಕು. ತನ್ನ ಪಾಲಿಗೆ ಬಂದ ಕರ್ತವ್ಯವನ್ನು ಕುಶಲತೆಯಿಂದ, ತನ್ಮಯತೆಯಿಂದ ಮಾಡುವುದೇ ಯೋಗ.'[೬೦] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೪೦) ಹೀಗೆ ಧರ್ಮ, ರಾಜಧರ್ಮದ ಕುರಿತು ಬೋಧನೆಯನ್ನು ನೀಡಿದ ಜಿನಸೇನಾಚಾರ್ಯರು ಮುಕ್ತರಾದಾಗ ನೃಪತುಂಗ ತಾಯಿ ಹಸುವನ್ನು ಕಳೆದುಕೊಂಡ ಕರುವಿನಂತೆ ಹಂಬಲಿಸಿದ್ದರು. ಆಗ ದೊರೆಯನ್ನು ಸಮಾಧಾನಪಡಿಸಿ ದುಃಖದ ಕಡಲಿನಿಂದಾಚೆ ದಾಟಿಸಿ ದಾರಿತೋರಿಸಿ ನಡೆಸಿದವರು ಗುಣಭದ್ರಾಚಾರ್ಯರು.

೫.೧.೯ ಜಿನಮುನಿ ಗುಣಭದ್ರಾಚಾರ್ಯರು:

ಗುರುವಾದ ಜಿನಸೇನಾಚಾರ್ಯರನ್ನು ಕಳೆದುಕೊಂಡಾಗ ದುಃಖದ ಸಾಗರದಲ್ಲಿ ಮುಳುಗಿದ್ದ ನೃಪತುಂಗ ಚಕ್ರವರ್ತಿಯನ್ನು ಸಮಾಧಾನಪಡಿಸಿ ಈ ಜೀವನ ನಶ್ವರ ಎಂಬ ವಿಚಾರಗಳನ್ನು ತಿಳಿಯಪಡಿಸುತ್ತಾ ಪ್ರಜಾಪರಿಪಾಲನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಎಚ್ಚರಿಸಿ ಧರ್ಮೋಪದೇಶ ಮಾಡಿದವರು ಗುಣಭದ್ರಾಚಾರ್ಯರು. ಇವರು ದೊರೆಗೆ ಮೃತರಾದವರ ಬಗ್ಗೆ ಪ್ರೇಮವಿದ್ದರೆ, ಕಂಬನಿಗರೆಯುತ್ತಾ ಕುಳಿತುಕೊಂಡರೆ ಅದು ಆ ಪ್ರೇಮಕ್ಕೆ ಸಾಕ್ಷಿಯಲ್ಲ. ಪರಲೋಕದಲ್ಲಿರುವ ಅವರ ಆತ್ಮಕ್ಕೆ ತೃಪ್ತಿಯಾಗಬೇಕಾದರೆ ಬದುಕಿರುವ ನಾವು ಶೋಕದಿಂದ ಹತಾಶರಾಗದೆ ಅವರು ತೋರಿಸಿಕೊಟ್ಟ ಸನ್ಮಾರ್ಗದೆಡೆಗೆ ನಡೆಯಬೇಕು ಎಂಬ ವಿಚಾರಗಳನ್ನು ಹೇಳುವರು. ದೊರೆಯು ಬದುಕು ನಶ್ವರವೆಂದು ಅರಿತಿದ್ದರೂ ಸಹ ಈ ಬದುಕಿನ ಕರ್ಮಚಕ್ರದಲ್ಲಿ ತೊಳಲಾಡುವುದೇಕೆ? ಎಂದಾಗ ಆಚಾರ್ಯರು 'ಅದು ಜೀವಧರ್ಮ ಮಹಾರಾಜ ನಟನು ತಾನು ಅಭಿನಯಿಸುತ್ತಿರುವುದು ಶುದ್ಧ ನಾಟಕ, ಸತ್ಯವಲ್ಲವೆಂದೂ ಅರಿತೂ, ತನ್ಮಯತೆಯಿಂದ ಅಭಿನಯಿಸುವುದಿಲ್ಲವೇ? ನಾವೂ ಹಾಗೇ. ಬದುಕು ನಶ್ವರವೆಂಬ ಅರಿವು ಬೇಕು. ನಿರ್ಲಿಪ್ತನಾಗಿ ಸಂಸಾರ ಸಾಗರದಲ್ಲಿ ಈಸಾಡಲು, ಈಸುತ್ತಿರುವವರೆಗೂ ಮುಳುಗಬಾರದೆಂಬ ಎಚ್ಚರವೂ ಬೇಕು. ಹದಿನಾರು ಸಹಸ್ರ ಪತ್ನಿಯರ ಭೋಗಭಾಗ್ಯದ ವಿಲಾಸದಲ್ಲಿದ್ದೂ ಯೋಗತರವಾದ ಭರತಚಕ್ರಿಯಂತೆ

ಬಾಳಬೇಕು. ಯೋಗಭೋಗಗಳೆರಡನ್ನೂ ಸಮಚಾತುರಿಯಿಂದ ಸಾಧಿಸಬಲ್ಲ ಸವ್ಯಸಾಚಿತ್ವ ನಿಮಗೆ ಸಿದ್ಧಿಬೇಕೆಂಬುದೇ ಗುರುದೇವರ ಆಶಯವಾಗಿತ್ತು. ಅವರ ಆಶೀರ್ವಾದವಿದೆ ನಿಮಗೆ. ಈ ನಿರ್ವಿಣ್ಣತೆಯನ್ನು ತೊರೆದು ಅದಕ್ಕೆ ಪ್ರಯತ್ನಪಡಿ. ಅರ್ಹಂತನ ಕೃಪೆ ನಿಮ್ಮ ಮೇಲಿರಲಿ'[೬೧] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೪೧) ಎನ್ನುವರು.

ಜಿನಸೇನಾಚಾರ್ಯರು ಮುಕ್ಕಾಲುಭಾಗ ಮುಗಿಸಿದ 'ಪೂರ್ವಪುರಾಣ'ವನ್ನು ಪೂರ್ಣಗೊಳಿಸುವ ಕಾರ್ಯದಲ್ಲಿ ನಿರತರಾದಾಗ ಅರಮನೆಯತ್ತ ಹೋಗುವುದನ್ನು ಸಹ ಕಡಿಮೆ ಮಾಡುತ್ತಾರೆ. ಆದರೆ ಬನವಾಸಿಯ ಸಾಮಂತ ದೊರೆ ಬಂಕರಸರು ತಮ್ಮ ಮಗನಾದ ಲೋಕಾದಿತ್ಯನಿಗೆ ಗುಣಭದ್ರಾಚಾರ್ಯರಿಂದ ವಿದ್ಯೆ ಹೇಳಿಸಬೇಕೆಂದುಕೊಂಡ ವಿಚಾರವನ್ನು ನೃಪತುಂಗ ಚಕ್ರವರ್ತಿಯ ಮುಂದೆ ಪ್ರಸ್ತಾಪಿಸಿದಾಗ ಅವರು ಒಪ್ಪುವರೋ ಇಲ್ಲವೋ ಎಂದು ಅನುಮಾನಿಸುತ್ತಾರೆ. ಆದರೆ ಗುಣಭದ್ರಾಚಾರ್ಯರ ಹತ್ತಿರ ವಿಷಯ ತಿಳಿಸಿದಾಗ ಅವರು ತಮ್ಮ ಗುರುಗಳಾದ ಜಿನಸೇನಾಚಾರ್ಯರು ಅಪೂರ್ಣಗೊಳಿಸಿರುವ ಪೂರ್ವಪುರಾಣವನ್ನು ಪೂರ್ಣಗೊಳಿಸುವವರೆಗೂ ತಾವು ರಾಜಧಾನಿಯನ್ನು ಬಿಟ್ಟು ಎಲ್ಲಿಯೂ ಹೋಗದಿರುವುದರಿಂದ ತಮ್ಮ ಮಗನನ್ನೇ ಮಾನ್ಯಖೇಟಕ್ಕೆ ಕಳಿಸಿಕೊಡುವಂತೆ ಹೇಳುತ್ತಾರೆ. ಜೊತೆಗೆ ನೃಪತುಂಗನೂ ಸಹ ತಮ್ಮ ಮಗನಾದ ಕೃಷ್ಣನಿಗೂ ತಾವೇ ವಿದ್ಯಾರ್ಜನೆ ಮಾಡಬೇಕೆಂದು ಕೇಳಿಕೊಂಡಾಗ ಗುಣಭದ್ರಾಚಾರ್ಯರು ಅದಕ್ಕೆ ಒಪ್ಪುವರು.

ಆಚಾರ್ಯರು ಬಂಕರಸರನ್ನು ಪ್ರತ್ಯೇಕವಾಗಿ ಕರೆದು ಚಕ್ರವರ್ತಿಗಳಿಗೆ ಇನ್ನು ಮುಂದೆ ಈಗಿರುವುದಕ್ಕಿಂತ ಹೆಚ್ಚಿನ ನೆರವು ನಿಮ್ಮದಾಗಬೇಕು. 'ಈ ವರ್ಷದಿಂದ ಚಕ್ರವರ್ತಿಗಳಿಗೆ ಕುಜದೆಸೆ ಆರಂಭವಾಗುತ್ತದೆ. ಕುಜದೆಸೆ ೭ ವರ್ಷ, ಬಳಿಕ ರಾಹುದೆಸೆ ೧೮ ವರ್ಷ ಚಕ್ರವರ್ತಿಗಳಿಗೆ ತುಂಬಾ ಕ್ರೂರವಾದ ಕಾಲ. ಹಲಬಗೆಯ ದುಃಖ ಅವರನ್ನು ಹತ್ತಿ ಕಾಡಬಹುದು. ಅದಕ್ಕಾಗಿಯೇ ನಾನೂ ರಾಜಧಾನಿಯನ್ನು ಬಿಟ್ಟು ಕದಲುವುದಿಲ್ಲವೆಂದದ್ದು. ನೀವೂ ಅವರ ಬೆನ್ನ ನೆರಳಾಗಿ ಕಾದಿರಬೇಕು. ಈಗಿರುವ ಎಚ್ಚರದ ಹತ್ತರಷ್ಟು ನೂರುಪಾಲು ಎಚ್ಚರಬೇಕು. ರಾಜಕುಮಾರರಿಗೂ ಈಗ ಗ್ರಹದೆಶೆ ಚೆನ್ನಾಗಿಲ್ಲ. ರಾಜ್ಯಕ್ಕೂ ವಿಪತ್ತು ಒದಗುವ ಸಂಭವವಿದೆ. ಗೋಲಯಭಟ್ಟರು ಮೊನ್ನೆ ಬಂದು ಹೇಳಿ ಹೋದರು. ಚಕ್ರವರ್ತಿಗಳಿಗೆ ಇದನ್ನು ಹೇಳಿ, ಅವರ ಮನಸ್ಸು ನೋಯಿಸಲು ಬಾಯಿ ಬರಲಿಲ್ಲ. ಅವರ ಬಲಗೈಯಾದ ನಿಮಗೆ ಹೇಳಿದ್ದೇನೆ. ನಿಮ್ಮ ದೊರೆಯನ್ನು ಕಾಪಾಡಿಕೊಳ್ಳಬೇಕು'[೬೨] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೬೩) ಎನ್ನುವರು. ನೃಪತುಂಗ ಚಕ್ರವರ್ತಿಯ ಪತ್ನಿ ಲಕ್ಷ್ಮೀ ತೀರಿಹೋದ ಸಂದರ್ಭದಲ್ಲಿ ಗುಣಭದ್ರಾಚಾರ್ಯರು ದೊರೆಗೆ ಸಾಂತ್ವನ ಹೇಳುವುದರ

ಜೊತೆಗೆ ನೀವು ಕಳೆದುಕೊಂಡಿರುವುದು ಪತ್ನಿಯನ್ನು ಆದರೆ ತಾಯಿಯನ್ನು ಕಳೆದುಕೊಂಡ ತಬ್ಬಲಿಗಳಿಗೆ ದಿಕ್ಕಾರು ಎಂದು ನೆರೆದ ಜನಸ್ತೋಮವನ್ನು ತೋರಿಸಿ ಚಕ್ರವರ್ತಿಗಳ ದುಃಖದ ಆಳವನ್ನು ಕಡಿಮೆ ಮಾಡುವರು.

ಸೇನಾಧಿಪತ್ಯವನ್ನು ಕಟ್ಟುವ ಸಂದರ್ಭದಲ್ಲಿ ಎಲ್ಲ ಸಾಮಂತ ರಾಜರ ಒಬ್ಬೊಬ್ಬ ಪ್ರತಿನಿಧಿಗಳು ಬಂದಿರುತ್ತಾರೆ. ಆದರೆ ಯಾರಿಗೆ ಪಟ್ಟ ಕಟ್ಟಿದರೂ ಅಸಮಾಧಾನವಾಗುವುದೆಂದು ಯೋಚಿಸಿ ಗುಣಭದ್ರಾಚಾರ್ಯರ ಸಲಹೆ ಕೇಳಿದಾಗ ಯಾರೊಬ್ಬರಿಗೂ ಅಸಮಾಧಾನವಾಗದ ರೀತಿಯಲ್ಲಿ "ಭರತೋಕ್ತ ರಾಜನೀತಿ"ಯನ್ನು ಅನುಸರಿಸುವುದೆಂದು ಸೂಚಿಸುವರು. ಅಂದರೆ 'ಓಲಗ ಸಾಲೆಯ ಮುಂದಿನ ಅಂಗಳದ ನಡುವೆ ಅಷ್ಟು ಅಗಲಕ್ಕೆ ಸಸಿಗಳನ್ನು ನೆಡೆಸಿ, ನೀರು ಹಾಕಿಸಿ, ಅದರ ಇಬ್ಬದಿಯಲ್ಲೂ ಕಿರಿದಾದ ಮಾರ್ಗವನ್ನು ಬಿಟ್ಟು, ಆ ಮಾರ್ಗದ ಮೂಲಕವೇ ಸೇನಾಧಿಪತ್ಯ ಪಡೆಯಲಿಚ್ಛಿಸುವವರು ನಡೆಯಬೇಕೆಂದು ಅಪ್ಪಣೆ ಕೊಡಿ. ಯಾರು ಕಿರಿದಾದ ಆ ಮಾರ್ಗದಲ್ಲಿ ಸಸಿಗಳನ್ನು ತುಳಿಯದೆ ಬರುವವರೋ ಅವರನ್ನು ಆರಿಸಿ'[೬೩] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೧೦೮) ಎಂದು ಸಲಹೆ ಕೊಡುವರು.

ನೃಪತುಂಗ ಚಕ್ರವರ್ತಿಯ ಮಗ ಕೃಷ್ಣನು ತಾನೇ ಚಕ್ರವರ್ತಿಯೆಂದು ಘೋಷಿಸಿಕೊಂಡು ಬಂಡಾಯವೆದ್ದ ಸಂದರ್ಭದಲ್ಲಿ ಅವನಿಗೆ ನ್ಯಾಯಪೀಠದ ಮೇಲೆ ಕುಳಿತ ನೃಪತುಂಗ ಮರಣ ದಂಡನೆಯ ಶಿಕ್ಷೆ ವಿಧಿಸುವನು. ಆದರೆ ನೆರೆದ ಜನಸ್ತೋಮಕ್ಕೆ ಆತನಿಗೆ ಕ್ಷಮಾಧಾನ ನೀಡಬೇಕೆಂದು ಹೇಳಬೇಕೆಂದಿದ್ದರೂ ಸಹ ಚಕ್ರವರ್ತಿಗೆ ಎದುರಾಡದೇ ಅಸಹಾಯಕರಾಗಿ ನಿಂತಿದ್ದಾಗ ಬಂಕರಸರು ಆ ಶಿಕ್ಷೆ ತಮಗೆ ವಿಧಿಸಿ ರಾಜಕುಮಾರನಿಗೆ ಕ್ಷಮಾಧಾನ ನೀಡಬೇಕೆಂದು ಕೇಳಿಕೊಳ್ಳುವರು. ಆಗ ಗುಣಭದ್ರಾಚಾರ್ಯರು 'ಚಕ್ರವರ್ತಿಗಳು ನ್ಯಾಯಪೀಠದಿಂದ ಕೊಟ್ಟ ತೀರ್ಪು ಧರ್ಮಸಮ್ಮತವಾಗಿದೆ. ಅದು ಸರಿ ಎಂದು ನಾವೂ ಅನುಮೋದಿಸುತ್ತೇವೆ. ಆದರೆ ಪ್ರಜಾಕೋಟಿ ರಾಜಕುಮಾರರಿಗೆ ಕ್ಷಮೆದೋರಬೇಕೆಂದು ಹೇಳುವುದಾದರೆ ಚಕ್ರವರ್ತಿಗಳು ಪ್ರಜೆಗಳ ಆಜ್ಞೆಯನ್ನು ಮನ್ನಿಸಬೇಕು. ರಕ್ಷೆ-ಶಿಕ್ಷೆ ಎರಡರಲ್ಲೂ ಪ್ರಜೆಗಳದೇ ಪರಮಾಧಿಕಾರ. ಚಕ್ರವರ್ತಿಗಳು ಪ್ರಜೆಗಳ ಆಕಾಂಕ್ಷೆಯನ್ನು ಕಾರ್ಯರೂಪಕ್ಕೆ ತರುವ ಸಾಧನ ಮಾತ್ರ. ಆದುದರಿಂದ ರಾಜಕುಮಾರರಿಗೆ ಕ್ಷಮೆ ನೀಡಬೇಕೆಂಬುದೇ ಪ್ರಜೆಗಳ ಇಚ್ಛೆಯಾದರೆ, ಚಕ್ರವರ್ತಿಗಳು ಅದನ್ನು ನಡೆಸಬೇಕು'[೬೪] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೧೬೨) ಎಂದು ಸೂಚಿಸುವರು. ಈ ತೆರನಾಗಿ ಗುಣಭದ್ರಾಚಾರ್ಯರು ನೃಪತುಂಗನಿಗೆ ರಾಜಗುರುಗಳಾಗಿ ಎಲ್ಲ ರಾಜಕಾರ್ಯಗಳಲ್ಲೂ ನೆರವಾಗುವರು. ನೃಪತುಂಗನೂ ಸಹ ಗುಣಭದ್ರಾಚಾರ್ಯರ ಸಲಹೆಯಂತೆ ಉತ್ತಮ ಆಡಳಿತ ಮಾಡಿ ಅಜರಾಮರವಾಗಿರುವನು.

೫.೧.೧೦ ಶ್ರೀ ಶಿವಾಚಾರ್ಯ ಸ್ವಾಮಿಗಳು :

ಶ್ರೀ ಶಿವಾಚಾರ್ಯ ಸ್ವಾಮಿಗಳು ನಂಜರಾಜ ಪಟ್ಟಣದ ಮಠದಲ್ಲಿ ವಾಸವಾಗಿದ್ದು ಜನರಿಗೆ ಪುರಾಣ, ಪ್ರವಚನಗಳನ್ನು ಹೇಳುತ್ತಾ, ಕಷ್ಟ ಎಂದು ಬಂದ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರದ ಮಾರ್ಗ ಸೂಚಿಸುತ್ತಿದ್ದರು. ವೀರಪ್ಪಾಜಿ ಮಲ್ಲಪ್ಪಣ್ಣನ ಜೊತೆಗೂಡಿ ಸ್ವಾಮಿಗಳನ್ನು ಭೇಟಿಮಾಡಿ ತಾವು ಒಂದು ಸಾರಿ ಅಪ್ಪಂಗಳಕ್ಕೆ ಬಂದಿದ್ದೀರಿ ಎಂದಾಕ್ಷಣ ಈತನೇ ವೀರಪ್ಪಾಜಿ ಎಂದು ಗುರುತಿಸುತ್ತಾರೆ. ವೀರಪ್ಪಾಜಿ ತನ್ನ ಬದುಕಿನ ಕಥೆಯನ್ನೆಲ್ಲ ಹೇಳಿದಾಗ ಇದೆಲ್ಲ ಮಹಾದೇವನ ಮಾಯೆ. ಆಯಸ್ಸು ತೀರುವವರೆಗೂ ಭೂಮಿಯ ಮೇಲಿರಬೇಕು ಎಂಬ ತಿಳುವಳಿಕೆಯ ಮಾತುಗಳನ್ನು ಹೇಳುವರು. ವೀರಪ್ಪಾಜಿ ತನಗೆ ದೀಕ್ಷೆ ಕೊಡಬೇಕೆಂದು ತಾನು ತಿರುಪೆ ಎತ್ತುತ್ತಾ ದೇಶಾಟನ ಹೋಗುವುದಾಗಿ ಹೇಳಿದಾಗ ಸ್ವಾಮಿಗಳು ಅದಕ್ಕೊಪ್ಪುವರು.

ಮಠಕ್ಕೆ ಭಕ್ತಾದಿಗಳು ಬಂದಾಗ ಪ್ರವಚನ, ಷಟಸ್ಥಲ ಮಹಿಮೆಯ ವರ್ಣನೆ, ಶಿವಕತೆ ಮುಂತಾದ ಯಾವುದಾದರೂ ಒಂದು ವಿಷಯದ ಕುರಿತಾಗಿ ಹೇಳುತ್ತಿದ್ದರು. ಆದರೆ ವೀರಪ್ಪಾಜಿ ಬಂದ ಸಮಯದಲ್ಲಿ ಕೊಡಗಿನಲ್ಲಿ ವೀರಶೈವ (ಲಿಂಗಾಯತ) ರಾಜವಂಶ ಸ್ಥಾಪನೆಯಾದ ಕಥೆ ಭಕ್ತಾದಿಗಳಿಗೆ ಹೇಳಲು ಪ್ರಾರಂಭಿಸುವರು. ಕೊಡಗು ದೇಶಕ್ಕೆ ಪೂರ್ವದಲ್ಲಿ ಬ್ರಹ್ಮಕ್ಷೇತ್ರ, ಮತ್ಸ್ಯದೇಶ, ಕ್ರೋಢದೇಶ ಎಂಬ ಮೂರು ಹೆಸರುಗಳಿದ್ದವೆಂದು ಹೇಳುತ್ತ 'ಶಾಲಿವಾಹನ ಶಕ ೧೫೪೦ ರ ಸುಮಾರಿಗೆ ಜಂಗಮನೊಬ್ಬ ಕೊಡಗಿನಲ್ಲಿ ಕಾಣಿಸಿಕೊಂಡ. ಇವನು ವೇಷಧಾರಿ ವಾಸ್ತವವಾಗಿ, ಇಕ್ಕೇರಿ ಮನೆತನದ ಒಬ್ಬ ರಾಜಕುಮಾರ. ಈತ ಊರೂರು ತಿರುಗುತ್ತ, ಮಡಕೇರಿಯಿಂದ ಒಂದೂವರೆ ಹರದಾರಿ ದೂರದ ಹಾಲೇರಿ ಹಳ್ಳಿಯಲ್ಲಿ ನೆಲೆ ನಿಂತ. ಅವನು ಹಾಡುತ್ತಿದ್ದ ವಚನಗಳೂ, ಮಾಡುತ್ತಿದ್ದ ಪ್ರವಚನಗಳೂ ಜನರ ಮನಸ್ಸನ್ನು ಸೆರೆಹಿಡಿದವು. ಅವರು ಅವನ ಭಕ್ತರಾದರು. ಕಾಣಿಕೆಯಾಗಿ ಭತ್ತವನ್ನೂ, ಹೊನ್ನನ್ನೂ ಜಂಗಮನಿಗೆ ತಂದೊಪ್ಪಿಸಿದರು. ಆತನ ನಿವಾಸವನ್ನು ಬೂದಿ ಚಾವಡಿ ಎಂದು ಕರೆದರು. ನಿವಾಸದ ಪಹರೆಯವರು ಚಾವಡಿಕಾರರಾದರು. ವಿರಕ್ತ ಜಂಗಮ ಸ್ವಲ್ಪವೇ ಸಮಯದಲ್ಲಿ ಧೀರನಾಯಕನಾದ. ಚಾವಡಿಕಾರನೆಂದು ಹೆಸರು ಪಡೆದು ಕೊಡವ ಕಟ್ಟಾಳುಗಳು ಅವನ ಅನುಯಾಯಿಗಳಾದರು. ಅವನ ಬಾಹುಬಲಕ್ಕೆ ಬೆದರಿ ವಿವಿಧ ಪಾಳೆಯಗಾರರು ಆತನಿಗೆ ಕಪ್ಪಕಾಣಿಕೆಯೊಪ್ಪಿಸುವ ಪರಿಸ್ಥಿತಿಯೊದಗಿತು. ನಂಬಿದವರಿಗೆ ಅವನು ಇಂಬು ಕೊಟ್ಟನು. ಇದಿರಾಡಿದವರಿಗೆ ಅಂಬು ತೋರಿದನು. ಹೀಗೆ ಹಾಲೇರಿ ಮನೆತನ ಸ್ಥಾಪಿತವಾಯಿತು'[೬೫] (ನಿರಂಜನ, ೧೯೭೭, ಸ್ವಾಮಿ ಅಪರಂಪಾರ, ಪುಟ-೫೯) ಎಂದು ಕೊಡಗು ರಾಜ್ಯದ ಕಥೆ ಹೇಳುವರು. ಹಾಗೆಯೇ ಮುಂದುವರೆಸುತ್ತ ಕೊಡಗುವಿನ ಏಳು ಬೀಳುಗಳು

ಬ್ರಿಟೀಷರೊಂದಿಗೆ ಮಾಡಿಕೊಂಡ ಒಪ್ಪಂದ, ಸ್ನೇಹ ತದನಂತರ ಅವರು ಮಾಡಿದ ಮೋಸ ಎಲ್ಲ ವಿಚಾರಗಳನ್ನು ನೆರೆದಂತಹ ಭಕ್ತಸಮೂಹಕ್ಕೆ ಹೇಳುತ್ತ ದಾಯಾದಿ ಕಲಹದಿಂದ ಯಾವ ದೇಶವೂ ಏಳ್ಗೆ ಹೊಂದಿಲ್ಲ. ನಮ್ಮಲ್ಲಿ ಆ ತಾಪ ಹಬ್ಬಿತೋ ಕೊಡಗಿನ ಗಿಡಮರಗಳು ಕಮರಿಹೋಗ್ತವೆ ಎಂಬ ವಿಷಯವನ್ನು ಪ್ರಸ್ತಾಪಿಸುವರು.

ವೀರಪ್ಪಾಜಿ ಐಹಿಕ ಸುಖಗಳನ್ನು ತ್ಯಜಿಸಿ ಕಾವಿತೊಟ್ಟು ಅಪರಂಪಾರ ಹೆಸರಿನಿಂದ ದೇಶರಕ್ಷಣೆ ಮಾಡುವ ಜವಾಬ್ದಾರಿಯುತ ಕೆಲಸ ವಹಿಸುವರು. ದೇಹಾಲಾಸ್ಯದಿಂದ ಮಲಗಿಕೊಂಡ ಸಂದರ್ಭದಲ್ಲಿ ಅಪರಂಪಾರ ಮತ್ತು ಸಿದ್ಧಲಿಂಗ ನೋಡಲು ಹೋದಾಗ ಎಡಗಾಲು, ಕೈ ಕೊರಡು ಪಾರ್ಶ್ವವಾಯುವಾಗಿ ಮಲಗಿದಲ್ಲಿಯೇ ಮಲಗಿದ್ದು ಅವರ ಸ್ಥಿತಿ ನೋಡಿ ಸಿದ್ಧಲಿಂಗ ಮತ್ತು ಅಪರಂಪಾರನಿಗೆ ಗಂಟಲು ಕಟ್ಟುತ್ತದೆ. ಅಪರಂಪಾರನನ್ನು ನೋಡಿದ ಸ್ವಾಮಿಗಳು ನೀನೀಗ ತುಂಬ ಬೆಳದಿದ್ದೀಯ ಪುಟಕ್ಕಿಟ್ಟ ಚಿನ್ನವಾಗಿದ್ದೀಯ ಎಂದು ಹಾಡಿ ಹೊಗಳುವರು. ಹಿಂದೊಬ್ಬ ಜಂಗಮ ಬಂದು ಈ ಕೊಡಗು ರಾಜ್ಯ ಕಟ್ಟಿದ್ದ, ಈಗ ನೀನು ಜಂಗಮನ ವೇಷದಲ್ಲಿ ಈ ರಾಜ್ಯವನ್ನು ಪುನಃಗಳಿಸುತ್ತಿದ್ದೀಯ ಎಂದು ಅಪರಂಪಾರನ ಕಾರ್ಯಗಳನ್ನು ಹಾಡಿ ಹೊಗಳುತ್ತ ಹರಸುವರು. ಮುಂದೆ ಕೆಲ ದಿನಗಳಲ್ಲಿಯೇ ಶಿವೈಕ್ಯರಾಗುವರು.

೫.೨ ಹಬ್ಬಗಳ ಆಚರಣೆ :

'ಆಚರಣೆಗಳು–ಹಬ್ಬಗಳು ಇವು ಬದುಕಿನ ಎರಡು ಮುಖಗಳು. ನಾಣ್ಯದ ಎರಡು ಮಗ್ಗುಲುಗಳು. ಸಂಪ್ರದಾಯಗಳು ಧರ್ಮದ ಮತ್ತು ದೈವೀ ಸಂಪರ್ಕದ ಸೃಷ್ಟಿ ಪಡೆದುಕೊಂಡಾಗ ಆಚರಣೆಗಳಾಗಿ ರೂಪುಗೊಳ್ಳುತ್ತವೆ. ಹಾಗೆಯೇ ಆಚರಣೆಗಳು ಒಂದು ಕ್ಷೇತ್ರದಲ್ಲಿ ವಿಸ್ತಾರಗೊಂಡಾಗ ಹಬ್ಬಗಳಾಗಿ ಮಾರ್ಪಡುತ್ತವೆ. ಹೀಗಾಗಿ ಸಂಪ್ರದಾಯಗಳಿಗೂ, ಆಚರಣೆಗಳಿಗೂ, ಹಬ್ಬಗಳಿಗೂ, ಜಾತ್ರೆಗಳಿಗೂ ಸರಪಳಿ ಸಂಬಂಧವಿರುತ್ತದೆ. ಬದುಕಿನ ಸರಪಳಿಯನ್ನು ಸಾಮಾಜಿಕ ಪರಿಸರದಲ್ಲಿ ಬಿಡಿಸಿ ನೋಡಿದಾಗ ಆಚರಣೆಗಳಾಗಲೀ, ಹಬ್ಬಗಳಾಗಲೀ ಸಂಸ್ಕೃತಿಯ ಒಂದೊಂದು ಕತೆ ಹೇಳುತ್ತವೆ.'[೬೬] (ಬರಗೂರು ರಾಮಚಂದ್ರಪ್ಪ(ಸಂ), ೨೦೦೨, ಪುಟ–೩೬೧)

ಹಬ್ಬ, ಹುಣ್ಣಿಮೆ, ಗ್ರಾಮದೇವತೆ ಜಾತ್ರೆಗಳಲ್ಲಿ ಸರ್ವರೂ, ಸರ್ವಕುಲದವರೂ ಐಕ್ಯತೆಯಿಂದ ಪಾಲ್ಗೊಂಡು ಸಹ ಜೀವನ ನಡೆಸುತ್ತಾ ಬಂದಿರುವುದು ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಹಿಂದೂಗಳಲ್ಲಿ ಪ್ರಾಚೀನ ಕಾಲದಿಂದಲೂ ಧರ್ಮ ಮತ್ತು ದೇವರು ಎಂಬುವ ನಂಬಿಕೆ ಆಳವಾಗಿ ಹುದುಗಿದೆ. ಆದ್ದರಿಂದ ವರ್ಷದಲ್ಲಿ ಬರುವ ಹುಣ್ಣಿಮೆ, ಅಮವಾಸ್ಯೆಗಳನ್ನು ಆಚರಿಸುವರು. ಆಗ ತಮ್ಮ ಮನೆಗೊಬ್ಬ ದೇವರು, ದೇವತೆಯನ್ನು ವಿಶೇಷ ರೀತಿಯಲ್ಲಿ

ಪೂಜಿಸುವರು. ಗ್ರಾಮಗಳಲ್ಲಿ ಇಡೀ ಗ್ರಾಮದ ಬಹುತೇಕ ಜನರ ಪ್ರೀತಿಗೆ ಒಳಗಾದ ದೇವ ದೇವತೆಗೆ ಗುಡಿಗಳನ್ನು ಕಟ್ಟಿಸಿ ವರ್ಷಕ್ಕೊಮ್ಮೆ ಆ ದೇವರ ಹಬ್ಬವನ್ನು ಎಲ್ಲರೂ ಕೂಡಿ ಆಚರಿಸುವರು. ದೇವರನ್ನು ಕರೆದೊಯ್ಯುವದಕ್ಕೆ ಪಲ್ಲಕ್ಕಿ, ತೇರುಗಳನ್ನು ಬಳಸುವರು. ಇದಕ್ಕೆ ಉತ್ಸವ ಎಂದು ಕರೆಯುವರು. ಈ ಹಬ್ಬಗಳನ್ನು ಆಚರಿಸುವ ಉದ್ದೇಶ ಆಯಾ ಋತುಮಾನಕ್ಕನುಸರಿಸಿ ಊಟ, ಉಪಚಾರ, ನಕ್ಕು ನಲಿಯುವ ಅವಕಾಶ, ದೈಹಿಕ ಮಾನಸಿಕ ವಿಕಸನ ಈ ಹಬ್ಬಗಳ ವೈಶಿಷ್ಟ್ಯಗಳೆನಿಸಿವೆ. ಹೊಲದ ಕೆಲಸ ಕಡಿಮೆ ಇದ್ದಾಗ ಜಾತ್ರೆ, ಹಬ್ಬಗಳ ಆಚರಣೆಗಳನ್ನು ಹಿಂದಿನಿಂದಲೂ ಸಂಪ್ರದಾಯಬದ್ಧವಾಗಿ ಮಾಡುತ್ತ ಬಂದಿರುವುದು ಕಾಣುತ್ತೇವೆ.

ಹಬ್ಬಗಳ ಆಚರಣೆಯು ಮನುಷ್ಯ ಜೀವನದಲ್ಲಿ ಒಂದು ರೀತಿಯ ಸಂತೋಷ ಕೂಟವಾಗಿ ಬರುತ್ತವೆ. ಬದುಕಿನ ಹೋರಾಟದಲ್ಲಿ ಭಾವನೆಗಳ ಏರಿಳಿತದೊಡನೆ ಕುಗ್ಗಿ ಕಮರುವ ಜೀವಕ್ಕೆ ಹಬ್ಬದ ಶೀತಳ ಜಲಸೇವನೆಯ ಹೊಸ ಉತ್ಸಾಹವನ್ನು ಕೊಡುತ್ತದೆ. ಅದಕ್ಕೆಂದೇ ಸಿರಿತನ, ಬಡತನಗಳನ್ನು ಮೆಟ್ಟಿ ನಿಂದು ಹಬ್ಬಗಳು ಇಂದಿಗೂ ತಮ್ಮತನವನ್ನು ಉಳಿಸಿಕೊಂಡು ನಡೆದಿವೆ. ಹಬ್ಬಗಳು ಹಿಂದಿನಿಂದ ಅರ್ಥಪೂರ್ಣವಾಗಿ ಸರ್ವಾಂಗೀಣ ಉನ್ನತಿಗಾಗಿ ಸಮೂಹ ಸಂಪರ್ಕ ಸಾಧನಗಳಾಗಿ, ಪ್ರೀತಿಯ ದ್ಯೋತಕಗಳಾಗಿ, ಸಾಂಸ್ಕೃತಿಕ ಪ್ರಸಾರ ಸಾಧನಗಳಾಗಿ, ನಮ್ಮ ಬದುಕಿನ ಮುಖ್ಯ ಅಂಗಗಳಾಗಿ ರೂಪಿತಗೊಂಡು ಬೆಳೆದು ಬಂದವು. ಹಬ್ಬ ಶಬ್ದವು 'ಪರ್ವ' ಶಬ್ದಕ್ಕೆ ತದ್ಭವವಾಗಿ ಬಳಕೆಯಾಗಿದೆ. ಪರ್ವವೆಂದರೆ ಹಬ್ಬ, ಉತ್ಸವವೆಂದು ಅರ್ಥವಿದೆ. ಅದು ಸಂತೋಷದಿಂದ ಸಂಭ್ರಮ ಪಡುವ ಕಾಲ, ದೂರದ ಆಪ್ತರು ಒಂದೆಡೆ ಕೂಡಿ ಪಕ್ವಾನ್ನಗಳನ್ನು ಮಾಡಿ ಉಣ್ಣುವುದು, ಹೊಸ ಉಡಿಗೆ ತೊಡಿಗೆಗಳನ್ನು ಒಬ್ಬರಿಗೊಬ್ಬರು ಕೊಡುವದು ರೂಢಿಯಲ್ಲಿ ಬಂದಿತು. ಪುರಾಣ ಪುಣ್ಯ ಕಥೆಗಳನ್ನು ಕೇಳುವುದು, ದೇವರ ದರ್ಶನ ಮಾಡುವುದು ಇವು ಜನರಲ್ಲಿ ಸಾಮೂಹಿಕ ಸಂಪರ್ಕ, ಸಾಮರಸ್ಯ ಬೆಳೆಯಲು ಅನುಕೂಲವಾಯಿತು. 'ಭಾರತೀಯ ಸಂಸ್ಕೃತಿ ವಿಶಿಷ್ಟತೆಗಳ ತವರೂರು. ಅದರ ತಾಯಿ ಬೇರಿನ ಭಾಗಗಳೆಂದರೆ ಹಬ್ಬಗಳು. ಇವುಗಳು ಸಂಸ್ಕೃತಿಯ ದ್ಯೋತಕವೂ ಹೌದು, ಸಂಪ್ರದಾಯಗಳ ಪ್ರತೀಕವೂ ಹೌದು. ಸಂಪ್ರದಾಯಗಳೆಂಬ ತತ್ವಗಳನ್ನು ನಂಬಿಕೆಗಳೆಂಬ ಅಡಿಗಲ್ಲ ಮೇಲೆ ನೆಟ್ಟು ಆಚರಣೆಯೆಂಬ ಹಾಸನ್ನು ಸಿದ್ಧಗೊಳಿಸುವ ರೀತಿಯೇ ಹಬ್ಬಹರಿದಿನಗಳು'[೬೭] (ನಾಗರತ್ನ ಬಿ.ಆರ್, ೨೦೧೧, ಪುಟ-೧೪೬) ಎಂದೇ ಅರ್ಥೈಸಿದ್ದಾರೆ. ದೇವಾಲಯಗಳೂ, ಹಬ್ಬಗಳೂ ಜೊತೆ ಜೊತೆಯಲ್ಲಿಯೇ ಸಾಗುತ್ತವೆ. ಹಬ್ಬವಿಲ್ಲದ ದೇವಾಲಯ ಹಾಗೂ ದೇವಾಲಯವಿಲ್ಲದ ಹಬ್ಬವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಹಬ್ಬಗಳು ಕೇವಲ ಧಾರ್ಮಿಕ ಸಂದರ್ಭಗಳು ಮಾತ್ರ ಆಗಿರದೆ, ಸಾಂಸ್ಕೃತಿಕ ಹಾಗೂ ವಾಣಿಜ್ಯದ ಹೆಗ್ಗುರುತುಗಳೂ ಆಗಿವೆ. ಅವು ಜನಜೀವನದ ಒಂದು ಭಾಗವಾಗಿವೆ.

ಪ್ರಗತಿಶೀಲ ಕಾದಂಬರಿಕಾರರಾದ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿಯವರು ರಚಿಸಿರುವ ಐತಿಹಾಸಿಕ ಕಾದಂಬರಿಗಳಲ್ಲಿ ಅನೇಕ ಹಬ್ಬಗಳ, ಜಾತ್ರೆ, ಉತ್ಸವಗಳ ಪ್ರಸ್ತಾಪ ಬಂದಿರುವುದು. ಅ.ನ.ಕೃ ರಚಿಸಿರುವ ವಿಜಯನಗರ ಸಾಮ್ರಾಜ್ಯದ ಕುರಿತ ಕಾದಂಬರಿಗಳ ಮಾಲೆಯಲ್ಲಿ ಹೋಳಿ, ಯುಗಾದಿ, ನವರಾತ್ರಿ, ದೀಪಾವಳಿ ಹಬ್ಬಗಳನ್ನು ಯಾವ ತೆರನಾಗಿ ವಿಜೃಂಬಣೆಯಿಂದ ಆಚರಿಸುತ್ತಿದ್ದರು ಎಂಬುದಾಗಿ ಪ್ರಸ್ತಾಪಿಸಿದ್ದಾರೆ.

ಕಿತ್ತೂರು ಸಂಸ್ಥಾನದಲ್ಲಿ ಯುಗಾದಿ, ಗಣಪತಿ ಉತ್ಸವ, ದಸರೆ, ದೀಪಾವಳಿ ಮುಂತಾದ ಹಬ್ಬಗಳು ವಿಜೃಂಬಣೆಯಿಂದ ನಡೆಯುತ್ತಿದ್ದವು. ಕರಿಯಮ್ಮದೇವಿ, ಸವದತ್ತಿ ಎಲ್ಲಮ್ಮ, ಬಾದಾಮಿ ಬನಶಂಕರಿ, ಶಿರಸಿ ಮಾರಿಕಾಂಬ ಮುಂತಾದ ಪುಣ್ಯಕ್ಷೇತ್ರಗಳಲ್ಲೂ ಭಕ್ತಿಯ ಆರಾಧನೆಗಳು ನಡೆಯಲು ಅರಮನೆಯಿಂದ ವ್ಯವಸ್ಥೆಯಾಗುತ್ತಿತ್ತು. ಕೇವಲ ಹಿಂದೂ ಧರ್ಮಾಚರಣೆಯಲ್ಲದೇ ಮುಸ್ಲಿಂ ಧರ್ಮಾಚರಣೆಗಳಿಗೂ ರಾಜನ ಪ್ರೋತ್ಸಾಹವಿತ್ತು. ಬಿಜಾಪೂರ, ಗುಲಬರ್ಗಾ ಮುಂತಾದ ದರ್ಗಾಗಳಿಗೂ ಉರುಸುಗಳಿಗೂ ಪೋಷಣೆ ಇತ್ತು. ಮೊಹರಂನಲ್ಲಿ ಅರಮನೆಯಿಂದಲೂ ಕಾಣಿಕೆಗಳು ಹೋಗುತ್ತಿದ್ದವು. ಜಮಖಂಡಿಯ ಮೊಹರಂ ಉತ್ಸವದಲ್ಲಿ ರಾಜನೇ ಮಾಡಿಸಿಕೊಟ್ಟ ಪೀರಲ ದೇವರಿದೆ.

೫.೨.೧ ಹೋಳಿ ಹುಣ್ಣಿಮೆ :

ವರ್ಷದ ಅಂತ್ಯದಲ್ಲಿ ಫಾಲ್ಗುಣ ಮಾಸದಲ್ಲಿ ಈ ಹುಣ್ಣಿಮೆ ಬರುವುದು. ಆಗ ಬೆಳದಿಂಗಳು ಹೆಚ್ಚು ಪ್ರಕಾಶವಾಗಿದ್ದು ಜನರಿಗೆ ಸಂತಸ ಒಡ್ಡುತ್ತದೆ. ಈ ಹಬ್ಬದಲ್ಲಿ ಯುವಕರು ಕೋಲು ಹಾಕಿ ಕುಣಿಯುವರು. ಹೋಳಿ ಕಾಮನನ್ನು ಕೂಡಿಸಿ ಕೊನೆಯ ದಿನ ಕಾಮನನ್ನು ಸುಡುವರು. ಬಳಿಕ ಬಣ್ಣ ಬಣ್ಣದ ಓಕುಳಿಯನ್ನು ಒಬ್ಬರಿಗೊಬ್ಬರು ಎರಚುತ್ತ ಸಂತಸಪಡುವರು. ಇದರಲ್ಲಿ ಜಾತಿ ಮತಗಳ ತಾರತಮ್ಯಗಳಿಲ್ಲ.

ಸಂಗಮ ವಂಶದ ಮೊದಲನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ ಎಂದರೆ ಕ್ರಿ.ಶಕ ೧೪೨೦–೨೧ ರಲ್ಲಿ ಇಟಲಿಯ ಪ್ರವಾಸಿಯೊಬ್ಬನಾದ 'ಪಾವೋಲೋ ನಿಕೋಲೋ' ಎಂಬುವವನು ವಿಜಯನಗರಕ್ಕೆ ಬಂದಿದ್ದನು. ಇವನು ಮೂರು ದಿನಗಳದೊಂದು ಹಬ್ಬವನ್ನು ಈ ರೀತಿಯಾಗಿ ವಿವರಿಸಿರುವನು. ಅದೇ ಹೋಳಿ ಹಬ್ಬ. 'ಈ ದಿವಸಗಳಲ್ಲಿ ಇಲ್ಲಿಯ ಜನರು ಬೀದಿಯಲ್ಲಿ ಹೋಗಿ ಬರುವವರ ಮೇಲೆಲ್ಲ ಸ್ವತಃ ರಾಜ– ರಾಣಿಯರ ಮೇಲೆ ಕೂಡ ಕೆಂಪು, ಕೇಸರಿ ಬಣ್ಣಗಳನ್ನು ಜೀಕುಗಳಿಂದ ಎರಚುವರು. ಇಂತಹ ಈ ಬಣ್ಣದಿಂದ ತುಂಬಿದ ಹಂಡೆ ಹಂಡೆಗಳನ್ನು ದಾರಿಯ ಮೇಲೆಯೇ ಇರಿಸುವರು. ಈ ಬಣ್ಣದ ಎರಚಾಟದಲ್ಲಿ, ನಗುತ್ತ ಕರೆಯುತ್ತ ಆನಂದದಿಂದ ಎಲ್ಲರೂ

ಭಾಗವಹಿಸುತ್ತಾರೆ.'[೬೮] (ಬೆಟಗೇರಿ ಕೃಷ್ಣಶರ್ಮ, ೨೦೦೫, ಪುಟ-೬೮) ಕಾಮನ ಹಬ್ಬವದು; ಹೋಳಿ ಹುಣ್ಣಿಮೆಯ ವಸಂತೋತ್ಸವ. ವಿಜಯನಗರದಲ್ಲಿ ಈ ವಸಂತೋತ್ಸವವು ತುಂಬ ವಿಜೃಂಬಣೆಯಿಂದ ನಡೆಯುತ್ತಿದ್ದಿತೆಂಬುದಕ್ಕೆ ಪ್ರಮಾಣವಾಗಿ, ನಿಕೋಲೋಕೋಂಟಿಯ ಬರಹವಲ್ಲದೇ ಲೋಕಕಥೆಗಳೂ ಇವೆ. 'ಕನಕದಾಸರ ಮೋಹನತರಂಗಿಣಿಯಲ್ಲಿ 'ವಸಂತಪೂಜೆ'ಯ ಸಂದರ್ಭವೂ ವಿಶದವಾಗಿ ವರ್ಣಿತವಾಗಿದೆ. ಶಂಬಾಸುರನನ್ನು ವಧಿಸಿ ಬಂದ ಮೇಲೆ ರತಿ ಮನ್ಮಥರ ಮದುವೆಯಾಗುವುದು. ಆ ಆನಂದದ ಪುರಸ್ಕಾರಕ್ಕಾಗಿ ವಸಂತಪೂಜೆಯಾಗುವುದು. ಕನಕದಾಸರ ವಸಂತಪೂಜೆಯ ವರ್ಣನೆಯನ್ನು ನೋಡಿದರೆ, ಅದು ವಿಜಯನಗರದ ವಸಂತೋತ್ಸವದ ವಾಸ್ತವ ಚಿತ್ರವೆಂಬುದನ್ನು ಯಾರೂ ಊಹಿಸುವಂತಿದೆ.

ಹೋಳಿ ಹಬ್ಬವು ವಿಶೇಷವಾಗಿ ಪುರುಷರ ಹಬ್ಬವೆಂದೇ ಮಾನ್ಯತೆ ಪಡೆದಿದೆ. ಅದಕ್ಕೆ ಪೌರಾಣಿಕ ಪ್ರಸಂಗವೊಂದನ್ನು ಜೋಡಿಸಿದ್ದಾರೆ.

'ಪಾರೋತಿ ಮಾದೇವ, ಏರಿ ಸಗದಾಗಿರಲು

ಪಾರೋತಿ ಹೇಳಚಲುವ್ಯಾರೆ ಕೇಳುದಕ

ತೀರ ಚಲುವಾನ ಕಾಮಣ್ಣ

ಸಿಟ್ಟಿಗೇಳುತ ಶಿವನು ಬಿಟ್ಟಾನು ಉರಿಗಣ್ಣ

ಸುಟ್ಟು ಬೂದ್ಯಾದೋ ಕಾಮಣ್ಣ ರತಿದೇವಿ

ಹೊಟ್ಟೆ ಬಡಕೊಂಡ ಕುಂತಾಳು'[೬೯] (ಕೀರ್ತಿನಾಥ ಕುರ್ತಕೋಟಿ, ೨೦೦೬, ಪುಟ-೩೧)

ಹೀಗೆ ಶಿವ-ಪಾರ್ವತಿಯರ ಸಂವಾದದಲ್ಲಿ ಕಾಮನು ಸೌಂದರ್ಯದ ಪ್ರತೀಕವೆಂಬುದು ಸ್ಪಷ್ಟ. ಕಾಮನು ಸುಟ್ಟು ಬೂದಿಯಾದದ್ದು ರತಿದೇವಿ ಅವನಿಗಾಗಿ ಅತ್ತದ್ದು, ರತಿದೇವಿ ಮನದಾಗ ಚಿರವಂತ ಕಾಮನಾಗಿ ನಿಂತ ವರ ಪಡೆದದ್ದು, ಜನಪದ ಹಾಡುಗಳಲ್ಲಿ ಬಿಂಬಿತವಾಗಿರುವುದನ್ನು ಕಾಣುತ್ತೇವೆ. ಕಾಮನ ಕರಿಯ ಬಗ್ಗೆ ರೈತನಿಗೆ ಹೆಚ್ಚಿನ ನಂಬಿಕೆ. ಕಾಮನನ್ನು ಸುಡುವಾಗ ಬೂದಿ ಯಾವ ಕಡೆಗೆ ಹಾರುವುದೋ ಆ ಭಾಗಕ್ಕೆ ಮಳೆಯಾಗುವುದೆಂಬ ನಂಬಿಕೆಯಿದೆ. ಕಾಮನ ಬೂದಿಯನ್ನು ಬಿತ್ತುವ ಬೀಜದಲ್ಲಿ ಬೆರೆಸಿದರೆ ಉತ್ತಮ ಬೆಳೆ ಬರುವುದೆಂಬ ನಂಬಿಕೆ ರೈತನದು. ಇದನ್ನು ಬಲವಾಗಿ ನಂಬಿದ ರೈತ ಹೋಳಿಯಾಟಕ್ಕೆ ಮಹತ್ವ ಕೊಡುತ್ತಾನೆ.

'ಹೋಳಿಯಾಡದ ನಾಡು ನಾಡೆನದೇ ಕಾಡಾತೊ

ಹೋಳಾತೊ ಜವಕ ಮೂಲಾತೊ ಮಳೆ ಹೋತ

ಹಾಳಾತೊ ಪಿಡಗೆದ್ದು ದಿನದಿನಕೊ'[೨೦] (ಮೀನಾಕ್ಷಿ ಜಂಗಮನಿ, ೨೦೧೦, ಪುಟ-೨೪೮)

ಈ ತ್ರಿಪದಿಯು ನಮ್ಮ ಜನಪದರ ಭಾವನೆಯನ್ನು ಎತ್ತಿ ತೋರಿಸುತ್ತದೆ. ಆದರೆ ಇಂದು ಹೋಳಿ ಹಬ್ಬವು ಸಾಕಷ್ಟು ರೂಪಾಂತರ ಹೊಂದಿದೆ. ಮೊದಲಿನ ಕಾಲದ ನೇಮ ನಿತ್ಯಗಳು, ಆಚರಣೆ ಪದ್ಧತಿಗಳು ಉಳಿದು ಬಂದಿಲ್ಲ.

೫.೨.೨ ಯುಗಾದಿ :

ಯುಗದ ಆದಿಯಲ್ಲಿ ಬರುವ ಹಬ್ಬ. ನೂತನ ಸಂವತ್ಸರಾರಂಭ ದಿನವಾದ ಚೈತ್ರ ಶುಕ್ಲ ಪಾಡ್ಯ ದಿನ ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ. ಇಡೀ ಸಂವತ್ಸರಕ್ಕೆ ಪೀಠಿಕೆಯ ರೂಪದಲ್ಲಿರುವ ಹಬ್ಬ ಇದಾಗಿದೆ. ಸಂವತ್ಸರ ಎಂದರೆ ವರ್ಷ ಋತುಗಳ ಪರಿವರ್ತನೆ ಹೊಂದುವ ಕಾಲ. ಬೇವು ಬೆಲ್ಲ ಬದುಕಿನ ಸಿಹಿ-ಕಹಿ, ಸುಖ-ದುಃಖ ಇವುಗಳ ಪ್ರತೀಕ. ನೋವು ನಲಿವನ್ನು ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವ ಇಲ್ಲಿ ಗೋಚರ. ಬೇವು ರೋಗ ನಿವಾರಕ, ಬೆಲ್ಲ ಜೀರ್ಣಕಾರಕ, ಭಾವನಾತ್ಮಕವಾಗಿ ಬೇವು ಬೆಲ್ಲ ಸ್ವೀಕರಿಸುತ್ತೇವೆಯೋ ಹಾಗೇ ಇದೇ ಜೀವನದಲ್ಲಿ ಸುಖ-ದುಃಖಗಳನ್ನು ಸಮನಾಗಿ ಸ್ವೀಕರಿಸಬೇಕೆಂಬ ಸಮಸ್ಥಿತಿಯನ್ನು ತಂದುಕೊಳ್ಳುವ ಪರಿಕಲ್ಪನೆ.

'ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಹೂವಿನ ಹಡಗಲಿಯಿಂದ ದೋಣಿ ತುಂಬಿಕೊಂಡು ಮಲ್ಲಿಗೆ ಹೂವನ್ನು ತುಂಗಭದ್ರೆಯ ನದಿಯನ್ನು ದಾಟಿ ಹೋಗಿ ಹಂಪೆಗೆ ಮುಟ್ಟಿಸುತ್ತಿದ್ದರಂತೆ. ಆ ಸಾಮ್ರಾಜ್ಯ ಕಳೆದು ಹೋದರೂ ನಮ್ಮ ಪುಣ್ಯಕ್ಕೆ ಮಲ್ಲಿಗೆ, ದವನ ಇನ್ನೂ ಇವೆ. ಇವೆರಡೂ ಕನ್ನಡ ನಾಡಿಗೆ ವಿಶಿಷ್ಟವಾದ ಸುಗಂಧದ ಬೆಳೆಗಳು. ಹಂಪಿಯ ವಿರೂಪಾಕ್ಷನ ಜಾತ್ರೆಯ ದಿನವೇ ದವನ ಮಾರಾಟವಾಗಬೇಕೆಂಬುದೊಂದು ಅಲಿಖಿತ ನಿಯಮ. "ತೇರೆಳೆದು ದವನ ಮಾರಿ ಹೋಯಿತು" ಎನ್ನುವುದು ಇನ್ನೊಂದು ಗಾದೆ. ವರ್ಷದ ಹೊಸ ದಿನಕ್ಕೆ ಪ್ರಕೃತಿ ನೀಡುವ ಕಾಣಿಕೆಗಳೆಂದರೆ ಇವೇ. ಅದಕ್ಕೆ ನಮ್ಮವರು ಯುಗಾದಿಯಂದು ಹೊಸ ದಿನವನ್ನು ಆಚರಸುತ್ತಿರಬೇಕು.'[೨೧] (ನಾಗರತ್ನ ಬಿ.ಆರ್, ೨೦೧೦, ಪುಟ-೧೫೮) ಈ ಹಬ್ಬವನ್ನು ವಿಜಯನಗರದಲ್ಲಿ ಬಹಳ ವಿಜೃಂಬಣೆಯಿಂದ ಆಚರಿಸುತ್ತಿದ್ದರು. ಹೊಸ ವರ್ಷದ ಮೊದಲ ದಿನವೆಂದು ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸುತ್ತಿದ್ದುದರಿಂದ ರಾಜಧಾನಿ ಹೊಸ ರೂಪವನ್ನು ಪಡೆಯುತ್ತಿತ್ತು. 'ಒಂದು ಕಡೆಯಲ್ಲಿ ದೇವರ ಉತ್ಸವಗಳು, ಭಜನಾಗೋಷ್ಠಿಗಳು ಇನ್ನೊಂದು ಕಡೆಯಲ್ಲಿ ಹಿರಿಯರಿಗೆ ವಂದಿಸಿ ಆಶೀರ್ವಾದವನ್ನು ಪಡೆಯಲು ಉತ್ಸುಕರಾಗಿ ಓಡಾಡುತ್ತಿರುವ ಕಿರಿಯರು, ಹಳೆಯ ವರ್ಷದ ಕಹಿಯನ್ನು ಕಳೆದು ಹೊಸ ವರ್ಷದ ಬೇವು ಬೆಲ್ಲಗಳನ್ನು ತಿನ್ನಲು ಸಿಧ್ಧವಾದ ಮನೋಧರ್ಮಕ್ಕೆ ಸಾಂಕೇತಿಕವಾಗಿ ನಿಂತಂತೆ ತೋರುತ್ತಿತ್ತು ಈ ಉತ್ಸಾಹ.'[೨೨] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೮೧)

ಭುವನೇಶ್ವರಿ ದರ್ಬಾರು ಮಂದಿರದಲ್ಲಿ ಯುಗಾದಿಯ ರಾಜಸಭೆ ಸೇರುತ್ತಿತ್ತು. ಆಗ ರಾಜ್ಯದ ಎಲ್ಲ ಭಾಗಗಳಿಂದ ಸಾಮಂತರು ಇಲ್ಲವೇ ಅವರ ಪ್ರತಿನಿಧಿಗಳು ಬಂದು ತಮ್ಮ ಗೌರವವನ್ನು ಕಾಣಿಕೆಯನ್ನು ಅರ್ಪಿಸುತ್ತಿದ್ದರು.

ಆ ದಿನ ದೇವದಾಸಿಯರಿಂದ, ಅರಮನೆಯ ನರ್ತಕಿಯರಿಂದ ನೃತ್ಯ ಸಂಗೀತಗಳು ಸ್ವಲ್ಪ ಕಾಲ ನಡೆದು ತದನಂತರ ಕುಸ್ತಿ, ಕತ್ತಿವರಸೆ, ಮಲ್ಲಯುದ್ಧಗಳು ನಡೆಯುತ್ತಿದ್ದವು. ಪಂದ್ಯದ ಅಂತ್ಯದಲ್ಲಿ ರಾಜ ಎಲ್ಲರಿಗೂ ಸನ್ಮಾನಿಸುತ್ತಿದ್ದನು. ಸಾಯಂಕಾಲ ಅರಮನೆಯಲ್ಲಿ ವಿದ್ವತ್‌ಗೋಷ್ಠಿ ನಡೆದಾಗ ಅಲ್ಲಿ ಪ್ರಮುಖ ಆಹ್ವಾನಿತರಿಗೆ ಮತ್ತು ಆಸ್ಥಾನ ವಿದ್ವಾಂಸರಿಗೆ ಮಾತ್ರ ಪ್ರವೇಶಾವಕಾಶ ಇರುತ್ತಿತ್ತು.

೫.೨.೩ ಗೌರಿ ಗಣೇಶ :

ಸ್ವರ್ಣಗೌರಿ ವ್ರತವು ಭಾದ್ರಪದ ಶುಕ್ಲ ತದಿಗೆಯ ದಿನ ಬರುವುದು. ಗೌರಿಹಬ್ಬ ಮಹಿಳೆಯರಿಗೆ ಬಹಳ ಶ್ರೇಷ್ಠ ಹಾಗೂ ಸಂಭ್ರಮದ ಹಬ್ಬ. ಭಾರತದೆಲ್ಲೆಡೆ ಆಚರಣೆಯಲ್ಲಿರುವ ಈ ಹಬ್ಬವನ್ನು ವಿಶೇಷವಾಗಿ ಕರ್ನಾಟಕ ಪ್ರಾಂತ್ಯದಲ್ಲಿ ಸಡಗರ, ಸಂಭ್ರಮದಿಂದ ಆಚರಿಸುವ ರೂಢಿಯಿದೆ. ಆ ದಿನ ಗೌರಿಯು ತನ್ನ ತೌರಿಗೆ ಬರುತ್ತಾಳೆಂದೂ ಮರುದಿನ ಅವಳನ್ನು ಕರೆಯಲು ಗಣೇಶ ಬರುತ್ತಾನೆಂಬ ನಂಬಿಕೆಯಿದೆ. 'ಗೌರಿ' ಎಂಬುದು ಪಾರ್ವತಿದೇವಿಯ ಇನ್ನೊಂದು ಹೆಸರು. 'ಗೌರಿ' ಶಬ್ದಕ್ಕೆ ಸಂಪಿಗೆ ಅಥವಾ ಬಿಳುಪಿನ ವರ್ಣದವಳೆಂಬ ಅರ್ಥವಿದೆ. ಗೌರೀ ದೇವಿಯನ್ನು ವಿಶೇಷವಾಗಿ ಸೌಮಾಂಗಲ್ಯ ಪ್ರಾಪ್ತಿಗೆ, ಅನುರೂಪವಾದ ಪತಿಯನ್ನು ಪಡೆಯುವುದಕ್ಕೆ ಶಾಶ್ವತ ಪ್ರೇಮಕ್ಕಾಗಿ ಆರಾಧಿಸುವರು. ಈಗಲೂ ವಿವಾಹ ಮಂಗಳ ಸಮಾರಂಭದಲ್ಲಿ ಗೌರೀಪೂಜೆ ಮಾಡುವ ಪದ್ಧತಿಯಿದೆ.

ಭಾದ್ರಪದ ಶುಕ್ಲ ಚತುರ್ಥಿಯಂದು ಬರುವ 'ಗಣೇಶ ಚತುರ್ಥಿ' ಬಹಳ ದೊಡ್ಡ ಹಬ್ಬ. ವಿಘ್ನವಿನಾಶಕ ಹಾಗೂ ಸಿದ್ಧಿ ಬುದ್ಧಿಗಳನ್ನು ಕರುಣಿಸುವ ಭಾರತೀಯರಿಗೆ ಆದಿದೈವನು ಶ್ರೀ ಗಣಪತಿ. ಯಾವ ಶುಭ ಕಾರ್ಯವೇ ಆಗಲಿ ಗಣೇಶನ ಪೂಜೆಯೊಂದಿಗೆ ಪ್ರಾರಂಭವಾಗುತ್ತದೆ. ಶ್ರೀ ಗಣೇಶನು ಪ್ರಸನ್ನನಾಗದಿದ್ದರೆ ಬೇರೆ ಯಾವ ದೇವತೆಯೂ ಪ್ರಸನ್ನನಾಗುವುದಿಲ್ಲ. ಹೀಗೆ ಗಣೇಶನಿಗೆ ಧಾರ್ಮಿಕ ಕ್ಷೇತ್ರದಲ್ಲಿ ಅಸಂಖ್ಯ ದೇವಿ ದೇವತೆಗಳ ಮಧ್ಯದಲ್ಲಿ ಅಗ್ರಸ್ಥಾನವಿದೆ. 'ಗಣಪತಿಯ ಸೊಂಡಿಲು ಓಂಕಾರದ ಪ್ರತೀಕವಾದರೆ, ಆತನ ಲಂಬೋದರವು ಬ್ರಹ್ಮಾಂಡದ ಸಂಕೇತ. ಆತನು ಶೂರ್ಪಕರ್ಣ ಎಂದರೆ ಎಲ್ಲಾ ವಿಷಯಗಳನ್ನು ಕೇಳಿಸಿಕೊಂಡರೂ ಸತ್ಯಾಂಶವನ್ನು ಮಾತ್ರ ಗ್ರಹಿಸಬೇಕೆಂಬುದು ಅದರ ಸಂಕೇತ. ಸುತ್ತಿನ ಸರ್ಪವು ಬ್ರಹ್ಮಾಂಡ ಹೊತ್ತಿರುವ ಆದಿಶೇಷನೆಂದೂ ಹೇಳುವರು. ಅವನ

ಕೈಯಲ್ಲಿರುವ ಪಾಶ– ಅಂಕುಶಗಳು ನಮ್ಮಲ್ಲಿರುವ ರಾಗ ದ್ವೇಷಗಳನ್ನು ನಿಯಂತ್ರಿಸುವ ಸಾಧನ. ಅವನ ವಾಹನವಾದ ಇಲಿ ಚಂಚಲತೆಯ ಸಂಕೇತ. ಈ ಚಂಚಲತೆಯನ್ನು ಮೆಟ್ಟಿ ಕುಳಿತ ಗಣಪತಿ ಸರ್ವೋತ್ಕೃಷ್ಟದ ಸಂಕೇತವಾಗಿದ್ದಾನೆ. ಅವನದು ಚಿಕ್ಕ ಕಣ್ಣು ಸಮಾಜದಲ್ಲಿ ಬಾಳುವ ನಾವು ಪ್ರತಿಯೊಂದನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಬೇಕು ಎಂಬುದನ್ನು ಪ್ರತಿನಿಧಿಸುತ್ತದೆ.'[೬೩] (ಸರೋಜಿನಿ ಆರ್, ೨೦೧೦, ಪುಟ–೩೮)

ಗಣಪತಿ ಹಬ್ಬ ಮೊದಲು ಕೌಟುಂಬಿಕ ನೆಲೆಯಲ್ಲಿಯೇ ಇದ್ದುದು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ತಿಲಕರ ಸ್ವಾತಂತ್ರ್ಯ ಹೋರಾಟದ ಒಂದು ತಂತ್ರವಾಗಿ ಅದು ಸಾರ್ವಜನಿಕ ಸ್ವರೂಪ ಪಡೆದ ನಂತರ ಈವತ್ತಿಗೂ ಅದು ಕೌಟುಂಬಿಕ ಮತ್ತು ಸಾರ್ವಜನಿಕ ಎಂಬ ಎರಡೂ ನೆಲೆಗಳಲ್ಲಿ ಆಚರಿಸಲ್ಪಡುತ್ತಿದೆ. ಅಂದು ಗಣೇಶೋತ್ಸವವು ಸಾರ್ವಜನಿಕ ಉತ್ಸವವಾಗಿ ರೂಪುಗೊಂಡು ಸಮಾಜ ಸಂಘಟನೆಗೆ ಕಾರಣವಾಯಿತು.

ದುರ್ಗದ ಜನತೆ ಎಲ್ಲ ಹಬ್ಬಗಳನ್ನು ಅತ್ಯಂತ ಸಡಗರದಿಂದ ಆಚರಿಸುತ್ತಿದ್ದರು. 'ಚಿತ್ರದುರ್ಗದ ಸಿಂಹಾಸನವನ್ನು ೩೩ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಆಳಿ ದುರ್ಗದ ಖ್ಯಾತಿಯನ್ನು ಹಳ್ಳಿಯಿಂದ ದಿಲ್ಲಿಯವರೆಗೂ ಹಬ್ಬಿಸಿದ ಭರಮಣ್ಣನಾಯಕರು ಎಲ್ಲಾ ಮತದ ಮಠದ ಗುರುಗಳ ಬಗ್ಗೆಯೂ ತಮಗಿದ್ದ ಭಕ್ತಿಯ ದ್ಯೋತಕವಾಗಿ, ಆ ದಿನ ಚಿತ್ರದುರ್ಗದಲ್ಲಿದ್ದ ಸಕಲ ಮಠಗಳ ಗುರುಗಳು ತಮ್ಮ ಆಶೀರ್ವಾದವೆಂದು ಅರಮನೆಗೆ ಕಜ್ಜಾಯವನ್ನು ತಂದೊಪ್ಪಿಸಬೇಕೆಂದು ಕಟ್ಟಳೆ ಮಾಡಿದ್ದರು. ಅವರ ಕಾಲದಲ್ಲಿ ಆರಂಭವಾದ ಈ ಶುಭಸಂಪ್ರದಾಯಕ್ಕೆ ಜನರ ಉತ್ಸಾಹವೂ ಬೆರೆತು, ಶ್ರೀಮಠಗಳ ಗುರುಗಳಿರಲಿ, ನಗರದ ಹಿರಿಯರೆಲ್ಲರೂ ತಮ್ಮ ಮನೆಗಳಲ್ಲಿ ಪೂಜೆ ಮುಗಿಸಿದವರೇ, ಮನೆಗೊಬ್ಬ ಮುತ್ತೈದೆ, ಹಿರಿಯರು ಬಂದು ಅರಮನೆಗೆ 'ಮಡಿಕಜ್ಜಾಯ'ದ ಕಾಣಿಕೆ ಸಲ್ಲಿಸಿ, ಅರಮನೆಯವರು ಮುತ್ತೈದೆಯರಿಗೆ ಕೊಡುತ್ತಿದ್ದ ಬಾಗಿನ, ಹಿರಿಯರಿಗೆ ಕೊಡುತ್ತಿದ್ದ ಗಣಪತಿ ಪ್ರಸಾದವನ್ನು ಸ್ವೀಕರಿಸಿ ಹೋಗುತ್ತಿದ್ದರು. ಆ ದಿನ ಏಕನಾಥೇಶ್ವರಿಯ ಬಾಗಿಲಿನ–ದಿನ ಪ್ರೀತಿಯಿಂದ ಅಜ್ಜಿಯ ಬಾಗಿಲು ಎಂದು ಕರೆಯುತ್ತಿದ್ದುದು–ಕೋಟೆಸಾಲಿನ ಹೊರವಲಯದಲ್ಲಿದ್ದ ಸ್ವಯಂಭೂ ಸಾನಂದ ಗಣಪತಿಗೆ ನಡೆಯುತ್ತಿದ್ದ ವಿಶೇಷ ಪೂಜೆ, ಸಹಸ್ರಮೋದಕ ಹೋಮಗಳನ್ನು ನೋಡಿ, ಪಂಚಾಮೃತ ಪಂಚಕಜ್ಜಾಯಗಳ ಪ್ರಸಾದವನ್ನು ಸ್ವೀಕರಿಸಲು ಸಾವಿರಾರು ಜನ ಕಿಕ್ಕಿರಿಯುತ್ತಿದ್ದರು.

ಈ ದೇವಾಲಯದ ಮುಂದಿನ ಜಾಗ ಕಿರಿದಾದುದರಿಂದ, ಕಜ್ಜಾಯದ ಕಾಣಿಕೆಯ ಸ್ವೀಕಾರ, ಮುತ್ತೈದೆಯರಿಗೆ ಗೌರಿಯ ಬಾಗಿನ, ಗಣಪತಿಯ ಪ್ರಸಾದವನ್ನು ಹಂಚಲು, ತಾರಾಮಂಡಲದ ವಿಶಾಲ ಬಯಲಿನಲ್ಲಿ, ಬಹುವಿಸ್ತಾರವಾದ ತಳಿರು, ತೋರಣ, ಬಾಳೆಯ ಕಂದು, ಬಾಳೆಗೊನೆ,

ಅಡಿಕೆಯ ಹೂಗೊಂಚಲಿನಿಂದ, ಪಂಚಫಲಗಳ ಗೊಂಚಲುಗಳಿಂದ, ಬಗೆಬಗೆಯ ಬಣ್ಣದ ವಸ್ತ್ರದ ಸೀಳುಗಳಿಂದ ಅಲಂಕೃತವಾದ ಚಪ್ಪರವೊಂದು ನಿರ್ಮಿತವಾಗಿ, ಆ ಮಂಟಪದಲ್ಲಿ ನಿರ್ಮಿತವಾದ ವಿಶೇಷ ವೇದಿಕೆಯ ಮೇಲೆ ನವರತ್ನಾಭರಣಗಳಿಂದಲಂಕೃತವಾದ ಸ್ವರ್ಣಗೌರಿ, ಗಣಪತಿ ಮೂರ್ತಿಗಳನ್ನು ರಜತಮಂಟಪದಲ್ಲಿಟ್ಟು ಅರಮನೆಯವರು ಪೂಜಿಸಿ, ಆ ಪೂಜೆ ನೋಡಲೆಂದು, 'ಕಜ್ಜಾಯ ಕಾಣಿಕೆ'ಯೊಪ್ಪಿಸಲೆಂದು ಬಂದ ಹಿರಿಯ ಮುತ್ತೈದೆಯರಿಗೆ ಬಾಗಿನ, ಗಣ್ಯರಿಗೆ ಸಹಸ್ರಾರ್ಚನೆ ಮಾಡಿದ ರಜತ ಬಿಲ್ವಗಳ ಪ್ರಸಾದವನ್ನು ಉಳಿದ ಪ್ರಸಾದಗಳೊಂದಿಗೆ ಕೊಟ್ಟು ಕಳಿಸುವುದು ವಾಡಿಕೆಯಾಗಿತ್ತು.'[೭೪] (ಸರೋಜಿನಿ ಆರ್, ೨೦೧೦, ಪುಟ-೪೦)

೫.೨.೪ ಮಹಾನವಮಿ (ದಸರಾ) :

ಕರ್ನಾಟಕದಲ್ಲಿ ಪ್ರಸಿದ್ಧವಾದ ಹಬ್ಬವೆಂದರೆ ದಸರಾ. ಇದನ್ನು ದಶಹರಾ, ಶ್ರೀ ವಿಜಯಾ-ದಶಹರಾ ಎಂದು ಕರೆಯುತ್ತಾರೆ. ಇದು ಮಾತೃದೇವತಾ ಪೂಜೆಯು. ಮಾತೃದೇವತಾ ಪೂಜೆ ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿಯೂ ನಡೆದು ಬಂದಿದೆ. ಆಧ್ಯಾತ್ಮಿಕ ಪ್ರಗತಿ, ಸಾಮಾಜಿಕ, ರಾಜಕೀಯ, ಆರ್ಥಿಕ, ಕಲಾಕೌಶಲ್ಯ ವ್ಯವಸ್ಥೆಗೆ ಮೂಲಭೂತವಾದುದು ಮಾತೃದೇವತಾ ಪೂಜೆ. ದಸರಾ ಹಬ್ಬವನ್ನು ಅಶ್ವಯುಜ ಮಾಸದ ಪಾಡ್ಯದಿಂದ ದಶಮಿಯವರೆಗೆ ಹತ್ತು ದಿನಗಳ ಕಾಲ ಆಚರಿಸಲಾಗುತ್ತದೆಯಾದರೂ, ಇದಕ್ಕೆ 'ನವರಾತ್ರಿ' ಎಂದರೆ ಒಂಬತ್ತು ರಾತ್ರಿಗಳಂದು ಮಾಡಲಾಗುವ ಹಬ್ಬ ಎಂದೂ ಕರೆಯಲಾಗುತ್ತದೆ. ಈ ಹಬ್ಬದ ಆಚರಣೆಗೆ ಕಾರಣಗಳನ್ನು ಕೇಳಿದರೆ ಒಂದಲ್ಲ ಹಿರಿಯರಿಂದ ಹಲವಾರು ಕಾರಣಗಳು ನಮ್ಮ ಅರಿವಿಗೆ ಬರುತ್ತವೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ, ಈ ಹಬ್ಬವನ್ನು ಶ್ರೀಕೃಷ್ಣದೇವರಾಯನು ತಾನು ವಿವಿಧ ಸಂಸ್ಥಾನಗಳನ್ನು ಗೆದ್ದ ಆನಂದದ ಆಚರಣೆಯಾಗಿ, ತನ್ನ ವಿಜಯದ ಸಂಕೇತವಾಗಿ ಹಾಗೂ ಎಲ್ಲ ಶಕ್ತಿ ದೇವತೆಗಳನ್ನು ಓಲೈಸಲು ಹಂಪಿಯಲ್ಲಿ ಆರಂಭಿಸಿದ್ದು, ನಂತರ ಇದು ಮೈಸೂರಿನ ಮಹಾರಾಜರ ಪ್ರದೇಶಕ್ಕೆ ವರ್ಗಾವಣೆಗೊಂಡು ಅದ್ದೂರಿಯಿಂದ ಆಚರಿಸಲ್ಪಡುತ್ತದೆ ಎಂಬುದು ಒಂದು ಮೂಲದಿಂದ ತಿಳಿದು ಬರುವ ವಿಚಾರವಾಗಿದೆ. 'ವಿಜಯನಗರದ ಅರಸರು ನವರಾತ್ರಿಯನ್ನು ಅತಿ ವಿಜೃಂಬಣೆಯಿಂದ ಆಚರಿಸುತ್ತಿದ್ದರು. ಈ ಆಚರಣೆ ಅನೇಕ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿದೆ. ಮಹಾನವಮಿ ದಿಬ್ಬವೆಂದು ಈಗಲೂ ಕಾಣಲು ದೊರೆಯುವ ಎತ್ತರದ ಸಭಾಪೀಠವನ್ನು ಕೃಷ್ಣದೇವರಾಯನು ಉದಯಗಿರಿಯ ದಿಗ್ವಿಜಯದ ಸ್ಮರಣಾರ್ಥವಾಗಿ ೧೫೧೩ ರಲ್ಲಿ ಕಟ್ಟಿಸಿದನು. ವಿಜಯನಗರ ಕಾಲಕ್ಕೆ ಮಹಾನವಮಿ ಹಬ್ಬವನ್ನು ಬಹಳ ವಿಜೃಂಬಣೆಯಿಂದ ಆಚರಿಸುತ್ತಿದ್ದ ಬಗೆಯನ್ನು ವಿದೇಶಿ ಯಾತ್ರಿಕರು ಮುಕ್ತ ಕಂಠದಿಂದ ಹೊಗಳಿದ್ದಾರೆ. ಈ ದಿಬ್ಬದ

ಪೀಠವು ಸುಮಾರು ೨೨ ಅಡಿ ಎತ್ತರವಿದೆ. ಮಹಾನವಮಿಯ ದಿನ ಈ ಪೀಠದ ಮೇಲೆ ಚಕ್ರವರ್ತಿಯ ಸಾಮಂತ, ಮಾಂಡಲಿಕ, ರಾಜ ಪರಿವಾರದೊಡನೆ ಕುಳಿತುಕೊಂಡು ಜಟ್ಟಿ ಕಾಳಗ, ಕೋಣ, ಟಗರು, ಆನೆಗಳ ಕಾಳಗ, ಸೈನ್ಯದ ಕವಾಯತ ಮೊದಲಾದ ಕ್ರೀಡೆಗಳನ್ನು ನೋಡುತ್ತಿದ್ದನು. ಈ ಸಭಾಪೀಠದ ಹೊರಮಗ್ಗಲಲ್ಲಿ ೮-೧೦ ಸಾಲುಗಳಲ್ಲಿ ಪ್ರಾಣಿ, ಪಕ್ಷಿ, ನೃತ್ಯಗಾತಿಯರು, ದೇವಾಲಯ, ಕ್ರೀಡೆ ಮುಂತಾದವುಗಳನ್ನು ಸುಂದರವಾಗಿ ಕೆತ್ತಲಾಗಿದೆ. ಮಹಾನವಮಿ ದಿಬ್ಬದ ಎದುರು ರಾಜನ ಆಸ್ಥಾನ ಮಂಟಪವಿತ್ತು. ಕ್ರೀಡೆಗಳನ್ನು ನೋಡಿದ ಮೇಲೆ ಅರಸರು ದೇವತೆಗಳನ್ನು ಪೂಜಿಸಿ ವಿಜಯದಶಮಿಯ ದಿನ ಉತ್ತರಾಭಿಮುಖವಾಗಿ ಹೊರಟು ಬಹುಮನಿ ರಾಜ್ಯಗಳ ಕಡೆಗೆ ಬಾಣವನ್ನು ಬಿಟ್ಟು ಅರಮನೆಗೆ ಹಿಂತಿರುಗುತ್ತಿದ್ದರು. ಆಗ ಸಾಮ್ರಾಜ್ಯದ ದಂಡನಾಯಕರು, ಪ್ರಾಂತಾಧಿಕಾರಿಗಳು, ಪಾಳೆಯಗಾರರು ಚಕ್ರವರ್ತಿಗೆ ನಜರನ್ನು (ಕಾಣಿಕೆಗಳನ್ನು), ಪ್ರಾಂತ್ಯಗಳಿಂದ ಬರಬೇಕಾದ ವರಮಾನವನ್ನು ಒಪ್ಪಿಸುತ್ತಿದ್ದರೆಂದು ಪೈಸ, ನ್ಯೂನಿಸ್, ಕ್ರಿಸ್ತೋಫರ್ ಡಿ ಫಿಗರೇಡೋ ಮೊದಲಾದವರು ವರ್ಣಿಸಿದ್ದಾರೆ.'[೭೫] (ಸರೋಜಿನಿ ಆರ್, ೨೦೧೦, ಪುಟ-೨೦೯) ನ್ಯೂನಿಜ್‌ನ ಪ್ರಕಾರ 'ವಿಜಯನಗರದ ಅರಸರು ಮಹಾನವಮಿ ಉತ್ಸವ ಸಂದರ್ಭದಲ್ಲಿ ಏರ್ಪಡಿಸುತ್ತಿದ್ದ ಮಲ್ಲಯುದ್ಧ, ಕುಸ್ತಿಗಳಿಗಾಗಿ ಒಂದು ಸಾವಿರ ಜಟ್ಟಿಗಳನ್ನು ಅರಸ ಹೊಂದಿದ್ದನು'[೭೬] (ಸದಾಶಿವಪ್ಪ ಕುಂ.ಬಾ, ೨೦೦೯, ಪುಟ-೧೯೪) ಎಂದಿರುವನು.

ಮಹಾಲಯ ಅಮವಾಸ್ಯೆಯ ಮರುದಿನದಿಂದ ೯ ದಿನ ನವರಾತ್ರಿ ಹಬ್ಬ. ೧ ನೇ ದಿನ ಕಲಶ ಸ್ಥಾಪನೆ. ೯ ದಿನವೂ ನಂದಾದೀಪ ಉರಿಯಬೇಕು. ೧೦ ನೇ ದಿನ ವಿಜಯದಶಮಿ. ಅಷ್ಟಮಿಯ ದಿನ ಇದಕ್ಕೆ ದುರ್ಗಾಷ್ಟಮಿಯೆಂದು ಹೆಸರು. ದಕ್ಷಯಜ್ಞನನ್ನು ನಾಶಮಾಡಲು ಭದ್ರಕಾಳಿ ಉದ್ಭವಿಸುವ ದಿನ. ಇಂದ್ರನು ಜಂಭಾಸುರನನ್ನು ಸಂಹರಿಸಿದ ದಿನ. ಆಯುಧ ಪೂಜೆಯ ದಿನ. ಮರುದಿನ ಬನ್ನಿ ವೃಕ್ಷಕ್ಕೆ ಹೋಗಿ ಬನ್ನಿಯನ್ನು ತೆಗೆದುಕೊಂಡು ಬರುವುದು ರೂಢಿ.

ಪ್ರತಿವರ್ಷ ಮಹಾಲಯ ಅಮವಾಸ್ಯೆಯ ದಿನದಂದು ದುರ್ಗದ ಪಾಳೆಯಗಾರರು, ರಾಜಪರಿವಾರದವರೊಂದಿಗೆ ಜೋಗಿಗಳ ವೇಷ ಧರಿಸಿ ದುರ್ಗದ ಬಳಿಯ ಹತ್ತಾರು ಹಳ್ಳಿಗಳ ಗೌಡರು ಮೊದಲಾದವರ ಮನೆಗೆ ಹೋಗಿ ಭಿಕ್ಷೆ ಬೇಡಿ ಅವರು ಕೊಟ್ಟ ಕಾಣಿಕೆಯನ್ನು ಸ್ವೀಕರಿಸಿ ಬರುವುದು ವಾಡಿಕೆ. ಆದಿನ ಒಂದೊಂದು ಹಳ್ಳಿಯೂ ಜೋಗಿಯ ವೇಷ ಧರಿಸಿ ತಮ್ಮ ಹಳ್ಳಿಗೆ ಬರುವ ರಾಜಪರಿವಾರವನ್ನು ಸ್ವಾಗತಿಸಲು ವಿಶೇಷ ಉತ್ಸಾಹದಿಂದ ಸಿದ್ಧವಾಗುತ್ತಿತ್ತು. ಆ ದಿನ ಎಷ್ಟು ಉತ್ಸಾಹ, ಎಂಥಾ ಉಲ್ಲಾಸ ಜನಕ್ಕೆ! ಮನೆ ಮನೆಯೂ ಮದುವೆಯ ಮಂಟಪವಾಗುತ್ತಿತ್ತು. ಊರ ಬಾಗಿಲಿನಿಂದ ಹಿಡಿದು ಗೌಡನ ಮನೆಯವರೆಗಿನ ದಾರಿ ವಸಂತಕಾಲದ ಉದ್ಯಾನವಾಗುತ್ತಿತ್ತು.

ಹೂವು, ಹಸಿರು, ತೆಂಗು ಅಡಿಕೆಯ ಗರಿ, ಹೊಂಬಾಳೆಯ ಅಲಂಕಾರದಿಂದ, ಆ ದಾರಿ ಊರ ಶ್ರೀಮಂತ ಹೆಣ್ಣುಗಳ ಜರತಾರಿಯ ಸೀರೆಗಳನ್ನು ಹೊದೆದು ಶೃಂಗಾರವಾಗುತ್ತಿತ್ತು. ಮನೆ ಮನೆಯೂ ಸುಣ್ಣ ಬಣ್ಣದ ಕಾರಣೆಯಿಂದ ಚೆಲುವಾಗಿ, ಹೊಸ ಉಡುಗೆ ತೊಡುಗೆಗಳನ್ನು ಧರಿಸಿದ ಮುತ್ತೈದೆಯರು ಕನ್ನಡಿ, ಕಲಶ, ಆರತಿಯ ತಟ್ಟೆಗಳನ್ನು ಹಿಡಿದು ರಾಜಪರಿವಾರವನ್ನು ಎದುರುಗೊಳ್ಳಲು ಕಾಯುತ್ತಿತ್ತು. ಹಳ್ಳಿಗೆ ಅರ್ಧ ಮೈಲು ದೂರದಲ್ಲಿ ರಾಜಪರಿವಾರ ಬಂದ ಕೂಡಲೇ, ಅದರ ಆಗಮನವನ್ನೇ ಕಾಯುತ್ತ ನಿಂತ ಜೋಡಿ ಕಹಳೆಯವರು ಊದುವ ಸನ್ನೆ ಗಾಳಿಯ ಧ್ವನಿಯನ್ನು ಕೇಳಲು ಕಿವಿಯಗಲಿಸಿ, ಆ ಸದ್ದು ಕೇಳಿದ ಕೂಡಲೇ ಊರು ಉತ್ಸಾಹದಿಂದ ಲಂಘಿಸಿ ಕಾದು ನಿಲ್ಲುವುದು, ಕೋಲು ಹುಯ್ಯುವವರ ಗೆಜ್ಜೆಗಾಲು, ಒಮ್ಮೆ ಕುಣಿದು ಗೆಜ್ಜೆ ಸರಿಮಾಡಿಕೊಂಡು ಸಿದ್ಧವಾಗುವುದು, ದೇವಾಲಯಗಳಲ್ಲಿ ಪೂಜೆ ಆರಂಭವಾಗುವುದು. ಊರ ತಲೆಯಾಳುಗಳೆಲ್ಲ ತಮ್ಮ ವಸ್ತ್ರ ಮುಂಡಾಸನಗಳನ್ನು ಸರಿಪಡಿಸಿಕೊಂಡು ಸಿದ್ಧವಾಗುವುದು. ದೇವಾಲಯಗಳಲ್ಲಿ ಪೂಜೆ ಪ್ರಾರಂಭವಾಗುವುದು ಒಟ್ಟಾರೆಯಾಗಿ ಹಳ್ಳಿಗೆ ಹೊಸ ಯೌವನ ಬಂದಂತಾಗುವುದು. ಆ ದಿನ ಶ್ರೀ ಗುರುಸಿದ್ಧ ದೇಶಿಕೇಂದ್ರ ಮುರುಘರಾಜೇಂದ್ರ ಮಹಾಸ್ವಾಮಿಗಳು ನವದಿನಗಳಂದು ಪುರಾಣ ಪ್ರವಚನಗಳನ್ನು ನೀಲಕಂಠೇಶ್ವರಸ್ವಾಮಿ ದೇಗುಲದಲ್ಲಿ ಏರ್ಪಡಿಸುತ್ತಿದ್ದರು. ಶ್ರೀಗಳವರು ಈ ಹಬ್ಬಕ್ಕೆ ವಿದ್ವಜ್ಜನರನ್ನು, ಶರಣರನ್ನು ಆಹ್ವಾನಿಸುವುದರ ಜೊತೆಗೆ ತಾವೂ ಅದರಲ್ಲಿ ಸ್ವತಃ ಭಾಗವಹಿಸುತ್ತಿದ್ದರು. ದುರ್ಗದ ಜನರು ಯಾವುದೇ ಜಾತಿ ಭೇದವಿಲ್ಲದೇ ಭಯ ಭಕ್ತಿಯಿಂದ ಪಾಲ್ಗೊಂಡು ಹಬ್ಬಕ್ಕೆ ಮೆರಗು ತರುತ್ತಿದ್ದರು. ವಿಜಯದಶಮಿಯ ದಿನ ಮಹಾಸ್ವಾಮಿಗಳನ್ನು ಅಡ್ಡಪಾಲಿಕೆಯಲ್ಲಿ ಕೂರಿಸಿ ರಾಜಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡುತ್ತಿದ್ದರು. ದಸರಾ ಹಬ್ಬದಲ್ಲಿ ಸುತ್ತಲಿನ ಗ್ರಾಮದ ಯುವಕ ಯುವತಿಯರು ಹಿಂಡು ಹಿಂಡಾಗಿ ಪಾಲ್ಗೊಳ್ಳುತ್ತಿದ್ದರು. 'ಈ ಹಬ್ಬದಲ್ಲಿ ನಡೆಸುವ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದವರಿಗೆ ರಾಜರಿಂದಲೇ ಗೌರವ, ಬಯಸಿದರೆ ಸೇನೆಯಲ್ಲಿ ನೌಕರಿ ನೀಡುವ ಪದ್ಧತಿ ಪರಂಪರಾಗತವಾಗಿ ನಡೆದು ಬಂದಿರುವುದರಿಂದಾಗಿ ನೌಕರಿ ಬಯಸುವ ದಿಟ್ಟ ತರುಣರ ಗುಂಪೇ ದುರ್ಗದಲ್ಲಿ ಜಮಾಯಿಸಿ ಬಿಡುತ್ತಿತ್ತು. ಕುದುರೆ ಸವಾರಿ ಕತ್ತಿವರಸೆ ಉಯ್ಯಾಲೆಯಲ್ಲಿ ತೂಗಿ ದೀಪವನ್ನು ಹಚ್ಚುವ ರೋಮಾಂಚಕಾರಿ ಸ್ಪರ್ಧೆ, ತುಪ್ಪದ ಕೊಣಾರೋಹಣ, ಮುಷ್ಟಿಕಾಳಗ, ಮಲ್ಲಯುದ್ಧ, ಮಲ್ಲಗಂಬ ಏರುವ ಸ್ಪರ್ಧೆ, ಗುಡ್ಡಗಾಡುಗಳಲ್ಲಿ ಓಟ, ಬಿಲ್‌ವಿದ್ಯೆ ಪ್ರದರ್ಶನ, ಭಾರ ಎತ್ತುವ ಸ್ಪರ್ಧೆ, ಅದೆಷ್ಟೋ ನಮೂನೆಯ ಸ್ಪರ್ಧೆಗಳು ಯುವಕರಿಗಾಗಿ ಕೈ ಬೀಸಿ ಕರೆಯುತ್ತಿದ್ದರೆ, ಯುವತಿಯರನ್ನು ಪ್ರೋತ್ಸಾಹಿಸಬೇಕೆಂಬ ಮನೋಧರ್ಮದ ಪಾಳೇಗಾರರು ಯುವತಿಯರಿಗಾಗಿಯೇ ಭತ್ತಕುಟ್ಟುವ ಸ್ಪರ್ಧೆ, ರಂಗೋಲಿ ಸ್ಪರ್ಧೆ, ವಚನ ಗಾಯನ, ಹಿಟ್ಟುಬೀಸುವ ಸ್ಪರ್ಧೆ, ಭರತನಾಟ್ಯ, ಚಿತ್ರಕಲಾ

ಪ್ರದರ್ಶನ, ಅರೆತಾಸಿನಲ್ಲಿ ಬೇಕೆಂದ ಅಡುಗೆ ಸಿದ್ಧಪಡಿಸುವ, ಸ್ಪರ್ಧೆಗಳಿದ್ದು ಯುವತಿಯರು ಹರ್ಷದಿಂದ ಪಾಲ್ಗೊಂಡು ಗೆದ್ದು ರಾಜೋಚಿತ ಮರ್ಯಾದೆಗಳನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು. ಹೀಗಾಗಿ ದಸರಾ ಬಂತೆಂದರೆ ಸುತ್ತೂರಿನ ಜನ ದುರ್ಗದಲ್ಲಿ ಸೇರಿ ದುರ್ಗ ಸಣ್ಣದಾಗುತ್ತಿತ್ತು.'[೭೭] (ವೇಣು ಬಿ.ಎಲ್, ೨೦೦೩, ಪುಟ-೫೫) ನವರಾತ್ರಿಯು ಕರ್ನಾಟಕ ಏಕೀಕರಣದ ಸಮಯದಲ್ಲಿ ನಾಡಹಬ್ಬವೆಂದು ರೂಪಾಂತರ ಹೊಂದಿ ಕನ್ನಡ ಭಾಷೆ ಸಂಸ್ಕೃತಿಯ ಜಾಗೃತಿಯ ವೇದಿಕೆಯಾಗಿದ್ದನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ಗಣೇಶ ಚತುರ್ಥಿಯು ರಾಷ್ಟ್ರೀಯ ಜಾಗೃತಿಯ ವೇದಿಕೆಯಾಗಿದ್ದು ತದನಂತರ ಆ ಸ್ಥಾನವನ್ನು ನವರಾತ್ರಿ ಹಬ್ಬವೂ ಸಹ ಪಡೆದುಕೊಂಡಿರುವುದನ್ನು ಕಾಣುತ್ತೇವೆ.

೫.೨.೫ ದೀಪಾವಳಿ :

ಹಿಂದೂಗಳ ಸರ್ವ ಬಣಗಳು ಆಚರಿಸುವ ಹಬ್ಬವಾಗಿದೆ. ಇದನ್ನು ಮೂರು ದಿನಗಳ ಕಾಲ ಆಚರಿಸುವರು. ಮೊದಲ ದಿನ ನರಕ ಚತುರ್ದಶಿ. ದೇವ ದೇವತೆಗಳಿಗೆ ಕಿರುಕುಳ ಕೊಡುತ್ತಿದ್ದ ನರಕಾಸುರ ದೈತ್ಯನನ್ನು ಶ್ರೀವಿಷ್ಣು ದೇವರು ವಧಿಸಿದ ದಿನ. ಮೂರನೆಯ ದಿನ ಬಲಿಪಾಡ್ಯಮಿ. ಬಲಿಚಕ್ರವರ್ತಿಯನ್ನು ವಿಷ್ಣು ಸಂಹಾರ ಮಾಡಿದ ದಿನ. ರಾಕ್ಷಸರಿಂದ ದೇವ ದೇವತೆಗಳು ತಮ್ಮ ಕಷ್ಟಗಳಿಂದ ಪಾರಾದ ದಿನ. ಜನರ ಕಷ್ಟಗಳೆಂಬ ಕತ್ತಲನ್ನು ಹೋಗಲಾಡಿಸಿ ಬೆಳಕನ್ನು ಪಡೆದ ದಿನ.

ವಿಜಯನಗರ ಅರಸರು ಇದನ್ನು ವೈಭವದಿಂದ ಆಚರಿಸುತ್ತಿದ್ದು 'ಮನೆಮನೆಗಳಲ್ಲಿಯೂ ಮಠ ಮಳಿಗೆಗಳಲ್ಲಿಯೂ ದೇವಮಂದಿರಗಳಲ್ಲಿಯೂ ಕಾರ್ತಿಕೋತ್ಸವದ ವಿವಿಧ ವರ್ಣದ ದೀಪಪಂಕ್ತಿಗಳೂ, ದೀಪಸ್ತಂಭಗಳೂ ವಿರಾಜಿಸುತ್ತಾ, ಪೂರ್ಣಚಂದ್ರನ ಶರತ್ ಕಿರಣಗಳು ನಗರದವರೆಗೆ ಇಳಿದು ಬಾರದಂತೆ ದೂರದಲ್ಲಿಯೇ ತಡೆದು ನಿಲ್ಲಿಸಿಬಿಟ್ಟಿವೆ. ರಾತ್ರಿಯ ಒಂದುವರೆ ಪ್ರಹರ ಕಳೆದು ಹೋಗಲು ಬಂದಿದ್ದರೂ ಬೀದಿ ಬೀದಿಗಳಲ್ಲಿ ಅಲೆದಾಡುವ ಜನರ ಕಲಕಲಾಟಕ್ಕೇನೂ ಕಡಿಮೆಯಿರಲಿಲ್ಲ. ಅಲ್ಲಲ್ಲಿ ಮುಖ್ಯ ದೇವಾಲಯಗಳಲ್ಲಿ ನಡೆದಿದ್ದ ಗೀತ ನರ್ತನ ಸೇವೆಯ ಇಂಚರವು ಬೀದಿಯ ಕಲಕಲವನ್ನು ಭೇದಿಸಿ ಕಿವಿಗಳಲ್ಲಿ ಕುಣಿದು ಕುಪ್ಪಳಿಸಿ ಹೋಗುತ್ತಿದ್ದವು'[೭೮] (ಮೀನಾಕ್ಷಿ ಜಂಗಮನಿ, ೨೦೧೦, ಪುಟ-೨೫೦) ಎಂಬ ವಿಚಾರಗಳನ್ನು ಕಾಣುತ್ತೇವೆ.

೫.೨.೬ ಏಕನಾಥೇಶ್ವರಿ ಅಮ್ಮನ ಉತ್ಸವ :

ಈ ಉತ್ಸವವನ್ನು ದುರ್ಗದಲ್ಲಿ ಜ್ಯೇಷ್ಠ ಶುದ್ಧ ದಶಮಿಯ ದಿನ ಆಚರಿಸುತ್ತಾರೆ. ದಶಮಿಗೆ ಮೂರು ದಿನ ಮುಂಚಿತವಾಗಿಯೇ ಸುತ್ತಮುತ್ತಲ ಊರುಗಳಿಂದ ದುರ್ಗಕ್ಕೆ ಜನ ಬರಲು ಆರಂಭಿಸುತ್ತಾರೆ. 'ಜ್ಯೇಷ್ಠ ಶುದ್ಧ ದಶಮಿಯ ದಿನ ಕಹಳೆ, ಕೊಂಬು, ಭೇರಿ, ಉರುಮೆ, ನಗಾರಿ,

ಓಲಗಗಳ ಸದ್ದು ಊರನ್ನು ಬಗೆ ಬಗೆಯ ಸದ್ದಿನಲ್ಲಿ ಅದ್ದಿತ್ತು. ಏಕನಾಥೇಶ್ವರಿಗೆ ಹರಕೆ ಒಪ್ಪಿಸಲು ಉಡುಗೆಯನ್ನುಟ್ಟು, ಕಳಶ, ಕನ್ನಡಿ, ಹಣ್ಣು, ವೀಳಯವನ್ನು ಹಿಡಿದು ಬರುವವರನ್ನು ನೋಡುವವರು; ಆ ಜಾತ್ರೆಯ ಲಾಭ ಪಡೆಯಲು ಬಂದ ಬಗೆ ಬಗೆಯ ಆಟಗಾರರ ಪ್ರದರ್ಶನವನ್ನು ನೋಡುವವರು; ದುರ್ಗದಲ್ಲಿ ನಿರ್ಮಾಣವಾದ ನೂತನ ಮಂದಿರಗಳನ್ನು ನೋಡಿ ಮೆಚ್ಚುವವರು.'[೭೯] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೯೯) ಹೀಗೆ ನೂರು ಬಗೆಯ ಜನರ ಅಚ್ಚರಿ ಮೆಚ್ಚುಗೆಯ ಹರ್ಷಧ್ವನಿ ದುರ್ಗದಲ್ಲಿ ಹಬ್ಬಿತ್ತು.

'ಮೊದಲು ಬೌದ್ಧ ವಿಹಾರವಾಗಿದ್ದ ಈ ಸ್ಥಳದಲ್ಲಿ ದೇವಿ ಮುಳ್ಳುಪೊದೆಗಳಲ್ಲಿ ಅಡಗಿದ್ದಳಂತೆ. ಈ ಗುಹಾಂತರ ದೇವಾಲಯದ ಮುಖ ಮಂಟಪವನ್ನು ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲಾಯಿತಂತೆ. ದೇವಾಲಯದ ಎದುರಿಗೆ ಬೃಹತ್ ದೀಪಮಾಲೆ ಕಂಬ ಹಾಗೂ ಉಯ್ಯಾಲೆ ಕಂಬಗಳಿವೆ. ದೀಪಸ್ತಂಭದಲ್ಲಿ ಎರಡನೇ ಪಾಳೆಯಗಾರ ಓಬಣ್ಣನಾಯಕ ಮತ್ತು ಈತನ ಪತ್ನಿ ಕನಕಮ್ಮ ನಾಗತಿಯ ಚಿತ್ರಗಳಿವೆ. ಈ ದೀಪಮಾಲೆ ಕಂಬ ಮೊದಲು ಎಷ್ಟು ನಿಲ್ಲಿಸಿದರೂ ನಿಲ್ಲದೇ ಹೋದಾಗ ಒಮ್ಮೆ ಕನಸಿನಲ್ಲಿ ತುಂಬಿದ ಬಸುರಿಯನ್ನು ಬಲಿ ಕೊಟ್ಟರೆ ಕಂಬ ನಿಲ್ಲುತ್ತದೆ ಎಂದು ಹೇಳಿದಂತಾಯಿತಂತೆ. ಆಗ ಯಾರೂ ಬಲಿಯಾಗಲು ಬರದಿದ್ದಾಗ ಓಬಣ್ಣನಾಯಕರ ಪತ್ನಿ ತುಂಬಿದ ಬಸುರಿಯಾಗಿದ್ದು, ತಾನೇ ಬಲಿಯಾದಳಂತೆ. ಆಗ ಕಂಬ ನಿಂತಿತಂತೆ. ಈ ಏಕನಾಥೇಶ್ವರಿ ದೇವಾಲಯದ ಆವರಣ ಬೆಟ್ಟದ ಹೃದಯವಿದ್ದಂತೆ. ಇಲ್ಲಿಯ ಬಾಗಿಲಿಗೆ ಅಜ್ಜಿ ಬಾಗಿಲು ಅಥವಾ ಏಕನಾಥಿ ಬಾಗಿಲು ಎನ್ನುತ್ತಾರೆ. ಏಕನಾಥೇಶ್ವರಿ ಪಾಳೆಯಗಾರರ ಹಾಗೂ ದುರ್ಗದವರ ಆರಾಧ್ಯ ದೇವತೆ. ವರ್ಷಕ್ಕೊಮ್ಮೆ ದೇವಿಯ ಕಾರ್ತಿಕ ಹಾಗೂ ಸಿಡಿ ಉತ್ಸವಗಳು ನಡೆಯುತ್ತವೆ'[೮೦] (ಗಿರಿಜಾ ಟಿ, ೧೯೯೧, ಪುಟ-೪೧) ಎಂಬ ಮೊದಲಾದ ವಿಚಾರಗಳು ತಿಳಿದು ಬರುತ್ತವೆ.

ಕರ್ನಾಟಕದಲ್ಲಿನ ಹಬ್ಬ ಮತ್ತು ಆಚರಣೆಗಳನ್ನು ಕುರಿತು ಹೇಳುವಾಗ ಭಾರತೀಯ ಮೂಲದ ಆಚರಣೆ ಮತ್ತು ಸಂಪ್ರದಾಯಗಳು ಒಂದೇ ರೀತಿಯಾಗಿ ಹಾಸುಹೊಕ್ಕಾಗಿರುತ್ತದೆ. ಅದೆಲ್ಲದರೊಡನೆ ಜಗತ್ತಿನ ಸಾಂಸ್ಕೃತಿಕ ಆಚಾರ ವಿಚಾರಗಳೂ ಅದರೊಡನೆ ತಳಿಕೆ ಹಾಕಿಕೊಂಡಿರುತ್ತವೆ. ಇದಕ್ಕೆಲ್ಲಾ ಕಾರಣವು ಜಗತ್ತಿಗೆ ಚಂದ್ರಸೂರ್ಯರು ಕತ್ತಲು ಬೆಳಕನ್ನು ನೀಡುತ್ತಾ ಚಕ್ರಕಾರವಾಗಿ ತಿರುಗುವ ಸ್ವರೂಪ ಒಂದೇ ಆಗಿರುವುದು. ಹಬ್ಬಗಳು ಮನುಷ್ಯನ ಜೀವನಕ್ಕೆ ಉತ್ಸಾಹ ತುಂಬುವ ಚಿಲುಮೆಗಳಾಗಿವೆ. ನಮ್ಮ ದೇಶದ ಭಾಷೆಗಳು ಬೇರೆ ಬೇರೆಯಾಗಿದ್ದರೂ ಸಹ ನಾವೆಲ್ಲರೂ ಭಾವೈಕ್ಯತೆಯಿಂದ ಹಬ್ಬಗಳನ್ನು ಆಚರಿಸುತ್ತೇವೆ.

ಅಧ್ಯಾಯ ೬

ಪ್ರಗತಿಶೀಲ ಕಾದಂಬರಿಗಳ ಕಥಾವಸ್ತುವಿನಲ್ಲಿ ಮೂಡಿಬಂದ ಪಾತ್ರಗಳ ಪುನರ್‌ಲೇಖ

---

೧. ನಾಯಕ ಪ್ರಧಾನ ಪಾತ್ರಗಳು

೨. ಉಪೇಕ್ಷಿತ ಪಾತ್ರಗಳು

ಅಧ್ಯಾಯ ೬

ಪ್ರಗತಿಶೀಲ ಕಾದಂಬರಿಗಳ ಕಥಾವಸ್ತುವಿನಲ್ಲಿ ಮೂಡಿಬಂದ ಪಾತ್ರಗಳ ಪುನರ್‌ಲೇಖ

ಕಾದಂಬರಿ ಆಧುನಿಕ ಸಾಹಿತ್ಯದ ಪ್ರಮುಖ ಪ್ರಕಾರವಾಗಿದೆ. ಇದರ ರಚನೆಗೆ ಸಂಬಂಧಿಸಿದಂತೆ ವಸ್ತು, ವಿಧಾನ, ಭಾಷೆ ಮುಂತಾದ ಅಂಶಗಳು ಕಠಿಣ ನಿಯಮಗಳಿಗೆ ಬದ್ಧವಾಗಿರದೆ ಸರಳವಾಗಿದ್ದು ಸುಲಭ ಗ್ರಾಹ್ಯವೂ, ಮನೋರಂಜಕವೂ ಆಗಿರುವುದರಿಂದ ಇವು ಓದುಗರನ್ನು ಹೆಚ್ಚು ಆಕರ್ಷಿಸಲು ಕಾರಣವಾಗಿವೆ. ಆಧುನಿಕ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಸರಿಸುಮಾರು ಅರ್ಧದಷ್ಟು ಕಾದಂಬರಿ ಎಂದರೆ ಅತಿಶಯೋಕ್ತಿಯಲ್ಲ. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾದಂಬರಿ ಒಂದು ಪ್ರಕಾರವಾಗಿ ಸಮೃದ್ಧವಾಗಿ ಬೆಳೆದು ನಿಂತಿದೆ. ಸಾಮಾಜಿಕ, ಐತಿಹಾಸಿಕ, ಕೌಟುಂಬಿಕ, ಪೌರಾಣಿಕ ಹೀಗೆ ಹಲವು ಒಳವಿಭಾಗಗಳು ಕಾದಂಬರಿ ಪ್ರಕಾರದಲ್ಲಿ ಪ್ರಸಿದ್ಧವಾಗಿವೆ.

ಕಾದಂಬರಿಗೆ ವಸ್ತುವನ್ನು ಲೇಖಕ ಬದುಕಿನಿಂದಲೇ ಆಯ್ದುಕೊಂಡಿರುತ್ತಾನೆ. ನಮ್ಮ ನಿತ್ಯಜೀವನದ ಘಟನೆಗಳೇ ಅಲ್ಲಿ ಎದುರಾಗುತ್ತವೆ. ನಮ್ಮ ಸುತ್ತಲಿನ ವ್ಯಕ್ತಿಗಳೇ ಕಾಣಸಿಗುತ್ತಾರೆ. ಕಾದಂಬರಿಯೊಂದರಲ್ಲಿ ಘಟನೆಗಳು ಎಂದರೆ ಸನ್ನಿವೇಶಗಳು ಇದ್ದು ಅವು ಕೌಶಲದಿಂದ ಹೆಣೆಯಲ್ಪಟ್ಟಿರುವಂತೆಯೇ ಘಟನೆಗಳಲ್ಲಿ ಭಾಗವಹಿಸುವ ವ್ಯಕ್ತಿಗಳು ಅಂದರೆ ಪಾತ್ರಗಳೂ ಚಿತ್ರಿತವಾಗಿರುತ್ತವೆ. ರಕ್ತಮಾಂಸಗಳಿಂದೊಡಗೂಡಿದ ಅಂದರೆ ಮನುಷ್ಯ ಸಹಜ ರಾಗದ್ವೇಷಗಳನ್ನು ಒಳಗೊಂಡ ಜೀವಂತ ಪಾತ್ರಗಳು ಸೃಷ್ಟಿಯಾಗುವಂತೆ ಕಾದಂಬರಿಕಾರ ಜಾಗೃತೆ ವಹಿಸಿರುತ್ತಾನೆ. ಪಾತ್ರಗಳು ಕೃತಕವಾಗಿದ್ದರೆ, ಅತಿ ಸರಳ ಅಥವಾ ಅತಿ ಸಂಕೀರ್ಣವಾಗಿದ್ದರೆ ಓದುಗರ ಮೆಚ್ಚುಗೆ ದೊರೆಯುವುದು ಕಷ್ಟ. ತನ್ನ ಅನುಭವ ಸಾಮರ್ಥ್ಯವನ್ನು ಅವಲಂಬಿಸಿ ನೂರಾರು ವೈವಿಧ್ಯಮಯ ವೈಶಿಷ್ಟ್ಯಪೂರ್ಣ ವ್ಯಕ್ತಿಗಳನ್ನು ಸೃಷ್ಟಿಸಲು ಕಾದಂಬರಿಕಾರನಿಗೆ ಅವಕಾಶವಿದೆ.

ಕಾದಂಬರಿಗಳಲ್ಲಿ ಘಟನೆಗಳಿಗೆಷ್ಟು ಪ್ರಾಮುಖ್ಯತೆ ಇರುವದೋ ಪಾತ್ರಗಳಿಗೂ ಅಷ್ಟೇ ಏಕೆ ಒಂದು ತೂಕ ಹೆಚ್ಚೆನ್ನುವಷ್ಟು ಪ್ರಾಮುಖ್ಯತೆ ಇರುತ್ತದೆ. ಯಾವುದೇ ಪಾತ್ರವಿಲ್ಲದೇ ಘಟನೆಯಿಲ್ಲ. ಘಟನೆಯ ಮೂಲಭೂತವಾದ ವಸ್ತು ಪಾತ್ರದಲ್ಲಿದೆಯೆಂಬುದು ಅಭ್ಯಸಿಸಿದಾಗ ಅರಿವಾಗುವುದು. ಯಾವುದೇ ಕೃತಿಗೆ ವಸ್ತು ಅದರ ಹಂದರವಾದರೆ, ಅಲ್ಲಿ ಸೃಷ್ಟಿಗೊಳ್ಳುವ ಪಾತ್ರಗಳು ಅದನ್ನು ಸುತ್ತುವರಿದು ಹಬ್ಬಿದ ಬಳ್ಳಿಗಳಾಗಿರುತ್ತವೆ. ಒಂದು ಕೃತಿಗೆ ಶೋಭೆಯುಂಟಾಗುವುದು ಅಲ್ಲಿ

ಮೂಡಿಬರುವ ಪಾತ್ರಗಳಿಂದ. ಹೀಗಾಗಿ ಒಂದು ಕಾದಂಬರಿಯ ಅಡಿಪಾಯವೆಂದರೆ ಪಾತ್ರಗಳೇ ಆಗಿರುತ್ತವೆ. ಕಾದಂಬರಿಯಲ್ಲಿ ಬರುವ ಘಟನೆಗಳು ಯಾವಾಗಲೂ ವಾಸ್ತವಿಕತೆಯಿಂದ ತುಂಬಿಕೊಂಡಿರಬೇಕು. ಏಕೆಂದರೆ ಘಟನೆಗಳಿಗೆ ಮೂಲ ಚೇತನಗಳೆಂದರೆ ಪಾತ್ರಗಳು. ಆದ್ದರಿಂದ ಘಟನೆಗಳು ವಾಸ್ತವಿಕತೆಯಿಂದ ತುಂಬಿದ್ದರೆ ಪಾತ್ರಗಳಲ್ಲಿಯೂ ವಾಸ್ತವಿಕತೆ ಉಂಟಾಗುತ್ತದೆ.

ಪ್ರಗತಿಶೀಲ ಲೇಖಕರಾದ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟೀಮನಿಯವರು ಕಿರಿದಾದ ನಾಲ್ಕು ಸಾಲಿನ ಐತಿಹಾಸಿಕ ಘಟನೆಯನ್ನೇ ಸುಸಂಬದ್ಧವಾಗಿ ವಿಸ್ತರಿಸಿ ಸತ್ಯಕ್ಕೆ ಅಪಚಾರವಾಗದಂತೆ ಪಾತ್ರಗಳನ್ನು ಸಂಯೋಜಿಸಿ ಕಲ್ಪನೆಯ ಸುಳುಹು ಹೊಳಹುಗಳಿಂದ ರೋಚಕಗೊಳಿಸಿ, ಓದುಗರನ್ನು ಅಂದಿನ ಐತಿಹಾಸಿಕ ಪರಿಸರಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಬರುವ ಹಲವಾರು ಪಾತ್ರಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಿದ್ದಾರೆ.

'ಪಾತ್ರಗಳನ್ನು ನೇರ, ಸಮ್ಮಿಶ್ರ ಎಂದು ಇ.ಎನ್.ಫಾರೆಸ್ಟರ್ ವಿಭಾಗಿಸುತ್ತಾರೆ. ಮೊದಲಿನಿಂದ ಕೊನೆಯವರೆಗೂ ಒಂದೇ ಗುಣ ಪ್ರಧಾನವಾಗಿರುವ ಪಾತ್ರಗಳನ್ನು "ನೇರ"ವೆಂದು ಕರೆಯಬಹುದು. ಇಂಥ ಪಾತ್ರ ಓದುಗರ ಮನಸ್ಸಿನಲ್ಲಿ ಕ್ಷಿಪ್ರ ಹಾಗೂ ಚಿರಸ್ಥಾಯಿಯಾದ ಪರಿಣಾಮವನ್ನುಂಟು ಮಾಡುತ್ತವೆ. ಸಮ್ಮಿಶ್ರ ಪಾತ್ರಗಳಲ್ಲಿ ಹೆಚ್ಚು ನಾಟಕೀಯತೆ, ಹೆಚ್ಚು ಅಂತರಂಗ, ವಿಪ್ಲವ, ಹೆಚ್ಚು ರಸಜೀವನವಿದೆಯೆನ್ನುವುದು ನಿಜವಾದರೂ ಅವು ಯಾವ ಗುರಿಯನ್ನೂ ಸಾಧಿಸದೇ ಹಲವಾರು ದಾರಿಗಳಲ್ಲಿ ಹರಿದುಹೋಗುವ ಸಂಭವವೂ ಇದೆ'[೧] (ಕೃಷ್ಣರಾಯ ಶಾ.ಮಂ(ಸಂ), ೨೦೧೨, ಪುಟ-೨೭೫) ಪಾತ್ರಗಳನ್ನು ಕುರಿತು ಎಸ್.ಎಂ.ವೃಷಭೇಂದ್ರಸ್ವಾಮಿಯವರ ಮಾತುಗಳು ಅರ್ಥವತ್ತಾಗಿವೆ. 'ಕತೆ ಕಾದಂಬರಿಗಳ ಆರಂಭದಲ್ಲಿ ಓದುಗ ಸಹೃಯ ದೃಷ್ಟಿಯಿಂದ ಪಾತ್ರಗಳು ಖಾಲಿಯಾದ ಚೀಲಗಳಿದ್ದಂತೆ. ಕತೆ ಬೆಳೆಯುತ್ತ ಸಾಗಿದಂತೆ ಒಳ್ಳೆಯ ಇಲ್ಲವೆ ಕೆಟ್ಟ ಅಥವಾ ಇವೆರಡನ್ನೂ ಹಲವು ಪಾತ್ರಗಳು ಒಳಗೊಳ್ಳುತ್ತ ಕೊನೆಯ ಘಟ್ಟಕ್ಕೆ ಬಂದಾಗ ಇವು ತುಂಬಿದ ಚೀಲಗಳಾಗುತ್ತವೆ'[೨] (ಅಶೋಕ ನರೋಡೆ, ೨೦೧೦, ಪುಟ-೦೭) ಎಂಬ ಮಾತು ಅಪ್ಪಟ ಸತ್ಯ.

೬.೧ ನಾಯಕ ಪ್ರಧಾನ ಪಾತ್ರಗಳು :

ಒಂದು ಕಾದಂಬರಿಯಲ್ಲಿ ನಾಯಕನೆಂದರೆ ಪರಾಕ್ರಮಿ, ಸದ್ಗುಣಿಯೆಂದೇ ಚಿತ್ರಿಸಲ್ಪಟ್ಟಿರುತ್ತಾನೆ. ಐತಿಹಾಸಿಕ ಕಾದಂಬರಿಗಳಲ್ಲಿ ನಾಯಕನೆಂದರೆ ಒಂದು ರಾಜ್ಯವನ್ನಾಳುವ ರಾಜನೆಂದೇ ಅರ್ಥೈಸಲಾಗುತ್ತದೆ. 'ಗ್ರಾಮಗಳ ಮತ್ತು ನಗರಗಳ ಮೊತ್ತವೇ ರಾಜ್ಯ. ಈ ರಾಜ್ಯಕ್ಕೆ ಅಧಿಪತಿ 'ರಾಜ'. ರಾಜ್ಯರಕ್ಷಣೆ ಅವನ ಪ್ರಮುಖ ಹೊಣೆಯಾಗಿದ್ದರೆ ಪ್ರಜಾಪರಿಪಾಲನೆ ಅವನ ಪ್ರಥಮ ಕರ್ತವ್ಯವಾಗಿದೆ. ಒಂದು ಗ್ರಾಮದ ಜೀವನವು ಆ ಗ್ರಾಮದ ದೇವಸ್ಥಾನದ ಸುತ್ತ ರೂಪಿತವಾಗುತ್ತಿದ್ದಂತೆ, ಒಂದು

ದೇಶದ ಜೀವನವು ಆ ದೇಶದ ರಾಜನನ್ನು ಅವಲಂಬಿಸಿದ್ದಿತು. ಒಬ್ಬ ರಾಜನ ಏಳುಬೀಳುಗಳೆಂದರೆ ಆ ರಾಜ್ಯದ ಏಳುಬೀಳುಗಳೆಂದೇ ಅರ್ಥ'[2] (ಶೈಲಜಾ ಹೊಸಳ್ಳೇರ, ೨೦೧೨, ಪುಟ-೧೦) ಒಂದು ರಾಜ್ಯದ ಏಳುಬೀಳುಗಳು ರಾಜನನ್ನೇ ಅವಲಂಬಿಸಿರುವುದರಿಂದ ರಾಜನು ಸುಶಿಕ್ಷಿತ, ಪರಾಕ್ರಮಿ, ಸದ್ಗುಣಿ, ಸಹೃದಯಿ, ಸಕಲ ಕಲಾಪಾರಂಗತನಾಗಿರಬೇಕಾದುದು ಅವಶ್ಯಕ.

೬.೧.೧ ಅಮೋಘವರ್ಷ ನೃಪತುಂಗ :

ಅಮೋಘವರ್ಷನು ಜಿನಸೇನಾಚಾರ್ಯರ ಶಿಷ್ಯನಾಗಿದ್ದು ಶಾಂತಿಪ್ರಿಯನೂ, ಸ್ನೇಹಾಭಿಲಾಷಿಯೂ ಎಂದು ಹೆಸರು ಪಡೆದಿದ್ದನು. ಈತನ ಜೀವನದಲ್ಲಿ ಬೋಧನೆಯ ಬೆಳಕು ನೀಡಿ ಬೆಳೆಸಿದ್ದವರು ಜಿನಸೇನಾಚಾರ್ಯರು. ಅವರು ಮುಕ್ತರಾದಾಗ ಚಕ್ರವರ್ತಿಗಳು ತನ್ನ ಬಾಳಿನ ಕಣ್ಣು ಕುರುಡಾಯಿತೆಂದು ದುಃಖಿಸುತ್ತಾರೆ. ಗುಣಭದ್ರಾಚಾರ್ಯರು ಸಮಯೋಚಿತ ಬೋಧನೆ ಮಾಡಿ ಆ ದುಃಖದಿಂದ ಪಾರು ಮಾಡುತ್ತಾರೆ. 'ಕ್ರಿ.ಶ ೮೫೧ ರಲ್ಲಿ ಕರ್ನಾಟಕವನ್ನು ಸಂದರ್ಶಿಸಿದ ಅರಬ ಪ್ರವಾಸಿ ಸುಲೇಮಾನ ನೃಪತುಂಗನ ಘನತೆ ಮತ್ತು ಪ್ರಗತಿಪರ ಆಳ್ವಿಕೆಯನ್ನು ಬರೆದಿಟ್ಟು ಹೋಗಿದ್ದಾನೆ. ರಾಷ್ಟ್ರಕೂಟರ ಅರಸ ನೃಪತುಂಗ ಪ್ರಪಂಚದ ನಾಲ್ಕು ಸಮಕಾಲೀನ ಚಕ್ರವರ್ತಿಗಳಲ್ಲಿ ಒಬ್ಬ. ಬಾಗ್ದಾದಿನ ಖಲೀಫ, ಚೀನಾದ ಚಕ್ರವರ್ತಿ ಮತ್ತು ಕಾನ್‌ಸ್ಟಾಂಟಿನೋಪಲಿನ ಚಕ್ರವರ್ತಿಗಳಿಗೆ ಸಮಾನರು'[4] (ರಮೇಶ ಬೆ.ಗೋ, ೨೦೧೧, ಪುಟ-೨೫) ಎಂದು ಪ್ರಶಂಸಿಸಿದ್ದಾನೆ.

ಲಕ್ಷ್ಮೀದೇವಿ ಗರ್ಭವತಿಯಾಗಿ ಹೆಣ್ಣು ಮಗುವಿಗೆ ಜನ್ಮ ನೀಡಿದಾಗ ಚಂದ್ರಕಲಾ ಎಂದು ನಾಮಕರಣ ಮಾಡಿ ಸಂಭ್ರಮಿಸುವರು. ಹಿರಿಯ ಮಗಳು ಶಂಖಾದೇವಿ ಗಂಡುಮಗುವಿಗೆ ಜನ್ಮ ನೀಡಿದ ಸುದ್ದಿ ಕೇಳಿ ಪತ್ನಿಯನ್ನು ಭೇಡಿಸುವರು. ಪತ್ನಿ ಕಂಚಿಗೆ ಪ್ರಯಾಣ ಬೆಳೆಸಲು ಮುಂದಾದಾಗ ಒಲ್ಲದ ಮನಸ್ಸಿನಿಂದಲೇ ಕಳಿಸಿಕೊಡುವರು. ಆದರೆ ಕಂಚಿಯಲ್ಲಿ ಜ್ವರದ ತಾಪ ಹೆಚ್ಚಾಗಿ ಮೃತಳಾದಾಗ ಶೋಕಿಸುವರು. ಮಗನಾದ ಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಸಾಮಾನ್ಯರಂತೆ ಕಣ್ಣೀರು ಹಾಕುವರು. ಆ ಸಮಯದಲ್ಲಿ ಚಕ್ರವರ್ತಿಗಳನ್ನು ಗುಣಭದ್ರಾಚಾರ್ಯರೇ ಸಮಾಧಾನಪಡಿಸುವರು. ತಾಯನ್ನು ಕಳೆದುಕೊಂಡ ತಬ್ಬಲಿ ಹಸುಳೆ ಚಂದ್ರಲೆ, ದಾಸಿಯರ ಸ್ತನ ಪೋಷಣೆಯಲ್ಲಿ ಬೆಳೆಯುವುದನ್ನು ಕಂಡು ಕಂಬನಿ ಮಿಡಿಯುವರು. ಮಿಹಿರಭೋಜನ ಸೇನೆ ದಾಳಿ ಮಾಡಿದಾಗ ಗುಣಭದ್ರಾಚಾರ್ಯರ ಸಲಹೆಯಂತೆ ಭರತೋಕ್ತ ನೀತಿಯ ಪ್ರಕಾರ ಬಂಕರಸರ ಮಗ ಲೋಕಾದಿತ್ಯನನ್ನು ಸೇನಾಧಿಪತಿಯನ್ನಾಗಿ ಆಯ್ಕೆ ಮಾಡಿ ಆತನ ಗುಣಗಾನ ಮಾಡಿದಾಗ ಮಗನಾದ ಕೃಷ್ಣ ಸಹಿಸದಾಗುತ್ತಾನೆ. ತಂದೆಯ ವಿರುದ್ಧವೇ ನಿಲ್ಲುತ್ತಾನೆ. ಚಕ್ರವರ್ತಿಗಳು ಮಗನ ವರ್ತನೆ ಆತನು ಬಂಡಾಯವೆದ್ದುದರಿಂದ ನೊಂದುಕೊಂಡು ನೀರು, ಆಹಾರಗಳೆಲ್ಲವನ್ನು ತ್ಯಜಿಸಿದಾಗ ಅವರಿಗೆ

ರಾಜಕುಮಾರನನ್ನು ಕರೆದುಕೊಂಡು ಬಂದು ಬಂಡಾಯ ಅಡಗಿಸುವುದಾಗಿ ಬಂಕರಸರು ಭರವಸೆ ಕೊಡುವರು. ಅದೇ ಪ್ರಕಾರವಾಗಿ ರಾಜಕುಮಾರನನ್ನು ಕರೆದುಕೊಂಡು ಬಂದಾಗ ಧರ್ಮಪೀಠದಲ್ಲಿ ಕುಳಿತು ನ್ಯಾಯದ ತೀರ್ಪನ್ನಿಡುತ್ತ ಚಕ್ರವರ್ತಿಗಳು 'ಸೆರೆಯಾಳಿನ ಪಾಪಕ್ಕೆ ಪಶ್ಚಾತ್ತಾಪವೇ ಪ್ರಾಯಶ್ಚಿತ್ತವಲ್ಲ. ರಾಜದ್ರೋಹಕ್ಕೆ ವಿಧಿಸಿರುವ ಶಿಕ್ಷೆ ಒಂದೇ ಮರಣ ದಂಡನೆ. ರಾಷ್ಟ್ರಕೂಟ ರಾಜ್ಯದ ವಿರುದ್ಧ ಬಂಡಾಯವೆದ್ದ ರಾಜಕುಮಾರ ಕೃಷ್ಣನಿಗೆ ನಾವು ಶಿಕ್ಷೆ ವಿಧಿಸಿದ್ದೇವೆ'[೫] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೧೫೦) ಎಂಬ ತೀರ್ಪನ್ನಿಡುತ್ತಲೇ ಇಡೀ ಸಭೆಯೇ ಗಡಗಡನೆ ನಡುಗುತ್ತದೆ. ಚೇದಿಯ ರಾಜಕುಮಾರಿ ಉಜ್ವಲಾದೇವಿ ಅವರ ಅಪರಾಧದಲ್ಲಿ ತಾನು ಪಾಲುದಾರಳು. ತನಗೂ ಮರಣದಂಡನೆಯ ಶಿಕ್ಷೆ ವಿಧಿಸಬೇಕೆಂದು ಕೇಳಿಕೊಳ್ಳುವಳು. ಜನರೆಲ್ಲರೂ ರಾಜಕುಮಾರನಿಗೆ ಕ್ಷಮಾದಾನದ ಶಿಕ್ಷೆ ನೀಡಬೇಕೆಂದು ಒತ್ತಾಯಪಡಿಸುವರು. ಜನರ ಮಾತಿಗೆ ಮನ್ನಣೆ ಕೊಟ್ಟ ಚಕ್ರವರ್ತಿಗಳು ಮಗ ಸೊಸೆಯೊಂದಿಗೆ ಅರಮನೆಗೆ ಹೋಗುವರು. ಬರಬರುತ್ತ ಅವರಿಗೆ ಜೀವನದಲ್ಲಿ ಜಿಗುಪ್ಸೆ ಬರಲು ಪ್ರಾರಂಭಿಸುವುದು. ಹಿರಿಯ ಮಗಳು ಶಂಖಾದೇವಿ ಸ್ವರ್ಗಸ್ಥನಾದ ತನ್ನ ಪತಿ ನಂದಿವರ್ಮನ ದೇಹದೊಂದಿಗೆ ತಾನು ಚಿತೆಯೇರುವಳು. ಬಂಕರಸರು ಜಿನಪಾದ ಸೇರುವರು. ಹೀಗೆ ತನ್ನವರನ್ನೆಲ್ಲಾ ಕಳೆದುಕೊಳ್ಳುತ್ತಿರುವ ನೋವು ಅವರನ್ನು ಬಾಧಿಸುತ್ತದೆ.

ಪಂಚಮುಖಿಯವರು 'ಈತನು ಅಶೋಕನಂತೆ ವೀರನೂ, ಶಾಂತಿಪ್ರಿಯನೂ, ಪರಧರ್ಮ ಸಹಿಷ್ಣುವೂ, ಪ್ರಜಾಹಿತ ರಕ್ಷಕನೂ ಮತ್ತು ಉದ್ದಾಮ ಪಂಡಿತನಾಗಿದ್ದ' ಎಂದು ತಿಳಿಸಿದ್ದಾರೆ. ಈತನ ಕಾಲವು ದಿಗ್ವಿಜಯಗಳಿಗಿಂತ ಶಾಂತಿ, ವಿಜಯಗಳಿಗೆ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗೆ ಹೆಸರಾಗಿದೆ'[೬] (ಹೂಗಾರ ಪಿ.ಬಿ, ೨೦೦೬, ಪುಟ-೯೩) ಎಂದು ಬರೆದಿರುವರು. ಊರಿಗೆ ಹನ್ನೆರಡು ವರ್ಷಗಳ ಕಾಲ ಭೀಕರ ಕ್ಷಾಮ ಬರುವುದೆಂದು ತಿಳಿದು ಚಕ್ರವರ್ತಿಗಳು ಕರವೀರಪುರದ ಮಹಾಲಕ್ಷ್ಮೀಗೆ ತಮ್ಮ ಎಡಗೈಯ ಬೆರಳನ್ನು ದಾನ ಮಾಡಿ ದೇವತಾ ಕ್ರೋಧ ಶಾಂತವಾಗುವಂತೆ ಮಾಡುವರು. ರಾಜಕುಮಾರ ಕೃಷ್ಣನಿಗೆ ಚಕ್ರವರ್ತಿ ಪಟ್ಟ ಕಟ್ಟಿ ತಾವು ಕಾಷಾಯವಸ್ತ್ರಧಾರಿಗಳಾಗಿ ಆಶ್ರಮ ಪ್ರಯಾಣ ಮಾಡುವರು. ನೃಪತುಂಗ ಮಹಾರಾಜ ೬೪ ವರ್ಷಗಳಷ್ಟು ಸುದೀರ್ಘಕಾಲ ಆಳಿ ಕ್ರಿ.ಶ ೮೭೮ ರಲ್ಲಿ ಕಾಲವಾದರು.

೬.೧.೨ ಎರಡನೆಯ ಕೃಷ್ಣ :

ಅಮೋಘವರ್ಷ ನೃಪತುಂಗನಿಗೆ ವೆಂಗಿವಳ್ಳಿಯ ಮೇಲೆ ದಾಳಿ ಮಾಡಿದ ವಿಷ್ಣುವರ್ಧನನನ್ನು ಸೋಲಿಸಿದ ವಿಜಯೋತ್ಸವದ ದಿನವೇ ಜನಿಸಿದ ಪುತ್ರನಿಗೆ "ಅಕಾಲವರ್ಷ"ನೆಂದೂ, ಮಹಾರಾಣಿಯವರ ಇಚ್ಛೆಯಂತೆ "ಕೃಷ್ಣ" ಎಂದೂ ನಾಮಕರಣ ಮಾಡುವರು. ಬಾಲ್ಯದಿಂದಲೂ

ಹಠದ ಸ್ವಭಾವದವನಾದ ಈತ ತಂದೆಯ ವಿರುದ್ಧವೇ ಬಂಡಾಯವೇಳುತ್ತಾನೆ. ಜಯಂತಿಯೆಂಬ ವೇಶ್ಯೆಯ ಸಹವಾಸ ಮಾಡಿ ಗುಣಭದ್ರಾಚಾರ್ಯರ ಬಗ್ಗೆ ಅಪನಂಬಿಕೆ ತಳೆಯುವನು.

ರಾಜಕುಮಾರ ಕೃಷ್ಣ ಚಕ್ರವರ್ತಿಯಾಗುವನೆಂದು ಶಂಕರಗಣ ತನ್ನ ಸಹೋದರಿಯನ್ನು ಕೊಟ್ಟು ಮದುವೆ ಮಾಡುವನು. ಮಂಗಿಯರಸರು ಜಯಂತಿಯನ್ನು ಮುಂದಿಟ್ಟುಕೊಂಡು ರಾಜಕುಮಾರನನ್ನು ಕೊಂದು ರಾಷ್ಟ್ರಕೂಟರ ವಂಶವನ್ನು ನಾಶಗೊಳಿಸಬೇಕೆಂದು ಆಲೋಚಿಸಿ ವಿಷಬೆರೆತ ಮದ್ಯವನ್ನು ಜಯಂತಿಯ ಮೂಲಕ ಕುಡಿಸಲು ಮುಂದಾದಾಗ ಆ ಸಂಚನ್ನು ತಿಳಿದ ಶಂಕರಗಣ ರಾಜಕುಮಾರನನ್ನು ರಕ್ಷಿಸಿ ಅದನ್ನು ಜಯಂತಿಯೇ ಕುಡಿಯುವಂತೆ ಮಾಡುತ್ತಾನೆ. ಸಾಯುವ ಮುನ್ನ ಜಯಂತಿ ಮಂಗಿಯರಸ ರಾಜಕುಮಾರನಿಂದಲೇ ರಾಷ್ಟ್ರಕೂಟ ವಂಶವನ್ನು ನಿರ್ಮೂಲನ ಮಾಡುವ ಹಟ ತೊಟ್ಟಿದ್ದ ವಿಚಾರವನ್ನು ತಿಳಿಸಿದಾಗ ರಾಜಕುಮಾರನಿಗೆ ದಿಗ್ಭ್ರಮೆಯಾಗುತ್ತದೆ. ತನ್ನ ತಪ್ಪಿನ ಅರಿವಾಗುತ್ತದೆ.

ಪಶ್ಚಾತ್ತಾಪದ ಬೇಗೆಯಲ್ಲಿ ಬೇಯುತ್ತಿದ್ದ ರಾಜಕುಮಾರ ಕೃಷ್ಣ ಬಂಕರಸರಿಗೆ ತನ್ನ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಸಾವೊಂದೇ ಅದಕ್ಕೆ ಪ್ರಾಯಶ್ಚಿತ್ತವೆನ್ನುವರು. ಚಕ್ರವರ್ತಿಗಳು ಧರ್ಮಪೀಠದ ಮೇಲೆ ಕುಳಿತು ಮರಣದಂಡನೆಯ ಶಿಕ್ಷೆ ವಿಧಿಸಿದಾಗ ನೆರೆದ ಜನಸ್ತೋಮ ಗಡಗಡನೆ ನಡುಗುತ್ತದೆ. ಆದರೆ ರಾಜಕುಮಾರ ಮಾತ್ರ ತೀರ್ಪು ನ್ಯಾಯಬದ್ಧವಾಗಿದೆ. ಅದನ್ನು ನಾನು ಸ್ವಾಗತಿಸುತ್ತೇನೆ. 'ರಾಜಪುತ್ರನಾಗಿ ನಾನು ಪ್ರಜೆಗಳಿಗೆ ಎರಡು ಬಗೆದೆ; ಸಿಂಹಾಸನದ ಮೇಲಿನ ಆಸೆಯಿಂದ ಅದಕ್ಕೆ ದ್ರೋಹ ಬಗೆಯಲೆತ್ನಿಸಿದೆ. ಚಕ್ರವರ್ತಿಗಳ ಮಾತು ನಿಜ. ನನ್ನ ರಾಜ್ಯಾಕಾಂಕ್ಷೆಯ ರಾಕ್ಷಸೀ ತೃಷೆಗಾಗಿ ನೂರಾರು ಜನರ ವಿನಾಕಾರಣ ರಕ್ತಪಾತವಾಯಿತು. ಅದಕ್ಕೆ ಚಕ್ರವರ್ತಿಗಳು ನನಗೆ ಸರಿಯಾದ ಶಿಕ್ಷೆ ವಿಧಿಸಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಸಾವು ನನಗೆ ಸ್ವಾಗತಾರ್ಹ. ಮರಣದಂಡನೆಯನ್ನು ವಿಧಿಸದಿದ್ದರೆ, ಬದುಕಿರಬೇಕೆಂಬ ಭಯಂಕರವಾದ ಶಿಕ್ಷೆಯನ್ನು ವಿಧಿಸಿದ್ದರೆ ಪಾಪದ ಅರಿವಾದ ನಾನು ಮುಖವೆತ್ತಿ ತಿರುಗಾಡುವ ಬಾಳು ನರಕದುರಿಗಿಂತಲೂ ದುರ್ಭರವಾಗುತ್ತಿತ್ತು. ಇಂದು ಆ ಬೇಗೆ ತಪ್ಪಿದೆ. ಈ ಕರುಣೆಗಾಗಿ ನ್ಯಾಯಪೀಠಕ್ಕೆ ಋಣಿಯಾಗಿದ್ದೇನೆ. ಸಭೆಯಲ್ಲಿ ನನ್ನದೊಂದೇ ಪ್ರಾರ್ಥನೆ ಕೆಟ್ಟ ಕನಸಿನಂತೆ ನನ್ನನ್ನು ಮರೆತುಬಿಡಿ. ರಾಷ್ಟ್ರಕೂಟ ರಾಜ್ಯಕ್ಕೆ ವಿಜಯವಾಗಲಿ, ರಾಷ್ಟ್ರಕೂಟ ರಾಜ್ಯ ಚಿರಾಯುವಾಗಲಿ'[2] (ಸುಬ್ಬರಾಯರು ತ.ರಾ, ೨೦೧೪, ನೃಪತುಂಗ, ಪುಟ-೧೫೯) ಎಂಬ ಮಾತುಗಳನ್ನಾಡಿದಾಕ್ಷಣ ಎಲ್ಲರ ಕಣ್ಣುಗಳಲ್ಲೂ ಕಂಬನಿ ಮಿಡಿಯುತ್ತವೆ. ಜನರೆಲ್ಲರೂ ರಾಜಕುಮಾರನಿಗೆ ಕ್ಷಮಾಧಾನ ನೀಡಬೇಕೆಂದು ಒಕ್ಕೊರಲಿನಿಂದ ಕೇಳಿಕೊಂಡಾಗ ಕ್ಷಮಾಧಾನ ನೀಡಿದ ಚಕ್ರವರ್ತಿಗಳು ತದನಂತರ ಚಕ್ರವರ್ತಿಯ ಪದವಿ ನೀಡಿ ತಾವು ಆಶ್ರಮವಾಸಿಗಳಾಗಿ

ಹೋಗುತ್ತಾರೆ. ಜನರ ಹಿತಕ್ಕೋಸ್ಕರ ಬದುಕುವಂತೆ ಸಲಹೆ ನೀಡುತ್ತಾರೆ. ಈತನು ಕ್ರಿ.ಶ ೯೧೪ ರಲ್ಲಿ ಮಡಿದನು.

೬.೧.೩ ಎರೆಯಂಗದೇವ :

ವಿನಯಾದಿತ್ಯ ಮತ್ತು ಕೆಳಯಬ್ಬರಸಿಯರ ಮಗ ಎರೆಯಂಗ. ತಂದೆಯ ಪ್ರೋತ್ಸಾಹದಿಂದ ಕಲ್ಯಾಣದ ಚಾಳುಕ್ಯರೊಡಗೂಡಿ ಅನೇಕ ದಿಗ್ವಿಜಯಗಳಿಗೆ ಕಾರಣೀಕರ್ತನಾಗುತ್ತಾನೆ. ಎರೆಯಂಗದೇವನ ನಾಲ್ಕನೆಯ ಮಡದಿ ಏಚಲೆ. ಇವರಿಗೆ ಒಂದನೆಯ ಬಲ್ಲಾಳ, ಬಿಟ್ಟಿದೇವ, ಒಂದನೆಯ ಉದಯಾದಿತ್ಯ ಮೂವರು ಗಂಡು ಮಕ್ಕಳು. ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ವಿಕ್ರಮಾದಿತ್ಯರಾಯ ಭಾಗವಹಿಸುವ ಸಮರಗಳಲ್ಲೆಲ್ಲ ಸೇನಾಧಿಪತ್ಯ ವಹಿಸುತ್ತಿದ್ದು ಎರೆಯಂಗದೇವನಿಲ್ಲದೆ, ವಿಕ್ರಮಾದಿತ್ಯನ ಒಂದು ಸಮರವೂ ನಡೆಯುತ್ತಿರಲಿಲ್ಲ. ವಿಕ್ರಮಾದಿತ್ಯನೇ ಸ್ವತಃ ಎರೆಯಂಗದೇವ ನನ್ನ ಬಲಗೈ ಎಂದೇ ಹೇಳಿಕೊಳ್ಳುತ್ತಿರುತ್ತಾನೆ. ಇವರ ಸಾಮಂತಗಿರಿಯ ಗಂಗವಾಡಿಯ ಅಧಿಪತ್ಯವನ್ನು ಗಂಗಪೆರ್ಮಾಡಿಗೆ ಕೊಟ್ಟಾಗ ಸಾಕಷ್ಟು ನೊಂದುಕೊಂಡ ಎರೆಯಂಗದೇವ ನಂಬಿಕೆ, ಸ್ನೇಹ, ಸೇವೆ ಇದಾವುದಕ್ಕೂ ಬೆಲೆಯಿಲ್ಲದ ಹಾಗಾಯಿತು. ನಮ್ಮ ಬದುಕಿನ ನಂಬಿಕೆಯೇ ಕಡಿದುಹೋದಂತಾಯಿತೆಂದು ಕೊರಗುತ್ತಾನೆ. ಚಕ್ರವರ್ತಿಗಳನ್ನು ಭೇಟಿಯಾದ ಎರೆಯಂಗದೇವ ತಾವಿಂದು ದೋರಸಮುದ್ರಕ್ಕೆ ಹೋಗಲು ಅಪ್ಪಣೆ ಕೊಡಬೇಕೆಂದು ಕೇಳಿ ಬಳ್ಳಿಗಾಮೆಯನ್ನು ಬಿಟ್ಟು ಹೊರಡುವನು. ತದನಂತರ ಲೇಖಕರು ಆತನ ಆಡಳಿತದ ಕುರಿತು ವಿಸ್ತಾರವಾಗಿ ತಿಳಿಸದೆ 'ಕೀರ್ತಿನಾರಾಯಣ' ಕಾದಂಬರಿಯಲ್ಲಿ ಎರೆಯಂಗದೇವ ಮತ್ತು ಆತನ ತಂದೆ ವಿನಯಾದಿತ್ಯ ಇಬ್ಬರೂ ಒಬ್ಬರ ಬೆನ್ನ ಹಿಂದೆ ಮತ್ತೊಬ್ಬರು ಕಣ್ಣುಮುಚ್ಚಿ ಹೊಯ್ಸಳ ಸಾಮ್ರಾಜ್ಯ ಲಕ್ಷ್ಮೀಯನ್ನು ಅನಾಥಳನ್ನಾಗಿ ಮಾಡಿ ಹೋದರೆಂದು ತಿಳಿಸಿದ್ದಾರೆ.

೬.೧.೪ ವಿಷ್ಣುವರ್ಧನ :

ವಿಷ್ಣುವರ್ಧನನ ತಾತ ವಿನಯಾದಿತ್ಯ. ತಂದೆ ಎರೆಯಂಗದೇವ, ತಾಯಿ ಏಚಲಾದೇವಿ, ಸೋದರರು ಬಲ್ಲಾಳ, ಉದಯಾದಿತ್ಯ. ವಿಷ್ಣುವರ್ಧನನ ಮೊದಲ ಹೆಸರು ಬಿಟ್ಟಿದೇವ. ಎರೆಯಂಗದೇವ ವಿಷ್ಣುವರ್ಧನನಿಗೆ ಚಕ್ರವರ್ತಿ ವಿಕ್ರಮಾದಿತ್ಯನಿಗೆ ನಮಸ್ಕರಿಸಲು ಸೂಚಿಸಿದಾಗ ಒಲ್ಲದ ಮನಸ್ಸಿನಿಂದ ಬಾಗಿ ನಮಸ್ಕರಿಸುವ ರೀತಿಯನ್ನು ಕಂಡು ಪ್ರಧಾನಾಮಾತ್ಯ ಕಾಳಿದಾಸಯ್ಯ ನಿಮ್ಮ ಕುಮಾರರಿಗೆ ಸರಿಯಾಗಿ ವಿದ್ಯಾಭ್ಯಾಸದ ಕ್ರಮ ನಡೆಯುತ್ತಿದೆಯೇ ಎಂದು ಅವಮಾನಿಸಿ ಗುರುಗಳಿಗೆ ವಿನಯವನ್ನು ಹೇಳಿ ಕೊಡುವಂತೆ ಹೇಳುವನು. ಆತನ ಮಾತನ್ನು ಕೇಳಿ ಕೋಪಗೊಂಡ ವಿಷ್ಣುವರ್ಧನ ವಿನಯವನ್ನು ಕಲಿಯಲು ನಾವು ಬೌದ್ಧ ಸನ್ಯಾಸಿಗಳಲ್ಲ ಕ್ಷತ್ರಿಯರು. ಅದನ್ನು ಕಲಿಸುವ

ಅಗತ್ಯವಿಲ್ಲವೆಂದು ಗುರುಗಳು ತಮಗದನ್ನು ಹೇಳಿಕೊಟ್ಟಿಲ್ಲ ಎನ್ನುವನು. ಇವರ ಮಂಡಲಾಧಿಪತ್ಯದ ಅಧಿಕಾರವನ್ನು ಕಿತ್ತು ಗಂಗಪೆರ್ಮಾಡಿಯರಿಗೆ ಗಂಗವಾಡಿಯ ಅಧಿಕಾರವನ್ನು ನೀಡಿದಾಗ ನೊಂದುಕೊಂಡ ಏಚಲೆ ಕಣ್ಣೀರು ಹಾಕುತ್ತಾಳೆ. ತಾಯಿಯನ್ನು ಸಮಾಧಾನಪಡಿಸುತ್ತ ವಿಷ್ಣುವರ್ಧನ ತಾನು ಚಕ್ರವರ್ತಿಯಾಗಿ ಬಳ್ಳಿಗಾಮೆಯನ್ನು ಆಳುತ್ತ ನೂರು ಸಾಮಂತರನ್ನು ಹೆಡೆಮುರಿಕಟ್ಟಿ ತರುವುದಾಗಿ ಪ್ರತಿಜ್ಞೆ ಮಾಡುವನು.

ಬಿಟ್ಟಿದೇವನಿಗೆ ವಿಷ್ಣುವರ್ಧನ ಎಂದು ಹೆಸರಿಟ್ಟವರು ವಿಶಿಷ್ಟಾದ್ವೈತ ವೇದಾಂತದ ಪ್ರಮುಖ ಪ್ರತಿಪಾದಕರೂ ಆಚಾರ್ಯ ಪರಂಪರೆಯ ಪ್ರಮುಖರಲ್ಲಿ ಒಬ್ಬರಾದ ಶ್ರೀರಾಮಾನುಜಾಚಾರ್ಯರು. ಬಲ್ಲಾಳ ಮತ್ತು ವಿಷ್ಣುವರ್ಧನ ಇಬ್ಬರೂ ರಾಮ ಲಕ್ಷ್ಮಣರಂತೆ ಅನ್ಯೋನ್ಯವಾಗಿದ್ದರು. ಇಬ್ಬರೂ ಒಟ್ಟಿಗೆ ದಂಡಯಾತ್ರೆಗೆ ಹೋಗುತ್ತಿದ್ದರು. 'ಈತನಿಗೆ 'ಕಲಿಯುಗ ಪಾರ್ಥ', 'ಕೀರ್ತಿನಾರಾಯಣ ವಿಕ್ರಮಗಂಗ', 'ತಲಕಾಡುಗೊಂಡ', 'ನೊಳಂಬವಾಡಿಗೊಂಡ', 'ಮಲೆಪೆರುಳ್ ಗೊಂಡ' ಎಂಬ ಬಿರುದುಗಳನ್ನು ವಿಷ್ಣುವರ್ಧನನು ಧರಿಸಿದ್ದನು. ಶೌರ್ಯ, ಪರಾಕ್ರಮ, ರಣೋತ್ಸಾಹ, ಸ್ವಾತಂತ್ರ್ಯಪ್ರಿಯತೆ, ರಾಜ್ಯವಿಸ್ತರಣೆ, ದಕ್ಷ ಆಡಳಿತ, ಪ್ರಜಾವಾತ್ಸಲ್ಯ, ಅನುಕರಣೀಯ ಧಾರ್ಮಿಕ ನೀತಿ, ಕಲೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ಮೊದಲಾದ ಮಹತ್ಸಾಧನೆಗಳಿಂದ ವಿಷ್ಣುವರ್ಧನನು ಹೊಯ್ಸಳ ಸಂತತಿಯ ಅಷ್ಟೇಕೆ ಕನ್ನಡ ನಾಡಿನ ಅತಿಮುಖ್ಯ ಕೀರ್ತಿಶೇಷ ಪ್ರಭುಗಳಲ್ಲಿ ಒಬ್ಬನಾಗಿದ್ದಾನೆ'[೮] (ಸರಸ್ವತಿ ಎನ್, ಶಿಲ್ಪಶ್ರೀ ಸಿ.ಎನ್(ಸಂ), ೨೦೧೧, ಪುಟ-೨೭) ಎಂದು ಇತಿಹಾಸಕಾರರು ಹಾಡಿ ಹೊಗಳಿದ್ದಾರೆ. 'ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲದೇವಿ. ಇವಳು ಪ್ರಸಿದ್ಧ ನೃತ್ಯಗಾತಿ ಆಗಿದ್ದಳು. ನೃತ್ಯವೆಂದರೆ ಶಾಂತಲೆ. ಶಾಂತಲೆ ಎಂದರೆ ನೃತ್ಯ ಎಂಬಂತಿತ್ತು. ವಿಷ್ಣುವರ್ಧನನಿಗೆ ಶಾಂತಲದೇವಿಯಲ್ಲಿ ಬಲ್ಲಾಳ ಮತ್ತು ಹರಿಯಲದೇವಿ ಜನಿಸಿದರು. ಲಕ್ಷ್ಮೀದೇವಿ, ಒದ್ಮಲದೇವಿ, ರಾಜಲದೇವಿ, ಕಿರಿಯ ಶಾಂತಲದೇವಿ ಮತ್ತು ದೇವಿಕೀದೇವಿ ವಿಷ್ಣುವರ್ಧನನ ಇತರ ಪತ್ನಿಯರು'[೯] (ರಮೇಶ ಬೆ.ಗೋ., ೨೦೧೧, ಪುಟ-೩೦) ಎಂದು ಪ್ರಸ್ತಾಪಿಸಲ್ಪಟ್ಟಿದೆ.

ತ.ರಾ.ಸು ರವರು ವಿಷ್ಣುವರ್ಧನ ಪಟ್ಟಾಭಿಷಕ್ತನಾದಾಗ ಆತನ ವಿಜಯದ ಸಾಧನೆಗಳನ್ನು ಕುರಿತು ಕೀರ್ತಿನಾರಾಯಣ ಕಾದಂಬರಿಯಲ್ಲಿ ಬಹು ಸುಂದರವಾಗಿ ವಿವರಿಸಿದ್ದಾರೆ. ತಂದೆಯಾದ ಎರೆಯಂಗದೇವ ನಿಧನನಾದ ನಂತರ ಬಲ್ಲಾಳ ಸಿಂಹಾಸನವೇರಿದರೂ ಸಹ ಮಕ್ಕಳಿರದ ಆತ ಅಕಾಲ ಮೃತ್ಯುವಿಗೆ ಒಳಗಾಗಿ ವಿಷ್ಣುವರ್ಧನ ಸಿಂಹಾಸನವೇರುತ್ತಾನೆ. ಬಲ್ಲಾಳರಾಯನ ಕೊನೆಯ ಆಸೆಯಂತೆ ನೀಲಗಿರಿಯಿಂದ ಕೃಷ್ಣಾನದಿಯವರೆಗಿನ ಕನ್ನಡ ನಾಡನ್ನು ಒಂದಾಗಿ ಕಟ್ಟಬೇಕೆಂಬ ಮಾತಿನಂತೆ ಸೈನ್ಯದ ಸಿದ್ಧತೆ ನಡೆಸುತ್ತಿರುವ ಸಂದರ್ಭದಲ್ಲಿ ಬಳ್ಳಿಗಾಮೆಯಿಂದ ಹೆಗ್ಗಡೆಯವರ

ಸಲಹೆಯಂತೆ ಗೌರಾಚಾರಿಯೆಂಬ ಸಂಶೋಧಕ ಬಂದು ರಥದ ಚಕ್ರಗಳು ಎಂತಹ ತಗ್ಗು ದಿಣ್ಣೆಯ ನೆಲಗಳಿದ್ದರೂ ಸಹ ಯಾವುದೇ ಅಡೆತಡೆಯಿಲ್ಲದೆ ಸರಾಗವಾಗಿ ಓಡುವಂತೆ ತಯಾರಿಸುತ್ತಾನೆ. ವಿಷ್ಣುವರ್ಧನ ಸೈನ್ಯಕ್ಕೆ ವಿಶ್ರಾಂತಿ ಕೊಡದೆ ಹೋರಾಡುತ್ತಾನೆ. ಜನನಾಥಪುರವನ್ನು ವಶಪಡಿಸಿಕೊಂಡು ತಲಕಾಡಿನತ್ತ ಪ್ರಯಾಣ ಬೆಳೆಸುತ್ತಾನೆ. ತಲಕಾಡಿನ ಮೇಲೆ ದಾಳಿ ಮಾಡಲು ಸೇನೆಯ ನೇತೃತ್ವವನ್ನು ಗಂಗರಾಜರು ವಹಿಸಿಕೊಳ್ಳುತ್ತಾರೆ. ಜನನಾಥಪುರದ ಬೆಸ್ತ ಜನರಿಂದ ತಲಕಾಡಿನ ಹೊಳೆಬದಿಯ ಕೋಟೆಯ ವಿವರಗಳನ್ನು ಅರಿತುಕೊಂಡ ಗಂಗರಾಜರು ಸೇನೆಯನ್ನು ನಡೆಯಿಸುತ್ತಾರೆ. ಅದಿಯಮನನ್ನು ಸೆರೆಹಿಡಿಯುತ್ತಾರೆ. ಗಂಗವಾಡಿಯ ಜನರಿಗೆ 'ಚೋಳರು ಹೇಗೆ ಮಾಡಿ ಹಾಳಾದರೋ, ಹೊಯ್ಸಳರು ಅದೇ ದಾರಿ ಹಿಡಿದು ನಶಿಸಿದರು ಎಂದು ಅನ್ನದಿರಲಿ. ಚೋಳರು ಹಾಳು ಮಾಡಿದರು; ಹೊಯ್ಸಳರು ಕಟ್ಟಿ ಬೆಳೆಸಿದರು ಎಂಬ ಕೀರ್ತಿ ಬರುವಂತೆ ನಡೆದುಕೊಳ್ಳಿ. ಯಾವ ಸಾಮ್ರಾಜ್ಯವೂ ಚಿರವಲ್ಲ; ಚಿರವಾದದ್ದು ಒಳ್ಳೆಯ ಹೆಸರೊಂದೇ ಅದಕ್ಕಾಗಿ ಶ್ರಮಿಸೋಣ. ಆ ಮಾರ್ಗದಲ್ಲಿ ಗೆಲುವು ಬಂದರೆ ಬರಲಿ, ಸಾವು ಬಂದರೂ ಶ್ರೇಯಸ್ಕರವೇ'[೧೦] (ಸುಬ್ಬರಾಯರು ತ.ರಾ, ೧೯೯೭, ಕೀರ್ತಿನಾರಾಯಣ, ಪುಟ-೧೬೯) ಎಂದು ಹೇಳುತ್ತ ಈ ಗಂಗವಾಡಿ ನಮ್ಮದಲ್ಲ; ನಿಮ್ಮದು. ಇಲ್ಲಿನ ಭಂಡಾರವೆಲ್ಲವೂ ನಿಮ್ಮದೇ ಚೋಳರು ವಿನಾಶಪಡಿಸಿದ ಕಾರ್ಯವನ್ನು ಸರಿಪಡಿಸಲು ಇದನ್ನು ವಿನಿಯೋಗಿಸಿ ಎಂದು ಹೇಳುವನು. ಕನ್ನಡಿಗರು ಧರ್ಮಕ್ಕೆ ಶರಣಾಗಿ ನಡೆದುಕೊಂಡು ಕೀರ್ತಿಕಾಮಿಗಳಾಗಿ ಬಾಳಿ ಎಂದು ಹರಸುವನು.

೬.೧.೫ ಹರಿಹರರಾಯರು :

'ಚಂದ್ರವಂಶಕ್ಕೆ ಸೇರಿದ ಯದುಕುಲದ ಬುಕ್ಕ ಮತ್ತು ಮಗಂಬಿಕಾ ದಂಪತಿಗಳಿಗೆ ಸಂಗಮನ ಪತ್ನಿ ಮಾನಾಂಬಿಕೆಯ ಗರ್ಭದಿಂದ ಹರಿಹರ, ಕಂಪ, ಬುಕ್ಕ, ಮಾರ ಮತ್ತು ಮುದ್ದ ಎಂಬ ಐವರು ಮಕ್ಕಳು ಜನಿಸಿದರು. (ಮಾನಾಂಬಿಕೆಯನ್ನು ತೀರ್ಥಹಳ್ಳಿ ಶಾಸನದಲ್ಲಿ 'ಕಾಮಾಂಬಿಕೆ' ಎಂದೂ ಹೊಳೆನರಸೀಪುರ ಶಾಸನದಲ್ಲಿ 'ಶಾರದೆ' ಎಂದೂ ಚಾಮರಾಜನಗರದ ಶಾಸನದಲ್ಲಿ 'ಕಾಮಾಯಿ' ಎಂದೂ ಕರೆಯಲಾಗಿದೆ)'[೧೧] (ನಂಜುಂಡಸ್ವಾಮಿ ಎ.ಎಸ್, ೨೦೦೯, ಪುಟ-೨೩) ಹರಿಹರರಾಯರು ಆನೆಗೊಂದಿ ಸಂಸ್ಥಾನದ ರಾಜ ಜಂಬುಕೇಶ್ವರನ ಆಸ್ಥಾನದಲ್ಲಿದ್ದು ಸುಲ್ತಾನರು ಅದನ್ನು ವಶಪಡಿಸಿಕೊಳ್ಳುತ್ತಾರೆ. ಆನೆಗೊಂದಿ ಪತನವಾದ ಮೇಲೆ ಹರಿಹರ ಬುಕ್ಕರು ಕಾಡುಕುರುಬರಂತೆ ವೇಷ ಧರಿಸಿ ಹಂಪೆಯ ಬೆಟ್ಟ ಗುಡ್ಡಗಳಲ್ಲಿ ತಲೆಮರೆಸಿಕೊಳುತ್ತಾರೆ. ಜಂಬುಕೇಶ್ವರ ದೊರೆಯ ದುರ್ಮರಣ ಹರಿಹರನನ್ನು ಮತಿಶೂನ್ಯನಾಗಿ ಮಾಡುತ್ತದೆ. ತಮ್ಮನಾದ ಬುಕ್ಕನೇ ಆತನಿಗೆ ಧೈರ್ಯ ತುಂಬುವನು. ಅಣ್ಣ ತಮ್ಮಂದಿರಿಬ್ಬರು ಶ್ರೀ ಬಲ್ಲಾಳರಾಯನ ಸಲಹೆಯ ಮೇರೆಗೆ ಶ್ರೀ ವಿದ್ಯಾರಣ್ಯರ

ಹತ್ತಿರ ಬಂದು ಆನೆಗೊಂದಿಗೆ ಒದಗಿದ ದುಃಸ್ಥಿತಿಯ ಕುರಿತು ಹೇಳುವರು. ಶ್ರೀ ವಿದ್ಯಾರಣ್ಯರ ಕೃಪಾಶೀರ್ವಾದದಿಂದಲೇ ಆನೆಗೊಂದಿಯನ್ನು ಸುಲ್ತಾನರ ಕೈಯಿಂದ ವಶಪಡಿಸಿಕೊಂಡ ಹರಿಹರರಾಯನಿಗೂ ಪದ್ಮಾವತಿಗೂ ವಿವಾಹ ಏರ್ಪಡುವುದು.

'ಕ್ರಿ.ಶಕ ೧೩೩೬ ರ ಏಪ್ರಿಲ್ ೧೮ ನೇ ದಿನಾಂಕದಂದು ರಾಜ್ಯಾಧಿಪತಿಯಾಗಿ ಪಂಪಾವಿರೂಪಾಕ್ಷನ ದಿವ್ಯ ಸನ್ನಿಧಿಯಲ್ಲಿ ಹರಿಹರರಾಯರು ವಿಕ್ರಮಾದಿತ್ಯನ ವಜ್ರ ಸಿಂಹಾಸನವನ್ನು ಏರಿದರು. ಅದೇ ಶುಭಗಳಿಗೆಯಲ್ಲಿ ಶ್ರೀ ವಿರೂಪಾಕ್ಷಸ್ವಾಮಿ ಆಲಯದ ಹತ್ತಿರ "ವಿಜಯನಗರ"ವೆಂಬ ಹೊಸ ರಾಜಧಾನಿಗೆ ಬುನಾದಿ ಹಾಕಲಾಯಿತು.'[೧೨] (ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ೨೦೦೯, ಪುಟ–೧೨) ಸತತ ನಾಲ್ಕು ವರ್ಷಗಳ ಕಾಲ ರಾಜಧಾನಿಯು ಕಟ್ಟಲ್ಪಟ್ಟು ಅದಕ್ಕೆ "ವಿಜಯನಗರ" ಎಂಬ ಹೆಸರನ್ನಿಡುವರು. ಹರಿಹರರಾಯರು ಅರಮನೆಯಲ್ಲಿರುವುದಕ್ಕಿಂತ, ಸುತ್ತಲಿನ ಶತ್ರುಗಳನ್ನು ನಾಶಪಡಿಸಲು ಸತತವಾಗಿ ಹೊರಗೆ ಇರುವುದು ಹೆಚ್ಚು. ತನ್ನ ಅಂತ್ಯಕಾಲ ಸಮೀಪಿಸುತ್ತಿದೆ ಎಂದು ಬುಕ್ಕರಾಯರಿಗೆ ರಾಜ್ಯಾಧಿಕಾರ ವಹಿಸಿಕೊಳ್ಳಲು ಹೇಳಿ ಶ್ರೀ ವಿದ್ಯಾರಣ್ಯರನ್ನು ಭೇಟಿಯಾಗಿ ತನಗೆ ಅನುಮತಿ ನೀಡಬೇಕೆಂದು ಕೇಳಿಕೊಂಡು ಶ್ರೀ ಗುರುಗಳ ಚರಣಗಳ ಮೇಲೆ ಮಸ್ತಕವಿಟ್ಟು "ಪಂಪಾಪತಿ ಜನ್ಮ ಜನ್ಮಕ್ಕೂ ತಮ್ಮನ್ನೇ ಗುರುಗಳಾಗಿ ಕರುಣಿಸಲಿ" ಎಂದು ಬೇಡಿಕೊಳ್ಳುವರು. ಇಮ್ಮಡಿ ಹರಿಹರರಾಯನನ್ನು ಹತ್ತಿರಕ್ಕೆ ಕರೆದು ನಿನ್ನ ತಾಯಂದಿರಾದ ಪದ್ಮಾವತಿ, ಗೌರಾಂಬಿಕೆಯನ್ನು, ನಮ್ಮ ತಾಯಿ ಭುವನೇಶ್ವರಿಯನ್ನು ಸರಿಯಾಗಿ ನೋಡಿಕೊಳ್ಳುವಂತೆ ಹೇಳಿ ಅಸ್ತಂಗತನಾದನು. ಇವನು ಕ್ರಿ.ಶ ೧೩೫೬ ರಲ್ಲಿ ತೀರಿಹೋಗಿರಬೇಕೆಂದು ಅಭಿಪ್ರಾಯಪಡುವರು.

೬.೧.೬ ಬುಕ್ಕರಾಯರು :

ಬುಕ್ಕರಾಯ ಅಣ್ಣನ ಎಲ್ಲ ಕಾರ್ಯಗಳಲ್ಲೂ ಒತ್ತಾಸೆಯಾಗಿ ನಿಲ್ಲುವನು. ಹರಿಹರರಾಯ ಇಹಲೋಕ ತ್ಯಜಿಸಿದ ಮೇಲೆ ಶ್ರೀಗುರು ವಿದ್ಯಾರಣ್ಯರ ನೇತೃತ್ವದಲ್ಲಿ ಬುಕ್ಕರಾಯನಿಗೆ ಪಟ್ಟಾಭಿಷೇಕವಾಗುವುದು. ಏಕೆಂದರೆ ಹರಿಹರರಾಯನಿಗೆ ಮಕ್ಕಳಿರಲಿಲ್ಲ. ಕಾರಣ ಸಹೋದರನಾದ ಬುಕ್ಕರಾಯನು ಉತ್ತರಾಧಿಕಾರಿಯಾಗುವನು. ಈತ ಸುಮಾರು ೧೩೫೬ ರಲ್ಲಿ ಪಟ್ಟಕ್ಕೆ ಬಂದನು.

ಬುಕ್ಕರಾಯನ ಕಾಲದಲ್ಲಿ ವಿಜಯನಗರಕ್ಕೂ ಬಹುಮನಿ ರಾಜ್ಯಕ್ಕೂ ಆಗಾಗ ಯುದ್ಧ ನಡೆಯುತ್ತಲೇ ಇದ್ದಿತು. ಅವರನ್ನು ಮಟ್ಟ ಹಾಕುವಲ್ಲಿ ಯಶಸ್ವಿಯಾಗುತ್ತಾನೆ. ಬುಕ್ಕರಾಯನ ಆಡಳಿತಾವಧಿಯಲ್ಲಿ ಶ್ರೀವೈಷ್ಣವರಿಗೂ ಮತ್ತು ಜೈನರಿಗೂ ಮಧ್ಯದಲ್ಲಿ ಭಿನ್ನಾಭಿಪ್ರಾಯ ಉಂಟಾಗುವುದು. ಒಂದೇ ಜಾಗದಲ್ಲಿ ಗೋಪಾಲಕೃಷ್ಣಸ್ವಾಮಿಯ ದೇವಾಲಯ ಕಟ್ಟಿಸಬೇಕೆಂದು ಜೈನರು. ಈ ವಾದವು ಶ್ರೀ ಬುಕ್ಕರಾಯರ ಹತ್ತಿರ ಹೋಗುವುದು. ಆಗ ಯಾವ ಧರ್ಮೀಯವರು

ನೋವಾಗದಂತೆ, ಮೇಲು ಕೀಳೆಂಬ ಭಾವನೆ ಬರದಂತೆ ತೀರ್ಮಕೊಡುತ್ತಾನೆ. 'ಒಂದು ತುಂಡು ಭೂಮಿಗಾಗಿ ನೀವಿಬ್ಬರೂ ಜಗಳವಾಡಿ, ಇಡಿಯ ವಿಜಯನಗರವನ್ನು ರಣಕುಂಡ ಮಾಡಲು ಸಿದ್ಧವಾಗಿರುವುದು ಶೋಚನೀಯವಾಗಿದೆ. ಇಡಿಯ ದಕ್ಷಿಣ ಹಿಂದೂಸ್ತಾನವನ್ನೇ ವ್ಯಾಪಿಸಿರುವ ವಿಜಯನಗರ ಸಂಸ್ಥಾನದಲ್ಲಿ ಒಂದು ದೇವಾಲಯ, ಒಂದು ಬಸದಿಗೆ ಸ್ಥಳವಿಲ್ಲವೇ ಅದಕ್ಕಾಗಿ ನೀವು ಹೊಡೆದಾಡಿ, ದೇಶವನ್ನೇ ಕ್ಷೋಭೆಗೊಳಗಾಗಿಸಬೇಕೇ? ನೀವು ನೀವೇ ಒಮ್ಮತಿ ಸಮ್ಮತಿಯಿಂದ ನಿರ್ಧರಿಸಬೇಕಾದ ಅಲ್ಪ ವಿಷಯದಲ್ಲಿ ನಾವು ಪ್ರವೇಶಿಸಬೇಕಾಗಿ ಬಂದಿರುವುದು ಶೋಚನೀಯ'[೧೩] (ಕೃಷ್ಣರಾಯರು ಅ.ನ, ೨೦೦೪, ವಿಜಯ ವಿದ್ಯಾರಣ್ಯ ಮತ್ತು ತಪೋಬಲ, ಪುಟ-೨೬೯) ಎಂಬ ಮಾತುಗಳನ್ನು ಹೇಳುತ್ತ ಜೈನ, ಬೌದ್ಧ, ಹಿಂದೂ, ಮುಸ್ಲಿಂ, ಧರ್ಮಗಳೆಲ್ಲವೂ ಶ್ರೀ ಭುವನೇಶ್ವರಿಯ ಆಭರಣಗಳು. ಚಂದ್ರ ಸೂರ್ಯರಿರುವವರೆಗೆ ಜೈನ ಮತವನ್ನು ಶ್ರೀವೈಷ್ಣವರು, ವೈಷ್ಣವ ಮತವನ್ನು ಜೈನರೂ ರಕ್ಷಿಸಬೇಕೆಂದು ಹೇಳುವನು. ಈ ತೀರ್ಪು ಇವನಲ್ಲಿರುವ ಧಾರ್ಮಿಕ ಸಹಿಷ್ಣುತೆಯನ್ನು ಎತ್ತಿ ತೋರಿಸುತ್ತದೆ.

ಯುವರಾಜಕುಮಾರರಿಗೆ ಪ್ರಜೆಗಳೇ ನಮ್ಮ ಮಕ್ಕಳು ಅವರ ಹಿತವೇ ನಮ್ಮ ಹಿತ. ಪ್ರಜೆಗಳ ಸುಖವೇ ನಮ್ಮ ಸುಖ. ಪ್ರಜೆಗಳ ಶಕ್ತಿಯ ಮೊತ್ತವೇ ಪ್ರಭು. ಪ್ರಜೆಗಳಿಗಿಂತ ಪ್ರಭು ದೊಡ್ಡವನಲ್ಲ, ನಾವು ಪ್ರಭುಗಳೆಂಬ ಅಹಂಕಾರ ಎಂದಿಗೂ ನಮಗೆ ಬರಬಾರದು ಎಂದು ಹೇಳುತ್ತ ಶ್ರೀಗುರುಗಳ ಪಾದಗಳ ಮೇಲೆ ತಲೆಯಿಟ್ಟು ಆಶೀರ್ವಾದ ಪಡೆದುಕೊಂಡು ಇಹಲೋಕ ತ್ಯಜಿಸಿದರು. ಇಪ್ಪತ್ತು ವರ್ಷಗಳಷ್ಟು ಕಾಲ ರಾಜ್ಯಭಾರ ಮಾಡಿದ ಒಂದನೆಯ ಬುಕ್ಕನು ಸಂಗಮ ವಂಶದ ಅರಸರಲ್ಲಿ ಪ್ರಖ್ಯಾತನು. ಅವನನ್ನು ವಿಜಯನಗರ ಸಾಮ್ರಾಜ್ಯದ ನಿಜವಾದ ಶಿಲ್ಪಿ ಎನ್ನಬಹುದು.

೬.೧.೭ ಇಮ್ಮಡಿ ಹರಿಹರರಾಯರು :

ಬುಕ್ಕರಾಯರ ನಿಧನಾನಂತರ ಅವರ ಮಗನಾದ ಇಮ್ಮಡಿ ಹರಿಹರರಾಯರಿಗೆ ಪಟ್ಟಾಭಿಷೇಕವಾಗುವುದು. 'ಇಮ್ಮಡಿ ಹರಿಹರರಾಯನನ್ನು ಯಳಂದೂರು ಶಾಸನದಲ್ಲಿ ಹರಿಯಪ್ಪ ಒಡೆಯರ್ ಎಂದು ಕರೆಯಲಾಗಿದೆ. ಮಳವಳ್ಳಿ ಶಾಸನಗಳಲ್ಲಿ ಇಮ್ಮಡಿ ಹರಿಹರನನ್ನು ವೀರಹರಿಹರೇಶ್ವರ, ವೀರ ಹರಿಹರ ಮಹಾರಾಯ ಎಂಬುದಾಗಿಯೂ ಕರೆಯಲಾಗಿದೆ. ಬೇಲೂರಿನ ಶಾಸನಗಳು ಇಮ್ಮಡಿ ಹರಿಹರನು ಚೋಳ, ಕೇರಳ, ಪಾಂಡ್ಯರ ಮೇಲೆ ಯುದ್ಧ ಮಾಡಿ ವಿಜಯಿಯಾದನೆಂದೂ ವರ್ಣಿಸಿವೆ'[೧೪] (ನಂಜುಂಡಸ್ವಾಮಿ ಎ.ಎಸ್, ೨೦೦೯, ಪುಟ-೩೪) ಪ್ರಾಪ್ತವಯಸ್ಸಿಗೆ ಬಂದ ಇಮ್ಮಡಿ ಹರಿಹರರಾಯರ ವಿವಾಹ ಮುಹೂರ್ತ ನಿಶ್ಚಯವಾದೊಡನೆ ಮೊದಲನೆಯ ಆಮಂತ್ರಣ ಪತ್ರಿಕೆ ಶೃಂಗೇರಿಗೆ ಕಳಿಸಲ್ಪಟ್ಟು ಶ್ರೀ ವಿದ್ಯಾರಣ್ಯರು, ಸಾಯಣರು ಮತ್ತು

ಶ್ರೀಕಂಠನೊಡನೆ ವಿಜಯನಗರಕ್ಕೆ ಬರುವರು. ಹತ್ತು ದಿನಗಳ ಕಾಲ ವಿವಾಹ ಮಹೋತ್ಸವ ಕಾರ್ಯ ನಡೆಯುವುದು. ಮೂರು ವರ್ಷಗಳ ಕಾಲ ಯಾವ ಗಲಭೆಯೂ ಇಲ್ಲದೆ ಸಾಗಿತು. ಪಂಪಾದೇವಿಯ ಮಗನಿಗೆ ಇಮ್ಮಡಿ ಬುಕ್ಕರಾಯನೆಂದೂ, ಮಲ್ಲಾದೇವಿಯ ಮಗನಿಗೆ ದೇವರಾಯನೆಂದೂ ನಾಮಕರಣ ಮಾಡಿದರು. ಶ್ರೀ ವಿದ್ಯಾರಣ್ಯರು ಮಕ್ಕಳಿಬ್ಬರನ್ನು ತಮ್ಮ ತೊಡೆಯ ಮೇಲೆ ಕೂಡಿಸಿಕೊಂಡು ಅಜ್ಜಂದಿರ ಹಾಗೆ ಆಳ್ವಿಕೆ ಮಾಡಬೇಕೆಂದು, ರಾಮಲಕ್ಷ್ಮಣರಂತೆ ಬದುಕಿ ಬಾಳಬೇಕೆಂದು ಆಶೀರ್ವದಿಸುವರು.

ಇಮ್ಮಡಿ ಹರಿಹರನು ಎದುರಿಸಿದ ಒಂದು ದೊಡ್ಡ ಆಪತ್ತೆಂದರೆ ಬಹುಮನಿ ರಾಜ್ಯದ ವೈರತ್ವ ಶ್ರೀಗುರು ವಿದ್ಯಾರಣ್ಯರು ಕೈವಲ್ಯ ಪಡೆದ ನಂತರ ಇಮ್ಮಡಿ ಹರಿಹರರಾಯರ ಮನೋಸ್ಥಿತಿಯೇ ಬದಲಾಗುತ್ತದೆ. ತ್ಯಾಗದ ಕಲ್ಪವೃಕ್ಷದಂತಿದ್ದ ಶ್ರೀಗುರುಗಳೂ ಸಾವನ್ನು ಗೆಲ್ಲಲಾಗಲಿಲ್ಲವೆಂಬ ನೋವು ಅವರನ್ನು ಬಾಧಿಸುತ್ತದೆ. ವಿಜಯನಗರದಲ್ಲಿ ಕೈಕೊಂಡಿರುವ ನೀರಾವರಿ ಯೋಜನೆಯನ್ನು ನಾಶಗೊಳಿಸಲು ಕಪಟ ಸನ್ಯಾಸಿಯ ವೇಷ ಧರಿಸಿ ಬಂದಿದ್ದ ರೇಜಾಖಾನ್, ವಜೀರಅಹ್ಮದ್, ರಾಮಭಟ್ಟ ಮುಂತಾದವರನ್ನು ಸೆರೆ ಹಿಡಿದು ಕೆಲವರಿಗೆ ಪ್ರಭುಗಳು ಮರಣದಂಡನೆ ಶಿಕ್ಷೆ, ಕೆಲವರಿಗೆ ಗಡಿದಾಟಿಸುವ ಶಿಕ್ಷೆಯನ್ನು ವಿಧಿಸಿ, ರಾಮಭಟ್ಟರಿಗೆ ಶಿಕ್ಷೆ ನೀಡುವ ಅಧಿಕಾರವನ್ನು ಸಿಂಗಮಭಟ್ಟರಿಗೆ ಕೊಟ್ಟಾಗ ಅವರನ್ನು ಕ್ಷಮಿಸಿ ಅವರ ತಂತ್ರ ನೈಪುಣ್ಯತೆಯನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳುವನು. ಅದರಂತೆ ಆತನಿಗೆ ಕಾರಾಗೃಹ ಶಿಕ್ಷೆಯಾಗುವುದು. ಆದರೆ ರಾಮಭಟ್ಟ ಕಾರಾಗೃಹದಲ್ಲಿದ್ದರೂ ನೀರಾವರಿ ಯೋಜನೆಗೆ ಸಾಕಷ್ಟು ಸಹಾಯ ಮಾಡಿ ಪ್ರಭುಗಳ ಮನಸ್ಸಿಗೆ ಹತ್ತಿರವಾಗುತ್ತಾನೆ.

ಸುಲ್ತಾನರಿಗೂ ವಿಜಯನಗರದ ಅರಸರಿಗೂ ಯುದ್ಧ ಪ್ರಾರಂಭವಾಗಿ ಸುಲ್ತಾನರ ಸೈನ್ಯ ಧೂಳೀಪಟವಾಗಿ ವಿಜಯನಗರ ಜಯ ಸಾಧಿಸುತ್ತದೆ. ಆದರೆ ರಾಮಭಟ್ಟ ಮತ್ತು ಆತನ ಪತ್ನಿ ಹತರಾಗುತ್ತಾರೆ. ಕೆಲದಿನಗಳ ಬಳಿಕ ರಾಜಮಾತೆಯವರು ನಿಧನರಾಗುತ್ತಾರೆ. ಇದರಿಂದ ಮಹಾಪ್ರಭುಗಳಲ್ಲಿ ವೈರಾಗ್ಯ ತಲೆದೋರುತ್ತದೆ. ರಾಜ್ಯಾಡಳಿತವನ್ನು ಯುವರಾಜ ಬುಕ್ಕರಾಯರಿಗೆ ವಹಿಸಿಕೊಟ್ಟು ನಾಮಮಾತ್ರಕ್ಕೆ ಪ್ರಭುಗಳಾಗಿ ಉಳಿದುಕೊಳ್ಳುವರು. ಎರಡು ವರ್ಷಗಳ ನಂತರ ಪ್ರಭುಗಳ ಆರೋಗ್ಯ ಸ್ಥಿತಿ ಹದಗೆಟ್ಟು ಮಕ್ಕಳನ್ನೆಲ್ಲ ಕರೆಸಿಕೊಳ್ಳುತ್ತಾರೆ. 'ನಮ್ಮ ಕಾಲ ಮುಗಿದಿದೆ. ಇಂದೋ ನಾಳೆಯೋ ನಾವು ನಮ್ಮ ಸಾಮ್ರಾಜ್ಯಕ್ಕೆ ಕೊನೆಯ ನಮನ ಸಲ್ಲಿಸಿ, ಮುಂದಿನ ಯಾತ್ರೆ ಕೈಕೊಳ್ಳುತ್ತೇವೆ. ನಿಮ್ಮ ಅಣ್ಣಂದಿರಾದ ಇಮ್ಮಡಿ ಬುಕ್ಕರಾಯರನ್ನು ನಾವು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದೇವೆ. ನೀವು ನಾಲ್ವರೂ ರಾಮ, ಲಕ್ಷ್ಮಣ, ಭರತ, ಶತ್ರುಘ್ನರಂತಿರಬೇಕು. ರಾಜ್ಯದ

ಕೀರ್ತಿಯನ್ನು ವಿಸ್ತರಿಸಬೇಕು. ಲೋಭದಿಂದಾಗಲಿ, ರಾಜ್ಯದಾಹದಿಂದಾಗಲಿ, ಸ್ವಯೂಥ ಕಲಹಗಳಿಗೆ ಮನತೆತ್ತು ಸಾಮ್ರಾಜ್ಯದ ಹಿತಕ್ಕೆ ಕುಠಾರಪ್ರಾಯರಾಗಬೇಡಿ. ನಿಮ್ಮ ಹಿತ, ಸಂತೋಷ, ಅಭ್ಯುದಯ ದೊಡ್ಡದಲ್ಲ ಸಾಮ್ರಾಜ್ಯದ ಅಸ್ತಿತ್ವ ದೊಡ್ಡದು'[೧೫] (ಕೃಷ್ಣರಾಯರು ಅ.ನ, ೨೦೧೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ–೧೦೨) ಎಂದು ಹೇಳುತ್ತ ಶ್ರೀ ಇಮ್ಮಡಿ ಬುಕ್ಕರಾಯರಿಗೆ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣಬೇಕೆಂದು ಹೇಳಿ ಇಹಲೋಕದ ಯಾತ್ರೆ ಮುಗಿಸುವರು. 'ಇವರು ತಾರುಣನಾಮ ಸಂವತ್ಸರದಲ್ಲಿ ಕ್ರಿಶ ೧೪೦೪ ರ ಅಗಷ್ಟ್ ೩೧ ರ ಭಾನುವಾರದಂದು ವಿಧಿವಶರಾದರೆಂದು ಶಾಸನಗಳ ಆಧಾರದಿಂದ ಬಿ.ಎಲ್ ರೈಸ್ ಅವರು ತೀರ್ಮಾನಕ್ಕೆ ಬಂದಿದ್ದಾರೆ. ಎನ್ ವೆಂಕಟರಮಣಯ್ಯನವರ ಅಭಿಪ್ರಾಯದಲ್ಲಿ ಇಮ್ಮಡಿ ಹರಿಹರನು ಕ್ರಿಶ ೧೪೦೩ ರ ಉತ್ತರಾರ್ಧದಲ್ಲಿ ಅಸ್ವಸ್ಥನಾಗಿ, ೧೪೦೪ ರ ಅಗಷ್ಟ್ ೧೬ ರಂದು ಸ್ವರ್ಗಸ್ಥನಾದನು. ಬಿ.ಎಲ್ ರೈಸ್‌ರವರ ಅಭಿಪ್ರಾಯವನ್ನು ನಾವು ಸಮರ್ಥಿಸಬಹುದಾಗಿದೆ'[೧೬] (ನಂಜುಂಡಸ್ವಾಮಿ ಎ.ಎಸ್, ೨೦೦೯, ಪುಟ–೩೭) ಹೀಗೆ ಹಲವಾರು ಭಿನ್ನಾಭಿಪ್ರಾಯಗಳು ವಿದ್ವಾಂಸರಲ್ಲಿಯೇ ಇರುವುದನ್ನು ಕಾಣುತ್ತೇವೆ.

೬.೧.೮ ಇಮ್ಮಡಿ ಬುಕ್ಕರಾಯರು :

ಶ್ರೀ ಇಮ್ಮಡಿ ಹರಿಹರರಾಯರ ನಿಧನಾ ನಂತರ ಶ್ರೀ ಇಮ್ಮಡಿ ಬುಕ್ಕರಾಯರ ಪಟ್ಟಾಭಿಷೇಕವಾಗಿ ಒಂದು ತಿಂಗಳಾದರೂ ದೇವರಾಯ, ವಿರೂಪಾಕ್ಷರಾಯರು, ಚಿಕ್ಕರಾಯರು ರಾಜಧಾನಿ ಬಿಟ್ಟು ಕದಲದೆ ಇದ್ದಾಗ ಬುಕ್ಕರಾಯರು ಆತಂಕಕ್ಕೆ ಒಳಗಾಗುತ್ತಾರೆ. ಅಣ್ಣ ತಮ್ಮಂದಿರ ಜಗಳದಲ್ಲಿ ಕೈಹಾಕಲಿಚ್ಛಿಸದ ಮುದ್ದಣ್ಣ ದಂಡನಾಯಕರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡುತ್ತಾರೆ. ಬುಕ್ಕರಾಯ ತಮ್ಮ ಸೋದರಮಾವ ಪಂಪಣ್ಣನನ್ನೇ ಮಹಾಮಂತ್ರಿಯಾಗಿ ನೇಮಿಸುತ್ತಾರೆ. ಪಂಪಣ್ಣ ಕ್ರೂರಿಯಾಗಿದ್ದು ದರ್ಪದಿಂದ ನಡೆದುಕೊಳ್ಳುತ್ತಿರುತ್ತಾನೆ. ಇದರಿಂದ ಬೇಸತ್ತು ಜನರು ವಿರೂಪಾಕ್ಷರ ಪಕ್ಷ ಸೇರಿ ಬುಕ್ಕರಾಯರ ವಿರುದ್ಧ ಸಂಚು ಮಾಡುತ್ತಾರೆ. ಒಂದು ದಿನ ದೊರೆ ಏಕಾಂಗಿಯಾಗಿದ್ದನ್ನು ಗಮನಿಸಿ ವಿರೂಪಾಕ್ಷರು ಸಶಸ್ತ್ರ ಸೈನಿಕರೊಂದಿಗೆ ಅರಮನೆ ಮುತ್ತಿ, ಬುಕ್ಕರಾಯನನ್ನು ಸೆರೆಹಿಡಿಯುತ್ತಾರೆ. ವಿರೂಪಾಕ್ಷರಾಯರು ಸಿಂಹಾಸನವೇರಿ ಚಕ್ರವರ್ತಿಗಳೆಂದು ಸಾರಿಕೊಂಡ ಕೆಲವೇ ತಿಂಗಳುಗಳಲ್ಲಿ ಸೈನ್ಯ ಕಟ್ಟಿಕೊಂಡು ಬಂದು ಬುಕ್ಕರಾಯರು ವಿರೂಪಾಕ್ಷರನ್ನು ಸಿಂಹಾಸನದಿಂದ ತಳ್ಳಿ ಮತ್ತೆ ಸಿಂಹಾಸನವೇರುವರು. ಒಂದೇ ವರ್ಷದಲ್ಲಿ ಜನ ದಂಗೆಯೆದ್ದು ದೇವರಾಯರಿಗೆ ನೀವು ರಾಜ್ಯಾಧಿಕಾರ ವಹಿಸಿಕೊಳ್ಳದಿದ್ದರೆ, ವಿಜಯನಗರದ ಕೀರ್ತಿ

ನಾಮಾವಶೇಷವಾಗುತ್ತದೆ ಎಂದಾಗ ದೇವರಾಯರು ಬುಕ್ಕರಾಯರನ್ನೂ, ಪಂಪಣ್ಣರನ್ನೂ ಸೆರೆಹಿಡಿದು ಹಾಸನ ಪ್ರಾಂತ್ಯಕ್ಕೆ ಸಾಗಿಸಿ ಅಧಿಕಾರ ವಹಿಸಿಕೊಳ್ಳುವನು.

೬.೧.೯ ದೇವರಾಯರು :

ದೇವರಾಯರು ಇಮ್ಮಡಿ ಹರಿಹರನ ಪುತ್ರರಾಗಿದ್ದು ಇವರಿಗೆ ಪ್ರತಾಪದೇವರಾಯ, ಪ್ರೌಢದೇವರಾಯ ಎಂಬ ಬಿರುದುಗಳಿದ್ದವು. ದೇವರಾಯನು ಜನಬಲ, ಸೈನ್ಯಬಲ ಕಟ್ಟಿಕೊಂಡು ಅರಮನೆಗೆ ಬಂದು ಬುಕ್ಕರಾಯರನ್ನೂ, ಪಂಪಣ್ಣರನ್ನು ಸೆರೆಹಿಡಿದು ಹಾಸನ ಪ್ರಾಂತ್ಯಕ್ಕೆ ಸಾಗಿಸಿ ೧೪೦೬ ರಲ್ಲಿ ಪಟ್ಟಾಭಿಷಕ್ತರಾಗುತ್ತಾರೆ. ಲಕ್ಷ್ಮೀಧರನನ್ನೂ, ಮಲ್ಲಪ್ಪ ಒಡೆಯರನ್ನೂ, ತಿಪ್ಪರಾಜರನ್ನೂ ಮಂತ್ರಿಗಳನ್ನಾಗಿ ನೇಮಿಸಿ ಆಡಳಿತದ ಕಡೆಗೆ ಸ್ವಲ್ಪವೂ ಗಮನಹರಿಸದೆ ಸುಖಲೋಲುಪದ ಜೀವನ ಸಾಗಿಸುತ್ತ, ಮದಿರಾ, ಮಾನಿನಿಯರ ಹೊರತಾಗಿ ಅವರಿಗೆ ಏನೂ ಬೇಡವಾಗುತ್ತದೆ. ಪ್ರಭುಗಳ ಮಡದಿಯರು ಸಹ ಗಂಡನ ವರ್ತನೆಯಿಂದ ಕಣ್ಣೀರಿಡುತ್ತಾರೆ. ಈತನಿಗೆ ದೇಮಾಂಬಿಕಾ ಮತ್ತು ಭೀಮಾದೇವಿ ಎಂಬ ರಾಣಿಯರಿದ್ದರೆಂದು ತಿಳಿದು ಬರುವುದು.

ದೇವರಾಯರು ರಾಜಧಾನಿಯನ್ನು ವಿಸ್ತಾರಗೊಳಿಸಿ, ಹದಿನೈದು ಮೈಲಿಗಳವರೆಗೆ ತುಂಗಭದ್ರೆಗೆ ಆಣೆಕಟ್ಟು ಹಾಕಿಸಿ, ಸಾವಿರಾರು ಎಕರೆ ಭೂಮಿ ಕೃಷಿಗೆ ಒದಗುವಂತೆ ಮಾಡಿದರು. ಬಹುಮನಿ ಸುಲ್ತಾನರಾದ ಫಿರೋಜ್‌ಷಹನು ವೇಲಮರು ಹಾಗೂ ಕೊಂಡವೀಡು ರೆಡ್ಡಿ ರಾಜ್ಯದ ಅರಸ ಪೆದ್ದ ಕೋಮಟ ವೇಮನೊಂದಿಗೆ ಮೈತ್ರಿ ಬೆಳೆಸಿಕೊಂಡು, ವಿಜಯನಗರದ ಮೇಲೆ ದಾಳಿ ಮಾಡಿದಾಗ ದೇವರಾಯರು ಆ ಸೈನ್ಯವನ್ನೆಲ್ಲ ಧ್ವಂಸ ಮಾಡಿದರು. ಸುಖಲೋಲುಪರಾಗಿದ್ದ ಪ್ರಭುಗಳು ವೀರರಾದುದನ್ನು ಕಂಡ ಜನ ಹರ್ಷಗೊಳ್ಳುತ್ತಾರೆ. ರಾಜಧಾನಿಯಲ್ಲೆಲ್ಲ ವಿಜಯೋತ್ಸವ ಆಚರಿಸುತ್ತಾರೆ. ದೇವರಾಯನ ಕಾಲದಲ್ಲಿ ಇಟಲಿ ದೇಶದ ಪ್ರವಾಸಿಯಾದ ನಿಕೋಲೋ ಕೊಂಟಿಯು ವಿಜಯನಗರಕ್ಕೆ ಭೇಟಿ ಇತ್ತನು. ವಿಜಯನಗರ ಪಟ್ಟಣವನ್ನು ವಿಸ್ತರಿಸಿದುದನ್ನು ತುಂಗಭದ್ರೆಯಲ್ಲಿ ಒಂದು ಭಾರೀ ಆಣೆಕಟ್ಟನ್ನು ಕಟ್ಟಿಸಿ ರಾಜಧಾನಿಗೆ ನೀರು ಸರಬರಾಜು ಮಾಡಲು ಮೇಲ್ಗಾಲುವೆಯನ್ನು ರಚಿಸಿದುದನ್ನು ತನ್ನ ಪ್ರವಾಸ ಕೃತಿಯಲ್ಲಿ ವಿವರಿಸಿದ್ದಾನೆ. ಕ್ರಿಶ ೧೪೨೨ ರಲ್ಲಿ ಅಸ್ತಂಗತರಾಗುತ್ತಾರೆ.

೬.೧.೧೦ ವಿಜಯರಾಯರು :

ಶ್ರೀ ದೇವರಾಯರು ನಿಧನರಾಗುವಾಗ ಉತ್ತರಾಧಿಕಾರಿಯೆಂದು ಶ್ರೀ ವಿಜಯರಾಯರನ್ನು ಘೋಷಿಸುತ್ತಾರೆ. ಆದರೆ ಅಷ್ಟೊಂದು ವೀರೋತ್ಸಾಹಿಯಾಗಿರದ, ಕಾವ್ಯಜೀವಿಯಾದ ಇವರು ತಮಗೆ ಪಟ್ಟಾಭಿಷೇಕ ಬೇಡವೆಂದೇ ನಿರಾಕರಿಸುತ್ತಾರೆ. ಆದರೆ ಲಕ್ಷ್ಮೀಧರ ಅಮಾತ್ಯರ ಒತ್ತಾಯಕ್ಕೆ ಮಣಿದು

ಒಪ್ಪಿಕೊಳ್ಳುತ್ತಾರೆ. ಶ್ರೀ ವಿಜಯರಾಯರು ದೊರೆಗಳಾದರೂ ಸಹ ರಾಜ್ಯಾಧಿಕಾರವನ್ನೆಲ್ಲ ಶ್ರೀ ಪ್ರೌಢದೇವರಾಯರೇ ನೋಡಿಕೊಳ್ಳುತ್ತಿರುತ್ತಾರೆ. ಶ್ರೀ ವಿಜಯರಾಯರು ಕವಿ. ಕಲಾವಿದರಿಗೆ ಉತ್ತೇಜನ ಕೊಡುತ್ತ ಅದರಲ್ಲಿಯೇ ತಲ್ಲೀನರಾಗುತ್ತಾರೆ. ಮಗಳಾದ ಹರಿಯಮ್ಮನ ಲಗ್ನ ಮಾಡುವ ಸಂದರ್ಭದಲ್ಲಿ ಪಾರ್ವತಿರಾಯರು ಅದನ್ನು ವಿರೋಧಿಸಿ ಮದುವೆಗೂ ಸಹ ಬರುವುದಿಲ್ಲ. ಇದರಿಂದ ದೊರೆಗಳು ಸಾಕಷ್ಟು ನೊಂದುಕೊಳ್ಳುತ್ತಾರೆ. ಹಿರಿಯ ಪುತ್ರ ಶ್ರೀ ಪ್ರೌಢದೇವರಾಯರನ್ನು ಉತ್ತರಾಧಿಕಾರಿಯೆಂದು ಘೋಷಿಸಿ ಪಟ್ಟಾಭಿಷೇಕದ ಮಹೋತ್ಸವ ಕಾರ್ಯವನ್ನು ವಿಜೃಂಭಣೆಯಿಂದ ನೆರವೇರಿಸುತ್ತಾರೆ.

ಶ್ರಾವಣ ಸೋಮವಾರದ ಒಂದು ದಿನ ಶ್ರೀ ವಿಜಯರಾಯರು ಪಂಪಾನಾಥ, ಭುವನೇಶ್ವರಿಯ ದರ್ಶನ ಪಡೆದು, ಶ್ರೀ ಗುರು ವಿದ್ಯಾರಣ್ಯರ ಪರ್ಣಕುಟಿಯಲ್ಲಿ ಸ್ವಲ್ಪ ಹೊತ್ತು ಕುಳಿತು ಅರಮನೆಗೆ ಬಂದು ಸೋಮನಾಥರಿಗೆ ಹೇಳಿ ಕಳುಹಿಸಿ ಹರಿಹರದೇವನ ಪಂಪಾಸ್ತುತಿಯನ್ನು ಕೇಳುತ್ತ ಗಾಢಮೌನ ತಳೆದು ಚಿರನಿದ್ರೆಗೆ ಜಾರುತ್ತಾರೆ.

೬.೧.೧೧ ಪ್ರೌಢದೇವರಾಯರು :

ಶ್ರೀ ವಿಜಯರಾಯರು ಶ್ರೀ ಪ್ರೌಢದೇವರಾಯರನ್ನು ಉತ್ತರಾಧಿಕಾರಿ ಎಂದು ಘೋಷಿಸಿ ಪಟ್ಟಾಭಿಷೇಕವನ್ನು ಸಹ ಮಾಡುತ್ತಾರೆ. ಕೆಲದಿನಗಳಲ್ಲಿಯೇ ಶ್ರೀ ವಿಜಯರಾಯರು ನಿಧನಹೊಂದುವರು. ಎಲ್ಲ ಕಾರ್ಯಗಳು ಮುಗಿದಾದ ಮೇಲೆ ಶ್ರೀಗಿರಿ ಭೂಪಾಲರು ಕಂಚಿಗೆ ಮರಳಿ ಹೋದರೆ, ಪಾರ್ವತಿರಾಯರು ತೆರಕಣಾಂಬಿಗೆ ಮರಳಿ ಹೋಗದೆ ರಾಜಧಾನಿಯಲ್ಲಿಯೇ ಉಳಿದು ಹೊಸದಾದ ಅರಮನೆಯನ್ನು ಕಟ್ಟಿಸತೊಡಗುತ್ತಾರೆ. ಇದನ್ನು ಸಹಿಸದ ಸಂಗಣ್ಣ ದಣ್ಣಾಯಕರು ಪಾರ್ವತಿರಾಯರನ್ನು ಹೀಗೆ ಬೆಳೆಯಗೊಡಬಾರದೆಂದು ಸಲಹೆ ನೀಡುವರು. ಆದರೆ ಶ್ರೀ ಪ್ರೌಢದೇವರಾಯರು ದೊಡ್ಡ ಅರಮನೆಯಲ್ಲಿ ವಾಸಮಾಡುವುದರಿಂದ ದೊಡ್ಡವರಾಗುತ್ತೇವೆ ಎಂಬ ಭಾವನೆ ಪಾರ್ವತಿರಾಯರಿಗಿದೆ. ಆ ಸಂತೋಷಕ್ಕೆ ನಾವೇಕೆ ಅಡ್ಡಿಯಾಗಬೇಕು ಎನ್ನುವರು.

ಒಂದು ದಿನ ಸಂಗಣ್ಣ ದಣ್ಣಾಯಕರೊಂದಿಗೆ ವಿಚಾರ ವಿನಿಮಯ ಮಾಡುತ್ತ ಕುಳಿತಿದ್ದ ಪ್ರಭುಗಳು ನಮ್ಮ ಸಾಮ್ರಾಜ್ಯ ಬಹುಮನಿ ರಾಜ್ಯದ ಹತ್ತರಷ್ಟಾದರೂ ಇದೆ. ನಮ್ಮ ಸೈನ್ಯ ಅವರ ಸೈನ್ಯಕ್ಕಿಂತ ದೊಡ್ಡದು. ನಮ್ಮ ಆದಾಯಕ್ಕೂ ಬಹುಮನಿಯವರ ಆದಾಯಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಆದರೂ ನಾವು ಬಹುಮನಿಯವರ ಮುಂದೆ ಸೋಲುತ್ತೇವೆ. ಹೇಗೆಂದು ಕೇಳಿದಾಗ ಸಂಗಣ್ಣ ದಣ್ಣಾಯಕ ಮಂತ್ರಿಮಂಡಳದ ಸಭೆ ಸೇರಿಸುತ್ತಾನೆ. ಗುಂಡಪ್ಪ ದಣ್ಣಾಯಕರು ಬಹುಮನಿಯವರ

ಅರಬ್ಬಿ ಕುದುರೆಗಳ ಕುರಿತು ಹೇಳುತ್ತ ನಾವು ಸಹ ಆ ತೆರನಾಗಿ ಕುದುರೆಗಳ ಬಲವನ್ನು ಹೆಚ್ಚಿಸಬೇಕೆಂದು ಹೇಳುವನು. ಗೋಪರಾಜರು ಬಿಲ್ಲಾಳುಗಳ ಸಂಖ್ಯೆ ಹೆಚ್ಚಿಸಬೇಕೆನ್ನುವರು.

ಪ್ರೌಢದೇವರಾಯ ಆಳ್ವಿಕೆಯ ಕಾಲದಲ್ಲಿ ದೇಶ ಸುಭಿಕ್ಷವಾಗಿದ್ದು ಸಂಗೀತ ಸಾಹಿತ್ಯ ವೃದ್ಧಿಯಾಗುತ್ತಿತ್ತು. ಆ ಸಂದರ್ಭದಲ್ಲಿ ಹೊರಗಿನಿಂದ ಬಂದ ಪ್ರವಾಸಿಗರು ವಿಜಯನಗರದ ವೈಭವವನ್ನು ಕಂಡು ಬೆರಗಾಗುತ್ತಾರೆ. ಇಟಲಿಯಲ್ಲಿದ್ದ ಕ್ರೈಸ್ತ ಧರ್ಮದ ಜಗದ್ಗುರುಗಳು ನಿಕೋಲೋ ಕಾಂಟಿಗೆ ವಿಜಯನಗರಕ್ಕೆ ಹೋಗಿ ಅಲ್ಲಿಯ ವಿಷಯ ತಿಳಿದುಕೊಂಡು ಬರುವಂತೆ ಹೇಳಿದಾಗ, ಅವರ ಕಾರ್ಯದರ್ಶಿ ಪೋಗ್ಗಿಯೋ ಬ್ರ್ಯಾಕ್ಕಿಯೋಲೀನಿ ಜತೆಯಲ್ಲಿ ವಿಜಯನಗರಕ್ಕೆ ಬಂದು ಅಲ್ಲಿನ ವೈಭವಗಳನ್ನೆಲ್ಲ ನೋಡಿ ನಾಲ್ಕು ದಿವಸಗಳವರೆಗೆ ಇದ್ದು ಹೋಗಬೇಕೆಂದವನು ನಾಲ್ಕಾರು ತಿಂಗಳು ರಾಜಧಾನಿಯಲ್ಲಿ ನೆಲೆಸಿ ಅಲ್ಲಿನ ವಿದ್ಯಮಾನಗಳನ್ನು, ಜನಜೀವನವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ದೊಡ್ಡ ಗ್ರಂಥವೊಂದನ್ನೇ ನಿರ್ಮಾಣ ಮಾಡುತ್ತಾನೆ.

ಪ್ರೌಢದೇವರಾಯರ ಆಸ್ಥಾನದಲ್ಲಿ ಗದುಗಿನ ಭಾರತ ಬರೆದ ಕುಮಾರವ್ಯಾಸ, ಪ್ರಭುಲಿಂಗಲೀಲೆ ಬರೆದ ಚಾಮರಸ ತಮ್ಮ ಕಾವ್ಯವಾಚನ ಮಾಡಿ ದೊರೆಗಳಿಂದ ಮಾನ ಸನ್ಮಾನಗಳನ್ನು ಪಡೆದುಕೊಳ್ಳುತ್ತಾರೆ. ಪ್ರೌಢದೇವರಾಯರನ್ನು ಪಾರ್ವತಿರಾಯರು ಕಠಾರಿಯಿಂದ ಇರಿದು ಕೊಲ್ಲಲು ಪ್ರಯತ್ನಿಸಿ ಬಂಧಿಯಾಗುತ್ತಾರೆ. ಆದರೆ ಇರಿತದಿಂದ ಗಾಯಗೊಂಡ ದೊರೆಗಳು ಅಸ್ತಂಗತರಾಗುವರು.

ಪರ್ಶಿಯಾದ ಷಹಾರವರಾದ ಷಹಾರೂಖ್‌ರವರ ಪ್ರತಿನಿಧಿ ಅಬ್ದುಲ್ ರಜಾಕ್ ವಿಜಯನಗರದಂತಹ ಪಟ್ಟಣವನ್ನು ಕಣ್ಣು ಕಂಡಿಲ್ಲ; ಕಿವಿ ಕೇಳಿಲ್ಲ. ಈ ಜನಗಳಿಗೆ ಗುಲಾಬಿ ಹೂವೆಂದರೆ ಪಂಚಪ್ರಾಣ. ಈ ಜನರು ರಸಿಕರು, ಆದರಾತಿಥ್ಯಪರರು, ಸ್ನೇಹಜೀವಿಗಳು ಎಂದೆಲ್ಲ ಹೇಳಿ ದೊರೆಯ ಬಗ್ಗೆ, ಆ ಸಾಮ್ರಾಜ್ಯದ ಕುರಿತು ಬರೆಯುತ್ತಾನೆ.

೬.೧.೧೨ ಮಲ್ಲಿಕಾರ್ಜುನ :

ಶ್ರೀ ಪ್ರೌಢದೇವರಾಯರ ಏಕಮಾತ್ರ ಪುತ್ರರಾದ ಶ್ರೀ ಮಲ್ಲಿಕಾರ್ಜುನರವರು ೧೪೪೬ ರಲ್ಲಿ ಪಟ್ಟಾಭಿಷಕ್ತರಾಗುತ್ತಾರೆ. ಅನನುಭವಿಗಳಾದ ಶ್ರೀ ಮಲ್ಲಿಕಾರ್ಜುನರವರು ಪಟ್ಟಾಭಿಷಕ್ತರಾದುದು ಬಹುಮನಿಯವರಿಗೆ ಸಂತೋಷ ತರಿಸುತ್ತದೆ. ಶ್ರೀ ಪ್ರೌಢರಾಯರು, ಶ್ರೀಗಿರಿ ಭೂಪಾಲರು ಸ್ವರ್ಗಸ್ಥರಾಗಿದ್ದಾರೆ, ವಿಜಯನಗರಕ್ಕೆ ಮುತ್ತಿಗೆ ಹಾಕಿದರೆ ಭಯಗೊಂಡ ದೊರೆ ಸುಲಭವಾಗಿ ಶರಣಾಗತರಾಗುತ್ತಾರೆಂದು ಲೆಕ್ಕಾಚಾರ ಹಾಕುವರು. ವಿಜಯನಗರದ ಗೂಢಚಾರ ಬಂದು ಲಕ್ಕಣ್ಣ ದಣ್ಣಾಯಕರಿಗೆ ಕಲಿಂಗದವರು ಮತ್ತು ಕಲ್ಬುರ್ಗಿಯವರು ಒಟ್ಟಿಗೆ ಮುತ್ತಿಗೆ ಹಾಕುತ್ತಿರುವ ವಿಷಯ

ತಿಳಿಸುವನು. ಲಕ್ಕಣ್ಣ ದಣ್ಣಾಯಕರು ಪ್ರಭುಗಳಿಗೆ ವಿಷಯ ತಿಳಿಸಿ ಈ ಸಾರಿ ಯಾವ ಶಾಂತಿ ಸಂಧಾನ ಮಾಡಿಕೊಳ್ಳದೆ, ಅವರನ್ನು ಸದೆಬಡೆಯುವ ವಿಚಾರ ವ್ಯಕ್ತಪಡಿಸಿದಾಗ ತರುಣರಾದ ದೊರೆಗಳು ಹುಮ್ಮಸ್ಸಿನಿಂದ 'ವಿಜಯನಗರದ ಹೊಸ ಅರಸರನ್ನು, ತಾವೇ ಬಂದು ಅಭಿವಂದಿಸುವ ಸತ್ಸಂಪ್ರದಾಯ ಕಲ್ಬುರ್ಗಿಯವರು ಬೆಳೆಸಿಕೊಂಡು ಬಂದಿದ್ದಾರೆ. ಅವರ ಸಂಪ್ರದಾಯಕ್ಕೆ ನಾವೇಕೆ ಅಡ್ಡಿ ಬರಬೇಕು ಬರಲಿ ನಮ್ಮ ಸೈನ್ಯವೂ ಹಸಿದಿದೆ, ಕಲ್ಬುರ್ಗಿಯವರ ಆಯಸ್ಸೂ ಮುಗಿದಿದೆ. ತುಂಗಭದ್ರಾನದಿಯ ಆಚೆ ಹೋಗಿ ನಾವು ಅವರ ಸ್ವಾಗತ ಸಿದ್ಧತೆ ಮಾಡೋಣ'[೧೭] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೨೩೦) ಎಂದು ಕೆಚ್ಚಿನಿಂದ ಹೇಳಿದಾಗ ಲಕ್ಕಣ್ಣನವರ ಮನಸ್ಸಿಗೆ ಸಮಾಧಾನವಾಗುತ್ತದೆ. ದಾಳಿ ಮಾಡಿದಾಗ ವಿಜಯನಗರದವರು ಬಹುಮನಿಯವರನ್ನು ಸಂಪೂರ್ಣವಾಗಿ ಸದೆಬಡೆದು ಹಿಮ್ಮೆಟ್ಟಿಸುತ್ತಾರೆ. ಕಳಿಂಗಬಿಟ್ಟು ಕಂಚಿಗೆ ದಾಳಿಯಿಟ್ಟ ಗಜಪತಿರಾಯರು ಕಂಚಿಯನ್ನು ಗೆದ್ದು ಸುಲಿಗೆ ಮಾಡುತ್ತಿರುವ ವಿಷಯ ತಿಳಿದ ಮಹಾಪ್ರಭುಗಳು ವಿರೂಪಾಕ್ಷರಾಯರಿಗೆ ರಾಜ್ಯಾಧಿಕಾರವಹಿಸಿ ಲಕ್ಕಣ್ಣ ದಣ್ಣಾಯಕರ ಜೊತೆಗೂಡಿ ಕಂಚಿಗೆ ಹೋಗುತ್ತಿರುವ ಸಂದರ್ಭದಲ್ಲಿ ದಾರಿಯುದ್ದಕ್ಕೂ ಅಪಶಕುನಗಳೇ ಆಗುತ್ತವೆ. ಆದರೂ ಅದಾವುದಕ್ಕೂ ತಲೆಕೆಡಿಸಿಕೊಳ್ಳದೆ ಮಹಾಪ್ರಭುಗಳು ಕಂಚಿಯಲ್ಲಿದ್ದ ಕಳಿಂಗದ ದೊರೆ ಗಜಪತಿರಾಯರನ್ನು ಸದೆ ಬಡಿಯುತ್ತಾರೆ.

ಕಂಚಿಯಲ್ಲಿ ಲಕ್ಕಣ್ಣ ದಣ್ಣಾಯಕರನ್ನು ಮೋಸದಿಂದ ಕೊಂದಾಗ ಮಹಾಪ್ರಭುಗಳು ಸಣ್ಣ ಮಗುವಿನಂತೆ ಅತ್ತು ಗೋಳಾಡುತ್ತಾರೆ. ಆದರೆ ವಿಜಯನಗರದಲ್ಲಿ ವಿರೂಪಾಕ್ಷರಾಯರು ಡಂಗೂರ ಸಾರಿಸಿ ಜನರನ್ನೆಲ್ಲ ಸೇರಿಸಿ ಕಂಚಿಯ ಯುದ್ಧದಲ್ಲಿ ಮಹಾಪ್ರಭುಗಳಾದ ಶ್ರೀ ಶ್ರೀ ಮಲ್ಲಿಕಾರ್ಜುನರಾಯರು, ವೀರಾಧಿವೀರ ಶ್ರೀ ಲಕ್ಕಣ್ಣ ದಣ್ಣಾಯಕರು ವೀರಮರಣವನ್ನಪ್ಪಿದರೆಂದು ಸಾರುತ್ತಾರೆ. ಪೂರ್ವಸಿದ್ಧತೆ ಮಾಡಿಕೊಂಡಿದ್ದ ಶ್ರೀ ವಿರೂಪಾಕ್ಷರಾಯರು ಶ್ರೀ ಮಲ್ಲಿಕಾರ್ಜುನರಾಯರ ನಿಸ್ಸೀಮ ಭಕ್ತರನ್ನೆಲ್ಲ ಕೊಲ್ಲಿಸುತ್ತಾರೆ. ವಿಷಯ ತಿಳಿದ ಶ್ರೀ ಮಲ್ಲಿಕಾರ್ಜುನರಾಯರು ಪಂಪಾನಾಥನಿಗೆ ತಾವು ವಿಜಯನಗರದಲ್ಲಿರುವುದು ಬೇಕಿಲ್ಲವೆಂದೇ ಕಾಣುತ್ತದೆ. ಶ್ರೀ ವಿರೂಪಾಕ್ಷರಾಯರೇ ವಿಜಯನಗರದಲ್ಲಿ ರಾಜ್ಯಾಧಿಕಾರ ಮಾಡಿಕೊಂಡಿರಲಿ ಎಂದು ಸುಮ್ಮನಾಗುತ್ತಾರೆ. 'ಮಲ್ಲಿಕಾರ್ಜುನನು ಕ್ರಿ.ಶ ೧೪೬೫ ರ ಮಧ್ಯಭಾಗದಲ್ಲಿ ಗತಿಸಿದರು. ದಾಯಾದಿಯಾದ ವಿರೂಪಾಕ್ಷನು ಮಲ್ಲಿಕಾರ್ಜುನನ ಕೊಲೆ ಮಾಡಿ ಸಿಂಹಾಸನವನ್ನು ಅಪಹರಿಸಿದನೆಂಬ ಐತಿಹ್ಯವೂ ಉಂಟು. ಅದನ್ನು ಸಮರ್ಥಿಸಲು ಶಾಸನಾಧಾರವಿಲ್ಲ. ಮಲ್ಲಿಕಾರ್ಜುನನಿಗೆ ರಾಜಶೇಖರನೆಂಬ ಮಗನಿದ್ದನು'[೧೮] (ನಂಜುಂಡಸ್ವಾಮಿ ಎ.ಎಸ್, ೨೦೦೯, ಪುಟ-೫೧) ಎಂಬ ವಿಚಾರಗಳು ತಿಳಿದುಬರುತ್ತವೆ.

೬.೧.೧೩ ವಿರೂಪಾಕ್ಷರಾಯರು :

ಶ್ರೀಗಿರಿ ಭೂಪಾಲರ ಮಕ್ಕಳಾದ ಶ್ರೀ ವಿರೂಪಾಕ್ಷರಾಯರು ತಂದೆಗೆ ಕೊಟ್ಟ ವಚನದಂತೆ ನಡೆದುಕೊಳ್ಳುವುದೇ ಇಲ್ಲ. ಸಾಳುವ ನರಸಿಂಹನ ಜೊತೆಗೂಡಿ ಪಿತೂರಿ ಮಾಡಿ ಶ್ರೀ ಮಲ್ಲಿಕಾರ್ಜುನನನ್ನು ಬದಿಗೊತ್ತಿ ತಾವು ಪಟ್ಟಾಭಿಷಕ್ತನಾಗುತ್ತಾರೆ. ಇವರು ಭಟ್ಕಳದ ಮಿಯಾನ್ ಎಂಬುವವನಿಗೆ ಒಳ್ಳೆಯ ಕುದುರೆಗಳನ್ನು ತರಿಸಿಕೊಡುವಂತೆ ಮುಂಗಡ ಹಣ ಕೊಟ್ಟಿದ್ದು ಆದರೆ ಆತ ಅವುಗಳನ್ನು ಕಲ್ಬುರ್ಗಿಗೆ ಮಾರಿಬಿಟ್ಟಿರುತ್ತಾನೆ. ಇದರಿಂದ ಆಕ್ರೋಶಿತರಾದ ಶ್ರೀ ವಿರೂಪಾಕ್ಷರಾಯರು ಭಟ್ಕಳದ ಮೇಲೆ ದಾಳಿ ಮಾಡಿ ಎಲ್ಲ ಮುಸ್ಲಿಂರನ್ನು ಕೊಚ್ಚಿ ಹಾಕಲು ಪ್ರಾರಂಭಿಸಿದಾಗ ಕೆಲವು ಮುಸ್ಲಿಂರು ತಪ್ಪಿಸಿಕೊಂಡು ತಲೆಮರೆಸಿಕೊಳ್ಳುತ್ತಾರೆ. ಈ ಭೀಕರ ಹತ್ಯಾಕಾಂಡವನ್ನು ನೋಡಿ ವಿಜಯನಗರದ ಹಿಂದೂಗಳೂ ಸಹ ಮರುಗುತ್ತಾರೆ. ಹತ್ತೊಂಬತ್ತು ವರ್ಷಗಳವರೆಗೆ ರಾಜ್ಯಭಾರ ಮಾಡಿದ ಶ್ರೀ ವಿರೂಪಾಕ್ಷರಾಯರು ಧೈರ್ಯವಾಗಿ ಹೋರಾಡದೆ ಯಾವಾಗಲೂ ಮಾನಿನಿಯರ ಸಂಗದಲ್ಲೇ ಇದ್ದು ಪ್ರಜಾಸ್ತೋಮದ ನಿಂದನೆಗೆ ಗುರಿಯಾಗುತ್ತಾರೆ. ಇದರಿಂದ ಬೇಸತ್ತ ಜನತೆ ಸಾಳುವ ನರಸಿಂಹನಾಯಕರನ್ನು ದೊರೆಯನ್ನಾಗಿ ಮಾಡಲು ನಿರ್ಧರಿಸುತ್ತಾರೆ. ನರಸಿಂಹನಾಯಕರು ಸೈನ್ಯದೊಂದಿಗೆ ಆನೆಗೊಂದಿಗೆ ಬಂದು ಶ್ರೀ ವಿರೂಪಾಕ್ಷರಾಯರನ್ನು ಬಂಧಿಸಿ ತಮ್ಮ ಜೀವನಕ್ಕೆ ಅವಶ್ಯವಿದ್ದಷ್ಟು ಹೊನ್ನನ್ನು ತೆಗೆದುಕೊಂಡು ವಿಜಯನಗರದ ಗಡಿ ದಾಟುವಂತೆ ಹೇಳುತ್ತಾರೆ. ಆದರೆ ಅದಕ್ಕೊಪ್ಪದ ಶ್ರೀ ವಿರೂಪಾಕ್ಷರಾಯರು ಇನ್ನು ಮುಂದೆ ನಿಮ್ಮೆಲ್ಲರ ಇಷ್ಟದಂತೆ ಆಡಳಿತ ಮಾಡುತ್ತೇನೆಂದು ಹೇಳಿದಾಗ ಬಲವಂತವಾಗಿ ಹೊನ್ನಿನ ಚೀಲವನ್ನು ಮೇನೆಯೊಳಕ್ಕೆ ಇಟ್ಟು ಅವರನ್ನು ಮೇನೆಯೊಳಕ್ಕೆ ಕೂಡಿಸಿ ವಿಜಯನಗರದ ಗಡಿ ದಾಟಿಸುತ್ತಾರೆ.

೬.೧.೧೪ ಸಾಳುವ ನರಸಿಂಹನಾಯಕರು :

ಯದುವಂಶಕ್ಕೆ ಸೇರಿದವನೆಂದು ಹೇಳಲಾದ ಸಾಳುವ ವಂಶದ ನರಸಿಂಹನಿಗೆ ನರಸಿಂಗರಾಯ ಒಡೆಯರ್ ಎಂಬ ಮತ್ತೊಂದು ಹೆಸರೂ ಇತ್ತು. ಸಾಳುವ ನರಸಿಂಹನಾಯಕರು ಶ್ರೀ ವಿರೂಪಾಕ್ಷರಾಯರ ಜೊತೆ ಸೇರಿ ಶ್ರೀ ಮಲ್ಲಿಕಾರ್ಜುನರಾಯರು ಕಂಚಿಗೆ ಗಜಪತಿರಾಯರ ಜೊತೆಗೆ ಸೆಣಸಲು ಹೋಗಿ ವಿಜಯನಗರಕ್ಕೆ ಬಾರದೆ ಅಲ್ಲಿಯೇ ಉಳಿಯುವಂತೆ ಮಾಡಿ ಶ್ರೀ ವಿರೂಪಾಕ್ಷರಾಯರು ಪಟ್ಟಾಭಿಷಕ್ತರಾಗುವಂತೆ ಮಾಡುತ್ತಾರೆ. ತಾವೊಂದು ಚಂದ್ರಗಿರಿಯಲ್ಲಿ ಪ್ರತ್ಯೇಕವಾದ ಅರಮನೆಯನ್ನು ಕಟ್ಟಿಸಿಕೊಂಡು ಕವಿ ಕಲಾವಿದರ ಆಶ್ರಯದಾತರಾಗಿ ಎಲ್ಲರ ಪ್ರೇಮ, ಗೌರವಗಳಿಗೆ ಪಾತ್ರರಾಗುತ್ತಾರೆ. ತಿರುಪತಿಯಲ್ಲಿ ಅರ್ಚಕರ ಹಾವಳಿ ಹೆಚ್ಚಾದಾಗ ಜನರು ಬಂದು ನರಸಿಂಹನಾಯಕರಿಗೆ ವಿಷಯ ತಿಳಿಸುತ್ತಾರೆ. ಅವರು ಗಂಗಣ್ಣನಾಯಕರಿಗೆ ವಿಚಾರಣೆ ಮಾಡಿ

ತಪ್ಪಿತಸ್ಥರಿಗೆ ಮರಣ ದಂಡನೆಯ ಶಿಕ್ಷೆಯಾಗಬೇಕೆಂದು ಹೇಳಿದಾಗ ಆ ಅಧಿಕಾರವಿರುವುದು ಶ್ರೀ ವಿರೂಪಾಕ್ಷರಾಯರಿಗೆ ಮಾತ್ರ ಎಲ್ಲಿ ಜನರ ಪ್ರತಿಭಟನೆ ವ್ಯಕ್ತವಾಗುವುದೋ ಎಂದುಕೊಂಡೇ ಹೋಗುತ್ತಾನೆ. ಆದರೆ ಗಂಗಣ್ಣನಾಯಕ ಸಾಕ್ಷ್ಯಾಧಾರಗಳನ್ನು ನೋಡಿ ಅವರು ಅಪರಾಧಿಗಳೆಂದು ಸಾಬೀತುಪಡಿಸಿ ಸಾಳುವ ನರಸಿಂಹನಾಯಕರ ಆಜ್ಞಾನುಸಾರವಾಗಿ ಮರಣದಂಡನೆಯ ಶಿಕ್ಷೆ ವಿಧಿಸುವನು. ನರಸಿಂಹನಾಯಕರಿಗೆ ಬಹುಮನಿ ಸುಲ್ತಾನರು ವಿರೂಪಾಕ್ಷರಾಯರ ಮೇಲೆ ಯುದ್ಧ ಸಾರಿ ತಾವು ಸಹಾಯ ಮಾಡುವುದಾಗಿ ಹೇಳಿ ಕಳುಹಿಸುತ್ತಾರೆ. ಆದರೆ ನರಸಿಂಹನಾಯಕರು ಅದನ್ನು ಸಾರಾಸಗಟಾಗಿ ತಿರಸ್ಕರಿಸಿ 'ವಿಜಯನಗರದ ರಾಜಕಾರಣದಲ್ಲಿ ನೀವು ಕೈ ಹಾಕಲು ಅವಕಾಶ ಕೊಡುವಷ್ಟು ಮೂರ್ಖರೇ ನಾವು. ನಮಗೆ ವಿಜಯನಗರ ಸಿಂಹಾಸನ ಬೇಕಾದಲ್ಲಿ ಅದನ್ನು ತೆಗೆದುಕೊಳ್ಳಲು ನಾವು ಸಮರ್ಥರಾಗಿದ್ದೇವೆ. ನಮ್ಮ ರಾಷ್ಟ್ರಕ್ಕೆ ನಾವೇ ಎರಡು ಬಗೆದು ಸಿಂಹಾಸನ ಗಳಿಸುವಷ್ಟು ನರಸಿಂಹನಾಯಕರು ಕ್ಷುಲ್ಲರಲ್ಲ ಎಂದು ನಿಮ್ಮ ಸುಲ್ತಾನರಿಗೆ ತಿಳಿಸಿ. ವಿಜಯನಗರದ ಮೇಲೆ ನೀವು ಕೈಯೆತ್ತಿದರೆ ನಮ್ಮ ಮೇಲೆ ಕೈಯೆತ್ತಿದಂತೆಯೇ'[೧೯] (ಕೃಷ್ಣರಾಯರು ಅ.ನ, ೨೦೦೪, ಮೋಹನ ಮುರಾರಿ ಮತ್ತು ಯಶೋದುಂದುಭಿ, ಪುಟ-೬೩) ಎಂದು ಸಂಧಾನಕಾರರಾಗಿ ಬಂದ ಫರ್ಹಾತ್‌ಖಾನ್ ಮತ್ತು ಷಹಬಾಜ್‌ಖಾನ್‌ರಿಗೆ ಹೇಳಿ ಕಳುಹಿಸುತ್ತಾರೆ.

ನರಸಿಂಹನಾಯಕ ವಿಜಯನಗರದಿಂದ ಕೈಬಿಟ್ಟು ಹೋಗಿದ್ದ ಗೋವೆ, ಬೆಳಗಾವಿ, ಕೊಂಡವೀಡು, ರಾಜಮಹೇಂದ್ರಿ, ಗಾಂಜಿಯಾನ್ನು ವಶಪಡಿಸಿಕೊಂಡು ಕಂಚಿಗೆ ತೆರಳುತ್ತಾನೆ. ಶ್ರೀ ವಿರೂಪಾಕ್ಷರಾಯರ ಆಡಳಿತದಿಂದ ಬೇಸತ್ತ ಜನ ಶ್ರೀ ನರಸಿಂಹನಾಯಕರನ್ನು ವಿಜಯನಗರದ ದೊರೆಗಳನ್ನಾಗಿ ಮಾಡಬೇಕೆಂದು ನಿರ್ಧರಿಸುತ್ತಾರೆ. ರಾಜ್ಯಾಧಿಕಾರ ವಹಿಸಿಕೊಂಡ ನರಸಿಂಹನಾಯಕರು ನರಸಿಂಹರಾಯರಾದರು. ಒಂದು ಸಾರಿ ಮುದಗಲ್ಲು, ರಾಯಚೂರುಗಳನ್ನು ಕಳೆದುಕೊಂಡಿದ್ದ ವಿಜಾಪುರದ ಆದಿಲ್‌ಷಹಾ ಸಮಯ ಸಾಧಿಸಿ ರಾಯಚೂರಿನ ಮೇಲೆ ದಾಳಿ ಮಾಡಿದಾಗ ಈಶ್ವರನಾಯಕರ ಪುತ್ರ ನರಸನಾಯಕ ಸೈನ್ಯ ತೆಗೆದುಕೊಂಡು ಹೋಗುವನು. ಅವನ ಪರಾಕ್ರಮ ಕಂಡು ವಿಜಾಪುರದ ಸೈನ್ಯ ತಲ್ಲಣಗೊಂಡು ಯುದ್ಧ ನಡೆದ ನಾಲ್ಕನೆಯ ದಿನಕ್ಕೆ ಶ್ವೇತ ಧ್ವಜವನ್ನು ತೋರಿಸಿ ಮೋಸ ಮಾಡಿ ವಿಜಯನಗರದ ಪಾಳೆಯ ಮೇಲೆ ನುಗ್ಗಿ ಕಗ್ಗೊಲೆಯನ್ನಾರಂಭಿಸಿದಾಗ ನೂರಾರು ಸೈನಿಕರು ಮರಣಹೊಂದಿದರು. ಕೆಲವರು ಓಡಿ ಹೋಗಲಾರಂಭಿಸಿದರು. ನರಸನಾಯಕ ಸೋಲನ್ನೊಪ್ಪಿಕೊಂಡು ಮುದಗಲ್, ರಾಯಚೂರು ಕೋಟೆಗಳನ್ನು ಆದಿಲ್‌ಶಹನಿಗೆ ಒಪ್ಪಿಸಿ, ರಾಜಧಾನಿಗೆ ಹಿಂದಿರುಗುವನು. ಇದರಿಂದ ಪ್ರಭುಗಳು ಚಿಂತಾಕ್ರಾಂತರಾಗಿ ಹಾಸಿಗೆ ಹಿಡಿದು ಮಲಗಿ ಕ್ರಿ.ಶ ೧೪೯೧ ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು.

೬.೧.೧೫ ಇಮ್ಮಡಿ ನರಸಿಂಹರಾಯರು :

ಸಾಳುವ ನರಸಿಂಹರಾಯರ ನಂತರ ಪಟ್ಟಕ್ಕೇರಿದ ಇಮ್ಮಡಿ ನರಸಿಂಹರಾಯರು ಭಾಮೆಯೆಂಬ ಸುಂದರ ತರುಣಿಯೊಂದಿಗೆ ವಸಂತೋಧ್ಯಾನದಲ್ಲಿ ಕಾಲ ಕಳೆಯುತ್ತಿದ್ದು ರಾಜ್ಯಾಡಳಿತದ ಬಗ್ಗೆ ಗಮನಹರಿಸುವುದೇ ಇಲ್ಲ. ಈಕೆಯ ಅಣ್ಣ ಕೊಂಡಮನಾಯಿಡು ತಾನು ಪ್ರಭುಗಳ ಭಾವಮೈದುನನೆಂದು ಸಾರಿಕೊಳ್ಳುತ್ತ ರಾಜಧಾನಿಯ ವರ್ತಕರು, ಅಧಿಕಾರಿಗಳನ್ನು ಹೆದರಿಸಿಕೊಳ್ಳುತ್ತಿದ್ದನು. ಇದರಿಂದ ಜನರೆಲ್ಲ ಬೇಸತ್ತು ಹೋಗಿದ್ದರು. ಶ್ರೀ ಗುರು ವ್ಯಾಸತೀರ್ಥರು ಸಹ ಈ ವಿಷಯವಾಗಿ ಸಾಕಷ್ಟು ಪ್ರಯತ್ನಿಸಿದರೂ ಸಹ ಸಾರ್ಥಕವಾಗಲಿಲ್ಲ. ಜನರೆಲ್ಲ ಎಲ್ಲಿ ವಿಜಯನಗರದ ಆಡಳಿತ ಸಾಳುವ ವಂಶದ ಇಮ್ಮಡಿ ನರಸಿಂಹರಾಯರ ಕಾಲಕ್ಕೆ ಕೊನೆಯಾಗುವುದೋ ಎಂದು ಯೋಚಿಸಿ ಮಹಾಪ್ರಧಾನಿ ನರಸನಾಯಕರು ರಾಜ್ಯಾಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ಆಡಳಿತ ನಡೆಸುವರು. ಆದರೆ ಎಂದಿಗೂ ತಾವು ಸಾಮ್ರಾಟರೆಂದು ಕರೆಸಿಕೊಳ್ಳುವ ಗೊಡವೆಗೆ ಹೋಗುವುದಿಲ್ಲ. ಈತನ ಮರಣಾನಂತರ ಇಮ್ಮಡಿ ನರಸಿಂಹರಾಯರು ಮತ್ತೆ ಅಧಿಕಾರವಹಿಸಿಕೊಂಡು ಕಲಿತ ಪಾಠದಿಂದ ಒಳ್ಳೆಯ ಆಡಳಿತ ನಡೆಸುವುದರೊಂದಿಗೆ ಜನರ ಮೆಚ್ಚುಗೆಯನ್ನು ಪಡೆದುಕೊಳ್ಳುತ್ತಾರೆ. ಆದರೆ ದುರ್ದೈವದಿಂದ ಇಮ್ಮಡಿ ನರಸಿಂಹರಾಯರು ಹೆಚ್ಚು ಕಾಲ ಬದುಕಲಿಲ್ಲ. ಮೂರು ವರ್ಷ ಕಳೆದ ಕೂಡಲೇ ಅಕಾಲ ಮೃತ್ಯುವಿಗೆ ಒಳಗಾಗುತ್ತಾರೆ.

೬.೧.೧೬ ಶ್ರೀಕೃಷ್ಣದೇವರಾಯರು :

ವಿಜಯನಗರ ಸಾಮ್ರಾಜ್ಯವನ್ನು ಆಳಿದ ತುಳುವ ವಂಶದ ಪ್ರಖ್ಯಾತ ಅರಸು ಶ್ರೀಕೃಷ್ಣದೇವರಾಯ. ಸಾಳುವ ನರಸಿಂಹನ ಮಹಾದಂಡನಾಯಕನಾಗಿದ್ದ ನರಸನಾಯಕನ ಮಗ. ನರಸನಾಯಕರಿಗೆ ಮೂವರು ಪತ್ನಿಯರಿದ್ದು ಹಿರಿಯಳಾದ ತಿಪ್ಪಾಂಬಿಕೆಯಲ್ಲಿ ವೀರನರಸಿಂಹ, ಎರಡನೆಯವಳಾದ ನಾಗಲಾದೇವಿಯಲ್ಲಿ ಕೃಷ್ಣದೇವರಾಯರು, ಮೂರನೆಯವಳಾದ ಓಬಾಂಬಿಕೆಯಲ್ಲಿ ಅಚ್ಯುತರಾಯ ಮತ್ತು ರಂಗರಾಯ ಜನಿಸಿರುತ್ತಾರೆ.

'ಶ್ರೀಕೃಷ್ಣದೇವರಾಯನ ಕಾಲ (೧೫೦೯-೧೫೩೦) ವಿಜಯನಗರ ಸಾಮ್ರಾಜ್ಯೇತಿಹಾಸದ ಸ್ವರ್ಣಯುಗ. ಪ್ರೌಢದೇವರಾಯನ ಕಾಲದಲ್ಲಿ ಒಂದು ಮಜಲು ಮುಟ್ಟಿದ ಈ ಸಾಮ್ರಾಜ್ಯ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಅತ್ಯುಚ್ಛ್ರಾಯ ಸ್ಥಿತಿಗೇರಿತು. ರಾಯನು ರಾಜ್ಯಾಭಿಷಕ್ತನಾದಾಗ ಅವನ ವಯಸ್ಸು ಇಪ್ಪತ್ತು. ವೈಕುಂಠವಾಸಿಯಾದಾಗ ಅವನ ವಯಸ್ಸು ನಲವತ್ತೊಂದು. ಅವನ ೨೧ ವರ್ಷಗಳ ಆಳ್ವಿಕೆ, ಆ ಕಾಲದಲ್ಲಿ ಅವನು ನಾಡಿನ ಸರ್ವತೋಮುಖ ಏಳಿಗೆಗಾಗಿ ಮಾಡಿದ ಮಹದ್ಕಾರ್ಯಗಳು ಚಿರಸ್ಮರಣೀಯವಾಗಿವೆ'[೨೦] (ಕೃಷ್ಣರಾಯರು ಅ.ನ, ೨೦೦೪, ಮೋಹನ

ಮುರಾರಿ ಮತ್ತು ಯಶೋದುಂದುಭಿ, ಪುಟ-೧೨೫) ಇವರು ಸಿಂಹಾಸನವೇರಿದ ಸಮಯದಲ್ಲಿ ಸುತ್ತಮುತ್ತಲು ಪ್ರಬಲ ಶತ್ರುಗಳು ತುಂಬಿರುವಾಗ ಅನನುಭವಿಯಾದ ಈತ ಏನು ಮಾಡಬಲ್ಲ ಎನ್ನುವವರಿಗೆಲ್ಲ ತನ್ನ ತೋಳ್ಬಲದಿಂದ ಸಾಮ್ರಾಜ್ಯದ ಹೆಸರನ್ನು ಚಿರಸ್ಥಾಯಿಗೊಳಿಸುತ್ತಾರೆ.

ಶ್ರೀಕೃಷ್ಣದೇವರಾಯರ ಆಡಳಿತದ ಅವಧಿಯಲ್ಲಿ ಪೋರ್ಚುಗೀಸರು ತಮ್ಮ ವ್ಯಾಪಾರ ವಹಿವಾಟಿಗಾಗಿ ಭಟ್ಕಳದಲ್ಲಿ ಕೋಟೆಯೊಂದನ್ನು ಕಟ್ಟಬೇಕೆಂದು ಆಲೋಚಿಸಿ ಫಾದರ್ ಲೂಯಿ ಅವರನ್ನು ಪ್ರತಿನಿಧಿಗಳಾಗಿ ಕಳಿಸಿದಾಗ ದೊರೆಗಳು ಅದಕ್ಕೊಪ್ಪಿ ಬಿಜಾಪುರದ ಸುಲ್ತಾನರಿಗೆ ಒದಗಿಸುವ ಕುದುರೆಗಳನ್ನು ತಮಗೇ ಒದಗಿಸಬೇಕು. ಅವರೊಂದಿಗೆ ವ್ಯಾಪಾರ ವಹಿವಾಟು ಇಟ್ಟುಕೊಳ್ಳಬಾರದು. ಮುಂದೆ ತಮಗೂ ಬಿಜಾಪುರದ ಸುಲ್ತಾನರಿಗೂ ಯುದ್ಧ ಸಂಭವಿಸಿದರೆ ನೀವು ಸಹಾಯ ಮಾಡಬೇಕು ಎಂದು ಒಪ್ಪಂದ ಮಾಡಿಕೊಳ್ಳುತ್ತಾರೆ. ಶ್ರೀಕೃಷ್ಣದೇವರಾಯರ ದಾಳಿಗಳಲ್ಲಿ ರಾಯಚೂರು ಮುತ್ತಿಗೆ ಮತ್ತು ಪತನ ಬಹುಮಹತ್ವವುಳ್ಳದ್ದು. ರಾಯಚೂರು ಮತ್ತು ಮುದ್ಗಲ್ಲು ಕೋಟೆಗಳಿಗಾಗಿ ಗುಲ್ಬರ್ಗ, ಬಿಜಾಪೂರ ಮತ್ತು ವಿಜಯನಗರದ ನಡುವೆ ಯಾವಾಗಲೂ ಕದನಗಳಾಗುತ್ತಿದ್ದವು.

ಕೃಷ್ಣದೇವರಾಯರು ತಮ್ಮ ತಾರುಣ್ಯದಲ್ಲಿ ನಾಗಲಾಂಬಿಕೆಯೆಂಬ ನಾಟ್ಯಗಾರ್ತಿಯ ಸ್ನೇಹ ಮಾಡಿ ಬರಬರುತ್ತ ಆಕೆಯ ನಿಷ್ಕಲ್ಮಷ ಪ್ರೇಮ, ಆಕೆಯು ಮಾಡುವ ಸೇವೆ ಇವುಗಳಿಗೆಲ್ಲ ಮನಸೋತ ದೊರೆಗಳು ಆಕೆಯನ್ನು ವಿವಾಹವಾಗಿ ಚಿನ್ನಾದೇವಿಯೆಂದೇ ಕರೆಯುತ್ತಾರೆ. ಶ್ರೀಕೃಷ್ಣದೇವರಾಯರು ದಂಡೆತ್ತಿ ಹೋಗಿ ಮೊದಲು ಶಿವನಸಮುದ್ರಕ್ಕೆ ಮುತ್ತಿಗೆ ಹಾಕಿ ಕಪ್ಪ ಕಾಣಿಕೆ ಪಡೆದುಕೊಂಡು ಶ್ರೀರಂಗಪಟ್ಟಣದಲ್ಲಿ ಬೀಡು ಬಿಡುತ್ತಾನೆ. ಅಲ್ಲಿಗೆ ಹೋಗಿ ಭೇಟಿಯಾದ ತಿಮ್ಮಣ್ಣ ಕವಿ ಕುಮಾರವ್ಯಾಸ ಕವೀಂದ್ರನಿಂದ ಸ್ಫೂರ್ತಿ ಪಡೆದು ತಾನು ಕಾವ್ಯ ರಚಿಸುತ್ತಿರುವುದಾಗಿ ಹೇಳಿದಾಗ ದೊರೆಗಳು ಕುಮಾರವ್ಯಾಸರು ಹತ್ತು ಪರ್ವಗಳನ್ನು ಬರೆದಿದ್ದು, ಉಳಿದ ಎಂಟು ಪರ್ವಗಳನ್ನು ಬರೆಯುವಂತೆ ಪ್ರೇರೇಪಿಸುತ್ತಾರೆ. ಉದಯಗಿರಿಯ ಗಜಪತಿರಾಯರನ್ನು ಸೋಲಿಸಿ ಅವರ ಮಗಳಾದ ಜಗನ್ಮೋಹಿನಿಯನ್ನು ವಿವಾಹವಾಗುವರು. ಆಕೆಯನ್ನು ಸಿಂಹಾದ್ರಿಯಲ್ಲಿಯೇ ಬಿಟ್ಟು ಬಂದು ರಾಜಧಾನಿಯಲ್ಲಿ ಜಗನ್ಮೋಹಿನಿ ಅರಮನೆಯನ್ನು ಕಟ್ಟಿಸಿ ಆಕೆಯೊಂದಿಗೆ ಗೃಹಪ್ರವೇಶ ಮಾಡುವರು. ಜಗನ್ಮೋಹಿನಿಯೇ ದೊರೆಗಳನ್ನು ಕಾವ್ಯ ಬರೆಯುವಂತೆ ಪ್ರೇರೇಪಿಸುವಳು.

ವ್ಯಾಸತೀರ್ಥರು ಕನಕದಾಸರನ್ನು ದೊರೆಗಳಿಗೆ ಪರಿಚಯಿಸಿ, ತಾವು ತಿರುಪತಿ ಕ್ಷೇತ್ರಕ್ಕೆ ಹೋಗಬೇಕೆಂದಿರುವ ವಿಚಾರ ಹೇಳಿ, ಇಲ್ಲಿ ತಮ್ಮ ಶಿಷ್ಯ ವಿಜಯದಾಸ ಎಲ್ಲ ಕರ್ತವ್ಯವನ್ನು ನಿರ್ವಹಿಸುತ್ತಾನೆ ಎನ್ನುವರು. ಗುರುದೇವರ ಮಾತುಗಳಿಗೆ ಪ್ರತಿ ಹೇಳದೆ ಆದಷ್ಟು ಬೇಗ

ಹಿಂದಿರುಗಬೇಕೆಂದು ಹೇಳುವರು. ಹೊಯ್ಸಳ ನಾಡಿನಿಂದ ಬಂದ ನರಸಿಂಹಶರ್ಮರನ್ನು ಪರಿಚಯಿಸಿ ಅವರು ಶ್ರೀ ಲಕ್ಷ್ಮೀನರಸಿಂಹಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕೆಂದಿರುವ ವಿಚಾರ ಹೇಳಿದಾಗ ಶಿಲ್ಪಿಗಳಲ್ಲದ ಇವರಿಂದ ಹೇಗೆ ಸಾಧ್ಯ ಎಂದು ಅನುಮಾನಿಸುತ್ತಲೇ ಗುರುಗಳ ಮಾತಿಗೆ ಒಪ್ಪುವರು.

ಶ್ರೀಕೃಷ್ಣದೇವರಾಯರು 'ಆಮುಕ್ತಮೌಲ್ಯದ' ಎಂಬ ಕಾವ್ಯ ರಚಿಸುವರು. ಅದನ್ನು ಅಲ್ಲಾಸಾನಿ ಪೆದ್ದನ ವಾಚನ ಮಾಡಿ ಕವಿಗಳೆಲ್ಲರೂ ಸೇರಿ ದೊರೆಗಳಿಗೆ 'ಉರುಕವಿವೈಭವ ನಿವಾಹ ನಿಧಾನ' ಎಂಬ ಬಿರುದನ್ನು ನೀಡುವರು. ಮುಂದೆ ಜಗನ್ಮೋಹಿನಿಗೆ ಪುತ್ರರತ್ನವೊಂದು ಜನಿಸಿ ಅದರ ಜಾತಕ ತೋರಿಸಲಾಗಿ, ಅದರ ಜೊತೆಗೆ ಪ್ರಭುಗಳ ಜಾತಕ ನೋಡಲಾಗಿ ಅವರಿಗೆ 'ಕುಹುಯೋಗ' ಗಂಡಾಂತರವಿರುವುದು ತಿಳಿಯುತ್ತದೆ. ಈ ಗಂಡಾಂತರದಿಂದ ಪಾರಾಗಬೇಕಾದರೆ ಯಾರಾದರೂ ರಾಜ್ಯದಾನ ತೆಗೆದುಕೊಳ್ಳಬೇಕು. ಆ ಗಂಡಾಂತರ ಅವರಿಗೆ ಒದಗುವುದು. ಆದರೆ ಯತಿಗಳಿಗೆ ಅದು ಅನ್ವಯಿಸದಿರುವುದರಿಂದ ಶ್ರೀ ವ್ಯಾಸ ಭಗವಾನರು ರಾಜ್ಯದಾನ ಪಡೆದುಕೊಂಡು ಅದನ್ನು ಗಂಡಾಂತರ ಮುಗಿದ ನಂತರ ಮರಳಿಸಬಹುದು. ಹೀಗಾಗಿ ಶ್ರೀ ವ್ಯಾಸ ಭಗವಾನರನ್ನು ತಿರುಪತಿಯಿಂದ ಕರೆಯಿಸಿ ಈ ಕಾರ್ಯ ಮಾಡುವರು.

ದೊರೆಗಳು ಅಚ್ಯುತರಾಯರನ್ನು ರಾಜ್ಯಪ್ರತಿನಿಧಿಗಳಾಗಿ ನೇಮಿಸಿ ಮಹಾಮಂತ್ರಿಗಳಿಗೆ ಸರ್ವಾಧಿಕಾರ ವಹಿಸಿ, 'ಸಾಮ್ರಾಜ್ಯ ಪರ್ಯಟನ' ಮಾಡುವರು. ಆ ಸಂದರ್ಭದಲ್ಲಿ ಯುವರಾಜರು ವಿಷಪ್ರಾಶನದಿಂದ ಮರಣಹೊಂದುವರು. ಮಗನ ಸಾವಿನ ಆಘಾತದಿಂದ ತಿರುಮಲಾದೇವಿ ಮತ್ತು ಪ್ರಭುಗಳು ಚೇತರಿಸಿಕೊಳ್ಳುವುದೇ ಇಲ್ಲ. ಜಗನ್ಮೋಹಿನಿ ಮಗನಿಗೆ ಪಟ್ಟ ಕಟ್ಟಬೇಕೆಂದು ತಿರುಮಲಾದೇವಿ ಸಲಹೆ ನೀಡಿದಾಗ ಪ್ರಭುಗಳು ಹದಿನಾಲ್ಕು ತಿಂಗಳ ಹಸುಗೂಸಿಗೆ ಪಟ್ಟಕಟ್ಟಿ ಲೋಕದ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ ಎನ್ನುವರು. ಸಾಕಷ್ಟು ಆಲೋಚಿಸಿದ ಪ್ರಭುಗಳು ರಾಮರಾಯರಿಗೆ ರಾಜ್ಯದಲ್ಲಿ ನಡೆಯುತ್ತಿರುವ ಒಳಜಗಳಗಳ ಕುರಿತು ಹೇಳುತ್ತ ಶ್ರೀ ಅಚ್ಯುತರಾಯರು ಸಿಂಹಾಸನಾಸೀನರಾಗಲಿ ನೀವು ಅವರ ಮಹಾಮಂತ್ರಿಗಳಾಗಿದ್ದುಕೊಂಡು ಧರ್ಮಮಾರ್ಗ ಬಿಡದೆ ರಾಜ್ಯಭಾರ ಮಾಡಿ ಎಂದು ಇಹಲೋಕ ತ್ಯಜಿಸಿದರು.

೬.೧.೧೭ ಅಚ್ಯುತರಾಯರು :

ಅಚ್ಯುತರಾಯರು ತುಳುವ ನರಸಿಂಹರಾಯರಿಗೆ ಓಬಾಂಬೆಯಲ್ಲಿ ಜನಿಸಿದವರು. ಶ್ರೀಕೃಷ್ಣದೇವರಾಯರ ತಮ್ಮಂದಿರಾಗಿದ್ದು ಶ್ರೀಕೃಷ್ಣದೇವರಾಯರ ಮರಣಾನಂತರ ಪಟ್ಟಕ್ಕೇರುತ್ತಾರೆ. ಇವರ ಸೌಭಾಗ್ಯವತಿ ವರದಾಂಬಿಕೆ, ಕುಮಾರ ಚಿನ್ನವೆಂಕಟಾದ್ರಿ. 'ಅಚ್ಯುತದೇವರಾಯರು ಪಟ್ಟಕ್ಕೆ

ಬಂದ ಕೂಡಲೇ ಬಿಜಾಪುರ ಸುಲ್ತಾನ ಆದಿಲ್ ಷಾಹನು ರಾಯಚೂರು, ಮುದಗಲ್ಲು ಕೋಟೆಗಳಿಗೆ ಮೂರು ತಿಂಗಳವರೆಗೆ ಮುತ್ತಿಗೆ ಹಾಕಿ ತನ್ನ ವಶ ಮಾಡಿಕೊಂಡನೆಂದು, 'ಫರಿಷ್ತಾ' ಬರೆದಿದ್ದಾನೆ. ಆದರೆ ಇದು ಎಷ್ಟು ನಿಜವೋ ತಿಳಿದಿಲ್ಲ. ಅಚ್ಯುತರಾಯಭ್ಯುದಯದಲ್ಲಿ ಅಚ್ಯುತರಾಯರು ಹಯಪತಿಯಾದ ಬಿಜಾಪುರ ಸುಲ್ತಾನನು ರಾಯಚೂರನ್ನು ಮುತ್ತಲು, ಆತನ ಮೇಲೆ ದಾಳಿ ಮಾಡಿ, ಪೂರ್ತಿಯಾಗಿ ಸೋಲಿಸಿದನೆಂದೂ, ಮಹಮ್ಮದೀಯರು ಪರಾಜಿತರಾದರೆಂದೂ, ಆಗ ಸುಲ್ತಾನರು ರಾಯರ ಪಾದಾಕ್ರಾಂತನಾದನೆಂದೂ, ರಾಯರು ಸುಲ್ತಾನನ ರಾಜಭಕ್ತಿಯನ್ನು ಅಂಗೀಕರಿಸಿ, ವಿಜಯೋತ್ಸವದಿಂದ ವಿದ್ಯಾಪುರ ಪ್ರವೇಶ ಮಾಡಿದನೆಂದೂ ವರ್ಣಿಸಲಾಗಿದೆ. ಆದ್ದರಿಂದ ಫರಿಷ್ತಾ ಮಾತುಗಳನ್ನು ನಂಬಲು ಸಾಧ್ಯವಿಲ್ಲ. ಆದಿಲ್ ಷಾಹನು ರಾಯಚೂರಿಗೆ ಮುತ್ತಿಗೆ ಹಾಕಿರಬಹುದು. ಆದರೆ ಅದನ್ನು ಮುದುಗಲ್ಲನ್ನು ಕೂಡಾ ಗೆದ್ದು ತನ್ನ ರಾಜ್ಯದಲ್ಲಿ ಸೇರಿಸಿಕೊಂಡನೆಂದು ಹೇಳುವುದು ಸಾಹಸದ ಮಾತು'[೨೧] (ಗುರುಮೂರ್ತಿ ಪೆಂಡಕೂರು, ೨೦೧೪, ಪುಟ–೭೮) ಎಂಬ ಅಭಿಪ್ರಾಯವಿದೆ.

ಅಚ್ಯುತರಾಯರು ರಾಮರಾಯರಿಗೆ ನೀವು ಮತ್ತು ನಿಮ್ಮ ಸಹೋದರರೂ ನಮ್ಮ ಎಡಬಲ ಭುಜಗಳಂತಿದ್ದು ಸಾಮ್ರಾಜ್ಯದ ದಕ್ಷತೆಯನ್ನು ಕಾಪಾಡಬೇಕೆನ್ನುವರು. ಶ್ರೀಅಚ್ಯುತರಾಯರು ಕುಟುಂಬ, ಪರಿವಾರ ಸಮೇತರಾಗಿ, ಸಕಲ ರಾಜವೈಭವದೊಂದಿಗೆ ರಾಜ್ಯಪರ್ಯಟನ ಆರಂಭಿಸುತ್ತಾರೆ. ಆ ಸಂದರ್ಭದಲ್ಲಿಯೇ ಯಲಹಂಕ ಭೂಪಾಲ ಮಾಗಡಿ ಕೆಂಪೇಗೌಡರು ತಮ್ಮ ರಾಜ್ಯಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ಸುವ್ಯವಸ್ಥೆ ತೋರಿಸುವರು. ಅದನ್ನು ಮೆಚ್ಚಿಕೊಂಡ ಪ್ರಭುಗಳು 'ಸಾಮ್ರಾಜ್ಯದ ಬಗ್ಗೆ ನಮ್ಮ ಸಾಮಂತರೆಲ್ಲರೂ ನಿಮ್ಮಂತೆ ನಿಷ್ಠೆ ತಳೆದು ಪ್ರಜೆಗಳನ್ನು ತೃಪ್ತರನ್ನಾಗಿಟ್ಟುಕೊಂಡರೆ ಸಾಮ್ರಾಜ್ಯದ ಅಸ್ತಿತ್ವ ಅಲುಗಾಡಿಸಲು ಆದಿಶೇಷನಿಗೂ ಸಾಧ್ಯವಿಲ್ಲ'[೨೨] (ಕೃಷ್ಣರಾಯರು ಅ.ನ, ೨೦೦೪, ಅಭಯಪ್ರಧಾನ ಮತ್ತು ತೇಜೋಭಂಗ, ಪುಟ–೨೨೧) ಎಂಬ ಮಾತುಗಳನ್ನಾಡುವರು. ರಾಜ್ಯಪರ್ಯಟನ ಮುಗಿಸಿಕೊಂಡು ಬಂದ ನಂತರ ಪ್ರಭುಗಳ ಚಿತ್ತವೃತ್ತಿಯೇ ಬದಲಾಗಿ, ರಾಜ್ಯಕಾರ್ಯದ ಬಗ್ಗೆ ಉಪೇಕ್ಷೆ ಹುಟ್ಟಿ ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಒಂದು ದಿನ ಯುವರಾಜ ವೆಂಕಟಾದ್ರಿಯನ್ನು ಬರಮಾಡಿಕೊಂಡು 'ಶ್ರೀ ರಾಮರಾಯರ ಇಚ್ಛಾನುಸಾರ ನಡೆದುಕೊಳ್ಳಿ, ಅವರೇ ನಮ್ಮ ಸಾಮ್ರಾಜ್ಯದ ಆಧಾರಸ್ತಂಭ. ನಿಮ್ಮ ಚಿಕ್ಕಪ್ಪಂದಿರು ಶ್ರೀ ಸದಾಶಿವರಾಯರ ಬಗ್ಗೆ ಪ್ರೀತಿ, ಗೌರವಗಳಿಂದ ವರ್ತಿಸಿ ಗೋಬ್ರಾಹ್ಮಣರ ಹಿತಸಂರಕ್ಷಕರಾಗಿ ಆ ಚಂದ್ರಾರ್ಕವಾದ ಕೀರ್ತಿಗಳಿಸಿ, ಇಡಿಯ ದಕ್ಷಿಣ ಭಾರತ ವಿಜಯನಗರದ ವರಾಹಲಾಂಛನದಡಿಯಲ್ಲಿ ಮೆರೆಯಬೇಕೆಂದು ನಿಮ್ಮ ದೊಡ್ಡಪ್ಪಂದಿರು ಪದೇ ಪದೇ ಹೇಳುತ್ತಿದ್ದರು. ಅವರ ಇಷ್ಟಾರ್ಥ ನಾವು ನೆರವೇರಿಸಲಿಲ್ಲ. ನೀವು ನೆರವೇರಿಸಿ'[೨೩] (ಕೃಷ್ಣರಾಯರು ಅ.ನ, ೨೦೦೪,

ಅಭಯಪ್ರಧಾನ ಮತ್ತು ತೇಜೋಭಂಗ, ಪುಟ-೨೨೪) ಎಂದು ಉಪದೇಶಿಸಿ ಕ್ರಿ.ಶ ೧೫೪೨ ರಲ್ಲಿ ವೈಕುಂಠಯಾತ್ರೆ ಮಾಡುವರು. ಅಚ್ಯುತರಾಯನ ಆಳ್ವಿಕೆಯು ಸುಗಮವಾಗಿರಲಿಲ್ಲ. ಎಲ್ಲ ಕಷ್ಟಗಳನ್ನು ಧೈರ್ಯದಿಂದ ಎದುರಿಸುವನು. ರಾಜನಾಥ ಡಿಂಡಿಮನೆಂಬ ಕವಿಯು ಅಚ್ಯುತರಾಯನ ಜೀವನ ಚರಿತ್ರೆಯನ್ನು 'ಅಚ್ಯುತರಾಮಾಭ್ಯುದಯ'ವೆಂಬ ಸಂಸ್ಕೃತ ಕಾವ್ಯದಲ್ಲಿ ಸೊಗಸಾಗಿ ನಿರೂಪಿಸಿರುವರು.

೬.೧.೧೮ ತಿರುಮಲರಾಯರು :

ತಿರುಮಲರಾಯರು ರಾಮರಾಯರ ಸಹೋದರರಾಗಿದ್ದು ಅಣ್ಣನ ಪ್ರತಿಯೊಂದು ಕಾರ್ಯದಲ್ಲೂ ಜೊತೆಗೇ ಇರುತ್ತಾರೆ. ರಾಜ್ಯದ ಏಳ್ಗೆಗೆ ರಾಮರಾಯರಂತೆಯೇ ಶ್ರಮಿಸುತ್ತಿರುತ್ತಾರೆ. ಆದರೆ ರಕ್ಕಸತಂಗಡಿ ಯುದ್ಧದಲ್ಲಿ ರಾಮರಾಯರ ಹತ್ಯೆಯಾದಾಗ ಅವರ ಕ್ಷಮಾಪತಿ ಸ್ಥಾನವನ್ನು ತಾವೇ ಅಲಂಕರಿಸುತ್ತಾರೆ. ಅವರಂತೆಯೇ ಆಡಳಿತ ಮಾಡಲು ಮುಂದಾಗುತ್ತಾರೆ. ಇತ್ತ ಸದಾಶಿವರಾಯರು ರಾಮರಾಯನ ಆಳ್ವಿಕೆಯಲ್ಲಿ ಹೇಗೆ ನೆಪಕ್ಕೆ ಪಟ್ಟಾಧಿಕಾರದಲ್ಲಿದ್ದು ಹೆಸರಿಗೆ ಮಾತ್ರ ಮಹಾಪ್ರಭುಗಳಾಗಿರುತ್ತಾರೋ ಹಾಗೆಯೇ ಮುಂದುವರಿದಾಗ ಶ್ರೀ ಸದಾಶಿವರಾಯರು ತಮ್ಮದೇ ಪಕ್ಷ ಕಟ್ಟಲು ತೊಡಗುವ ಸುದ್ದಿ ತಿಳಿದ ತಿರುಮಲರಾಯರು ಅವರನ್ನು ಗುಪ್ತವಾಗಿ ಕೊಲೆ ಮಾಡಿಸಿ ತಾವೇ ಸಿಂಹಾಸನವೇರಿ ತಮ್ಮ ಮಗನಾದ ರಂಗರಾಯನನ್ನು ಯುವರಾಜನನ್ನಾಗಿ ನೇಮಿಸುತ್ತಾರೆ. ಈತ ಪೆನುಕೊಂಡೆಯಲ್ಲಿ ರಾಜ್ಯ ಸ್ಥಾಪಿಸುತ್ತಾನೆ. ಇಲ್ಲಿಂದ ಅರವೀಡು ವಂಶದ ಇತಿಹಾಸ ಪ್ರಾರಂಭವಾಗುತ್ತದೆ.

ತಿರುಮಲರಾಯರು ಸಿಂಹಾಸನವೇರಿದರೂ ಸಹ ಅಸಂತುಷ್ಟರಾಗುತ್ತಾರೆ. ಸುತ್ತಲಿನ ಪ್ರದೇಶಗಳೆಲ್ಲವನ್ನೂ ಸುಲ್ತಾನರು ಗೆದ್ದುಕೊಂಡು ರಾಜ್ಯವೂ ಕಿರಿದಾಗಿ ಹಾಳುಹಂಪೆಯಾಗಿರುತ್ತದೆ. ಅಷ್ಟೇ ಅಲ್ಲದೆ ಒಳಜಗಳಗಳೂ ಹೆಚ್ಚಾಗಿರುತ್ತವೆ. ವಯೋಧರ್ಮದಿಂದಲೂ, ಅನಾರೋಗ್ಯದಿಂದಲೂ ತಿರುಮಲರಾಯರು ರಾಜ್ಯಭಾರ ನಿರ್ವಹಿಸುವುದು ಕಷ್ಟವಾಗಿ ಎಲ್ಲ ಕೆಲಸ ಕಾರ್ಯಗಳನ್ನು ಸಹೋದರ ವೆಂಕಟಾದ್ರಿಯೇ ನಿರ್ವಹಿಸುತ್ತಿರುತ್ತಾನೆ. ಒಂದು ದಿನ ವೆಂಕಟಾದ್ರಿ ಈಗಲೇ ಉತ್ತರಾಧಿಕಾರಿಯನ್ನು ಘೋಷಿಸುವುದು ಒಳ್ಳೆಯದು. ಸ್ವಯೂಥ ಕಾಳಗಗಳಾಗದಿರಲಿ ಎಂದಾಗ ತಿರುಮಲರಾಯರು ವೆಂಕಟಾದ್ರಿಯನ್ನೇ ಉತ್ತರಾಧಿಕಾರಿ ಮಾಡಬೇಕೆಂದಾಗ ತಾನು ನಿಮಗಿಂತಲೂ ಸ್ವಲ್ಪ ಚಿಕ್ಕವನು ಆ ಶಕ್ತಿ ತಮಗಿಲ್ಲ. ಹೀಗಾಗಿ ಕುಮಾರ ರಂಗರಾಯರನ್ನು ಉತ್ತರಾಧಿಕಾರಿಯೆಂದು ಘೋಷಿಸಿ ಅವರು ಸಮರ್ಥ ದೊರೆ ಎನ್ನುವನು. ಅವರಿಂದಲೇ ಅರವೀಡುವಂಶ ಮುಂದುವರಿಯಲಿ ಎಂದು ಸಲಹೆ ನೀಡುವರು. ಆಗ ತಿರುಮಲರಾಯರು ಹಾಗಾದರೆ ನೀವು ಕ್ಷಮಾಪತಿಗಳಾಗಿ ಅವರಿಗೆ ಸೂಕ್ತ ಸಲಹೆಗಳನ್ನು ನೀಡಬೇಕೆನ್ನುವರು. ಶ್ರೀ ರಂಗರಾಯರಿಗೆ

ಪಟ್ಟಾಭಿಷೇಕದ ಸಿದ್ಧತೆ ಮಾಡುವಷ್ಟರಲ್ಲಿಯೇ ತಿರುಮಲರಾಯರು ಇಹಲೋಕದ ಯಾತ್ರೆ ಮುಗಿಸುತ್ತಾರೆ.

೬.೧.೧೯ ಕೆಂಪೇಗೌಡ :

ಬೆಂಗಳೂರು ನಗರ ಸ್ಥಾಪಕನೂ, ಗವೀಪುರ, ಶಿವಗಂಗೆ ದೇವಾಲಯಗಳ ನಿರ್ಮಾತೃವೂ ಆದ ಮಾಗಡಿ ಕೆಂಪೇಗೌಡ ದೊಡ್ಡ ಅರಸನಲ್ಲ. ಅವನು ವಿಜಯನಗರದ ಸಾಮಂತನಾಗಿದ್ದ ಪಾಳೆಯಗಾರ ಆದರೆ ಈ ಪುಣ್ಯಪುರುಷನ ನಿಷ್ಕಳಂಕ ಜೀವನ, ಅಚಲ ಸ್ವಾಮಿಭಕ್ತಿ, ಅನುಪಮ ದೈವಭಕ್ತಿ ಲೋಕಕ್ಕೆ ಮಾದರಿಗಳಾಗಿವೆ.

"ಕುಂತು ಕುಣಿಗಲ ಗೆದ್ದ

ನಿಂತು ಮಾಗಡಿ ಗೆದ್ದ

ಮಾತಿಲ್ಲದೆ ಗೆದ್ದ ಮಧುರೇನ"

ಮಾಗಡಿ ಕೆಂಪೇಗೌಡನಿಗೆ ಸಂಬಂಧಪಟ್ಟ ಗಾದೆ ಇದೆಂದು ಶ್ರೀ ಸುಧಾಕರ ಇದರ ವಿಶ್ಲೇಷಣೆಯನ್ನು ಮಾಡಿದ್ದಾರೆ. ಯಲಹಂಕ ಪ್ರಭುಗಳಲ್ಲಿ ಮಾಗಡಿಯನ್ನಾಳಿದ ಕೆಂಪೇಗೌಡನ ಬಗ್ಗೆ ಅಪೂರ್ವವಾದ ಜನಪದ ಕಾವ್ಯವೂ ಒಂದಿದೆ. ಈತ ಅತ್ಯಂತ ಸಮರ್ಥನಾಗಿದ್ದು ಲೀಲಾಜಾಲವಾಗಿ ಕುಣಿಸಲು, ಮಧುರೆ, ಮಾಗಡಿಗಳನ್ನು ವಶಪಡಿಸಿಕೊಂಡ ಸಂದರ್ಭವನ್ನು ಈ ಗಾದೆ ನೆನಪಿಗೆ ತರುತ್ತದೆ'[೨೪] (ಪರಮಶಿವಯ್ಯ ಜಿ.ಶಂ, ೨೦೧೨, ಪುಟ-೫೪) ಎಂಬ ವಿಚಾರವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಕೆಂಪನಂಜೇಗೌಡ ಮತ್ತು ಲಿಂಗಮಾಂಬೆಯವರ ಪುತ್ರನಾಗಿ ಜನಿಸಿದ ಈತ ಚಿಕ್ಕವಯಸ್ಸಿನಲ್ಲಿಯೇ ವಯೋಧರ್ಮ ಮೀರಿದ ಗಾಂಭೀರ್ಯ, ಶೌರ್ಯ, ದೈವಭಕ್ತಿ, ಗುರುಭಕ್ತಿಗಳಿದ್ದವು. ಕೆಂಪೇಗೌಡ ಪ್ರಾಪ್ತವಯಸ್ಕನಾಗಲು ಐಗಂಡಪುರದಲ್ಲಿ ಆಶ್ರಮ ಸ್ಥಾಪಿಸಿದ್ದ ಮಾಧವಭಟ್ಟರ ಹತ್ತಿರ ಶಿಕ್ಷಣ ಪಡೆದುಕೊಂಡು ರಾಜಧಾನಿಗೆ ಮರಳಿದ ನಂತರ ತಾಯಿಯ ಸಹೋದರನ ಪುತ್ರಿ ಚನ್ನಮಾಂಬೆಯ ಜೊತೆಗೆ ವಿವಾಹವಾಗುತ್ತದೆ. ಇಮ್ಮಡಿ ಕೆಂಪೇಗೌಡನೆಂಬ ಪುತ್ರರತ್ನವೊಂದು ಜನಿಸುತ್ತದೆ. ಕೆಂಪೇಗೌಡ ತಮ್ಮ ರಕ್ಷಣೆಗೆ ಮದ್ದುಗುಂಡುಗಳನ್ನು ತಯಾರಿಸಬೇಕೆಂದು ಆಲೋಚಿಸಿದರೆ, ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯ ತನ್ನ ಸುತ್ತಮುತ್ತಲಿನ ಪಾಳೆಯಗಾರರನ್ನೆಲ್ಲ ಒಂದುಗೂಡಿಸಿ ಕೆಂಪೇಗೌಡನ ಮೇಲೆ ಎತ್ತಿ ಕಟ್ಟಿ ಮದ್ದುಗುಂಡುಗಳನ್ನು ತಯಾರಿಸ ಹೊರಟ ಈತನನ್ನು ಹಾಗೆಯೇ ಬೆಳೆಯಗೊಟ್ಟರೆ ತಮ್ಮ

ಸರ್ವನಾಶ ಖಂಡಿತವೆಂದು ಎಲ್ಲರನ್ನೂ ಎತ್ತಿ ಕಟ್ಟುತ್ತಾನೆ. ಬೆಂಗಾಳೂರು ನಗರವನ್ನು ಕಟ್ಟಬೇಕೆಂದು ಯೋಚಿಸಿ ಅದಕ್ಕೆ ಬೇಕಾಗುವ ಖರ್ಚು ವೆಚ್ಚಗಳನ್ನು ಭರಿಸಲು ಟಂಕಸಾಲೆ ಏರ್ಪಡಿಸಿ 'ಭೈರವನಾಣ್ಯ' ಮುದ್ರಿಸಲು ಮುಂದಾಗಿ ಅನುಮತಿಗಾಗಿ ವಿಜಯನಗರಕ್ಕೆ ಹೋದಾಗ ದೊರೆಗೆ ಹೇಳುವ ಅವಶ್ಯಕತೆಯಿಲ್ಲವೆಂದು ರಾಮರಾಯರು ಹೇಳಿ ಕಳಿಸುವರು.

ಬೆಂಗಾಳೂರಿನ ಕೋಟೆ ನಿರ್ಮಾಣ ಕಾರ್ಯ ಪ್ರಾರಂಭವಾಗಿ ಕೋಟೆಯ ಬಾಗಿಲನ್ನು ಕೂಡಿಸಿದರೆ ಅದು ಬೆಳಗಾಗುವುದರೊಳಗೆ ಕೆಳಗೆ ಬೀಳುತ್ತಿತ್ತು. ಸಾಕಷ್ಟು ವ್ಯಾಕುಲಕ್ಕೆ ಒಳಗಾದ ಕೆಂಪೇಗೌಡ ಕೆಂಪಾಂಬಿಕೆಗೆ ನನ್ನನ್ನೇಕೆ ಪರೀಕ್ಷಿಸುತ್ತಿರುವೆ ತಾಯಿ ಎಂದು ಆ ದೇವಿಗೆ ಮೊರೆ ಹೋಗುತ್ತಾನೆ. ಕೆಲವರು ನರಮೇಧವಾಗದೆ ಕೋಟೆಯ ಬಾಗಿಲು ನಿಲ್ಲದು ಎನ್ನುವರು. ಮತ್ತೆ ಕೆಲವರು ತುಂಬಿದ ಬಸುರಿಯನ್ನು ಬಲಿಕೊಟ್ಟಲ್ಲದೆ ಗ್ರಾಮದೇವತೆ ತೃಪ್ತಳಾಗುವುದಿಲ್ಲವೆನ್ನುವರು. ಕೆಂಪಾಂಬಿಕೆಯ ಅನುಗ್ರಹವಿಲ್ಲದಿದ್ದರೆ ಈ ಕೆಲಸವನ್ನು ಕೈ ಬಿಡುತ್ತೇನೆ. ಆದರೆ ಯಾರನ್ನೂ ಬಲಿಗೊಡಲು ಒಪ್ಪುವುದಿಲ್ಲ ಎಂದು ನಿರ್ಧರಿಸುವನು. ಆದರೆ ವಿಷಯ ತಿಳಿದ ಕೆಂಪೇಗೌಡರ ಸೊಸೆ ಲಕ್ಷ್ಮಮ್ಮ ತುಂಬುಗರ್ಭಿಣಿಯಾಗಿದ್ದು ತಾನೇ ಯಾರಿಗೂ ಹೇಳದೆ ಬಲಿದಾನವಾಗಿ ಕೋಟೆಯ ಬಾಗಿಲು ನಿಲ್ಲುವಂತೆ ಮಾಡುತ್ತಾಳೆ. ಈ ದೃಶ್ಯ ಕಂಡವರೆಲ್ಲ ದಿಗ್ಭ್ರಮೆಗೊಳಗಾಗುವರು. ಕೆಂಪೇಗೌಡರಂತೂ ಬಿಕ್ಕಿ ಬಿಕ್ಕಿ ಅಳುವರು.

ಒಂದು ದಿನ ಶ್ರೀರಂಗಪಟ್ಟಣಕ್ಕೆ ಶ್ರೀ ಶ್ರೀ ಅಚ್ಯುತರಾಯರು ಬಂದಾಗ ಬೆಂಗಾಳೂರಿಗೆ ಬಂದು ನಗರ, ಕೋಟೆ, ದೇವಾಲಯಗಳನ್ನು ಮೆಚ್ಚಿಕೊಳ್ಳುವರು. ಅಷ್ಟೇ ಅಲ್ಲ ಕೆಂಪೇಗೌಡರಿಗೆ ಮೂವತ್ತು ಸಹಸ್ರ ಸುವರ್ಣರಾಯವುಳ್ಳ ಹನ್ನೆರಡು ಹೋಬಳಿಗಳನ್ನು ಬಹುಮಾನವಾಗಿ ಕೊಡುವರು. ಕೆಂಪೇಗೌಡರು ತಮ್ಮ ಹೆಚ್ಚು ಕಾಲವನ್ನು ಶಿವಗಂಗೆಯಲ್ಲೇ ಕಳೆಯುತ್ತಿದ್ದುದರಿಂದ ಅದು ಎರಡನೆಯ ರಾಜಧಾನಿಯಾಗಿ ಮಾರ್ಪಟ್ಟಿತು. ಅಚ್ಯುತರಾಯರು ವಿಧಿವಶರಾದ ಸುದ್ದಿ ತಿಳಿಯದೇ ಕೆಂಪೇಗೌಡರು ಗಿಡ್ಡೇಗೌಡ ಮತ್ತು ವಿಶ್ವನಾಥಶಾಸ್ತ್ರಿಗಳೊಂದಿಗೆ ವಿಜಯನಗರಕ್ಕೆ ಪ್ರಯಾಣ ಬೆಳೆಸುವರು. ಸದಾಶಿವರಾಯರು ಕೆಂಪೇಗೌಡರನ್ನು ಕರೆಸಿ ಅಷ್ಟೊಂದು ಚಿಕ್ಕ ರಾಜ್ಯಕ್ಕೆ ಎಂಟುಸಾವಿರ ಕಾಲಾಳುಗಳೇಕೆ? ಸ್ವಂತ ನಾಣ್ಯಗಳನ್ನು ಮುದ್ರಿಸಲು ಅವರು ಕೊಟ್ಟ ನಿರೂಪ ಎಲ್ಲಿ ಎಂದು ಅನುಮಾನಿಸಿ ಸೆರೆಯಲ್ಲಿಡುವರು.

ಒಂದನೆಯ ಕೆಂಪೇಗೌಡನನ್ನು ಆನೆಗೊಂದಿಯಲ್ಲಿ ಸೆರೆಯಲ್ಲಿಟ್ಟ ಪ್ರಸಂಗವೊಂದನ್ನು ಚರಿತ್ರಕಾರರು ಉಲ್ಲೇಖಿಸುತ್ತಾರೆ. ಇದಕ್ಕೆ ಕಾರಣ ಆತ ಚಲಾವಣೆಗೆ ತಂದ ಭೈರವ ನಾಣ್ಯಗಳು. 'ಕೆಂಪೇಗೌಡ ಚಲಾವಣೆಗೆ ತಂದನೆಂದು ಹೇಳಲಾಗುವ ಭೈರವ ನಾಣ್ಯ ಈವರೆಗೆ ದೊರೆಯದೇ

ಇರುವುದು. ಕ್ಯಾಲಿಗುಲನ ಅಂಕಿತವಿರುವ ರೋಮನ್ ನಾಣ್ಯಗಳು ಬೆಂಗಳೂರಿನಲ್ಲಿ ದೊರೆಯಬಹುದಾದರೆ ಇತ್ತೀಚೆಗೆ ಜಾರಿಗೆ ತಂದ ಭೈರವನಾಣ್ಯವೇಕೆ ದೊರೆಯುವುದಿಲ್ಲ? ಹೀಗಾಗಿ ಕೆಂಪೇಗೌಡ ಸ್ವತಂತ್ರ ನಾಣ್ಯ ಚಲಾವಣೆಗೆ ಪ್ರಯತ್ನಿಸಿದನೆ? ಅಥವಾ ಚಲಾವಣೆಗೆ ತಂದನೆ ಎಂಬುದು ಭೈರವನಾಣ್ಯವೊಂದು ದೊರೆಯುವವರೆಗೆ ಸಮಸ್ಯೆಯಾಗಿಯೇ ಉಳಿಯಬೇಕಾಗುತ್ತದೆ'[೨೫] (ರಾಜೇಗೌಡ ಹ.ಕ, ೨೦೦೭, ಪುಟ-೧೫೪) ಎಂಬ ವಿಚಾರಗಳನ್ನು ನೋಡುತ್ತೇವೆ. ಯಾವೊಂದು ವಿಷಯವೇ ಗೊತ್ತಿರದ ಶ್ರೀ ಶ್ರೀ ರಾಮರಾಯರಿಗೆ ಕೆಂಪೇಗೌಡರ ಪುತ್ರ ಇಮ್ಮಡಿ ಕೆಂಪೇಗೌಡರು ಭೇಟಿ ಮಾಡಿ ಅನೇಕ ವರ್ಷಗಳಿಂದ ತಮ್ಮ ತಂದೆ ಸೆರೆಯಲ್ಲಿರುವ ವಿಷಯ ತಿಳಿಸುವರು. ಅಲ್ಲಿಗೆ ಹೋಗಿ ಕೆಂಪೇಗೌಡರನ್ನು ಭೇಟಿಯಾಗಿ ಆದ ಪ್ರಮಾದಕ್ಕೆ ವಿಷಾದ ವ್ಯಕ್ತಪಡಿಸುತ್ತ ತಮ್ಮ ಕೊರಳಲ್ಲಿದ್ದ ವಜ್ರಾಹಾರವನ್ನು ತೆಗೆದು ಕೆಂಪೇಗೌಡರ ಕೊರಳಿಗೆ ಹಾಕಿ ಇದು ತಮ್ಮ ಪ್ರೀತಿಯ ಗುರುತು ಎನ್ನುವರು.

ವಿಜಯನಗರದ ಮೇಲೆ ಸುಲ್ತಾನರು ದಾಳಿ ಮಾಡಿದಾಗ ಸುಲ್ತಾನರಿಗೆ ಜಯ ಲಭಿಸಿ ಶ್ರೀ ಶ್ರೀ ರಾಮರಾಯರು ಮಡಿಯುವರು. ವಿಷಯ ತಿಳಿದ ಕೆಂಪೇಗೌಡ ಹಾಸಿಗೆ ಹಿಡಿದು ಮಲಗುವನು. ಕೆಂಪೇಗೌಡನ ಮರಣದ ಬಗ್ಗೆ ಇಂದಿಗೂ ವಿವಾದಗಳಿವೆ. 'ಕ್ರಿ.ಶ ೧೫೬೫ ರಲ್ಲಿ ವಿಜಯನಗರ ಸಾಮ್ರಾಜ್ಯ ಅವನತಿಯ ಹಾದಿ ಹಿಡಿಯಿತು. ಸುಮಾರು ೨೦೦ ವರ್ಷಗಳ ಕಾಲ ವೈಭವದಿಂದ ಮೆರೆದ ಸಾಮ್ರಾಜ್ಯ ಕಣ್ಣ ಮುಂದೆಯೇ ನಾಶವಾದ್ದರಿಂದ ಕೆಂಪೇಗೌಡ ಮಾನಸಿಕವಾಗಿ ಕುಸಿದು ಹೋದ. ಮಮ್ಮಲ ಮರುಗಿದ. ವಿಜಯನಗರದ ದುರಂತ ಅಧ್ಯಾಯ ಕೆಂಪೇಗೌಡನ ಆರೋಗ್ಯವನ್ನು ಕೆಡಿಸಿತು. ಹಾಸಿಗೆ ಹಿಡಿದು ಮಲಗಿದ. ಅನಂತರ ಅವನು ಸುಧಾರಿಸಿಕೊಳ್ಳಲೇ ಇಲ್ಲ. ಒಂದು ಅಭಿಪ್ರಾಯದ ಪ್ರಕಾರ ಅವನು ಕ್ರಿ.ಶ ೧೫೬೯ ರಲ್ಲಿ ಸ್ವರ್ಗಸ್ಥನಾದ. ಆದರೆ, ಕೆಂಪೇಗೌಡನು ಕ್ರಿ.ಶ ೧೫೯೧ ರ ವರೆಗೆ ಯಲಹಂಕ ನಾಡನ್ನು ಆಳಿ, ನಂತರ ಮಗನಿಗೆ ಅಧಿಕಾರವಹಿಸಿಕೊಟ್ಟು ಕ್ರಿ.ಶ ೧೬೦೮ ರಲ್ಲಿ ನಿಧನ ಹೊಂದಿದ'[೨೬] (ನರೇಂದ್ರ ಕಟ್ಟಿ, ೨೦೧೩, ಪುಟ-೪೩) ಎಂದು ಕೆಲವು ಇತಿಹಾಸಕಾರರು ಹೇಳುತ್ತಾರೆ.

'ಕರ್ನಾಟಕ ಹಾಗೂ ದಕ್ಷಿಣ ಭಾರತದ ಇತರೆಡೆಗಳಲ್ಲಿ ಚಿಕ್ಕ ಪುಟ್ಟ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ 'ಪಾಳೆಯಗಾರರು' ಎಂದು ಕರೆಯುತ್ತಾರೆ. ಮಧ್ಯಕಾಲೀನ ಕರ್ನಾಟಕದಲ್ಲಿ ಅದರಲ್ಲೂ ವಿಜಯನಗರ ಅರಸರ ಕಾಲದಲ್ಲಿ ಹಾಗೂ ವಿಜಯನಗರ ಸಾಮ್ರಾಜ್ಯದ ಪತನಾನಂತರ ಆಳಿದ ಸಾಮಂತರು, ನಾಯಕರು, ಒಡೆಯರು ಪಾಳೆಯಗಾರರೆಂದು ಪ್ರಸಿದ್ಧರಾಗಿದ್ದಾರೆ. ಕನ್ನಡ ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ

ಜೀವನದ ಮೇಲೆ ತನ್ನದೇ ಆದ ಮುದ್ರೆ ಒತ್ತಿದವರು ಇವರು. ವಿಜಯನಗರ ಸಾಮ್ರಾಜ್ಯದ ಪತನಾನಂತರದಲ್ಲಿ ಕರ್ನಾಟಕ ಪರಂಪರೆ ಮತ್ತು ಸಂಸ್ಕೃತಿಯನ್ನು ಕಾಪಾಡಿ ಬೆಳೆಸಿಕೊಂಡು ಬಂದವರು ಈ ಪಾಳೆಯಗಾರರು.[೨೭] (ಶೈಲಜಾ ಹೊಸಳ್ಳೇರ, ೨೦೧೨, ಪುಟ-೧೦) ಇಂತಹ ಪಾಳೆಯಗಾರರಲ್ಲಿ ಒಬ್ಬರು ಚಿತ್ರದುರ್ಗದ ಪಾಳೆಯಗಾರರು. ಅವರು ಸುಮಾರು ಕ್ರಿ.ಶಕ ೧೫೮೮ ರಿಂದ ೧೭೭೯ ರವರೆಗೆ ಆಳ್ವಿಕೆ ನಡೆಸಿದ್ದಾರೆ. ಇವರ ಇತಿಹಾಸವನ್ನು ಕುರಿತು ತ.ರಾ.ಸುರವರು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ತಿಮ್ಮಣ್ಣನಾಯಕನಿಂದ ಆರಂಭವಾದ ಇವರ ಆಳ್ವಿಕೆಯು ಒಂದನೇ ಓಬಣ್ಣನಾಯಕ, ಒಂದನೇ ಕಸ್ತೂರಿರಂಗಪ್ಪನಾಯಕ, ಭರಮಣ್ಣನಾಯಕ, ಇಮ್ಮಡಿ ಕಸ್ತೂರಿರಂಗಪ್ಪನಾಯಕ, ಇಮ್ಮಡಿ ಮದಕರಿನಾಯಕ, ಚಿಕ್ಕಣ್ಣನಾಯಕ, ಲಿಂಗಣ್ಣನಾಯಕ ಮುಂತಾದವರಿಂದ ಆಳ್ವಿಕೆ ನಡೆದು ಅಂತಿಮವಾಗಿ ರಾಜಾವೀರ ಮದಕರಿನಾಯಕನ ಕಾಲದಲ್ಲಿ ಅಂದರೆ ೧೭೭೯ ರಲ್ಲಿ ಅಂತ್ಯವಾಯಿತು.

೬.೧.೨೦ ಇಮ್ಮಡಿ ಮದಕರಿನಾಯಕ :

ಇಮ್ಮಡಿ ಮದಕರಿನಾಯಕನು ೩೦ ಜನ ನಾಗತಿಯರನ್ನು ಮದುವೆಯಾಗಿದ್ದನು. ನಾಯಕರ ಪಟ್ಟದ ರಾಣಿ ಬಾಣದ ಮನೆ ಓಬವ್ವನಾಗತಿ. ಕಿರಿಯ ಹೆಂಡತಿ ಗೌರವ್ವನಾಗತಿ. ಮದಕರಿನಾಯಕನು ಇದ್ದೊಬ್ಬ ಮಗಳು ಕೆಂಚಮ್ಮ ಸತ್ತಾಗಲಿಂದಲೂ ಅದೇ ಕೊರಗಿನಲ್ಲಿಯೇ ಆರೋಗ್ಯ ಕೆಟ್ಟು ಅಸ್ತಂಗತರಾದರು. ಆದರೆ ಪುತ್ರ ಸಂತಾನವಿಲ್ಲದೇ ಸತ್ತದ್ದರಿಂದ ಅಂತ್ಯಕ್ರಿಯೆ ಮಾಡುವವರಾರು ಮುಂದಿನ ಉತ್ತರಾಧಿಕಾರಿಯ ಕುರಿತು ಶವವನ್ನು ಮುಂದೆ ಇಟ್ಟು ತಲೆಗೊಬ್ಬಬ್ಬರು ಒಂದೊಂದು ತೆರನಾಗಿ ಅಭಿಪ್ರಾಯ ವ್ಯಕ್ತಪಡಿಸಿದಾಗ ಕಿರಿಯ ಹೆಂಡತಿ ಗೌರವ್ವನಾಗತಿ ಮಧ್ಯ ಪ್ರವೇಶಿಸಿ ನಾಯಕರ ಮನದಾಳದಲ್ಲಿ ಏನಿತ್ತು ಎಂಬುದರ ಮನವರಿಕೆ ಮಾಡಿಸಲು ತೊಡಗಿದಾಗ ಮೊದಲು ನಾಯಕರ ಅಣ್ಣನ ಮಗ ಲಿಂಗಣ್ಣನಾಯಕರಿಂದ ಅಂತ್ಯಕ್ರಿಯಾ ಕಾರ್ಯವನ್ನು ನೆರವೇರಿಸಿ ತದನಂತರ ಉತ್ತರಾಧಿಕಾರಿಯ ಬಗ್ಗೆ ಚರ್ಚಿಸಿದರಾಯಿತು ಎಂದು ನಿರ್ಣಯಿಸುವರು.

ಇಮ್ಮಡಿ ಮದಕರಿನಾಯಕನು ಗೌರವ್ವನಾಗತಿಯ ಅಂತಃಪುರದಲ್ಲಿಯೇ ಹೆಚ್ಚಿನ ಸಮಯ ಕಳೆಯುತ್ತಿದ್ದು, ರಾಜ್ಯದ ಚಿಂತೆ ಮಾಡುವುದನ್ನೇ ಮರೆತಾಗ ಮುಂದೆ ಯಾರಾದರೂ ಸೂಕ್ತ ವ್ಯಕ್ತಿಯೊಬ್ಬನನ್ನು ಆರಿಸಬೇಕೆಂದು ಸಲಹೆ ನೀಡುವಳು. ನಾಯಕರು ಗೌರವ್ವನಾಗತಿಯ ಸೋದರ ಓಬಣ್ಣನಾಯಕರನ್ನು ತಂದು ಸಾಕುವ ಯೋಚನೆ ಮಾಡುತ್ತಾರೆ. ಮೊದಲು ಅದನ್ನು ಗೌರವ್ವನಾಗತಿಯೇ ನಿರಾಕರಿಸಿ ತಾನು ಲೋಕದ ನಿಂದನೆಗೆ ಗುರಿಯಾಗಬೇಕಾಗುತ್ತದೆ ಎನ್ನುವಳು. ನಾಯಕರು ದುರ್ಗದ ರಾಜಕೀಯ ಸ್ಥಿತಿ ಹಾಗೂ ದಳವಾಯಿಗಳ ಅಧಿಕಾರದ ವೈಖರಿಯನ್ನು ತಿಳಿಸಿ

ಓಬಣ್ಣನಾಯಕರನ್ನು ಸಾಕುತ್ತಾರೆ. 'ಸಿಂಹಾಸನವೆಂದರೆ ಏನೆಂದುಕೊಂಡಿದ್ದೀಯ ಗೌರಾ, ಇದು ಒಳಸಂಚುಗಳ ಮುಳ್ಳು ಪೊದರುಗಳ ನಡುವೆ ಬೆಳೆದ ಹೂವು. ಎಂತಲೇ ಇದರ ಮೇಲೆ ಕೂಡಲು ಮೈಯೆಲ್ಲಾ ಕಣ್ಣಿದ್ದರೂ ಸಾಲದು'[೨೮] (ಸುಬ್ಬರಾಯರು ತ.ರಾ, ೨೦೧೩, ಕಂಬನಿಯ ಕುಯಿಲು, ಪುಟ-೨೦) ಲಿಂಗಣ್ಣನಾಯಕರನ್ನು ಉತ್ತರಾಧಿಕಾರಿಯಾಗಿ ನೇಮಿಸಿದರೆ ಅಧಿಕಾರ ಅವನ ಕೈಯಲ್ಲಿ ಹೆಚ್ಚು ದಿನ ಉಳಿಯದೆಂಬ ವಿಚಾರವನ್ನು ತಿಳಿಸುವರು. ಓಬಣ್ಣನಾಯಕರನ್ನು ಮೊದಲು ಸಾಕಿ ತದನಂತರ ದತ್ತು ಸ್ವೀಕಾರ ಮಾಡಬೇಕೆಂಬ ಆಲೋಚನೆ ನಾಯಕರದಾಗಿತ್ತು. ಆದರೆ ಆ ಕಾರ್ಯ ನಡೆಯುವ ಪೂರ್ವದಲ್ಲಿಯೇ ನಾಯಕರು ಅಸ್ತಂಗತರಾದರು.

೬.೧.೨೧ ಚಿಕ್ಕಣ್ಣನಾಯಕ :

ಚಿಕ್ಕಣ್ಣನಾಯಕ ಗತಿಸಿದ ಸರ್ಜೆನಾಯಕರ ಎರಡನೆಯ ಮಗನಾಗಿದ್ದು 'ಕ್ರಿಶಕ ೧೬೭೪-೧೬೮೬ ರವರೆಗೆ ಆಳಿದ ಈತನ ಕಾಲದಲ್ಲಿ ದುರ್ಗ ದಳವಾಯಿಗಳ ಹಿಡಿತದಲ್ಲಿ ತತ್ತರಿಸಿತ್ತು. ಈತ ಅತ್ಯಂತ ನಿಪುಣ ಹಾಗೂ ಧೈರ್ಯಶಾಲಿ. ಅಣಜಿಯಲ್ಲಿ ನಡೆದ ಯುದ್ಧದಲ್ಲಿ ಹರಪನಹಳ್ಳಿಯವರನ್ನು ಬಗ್ಗುಬಡಿದ. ದುರ್ಗದಿಂದ ದಾವಣಗೆರೆ ಬಳಿಯ ಬಾತಿ ಗುಡ್ಡದ ಬಳಿ ಹರಿಹರವನ್ನು ಮುತ್ತಿಗೆ ಹಾಕಿದ. ಮುಸ್ಲಿಂರನ್ನು ಯುದ್ಧತಂತ್ರದಿಂದ ಬಗ್ಗುಬಡಿದು ಓಡಿಸಿದ. ಬಸವಾಪಟ್ಟಣ ರಾಯದುರ್ಗ ಪಾಳೆಯಗಾರರೊಂದಿಗೆ ಸ್ನೇಹ ಸಂಪಾದಿಸಿದ ಈತನು ಒಮ್ಮೆ ವೀರಶೈವ ದೀಕ್ಷೆ ಪಡೆದು ಮತ್ತೆ ತನ್ನ ಮೂಲ ಮತಕ್ಕೆ ಹಿಂದಿರುಗಿದ.'[೨೯] (ಗಿರಿಜಾ ಟಿ, ೧೯೯೧, ಪುಟ-೧೩) ದಳವಾಯಿ ಮುದ್ದಣ್ಣನ ಜೊತೆ ಸೇರಿ ಓಬಣ್ಣನಾಯಕರ ಕಗ್ಗೊಲೆಗೆ, ಓಬವ್ವನಾಗತಿಯರ ಆತ್ಮಹತ್ಯೆಗೆ ಪರೋಕ್ಷ ಕಾರಣನಾಗಿದ್ದಾನೆ. ತಾನು ಕಣಕುಪ್ಪೆಗೆ ಹೋಗಿದ್ದು ದುರ್ಗದಲ್ಲಿ ಎಲ್ಲ ಅಹಿತಕರವಾದ ವಿದ್ಯಮಾನಗಳು ಜರುಗಿದ ಮೇಲೆ ವಾಪಸ್ಸಾಗಿ ದುರ್ಗದ ಪಟ್ಟಾಭಿಷಕ್ತ ದೊರೆಯಾಗುತ್ತಾನೆ. ಆ ಸಂದರ್ಭದಲ್ಲಿ ಸೋದರನಾದ ಲಿಂಗಣ್ಣನಾಯಕ ನೀನು ಮತ್ತಿ ವಂಶಕ್ಕೆ ಕಳಂಕ ಎಂದು ಮೂದಲಿಸುತ್ತಾನೆ.

ಮುದ್ದಣ್ಣನಿಗೆ ರಾಜ್ಯತೃಷೆ ಎಂಬುವುದು ಏನಾದರೂ ಇದ್ದರೆ ಸರ್ವಾಧಿಕಾರತ್ವದಿಂದ ಸಿಂಹಾಸನವೇರಬಹುದಾಗಿತ್ತು. ಆದರೆ ಮತ್ತಿ ವಂಶದವರಿಗೆ ಮೀಸಲಾದ ಸರ್ಜೆನಾಯಕರ ಮಕ್ಕಳಿಗೆ ಈ ಸಿಂಹಾಸನ ದೊರಕಿಸಿಕೊಡಬೇಕೆಂಬ ಕಾರಣದಿಂದ ಆತ ಅಪರಾಧತನದ ಕೃತ್ಯ ಎಸಗಿರುವುದಾಗಿ ಆತನನ್ನು ಸಮರ್ಥಿಸಿಕೊಳ್ಳುತ್ತಾನೆ. ಲಿಂಗಣ್ಣನಾಯಕ ಪ್ರಧಾನಿ ಹುದ್ದೆ ಭುವನಪ್ಪನವರ ವಂಶಕ್ಕೆ ಮೀಸಲಾಗಿರುವುದರಿಂದ ಪರಶುರಾಮಪ್ಪನವರನ್ನು ಪ್ರಧಾನಿಯನ್ನಾಗಿ ನೇಮಿಸಿಕೊಳ್ಳುವಂತೆ ಸಲಹೆ ನೀಡುತ್ತಾನೆ. ಆದರೆ ಪಟ್ಟಾಭಿಷೇಕದ ಮಹೋತ್ಸವವೆಲ್ಲ ಮುಗಿದಾದ ಮೇಲೆ ಮುದ್ದಣ್ಣ

ಅರಮನೆಯಾದಿಯಾಗಿ ದುರ್ಗದಲ್ಲೆಲ್ಲ ಸರ್ವಾಧಿಕಾರತ್ವವನ್ನು ಸ್ಥಾಪಿಸುತ್ತಾನೆ. ಚಿಕ್ಕಣ್ಣನಾಯಕ ಮುದ್ದಣ್ಣ ನಿರ್ಮಿಸಿದ ವಿಲಾಸ ಪಂಜರದ ಅರಗಿಳಿಯಾಗಿ ಉಳಿಯುತ್ತಾನೆ.

ವಿರೂಪಾಕ್ಷ ಜೋಯಿಸರ ಮಾತಿನಿಂದ ಪರಿವರ್ತಿತನಾದ ಚಿಕ್ಕಣ್ಣನಾಯಕ ತನ್ನದೇ ಅಧಿಕಾರವನ್ನು ಸ್ಥಾಪಿಸಿ ರಾಜ್ಯವಾಳಬೇಕೆಂದರೆ ಮುದ್ದಣ್ಣ ಅದಕ್ಕೆ ಅವಕಾಶವನ್ನೇ ಕೊಡದೆ ನೀನು ನನ್ನ ಕರುಣೆಯ ಕೂಸು ಎಂದು ಹಿಯಾಳಿಸುತ್ತಾನೆ. ಎಚ್ಚರಿಕೆ ಕೊಡುವ ರೀತಿಯಲ್ಲಿ ಮಾತನಾಡಿ ಜೋಯಿಸರ ಮಾತು ಕೇಳಿ ಸವಿಗನಸು ಕಾಣುತ್ತಿದ್ದಾರೆ ನಾಯಕರು ಎಂದು ಮೂದಲಿಸುತ್ತ ಮರುದಿನದಿಂದ ಆತನ ವೈಭೋಗದ ಜೀವನ ನಿಲ್ಲಿಸಿ ಅರಮನೆಯಲ್ಲಿ ಸುರಪಾನದ ಉಪಚಾರವೆಲ್ಲ ನಿಂತು ಅಲ್ಲಿಯ ಹೆಣ್ಣುಗಳನ್ನು ಅರಮನೆಯಿಂದ ಹೊರಹಾಕುವ ಸಂದರ್ಭದಲ್ಲಿ ಅವುಗಳನ್ನೆಲ್ಲ ಬಿಟ್ಟಿರದ ಚಿಕ್ಕಣ್ಣನಾಯಕ ಮುದ್ದಣ್ಣನ ಮಾತುಗಳಿಗೆ ಒಪ್ಪಿ ಅರಮನೆಯ ಅರಗಿಳಿಯಾಗುತ್ತಾನೆ.

೬.೧.೨೨ ಲಿಂಗಣ್ಣನಾಯಕ :

ಲಿಂಗಣ್ಣನಾಯಕ ಸರ್ಜೇನಾಯಕರ ಮಗನಾಗಿದ್ದು ದುರ್ಗದ ಸಿಂಹಾಸನಕ್ಕೆ ಅಜ್ಜನಾದ ಕಸ್ತೂರಿರಂಗಪ್ಪನಾಯಕರು ಮಡಿದಾಗ ಉತ್ತರಾಧಿಕಾರಿಯಾಗಬೇಕಿತ್ತು. ಆದರೆ ಆಗ ಇನ್ನೂ ಚಿಕ್ಕವರಿದ್ದು ರಾಜ್ಯವಾಳಲು ಸಮರ್ಥರಾಗಿಲ್ಲದ ಕಾರಣ ನಾಯಕರ ಮೂರನೆಯ ಮಗ ಇಮ್ಮಡಿ ಮದಕರಿನಾಯಕ ಉತ್ತರಾಧಿಕಾರಿಯಾಗುತ್ತಾನೆ. ಈಗ ಆತನು ಮಡಿದ ವೇಳೆಯಲ್ಲಿ ದಳವಾಯಿಗಳಾದ ದೇಸಣ್ಣ, ಮುದ್ದಣ್ಣನಂತವರು ಲಿಂಗಣ್ಣನಾಯಕರನ್ನು ದುರ್ಗದ ಉತ್ತರಾಧಿಕಾರಿ ಮಾಡಿ ಹಿಂದೆ ಆದ ಅನ್ಯಾಯ ಸರಿಮಾಡಬೇಕೆಂದು, ಲಿಂಗಣ್ಣನಾಯಕರ ತಂದೆ ಸರ್ಜೇನಾಯಕರ ಉಪ್ಪಿನ ಋಣ ತಮ್ಮ ಮೇಲಿದೆ ಎಂದು ಚರ್ಚಿಸುವರು. ಆದರೆ ಲಿಂಗಣ್ಣನಾಯಕ ಮಾತ್ರ ಯಾವುದಕ್ಕೂ ಸ್ಪಂದಿಸದೆ ತಾಟಸ್ಥ್ಯ ನೀತಿಯನ್ನು ಅನುಸರಿಸಿ ತನ್ನ ಚಿಕ್ಕಮ್ಮಳಾದ ಓಬವ್ವನಾಗತಿಯ ಮಾತೇ ವೇದವಾಕ್ಯ. ಆಕೆಯೇ ತನ್ನ ಸರ್ವಸ್ವ ಎಂದು ಭಾವಿಸಿರುತ್ತಾನೆ. ಬದಲಾದ ರಾಜಕೀಯ ವಿದ್ಯಮಾನದಲ್ಲಿ ಓಬಣ್ಣನಾಯಕನನ್ನು ದತ್ತು ತೆಗೆದುಕೊಂಡು ದುರ್ಗದ ಉತ್ತರಾಧಿಕಾರಿಯನ್ನಾಗಿ ಮಾಡುವ ಉದ್ದೇಶದಿಂದ ಓಬವ್ವನಾಗತಿ ಲಿಂಗಣ್ಣನಾಯಕನಿಗೆ ಸಿಂಹಾಸನ ತ್ಯಜಿಸುವಂತೆ ಸೂಚಿಸಿದಾಗ ಮಾತೃವಾತ್ಸಲ್ಯದ ಮುಂದೆ ಅದೇನು ದೊಡ್ಡದು ಎಂದು ಚಿಕ್ಕಮ್ಮಳ ಮಾತಿನಂತೆ ನಡೆಯುತ್ತಾನೆ.

ಓಬಣ್ಣನಾಯಕನ ಪಟ್ಟಾಭಿಷೇಕದ ಸಮಯದಲ್ಲಿ ಸೈನಿಕ ಪಟ್ಟದ ಕಾಣಿಕೆಯನ್ನು ತಿಂಗಳ ಸಂಬಳದ ಅರ್ಧಕೊಟ್ಟು ಅಪಮಾನ ಮಾಡಿದರೆಂದು ಅಸಮಾಧಾನದಿಂದ ವರ್ತಿಸಿದಾಗ ಲಿಂಗಣ್ಣನಾಯಕ ಸಹನೆಯಿಂದ ಅವರ ಮನ ಒಲಿಸಲು ಪ್ರಯತ್ನಿಸುತ್ತಾನೆ. ಆದರೆ ಸಹನೆಯ ಕಟ್ಟೆ

ಒಡೆಯುವ ಸಂದರ್ಭದಲ್ಲಿ ನಾಗತಿಯೇ ಮಧ್ಯ ಪ್ರವೇಶಿಸಿ ಎಲ್ಲವನ್ನು ಹತೋಟಿಗೆ ತರುತ್ತಾಳೆ. ವಿಷಯ ತಿಳಿದ ದೇಸಣ್ಣ ಮುದ್ದಣ್ಣನ ಮನೆಗೆ ಹೋಗಿ ಶರಣಾಗತನಾಗು ಇಲ್ಲವೇ ನನ್ನ ಕತ್ತಿಗೆ ಬಲಿಯಾಗು ಎನ್ನುವನು. ಶರಣಾಗತನಾದ ರೀತಿಯಲ್ಲಿ ನಟಿಸಿ ಮುದ್ದಣ್ಣ ದೇಸಣ್ಣನ ತಲೆ ಕತ್ತರಿಸುತ್ತಾನೆ. ವಿಷಯ ತಿಳಿದ ಲಿಂಗಣ್ಣನಾಯಕ ಆಕ್ರೋಶದಿಂದ ಮುದ್ದಣ್ಣ ಹಾಗೂ ಆತನ ತಮ್ಮಂದಿರನ್ನು ಕೊಂದೇ ಬಿಡಬೇಕೆಂದು ನಿರ್ಧರಿಸಿ ಅವನ ಮನೆ ಪೂರ್ತಿಯಾಗಿ ಜಾಲಾಡಿದರೂ ಸಹ ಅವರ ಯಾವೊಂದು ಸುಳಿವು ದೊರೆಯುವುದಿಲ್ಲ. ನಿರಾಶೆಯಿಂದ 'ಮುದ್ದಣ್ಣನ ತಲೆಯನ್ನು ತಂದವರಿಗೆ ಸಾವಿರ ವರಹ, ಅವನ ತಮ್ಮಂದಿರ ತಲೆಯನ್ನು ತಂದವರಿಗೆ ತಲೆಗೆ ಐನೂರು ವರಹ, ಅವರು ಅವಿತ ಸ್ಥಳದ ಸುದ್ದಿ ತಂದವರಿಗೆ ತಲೆಗೆ ಐನೂರು ವರಹ ಬಹುಮಾನ'[೩೦] (ಗಿರಿಜಾ ಟಿ, ೧೯೯೧, ಪುಟ-೧೭೬) ಕೊಡುವುದಾಗಿ ದುರ್ಗದ ತುಂಬೆಲ್ಲ ಡಂಗುರ ಸಾರಿಸುತ್ತಾನೆ. ವಿಷಯ ತಿಳಿದ ಮುದ್ದಣ್ಣ ತಲೆತಪ್ಪಿಸಿಕೊಂಡು ಅಡಗಿ ಕುಳಿತುಕೊಂಡು ಚಿಕ್ಕಣ್ಣನ ಹತ್ತಿರ ಶರಣಾಗತನಾಗುವುದಾಗಿ ಹೇಳಿ ಕಳುಹಿಸಿ ತುಂಬಿದ ಓಲಗದಲ್ಲಿ ಓಬಣ್ಣನಾಯಕರ ಕೊಲೆಗೈದಾಗ ಲಿಂಗಣ್ಣನಾಯಕ ಸಿಡಿಲೆರಗಿದಂತೆ ನಿಲ್ಲುತ್ತಾನೆ.

ಸರ್ಜೆನಾಯಕರ ಮಕ್ಕಳಿಗೆ ಮೀಸಲಾದ ಈ ರಾಜ್ಯದಲ್ಲಿ ಮತ್ತೊಬ್ಬರು ಬಂದು ಸಿಂಹಾಸನವನ್ನೇರುವುದನ್ನು ಸಹಿಸದ ದಳವಾಯಿ ಮುದ್ದಣ್ಣ ಈ ಕೃತ್ಯ ಎಸಗಿರುವುದಾಗಿ ಚಿಕ್ಕಣ್ಣನಾಯಕ ಆತನನ್ನು ಸಮರ್ಥಿಸಿಕೊಳ್ಳುತ್ತಾನೆ. ಹನ್ನೆರಡು ವರ್ಷಗಳವರೆಗೆ ಲಿಂಗಣ್ಣನಾಯಕನ ತಮ್ಮ ಚಿಕ್ಕಣ್ಣನಾಯಕ ಮುದ್ದಣ್ಣನ ಕೈಗೊಂಬೆಯಾಗಿ ಆಳಿ ಪುತ್ರ ಸಂತಾನವಿಲ್ಲದೆ ಸತ್ತಾಗ ಸಿಂಹಾಸನದ ಪಟ್ಟ ಮತ್ತೆ ಲಿಂಗಣ್ಣನಾಯಕನನ್ನು ಹುಡುಕಿಕೊಂಡು ಬರುತ್ತದೆ. ಆದರೆ ಯಾವುದರಲ್ಲೂ ಉತ್ಸಾಹ ತೋರದ ಲಿಂಗಣ್ಣನಾಯಕನಿಗೆ ಪರಶುರಾಮಪ್ಪ ಹಾಗೂ ಭರಮಣ್ಣ ಒತ್ತಾಯಪಡಿಸುತ್ತಾರೆ. ಜೊತೆಗೆ ಗಿರಿಜವ್ವೆಯೂ ಸಹ ವಿಕಾರವಾಗಿ ನಗುತ್ತ ಒಂದು ಕತ್ತಿಯನ್ನು ಕೊಟ್ಟು ಇದು ಕಸ್ತೂರಿನಾಯಕರ ಕತ್ತಿ ಎಂದು ಹೇಳಿ ಸೇಡು ತೀರಿಸಿಕೊಳ್ಳುವಂತೆ ಹೇಳುತ್ತಾಳೆ. ಎಲ್ಲರ ಒತ್ತಾಯಕ್ಕೆ ಮಣಿದ ಲಿಂಗಣ್ಣನಾಯಕ ದೈವ ಚಿತ್ತವಿದ್ದಂತಾಗಲಿ ಎಂದು ಕತ್ತಿ ಹಿಡಿದುಕೊಳ್ಳುತ್ತಾನೆ. 'ಲಿಂಗಣ್ಣನಾಯಕರು ಮುಮ್ಮಡಿ ಮದಕರಿನಾಯಕರೆಂದು ಪಟ್ಟಾಭಿಷೇಕ ನಾಮಕರಣ ಮಾಡಿಸಿಕೊಂಡು, ದುರ್ಗದ ರಾಜ್ಯದ ಒಡೆಯರಾದರು'[೩೧] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೧೦೫) ಆದರೆ ಯಾವಾಗಲೂ ನಿರುತ್ಸಾಹದಿಂದಲೇ ಇರುವ ನಾಯಕರು ಮುದ್ದಣ್ಣ ಮಾಡುವ ಯಾವೊಂದು ಕೆಲಸಕ್ಕೂ ಅಡ್ಡಿಬಾರದೇ ಇರುವುದರಿಂದ ಜನರೆಲ್ಲರೂ ನಾಯಕರು ಮುದ್ದಣ್ಣನ ಕೈಗೊಂಬೆ, ಕೇವಲ ಉತ್ಸವಮೂರ್ತಿ, ಮೂಲವಿಗ್ರಹ ಮುದ್ದಣ್ಣ ಎಂದೇ ಮಾತನಾಡಿಕೊಳ್ಳುತ್ತಾರೆ.

ಲಿಂಗಣ್ಣನಾಯಕನಿಗೆ ನಾನು ಅರಮನೆಯಲ್ಲಿ ಮುದ್ದಣ್ಣನ ಬಂಧಿಯೇ, ಪರಶುರಾಮಪ್ಪ ಹಾಗೂ ಭರಮಣ್ಣ ತನ್ನನ್ನು ಕಾಣಲು ಏಕೆ ಬರುವುದಿಲ್ಲ? ತಾನು ಹೋಗಿ ಅವರನ್ನು ಭೇಟಿಯಾಗುವುದು ಅಸಾಧ್ಯ. ತಾನು ಅರಮನೆಯನ್ನು ಬಿಟ್ಟು ಹೊರಹೋಗುವುದು ನಾಗತಿಯ ಸಮಾಧಿಗೆ ಮಾತ್ರ ಅದು ಕಾವಲುಗಾರರ ಜೊತೆಗೆ, ತನ್ನ ಪರಿಸ್ಥಿತಿಯ ಬಗ್ಗೆ ತಾನೇ ವ್ಯಥೆ ಪಡುತ್ತಾನೆ. ಲಿಂಗಣ್ಣನಾಯಕ ಸಜ್ಜೆಯ ಮನೆಯ ದಾಸಿ ಬದಲಾಗಿ ಹೊಸದಾಗಿ ಬಂದ ದಾಸಿಗೆ ನಿನ್ನನ್ನು ಇಲ್ಲಿ ಕಳುಹಿಸಿದವರಾರು ಎಂಬ ಪ್ರಶ್ನೆಗೆ ಭಯದಿಂದ ನಾವು ನಿಮ್ಮೊಂದಿಗೆ ಮಾತನಾಡುತ್ತೇವೆ ಎಂದು ತಿಳಿದರೆ ನಮ್ಮ ತಲೆ ಉಳಿಯುವುದಿಲ್ಲ ಎನ್ನುವಳು. ಆಕೆಯನ್ನು ಕಳುಹಿಸಿ ಹೊರಕೆನಾಯಕನನ್ನು ಕರೆಸಿ ನಾಲ್ಕು ಜನ ಭಟರೊಂದಿಗೆ ಅವಿತು ಕುಳಿತುಕೊಳ್ಳುವಂತೆ ಹೇಳುತ್ತಾನೆ. ಕಾರ್ಯಭಾರಿಯಾದ ಚುಕ್ಕಣ್ಣನನ್ನು ಕರೆಸಿ ದಾಸಿಯ ವಿಷಯ ವಿಚಾರಿಸಿದಾಗ ಹಾರಿಕೆಯ ಉತ್ತರ ಕೊಡುತ್ತ ಕತ್ತಿ ಎತ್ತುವನು. ಹೊರಕೆನಾಯಕ ಆತನ ತಂಡ ಅವನನ್ನು ಸೆರೆ ಹಿಡಿಯುತ್ತದೆ. ಲಿಂಗಣ್ಣನಾಯಕ ಹೊರಕೆನಾಯಕನನ್ನು ಅರಮನೆಯ ಕಾರ್ಯಭಾರಿಯನ್ನಾಗಿ ನೇಮಿಸುತ್ತಾನೆ. ಮುದ್ದಣ್ಣನನ್ನು ಕರೆಯಿಸಿ ಭರಮಣ್ಣ, ಪರಶುರಾಮಪ್ಪನವರ ವಿಷಯ ತಿಳಿದು ನಾಳೆಯೊಳಗಾಗಿ ಅವರು ತಮ್ಮ ಮುಂದೆ ಇರಬೇಕೆಂದು ಆಜ್ಞೆ ಮಾಡುತ್ತಾನೆ. ಆದರೆ ಮುದ್ದಣ್ಣ ಬೆಳಗಾಗುವುದರಲ್ಲಿಯೇ ಅರಮನೆಗೆ ಮುತ್ತಿಗೆ ಹಾಕಿ ಲಿಂಗಣ್ಣನಾಯಕನನ್ನು ಸೆರೆಹಿಡಿಯುತ್ತಾನೆ. ಮತ್ತಿ ತಿಮ್ಮಣ್ಣನಾಯಕರ ವಂಶದಲ್ಲಿ ಹುಟ್ಟಿದ ಲಿಂಗಣ್ಣನಾಯಕ ದಳವಾಯಿ ಮುದ್ದಣ್ಣನ ಕ್ರೌರ್ಯತನಕ್ಕೆ, ಪಾಪಕೃತ್ಯಕ್ಕೆ ಬಲಿಯಾಗುತ್ತಾನೆ. 'ಲಿಂಗಣ್ಣನಾಯಕನ ಪಶ್ಚಾತ್ತಾಪದ ಒಳಗುದಿ ಹ್ಯಾಮ್ಲೆಟ್ ಪಾತ್ರವನ್ನು ನೆನಪಿಗೆ ತಂದು ಬಿಡುತ್ತದೆ'[೩೨] (ಕೀರ್ತಿನಾಥ ಕುರ್ತಕೋಟಿ, ೨೦೦೮, ಪುಟ-೨೫೧) ಎಂದು ಕುರ್ತಕೋಟಿಯವರು ಅಭಿಪ್ರಾಯ ಪಡುವರು.

೬.೧.೨೩. ಭರಮಣ್ಣನಾಯಕ :

ಭರಮಣ್ಣನಾಯಕ ಚಿತ್ರದುರ್ಗದ ಕೀರ್ತಿಯನ್ನು ಹಿರಿಮೆಯ ಶಿಖರಕ್ಕೆ ಏರಿಸಿದಾತ. ಚಿತ್ರದುರ್ಗದ ಜಿಲ್ಲೆಯ ಹತ್ತಾರು ದೊಡ್ಡ ಕೆರೆಗಳು, ಇಪ್ಪತ್ತು ಮೂವತ್ತು ಸಣ್ಣಪುಟ್ಟ ಕೆರೆಗಳು, ಚಿತ್ರದುರ್ಗದ ಹಲವಾರು ಭವ್ಯ ಮಂದಿರಗಳು ಆತನ ಕೀರ್ತಿಗೆ ಸಾಕ್ಷಿಯಾಗಿವೆ. ಭರಮಣ್ಣನಾಯಕನ ತಂದೆ ಕಸ್ತೂರಿರಂಗಪ್ಪ. ಭರಮಣ್ಣನಾಯಕ ಎಷ್ಟೋ ಬಾರಿ ಮತ್ತಿ ತಿಮ್ಮಣ್ಣನಾಯಕನಿಗೆ ಸಿದ್ಧರ ಅನುಗ್ರಹವಾದಂತೆ ತನಗೂ ಯಾರಾದರೊಬ್ಬರ ಸಿದ್ಧರ ಅನುಗ್ರಹವಾಗಿ ತಾನೂ ರಾಜನಾಗಬಾರದೇ ಎಂದು ಅಪೇಕ್ಷಿಸುತ್ತಿದ್ದನು. ಹಳ್ಳಿಗೆ ಆಕಸ್ಮಿಕವಾಗಿ ಯಾರಾದರೂ ಸಾಧು ಸನ್ಯಾಸಿಗಳು ಬಂದರೆ ತನ್ನನ್ನು ಅನುಗ್ರಹಿಸಲು ಬಂದ ಸಿದ್ಧರಿರಬಹುದೇ ಎಂದೇ ಭಾವಿಸುತ್ತಿದ್ದನು. ದಿನದಿನವೂ ಗರಡಿ

ಮನೆಯಲ್ಲಿ ಸಾಮು ಮಾಡಿ ತನ್ನ ಮೈ ಉಕ್ಕಾಗುತ್ತಿರುವುದನ್ನು ಕಂಡು ಸಂತೋಷ ಪಡುವನು. ತನ್ನ ಆಳ್ವಿಕೆಯ ಕಾಲದಲ್ಲಿ ಶತ್ರುಗಳು ದುರ್ಗಕ್ಕೆ ಮುತ್ತಿಗೆ ಹಾಕಿದಾಗ ತಾನು ಅವರನ್ನು ಹೇಗೆ ಮಣಿಸಬೇಕೆಂದು ನೂರೆಂಟು ಯೋಜನೆ ಹಾಕುತ್ತ ತಾನು ಕಾಯುವ ಕುರಿಗಳನ್ನು ಶತ್ರು ಸೇನೆಯಾಗಿ ಭಾವಿಸಿ, ಕುರಿಯನ್ನು ಕಾಯಲು ತನ್ನೊಂದಿಗೆ ತಂದ ನಾಯಿಗಳನ್ನು ತನ್ನ ಸೇನೆಯನ್ನಾಗಿ ಮಾಡಿಕೊಂಡು ಸಮರತಂತ್ರವನ್ನು ಹೂಡುವನು.

ಇತ್ತ ಮುದ್ದಣ್ಣನ ವಧೆಯಾದ ನಂತರ ಪರಶುರಾಮಪ್ಪ ಹಾಗೂ ದಳವಾಯಿ ಭರಮಣ್ಣರಾದಿಯಾಗಿ ಎಲ್ಲರೂ ದುರ್ಗದ ಸಿಂಹಾಸನಕ್ಕೆ ದೊರೆಯಾರು. ಪಟ್ಟಕ್ಕೆ ಬರುವವರು ದುರ್ಗದ ದೊರೆತನವನ್ನು ವಹಿಸಿಕೊಳ್ಳುವಷ್ಟು ಶಕ್ತರಾಗಿರಬೇಕು ಎಂದು ಆಲೋಚಿಸಿ ಬಿಳಿಚೋಡಿನ ಕಸ್ತೂರಿರಂಗಪ್ಪನವರ ಮಕ್ಕಳನ್ನು ಸಿಂಹಾಸನಕ್ಕೆ ತರಬೇಕೆಂದು ನಿರ್ಣಯಿಸುವರು. ಅವರ ಮನೆಗೆ ಹೋದಾಗ ಭರಮಣ್ಣ ತನಗೆ ಮುರುಘರಾಜೇಂದ್ರ ಸ್ವಾಮಿಗಳು ಹೇಳಿದ ಮಾತುಗಳು ನೆನಪಾಗಿ ದೊರೆಯಾಗಲು ತನ್ನ ಒಪ್ಪಿಗೆ ಸೂಚಿಸುವನು. ಆದರೆ ನೇರವಾಗಿಯೇ ಪರಶುರಾಮಪ್ಪನವರಿಗೆ "ನಾನು ದುರ್ಗವನ್ನು ಆಳುವುದಕ್ಕೆ ಬರಬೇಕೋ ಅಥವಾ ಸಿಂಹಾಸನದ ಮೇಲೆ ಕುಳಿತು ಆಳಿಸಿಕೊಳ್ಳುವುದಕ್ಕೆ ಬರಬೇಕೋ" ಎಂದು ಕೇಳಿ ಈಗಿನ ದುರ್ಗದ ದೊರೆಗಳೆಲ್ಲ ದಳವಾಯಿಗಳ ಕೈಗೊಂಬೆಗಳು ಎಂಬ ಸುದ್ಧಿ ನಮ್ಮ ಸೀಮೆಯಲ್ಲೆಲ್ಲಾ ಹರಡಿದೆ. 'ದುರ್ಗದ ಅಧಿಪತಿಯಾಗಲು ನನಗೆ ಇಚ್ಛೆ ಇದೆ. ಆ ದುರ್ಗಕ್ಕಾಗಿ ನನ್ನ ತಲೆಯನ್ನು ಕೊಡಬಲ್ಲೆ. ಆದರೆ ದಳವಾಯಿಗಳ ಕೈಗೊಂಬೆಯಾಗಿ ಬದುಕುವುದು, ಸಾಯುವುದು ನನಗೆ ಒಪ್ಪಿಗೆಯಿಲ್ಲ. ಅಂಥ ರಾಜ್ಯಕ್ಕಿಂತ ನನ್ನ ಕುರಿ ಮೇಯಿಸುವ ಬಯಲೇ ಮೇಲು'[೩೩] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೫೨) ಎಂದು ತನ್ನ ದಿಟ್ಟತನದ ನಿರ್ಧಾರ ತಿಳಿಸುವನು. ಪರಶುರಾಮಪ್ಪ ಭರಮಣ್ಣನಿಗೆ ರಾಜಕಾರಣ ಶಿಕ್ಷಣವೆಲ್ಲವನ್ನೂ ನೀಡುವನು. ಭರಮಪ್ಪನಾಯಕನ ಪಟ್ಟಾಭೀಷೇಕದ ಕಾರ್ಯಗಳೆಲ್ಲ ಮುಗಿದ ನಂತರ ಸೆರೆಯಲ್ಲಿದ್ದ ರಂಗಪ್ಪನಾಯಕರನ್ನು ಭೇಟಿಯಾಗಲು ಪರಶುರಾಮಪ್ಪನ ಜೊತೆಗೂಡಿ ಹೋಗುತ್ತಾನೆ. ಆದರೆ ರಂಗಪ್ಪನಾಯಕನು ಮಾತ್ರ ನಾಯಕನ ಜೊತೆ ಸ್ನೇಹ ಗೌರವದಿಂದ ವರ್ತಿಸದೇ ದ್ವೇಷಕಾರುತ್ತ ಅಸಭ್ಯತನದಿಂದಲೇ ವರ್ತಿಸುವನು. ಭರಮಪ್ಪನಾಯಕ ತಾಳ್ಮೆಗೆಟ್ಟು ಅಪಮಾನದ ಸೇಡು ತೀರಿಸಿಕೊಳ್ಳುವುದಾಗಿ ಹೇಳಿ ಹೋಗುವನು. ಭರಮಪ್ಪನಾಯಕನಿಗೆ ಕುರುಬ ದೊರೆ ಎಂದು ಅಣಕವಾಡಿದ ಮಾತುಗಳು ಪ್ರತಿಧ್ವನಿಸಿದಂತಾಗುವುದು. ಪ್ರಧಾನಿಗಳಿಗೆ ಚಿತ್ರದುರ್ಗದ ಕೀರ್ತಿಯನ್ನು ದಿಗ್ಗಜಗಳೂ ಹಾಡಿ ಹೊಗಳುವಂತೆ, ದುರ್ಗದ ವೈಭವದ ಸೂರ್ಯನ ಕಣ್ಣು ಕುಕ್ಕಿಸುವಂತೆ ಮಾಡಿ, ನಮ್ಮ ಬಾಳನ್ನು ಸಾರ್ಥಕಪಡಿಸಿಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತಾನೆ.

ಹರಪನಹಳ್ಳಿಯವರು ಅಣಜಿಯ ಕೋಟೆಯ ಮೇಲೆ ದಾಳಿ ಮಾಡಿದಾಗ ನಾಯಕ ದಳವಾಯಿ ಭರಮಣ್ಣನಿಗೆ ಸೈನ್ಯಕ್ಕೆ ಸಿದ್ಧವಾಗಲು ಹೇಳಿ ಹರಪನಹಳ್ಳಿ ಅಥವಾ ಚಿತ್ರದುರ್ಗ ಎರಡರಲ್ಲಿ ಒಂದು ಉಳಿಯಬೇಕು ಎಂದು ಆಕ್ರೋಶದಿಂದ ನುಡಿಯುತ್ತಾನೆ. ದಳವಾಯಿ ಭರಮಣ್ಣನ ನೇತೃತ್ವದಲ್ಲಿ ಅಣಜಿಯ ಕೋಟೆಗೆ ನುಗ್ಗಿದಾಗ ದುರ್ಗದ ಸೇನೆಗೆ ಭಯಂಕರವಾದ ಸೋಲುಂಟಾಗುತ್ತದೆ. ಸೋಲಿನ ಅಪಮಾನದಿಂದ ನಾಯಕ ನಿರಾಶೆಗೊಂಡು ಪ್ರಜ್ಞೆ ತಪ್ಪಿ ಬೀಳುತ್ತಾನೆ. ಮೂರು ದಿನವಾದರೂ ಹಾಸಿಗೆಯಿಂದ ಮೇಲೆಳಲಿಲ್ಲ. ಸೋಲಿನ ಚಿಂತೆಯಿಂದ ಕೊರಗಿ ಹಾಸಿಗೆ ಹಿಡಿದು ಬಿಟ್ಟನು. ಇದೇ ಸಂದರ್ಭದಲ್ಲಿ ಅರಮನೆಗೆ ಆಗಮಿಸಿದ ಮುರುಘರಾಜೇಂದ್ರ ಸ್ವಾಮಿಗಳು ನಾಯಕನಿಗೆ ಕಠೋರವಾಗಿ ಮಾತನಾಡುತ್ತ ಆತ ವೀರಾವೇಷದಿಂದ ಎದ್ದು ನಿಲ್ಲುವಂತೆ ಮಾಡುತ್ತಾರೆ.

ತದನಂತರ ಸುತ್ತಲಿನ ಪಾಳೆಯಗಾರರ ನೆರವನ್ನು ಪಡೆದು ಅಣಜಿಯ ಕೋಟೆಯ ಮೇಲೆ ದಾಳಿ ಮಾಡಿ ದುರ್ಗದವರು ವಶಪಡಿಸಿಕೊಳ್ಳುತ್ತಾರೆ. ಆದರೆ ಇಡೀ ದುರ್ಗದ ಜನ ವಿಜಯೋತ್ಸವವನ್ನು ಆಚರಿಸಿದರೆ ಭರಮಣ್ಣನಾಯಕ ಮಾತ್ರ ಮುರುಘರಾಜೇಂದ್ರ ಸ್ವಾಮಿಗಳು ಹೇಳಿದ 'ನಿನ್ನ ಕಣ್ಣು, ಕಣ್ಣ ಮುಂದೆ ನಡೆಯುತ್ತಿರುವ ಗೆಲುವಿನ ನರ್ತನವನ್ನು ಮಾತ್ರ ಕಾಣುತ್ತಿದೆ ಭರಮಣ್ಣ. ಆದರೆ ಆ ಮೆರವಣಿಗೆಯನ್ನು ಹಿಂಬಾಲಿಸಿ ಬರುತ್ತಿರುವ ಕಂಕಾಳಗಳ ಕರಾಳ ಛಾಯೆ ಕಾಣುತ್ತಿಲ್ಲ'[೩೪] (ಸುಬ್ಬರಾಯರು ತ.ರಾ, ೨೦೧೪, ವಿಜಯೋತ್ಸವ, ಪುಟ-೦೭) ಎಂಬ ಮಾತುಗಳ ಕುರಿತು ಆಲೋಚಿಸುತ್ತ ಇನ್ನು ಮುಂದೆ ಯುದ್ಧವೇ ಬೇಡ ಎಂದು ನಿರ್ಧರಿಸುತ್ತಾರೆ. ಅದೇ ಸಂದರ್ಭದಲ್ಲಿ ಸೀರ್ಯದ ದಿವಾನ್ ಫೌಜುದಾರ ಖಾಸಿಂಖಾನರ ಕಡೆಯ ವಕೀಲನೊಬ್ಬ ಪತ್ರವನ್ನು ತೆಗೆದುಕೊಂಡು ನಾಯಕರನ್ನು ಭೇಟಿಯಾಗಲು ಬರುವನು. ಆದರೆ ಪತ್ರದಲ್ಲಿ ಕಪ್ಪ ಕಾಣಿಕೆಯನ್ನು ಸಲ್ಲಿಸಬೇಕು ಎಂಬ ವಿಚಾರದಿಂದ ಕೋಪೋದ್ರಿಕ್ತನಾಗುವನು. 'ನಮ್ಮ ಭಂಡಾರದಲ್ಲಿ ಹಣವಿದೆ; ಆದರೆ ಕಪ್ಪಕಾಣಿಕೆ ಕೊಡುವಷ್ಟು ಶ್ರೀಮಂತರಲ್ಲ. ಸ್ನೇಹಕ್ಕಾಗಿ, ವಿಶ್ವಾಸಕ್ಕಾಗಿ ಈ ತಲೆಯನ್ನೇ ಬಲಿಕೊಡಬಲ್ಲಷ್ಟು ಶಕ್ತಿಯಿದೆ; ಆದರೆ ಈ ತಲೆ ದರ್ಪಕ್ಕೆ ಬಾಗುವುದಿಲ್ಲ ಎನ್ನುತ್ತದೆ. ತಮ್ಮ ದಿವಾನ ಸಾಹೇಬರು ಎಲ್ಲವನ್ನು ತಿಳಿದವರು. ಅಂಥವರಿಗೆ ಇಷ್ಟಕ್ಕಿಂತ ಹೆಚ್ಚಿನದನ್ನು ಹೇಳಲು ನನಗೆ ಶಕ್ತಿಯಿಲ್ಲ. ಈ ಮಾತುಗಳನ್ನು ನಮ್ಮ 'ಸಲಾಂ'ಗಳೊಡನೆ ದಿವಾನ್‌ಸಾಹೇಬರಿಗೆ ಅರಿಕೆ ಮಾಡಬೇಕು'[೩೫] (ಸುಬ್ಬರಾಯರು ತ.ರಾ, ೨೦೧೪, ವಿಜಯೋತ್ಸವ, ಪುಟ-೪೨) ಎಂದು ನಯವಾಗಿ ಉತ್ತರಿಸುತ್ತಾನೆ. ಜುಲ್‌ಫಿಕಾರ್‌ಖಾನ್ ಮೆಹರ್‌ಬಾನುವನ್ನು ದುರ್ಗದಲ್ಲಿಯೇ ಬಿಟ್ಟು ಪರಶುರಾಮಪ್ಪನಿಗೆ ಆಕೆಯ ಸಂಗೀತ ಸಭೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಹೋದ ಮೇಲೆ ನಾಯಕರೊಂದಿಗೆ ಚರ್ಚಿಸಿ ಅವಕಾಶ ಮಾಡಿಕೊಡುತ್ತಾನೆ.

ಜಾನ್ ಡ್ಯೂವೊರೋ ನಾಯಕರ ಹತ್ತಿರ ಬಂದು ಕೋಟೆಯನ್ನು ಬಲಪಡಿಸುವ ನಕಾಶೆಯನ್ನು ಸಿದ್ಧಪಡಿಸುವುದಾಗಿ ಹೇಳಿ ಸಂತೋಜಿ ಘೋರ್ಪಡೆಯನ್ನು ಸಂಹಾರ ಮಾಡಲು ಒಂದು ಅಶ್ವ ಹಾಗೂ ಕತ್ತಿಯನ್ನು ಕೊಡುವಂತೆ ಹೇಳಿ ಹೋದಾಗ ನಾಯಕ ಜಾನ್ ಡ್ಯೂವೊರೋ ಹಾಗೂ ಮೆಹರ್‌ಬಾನುವಿನ ಬಗ್ಗೆ ಆಲೋಚಿಸುತ್ತಾನೆ. ಸೀರ್ಯದವರಿಗೆ ಸಹಾಯ ಮಾಡುವುದರ ಜೊತೆಗೆ ಮರಾಠರ ನಾಯಕನಾದ ಸಂತೋಜಿ ಘೋರ್ಪಡೆಯ ಪುಂಡಾಟಿಕೆಯನ್ನು ಸದೆಬಡಿಯುವ ಉದ್ದೇಶದಿಂದ ಸೇನೆಯನ್ನು ಕಳುಹಿಸುತ್ತಾನೆ.

೬.೧.೨೪ ಕಸ್ತೂರಿರಂಗಪ್ಪನಾಯಕ :

ಕಸ್ತೂರಿರಂಗಪ್ಪನಾಯಕನ ಆಳ್ವಿಕೆಯ ಸಮಯದಲ್ಲಿ ಸೀರ್ಯದ ರಂಗಪ್ಪನಾಯಕರು ತಮ್ಮ ಮಗನಾದ ಕೃಷ್ಣಪ್ಪನಾಯಕರಿಗೆ ಕಸ್ತೂರಿರಂಗಪ್ಪನಾಯಕರ ಮಗಳನ್ನು ತಂದುಕೊಳ್ಳುವ ವಿಚಾರವಾಗಿ ಪತ್ರವೊಂದನ್ನು ಕಳುಹಿಸಿದಾಗ ಸೇರಿದ ಸಭೆಯಲ್ಲಿ ಆ ವಿಷಯಾರ್ಥವಾಗಿ ಎಲ್ಲರ ಅಭಿಪ್ರಾಯಗಳನ್ನು ಕೇಳಲಾಗಿ ಬಾಲಯ್ಯ ಮಾತ್ರ ನಾಗತಿಯವರನ್ನು ಹಾಗೂ ರಾಜಕುಮಾರಿಯವರನ್ನು ಒಂದು ಮಾತು ಕೇಳಿ ನಿರ್ಧರಿಸುವುದು ಒಳಿತೆಂದು ಹೇಳಲಾಗಿ, ಯುದ್ಧ ಸಾರಿದಾಗ ಸೈನಿಕರಾದರೂ ತಮ್ಮ ಬಗ್ಗೆ ಆಲೋಚನೆ ಮಾಡುತ್ತಾರೆಯೇ ದುರ್ಗದ ಹಿತರಕ್ಷಣೆಯೇ ಅವರಿಗೆ ಮುಖ್ಯವಾಗಿರುವುದಿಲ್ಲವೇ? ಹಾಗೆಯೇ ಅರಸು ಪರಿವಾರದವರು ಎಂತಹ ತ್ಯಾಗಕ್ಕೂ ಸಿದ್ಧರಾಗಿರಬೇಕು. ನಾಗತಿಯವರು ಒಪ್ಪುತ್ತಾರೋ ಇಲ್ಲವೋ ಎನ್ನುವುದು ಅರ್ಥವಿಲ್ಲದ, ಅಗತ್ಯವಿಲ್ಲದ ಮಾತೆಂದು ಹೇಳುವನು. ತಮಗಿಲ್ಲಿ ದುರ್ಗದ ಹಿತರಕ್ಷಣೆ ಮುಖ್ಯ ಎನ್ನುವನು. 'ಸೀರ್ಯದವರು ನಮ್ಮನ್ನು ತಾವಾಗಿಯೇ ಹೆಣ್ಣು ಕೇಳಿ, ಕೂಡಲೇ ಹೂ ಎನ್ನಲಾಗದು, ಹಾಗೇ ಇಲ್ಲವೆನ್ನಲಾಗದ, ಬಹು ಗಡುಚಾದ ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ. ಹೂ ಎಂದರೆ ಕಣ್ಣು ಕಟ್ಟಿಕೊಂಡು ಕಾಡಿನ ದಾರಿಯಲ್ಲಿ ನಡೆದಂತೆ. ಬೇಡವೆಂದರೆ, ಮಲಗಿದ್ದ ಹುಲಿಯನ್ನು ಎಬ್ಬಿಸಿ, ಅದರ ರೋಷವನ್ನು ಕೆರಳಿಸಿ ದ್ವೇಷವನ್ನು ಕಟ್ಟಿಕೊಂಡಂತೆ. ಇದು ನಮಗಿರುವ ಸಂದಿಗ್ಧ'[೬೬] (ಸುಬ್ಬರಾಯರು ತ.ರಾ, ೨೦೧೫, ಕಸ್ತೂರಿ ಕಂಕಣ, ಪುಟ-೧೯) ಎಂಬ ವಿಚಾರವನ್ನು ತಿಳಿಸುವನು.

ಕೃಷ್ಣಪ್ಪನಾಯಕರ ನಡಾವಳಿಗಳ ಬಗ್ಗೆ ತಿಳಿದುಕೊಳ್ಳಲು ಬೇಹುಗಾರರನ್ನು ಸೀರ್ಯಕ್ಕೆ ಕಳುಹಿಸುವಂತೆ ಹಿರಿಯೂರಿನ ಕೆಂಚಣ್ಣನಾಯಕನಿಗೆ ತಿಳಿಸಿ, ಅಲ್ಲಿಂದ ತಿಳಿದ ವಿಷಯಗಳಿಗೂ ದುರ್ಗದ ವಕೀಲ ನರಸಿಂಗರಾಯ ಸೀರ್ಯದಲ್ಲಿ ನಡೆದ ವಿದ್ಯಮಾನಗಳನ್ನೆಲ್ಲ ಹೇಳಿದರೂ ಸಹ ಒಂದಕ್ಕೊಂದು ಅನುಮಾನಪಡುವ ವಿಚಾರಗಳಾಗಿ ತೋರದೇ ಜಾತಕಾನುಕೂಲ ಕೂಡಿ ಬರುವುದರಿಂದ ಮದುವೆಗೆ ಒಪ್ಪಿಗೆ ಸೂಚಿಸುವನು. ಮದುವೆಯೂ ಸಾಂಗವಾಗಿ ನಡೆದು

ಔತಣಕೂಟಕ್ಕೆಂದು ಪರಿವಾರ ಸಮೇತ ಸೀರ್ಯಕ್ಕೆ ಹೋಗುವಾಗ ದುರ್ಗದ ರಕ್ಷಣೆಯ ಜವಾಬ್ದಾರಿ ಹಾಗೂ ಅಳಿಯಂದಿರಾದ ಕೃಷ್ಣಪ್ಪನಾಯಕರು ವಾಸಿಸಲು ಅರಮನೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಕೆಂಚಣ್ಣನಾಯಕನಿಗೆ ವಹಿಸುವನು. ಸೀರ್ಯದ ಔತಣಕೂಟ ಮುಗಿಸಿಕೊಂಡು ದುರ್ಗಕ್ಕೆ ವಾಪಸ್ಸಾದ ಕಸ್ತೂರಿರಂಗಪ್ಪನಾಯಕನಿಗೆ ದುರ್ಗದಲ್ಲಾದ ಎಲ್ಲ ಘಟನೆಗಳ ಕುರಿತು ಕೆಂಚಣ್ಣನಾಯಕ ಮನವರಿಕೆ ಮಾಡಿದರೂ ಸಹ ಅದನ್ನು ನಂಬಲು ಬಲವಾದ ಕಾರಣಗಳಿರಲಿಲ್ಲ. ಈ ಮದುವೆಯ ಷಡ್ಯಂತ್ರವನ್ನು ರೂಪಿಸಿದವನು ಸಹಜಾನಂದಸ್ವಾಮಿಗಳೆಂದು ಹೇಳಿ ತನಗಿರುವ ಅನುಮಾನಗಳನ್ನು ತಿಳಿಸುವನು.

ಸೀರ್ಯದವರು ಯಾವ ಮುನ್ಸೂಚನೆಯೂ ಇಲ್ಲದೇ ಹಿರಿಯೂರಿನ ಮೇಲೆ ದಾಳಿ ಮಾಡಿದಾಗ ಕಸ್ತೂರಿರಂಗಪ್ಪನಾಯಕರು ತಾವೇ ಖುದ್ದಾಗಿ ಹಿರಿಯೂರಿನ ರಕ್ಷಣೆಗೆ ಹೋಗುವುದಾಗಿ ಹೇಳಿ ಪ್ರಧಾನಿ ವಿರೂಪಾಕ್ಷಯ್ಯವನರಿಗೆ ದುರ್ಗದ ರಕ್ಷಣೆಯ ಜವಾಬ್ದಾರಿ ವಹಿಸಿ, ಕಾಟಯ್ಯನಿಗೆ 'ನಮ್ಮ ಖಾಸಾ 'ಕಗ್ಗೊಲೆ'ಯ ಬೇಡರಪಡೆಯ ಎರಡು ಸಾವಿರ ಮಂದಿಗೆ ಕೂಡಲೇ ಹೊರಡಲು ಸಿದ್ಧವಾಗಬೇಕೆಂದು ಹೇಳಿ, ಹಾಗೂ ತಲೆಗೊಂದು ಹೊನ್ನು, ಆಳು, ಕುದುರೆಯ ತಲೆಗೆ ಎರಡು ಹೊನ್ನು ಎಂದು ಅವರಿಗೆ ಹೇಳಿ. ನಾವು ಸಿದ್ಧರಾಗಿ ಬರುವ ವೇಳೆಗೆ ಆಳು, ಕುದುರೆ ಪ್ರಯಾಣ ಮಾಡಲು ಸಿದ್ಧವಾಗಿರಬೇಕು'[೩೭] (ಸುಬ್ಬರಾಯರು ತ.ರಾ, ೨೦೧೫, ಕಸ್ತೂರಿ ಕಂಕಣ, ಪುಟ-೨೪೬) ಎಂದು ಹಿರಿಯೂರಿಗೆ ಒಂದು ಸೇನಾಪಡೆಯನ್ನು ತೆಗೆದುಕೊಂಡು ಹೋಗಿ ಸೀರ್ಯದವರನ್ನು ಸದೆಬಡೆಯುವನು.

೬.೧.೨೫ ಮದಕರಿನಾಯಕ :

ಚಿತ್ರದುರ್ಗದ ಜನತೆಯ ಹೃದಯದಲ್ಲಿ ನಿತ್ಯನಿವಾಸಿಯಾಗಿರುವ ಈ ಮದಕರಿನಾಯಕ ಚಿತ್ರದುರ್ಗವನ್ನು ಆಳಿದ ನಾಯಕ ವಂಶದ ಕೊನೆಯ ದೊರೆ. ಕಸ್ತೂರಿರಂಗಪ್ಪನಾಯಕ ಪುತ್ರಸಂತಾನವಿಲ್ಲದೆ ಸತ್ತಿದ್ದರಿಂದ, ಈತನ ತಾಯಿ ಗಂಡೋಬಳಮ್ಮ ನಾಗತಿಯು ಹಿರೇಮದಕರಿನಾಯಕನ ಸೋದರ ಜಾನಕಲ್ಲಿನ ತೊದಲು ಭರಮಪ್ಪನ ಮಗ ೧೨ ವರ್ಷದ ವೀರಬಾಲಕ 'ಮದಕರಿ'ನಾಯಕನನ್ನು ಕ್ರಿ.ಶ ೧೭೫೪ ರಲ್ಲಿ ಪಟ್ಟಕ್ಕೆ ತಂದಳು. ಇವನೇ ಮುಂದೆ ರಾಜಾವೀರಮದಕರಿನಾಯಕನೆಂದು ಪ್ರಖ್ಯಾತನಾದ. 'ಐತಿಹಾಸಿಕವಾಗಿ ಮದಕರಿನಾಯಕ ನಿಜವಾಗಿಯೂ ಮೆಚ್ಚಬೇಕಾದ ಶೂರ, ದುರಂತ ಕಾದಂಬರಿಗೆ ಅತ್ಯಂತ ಅರ್ಹನಾದ ಧೀರೋದ್ಧಾತ ನಾಯಕ'[೩೮] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೧೨) ಎಂದೇ ಎಲ್ಲ ಕನ್ನಡಿಗರು ಒಪ್ಪುವರು. ಚಿತ್ರದುರ್ಗ ಎಂದಾಕ್ಷಣ ಎಲ್ಲರ ನೆನಪಿಗೆ ಬರುವುದು ದುರ್ಗದ ಕೊನೆಯ

ದೊರೆ ಮದಕರಿನಾಯಕ ಮಾತ್ರ. ಕಾರಣ ಆತನ ಜೀವನದ ದುರಂತ ಮತ್ತು ಆತನ ಶೌರ್ಯ, ಸಾಹಸ, ಕ್ರೌರ್ಯ ಮತ್ತು ಕಾಮಲೋಲುಪತೆಯ ಬಗ್ಗೆ ಹಲವಾರು ದಂತಕತೆಗಳಿವೆ.

ಮದಕರಿ ೧೨ ವರ್ಷದ ಬಾಲಕನಾಗಿದ್ದಾಗ ಜಾನಕಲ್ಲಿನಿಂದ ತಂದೆ ಭರಮಣ್ಣನಾಯಕ, ತಾಯಿ ನಿಂಗವ್ವ ಹಾಗೂ ತಮ್ಮ ಪರಶುರಾಮನನ್ನು ಬಿಟ್ಟು ಬರಲು ತುಂಬಾ ವೇದನೆ ಪಡುತ್ತಾನೆ. ದುರ್ಗಕ್ಕೆ ಬಂದ ಮದಕರಿಗೆ ರಾಜಕಾರಣದ ವಿದ್ಯೆ ತಿಳಿಸಿಕೊಡುವಂತೆ ನಾಗತಿ ಪ್ರಧಾನಿ ನರಸಪ್ಪಯ್ಯನಿಗೆ ಹೇಳುವಳು. ತದನಂತರ ತರೀಕೆರೆಯ ಪಾಳೆಯಗಾರ ಹನುಮಪ್ಪನಾಯಕರ ಮಗಳಾದ ಲಕ್ಕಾಂಬೆಯ ಜೊತೆಗೆ ವಿವಾಹವೂ ಆಗಿ ಸಂತೋಷಿತನಾಗಿ ಕಾಲ ಕಳೆಯುತ್ತಿರಲಾಗಿ ರಾಯದುರ್ಗದ ತುರುಗಳ್ಳರು ನೂರು ಹಸುಗಳನ್ನು ಕದ್ದೊಯ್ಯುವದು ಮಾತ್ರವಲ್ಲದೇ ದುರ್ಗದ ಪಟ್ಟದ ಮೇಲೆ ಕೂತವನು ಚೋಟುದ್ದದ ಹುಡುಗನೆಂದು ಹಾಸ್ಯ ಮಾಡುತ್ತ ಅಪಮಾನ ಮಾಡಿದ ವಿಷಯವನ್ನು ಮಾರಯ್ಯ ಬಂದು ಸಭೆಗೆ ತಿಳಿಸಿದಾಗ, ಅವರ ಸೊಕ್ಕಡಗಿಸಲು ಓಬವ್ವನಾಗತಿ ತಾನೇ ರಣವೀಳ್ಯವನ್ನು ತೆಗೆದುಕೊಳ್ಳುತ್ತಾಳೆ. ಆದರೆ ಮದಕರಿನಾಯಕ ಬಂದು ನಾಗತಿಯ ಹತ್ತಿರ 'ನಾವು ಬದುಕಿದ್ದು, ನೀವು ರಣವೀಳ್ಯ ತೆಗೆದುಕೊಳ್ಳಬೇಕೇ? ನೀವಲ್ಲಿ ರಣರಂಗದಲ್ಲಿ ಹೋರಾಡುವಾಗ, ನಾವಿಲ್ಲಿ ಅರಮನೆಯ ಹೆಂಗಸರೊಂದಿಗೆ ಚಕ್ಕಂದವಾಡುತ್ತ "ಸೆರಗಿನ ಮನೆಯಲ್ಲಿ ಬದುಕಿದ ನಾಯಕ" ಎನಿಸಿಕೊಳ್ಳಬೇಕೇ? ಅದಾಗದು, ಅವ್ವಾ, ಆ ದಿನ ರಕ್ತದ ಓಕುಳಿಯಾಡಬೇಕು ಎಂದು ನೀವೇ ಹೇಳಿದ್ದಿರಲ್ಲ. ಈಗ ತಾನಾಗಿಯೇ ಆ ಹಬ್ಬ ಒದಗಿ ಬಂದಿದೆ'[೫೯] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ– ೧೦೬) ಎಂದು ಹಟ ತೊಟ್ಟವನಂತೆ ಹೇಳುವನು. ರಾಯದುರ್ಗದವರ ಜೊತೆಗಿನ ಹೋರಾಟದಲ್ಲಿ ಜಯಗಳಿಸುವನು. ಲಕ್ಕಾಂಬೆಯ ಜೊತೆಗಿನ ದಾಂಪತ್ಯ ಮುರಿದು ಬಿದ್ದು ಗುಡಿಕೋಟೆಯ ಪಾಳೆಯಗಾರರಾದ ಮುಮ್ಮಡಿ ಜಟಂಗಿ ನಾಯಕರ ಮಗಳು ಪದ್ಮವ್ವನಾಗತಿ ಮತ್ತು ಜರಿಮಲೆಯ ಪಾಳೆಯಗಾರರಾದ ಇಮ್ಮಡಿ ಬೊಮ್ಮಣ್ಣನಾಯಕರ ಮಗಳು ಬಂಗಾರವ್ವ ನಾಗತಿಯರೊಂದಿಗೆ ವಿವಾಹವಾಗುತ್ತದೆ.

ಓಬವ್ವನಾಗತಿ ಮದಕರಿನಾಯಕನ ಮದುವೆ ಸಮಾರಂಭದಲ್ಲಿ ಸಂತೋಷಿತಳಾಗಿ ಓಡಾಡಿ, ಹಾಸಿಗೆ ಹಿಡಿದು ಮಲಗಿದವಳು ಮತ್ತೆ ಮೇಲೆಳದೆ ಇಹಲೋಕ ತ್ಯಜಿಸಿದಾಗ ಮದಕರಿನಾಯಕ ಆ ದುಃಖ, ವೇದನೆಯಿಂದ ಹೊರಬರಲು ಸಾಕಷ್ಟು ಸಂಕಟಪಡುತ್ತಾನೆ. ತಾಯಿಯಾದ ನಿಂಗವ್ವಳೇ ಆತನನ್ನು ಸಮಾಧಾನಪಡಿಸಿ ನಾಗತಿಯವರ ಆಸೆಯಂತೆ ಬದುಕಬೇಕೆಂದು ತಿಳಿ ಹೇಳುತ್ತಾಳೆ. ಅದೇ ದುಃಖದಲ್ಲಿರುವಾಗಲೇ ಹರಪನಹಳ್ಳಿಯ ಸೊಮಶೇಖರನಾಯಕರ ಸೇನೆ ಗಡಿಕೋಟೆಯಾದ ತುಯ್ಯನಹಳ್ಳಿಗೆ ಮುತ್ತಿಗೆ ಹಾಕಿದಾಗ ಅವರನ್ನು ಸದೆ ಬಡೆಯಲು ಮದಕರಿನಾಯಕ ಸೈನ್ಯ ಸಮೇತ

ಹೋಗಿ ಜಯ ಸಾಧಿಸುವನು. ಆಗ ರಣದಲ್ಲಿ ಗೆದ್ದ ಜನ ಉತ್ಸಾಹದಿಂದ ಗೆಲುವಿನ ಗೀತೆ ಹಾಡಿದರು.

'ಕಾಳಗವೆಂದರೆ ಕಲಿಯಾದೀತು ಚಿಂತರಕಲ್ಲು

ಆಳು ಹೊರಟೀತು ಅಡಿಕೆ ಸಸಿಯಂತೆ। ರನ್ನದ ಕೋಲೆ।

ಆಳು ಹೊರಟೀತು ಅಡಿಕೆ ಸಸಿಯಂತೇ, ಮದಕೇರಣ

ಹೊರಟಾನೇ ಸೋಗೆ ನವಿಲ್ಹಂಗೆ। ರನ್ನದ ಕೋಲೆ॥------'[೪೦] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ- ೧೪೦)

ಹೈದರಾಲಿಯ ಸೇನೆ ಹೊಸದುರ್ಗದ ಮೇಲೆ ದಾಳಿ ಮಾಡಿದ ವಿಷಯ ತಿಳಿದು ಮದಕರಿನಾಯಕನಿಗೆ, ಹೈದರಾಲಿ ತನ್ನ ತಾಯಿಯ ಕತ್ತಿನ ತಾಳಿಗೆ ಕೈಹಾಕಿದನೆಂಬಷ್ಟು ಆಕ್ರೋಶ ಮೂಡಿ, ಯುದ್ಧ ಸನ್ನದ್ಧನಾಗುತ್ತಾನೆ. ಆದರೆ ಇವರಿಬ್ಬರ ಮಧ್ಯೆ ಒಪ್ಪಂದವಾಗಿ ಬಿದನೂರಿನ ಚನ್ನಬಸವನಾಯಕನಿಗೆ ಸಿಂಹಾಸನ ದೊರಕಿಸಿಕೊಡುವಲ್ಲಿ ಸಹಾಯ ಮಾಡಬೇಕೆಂದು ಹೇಳುವರು. ಆದರೆ ಹೈದರಾಲಿ ಬಿದನೂರನ್ನು ಗೆದ್ದು ವೀರಮ್ಮಾಜಿಯನ್ನು ಸೆರೆಹಿಡಿದು ಚನ್ನಬಸವನಾಯಕನಿಗೆ ಪಟ್ಟಾಭಿಷೇಕ ಮಾಡಿಸದೇ ಆತನನ್ನೂ ಸೆರೆಯಲ್ಲಿಟ್ಟು ಆ ರಾಜ್ಯದಲ್ಲಿನ ಹೆಣ್ಣು ಮಕ್ಕಳ ಮೇಲೆಲ್ಲ ಪೈಶಾಚಿಕವಾಗಿ ಅತ್ಯಾಚಾರ ನಡೆಸಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಬಿದನೂರಿನ ಮೇಲೆ ಹಸಿರು ನಿಶಾನೆ ಹಾರಿಸಿದಾಗ ಮದಕರಿನಾಯಕ ಈ ನವಾಬನದು ಎಂತಹ ಕಲ್ಲೆದೆ. ಈ ಕಲ್ಲೆದೆಯೂ ಕಣ್ಣೀರಿಡುವಂತೆ ಮಾಡದಿದ್ದರೆ ತಾನು ಮದಕರಿಯಲ್ಲ ಎಂದುಕೊಳ್ಳುವನು.

ಮದಕರಿನಾಯಕ ಪರಶುರಾಮನಾಯಕನಿಗೆ ಹೈದರಾಲಿಯಿಂದ ತಾನು ಎರಡು ಪಾಠ ಕಲಿತಿರುವುದಾಗಿ ಹೇಳುತ್ತಾನೆ. 'ಮೊದಲನೆಯದು ಯಾರನ್ನು ನಂಬಿದರೂ ಹೈದರಾಲಿಯನ್ನು ನಂಬಬಾರದು. ಎರಡನೆಯದು ಬೊಕ್ಕಸ ಸಿಕ್ಕಾಗ, ನಮ್ಮವರದು ಪರರದು ಎಂದು ನೋಡದೆ, ಸಿಕ್ಕದ್ದು ಬೊಕ್ಕಸ ಮಾತ್ರ ಎಂದು ಅದನ್ನು ಸಾಗಿಸಬೇಕು'[೪೧] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೧೭೭) ಎಂದು ಅವರನ್ನು ನೋಡಿ ಕಲಿತಿರುವುದಾಗಿ ಹೇಳುವನು.

ಅಶಾಂತವಾಗಿದ್ದ ನಾಯಕರ ಮನಸ್ಸನ್ನು ಶಾಂತಗೊಳಿಸಿದವರು ತಾಯಿ ಉತ್ಸವಾಂಬ, ಮೆಚ್ಚಿದ ನಲ್ಲೆ ಕಡೂರಿ. ಮದಕರಿನಾಯಕ ಕಡೂರಿಯ ಮನೆಗೆ ಬಂದಾಗ ಅಕ್ಕನನ್ನು ಕಾಣಲು ಬಂದ ನಾಗವ್ವೆಯನ್ನು ಸಹ ಸ್ಥಿರವಾಗಿ ಅಲ್ಲಿಯೇ ಇಟ್ಟುಕೊಂಡಾಗ ಮದಕರಿನಾಯಕನ ಬಗ್ಗೆ ಊರಲ್ಲೆಲ್ಲ ನಾಯಕರಿಗೆ ಹೆಣ್ಣಿನ ಹುಚ್ಚು ಹಿಡಿದಿದೆ. ಮಾನವಂತ ಹೆಣ್ಣುಗಳಾರು ಉಳಿಯುವ ಹಾಗಿಲ್ಲ ಎಂಬ

ಮಾತುಗಳು ನಿಂಗವ್ವನ ಕಿವಿಗೆ ಬೀಳುತ್ತವೆ. ಮಗನಿಗೆ ಹೇಗೆ ಬುದ್ಧಿ ಹೇಳುವುದೆಂದು ಆಲೋಚಿಸಿ ಪರಶುರಾಮನಾಯಕನಿಗೆ ವಿಷಯ ತಿಳಿಸುವಳು. ಪರಶುರಾಮನಾಯಕ ತನ್ನ ಅಣ್ಣನಾದ ಮದಕರಿನಾಯಕನ ಹತ್ತಿರ ಬಂದು ವಿಷಯ ಪ್ರಸ್ತಾಪಿಸಿದಾಗ ತಾನು ಆ ತೆರನಾಗಿ ಯಾವ ಹೆಣ್ಣನ್ನು ಕಂಡಿಲ್ಲ ಎಂದು ಹೇಳುವನು. ಆದರೆ ದುರ್ಗದ ಸಿಡಿ ಹಬ್ಬದ ದಿನ ತಳವಾರ ಕಂಪಳಯ್ಯನವರ ಮಗಳ ರೂಪವನ್ನು ಕಂಡು "ಎಂಥ ಚೆಲುವಾದ ಹೆಣ್ಣು" ಎಂದು ಪಕ್ಕದವರಿಗೆ ಕೇಳಿಸುವ ರೀತಿಯಲ್ಲಿ ಮಾತನಾಡಿ ಅವಳು ಯಾರ ಮಗಳೆಂದು ವಿಚಾರಿಸಲಾಗಿ ತಂದೆ ಮರ್ಯಾದೆಗಂಜಿ ಭೈರವನಿಗೆ ಆ ಚೆಲುವೆಯನ್ನು ಬಲಿಕೊಟ್ಟು ಬರುವನು. ವಿಷಯ ತಿಳಿದ ಪರಶುರಾಮನಾಯಕ ತನ್ನಣ್ಣನಿಗೆ ಬಂದು ನಡೆದ ಸಂಗತಿ ಹೇಳಿದಾಗ ನಾಯಕ ದುಃಖಿತನಾಗುವನು. ಮದಕರಿನಾಯಕ ತನ್ನ ಧೀರೋದಾತ್ತ ಹೋರಾಟದಿಂದಲೇ ಜನರು ತನ್ನನ್ನು ಕೊಂಡಾಡುವಂತೆ ಮಾಡುತ್ತೇನೆಂದು ಶಪಥ ಮಾಡುವನು. ಅಷ್ಟರಲ್ಲಿಯೇ ಈತನ ವೀರತ್ವಕ್ಕೆ ಸವಾಲು ಹಾಕುವ ರೀತಿಯಲ್ಲಿ ಪೇಶ್ವೆಯವರು ನೀವು ನಿಜವಾಗಲೂ ವೀರರೇ ಆಗಿದ್ದರೆ ನಿಜಗಲ್ಲಿನ ಕೋಟೆಯನ್ನು ವಶಪಡಿಸಿಕೊಂಡು ನವಾಬ ಸರ್ದಾರ್‌ಖಾನ್‌ನನ್ನು ಸೆರೆ ಹಿಡಿಯಿರೆಂದು ಪತ್ರ ಬರೆದಾಗ ಮದಕರಿನಾಯಕ ಇದು ತನ್ನ ಪೌರುಷಕ್ಕೆ ಸವಾಲೆಂದು ನಿಜಗಲ್ಲಿನ ಕೋಟೆಗೆ ಮುತ್ತಿಗೆ ಹಾಕಿ ಸರ್ದಾರ್‌ಖಾನ್‌ನನ್ನು ಸೆರೆ ಹಿಡಿಯುವನು.

ಹೈದರಾಲಿಯ ಕುತಂತ್ರಗಳನ್ನೆಲ್ಲ ತಿಳಿಯುತ್ತ ಬಂದ ಮದಕರಿನಾಯಕ ಹೇಗಾದರೂ ಮಾಡಿ ಆತನ ಸೊಕ್ಕಡಗಿಸಬೇಕೆಂದು ಹಾತೊರೆಯುತ್ತಲೇ ಮೇಲಿನ ಮಾತಿಗೆ ಆತನ ಜೊತೆ ಸ್ನೇಹದಿಂದಿದ್ದಂತೆ ನಡೆದುಕೊಳ್ಳುವನು. ಯುದ್ಧ ನಡೆದಾಗ ಮದಕರಿನಾಯಕರೇ ಎಲ್ಲ ಸೈನ್ಯದ ಮುತುವರ್ಜಿ ವಹಿಸುವರು. ಭಾರತಕ್ಕೆ ಬಂದ ಫ್ರೆಂಚ್ ಸೇನಾಧಿಕಾರಿ ಲಾಲಿಸಾಹೇಬ ಹೈದರಾಲಿಯ ಸೈನ್ಯಕ್ಕೆಲ್ಲ ತರಬೇತಿ ಕೊಟ್ಟು ಆತ ಚಿತ್ರದುರ್ಗದ ಕೋಟೆಯನ್ನು ನೋಡಿ 'ಈ ಕೋಟೆಯನ್ನು ಕಟ್ಟಿದವರು ಬಹಳ ನಿಪುಣರು. ಇಷ್ಟು ತಂತ್ರೋಕ್ತವಾಗಿ ಕಟ್ಟಿದ ಕೋಟೆಯನ್ನು ಇಡೀ ಭಾರತದಲ್ಲೇ ನಾನು ಕಂಡಿಲ್ಲ. ತೋಫಿನ ಬಾಯಿ ಕೊಂಚ ಮೇಲು ಮಾಡಿದರೆ ಗುಂಡು ಆಕಾಶಕ್ಕೆ ಹೋಗುತ್ತದೆ. ತಗ್ಗಿಸಿದರೆ ಅಗಳತಿಗೆ ಬೀಳುತ್ತದೆ; ಸಮವಾಗಿಟ್ಟು ಉಡಾಯಿಸಿದರೆ ನಮ್ಮ ಸೇನೆಗೆ ಪೆಟ್ಟು ಬೀಳುತ್ತದೆ'[೪೨] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೪೫೩) ಎಂದು ಕೋಟೆಯ ಬಲಿಷ್ಠತೆ ಕುರಿತು ಮಾತನಾಡುವನು. ನವಾಬನ ವಕೀಲ ಬಂದು ಮದಕರಿನಾಯಕ ನವಾಬನನ್ನು ಭೇಟಿಯಾಗಬೇಕು. ಖರ್ಚಿನ ಆರು ಲಕ್ಷ ವರಹಗಳನ್ನು ಕೊಡಬೇಕು ಇಲ್ಲವಾದರೆ ಎರಡು ದಿನಗಳಲ್ಲಿ ದುರ್ಗವನ್ನು ಉಡಾಯಿಸುತ್ತೇವೆಂಬ ಪತ್ರವನ್ನು ಕೊಟ್ಟಾಗ ನಾಯಕ ವೀರತ್ವದ

ನುಡಿಗಳನ್ನಾಡುತ್ತ ನಾವೇನು ಯುದ್ಧಕ್ಕೆ ಆಹ್ವಾನಿಸಿರಲಿಲ್ಲ, ದುರ್ಗವನ್ನು ಉಡಾಯಿಸುವುದಕ್ಕೆ ಅದು ಮೇಣದಿಂದ ಕಟ್ಟಿದುದಲ್ಲ. ದುರ್ಗದ ಜನ ಗಂಡಸರೆಂದು ಹೇಳಿ ಕಳಿಸುವನು.

ನವಾಬ ಜಾನಕಲ್ಲಿನ ಮೇಲೆ ದಾಳಿ ಮಾಡಿಸಿ ಅಲ್ಲಿಯ ಜನರನ್ನೆಲ್ಲ ಕೊಂದ ವಿಷಯ ತಿಳಿದ ನಾಯಕ "ಜಾನಕಲ್ಲಿನ ಒಂದು ತಲೆಗೆ, ನವಾಬನ ಸೇನೆಯ ನೂರು ತಲೆಯ ಬಲಿ ತೆಗೆದುಕೊಳ್ಳದಿದ್ದರೆ ನಾನು ನಿಂಗವ್ವನ ಮಗನಲ್ಲ" ಎಂದು ಪ್ರಮಾಣ ಮಾಡುತ್ತಾನೆ. ಯುದ್ಧ ಏಳೆಂಟು ತಿಂಗಳ ಕಾಲ ಸತತವಾಗಿ ಮುಂದುವರೆದಾಗ ಜನಕ್ಕೆ ತಿನ್ನಲು ಸರಿಯಾದ ಅಕ್ಕಿಯಿಲ್ಲದೆ ಮುಗ್ಗಲು ರಾಗಿ ತಿನ್ನುವ ಸ್ಥಿತಿ ಕಂಡು ಕೊರಗುತ್ತಾನೆ. ಕೊನೆಗೆ ಯುದ್ಧ ಮುಗಿಯುವ ಸಂಭವವೇ ಇಲ್ಲವಾದರೆ ಜನರ ಕಷ್ಟಗಳನ್ನು ನೋಡಲಾಗುವುದಿಲ್ಲ. ನವಾಬ ಈಗ ಹಣವನ್ನು ಮಾತ್ರವಲ್ಲದೇ ಪ್ರಧಾನಿಯಾದ ಪರಶುರಾಮನಾಯಕನನ್ನು ಒತ್ತೆ ಇಡುವಂತೆ ಕೇಳುವನು. ಮದಕರಿನಾಯಕ ಅದಕ್ಕೊಪ್ಪದಿದ್ದಾಗ ಪರಶುರಾಮನಾಯಕನೇ ಬಲವಂತಪಡಿಸುವನು. ಹಿಂದೆ ಪ್ರಧಾನಿಗಳಾಗಿದ್ದ ನರಸಪ್ಪಯ್ಯ ನವಾಬರ ಬಂಧಿ ಎಂಬ ವಿಷಯ ತಿಳಿದ ಮದಕರಿನಾಯಕ ಮೊದಲೇ ಆತ ನವಾಬರ ಅಭಿಮಾನಿ. ಈಗ ಅವರು ನವಾಬರ ಕೈಗೆ ಸಿಕ್ಕಿದ್ದಾರೆಂದರೆ ದುರ್ಗಕ್ಕೇನು ವಿಪತ್ತು ಕಾದಿದೆಯೋ ಎನ್ನುವರು.

ಹೈದರಾಲಿಗೆ ದುರ್ಗದ ಕಳ್ಳಕಿಂಡಿಯ ಮಾರ್ಗವನ್ನು ತೋರಿಸಿದ ಜರೀಮಲೆಯ ನಾಯಕ ಬೊಮ್ಮಣ್ಣನಾಯಕನನ್ನು ಹುಡುಕಿಕೊಂಡು ಆತನಿಗೆ ಶಿಕ್ಷಿಸಲು ಕ್ರೋಧಾಗ್ನಿಯಿಂದ ಅರಮನೆಗೆ ಬಂದಾಗ ಆತನು ಮಗಳಾದ ಬಂಗಾರವ್ವನಾಗತಿಗೆ ಕ್ಷಮಿಸುವಂತೆ ಕೇಳಿಕೊಳ್ಳುತ್ತಾನೆ. ಆದರೆ ಏನೊಂದೂ ತೋಚದೆ ದುಃಖಿತಳಾಗಿ ನಿಂತಾಗ ನಾಯಕ ದ್ರೋಹಿಯನ್ನು ರಾಜಾಜ್ಞೆಗೆ ಒಪ್ಪಿಸುವಂತೆ ಹೇಳುವನು. ಬಂಗಾರವ್ವನಾಗತಿ ಆತನ ಕೈಯಲ್ಲಿನ ಮುಳ್ಳಿನ ಚಾವಟಿಯನ್ನು ತೆಗೆದುಕೊಂಡು ಪ್ರಜ್ಞೆ ತಪ್ಪಿ ಬೀಳುತ್ತಾನೆ. ನಾಯಕ ಅವನನ್ನು ಮೆರವಣಿಗೆ ಮಾಡಿಸಿ ರಾಜದ್ರೋಹಿಗೆ ಒದಗುವ ಶಿಕ್ಷೆ ಎಂತಹದ್ದು ಎಂಬುದನ್ನು ತೋರಿಸುವನು. ಆಗ ದುರ್ಗದ ಜನ

'ನಗಾರಿ ಮೇಲೆ ಕೈ ಹೊಡೆದು ಹಾರಿಸೋ ಗುಂಡು

ನೆಗೆನೆಗೆದು ಹೇಳು ಮದಕರಿನಾಯಕನೊಬ್ಬನೇ ಗಂಡು।

ಹೆದರಲಿಲ್ಲವೋ ಬಂದರೂ ನಾಲ್ಕಾರು ಲಕ್ಷದಂಡು

ಎದೆ ತಟ್ಟಿ ನುಗ್ಗಿ ಸದೆಬಡಿದನೋ ಅರಿಜನರ ತುಂಡು॥

ಅರಿರಾಯರ್ಧಿಂಡಿರು ಗೋಳಾಡುತಾರೆ। ಬಂತು ನಮಗೆಂತ ತಾಪ।

ಅರಿಯದೆ ಕೆಣಕಿ ಕರ್ಪೂರವಾದರೋ। ತಾಳಿಗೆ ತಟ್ಟಿ ದುರ್ಗಿಯ ಶಾಪ॥

ಮೂಲೋರ್ಕ ಕೊಂಡಾಡುತೈತೆ ಮದಕರಿಯ ಪ್ರತಾಪ।

ಹತ್ತಿಸಿದ್ಹಾಂಗೆ ನೂರಾರ್ಮತಾಪು। ಉರಿದಾಂಗೆ ಸಾಲುದೀಪ॥'[೪೩] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೬೦೪) ಎಂದು ತಮ್ಮ ನೆಚ್ಚಿನ ನಾಯಕರ ಪರಾಕ್ರಮವನ್ನು ಕೊಂಡಾಡುತ್ತಾರೆ.

ಹಬ್ಬದ ಹೆಸರಿನಲ್ಲಿ ಮಲ್ಲಾಪುರದ ಕೆರೆಗೆ 'ಪಂಜಾ' ತೊಳೆಯಲು ಹೋಗಿದ್ದ ಮುಸ್ಲಿಂ ಸರದಾರರೆಲ್ಲರೂ ನವಾಬರಿಗೆ ಸಹಾಯಕವಾದ ವಿಷಯ, ಮುಸ್ಲಿಂ ಸೈನಿಕರೆಲ್ಲರೂ ಸರ್ದಾರರಿಲ್ಲದೇ ತಾವು ಯುದ್ಧ ಮಾಡುವುದಿಲ್ಲವೆಂಬ ವಿದ್ರೋಹದ ಮಾತುಗಳು, ಮರಾಠಾ ಸೈನಿಕರು ತಮಗೆ ಸರಿಯಾಗಿ ಊಟ ಉಪಚಾರದ ವ್ಯವಸ್ಥೆಯಿಲ್ಲವೆಂದು ತಾವೇ ಶಸ್ತ್ರಾಸ್ತ್ರ ತ್ಯಜಿಸಿ ಹೊರಟು ಹೋದ ವಿಷಯಗಳೆಲ್ಲವನ್ನೂ ಪರಶುರಾಮನಾಯಕನಿಂದ ತಿಳಿದ ಮದಕರಿನಾಯಕ ಚಾವಡಿಗೆ ಹೋಗಿ ನಾಳಿನ ಯುದ್ಧದಲ್ಲಿ ಏನೆಂಬುದು ನಿರ್ಧಾರವಾಗಲಿ ಎಂದು ದಳವಾಯಿಗಳೆಲ್ಲರಿಗೂ ಹೇಳಿ ಹುರಿದುಂಬಿಸುವನು. ಹೋರಾಟದಲ್ಲಿ ನಾಯಕರ ಮೇಲೆ ಬಿದ್ದ ಕತ್ತಿಯ ಪೆಟ್ಟಿಗೆ ತೊಟ್ಟ ಉಕ್ಕಿನ ಬಲೆಗವಚ ಹರಿದು ಛಿದ್ರವಾಗಿ ರಕ್ತ ಸುರಿಯಲಾರಂಭಿಸಿತು. ಗುಂಡೇಟು ತಿನ್ನುತ್ತಾ, ಕತ್ತಿ ಏಟಿಗೆ ಮೈ ಕೊಡುತ್ತಲೇ ಹೋರಾಡುತ್ತಿದ್ದ ಮದಕರಿನಾಯಕನ ಎದೆಗೆ ಒಮ್ಮೆಲೆ ಹತ್ತಾರು ಗುಂಡುಗಳು ಬಡಿದು ನೆಲಕ್ಕುರುಳುತ್ತಾನೆ.

೬.೧.೨೬ ಮಹಾರಾಣಾ ಪ್ರತಾಪಸಿಂಹ :

ಮಹಾರಾಣಾ ಪ್ರತಾಪಸಿಂಹ ಒಬ್ಬ ವೀರನಾಗಿದ್ದು, ಅಷ್ಟೇ ಅಲ್ಲ ಭಾರತದಲ್ಲಿ ಹಿಂದೂ ಧರ್ಮವನ್ನು ಉಳಿಸಿ ಬೆಳೆಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಕೃಷ್ಣದೇವರಾಯನ ನಂತರ ಹುಟ್ಟಿದ ಅಕ್ಬರ್ ಉತ್ತರದ ರಜಪೂತ ಸಂಸ್ಥಾನಗಳ ಹಣೆಯಬರಹವನ್ನು ತೊಡೆದು ಹಾಕಿ ಇಸ್ಲಾಮಿನ ವಿಜಯಪತಾಕೆಯನ್ನು ಮೆರೆಸುತ್ತಾನೆ. ಪ್ರತಾಪಸಿಂಹನ ಸಮಕಾಲೀನರಾಗಿದ್ದ ಶ್ರೇಷ್ಠ ರಜಪೂತ ಸಂಸ್ಥಾನಿಕರೆಲ್ಲ ಅಕ್ಬರನ ಸಖ್ಯ ಬೆಳೆಸಿ, ಅವನ ದಾಸಾನುದಾಸರಾದ ಸಂದರ್ಭದಲ್ಲಿ ಅಕ್ಬರನ ವಿರುದ್ಧ ಸಿಡಿದೆದ್ದು ರಜಪೂತ ಸಂಸ್ಥಾನವನ್ನು ಉಳಿಸಲು ಹೋರಾಡುತ್ತಾನೆ. ಚಿತ್ತೂರನ್ನು ಅಕ್ಬರ್ ವಶಪಡಿಸಿಕೊಂಡ ಸಂದರ್ಭದಲ್ಲಿ ಏಕಾಂಗಿಯಾದ ಈತ ಮತ್ತೆ ಚಿತ್ತೂರನ್ನು ತನ್ನ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. 'ಮಹಾರಾಣಾ ಪ್ರತಾಪಸಿಂಹನ ವೀರಚಾರಿತ್ರ್ಯ ಬರೆಯುವುದಕ್ಕೆ ಮಹಾಕವಿಗಳ ಲೇಖನಿಯೇ ಬೇಕು ಎಂದು ಲೆ.ಕ.ಜೇಮ್ಸ್ ಟಾಡ್‌ರವರು ಹೇಳಿರುವ ಮಾತು ಯಥಾರ್ಥವಾಗಿದೆ.'[೪೪] (ಕೃಷ್ಣರಾಯರು ಅ.ನ, ೨೦೦೭, ರಣವಿಕ್ರಮ, ಪುಟ-೦೩)

ದುರ್ಬಲನಾಗಿದ್ದ ಉದಯಸಿಂಹ ಜಗಮಲ್ಲನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿ ಅಸ್ತಂಗತನಾದಾಗ ಈ ಉತ್ತರಾಧಿಕಾರತ್ವವನ್ನು ಎಲ್ಲರೂ ವಿರೋಧಿಸುತ್ತಾರೆ. ಆ ಸಂದರ್ಭದಲ್ಲಿ ಪಿತೃವಿಯೋಗದಿಂದ ಪರಿತಪ್ತನಾಗಿದ್ದ ಪ್ರತಾಪಸಿಂಹ ಜಗಮಲ್ಲ ನನ್ನ ಸೋದರ. ಅವನು ಗಾದಿಯೇರಿದರೇನು, ನಾನು ಗಾದಿಯೇರಿದರೇನು? ಈ ಅಲ್ಪ ವಿಷಯಕ್ಕಾಗಿ ಉದಯಪುರದಲ್ಲಿ ಸ್ವಯೂಥ ಕಾಳಗವಾಗುವುದು ಬೇಡ ಎಂದು ಹೇಳುತ್ತಾನೆ. ಆದರೂ ಎಲ್ಲರ ಒತ್ತಾಯಕ್ಕೆ ಮಣಿದಾಗ ಗತಿಸಿದ ಮಹಾರಾಣಾನ ಶ್ರಾದ್ಧಾಧಿಕರ್ಮಗಳು ಮುಗಿದ ಮೇಲೆ ಪ್ರತಾಪಸಿಂಹನ ಪಟ್ಟಾಭಿಷೇಕ ವಿದ್ಯುಕ್ತವಾಗಿ ಕುಂಬಳಘರದಲ್ಲಿ ನೇರವೇರುತ್ತದೆ. ತದನಂತರ ಮೊಘಲರ ಪರವಾಗಿ ಬಂದ ಶಕ್ತಸಿಂಹ ಪಾದಷಹ ಅಕ್ಬರ್‌ನ ಜೊತೆಗೆ ಸಂಧಾನ ಮಾಡಿಕೊಳ್ಳುವಂತೆ ಹೇಳುವನು. ಆದರೆ ಅದನ್ನು ಒಪ್ಪದ ಪ್ರತಾಪಸಿಂಹನನ್ನು ಶಕ್ತಸಿಂಹ ಅಪಮಾನಗೊಳಿಸುವನು.

ಪ್ರತಾಪಸಿಂಹರು "ಝುಂಡಾಬತೇರಿ"ಯನ್ನು ತಪೋಭೂಮಿಯನ್ನಾಗಿ ಮಾಡಿಕೊಂಡು ಪ್ರತಿದಿನ ಪ್ರಾತಃಕಾಲ ಝುಂಡಾಬತೇರಿಗೆ ಹೋಗಿ ಮೇವಾರಿನ ರಾಷ್ಟ್ರಧ್ವಜಕ್ಕೆ ಪ್ರಣಾಮ ಸಲ್ಲಿಸುತ್ತಿದ್ದ. ಚಿತ್ತೂರನ್ನು ದೂರದಿಂದ ಕಂಡು ಕಂಬನಿಗರೆಯುತ್ತಿದ್ದ. ಚಿತ್ತೂರು ಬಿಡುಗಡೆ ಹೊಂದುವವರೆಗೆ ಹಾಸಿಗೆ ಮೇಲೆ ಮಲಗುವುದಿಲ್ಲವೆಂದು, ಚಿನ್ನದ ತಣಿಗೆಯಲ್ಲಿ ಉಣ್ಣುವುದಿಲ್ಲವೆಂದು ಪ್ರಮಾಣ ಮಾಡಿ ನೆಲದ ಮೇಲೆ ಹುಲ್ಲು ಹಾಸಿಕೊಂಡು ಮಲಗುತ್ತಿರುತ್ತಾನೆ. ಎಲೆಯ ಮೇಲೆ ಒಂದೆರಡು ತುಣುಕು ರೊಟ್ಟಿ ಇಟ್ಟುಕೊಂಡು ತಿನ್ನುತ್ತಿರುತ್ತಾನೆ. ಯುದ್ಧ ಘೋಷಣೆಯಾಗಿ ಮೊಘಲರು ಮತ್ತು ರಜಪೂತರು ಕಾದಲಾರಂಭಿಸುತ್ತಾರೆ. ಈ ಕಾದಾಟದಲ್ಲಿ ರಜಪೂತ ವೀರರು ಬಲಿದಾನವಾಗುತ್ತಾರೆ. ಪ್ರತಾಪಸಿಂಹನ ಕುದುರೆ ಚೈತಕ್ ಗಾಯಗೊಳ್ಳುವುದು. ಇದನ್ನೆಲ್ಲ ಕಂಡು ರಾಣಾ ಪ್ರತಾಪಸಿಂಹನ ಕಣ್ಣಲ್ಲಿ ಅಶ್ರುಧಾರೆ ಆಗುವುದು. ಅಲ್ಲಿಗೆ ಬಂದ ಶಕ್ತಸಿಂಹನಿಗೆ ನನ್ನನ್ನು ಸೆರೆ ಹಿಡಿಯಲಾರೆ ಕತ್ತಿ ಹಿರಿದು ಯುದ್ಧ ಮಾಡು ನಿನ್ನ ಅದೃಷ್ಟಕ್ಕೆ ನಾನು ಮೃತಪಟ್ಟರೆ ನನ್ನ ಕಳೇಬರವನ್ನು ಪಾದಷಹರಿಗೆ ತೆಗೆದುಕೊಂಡು ಹೋಗಿ ಒಪ್ಪಿಸಬಹುದೆಂದಾಗ ಶಕ್ತಸಿಂಹ ತನ್ನದು ಮಹಾಪರಾಧವಾಯಿತೆಂದು ಹೇಳುತ್ತಾನೆ. ಪ್ರತಾಪಸಿಂಹನು ನೀನು ಅಕ್ಬರ್ ಪಾದಷಹನ ಜೊತೆ ಸೇರಿ ತಾಯ್ನಾಡಿಗೆ ಎರಡು ಬಗೆದೆಯಲ್ಲ. ನನಗೆ ಬೇಕಾಗಿರುವುದು ರಾಣಾ ಪದವಿಯಲ್ಲ. ಚಿತ್ತೂರನ್ನು ಪಾದಷಹನ ದಾಸ್ಯದಿಂದ ಮುಕ್ತಗೊಳಿಸುವುದು. ರಾಣಾ ಪದವಿಯನ್ನು ನಾನೇ ನಿನಗೆ ಬಿಟ್ಟುಕೊಡುತ್ತಿದ್ದೆ. ಜಗಮಲ್ಲ ಸೀಸೋದಿಯಾ ವಂಶವೇ ತಲೆ ತಗ್ಗಿಸುವಂತೆ ಮಾಡಿದ. ನೀನೂ ಅದೇ ದಾರಿಯಲ್ಲೇ ನಡೆದೆ. ಪಾದಷಹರ ಅಕ್ಷೋಹಿಣಿಗಳಿಗಾಗಲಿ, ಮೊಘಲ್ ವೀರರ ಪೌರುಷ ಪರಾಕ್ರಮಗಳಿಗಾಗಲೀ ನಾನು ಅಂಜುವುದಿಲ್ಲ. ಆದರೆ ದೈವದ್ರೋಹ, ದೇಶದ್ರೋಹಕ್ಕೆ ಅಂಜುವೆ ಅಳುಕುವೆ ಎಂದಾಗ ಶಕ್ತಸಿಂಹ ತನ್ನದು ಸರ್ವಾಪರಾಧವಾಯಿತೆಂದು ಹೇಳುವನು.

ರಾಣಾ ಪ್ರತಾಪಸಿಂಹನ ಬದುಕಿನ ಹೋರಾಟದಲ್ಲಿ ಮೇವಾರಿನ ಸ್ವಾತಂತ್ರ್ಯದ ಕನಸು ಕಾಣುತ್ತ ಅರಾವಳಿ ಪ್ರಾಂತ್ಯದ ದಟ್ಟವಾದ ಕಾಡಿನಲ್ಲಿ ಪತ್ನಿ, ಮಕ್ಕಳೊಂದಿಗೆ ಇರುವಾಗ ಹಸಿವಿನಿಂದ ಇರುವ ಮಕ್ಕಳನ್ನು ನೋಡಲಾಗದೇ ಪಾದಷಹರಿಗೆ ಕ್ಷಮಾಭಿಕ್ಷೆ ಯಾಚಿಸುವ ತೀರ್ಮಾನ ತೆಗೆದುಕೊಳ್ಳುವನು. ಇದನ್ನು ತೀವ್ರವಾಗಿ ವಿರೋಧಿಸಿ ಪ್ರತಿಭಟಿಸಿದ ಆತನ ಪತ್ನಿ ಲಕ್ಷ್ಮೀ ಗಂಡನ ಮನಃಪರಿವರ್ತನೆ ಮಾಡಿ ಮತ್ತೆ ಸೈನ್ಯ ಸಂಘಟನೆಯಲ್ಲಿ ತೊಡಗುವಂತೆ ಮಾಡುವಳು. ಅದೇ ಸಮಯಕ್ಕೆ ಪ್ರಧಾನಿ ಭೀಮಸಿಂಹ ಮತ್ತು ಕವಿರಾಜ ಪೃಥ್ವಿಸಿಂಹರು ಬಂದು ಸೈನ್ಯ ಕಟ್ಟಲು ಬೇಕಾದ ಹಣವನ್ನು ಒದಗಿಸುವರು. ಪ್ರತಾಪಸಿಂಹ ಅದನ್ನು ತೆಗೆದುಕೊಂಡು ಮೇವಾರಿನ ಬಂಧ ವಿಮೋಚನೆಗಾಗಿ ನಾನು ಮನೆಮನೆಗೆ ಹೋಗಿ ಭಿಕ್ಷೆ ಎತ್ತಲು ಸಿದ್ಧನಾಗಿದ್ದೇನೆ ಎಂದು ಆರಾವಳಿ ಬೆಟ್ಟ ಪ್ರಾಂತ್ಯವನ್ನು ಬಿಟ್ಟು ತನ್ನ ಪರಿವಾರದೊಂದಿಗೆ ಹೊರಟು ಮೊದಲು ಕುಂಬಳಘರ್ ಕೋಟೆಯನ್ನು ಕೈವಶ ಮಾಡಿಕೊಂಡು ತಾತ್ಕಾಲಿಕ ರಾಜಧಾನಿಯನ್ನಾಗಿ ಮಾಡಿಕೊಳ್ಳುತ್ತಾನೆ. ಗೊಗಾಂಡಾ, ಉದಯಪುರವನ್ನು ವಶಪಡಿಸಿಕೊಳ್ಳುತ್ತಾನೆ.

ಪಾದಷಹ ರಾಣಾ ಪ್ರತಾಪಸಿಂಹನನ್ನು ಸೆರೆ ಹಿಡಿಯಲು ಸತತ ಹತ್ತು ವರ್ಷಗಳ ಕಾಲ ಪ್ರಯತ್ನಿಸಿದರೂ ವಿಫಲನಾದನು. ಚಾವಂಡದಲ್ಲಿ ಒಂದು ದಿನ ಮಹಾರಾಣಾ ತನ್ನ ಬಿಲ್ಲನ್ನು ಬಿಗಿಯುತ್ತಿದ್ದಾಗ, ಅದು ಹಾರಿ ಕಾಲಿಗೆ ಪೆಟ್ಟಾಗಿ ಆತನ ಪ್ರಾಣಕ್ಕೆ ಕಂಟಕವಾಗುತ್ತದೆ. ಚಿತ್ತೂರನ್ನು ಕೈವಶಪಡಿಸಿಕೊಳ್ಳುವ ಮೊದಲೇ ಪ್ರತಾಪಸಿಂಹ ದೈವಾಧೀನನಾಗುವನು. ತಾನು ಸಾಯುವ ಪೂರ್ವದಲ್ಲಿ ಮಗನಾದ ಅಮರಸಿಂಹನಿಗೆ ಎಂದಿಗೂ ಪಾದಷಹರ ಪ್ರಲೋಭನೆಗೆ ಒಳಗಾಗಿ ರಜಪೂತ ರಕ್ತಕ್ಕೆ, ಸೀಸೋದಿಯಾ ವಂಶಕ್ಕೆ ಕಳಂಕ ತರಬೇಡವೆಂದು ಹೇಳುವನು. ಮಹಾಪುರುಷನೊಬ್ಬನ ಜೀವನ ಸಮಾಪ್ತವಾದುದಕ್ಕೆ ಇಡಿಯ ಭಾರತವೇ ಮಮ್ಮಲ ಮರುಗಿತು.

೬.೧.೨೭ ಚಿಕವೀರರಾಜ :

ಚಿಕವೀರರಾಜ ಲಿಂಗರಾಜನ ಮಗನಾಗಿದ್ದು ವೀರರಾಜೇಂದ್ರ ಕಾಲವಾದ ನಂತರ ಅವರ ಮಗಳಾದ ದೇವಮ್ಮಾಜಿಯ ಪರವಾಗಿ ಆಡಳಿತ ನಡೆಸುತ್ತಿದ್ದ ಆತನ ಚಿಕ್ಕಪ್ಪ ಲಿಂಗರಾಜ ದಕ್ಷ ಆಡಳಿತಗಾರನಾಗಿ ಕೊಡಗು ದೇಶದ ಪ್ರಗತಿಯನ್ನು ಮಾಡುವುದರ ಜೊತೆಗೆ ತಾನೇ ಕೊಡಗಿನ ರಾಜನೆಂದು ಸಾರುತ್ತಾನೆ. ಈ ಸಮಯದಲ್ಲಿ ಕೊಡಗುವನ್ನು ವಶಪಡಿಸಿಕೊಳ್ಳುವುದು ಅಸಾಧ್ಯವೆಂದು ಭಾವಿಸಿದ ಬ್ರಿಟೀಷರು ಈತನ ನಂತರ ವೀರರಾಜ ಕ್ರಿ.ಶ ೧೭೪೨ ರಲ್ಲಿ ಪಟ್ಟಕ್ಕೆ ಬಂದು ಈತನೂ ಸಹ ದಕ್ಷತೆಯಲ್ಲಿ ಲಿಂಗರಾಜನಿಗಿಂತ ಕಡಿಮೆಯವನಾಗಿರಲಿಲ್ಲ. ತಾತನಾದ ವೀರರಾಜೇಂದ್ರನ ಕಾಲದಿಂದಲೂ ಆಂಗ್ಲರ ಗುಣಾವಗುಣಗಳನ್ನು ಬಲ್ಲ ಈತ ಎಂದಿಗೂ ಬ್ರಿಟೀಷರನ್ನು ಆತ್ಮೀಯ

ಸ್ನೇಹಿತರೆಂದು ಕಾಣಲಿಲ್ಲ. ಈತ ಪಟ್ಟಾಭಿಷಕ್ತನಾದ ಮೇಲೆ ಹತ್ತು ವರ್ಷಗಳ ಕಾಲ ಕೊಡಗಿನ ಪ್ರಜೆಗಳು ನೆಮ್ಮದಿಯಿಂದ ಜೀವಿಸುತ್ತಾರೆ. ಈತ ಗದ್ದುಗೆ ಏರಿದ ಮೂರನೆಯ ವರ್ಷ ಬೇಟೆಗೆ ಹೋಗಿ ಹಾರುತ್ತಿರುವ ಹಕ್ಕಿಯ ಕಣ್ಣಿಗೆ ಗುರಿಹೊಡೆದು, ನಾಲ್ವತ್ತು ದಿನಗಳ ಅಖಂಡ ಬೇಟೆಯಲ್ಲಿ ಇನ್ನೂರ ಮೂವತ್ತು ಮೂರು ಆನೆಗಳನ್ನು ಗುಂಡು ಹೊಡೆದು ಕೆಡವುತ್ತಾನೆ. ವೀರರಾಜನಿಗೆ ಸ್ವಾಮಿನಿಷ್ಠರಾದ ಸ್ನೇಹಿತರಿದ್ದರೂ ಸಹ ವಿರೋಧಿ ಬಣಗಳು ಹೆಚ್ಚಾಗುತ್ತಲೇ ಇದ್ದವು. ಇತ್ತ ದೇವಮ್ಮಾಜಿ ಗಂಡನೊಡನೆ ಶ್ರೀರಂಗಪಟ್ಟಣಕ್ಕೆ ಹೋಗಿ ಆಂಗ್ಲ ರೆಸಿಡೆಂಟ್‌ರ ಮುಂದೆ ತನ್ನ ಚಿಕ್ಕಪ್ಪನ ಮಗ ತುಂಬಾ ಕೆಟ್ಟವನು. ಅವನನ್ನು ಸೋಲಿಸಿ ತನ್ನನ್ನು ರಾಣಿ ಮಾಡಬೇಕೆಂದು ದೂರು ಕೊಡುವಳು. ಅದೇ ಸಮಯಕ್ಕೆ ಕಾಯುತ್ತಿದ್ದ ಬ್ರಿಟೀಷರು ಕೊಡಗಿನ ಮೇಲೆ ದಾಳಿ ಮಾಡಲು ಮುಂದಾದರು. ಆ ಸಮಯದಲ್ಲಿ ಯುದ್ಧ ಘೋಷಣೆಯಾಗಿ ಆಂಗ್ಲಸೇನೆಗಳು ಕೊಡಗಿನ ವೀರರ ಹೊಡೆತ ತಾಳಲಾರದೆ ಹಿಮ್ಮೆಟ್ಟಿದವು. ಆದರೆ ಅಪ್ಪಾರಂಡ ಬೋಪು ದಿವಾನ ವೀರರಾಜರಿಗೆ ಒಪ್ಪಂದ ಮಾಡಿಕೊಳ್ಳೋಣ ಇಲ್ಲವಾದರೆ ಕೊಡಗು ದೇಶ ಇಂಗ್ಲೀಷರ ಕೈವಾಶವಾಗುವುದು ಖಂಡಿತ ಎಂದು ಸಲಹೆ ನೀಡಿ ಕೊಡಗು ಇಂಗ್ಲೀಷರ ಕೈವಶವಾಗುವಂತೆ ಮಾಡುತ್ತಾನೆ. ಚಿಕವೀರರಾಜೇಂದ್ರ ಇಂಗ್ಲೀಷರ ಕೈದಿಯಾಗಿ ಕೊಡಗು ದೇಶವನ್ನು ಇನ್ನೂರು ವರ್ಷಗಳಿಗೂ ಮೇಲ್ಪಟ್ಟು ಆಳಿದ್ದ ರಾಜಮನೆತನವನ್ನು ಮೂಲೆಗೊತ್ತಿದರು.

ಹಿಂದೆ ಬ್ರಿಟೀಷ ಅಧಿಕಾರಿಗಳು ಕೊಡಗಿಗೆ ಬೇಟೆಯಾಡಲೆಂದು ಬಂದಾಗ ಅವರಿಗಾಗಿ ದೊಡ್ಡರಾಜೇಂದ್ರರು ಕಟ್ಟಿಸಿದ ಅರಮನೆಯಲ್ಲಿಯೇ ವೀರರಾಜೇಂದ್ರರ ಕುಟುಂಬ ಬ್ರಿಟೀಷರ ಕೈದಿಯಾಗುತ್ತದೆ. 'ಗವರ್ನರ್ ಜನರಲ್ ಬೆಂಟಿಂಕ್‌ನು ಕೊಡಗನ್ನು ವಶಮಾಡಿಕೊಳ್ಳಲು ಆಜ್ಞೆ ಹೊರಡಿಸಿದನು. ಕ್ರಿ.ಶ ೧೮೩೪ ರಲ್ಲಿ ಕರ್ನಲ್ ಲಿಂಡ್ಸೆಯ ನೇತೃತ್ವದಲ್ಲಿ ಬ್ರಿಟೀಷ ಸೈನ್ಯವು ಕೊಡಗಿನ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡಿತು. ಚಿಕವೀರರಾಜೇಂದ್ರ ಹಾಗೂ ಕುಟುಂಬದವರನ್ನು ಕಾಶಿಗೆ ಕಳಿಸಿದರು.'[೪೫] (ಶೈಲಜಾ ಹೊಸಳ್ಳೇರ, ೨೦೧೨, ಪುಟ-೯೫) ಚಿಕವೀರರಾಜ ತನ್ನ ಮಗಳಿಗೆ ಕಿರಿಯ ಗೌರಮ್ಮಳೆಂದೇ ಕರೆಯುತ್ತಿದ್ದು ಸ್ತ್ರೀಯಾದ ವಿಕ್ಟೋರಿಯಾ ರಾಣಿ ದೊಡ್ಡದಾದ ಸಾಮ್ರಾಜ್ಯವನ್ನೇ ಆಳುತ್ತಿರುವಾಗ ವೀರಸಂತಾನವಾದ ತನ್ನ ಮಗಳು ಕೊಡಗು ರಾಜ್ಯವನ್ನು ಆಳಬಾರದೆ? ಎಂದುಕೊಳ್ಳುವನು. ಆಕೆಗೆ ಬ್ರಿಟೀಷ್ ಮಹಿಳೆಯೊಬ್ಬಳಿಂದ ಶಿಕ್ಷಣ ಕೊಡಿಸುವನು. ಪತ್ನಿ ತೀರಿಹೋದ ನಂತರ ಮಗಳೊಂದಿಗೆ ಇಂಗ್ಲೆಂಡಿಗೆ ಹೋಗಿ ವಿಕ್ಟೋರಿಯಾ ರಾಣಿಗೆ ತನ್ನ ಮಗಳು ದೇವಮಾತೆಯಾಗಬೇಕೆಂಬ ವಿಚಾರ ಹೇಳಿ ಪ್ರಾರ್ಥನಾ ಪತ್ರವೊಂದನ್ನು ಅರ್ಪಿಸಿದಾಗ ವಿಕ್ಟೋರಿಯಾ ರಾಣಿ ಅದನ್ನು ಮಾನ್ಯ ಮಾಡಿ ಕೊಡಗಿನ ರಾಜಕುಮಾರಿ ವಿಕ್ಟೋರಿಯಾ ಗೌರಮ್ಮ ಎಂಬ ಹೆಸರು ಪಡೆದುಕೊಳ್ಳುತ್ತಾಳೆ. ಕೊಡಗಿನ ರಾಜಕುಮಾರಿ ಗೌರಮ್ಮ ಕ್ರೈಸ್ತ

ಮತಾವಲಂಬಿಯಾಗಿ, ಇಂಗ್ಲೀಷ್ ಅಧಿಕಾರಿಯೋರ್ವನನ್ನು ಮದುವೆಯಾಗಿ ಸ್ವಲ್ಪ ಕಾಲದಲ್ಲೇ ಮೃತಳಾದಳು. ಕ್ರಿ.ಶ ೧೮೬೦ ರಲ್ಲಿ ವೀರರಾಜೇಂದ್ರನೂ ಮರಣಿಸಿದನು ಈತನ ಶವವನ್ನು ಕೆನ್ಸಾಲ್ ಗ್ರೀನ್ ಸ್ಮಶಾನದಲ್ಲಿ ದಫನ್ ಮಾಡುವರು ಎಂಬ ವಿಚಾರಗಳು ತಿಳಿದು ಬರುತ್ತವೆ.

೬.೧.೨೮ ಮಲ್ಲಸರ್ಜ :

ಮಲ್ಲಸರ್ಜ ಕಿತ್ತೂರನ್ನಾಳಿದ ೧೨ ಜನ ಅರಸರಲ್ಲಿಯೇ ಅತ್ಯಂತ ಪರಾಕ್ರಮಿ. ೧೭೮೨ ರಲ್ಲಿ ಪಟ್ಟಕ್ಕೆ ಬಂದು ೧೮೧೬ ರ ವರೆಗೆ ೩೪ ವರ್ಷ ಸಮರ್ಥ ರಾಜ್ಯಭಾರ ಮಾಡಿದನು. ಈತನ ಕಾಲ ಸಮೃದ್ಧಿ, ವೈಭವಗಳ ಕಾಲ 'ಕಾವ್ಯಗಳಲ್ಲಿ ಮಲ್ಲಸರ್ಜ ದೊರೆಯನ್ನು ಕೈಲಾಸದಿಂದ ಇಳಿದು ಬಂದ ನಂದಿಯ ಅವತಾರ ಬಸವೇಶ್ವರನೆಂದೂ, ರಾಜ ರಾಣಿಯರನ್ನು ಶಿವ ಪಾರ್ವತಿಯರೆಂದೂ, ರತಿ ಮನ್ಮಥರೆಂದೂ, ರಾಮ ಸೀತೆಯರೆಂದೂ, ೧೪ ಕರ್ಯಾತ್‌ಗಳನ್ನು ೧೪ ಲೋಕಗಳೆಂದೂ ಕಾವ್ಯಗಳಲ್ಲಿ ಬಣ್ಣಿಸಿ ಹಾಡಲಾಗಿದೆ.'[೪೬] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೪೧) ಮಲ್ಲಸರ್ಜನ ಕಾಲದ ವೈಭವವನ್ನು ಸಮಕಾಲೀನ ಕವಿ ಚೌಬಾರ ಅಡಿವೆಪ್ಪಗೌಡನು ತನ್ನ ಕವಿತೆಗಳಲ್ಲಿ ಹೀಗೆ ವರ್ಣಿಸಿದ್ದಾನೆ.

'ಚಪ್ಪನ್ನ ದೇಶಕ್ಕೆ ಒಪ್ಪುವ ಕಿತ್ತೂರೊ। ಅಪ್ಪ ಮಲಸರ್ಜಾನದೊರಿತಾನೋ

ಮುತ್ತಿನ ಪಲ್ಲಕ್ಕಿ ಸುತ್ತ। ಛತ್ತರ ಚ್ಯಾಮರ ಚೌರಿಗಳು

ಸುತ್ತಗಟ್ಟಿ ಹಿಡಿವ ಆಪ್ತಾಗಿರಿ

ಬತ್ತಿ ಮುಂಡಾಸ ಸುತ್ತುವಂಥ ಬಂಟರು ಬೇರೆ ಬೇರೆ

ಬತ್ತಲಗುದುರೆ ಹತ್ತುವಂಥ ಬಾರಿನ ಮಂದಿ ಐತ್ಯೋ ಬಹಳ...'[೪೭] (ಮಠದ ಸಿ.ವಿ, ೨೦೦೪, ಪುಟ-೮೬) ಎಂದು ಮಲ್ಲಸರ್ಜನ ವೈಭವವನ್ನು ಗುಣಗಾನ ಮಾಡುವನು.

ಟಿಪ್ಪುವಿನ ದಂಡು ಎದುರಿಸಲು ಯುದ್ಧದ ಸಿದ್ಧತೆಗಳ ಕುರಿತು ಚರ್ಚಿಸುತ್ತಿರುವ ಸಂದರ್ಭದಲ್ಲಿ ಮಲ್ಲಸರ್ಜ ದೊರೆ ಯಾವ ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ಸುಮ್ಮನಿದ್ದಾಗ ವೈರಿಪಡೆ ಕೋಟೆಯನ್ನು ಆಕ್ರಮಿಸಿಕೊಂಡು ಮಲ್ಲಸರ್ಜನನ್ನು ಸೆರೆಹಿಡಿಯುತ್ತದೆ. ಆಗ ದೊರೆಗೆ ದಿವಾನರ ಮಾತು ಕೇಳಿ ತಾನು ಮೋಸ ಹೋಗಿದುದರ ಅರಿವಾಗುತ್ತದೆ. ದಿವಾನನ ಮಾತು ಕೇಳಿ ತಾನು ತಪ್ಪು ಮಾಡಿದೆ ಎಂದು ಮಡಿವಾಳನಿಗೆ ಹೇಳುತ್ತಾನೆ. ಮಲ್ಲಸರ್ಜನನ್ನು ಶ್ರೀರಂಗಪಟ್ಟಣದಿಂದ ಕಪಾಳದುರ್ಗಕ್ಕೆ ಸ್ಥಳಾಂತರಿಸಿ ಅಲ್ಲಿ ಅನೇಕ ರೀತಿಯ ಕಷ್ಟಗಳನ್ನು ಕೊಡುವರು. ಭಾರವಾದ ನೊಗವನ್ನು ಹೊತ್ತು ಉಳುಮೆ ಮಾಡಬೇಕು.

ದಯೆ, ಕನಿಕರ, ಸಹಾನುಭೂತಿ ಯಾವುದಕ್ಕೂ ಅಲ್ಲಿ ಅವಕಾಶವಿರಲಿಲ್ಲ. ಬಿಡುಗಡೆಯ ದಾರಿ ಹುಡುಕುತ್ತಲಿದ್ದ ಮಲ್ಲಸರ್ಜ ಮಡಿವಾಳ ಒಂದು ದಿನ ಕಾವಲುಗಾರರು ಏನೋ ಹಬ್ಬದ ಆಚರಣೆಯಲ್ಲಿ ಖುಷಿಯಲ್ಲಿರುವುದನ್ನು ಗಮನಿಸುತ್ತಾರೆ. ಅವರು ಕಂಠಪೂರ್ತಿ ಕುಡಿದು ಪ್ರಜ್ಞೆಯಿಲ್ಲದೆ ಮಲಗಿರುವುದನ್ನು ನೋಡಿ ಕಬ್ಬಿಣದ ಸಲಾಕೆಯೊಳಗೆ ಕೈಹಾಕಿ ಬೀಗದ ಕೈ ತೆಗೆದುಕೊಂಡು ಅಲ್ಲಿಂದ ಪಾರಾಗುವರು.

ಮಲ್ಲಸರ್ಜ ದೊರೆಗಳು ಕಿತ್ತೂರು ಸಂಸ್ಥಾನದ ಹನ್ನೊಂದನೆಯ ದೊರೆಯಾಗಿದ್ದು 'ದೊರೆಗಳಿಗೆ ನಾಲ್ವರು ಪತ್ನಿಯರು. ಅವರಲ್ಲಿ ಮೂರನೆಯವರಾದ ನೀಲವ್ವತಾಯಿಯವರು ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರು'[೮೮] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೨೦) ಎಂದಿದೆ. ಆದರೆ ಬಸವರಾಜ ಕಟ್ಟೀಮನಿಯವರು ರುದ್ರಮ್ಮ ಮತ್ತು ಚೆನ್ನಮ್ಮರೆಂಬ ಇಬ್ಬರು ಪತ್ನಿಯರನ್ನು ಹೆಸರಿಸಿರುತ್ತಾರೆ. ಪೇಶ್ವೆ ಬಾಜೀರಾಯನು ದೊರೆಗಳನ್ನು ಮೋಸದಿಂದ ಭೇಟಿಯಾಗಲು ಕರೆಸಿಕೊಂಡು ಬಂಧಿಸುತ್ತಾನೆ. ಅಲ್ಲಿಯೇ ಅವರ ಆರೋಗ್ಯ ಹದಗೆಟ್ಟು ಮರಳಿ ಕಿತ್ತೂರಿಗೆ ಬಂದಾಗ ಹೆಚ್ಚು ದಿನ ಬದುಕುಳಿಯದೆ ಶಿವೈಕ್ಯರಾಗುತ್ತಾರೆ. ಆದರೆ ದೊರೆಯ ಪ್ರೌಢಪ್ರತಾಪ, ನಿರ್ಮಲಾಂತಃಕರಣ, ವಿದ್ವತ್ಪ್ರೇಮ, ಅಜರಾಮರವಾಗಿ ಉಳಿಯಿತು.

೬.೧.೨೯ ಭಾಸ್ಕರರಾಯ :

ಭಾಸ್ಕರರಾಯ ನರಗುಂದದ ರಾಜನಾಗಿದ್ದು ಬಾಬಾಸಾಹೇಬ ಎಂಬ ಇನ್ನೊಂದು ಹೆಸರೂ ಇತ್ತು. 'ದತ್ತಕ ನಿರಾಕರಣೆ ಹಾಗೂ ನಿರಾಯುಧ ಕಾಯ್ದೆಗಳು ಸಂಸ್ಥಾನದ ಮುಂದುವರಿಕೆಗೆ ಹಾಗೂ ಆ ಮೂಲಕ ತನ್ನ ಆತ್ಮಗೌರವಕ್ಕೆ ಕುಂದನ್ನುಂಟು ಮಾಡುತ್ತವೆ ಎಂದು ಭಾವಿಸಿ ಬ್ರಿಟಿಷ್ ವಿರುದ್ಧ ಬಂಡಾಯವೆದ್ದು ಹುತಾತ್ಮನಾದ ಭಾಸ್ಕರರಾವ್ ಉರ್ಫ್ ಬಾಬಾಸಾಹೇಬ ನರಗುಂದದ ದೊರೆ ದಾದಾಜಿರಾವ್‌ನ ಇಬ್ಬರು ಮಕ್ಕಳಲ್ಲಿ ಹಿರಿಯವನಾಗಿದ್ದ. ದಾದಾಜಿರಾವ್‌ನ ಕಿರಿಯ ಮಗ ಹರಿಹರರಾವ್ ರಾಮದುರ್ಗ ಸಂಸ್ಥಾನಕ್ಕೆ ದತ್ತು ಹೋಗಿ ರಾಮರಾವ್ ಉರ್ಫ್ ರಾವ್‌ಸಾಹೇಬ ಎಂಬ ನೂತನ ಹೆಸರಿನೊಂದಿಗೆ ಅದರ ವಾರಸುದಾರವಾಗಿದ್ದ. ೧೮೪೨ ರಲ್ಲಿ ದಾದಾಜಿರಾವ್ ಸ್ವರ್ಗಸ್ಥನಾಗುತ್ತಿದ್ದಂತೆ ಬಾಬಾಸಾಹೇಬ ಸಂಸ್ಥಾನದ ಗಾದೆಗೆ ಬಂದ. ಆಗ ಅವನು ೨೮ ವರ್ಷದ ತರುಣ, ಬುದ್ಧಿವಂತ ಹಾಗೂ ಮಹಾಧೈರ್ಯಶಾಲಿಯಾಗಿದ್ದ. ರಾಜ್ಯಭಾರ ವಹಿಸಿಕೊಂಡಂದಿನಿಂದ ಆಡಳಿತದ ವ್ಯವಸ್ಥೆಗಾರಂಭಿಸಿದ'[೮೯] (ಶಿವಾನಂದ ಗುಬ್ಬಣ್ಣವರ, ೨೦೦೯, ಪುಟ-೮೫) ಈತ ತನ್ನ ಕುಲದೇವತೆಯ ದರ್ಶನಕ್ಕೆ ಬರುವಾಗಲೆಲ್ಲ ಪಾದಚಾರಿಯಾಗಿಯೇ ಬರುತ್ತಿದ್ದ. ಪ್ರತಿದಿನವೂ ಎರಡು ಬಾರಿ ಮಧ್ಯಾಹ್ನ ಮತ್ತು ಸಾಯಂಕಾಲ ತಪ್ಪದೆ ದರ್ಶನಕ್ಕೆ ಬರುವುದು ಅವನು ಎಂದಿನಿಂದಲೂ

ಅನುಸರಿಸಿಕೊಂಡು ಬಂದ ನಿಯಮವಾಗಿತ್ತು. ನಗರದಲ್ಲಿದ್ದಾಗಲೆಲ್ಲ, ದೇವರ ದರ್ಶನ ಪಡೆಯದೆ ಆತ ಊಟವನ್ನೂ ಮಾಡುತ್ತಿರಲಿಲ್ಲ. ವೆಂಕಟೇಶ್ವರನೆಂದರೆ ದೊರೆಗೆ ಅಷ್ಟು ಭಕ್ತಿಯಿತ್ತು. ದೇವರ ದರ್ಶನಕ್ಕೆ ಬರುವಾಗ ಮಡಿಯಿಂದಿದ್ದು ಯಾವ ಶೂದ್ರರನ್ನು ಮಾತನಾಡಿಸುತ್ತಿರಲಿಲ್ಲ. ಆದರೆ ಒಂದು ದಿನ ಆ ನಿಯಮ ಮೀರಿ ರಾಜಶೇಖರನನ್ನು ಮಾತನಾಡಿಸುವನು. ಆತನನ್ನು ಅರಮನೆಗೆ ಬರಮಾಡಿಕೊಂಡು ಬಂಡಾಯದ ವಿಚಾರ ಮಾತನಾಡುವನು. ಇಲ್ಲಿ ಲೇಖಕರ ಪ್ರಗತಿಪರ ಧೋರಣೆಯನ್ನು ಕಾಣುತ್ತೇವೆ. ಜಾತಿ ತಾರತಮ್ಯತೆಯಿದ್ದ ಕಾಲದಲ್ಲಿ ರಾಜಶೇಖರನ ಪಾತ್ರದ ಮೂಲಕ ಅದನ್ನು ಸಡಿಲಿಸಿರುವರು.

ರಾಜಶೇಖರ ಜಮಖಂಡಿಯಲ್ಲಿ ನಡೆದ ಎಲ್ಲ ರಾಜಕೀಯ ವಿದ್ಯಮಾನಗಳನ್ನು ವಿವರಿಸುತ್ತ ಎಲ್ಲ ಆಪಾದನೆಗಳನ್ನು ಭೋಟುಸಿಂಗ್ ಹೊತ್ತುಕೊಂಡು ಇದರಿಂದ ಅವನಿಗಾದ ಫಾಸೀಶಿಕ್ಷೆ, ರಾಜಾಸಾಹೇಬರು ನಿರ್ದೋಷಿಯೆಂದು ಬಿಡುಗಡೆಯಾದ ವಿಚಾರ, ಎಲ್ಲ ಪ್ರಸ್ತಾಪಿಸಿ ಜಮಖಂಡಿಯಲ್ಲಿ ಆರಂಭವಾದ ಬಂಡಾಯಕ್ಕೆ ತಮ್ಮ ಸಹಾನುಭೂತಿಯೂ ಇದ್ದಿತೆಂದು ಭೋಟುಸಿಂಗ್ ತಿಳಿಸಿದ್ದನೆಂದು ಭಾಸ್ಕರರಾಯನಿಗೆ ಹೇಳುವನು. ಭಾಸ್ಕರರಾಯ ಇಂಗ್ಲೀಷರ ವಿರುದ್ಧ ಬಂಡೇಳಲು ಅವರು ದತ್ತಕ ತೆಗೆದುಕೊಳ್ಳುವುದನ್ನು ನಿರಾಕರಿಸಿದ್ದರಿಂದ. ಹೀಗಾಗಿ ತಾಯಿಯಾದ ಯಮುನಾಬಾಯಿ ಪತ್ನಿ ಸಾವಿತ್ರಿಬಾಯಿಯಾದಿಯಾಗಿ ಮಂತ್ರಿಗಳು, ಸೇನಾಪತಿಗಳು, ಇನ್ನಿತರ ಬಂಧುಗಳು, ಸ್ನೇಹಿತರಾದ ಸಂಸ್ಥಾನಿಕರು ಮತ್ತೊಂದು ಮದುವೆಯಾಗಲು ಸಲಹೆ ನೀಡಿದರೂ ಸಹ ಅದನ್ನು ನಿರಾಕರಿಸುತ್ತಾನೆ. ಪತ್ನಿ ಜೀವಿಸಿರುವಾಗ ಮತ್ತೊಂದು ಮದುವೆಯಾಗುವುದು ಮಹಾಪರಾಧವೆಂದೇ ಆತ ಭಾವಿಸಿಕೊಂಡಿರುತ್ತಾನೆ. ತಾಯಿ ಮತ್ತೊಂದು ಮದುವೆಗೆ ಒತ್ತಾಯಪಡಿಸಿ ಕೊನೆಗೆ ತಾನೇ ಸೋತು ಮುಂದಾದರೂ ಸಾವಿತ್ರಿಬಾಯಿಗೆ ಮಕ್ಕಳಾಗಬಹುದೆಂಬ ಆಶಾಭಾವನೆ ವ್ಯಕ್ತಪಡಿಸಿದರೆ ಮದುವೆಯಾಗಿ ಇಪ್ಪತ್ತು ವರ್ಷವಾದರೂ ಒಮ್ಮೆಯೂ ಗರ್ಭವತಿಯಾಗಿರದ ಅವಳು ಈಗ ಆಗಲು ಹೇಗೆ ಸಾಧ್ಯವೆಂಬ ಮಾತುಗಳನ್ನಾಡುವನು ಎಂಬ ವಿಚಾರ ನರಗುಂದ ಬಂಡಾಯ ಕಾದಂಬರಿಯಲ್ಲಿ ಪ್ರಸ್ತಾಪಿಸಲ್ಪಟ್ಟರೆ ಲಾವಣಿಗಳಲ್ಲಿ ರಾಜನಿಗೆ ಒಂದು ಗಂಡು ಮಗು ಜನಿಸಿ ಅದು ಆರು ತಿಂಗಳಿಗೆ ಮರಣವಪ್ಪುವುದು. ತದನಂತರ ಆತನಿಗೆ ಮಕ್ಕಳಾಗಲಿಲ್ಲ. ಹೀಗಾಗಿ ದತ್ತಕ ಪುತ್ರನನ್ನು ತೆಗೆದುಕೊಳ್ಳಬೇಕೆಂದು ಆಲೋಚಿಸುವನು ಎಂದಿದೆ.

'ಬಾಬಾಸಾಯ್ಬರಿಗೆ ಪುತ್ರರತ್ನವೊಂದು ಜನಿಸಿ

ಆರು ತಿಂಗಳೊಳಗ ಅದು ತೀರಿಕೊಂಡಿತು–ಅದು

ಹೇಳಲಾರದಷ್ಟವರಿಗೆ ದುಃಖವಾಯಿತು–ಮುಂದೆ

ಸಂತತಿಯೇ ಆಗಲಿಲ್ಲ ಚಿಂತಿ ಹೆಚ್ಚಿತು-।

ಪಟ್ಟದ ಬಾಧ್ಯತೆಗೆಂದು ದತ್ತಕಪುತ್ರನನ್ನು

ತೆಗೆದುಕೊಳ್ಳುವ ಆಲೋಚನಿ ನಡದಿತು-ಕಂಪನಿ

ಸರಕಾರದಪ್ಪಣೆಯನು ಕೇಳಬೇಕಾತು॥

ಸ್ವಾಭಿಮಾನಿ ಬಾಬಾಸಾಯ್ಬ್ರ ನಿರ್ವಾಹ ಇಲ್ಲದಲೆ

ದತ್ತಕಕ್ಕ ಅಪ್ಪಣೆಯ ಕೇಳಬೇಕಾತು-ಅರ್ಜಿ

ಕಳಿಸ್ಯಾರ ಬರೆದು ಎಲ್ಲಾ ಹಕ್ಕಿಕತ್ತು-ಅರ್ಜಿ

ಯೊಳಗಿಂದು ತಿಳಿಸುವೆನು ವೃತ್ತಾಂತು।'[೫೦] (ಹೂಗಾರ ಎ.ಎಸ್(ಸಂ), ೨೦೧೨, ಪುಟ-೩೨)

ಆಂಗ್ಲರ ದಂಡನ್ನು ಎದುರಿಸಲು ಸಾವಿರ ಸೈನಿಕರ ನೇತೃತ್ವದಲ್ಲಿ ಹೋದಾಗ ಮ್ಯಾನ್‌ಸನ್ ಕೇವಲ ಎಂಟತ್ತು ಜನರೊಂದಿಗೆ ಬಂದಿದ್ದ. ಇದೇ ಸರಿಯಾದ ಸಮಯವೆಂದು ಸಾಧಿಸಿ ಮ್ಯಾನ್‌ಸನ್‌ನ ಕತ್ತನ್ನು ಕತ್ತರಿಸಿವನು. ಆತನ ಸಾಮಗ್ರಿಗಳನ್ನೆಲ್ಲ ತಂದು ಶೋಧಿಸಲಾಗಿ ಕೃಷ್ಣಾಜಿಪಂತ ಮತ್ತು ಬನ್ಯಾಬಾಪು ತಮ್ಮ ವಿರುದ್ಧ ಆಂಗ್ಲರಿಗೆ ವಿಧೇಯವಾಗಿ ಪಿತೂರಿ ಮಾಡಿರುವ ವಿಷಯ ತಿಳಿಯುವುದು. ಇಲ್ಲಿ ಭಾಸ್ಕರರಾಯ ಸ್ವಜಾತಿಯವರಿಗೆ ಹೆಚ್ಚು ಮಹತ್ವಕೊಟ್ಟು ಎಲ್ಲ ಅಧಿಕಾರಿ ಸ್ಥಾನಗಳಿಗೆ ನಿಯಮಿಸಿದ್ದರೂ ಸಹ ಅವರಾರು ನಿಷ್ಠರಾಗಿರಲಿಲ್ಲ.

ಮ್ಯಾನ್‌ಸನ್ ಹತ್ಯೆಯ ವಿಷಯ ತಿಳಿದು ಇಂಗ್ಲೀಷರ ದಂಡು ಬರುವುದು. ಇಂಗ್ಲೀಷರ ದಂಡು ದೊಡ್ಡದಾಗಿರುವುದರಿಂದ ಜೊತೆಗೆ ಸಹಾಯ ಮಾಡುವ ಸಂಸ್ಥಾನಗಳು ಸರಿಯಾದ ಸಮಯಕ್ಕೆ ನರಗುಂದಕ್ಕೆ ಬಾರದಿದ್ದುದರಿಂದ ಭಾಸ್ಕರರಾಯ ತಾಯಿ ಮತ್ತು ಹೆಂಡತಿಯನ್ನು ಅಲ್ಲಿಯೇ ಬಿಟ್ಟು ಪಲಾಯನಗೈಯ್ಯುವನು. ಸೆರೆಹಿಡಿದ ಭಾಸ್ಕರರಾಯನಿಗೆ ನರಗುಂದದಲ್ಲಿ ಗಲ್ಲಿಗೇರಿಸಿದರೆ ಜನ ಗದ್ದಲ ಮಾಡಬಹುದೆಂದು ಬೆಳಗಾವಿಯಲ್ಲಿ ಗಲ್ಲಿಗೇರಿಸಲು ನಿಶ್ಚಯಿಸುವರು. ನ್ಯಾಯಾಧೀಶರು ಭಾಸ್ಕರರಾಯನಿಗೆ ನೀವು ಬಂಡೇಳಲು ಸಹಾಯ ಮಾಡಿದ ಸಂಸ್ಥಾನಗಳಾವವು ಎಂದು ಕೇಳಲಾಗಿ 'ನನ್ನ ಪ್ರಾಣ ಉಳಿಸಿಕೊಳ್ಳಲಿಕ್ಕಾಗಿ ಬೇರೆಯವರನ್ನು ಬಲಿಕೊಡುವಂಥ ನೀಚ ಮನುಷ್ಯ ನಾನಲ್ಲ. ಇಂಗ್ಲೀಷರ ವಿರುದ್ಧ ನಾನು ಬಂಡು ಹೂಡಿದ್ದು ನನ್ನ ಇಚ್ಛೆಯಿಂದಲೇ. ಯಾರ ಸಲಹೆಯನ್ನು ನಾನು ಕೇಳಲಿಲ್ಲ. ಸಹಾಯವನ್ನು ಕೋರಲಿಲ್ಲ'[೫೧] (ಬಸವರಾಜ ಕಟ್ಟೀಮನಿ, ೧೯೬೯, ನರಗುಂದ ಬಂಡಾಯ, ಪುಟ- ೨೧೫) ಎಂದು ನುಡಿಯುತ್ತಾನೆ. ದಳವಾಯಿ ರಾಜಶೇಖರನ ಕುರಿತು ಕೇಳಲಾಗಿ ಆತ ಮ್ಯಾನ್‌ಸನ್‌ನನ್ನು ಕೊಲ್ಲುವ ಸಂದರ್ಭದಲ್ಲಿ ಬೇಡವೆಂದೇ ಹೇಳಿದ. ಆದರೆ

ನಾನೇ ಸ್ವತಃ ಕೊಂದಿದ್ದೇನೆಂದು ಹೇಳುವನು. ಅವನಿಗೆ ಫಾಸಿ ಶಿಕ್ಷೆಯಾಗಿ ಕಣ್ಣುಗಳಿಗೆ ಬಟ್ಟೆ ಕಟ್ಟಿ ಕುತ್ತಿಗೆಗೆ ಫಾಸಿಯ ನೇಣು ಸಿಕ್ಕಿಸಿದರೆ ಎರಡು ಬಾರಿ ಆ ಹಗ್ಗ ಕತ್ತರಿಸಿ ಬೀಳುತ್ತದೆ. ಮೂರನೆಯ ಬಾರಿ ಕತ್ತಿಗೆ ಉರುಳು ಬಿದ್ದು ಶವ ನೇತಾಡತೊಡಗಿ ನರಗುಂದದ ದೊರೆಯ ಕಥೆ ಕೊನೆಗೊಳ್ಳುತ್ತದೆ. ದಿನಾಂಕ ೧೨ ಜೂನ್ ೧೮೫೮ ನರಗುಂದದ ಇತಿಹಾಸದಲ್ಲಿ ಒಂದು ಕರಾಳ ದಿನ. ನರಗುಂದದ ಕೇಸರಿ ಶ್ರೀಮಂತ ಭಾಸ್ಕರರಾವ್ ಬಾಬಾಸಾಹೇಬನನ್ನು ಇಂಗ್ಲೀಷರು ಗಲ್ಲಿಗೇರಿಸಿದ ದಿನವಾಗಿದೆ. ನರಗುಂದ ಸಂಸ್ಥಾನ ತನ್ನ ಇನ್ನೂರು ವರ್ಷಗಳ ಸ್ವಾತಂತ್ರ್ಯವನ್ನು ಕಳೆದುಕೊಂಡು ಇಂಗ್ಲೀಷರ ವಶವಾಗಿ ಅವರ ಚಕ್ರಾಧಿಪತ್ಯದಲ್ಲಿ ಸೇರಿಕೊಂಡಿತು. ಭಾಸ್ಕರರಾಯ ಅಷ್ಟೇನೂ ಶೂರನಾಗಿರಲಿಲ್ಲ. ಆತನ ದುಡುಕು ಸ್ವಭಾವ, ಸ್ವಜನ ಪಕ್ಷಪಾತ, ಅತಿಯಾದ ಧಾರ್ಮಿಕ ಶ್ರದ್ಧೆ ಮುಂತಾದ ಗುಣಗಳೇ ಅವನಿಗೆ ಮಾರಕವಾದವು ಎಂದು ಲೇಖಕರು ಸ್ಪಷ್ಟಪಡಿಸಿದ್ದಾರೆ.

೬.೨ ಉಪೇಕ್ಷಿತ ಪಾತ್ರಗಳು :

ಇವು ಕಾದಂಬರಿಯ ಭವ್ಯ ಕಟ್ಟಡಕ್ಕೆ ಭದ್ರವಾದ ಆಧಾರ ಸ್ತಂಭಗಳಿದ್ದಂತೆ. ಈ ಪಾತ್ರಗಳು ಯಾವುದೇ ಕಾರ್ಯದಲ್ಲಿ ತೊಡಗಿರಲಿ ಇಡಿಯಾದ ಕಾದಂಬರಿ ಕಟ್ಟಡಕ್ಕೆ ನೇರವಾಗಿ ಸಂಬಂಧಿಸಿದ ಕ್ರಿಯೆಯಾಗುತ್ತದೆ. ಈ ಉಪೇಕ್ಷಿತ ಪಾತ್ರಗಳನ್ನು ನದಿಗಳಿಗೆ ಹೋಲಿಸಬಹುದು. ಇವು ಪ್ರಧಾನ ಪಾತ್ರಗಳೆಂಬ ದೊಡ್ಡ ನದಿಗಳಿಗೆ ಸೇರಿಕೊಂಡು, ಅವು ತುಂಬಿ ಹರಿಯುವಲ್ಲಿ ಸಹಾಯಕವಾಗುತ್ತವೆ.

ಕಾದಂಬರಿಕಾರರಾದ ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರು ತಮ್ಮ ಐತಿಹಾಸಿಕ ಕಾದಂಬರಿಗಳಲ್ಲಿ ನಾಯಕ ಪ್ರಧಾನವಾದ ರಾಜರ ಚಿತ್ರಣವನ್ನು ಕೊಡುವುದರ ಜೊತೆಗೆ ಪುನರ್‌ಲೇಖದ ಸ್ವರೂಪದಲ್ಲಿ ರಾಜನಿಗೆ ಸಹಾಯಕವಾದ ಹಲವಾರು ಸ್ತ್ರೀಯರ ಹಾಗೂ ಪುರುಷರ ಪಾತ್ರಗಳನ್ನು ವಿವರಿಸಿರುವರು. ಇವರಲ್ಲಿ ಕೆಲವು ಸ್ತ್ರೀಯರು ದೊರೆಗೆ ತಾಯಾಗಿ, ಹೆಂಡತಿಯಾಗಿ, ಮಗಳಾಗಿ, ಸೊಸೆಯಾಗಿ ಒಟ್ಟಾರೆಯಾಗಿ ರಾಜ್ಯದ ಏಳ್ಗೆಗಾಗಿ ಶ್ರಮಿಸಿರುವಂತವರಾಗಿರುವರು. ಏಚಲೆ ಪತಿಯಾದ ಎರೆಯಂಗದೇವನಿಗೆ ಸಹಾಯಕವಾಗಿ ಮಗನಾದ ವಿಷ್ಣುವರ್ಧನನ ಅಭ್ಯುದಯಕ್ಕಾಗಿ ತನ್ನ ಬದುಕನ್ನೇ ಮೀಸಲಾಗಿಟ್ಟವಳು. ಶಾಂತಲೆ ವಿಷ್ಣುವರ್ಧನನ ಪತ್ನಿಯಾಗಿದ್ದು ಅವನ ಕೀರ್ತಿ ಹಾಗೂ ಜೈನ ಧರ್ಮದ ಪ್ರಸಾರ ಎಲ್ಲ ದಿಕ್ಕುಗಳಲ್ಲೂ ಪಸರಿಸುವಂತೆ ಮಾಡುವಳು. ಶಕವರ್ಷ ೧೦೩೮ ದುರ್ಮುಖಿನಾಮ ಸಂವತ್ಸರದ ಅಶ್ವಯುಜ ಶುದ್ಧ ವಿಜಯದಶಮಿಯ ಶುಭದಿನದಂದು ಹೊಯ್ಸಳ ಸೇನೆ, ತನ್ನ ವಿಜಯ ಯಾತ್ರೆಯನ್ನು ಆರಂಭಿಸುವುದೆಂದು ದಿನ ನಿಶ್ಚಯಿಸಿದಾಗ ಶಾಂತಲಾದೇವಿಯು ತಾನು ಗರ್ಭವತಿಯಾಗಿರುವ ವಿಷಯ ತಿಳಿಸಿ, ಯುದ್ಧ ಶಿಬಿರದಲ್ಲಿ ನನ್ನ ಚಿಂತೆ ಮಾಡಬೇಡಿ. ತಲಕಾಡಿನ ಯುದ್ಧದಲ್ಲಿ ನೀವು ಗೆದ್ದಾಗ, ಅಲ್ಲಿಯಾಗಲಿ, ದಾರಿಯಲ್ಲಿ ಹಿಡಿಯುವ

ಊರುಗಳಲ್ಲಾಗಲಿ, ಎಲ್ಲೂ ಯಾವ ಹೆಂಗಸು, ಮಕ್ಕಳಿಗೆ ನಮ್ಮ ಸೇನೆ ಹಿಂಸೆ ಮಾಡದಂತೆ ನೋಡಿಕೊಳ್ಳಿ ಎಂದು ಹೇಳುವಳು. ಗೆಲುವಿನ ಪತಾಕೆಯೊಂದಿಗೆ ಬರುವ ತನ್ನ ಪತಿಯ ದಾರಿಯನ್ನು ಕಾಯುತ್ತ ಕುಳಿತುಕೊಳ್ಳುವ ಈಕೆಯ ಪಾತ್ರವನ್ನು ರಸವತ್ತಾಗಿ ಚಿತ್ರಿಸಿದ್ದಾರೆ.

ಹರಿಹರರಾಯನನ್ನು ವಿವಾಹವಾದ ಪದ್ಮಾವತಿ ಆನೆಗೊಂದಿಯ ಜಂಬುಕೇಶ್ವರನ ಮಗಳಾಗಿದ್ದು ವಿಜಯನಗರ ಸಾಮ್ರಾಜ್ಯ ಕಟ್ಟುವಲ್ಲಿ ಪ್ರೇರಕ ಶಕ್ತಿಯಾಗಿರುವಳು. ಹಾಗೆಯೇ ಬುಕ್ಕರಾಯನನ್ನು ಮದುವೆಯಾದ ಗೌರಾಂಬಿಕಾದೇವಿಯು ಸಹ ಬುಕ್ಕರಾಯರು ನಿಧನರಾದ ನಂತರ ರಾಜಮಾತೆಯಾಗಿ ವಿಜಯನಗರ ಸಾಮ್ರಾಜ್ಯ ಬೆಳೆಸುವಲ್ಲಿ ಸಹಾಯಕವಾಗಿದ್ದಾಳೆ.

ಹಾಗೆಯೇ ಚಿತ್ರದುರ್ಗ ಸಂಸ್ಥಾನದ ಕುರಿತು ನೋಡಲಾಗಿ ಹಲವಾರು ಸ್ತ್ರೀಯರು ರಾಜರ ಆಡಳಿತದಲ್ಲಿ ಸಹಾಯಕವಾಗಿ ನಿಂತು ರಾಜ್ಯದ ಶ್ರೇಯೋಭಿವೃದ್ಧಿಗೆ ಶ್ರಮಿಸಿರುವುದನ್ನು ಕಾಣುತ್ತೇವೆ. ಇಮ್ಮಡಿ ಮದಕರಿನಾಯಕರ ಪಟ್ಟದ ರಾಣಿ ಬಾಣದಮನೆ ಓಬವ್ವನಾಗತಿ ಕಿರಿಯ ಹೆಂಡತಿ ಗೌರವ್ವನಾಗತಿಯರು ರಾಜ್ಯದ ಉಳಿವಿಗಾಗಿ ಹೋರಾಡುವುದನ್ನು ಕಾಣುತ್ತೇವೆ. ಪುತ್ರಸಂತಾನವಿಲ್ಲದೆ ನಾಯಕರು ತೀರಿ ಹೋದಾಗ ಉತ್ತರಾಧಿಕಾರಿಯ ಪ್ರಶ್ನೆ ಎದುರಾಗಿ ಗೌರವ್ವನಾಗತಿಯು ದುಃಖದ ಕಡಲಿನ ಮಧ್ಯದಲ್ಲಿಯೂ ನಾಯಕರ ಮನದಾಸೆಯಂತೆ ನಡೆಯುವುದಾಗಿ ಹೇಳಿ ಸಹಗಮನ ಹೋಗುತ್ತಿದ್ದ ಓಬವ್ವನಾಗತಿಯನ್ನು ಭುವನಪ್ಪನವರಿಂದ ಓಬಣ್ಣನಾಯಕನನ್ನು ದತ್ತು ತೆಗೆದುಕೊಳ್ಳುವಂತೆ ಹೇಳಿಸಿ ಕೆಲಸ ಸಾಧಿಸುವಳು. 'ಉಳಿವಿಗಾಗಿ ಹೋರಾಡುವುದು ಮನುಷ್ಯ ಸಹಜ ಗುಣ. ಇಲ್ಲಿ ಉಳಿವು ಬರೀ 'ಇರುವಿಕೆ'ಯಲ್ಲ. ಅದು ಆಕೆಯ ಮಾನಸಿಕ ಅಸ್ತಿತ್ವದ, ಸ್ವಾಭಿಮಾನದ, ಕರ್ತವ್ಯ ಶಕ್ತಿಯ ಉಳಿವೂ ಆಗಿರಬಹುದು. ಪ್ರತಿಕೂಲ ಪರಿಸ್ಥಿತಿಯಲ್ಲಿ ಇಂಥ ಉಳಿವಿಗೆ ಧಕ್ಕೆಯಾದಾಗ ಆ ಪರಿಸ್ಥಿತಿಗೆ ಕಾರಣವಾದ ವ್ಯಕ್ತಿ, ಮೌಲ್ಯ, ವ್ಯವಸ್ಥೆಗಳನ್ನು ಪ್ರತಿಭಟಿಸುವುದು ಸಹಜ ಹಾಗೂ ಅನಿವಾರ್ಯ.'[೫೨] (ಗೀತಾ ವಸಂತ, ೨೦೧೦, ಪುಟ-೬೦) ತದನಂತರ ಓಬವ್ವನಾಗತಿ ಓಬಣ್ಣನಾಯಕನನ್ನು ದತ್ತು ತೆಗೆದುಕೊಂಡು ಪಟ್ಟಾಭಿಷೇಕದ ಕಾರ್ಯವನ್ನೇನೋ ಮಾಡುತ್ತಾಳೆ. ಆದರೆ ದಳವಾಯಿ ಮುದ್ದಣ್ಣ ಕುತಂತ್ರದಿಂದ ಓಲಗಕ್ಕೆ ಬಂದು ಓಬಣ್ಣನಾಯಕರ ಕೊಲೆಗೈದಾಗ ಅದನ್ನು ಸಹಿಸದಾಗದೇ ಹೊಂಡದಲ್ಲಿ ಬಿದ್ದು ಸಾವನ್ನಪ್ಪುತ್ತಾಳೆ.

ಮಲ್ಲವ್ವನಾಗತಿ ಹಟ್ಟಿ ಪಾಳೆಯಗಾರರ ಮಗಳು. ಈಕೆ ವೀರಶೈವ ದೀಕ್ಷೆಯನ್ನು ಪಡೆದಾಕೆ. ದಿಟ್ಟ ಮನಸ್ಸಿನಾಕೆ. ಪತಿ ಚಿಕ್ಕಣ್ಣನಾಯಕ ಮತ್ತು ದುರ್ಗದ ಬಂಧು ಬಳಗವೂ ವೀರಶೈವ ಮತವನ್ನು ತ್ಯಜಿಸಿ ತಮ್ಮ ಮೂಲ ಮತಕ್ಕೆ ನಡೆದರೂ, ಈಕೆ ಮಾತ್ರ ವೀರಶೈವಳಾಗಿಯೇ ಉಳಿಯುತ್ತಾಳೆ ಮತ್ತು ಒಂಟಿಯಾಗಿ ಬದುಕುತ್ತಾಳೆ. ಚಿಕ್ಕಣ್ಣನಾಯಕ ಸತ್ತಾಗ ಉಳಿದ ನಾಗತಿಯರು ಸಹಗಮನ

ಮಾಡಿದರೂ ಸಹ ಮಲ್ಲವ್ವನಾಗತಿ ಮಾತ್ರ ಸಹಗಮನ ಮಾಡದೆ ಇರುತ್ತಾಳೆ. ಏಕೆಂದರೆ ಈಕೆ ವೀರಶೈವ ಮತವನ್ನು ಸ್ವೀಕರಿಸಿದ್ದರಿಂದ ಆ ಧರ್ಮದಲ್ಲಿ ಸಹಗಮನ ಪದ್ಧತಿ ಸಲ್ಲದು.

ಸಿದ್ಧವ್ವನಾಗತಿ ಭರಮಣ್ಣನಾಯಕನ ಹಿರಿಯ ಪಟ್ಟದರಾಣಿ. ಸೀರ್ಯದ ಫೌಜುದಾರನ ವಕೀಲ ತಂದ ಪತ್ರದ ವಿಷಯ ಹೇಳಿದಾಗ ಆಕ್ರೋಶಗೊಂಡ ನಾಗತಿ ಯುದ್ಧವನ್ನು ಸಾರಿ ಬಿಡುವಂತೆ ಹೇಳಿ 'ದುರ್ಗದ ಗೌರವಕ್ಕಿಂತ ನಮ್ಮೂರ ಪ್ರಾಣಗಳೂ ಹಿರಿದಲ್ಲ. ಯಾರ ಜೀವ ತಾನೇ ಶಾಶ್ವತ. ಎಂದಿದ್ದರೂ ಅಳಿಯುವ ಕಾಯ. ಹೀಗೆ ಅಳಿದರೆ, ನಮ್ಮ ಕೀರ್ತಿ, ದುರ್ಗದ ಗೌರವವಾದರೂ ಉಳಿಯುತ್ತದೆ'[೫೩] (ಸುಬ್ಬರಾಯರು ತ.ರಾ, ೨೦೧೪, ವಿಜಯೋತ್ಸವ, ಪುಟ-೨೧) ಎಂದು ಗಂಡನನ್ನು ಹುರಿದುಂಬಿಸುವಳು. ಮೆಹರ್‌ಬಾನುವಿನ ಸಂಗೀತದ ಕಾರ್ಯಕ್ರಮವನ್ನು ಏರ್ಪಡಿಸಿ ಆಕೆಯನ್ನು ಪರಿಚಯಿಸಿದಾಗ ಅದನ್ನು ಮೆಚ್ಚಿಕೊಂಡ ಈಕೆ ತನ್ನನ್ನು ತಾನು ದಾಸಿ, ಬಾಂದಿ ಎಂದೆಲ್ಲ ಕರೆದುಕೊಳ್ಳುವುದು ತಪ್ಪೆಂದು ಹೇಳಿ ಅದನ್ನು ಸಹಿಸದಾಗುತ್ತಾಳೆ. ಈಕೆಗೆ ಕಲಾವಿದರ ಮೇಲಿನ ಗೌರವಭಾವನೆ ಎಂತಹುದೆಂದು ತಿಳಿಯುವುದು. ಗಂಡೋಬಳವ್ವನಾಗತಿ ಹಿರೇಮದಕರಿನಾಯಕನನ್ನು ಕೈಹಿಡಿದಾಕೆ. ಚಿತ್ರದುರ್ಗದ ಇತಿಹಾಸದಲ್ಲೇ ವೀರಳೂ ಹಾಗೂ ವಿಶಿಷ್ಟಳೆನಿಸಿದ ಪಟ್ಟದ ರಾಣಿ. ರಾಜಮಾತೆ ಹಾಗೂ ರಾಜಕೀಯದಲ್ಲಿ ಅತ್ಯಂತ ಮುತ್ಸದ್ಧಿ ವೀರರಾಣಿ ಕಿತ್ತೂರು ಚೆನ್ನಮ್ಮಳಂತೆ ತನ್ನ ವೃದ್ಧಾಪ್ಯದಲ್ಲೂ, ಕತ್ತಿ ಹಿಡಿದು ಹೋರಾಡಿದ ಛಲದಂಕೆ. ಈಕೆಯು ಪುತ್ರಸಂತಾನವಿಲ್ಲದೇ ಇಮ್ಮಡಿ ಕಸ್ತೂರಿರಂಗಪ್ಪನಾಯಕ ಸತ್ತಾಗ, ಹಿರೇಮದಕರಿನಾಯಕನ ಸೋದರ ಜಾನಕಲ್ಲಿನ ತೊದಲು ಭರಮಪ್ಪನಾಯಕನ ಮಗ ೧೨ ವರ್ಷದ ಮದಕರಿಯನ್ನು ಪಟ್ಟಕ್ಕೆ ಕೂರಿಸಿ, ರಾಜ್ಯವಾಳುತ್ತಾಳೆ. ಈ ಸಮಯದಲ್ಲಿ ರಾಯದುರ್ಗದ ಕೋಟೆಯನ್ನು ಹಿಡಿದು ಶತ್ರುಗಳನ್ನು ಸದೆಬಡಿಯುತ್ತಾಳೆ. ಗಂಡಿಲ ಓಬವ್ವನಾಗತಿ ತನ್ನ ಹೆಸರನ್ನು ಸಾರ್ಥಕಮಾಡಿಕೊಳ್ಳುತ್ತಾಳೆ. ಈಕೆ ಎಷ್ಟೊಂದು ಹಠದ ಸ್ವಭಾವದ ಹೆಣ್ಣೆಂದರೆ ಸಾಯುವ ಸ್ಥಿತಿಯಲ್ಲಿದ್ದರೂ ತನ್ನ ಮಗಳಾದ ಮಲ್ಲವ್ವನಾಗತಿಯನ್ನು ಮಾತ್ರ ನೆನಪಿಸಿಕೊಳ್ಳುವುದಿಲ್ಲ.

ಆಕೆ ಪ್ರಾಯದಲ್ಲಿ ಮನಸ್ಸು ಜಾರಿ, ಆಗದವರಿಗೆ ಮನಸ್ಸು ಕೊಟ್ಟು, ಬೇಡ ಎಂದವರನ್ನು ಮದುವೆಯಾಗಿದ್ದರಿಂದ ಮಗಳು ತನ್ನ ಪಾಲಿಗೆ ಸತ್ತಳೆಂದೇ ಹೇಳುತ್ತಾಳೆ. ಗಂಡ ಹಿರೇಮದಕರಿನಾಯಕ ಸತ್ತಾಗವಾಗಲಿ, ಮಗ ಕಸ್ತೂರಿರಂಗಪ್ಪನಾಯಕ ಸತ್ತಾಗವಾಗಲಿ ಆಕೆಯನ್ನು ಮಾತ್ರ ಕರೆಸುವುದಿಲ್ಲ. ಎಲ್ಲರೂ ಎಂತಹ ತಾಯಿ ಎಂತಹ ಮಗಳು ಜಗದಲ್ಲಿ ಇಂತವರು ಇರುವರೇ? ಎಂದು ಹೇಳಿಕೊಳ್ಳುವರು. ಹೀಗೆ ಅನೇಕ ಜನ ನಾಗತಿಯರು ದುರ್ಗದ ಇತಿಹಾಸದಲ್ಲಿ

ಚಿರಸ್ಥಾಯಿಯಾಗಿದ್ದಾರೆ. ಆದರೆ ದುರ್ಗ ಎಂದಾಕ್ಷಣ ಎಲ್ಲರ ನೆನಪಿಗೆ ಬರುವ ಒಬ್ಬ ಮಹಿಳೆಯೆಂದರೆ ವೀರವನಿತೆ ಒನಕೆ ಓಬವ್ವ

ಹೈದರಾಲಿಖಾನನು ದುರ್ಗಕ್ಕೆ ಮುತ್ತಿಗೆ ಹಾಕಿದಾಗ ಶತ್ರುಗಳು ಕಳ್ಳಗಿಂಡಿಯಲ್ಲಿ ನುಸುಳುತ್ತಿದ್ದಾಗ ನೀರಿಗೆಂದು ಬಂದಿದ್ದ ಕಹಳೆ ಮುದ್ದಹನುಮಪ್ಪನ ಹೆಂಡತಿ ಈ ಓಬವ್ವೆ, ತನ್ನ ಮನೆಯಿಂದ ಒನಕೆ ತಂದು ಕಳ್ಳಗಿಂಡಿಯಲ್ಲಿ ನಿಂತು, ಹೈದರನ ಸೈನಿಕರ ತಲೆಗಳನ್ನು ಸದೆಬಡಿದು, ಚಿತ್ರದುರ್ಗದ ಇತಿಹಾಸದಲ್ಲಿ ವೀರವನಿತೆ ಒನಕೆ ಓಬವ್ವೆ ಎಂದು ಪ್ರಖ್ಯಾತಳಾದವಳು. ದುರ್ಗದ ಓಬವ್ವನ ಕಥೆ ನಮಗೆಲ್ಲ ಇಂದಿಗೂ ಸ್ಫೂರ್ತಿದಾಯಕವಾಗಿದ್ದು ಅವಳನ್ನು ವೆಂಕಟರಾಯರು ಬಣ್ಣಿಸಿದ್ದು ಹೀಗೆ: 'ದುರ್ಗದ ಸಾಮಾನ್ಯ ನಿವಾಸಿ ಆಗಿದ್ದರೂ ಪ್ರಸಂಗ ಒದಗಿದಾಗ ಧೈರ್ಯದಿಂದ ಕಾರ್ಯ ಸಾಧಿಸಿದ ಹೆಣ್ಣುಗಲಿ ಈಕೆ. ಸಿಂಹವು ಹೆಣ್ಣಾದರೇನು, ಗಂಡಾದರೇನು ಅದರ ವಿಕ್ರಾಂತ ಯಾವಾಗಲೂ ಜಾಜ್ವಲ್ಯಮಾನವಾಗಿ ಇರುವುದು. ಶ್ರೀನಿವಾಸ ರಿತ್ತಿಯವರು ಬರೆದಂತೆ ಆಲೂರ ವೆಂಕಟರಾಯರು ಇತಿಹಾಸ ಬರೆಯ ಹೊರಟಿರುವವರಲ್ಲ ಅವರ ಮುಖ್ಯ ಉದ್ದೇಶ ನಮ್ಮ ಇತಿಹಾಸದಿಂದ ಸ್ಫೂರ್ತಿದಾಯಕವಾದ ವ್ಯಕ್ತಿ, ಘಟನೆಗಳನ್ನು ಎತ್ತಿಕೊಂಡು ಕೆಚ್ಚಿನ ಭಾಷೆಯಲ್ಲಿ ಚಿತ್ರಿಸಿ ನಮ್ಮ ಪರಂಪರೆಯ ಬಗ್ಗೆ ನಮ್ಮ ಚರಿತ್ರೆಯ ಬಗ್ಗೆ ಸಂಸ್ಕೃತಿಯ ಬಗ್ಗೆ ಜನರಲ್ಲಿ ಅಭಿಮಾನವನ್ನು ಜಾಗೃತಗೊಳಿಸುವುದು'[೫೪] (ಭಟ್ಟ ಜಿ.ಎಸ್, ೨೦೧೨, ಪುಟ-೫೦) ಎಂದು ಬಣ್ಣಿಸಿದ್ದಾರೆ.

ರಣವಿಕ್ರಮ ಕಾದಂಬರಿಯಲ್ಲಿ ಬರುವ ಯೋಷಿದೇವಿ ಒಬ್ಬ ಸಾಮಾನ್ಯ ಹೆಣ್ಣಾಗಿದ್ದರೂ ರಜಪೂತ ವಂಶದಲ್ಲಿರುವವರೆಲ್ಲರೂ ವೀರರೆಂದೇ ಹೇಳಿ ಮಹಾರಾಣಾ ಪ್ರತಾಪಸಿಂಹ ಚಿತ್ತೂರನ್ನು ಸ್ವತಂತ್ರಗೊಳಿಸಲು ನಡೆಸಿದ ಹೋರಾಟದಲ್ಲಿ ಈಕೆಯೂ ಸಹ ಸಹಾಯಕವಾಗಿ ನಿಂತು ಭಿಲ್ಲರ ರಾಣಿಯಾಗಿ "ಭವಾನಿ" ಎಂಬ ಹೆಸರಿನಲ್ಲಿ ಮೊಘಲ್ ಸೈನಿಕರು ಸಿಕ್ಕಿದೆಡೆಯಲ್ಲಿ ಅವರನ್ನು ತುಂಡರಿಸಿ ಬಿಡುತ್ತಿರುತ್ತಾಳೆ. ಯುದ್ಧ ಘೋಷಣೆಯಾಗಿ ಮೊಘಲರೂ, ರಜಪೂತರೂ ಕಾದುತ್ತಿರುವ ಸಂದರ್ಭದಲ್ಲಿ ಭಿಲ್ಲರ ರಾಣಿಯಾದ ಯೋಷಿದೇವಿ ಗುಡ್ಡಗಳ ಮೇಲೆ ನಿಂತು ಬಂಡೆಗಳನ್ನುರುಳಿಸುತ್ತಿದ್ದವರನ್ನು ಪ್ರೋತ್ಸಾಹಿಸುತ್ತ, ಕಣಿವೆಗಳಲ್ಲಿ ನಿಂತು ಕಾದುತ್ತಿದ್ದ ಸೈನಿಕರನ್ನು ಹುರಿದುಂಬಿಸುತ್ತ, ಸಮರಾಂಗಣದಲ್ಲಿ ಸಿಕ್ಕುತ್ತಿದ್ದ ಮೊಘಲ್ ಸಿಪಾಯಿಗಳನ್ನು ತುಂಡರಿಸುತ್ತ ಜಗನ್ಮಾತೆಯೇ ಸ್ತ್ರೀ ರೂಪ ತಳೆದುಬಂದಂತೆ ಕಾಣುತ್ತಾಳೆ. ಇಲ್ಲಿ ರಜಪೂತ ಸ್ತ್ರೀಯರು ಎಂತಹ ಪೌರುಷವಂತರು ಎಂಬುದನ್ನು ಕಾಣುತ್ತೇವೆ.

೬.೨.೧ ಚೆನ್ನಮ್ಮ :

ಚೆನ್ನಮ್ಮ ಕಾಕತಿ ದೇಸಾಯಿ ಧೂಳಪ್ಪಗೌಡ ಮತ್ತು ಪದ್ಮಾವತಿಯರ ಒಬ್ಬಳೇ ಮಗಳು. ದೇಸಾಯಿ ಆಕೆಗೆ ಬಾಲ್ಯದಿಂದಲೇ ಒಳ್ಳೆಯ ಶಿಕ್ಷಣ ಕೊಡಿಸಿದ್ದ. "ವೀರರಾಣಿ ಕಿತ್ತೂರು ಚೆನ್ನಮ್ಮ" ಕನ್ನಡ ನಾಡಿನ ವೀರ ಮಹಿಳೆ. ಸ್ವಾತಂತ್ರ್ಯ, ಸ್ವಾಭಿಮಾನಗಳ ಸಾಕಾರ ಮೂರ್ತಿಯಾಗಿದ್ದಳು. ಕಿತ್ತೂರಿಗೆ ಬಂದು ಮನೆ ತುಂಬಿದ ಕೂಡಲೇ ಚೆನ್ನಮ್ಮ ಅಕ್ಕ ರುದ್ರಮ್ಮನನ್ನು ತವರಿನಿಂದ ಕರೆಸಿಕೊಂಡು ಪ್ರೀತಿ ಗೌರವಗಳಿಂದ ಆಕೆಯ ಮನಗೆದ್ದಳು. ಅವರಿಬ್ಬರಲ್ಲಿ ಬಹಳ ಅನ್ಯೋನ್ಯತೆ ಬೆಳೆಯಿತು. ಮಲ್ಲಸರ್ಜನಿಗೂ ಇದರಿಂದ ನೆಮ್ಮದಿ ದೊರೆಯಿತು. ಇಬ್ಬರೂ ಆತನ ಕಣ್ಣುಗಳಂತೆ ಬಾಳಿದರು. ಹಾಲು ಜೇನು ಸಕ್ಕರೆ ಬೆರೆತಂತಿದ್ದ ಅವರ ದಾಂಪತ್ಯ ಮಾದರಿಯಾಗಿತ್ತು. ಆ ಸುಖ ದಾಂಪತ್ಯದ ಫಲವಾಗಿ ಮೊದಲು ಚೆನ್ನಮ್ಮನಿಗೆ ಒಂದು ಗಂಡುಮಗುವಾಯಿತು. ಆಮೇಲೆ ಅಕ್ಕ ರುದ್ರಮ್ಮನಿಗೂ ಎರಡು ಗಂಡು ಮಕ್ಕಳಾದರು. ಚೆನ್ನಮ್ಮನ ಮಗನ ಹೆಸರು ಶಿವಬಸವರಾಜ, ರುದ್ರಮ್ಮನ ಹಿರಿಯ ಮಗ ಶಿವಲಿಂಗರುದ್ರ, ಎರಡನೆಯ ಮಗ ವೀರಭದ್ರ. ಎಲ್ಲರೂ ಪ್ರೀತಿಯಿಂದ ಅವರನ್ನು ಕ್ರಮವಾಗಿ ಬಾಬಾಸಾಹೇಬ, ಬಾಪೂಸಾಹೇಬ ಮತ್ತು ಬಾಳಾಸಾಹೇಬ ಎಂದು ಕರೆಯುತ್ತಿದ್ದರು.

ಕಿತ್ತೂರಿನಲ್ಲಿ ಅಮಟೂರಿನ ಸೈದನ್ ಸಾಹೇಬ ಮಸೀದಿಯ ಜೀರ್ಣೋದ್ಧಾರಕ್ಕೆ ಪ್ರಯತ್ನಿಸುತ್ತಿರುವಾಗ ತಮ್ಮ ಖಾಸಾ ಬೊಕ್ಕಸದಿಂದ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಾಳೆ. ರಾಣಿಯವರ ಈ ಉದಾರ ದೃಷ್ಟಿ ಮುಸ್ಲಿಂ ಜನಾಂಗದವರಿಗೆ ಸಂತೋಷವನ್ನುಂಟು ಮಾಡುತ್ತದೆ. ಮಲ್ಲಸರ್ಜ ದೊರೆಗಳು ಶಿವೈಕ್ಯರಾಗಿ ಶಿವಲಿಂಗರುದ್ರಸರ್ಜ ಉತ್ತರಾಧಿಕಾರಿಯಾಗುವನು. ಆತನು ಅಪುತ್ರಕನಾಗಿ ಶಿವನ ಪಾದ ಸೇರುತ್ತಾನೆ. ಆಗ ಮಾಸ್ತ ಮರಡಿಯ ಗೌಡರ ಮಗನನ್ನು ದತ್ತಕ ತೆಗೆದುಕೊಳ್ಳುವಳು. ಮಲ್ಲಪ್ಪಶೆಟ್ಟರು ಅದನ್ನು ಥ್ಯಾಕರೆಗೆ ತಿಳಿಸುವರು. ಅದನ್ನು ತಮ್ಮ ಕಂಪನಿ ಸರ್ಕಾರ್ ಒಪ್ಪುವುದಿಲ್ಲವೆಂದು ಪತ್ರ ಬಂದಾಗ ಚೆನ್ನಮ್ಮ ಕನಲಿ ಕೆಂಡವಾಗುತ್ತಾಳೆ. ಚೆನ್ನಮ್ಮನ ದೇಹದಲ್ಲಿ ಒಂದೇ ಹನಿ ರಕ್ತವಿರುವವರೆಗೂ ಕಿತ್ತೂರು ಯಾರಿಗೂ ತಲೆ ಬಾಗಿಸುವುದಿಲ್ಲವೆನ್ನುತ್ತಾಳೆ.

ಮಲ್ಲಪ್ಪಶೆಟ್ಟರು ಮಹಾಂತವ್ವಳ ಕೈಯಿಂದ ಅಡಿಗೆಯಲ್ಲಿ ವಿಷಪ್ರಾಶನ ಮಾಡಿಸಿ ಕೊಲ್ಲಬೇಕೆಂದು ಹೊಂಚು ಹಾಕಿದ ವಿಷಯ ತಿಳಿದ ಚೆನ್ನಮ್ಮ ನಮ್ಮವರೇ ನಮಗೆ ದ್ರೋಹಿಗಳೇ ಎಂದು ವ್ಯಥೆ ಪಡುತ್ತಾಳೆ. ಬ್ರಿಟೀಷರು ದಾಳಿ ಮಾಡಿದಾಗ ಕಿತ್ತೂರಿನ ದ್ರೋಹಿಗಳೇ ಮದ್ದಿನಲ್ಲಿ ಸಗಣಿ ಬೆರೆಸಿ ಮೋಸ ಮಾಡುವರು. ಬಂಧಿತಳಾದ ಚೆನ್ನಮ್ಮಳನ್ನು ಬೈಲಹೊಂಗಲ ಕೋಟೆಯಲ್ಲಿ ಬಲವಾದ ಕಾವಲಿನಲ್ಲಿಡುವರು. ಚೆನ್ನಮ್ಮಳು ಕಾರಾಗೃಹದ ಕಿಂಡಿಯಿಂದ 'ಕಿತ್ತೂರೇ– ನನ್ನ ತಾಯ್ನಾಡು

ಕಿತ್ತೂರೇ- ನಿರ್ಭಾಗ್ಯ ಕಿತ್ತೂರೇ! ಕೊನೆಗೂ ದಾಸ್ಯವನ್ನು ಪರಿಗ್ರಹಿಸುವಂತಾಯಿತೇ? ನಿನ್ನ ಪಾಡು. ನಿನ್ನ ವೀರ ಪುತ್ರ ಪುತ್ರಿಯರ ರಕ್ತತರ್ಪಣ ನಿಷ್ಪ್ರಯೋಜಕವಾಯಿತೇ? ನನ್ನನ್ನೇಕಿಂತು ದೀನಳಾಗಿ ನೋಡುತ್ತಿರುವೆ. ನಿನ್ನ ರಾಣಿ ಇಂದು ಬಂಧಿತಳಾಗಿದ್ದಾಳೆ. ಸೆರೆಮನೆಯ ಕಬ್ಬಿಣದ ಪಂಜರವನ್ನು ಭೇದಿಸಲರಿಯದೆ ರೋಷ ಕಷಾಯಿತಳಾಗಿದ್ದಾಳೆ. ಒಮ್ಮೆ ನಾನು ಇಲ್ಲಿಂದ ಪಾರಾಗಬಲ್ಲೆನಾದರೆ ಕಿತ್ತೂರನ್ನು ಬಂಧ ವಿಮುಕ್ತಗೊಳಿಸಬಲ್ಲೆನೆಂಬ ಧೈರ್ಯವಿದೆ. ಆದರೆ ಪಾರಾಗುವ ಬಗೆಯೆಂತು'[೫೫] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೮೬) ಎಂದು ಸಂಕಟಪಡುತ್ತಾಳೆ.

ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ರಾಯಣ್ಣನನ್ನು ಗಲ್ಲಿಗೇರಿಸಿದ ವಿಷಯ ತಿಳಿದ ಚೆನ್ನಮ್ಮ 'ಒಬ್ಬ ರಾಯಣ್ಣನ ಸ್ಥಾನದಲ್ಲಿ ನೂರಾರು ರಾಯಣ್ಣಗಳು ಹುಟ್ಟುವರು. ಒಬ್ಬ ಚೆನ್ನಮ್ಮನ ಬದಲು ಸಾವಿರಾರು ಚೆನ್ನಮ್ಮಗಳು ಹುಟ್ಟುವರು. ಕಿತ್ತೂರು ಬಹುಕಾಲ ಬಂಧನದಲ್ಲಿರಲು ಶಕ್ಯವಿಲ್ಲ. ಈ ಹೋರಾಟ ಸತತವಾಗಿ, ಅವಿಶ್ರಾಂತವಾಗಿ ಸಾಗುವುದು. ಭಾರತ ಸ್ವತಂತ್ರವಾಗುವವರೆಗೆ ಜಗತ್ತಿಗೆ ಶಾಂತಿಯಿಲ್ಲ, ಮುಕ್ತಿಯಿಲ್ಲ. ಕಿತ್ತೂರನ್ನು ಭಾರತವನ್ನು ಬಂಧವಿಮುಕ್ತ ಮಾಡಲು ಚೆನ್ನಮ್ಮ ಇಂದು ಈ ಜೀರ್ಣಕಾಯ ತೊರೆದು ಮತ್ತೆ ಮತ್ತೆ ಹುಟ್ಟಿ ಹೋರಾಡುವಳು-ಹೋರಾಡುವಳು ಕಿತ್ತೂರಿಗೆ ಜಯವಾಗಲಿ-ಕಿತ್ತೂರಿನ ವೀರರು ಅಮರವಾಗಲಿ'[೫೬] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೧೦೧) ಎನ್ನುತ್ತಿರುವಂತೆ ಅವಳ ಉಸಿರು ನಿಲ್ಲುತ್ತದೆ. ಆದರೆ ಜಾನಪದಕಾರರು

'ಹೊಂಗಲದ ಕೋಟ್ಯಾಗ ಲಿಂಗಪೂಜೆಯ ಮಾಡಿ

ಭಂಗಾಗುದೆಂದು ಎದೆಗುಂದಿ। ಚನ್ನವ್ವ

ಉಂಗುರ್ವಜ್ಜರ ನುಂಗ್ಯಾಳು'[೫೭] (ಶಿವಾನಂದ ಗುಬ್ಬಣ್ಣವರ, ೨೦೧೧, ಪುಟ- ೧೮೩)

ತನ್ನ ನಾಡಿಗೆ ಎಸಗಿದ ದ್ರೋಹದಿಂದ ಕಿತ್ತೂರು ಸೈನ್ಯಕ್ಕೆ ಸೋಲುಂಟಾಗಿ ತಾನು ತನ್ನ ಸೊಸೆಯಂದಿರಿಬ್ಬರು ಬ್ರಿಟಿಷ್ ಬಂಧಿಗಳಾಗಿ ಬೈಲಹೊಂಗಲ ಕೋಟೆಯಲ್ಲಿ ಬಾಳಬೇಕಾಗಿ ಬಂದಾಗ ಧೃತಿಗೆಡದ ಚೆನ್ನಮ್ಮ ಆಶಾವಾದಿಯಾಗಿಯೇ ಇದ್ದು ಮಾರುವೇಷದಲ್ಲಿ ಬರುವ ತನ್ನ ಬಂಟರಿಗೆ ಬೆಂಬಲ ಕೊಡುವುದರ ಮೂಲಕ ಕಿತ್ತೂರು ಸ್ವಾತಂತ್ರ್ಯಕ್ಕೆ ಹೋರಾಡುವಂತೆ ಪ್ರೇರೇಪಿಸುತ್ತಿದ್ದಳು. ಆದರೆ ದೀರ್ಘಾವಧಿ ಬಂಧನದಿಂದ ಮುಕ್ತಿ ಪಡೆಯಲು ವಜ್ರದುಂಗುರ ನುಂಗಿ ಸಾವನ್ನಪ್ಪುವಳು ಎಂದಿದೆ. ಅಂಥ ವೀರರಾಣಿ ವಜ್ರದುಂಗುರದ ವಜ್ರವನ್ನು ನುಂಗಿ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಇದು ಕೇವಲ ಕವಿಯ ಕಲ್ಪನೆ ಎಂಬುದು ಕೆಲವರ ವಾದವಾಗಿದೆ.

'ವ್ಹಿ.ಜಿ ಪಾಟೀಲರ 'ಕಿತ್ತೂರ ಚೆನ್ನಮ್ಮ' ಎಂಬ ಗ್ರಂಥದಲ್ಲಿ ಕಿತ್ತೂರಿನ ಸಂಕ್ಷಿಪ್ತ ಇತಿಹಾಸದ ಜೊತೆಗೆ ಕಿತ್ತೂರಿನ ದತ್ತಕ ಪ್ರಕರಣದಲ್ಲಿ ಚೆನ್ನಮ್ಮನ ಸ್ವಾರ್ಥವೇ ಕಿತ್ತೂರು ಪತನಕ್ಕೆ ಕಾರಣವಾಯಿತೆಂಬ ಆರೋಪವಿದೆ. ಅತ್ತೆ ಸೊಸೆಯರಾದ ವೀರಮ್ಮ ಚೆನ್ನಮ್ಮರ ಒಳವಿರಸದ ಲಾಭ ಪಡೆಯಬೇಕೆಂದಿದ್ದ ಥ್ಯಾಕರೆಯ ವಿಚಾರಕ್ಕೆ ಅರಮನೆಯ ನಿಷ್ಠಾವಂತರೂ ಸ್ವಾರ್ಥಕ್ಕೆ ಕುಲಗೆಟ್ಟಿದ್ದು ಕಿತ್ತೂರಿನ ಸಂಘಟನೆಗೆ ಹುಳಿ ಹಿಂಡಿದಂತಾಯ್ತು. ಕನ್ನೂರು ವೀರಪ್ಪನೇ ಚೆನ್ನಮ್ಮನ ಆಜ್ಞೆಯಂತೆ ಥ್ಯಾಕರೆಗೆ ದತ್ತಕ ಶಿವಲಿಂಗರುದ್ರಸರ್ಜ ದೊರೆಯ ಮರಣದ ನಂತರವಾಯಿತೆಂದು ಸುದ್ದಿ ಮುಟ್ಟಿಸಿದ್ದು ಆಮೇಲೆ ಕೆಲವು ಹಿರಿಯರ ಪ್ರಯತ್ನದಿಂದ ಒಡಕು ತಿಳಿಗೊಂಡಾಗ, ಈಗ ದತ್ತಕ ಆದದ್ದು ಸರಿಯೆಂದು ಸಾಧಿಸಿದ್ದು, ಕಿತ್ತೂರಿನ ಕ್ರಾಂತಿಗೆ ಕಾರಣವಾಯಿತೆಂಬ ಸಂಗತಿ ಸತ್ಯಕ್ಕೆ ಸಮೀಪವಾಗಿದೆ'[೫೮] (ರಾಜಶೇಖರ ಇಚ್ಚಂಗಿ, ೨೦೧೧, ಪುಟ-೧೫೨) ಎಂಬ ವಿಚಾರಗಳನ್ನು ಕಾಣುತ್ತೇವೆ.

೬.೨.೨ ವೀರಮ್ಮರಾಣಿ :

ವೀರಮ್ಮರಾಣಿ ಕೇವಲ ೯ ವರ್ಷದವಳಿದ್ದಾಗ ಕಿತ್ತೂರು ಅರಸರ ಕೈಹಿಡಿದು ಬಂದು ೧೧ ವರ್ಷಕ್ಕೆ ಪತಿಯನ್ನು ಕಳೆದುಕೊಳ್ಳುತ್ತಾಳೆ. ಪತಿಯ ಜೊತೆ ಸುಖವಾಗಿ ಕಾಲ ಕಳೆಯಲು ಆಗಲಿಲ್ಲ. ದತ್ತಕ ಮಗ ಇದ್ದರೂ ಇಲ್ಲದ ಹಾಗೆ. ಏಕೆಂದರೆ ಇಂಗ್ರೇಜರು ಆ ದತ್ತಕವನ್ನೇ ಮನ್ನಿಸುವುದಿಲ್ಲ. ಕಿತ್ತೂರಿನಲ್ಲಿ ಲಢಾಯಿ ನಡೆದದ್ದು, ರಾಜ್ಯ ಕೈಬಿಟ್ಟಿದ್ದು ತಾನು ತನ್ನವರೆಲ್ಲ ಸೆರೆಯಾಗಿ ಇರುವುದು ಈ ದತ್ತಕದ ವಿಚಾರದಿಂದಲೇ ಎಂದೇ ಕೊರಗುವಳು.

ಸಂಗೊಳ್ಳಿ ರಾಯಣ್ಣನ ಬಂಡಾಯಕ್ಕೆ ಬೈಲಹೊಂಗಲ ಕೋಟೆಯಲ್ಲಿ ಬಂಧಿತಳಾಗಿರುವ ವೀರಮ್ಮನ ಬೆಂಬಲವಿರಬೇಕೆಂದು ಭಾವಿಸಿದ ಬ್ರಿಟಿಷ್ ಅಧಿಕಾರಿಗಳು ಆಕೆಯನ್ನು ಬೈಲಹೊಂಗಲದ ಕೋಟೆಯಿಂದ ಕುಸುಗಲ್ಲಿನ ಕೋಟೆಗೆ ಸ್ಥಳಾಂತರಿಸುವರು. ಆಗ ಈರವ್ವ ತನ್ನ ಅತ್ತೆಯಿಂದ ತನ್ನನ್ನು ಅಗಲಿಸಬೇಡಿರೆಂದು ಬೇಡಿಕೊಳ್ಳುವಳು. ಆದರೆ ಅವಳ ಕೋರಿಕೆಯನ್ನು ಬ್ರಿಟಿಷ್ ಅಧಿಕಾರಿಗಳು ನಿರಾಕರಿಸಿ ಸೂಕ್ತ ಭದ್ರತೆಯಲ್ಲಿ ಕರೆದುಕೊಂಡು ಹೋಗುತ್ತಿರುವಾಗ

'....ಸೃಷ್ಟಿಯೊಳ್ಹೆಣ್ಣಾಗಿ ಹುಟ್ಟಬಾರದು ಬ್ರಹ್ಮ

ಮುಟ್ಟಿ ಬರೆದ ಎನ್ನದೃಷ್ಟವನ್ನು ಬರೆ

ದಿಟ್ಟನೇನಿದಕಾಗಿ ಭ್ರಷ್ಟವನು ಬಳಗ

ಸುಟ್ಟೋಗಲೆನುತ್ತಿಂಗ ಕೊಟ್ಟವನು....'[೨೯] (ಶಿವಾನಂದ ಗುಬ್ಬಣ್ಣವರ, ೨೦೧೧, ಪುಟ-೮೪) ತನಗೆ ತನ್ನ ಗಂಡ, ಮೈದುನರಿದ್ದರೆ ತನಗೀ ದುರವಸ್ಥೆ ಬರುತ್ತಿದ್ದಿಲ್ಲವೆಂದು ದುಃಖಿಸುವಳು. ಸೃಷ್ಟಿಯಲ್ಲಿ ಹೆಣ್ಣಾಗಿ ಹುಟ್ಟಬಾರದು ಎನ್ನುವ ಈಕೆ ಬ್ರಹ್ಮನ ಬರಹದಿಂದ ತನಗೆ ಈ ದುರವಸ್ಥೆ ಲಭಿಸಿತೆನ್ನುವಳು.

ನರಗುಂದ ಬಂಡಾಯ ಕಾದಂಬರಿಯಲ್ಲಿನ ಯಮುನಾಬಾಯಿ ಮತ್ತು ಸಾವಿತ್ರಿಬಾಯಿಯರ ಪಾತ್ರಗಳು ಕಂಬನಿ ತರಿಸುತ್ತವೆ. ರಾಜ ಭಾಸ್ಕರರಾಯ ಬ್ರಿಟೀಷರು ಮುತ್ತಿಗೆ ಹಾಕಿದಾಗ ತಾಯಿ ಮತ್ತು ಪತ್ನಿಗೆ ನಿಮ್ಮ ದಾರಿಯನ್ನು ನೀವೇ ನೋಡಿಕೊಳ್ಳಿ ಎಂದು ಹೇಳಿ ಪಲಾಯನಗೈದಾಗ ಇವರು ಮಲಪ್ರಭೆಗೆ ಹಾರಿ ಪ್ರಾಣ ಕಳೆದುಕೊಳ್ಳುವರು. ರಾಜಮ್ಮಾಜಿ, ಪಾರ್ವತವ್ವ, ಶಾಂತಾ, ನೆಫಿಸ್ ಹೀಗೆ ಇನ್ನೂ ಅನೇಕ ಉಪೇಕ್ಷಿತ ಸ್ತ್ರೀ ಪಾತ್ರಗಳನ್ನು ಕಾಣುತ್ತೇವೆ.

೬.೨.೩ ಬಂಕರಸರು :

ಬಂಕರಸರು ಬನವಾಸಿಯ ಮಂಡಲೇಶ್ವರರಾಗಿದ್ದು ನೃಪತುಂಗ ಚಕ್ರವರ್ತಿಗಳ ವಿಶ್ವಾಸಕ್ಕೆ ಪಾತ್ರರಾದ ಮಂಡಲಾಧಿಪತಿಗಳೂ, ನೆಚ್ಚಿನ ಸೇನಾಧಿಪತಿಗಳೂ ಆಗಿದ್ದರು. ಸಮಾನ ವಯಸ್ಕರಾದ ಇವರಿಬ್ಬರ ಮದ್ಯೆ ಪ್ರಭು ಸಾಮಂತನೆಂಬ ಭೇದವಿರದೆ ಗಾಢವಾದ ಸ್ನೇಹವಿತ್ತು. ಮಿಹಿರಭೋಜನು ಸೌರಾಷ್ಟ್ರದ ಮೇಲೆ ದಾಳಿ ಮಾಡಿದಾಗ ಸೇನಾಧಿಪತಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಬಂಕರಸರು ತಮ್ಮ ಮಗನಾದ ಲೋಕಾದಿತ್ಯನನ್ನು ಸಹ ಕರೆದುಕೊಂಡು ಬಂದಿರುತ್ತಾರೆ. ಅಲ್ಲಿ ಲೋಕಾದಿತ್ಯನೇ ಆಯ್ಕೆಯಾದಾಗ ಆತನ ಬುದ್ಧಿಮತ್ತೆ ಕಂಡು ಬಂಕರಸರ ಜೊತೆಗೆ ಚಕ್ರವರ್ತಿಗಳೂ ಸಹ ಹೆಮ್ಮೆ ಪಡುವರು. ರಾಜಕುಮಾರ ಕೃಷ್ಣ ಬಂಡಾಯವೆದ್ದ ವಿಷಯ ತಿಳಿದ ಬಂಕರಸರು ತಾವು ಸಮಸ್ಯೆಯನ್ನು ಬಗೆಹರಿಸುವುದಾಗಿ ಹೇಳುವರು. ಅಲ್ಪಸೇನೆ ತೆಗೆದುಕೊಂಡು ಕೃಷ್ಣನನ್ನು ಕರೆತರುತ್ತಾರೆ.

ಚಕ್ರವರ್ತಿಗಳನ್ನು ಭೇಟಿಯಾದ ಬಂಕರಸರು ರಾಜಕುಮಾರರು ಈಗಾಗಲೇ ಪಶ್ಚಾತ್ತಾಪದ ಬೇಗೆಯಲ್ಲಿ ಬೇಯುತ್ತಿದ್ದು ಅದೇ ಅವರಿಗೆ ದೊಡ್ಡ ಶಿಕ್ಷೆಯಾಗಿದೆ. ಹೀಗಾಗಿ ಉದಾರತೆಯಿಂದ ನಡೆದುಕೊಳ್ಳಬೇಕೆಂದು ಹೇಳುವರು. ತಮ್ಮ ಜೊತೆಗೆ ಕರೆದುಕೊಂಡು ಬಂದಿದ್ದ ರಾಜಕುಮಾರರನ್ನು ಕಾರಾಗೃಹಕ್ಕೆ ಕಳುಹಿಸದೆ ಇಲ್ಲಿಗೇಕೆ ಕರೆದುಕೊಂಡು ಬಂದಿರುವಿರಿ. ಈಗ ಅವರು ರಾಜಕುಮಾರರಲ್ಲ ಬಂಡಾಯಗಾರರು ಎಂದೇ ಹೇಳುತ್ತಾರೆ. ಜನರೆಲ್ಲ ರಾಜಕುಮಾರರ ಪರವಾಗಿ ಕ್ಷಮಾದಾನ ನೀಡುವಂತೆ ಒಕ್ಕೊರಲಿನಿಂದ ಕೇಳಿಕೊಳ್ಳುವರು. ತಂದೆ ಮಕ್ಕಳು ಅನ್ಯೋನ್ಯತೆಯಿಂದಿರುವರು. ಬಂಕರಸರು ವಯಸ್ಸಿನ ಬಳಲಿಕೆಯಿಂದ ಜಿನಪಾದ ಸೇರುವರು.

೬.೨.೪ ಚಾವುಂಡರಾಯ :

ಚಾವುಂಡರಾಯ ಬೂತುಗ ಚಕ್ರವರ್ತಿಯ ಮಹಾದಂಡನಾಯಕನಾಗಿದ್ದ ಮಹಾಬಲಯ್ಯ ಮತ್ತು ಕಾಳಲಾದೇವಿಯರ ಮಗ. ಈತನೂ ಸಹ ತನ್ನ ತಂದೆಯ ನೇತೃತ್ವದಲ್ಲಿ ಸೇನಾಧಿಕಾರ ಸ್ವೀಕಾರ ಮಾಡಿರುತ್ತಾನೆ. ಮಹಾಬಲಯ್ಯ ತನ್ನ ಮಗನಿಗೆ ರಾಷ್ಟ್ರಕೂಟ ವಂಶದ ಬಗ್ಗೆ ಹೇಳುತ್ತ, ಅರಿಕೇಸರಿಯನ್ನು ಪರಿಚಯಿಸಿಕೊಡುತ್ತಾನೆ. ಪಂಪನಿಗೆ ಆಶ್ರಯ ಕೊಟ್ಟ ಅರಿಕೇಸರಿ ಆತನಿಂದ ಲೋಕೋತ್ತರವಾದ ಎರಡು ಮಹಾಕಾವ್ಯಗಳಾದ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಬರೆಯಿಸಿದ ವಿಷಯ ತಿಳಿಸುವನು. ಚಾವುಂಡರಾಯನ ಮನಸ್ಸು ಅಶಾಂತಿಯಿಂದ ಕೂಡಿ ತಳಮಳಿಸುತ್ತಿರುವಾಗ ತಾಯಿಯಾದ ಕಾಳಲಾದೇವಿ ಸಮಾಧಾನಪಡಿಸಿ ಶ್ರವಣಬೆಳುಗೊಳಕ್ಕೊಮ್ಮೆ ಹೋಗಿಬರುವಂತೆ ಹೇಳುವಳು. ರನ್ನನ ಜೊತೆಗೂಡಿ ಶ್ರವಣಬೆಳಗೊಳಕ್ಕೆ ಹೋಗುತ್ತಾನೆ.

ನೇಮಿಚಂದ್ರಾಚಾರ್ಯರಿಗೆ ತನ್ನ ತಾಯಿ ಪೌದನಪುರಕ್ಕೊಮ್ಮೆ ಹೋಗಿ ಬರಬೇಕೆಂಬ ಬಯಕೆ ಹೊಂದಿದ ವಿಚಾರ ವ್ಯಕ್ತಪಡಿಸಿದಾಗ ಅಲ್ಲಿ ಬಹುದಟ್ಟವಾದ ಕಾಡು ಬೆಳೆದು ವಿಗ್ರಹ ಮುಚ್ಚಿಹೋಗಿ ಕುಕ್ಕಟ ಸರ್ಪಗಳು ಕಿಕ್ಕಿರಿದಿರುವ ವಿಷಯ ತಿಳಿಸಿ ಅದು ಅಸಾಧ್ಯವೆಂದೇ ಹೇಳುವರು. ಒಂದು ದಿನ ಕನಸಿನಲ್ಲಿ ಪದ್ಮಾವತಿದೇವಿ ಬಂದು ಚಾವುಂಡರಾಯನಿಗೆ ಶ್ರವಣಬೆಳುಗೊಳದಲ್ಲಿಯೇ ಬಾಹುಬಲಿದೇವನ ಮೂರ್ತಿ ಪ್ರತಿಷ್ಠಾಪಿಸಬೇಕೆಂದು ಆಶೀರ್ವದಿಸುವಳು. ನೇಮಿಚಂದ್ರಾಚಾರ್ಯರು ಚಾವುಂಡರಾಯನಿಗೆ ಬೆಟ್ಟದ ಕೆಳಗಿನ ಊರಿನಲ್ಲಿ ಒಬ್ಬ ಅಜ್ಜಿ ಶಿಲೆಯಲ್ಲಿ ಸ್ವಾಮಿಯನ್ನು ಗುರುತಿಸಿದ ವಿಷಯ ತಿಳಿಸಿ ಆಕೆಯನ್ನು ಕಾಣಲು ಕಳಿಸುತ್ತಾರೆ.

ಚಾವುಂಡರಾಯ ಖಡ್ಗಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡು ಇಂದ್ರಗಿರಿಯ ನೆತ್ತಿಯ ಮೇಲಿನ ಬೃಹತ್ ಶಿಲಾಖಂಡದಲ್ಲಿ ಬಾಹುಬಲಿ ಮೂರ್ತಿಯನ್ನು ನಿರ್ಮಿಸಬೇಕೆಂಬ ಬಯಕೆಯಿಂದ ಶಿಲ್ಪಿಗಳನ್ನು ಹುಡುಕುತ್ತಿರುತ್ತಾನೆ. ರನ್ನಮಯ್ಯನ ಜೊತೆಗೂಡಿ ಇಂದ್ರಗಿರಿಯತ್ತ ಹೋಗುತ್ತಿರುವಾಗ ವೃದ್ಧೆಯೊಬ್ಬಳು ಗಿರಿಪಾದಕ್ಕೆ ನಮಸ್ಕರಿಸುವುದನ್ನು ಕಂಡು ಹಿಂದೆ ನೇಮಿಚಂದ್ರಾಚಾರ್ಯರು ಹೇಳಿದ ವಿಷಯ ನೆನಪಾಗಿ ಆಕೆಯನ್ನು ಹಿಂಬಾಲಿಸಿ ಪರಿಚಯಿಸಿಕೊಂಡು ತಾವು ಮಾಡಬೇಕೆಂದಿರುವ ಕೆಲಸದ ಕುರಿತು ಹೇಳಿದಾಗ ಆ ಮುದುಕಿ ಭರತೋಜ ತನಗೊಂದು ಬಾಹುಬಲಿ ಮೂರ್ತಿ ಮಾಡಿಕೊಟ್ಟಿರುವ ವಿಷಯ ಹೇಳಿ ಅವರನ್ನು ಮನೆಗೆ ಕರೆದುಕೊಂಡು ಹೋಗಿ ತೋರಿಸುತ್ತಾಳೆ. ಆದರೆ ಭರತೋಜ ತನ್ನ ಬದುಕಿನಲ್ಲಿ ಆದ ಆಘಾತದಿಂದಾಗಿ ತಾನೆಂದೂ ಉಳಿ ಮುಟ್ಟುವುದಿಲ್ಲ ಮೂರ್ತಿರಚನೆ ತನ್ನಿಂದ ಸಾಧ್ಯವೇ ಇಲ್ಲವೆನ್ನುತ್ತಾನೆ. ಮುದುಕಿ ಆತನನ್ನು ಒಪ್ಪಿಸಿ ಆ ಕಾರ್ಯ ನೆರವೇರಿಸಿಕೊಡುವುದಾಗಿ ಭರವಸೆ ಕೊಟ್ಟು ಕಳುಹಿಸಿ ಎಷ್ಟೇ ಒತ್ತಾಯಿಸಿದರೂ ಒಪ್ಪುವುದಿಲ್ಲ. ಆದರೆ

ಕನಸಿನಲ್ಲಿ ಬಾಹುಬಲಿ ಸ್ವಾಮಿಯೇ ಮೂರ್ತಿ ಕಂಡರಿಸುವಂತೆ ಅಪ್ಪಣೆ ಮಾಡಿದಾಗ ಆ ಕಾರ್ಯದಲ್ಲಿ ತೊಡಗುವನು. ಚಾವುಂಡರಾಯನಿಗೆ ಅತೀವ ಸಂತೋಷವಾಗಿ ಈ ಕಾರ್ಯ ಪ್ರಾರಂಭಿಸುವನು ಎಂದು ತ.ರಾ.ಸು ಶಿಲ್ಪಶ್ರೀ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. 'ಮಧುರೈಗೆ ಜೈನಧರ್ಮ ಪ್ರಚಾರಕ್ಕಾಗಿ ಹೋಗಿದ್ದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಮಧುರೈಯಿಂದ ಹಿಂತಿರುಗುವಾಗ ತಮ್ಮೊಡನೆ ಕೆಲವು ಪ್ರಸಿದ್ಧ ಶಿಲ್ಪಿಗಳನ್ನು ಕರೆತಂದು, ಚಾವುಂಡರಾಯನಿಗೆ "ಇವರಿಂದ ನೀನು ಇಂದ್ರಗಿರಿಯ(ಶ್ರವಣಬೆಳುಗೊಳ) ಮೇಲೆ ಗೊಮ್ಮಟೇಶ್ವರನ ವಿಗ್ರಹವನ್ನು ಕೆತ್ತಿಸು" ಎಂದು ಸೂಚನೆ ನೀಡಿದರು. ಗೊಮ್ಮಟೇಶ್ವರ ಮೂರ್ತಿಯನ್ನು ನಿರ್ಮಿಸಿದವರು ತಮಿಳುನಾಡಿನ ಶಿಲ್ಪಿಗಳು ಎಂಬ ಮಾಹಿತಿಯನ್ನು ನೀಡುತ್ತದೆ'[೬೦] (ಕಲಬುರ್ಗಿ ಎಂ.ಎಂ, ೨೦೦೮, ಪುಟ-೦೪) ಎಂಬ ವಿಚಾರಗಳನ್ನು ತಮಿಳ್ ಸೆಲ್ವಿಯವರು ಹೊರನಾಡಿನಲ್ಲಿರುವ ಗಂಗರ ಶಾಸನಗಳು ಎಂಬುದರಿಂದ ಹೇಳಿದ್ದು ಎಂ.ಎಂ ಕಲಬುರ್ಗಿಯವರು ತಮ್ಮ ಕೃತಿಯಲ್ಲಿ ಆ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಚಾವುಂಡರಾಯನು 'ತ್ರಿಷಷ್ಠಿ ಲಕ್ಷಣ ಮಹಾಪುರಾಣ' ಕೃತಿಯನ್ನು ಬರೆದು ನೇಮಿಚಂದ್ರಾಚಾರ್ಯರಿಗೆ ಅರ್ಪಿಸುವನು. ಎಲ್ಲಿ ಬಾಹುಬಲಿ ಮೂರ್ತಿಯನ್ನು ಕಾಣದೇ ತನ್ನ ಜೀವ ಅಳಿದು ಹೋಗುವುದೋ ಎಂದು ಚಿಂತಿಸುತ್ತಿರುವಾಗ ಭರತೋಜ ಶಿಲ್ಪ ನಿರ್ಮಾಣದ ಕಾರ್ಯ ಪೂರ್ಣಗೊಳಿಸಿ ಚಾವುಂಡರಾಯನನ್ನು ಕರೆಸುತ್ತಾನೆ. ಆದರೆ ಅಲ್ಲಿ ಮಾತ್ರ ಭರತೋಜ ಇರದೆ ಕಾಗದವೊಂದನ್ನು ಬರೆದಿಟ್ಟು ತಾನು ಬಾಹುಬಲಿಯ ಸನ್ನಿಧಿಗೆ ಹೋಗುವುದಾಗಿ ಹೇಳಿ ಹೊರಟು ಹೋಗಿರುತ್ತಾನೆ. ಚಾವುಂಡರಾಯನು ಕಂಬನಿ ಸುರಿಸುತ್ತಾನೆ. ತದನಂತರ ಶಾಸ್ತ್ರೋಕ್ತವಾಗಿ ಆ ಮೂರ್ತಿಗೆ ಮಹಾಮಸ್ತಕಾಭಿಷೇಕ ಮಾಡಿಸಿ ತನ್ನನ್ನು ನಿನ್ನ ದಿವ್ಯ ಸನ್ನಿಧಿಗೆ ಕರೆಸಿಕೋ ಎಂದು ಬಾಹುಬಲಿಯಲ್ಲಿ ಬೇಡುತ್ತಾನೆ. ಇಲ್ಲಿ ಚಾವುಂಡರಾಯನಿಗಿರುವ ಅಚಲವಾದ ಶ್ರದ್ಧೆಯನ್ನು ಕಾಣುತ್ತೇವೆ.

೬.೨.೫ ಸಿಂಗಮಭಟ್ಟ :

ಸಿಂಗಮಭಟ್ಟ ಹೊಯ್ಸಳ ನಾಡಿನವನಾಗಿದ್ದು, ಜಲಯಂತ್ರ ವಿಶಾರದನಾಗಿರುತ್ತಾನೆ. ಇಮ್ಮಡಿ ಹರಿಹರರಾಯರು ನೀರಾವರಿ ಯೋಜನೆಯ ಮಹತ್ಕಾರ್ಯ ಕೈಕೊಂಡಿರುವ ವಿಷಯ ತಿಳಿದ ಈತ ವಿಜಯನಗರಕ್ಕೆ ಬಂದು ತಾನು ಹಾಕಿರುವ ನೀಲನಕ್ಷೆಯನ್ನು ಸಾಯಣಾಚಾರ್ಯರಿಗೆ ತೋರಿಸುತ್ತಾನೆ. ಪೆನುಗೊಂಡೆಯ ಮಾರ್ಗವಾಗಿ ತಾನು ಬಂದಿದ್ದು ಅಲ್ಲಿನ ನೀರಿನ ಕ್ಷಾಮ ಬಗೆಹರಿಸುವ ಯೋಜನೆ ತಿಳಿಸುವನು. ಸಾಯಣಾಚಾರ್ಯರು ರಾಜಧಾನಿಯ ಒಳಗೆ ಅಪಾರ ಜಲಸಂಗ್ರಹವಾಗಬೇಕು. ಸಾಮ್ರಾಜ್ಯಕ್ಕೆ ಇರುವ ಶತ್ರುಬಾಧೆಯ ಕುರಿತು ಹೇಳಿದಾಗ ಸಿಂಗಮಭಟ್ಟ

ತನಗೆ ಹಣದ ದುರಾಸೆ ಇಲ್ಲ. ಹಾಗೇನಾದರೂ ಇದ್ದಿದ್ದರೆ ದಿಲ್ಲಿಯ ಸುಲ್ತಾನರ ಸೇವೆಗೆ ಹೋಗುತ್ತಿದ್ದೆ. ತನ್ನ ಭಾವಮೈದುನ ರಾಮಭಟ್ಟ ದಿಲ್ಲಿಯ ಸುಲ್ತಾನರ ಆಶ್ರಯದಲ್ಲಿರುವ ವಿಚಾರ ಹೇಳುವನು. ಜೊತೆಗೆ ತಾನು ಏಕಾಂಗಿಯಾಗಿದ್ದು ಹೆಂಡತಿಯಿಲ್ಲ, ಮಕ್ಕಳಿಲ್ಲ, ವಾಸಕ್ಕೊಂದು ಮನೆ, ಉಣ್ಣಲಷ್ಟು ಅನ್ನ ಕೊಡಿ ಸಾಕೆಂದು ಹೇಳಿ ಕಾರ್ಯಪ್ರವೃತ್ತನಾಗುವನು. ಸಿಂಗಮಭಟ್ಟ ತುಂಗಭದ್ರಾ ನದಿಯಿಂದ ಕಾಲುವೆ ತೋಡಿ ಕಮಲಾಪುರದವರೆಗೆ ನೀರು ಹಾಯಿಸುವ ಕಾರ್ಯ ಪ್ರಾರಂಭ ಮಾಡಿದಾಗ ಅಲ್ಲಿ ಮಹಾಬಂಡೆಯೊಂದಿದ್ದು ಕಾರ್ಯ ಅರ್ಧಕ್ಕೆ ನಿಲ್ಲವುದು. ಕಲ್ಲುಕುಟಿಗರ ಉಳಿಗಾಗಲಿ, ಸಿಡಿಮದ್ದುಗಳಿಗಾಗಲಿ ಆ ಹೆಬ್ಬಂಡೆ ಮಿಸುಕಾಡಲೇ ಇಲ್ಲ. ಚಿಂತಾಕುಲನಾದ ಸಿಂಗಮಭಟ್ಟ ರಾಮಭಟ್ಟನಿಗೆ ಹೇಳಿದಾಗ ಅದನ್ನು ಪರೀಕ್ಷಿಸಿ ಸುತ್ತಣ ಪ್ರದೇಶದಲ್ಲಿ ದೊರೆಯುತ್ತಿದ್ದ ಕೆಲವು ಎಲೆ ಹೂಗಳನ್ನು, ಮೂಲಿಕೆಗಳನ್ನು ಆಯ್ದು ತಂದು ಅರೆದು ಆ ಹೆಬ್ಬಂಡೆಗೆ ಹಚ್ಚಲಾಗಿ ಬೆಳಗಾಗುವಷ್ಟರಲ್ಲಿಯೇ ಅದು ಸೀಳುಬಿಟ್ಟಿರುತ್ತದೆ. ಸಿಂಗಮಭಟ್ಟ ಮುಂದೆ ಏನಾದ, ಅವನ ಬದುಕಿನ ಕಥೆ ಏನು ಯಾವೊಂದು ವಿಷಯಗಳನ್ನು ಲೇಖಕರು ಪ್ರಸ್ತಾಪಿಸಿಯೇ ಇಲ್ಲ.

೬.೨.೬ ರಾಮರಾಯರು :

ರಾಮರಾಯರು ರಂಗಾಮಂತ್ರಿಗಳ ಪುತ್ರರಾಗಿದ್ದು ವೀರನೂ, ಮಲ್ಲವಿದ್ಯಾ ನಿಪುಣನೂ ಆಗಿರುತ್ತಾನೆ. ಶ್ರೀಕೃಷ್ಣದೇವರಾಯರು ತಮ್ಮ ಮಕ್ಕಳಾದ ತಿರುಮಲಾಂಬಾ ಮತ್ತು ವೆಂಗಲಾಂಬಾಳನ್ನು ರಾಮರಾಯ ಮತ್ತು ತಿರುಮಲರಾಯರಿಗೆ ಕೊಟ್ಟು ಮದುವೆ ಮಾಡುವುದೆಂದು ಆಲೋಚಿಸಿ ಒಪ್ಪಿಗೆ ಕೇಳಿದಾಗ ಮನೆಯ ಹಿರಿಯರು ಒಪ್ಪಿದರೆ ಸಾಕೆಂದು ತಮ್ಮ ಸಮ್ಮತಿ ಸೂಚಿಸುವರು. ವಿವಾಹದ ಕಾರ್ಯವೂ ವಿಜೃಂಭಣೆಯಿಂದ ಜರುಗುವುದು. ವಿಜಯನಗರ ಸಾಮ್ರಾಜ್ಯ ಒಳಜಗಳಗಳ ಗೂಡಾಗಿ ರಾಜಧಾನಿಯಲ್ಲಿ ನಡೆಯಬಾರದ ಘಟನೆಗಳೆಲ್ಲವೂ ನಡೆದು ಹೋಗುತ್ತವೆ. ಇದರಿಂದ ಸಾಕಷ್ಟು ನೊಂದುಕೊಂಡ ಪ್ರಭುಗಳು ಅಳಿಯ ರಾಮರಾಯರನ್ನು ಕರೆದು ಯುವರಾಜಕುಮಾರರ ನಿಧನಾನಂತರ ರಾಜಕುಮಾರ ಗೋವಿಂದರಾಜರಿಗೆ ಉತ್ತರಾಧಿಕಾರತ್ವ ಬರಬೇಕು. ಆದರೆ ಅದು ಇನ್ನೂ ತೊಟ್ಟಿಲ ಕೂಸಾಗಿರುವುದರಿಂದ ಶ್ರೀ ಅಚ್ಯುತರಾಯರು ಸಿಂಹಾಸೀನರಾಗಲಿ, ನೀವು ಅವರ ಮಹಾಮಂತ್ರಿಗಳಾಗಿದ್ದುಕೊಂಡು ಧರ್ಮಮಾರ್ಗ ಬಿಡದೆ ರಾಜ್ಯಭಾರ ಮಾಡುವಂತೆ ಹೇಳುವರು.

ಶ್ರೀ ಸದಾಶಿವರಾಯರು ಉತ್ತರಾಧಿಕಾರಿಗಳಾಗಿ, ರಾಮರಾಯರನ್ನು ಕ್ಷಮಾಪತಿಗಳನ್ನಾಗಿ ಆಯ್ಕೆ ಮಾಡಿದಾಗ ಒಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುವರು. ತುಂಬಿದ ಸಭೆಯಲ್ಲಿ ಮಹಾಪ್ರಭುಗಳಾದ ಶ್ರೀ ಸದಾಶಿವರಾಯರು ಸಾಮ್ರಾಜ್ಯದ ಸರ್ವಯಶಸ್ಸಿಗೆ ಕಾರಣೀಭೂತರಾದ ರಾಮರಾಯರಿಗೆ 'ಅಮಾತ್ಯತಿಲಕ', 'ಪ್ರಾಜ್ಯ ಕರ್ನಾಟಕ ರಾಜ್ಯ ಸ್ಥಾಪನಾಚಾರ್ಯ' ಎಂಬ

ಪ್ರಶಸ್ತಿಗಳನ್ನು ನೀಡುವರು. ಪ್ರಭುಗಳು ಪ್ರತಿಯೊಂದು ಸಣ್ಣ ವಿಷಯಕ್ಕೂ ರಾಮರಾಯರ ಸಲಹೆ ಪಡೆದುಕೊಂಡೇ ಮಾಡುತ್ತಿದ್ದರು. ರಾಮರಾಯರು 'ರತ್ನಕೂಟ' ಎಂಬ ಅರಮನೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಮಹಾಪ್ರಭುಗಳು ನಮ್ಮ ಅರಮನೆಯೂ ಇಷ್ಟು ಚೆನ್ನಾಗಿಲ್ಲ ಎಂದು ರಾಮರಾಯರ 'ರತ್ನಕೂಟ'ವನ್ನು ಹಾಡಿ ಹೊಗಳುತ್ತಾರೆ. ಎಲ್ಲ ಧರ್ಮಿಯರನ್ನು ಸಮಾನ ಭಾವದಿಂದ ಕಾಣುವ ರಾಮರಾಯರು ಕಾಬೂಲ್‌ಖಾನನ ಮನೆಗೆ ಹೋದಾಗ ಅಲ್ಲಿ ಅವನ ತಂಗಿ ಆಯೇಷಾಳೊಂದಿಗೆ ಅನುರಕ್ತರಾಗುತ್ತಾರೆ. ತಮ್ಮ ಮನಸ್ಸಿನ ಚಾಂಚಲ್ಯಕ್ಕೆ ಕಡಿವಾಣ ಹಾಕಿಕೊಳ್ಳಲೆತ್ನಿಸಿದರೂ ಅದು ಸಾಧ್ಯವಾಗದೆ ಆಕೆಯ ಸಂಗ ಮಾಡುವರು.

ತನ್ನ ಎಲ್ಲ ಅಭ್ಯುದಯಕ್ಕೂ ಕಾರಣರಾಗಿದ್ದ ರಾಮರಾಯರ ಬಗ್ಗೆ ಅಂಬರ್‌ಖಾನ್ ಗೌರವ, ವಿಶ್ವಾಸದಿಂದಿದ್ದು ಮೌಲ್ವಿ ಮಹಮ್ಮದ್ ರಸೂಲ್ ಬೇಗ್‌ರವರು ಅಂಬರಖಾನ್‌ನ ಮನಸ್ಸು ಕೆಡೆಸಿ ವಿಜಯನಗರ ಸಾಮ್ರಾಜ್ಯ ಅಳಿಯುವವರೆಗೆ ಇಸ್ಲಾಮಿಗೆ ಉಳಿಗಾಲವಿಲ್ಲವೆಂಬ ವಿಷದಬೀಜ ಬಿತ್ತುವ ಕೆಲಸ ಮಾಡುವನು. ಮುಂದೆ ಸಂಧಾನದ ಒಪ್ಪಂದ ಮಾಡಿಕೊಂಡ ಸುಲ್ತಾನರುಗಳೆಲ್ಲ ವಿಜಯನಗರದ ಮೇಲೆ ತಿರುಗಿ ಬಿದ್ದು ಯುದ್ಧ ಆರಂಭಿಸುತ್ತಾರೆ. ರುಸ್ತುಂ ಮತ್ತು ಕಾಬೂಲ್‌ಖಾನ್‌ನಿಗೆ ಮೊದಲು ರಾಮರಾಯರನ್ನು ಹಿಡಿದುಕೊಡುವಂತೆ ಒತ್ತಾಯಿಸಿದಾಗ ಇವರು ನಿರಾಕರಿಸುತ್ತಾರೆ. ತದನಂತರ ಕಾಬೂಲ್‌ಖಾನರೇ ರುಸ್ತುಂನಿಗೆ ಉತ್ತರಭಾರತದಲ್ಲಿ ಇಸ್ಲಾಂ ಆಳ್ವಿಕೆಯಿದೆ. ದಕ್ಷಿಣ ಭಾರತ ರಾಮರಾಯರ ಹಿಡಿತದಲ್ಲಿದೆ. ಅವರನ್ನು ಕೊನೆಗಾಣಿಸಿದರೆ ಇಡೀ ಬಾರತದಲ್ಲಿ ಇಸ್ಲಾಂ ಆಳ್ವಿಕೆ ಪ್ರಾರಂಭವಾಗುವುದು ನಿನ್ನ ಮನೋನಿರ್ಧಾರದ ಮೇಲೆ ನಾಲ್ಕು ಜನರ ಪ್ರಾಣ ಅವಲಂಬಿಸಿದೆ ಎಂದು ಹುರಿದುಂಬಿಸುವನು. ಆಗ ಖಾನ್ ಮತ್ತು ರುಸ್ತುಂ ವಿಜಯನಗರದ ವಿರುದ್ಧವೇ ತಿರುಗಿ ಬೀಳುತ್ತಾರೆ. ರಾಮರಾಯರನ್ನು ರೂಮಿಖಾನ್ ಎಳೆದು ತಂದು ಹುಸೇನ್ ನಿಜಾಮಷಹರ ಮುಂದೆ ನಿಲ್ಲಿಸಿದಾಗ ಆತ ಕತ್ತಿ ಹಿರಿದು ರಾಮರಾಯರ ರುಂಡವನ್ನು ಚೆಂಡಾಡಿ ತನ್ನ ಸೇಡು ತೀರಿತೆಂದು ಹೇಳುವನು. ಇಲ್ಲಿ ಧರ್ಮದ ಹೆಸರಿನಲ್ಲಿ ಅವರ ಆಶ್ರಯ ಪಡೆದುಕೊಂಡವರೇ ಅವರಿಗೆ ಮೋಸಮಾಡುವುದನ್ನು ಕಾಣುತ್ತೇವೆ.

೬.೨.೭ ಪರಶುರಾಮಪ್ಪ :

ಭುವನಪ್ಪನವರ ಮಗನಾದ ಪರಶುರಾಮಪ್ಪನವರು ಓಬಣ್ಣನಾಯಕರ ಕಗ್ಗೊಲೆ, ಓಬವ್ವ ನಾಗತಿ ಗೋಪಾಲಸ್ವಾಮಿ ಹೊಂಡಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಾಗ ಅವರ ಅಂತಿಮ ದರ್ಶನಕ್ಕೆ ಬಂದ ಜನರನ್ನು ಮುದ್ದಣ್ಣ ತನ್ನ ಸರ್ವಾಧಿಕಾರತ್ವದಿಂದ ಅವಕಾಶ ಮಾಡಿಕೊಡದೇ ಹೋದಾಗ ರೊಚ್ಚಿಗೇಳುತ್ತಿದ್ದ ಜನರನ್ನು ತಡೆದು ನಾಗತಿಯವರ ದೇಹಕ್ಕೆ ಅಶ್ರುತರ್ಪಣವನ್ನು ನೀಡಿ ರಕ್ತತರ್ಪಣ

ಬೇಡವೆಂದು ತಡೆಯುತ್ತಾರೆ. ಚಿಕ್ಕಣ್ಣನಾಯಕ ಪುತ್ರಸಂತಾನವಿಲ್ಲದೆ ಮಡಿದಾಗ ಸಿಂಹಾಸನಕ್ಕೆ ದಿಕ್ಕಾರು ಎನ್ನುವ ವೇಳೆಯಲ್ಲಿ ಲಿಂಗಣ್ಣನಾಯಕನನ್ನು ಒಪ್ಪಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾನೆ. ದುರಹಂಕಾರದಿಂದ ವರ್ತಿಸುವ ದಳವಾಯಿ ಮುದ್ದಣ್ಣನನ್ನು ಸದೆಬಡಿಯಬೇಕೆಂದು ಸಾಕಷ್ಟು ಪ್ರಯತ್ನಿಸುತ್ತಾನೆ. ಮುದ್ದಣ್ಣ ಪರಶುರಾಮಪ್ಪ ಮತ್ತು ಭರಮಣ್ಣನನ್ನು ಸೆರೆಯಲ್ಲಿಟ್ಟು ಲಿಂಗಣ್ಣನಾಯಕರನ್ನು ಅಮಾನುಷವಾಗಿ ಹತ್ಯೆಗೈಯ್ಯುತ್ತಾನೆ. ವಿಷಯ ತಿಳಿದ ಪರಶುರಾಮಪ್ಪ ಮತ್ತು ಭರಮಣ್ಣ ಆಕ್ರೋಶದಿಂದ ಸಿಡಿದೇಳುತ್ತಾರೆ. ಪರಶುರಾಮಪ್ಪ ಕೋಟೆಯೊಳಗಿರುವ ಚಿನ್ನಯ್ಯ, ದಾಸನಾಯಕರಂತಹ ನಂಬಿಗಸ್ಥ ವ್ಯಕ್ತಿಗಳಿಂದ ಅಲ್ಲಿನ ಚಲನವಲನಗಳನ್ನೆಲ್ಲ ತಿಳಿದುಕೊಂಡು ದಾಸನಾಯಕನ ಸಲಹೆಯಂತೆಯೇ ತನ್ನ ಕಡೆಯವರಿಗೆಲ್ಲ ಸೈನಿಕರ ವೇಷ ಹಾಕಿಸಿ ಕೋಟೆಯನ್ನು ವಶಪಡಿಸಿಕೊಳ್ಳುವನು. ಗಿರಿಜವ್ವೆ ಮುದ್ದಣ್ಣ ಹಾಗೂ ಆತನ ತಮ್ಮಂದಿರನ್ನು ಅತ್ಯಂತ ಕ್ರೂರವಾಗಿ ಕೊಂದಾಗ ಆ ತೆರನಾದ ಕ್ರೋಧ ಹಿಂಸೆ ಸರಿಯಲ್ಲ ಎಂದು ನೊಂದುಕೊಳ್ಳುವನು. ಗುರುಗಳಾದ ಉಗ್ರಚನ್ನವೀರಸ್ವಾಮಿಗಳು ದುರ್ಗವನ್ನು ಬಿಟ್ಟು ಹೊರಡಲು ಸಿದ್ಧವಾದಾಗ ತಮಗೆ ದಾರಿ ತೋರುವವರಾರು ಎನ್ನುವನು. ಮುರುಘರಾಜೇಂದ್ರ ಸ್ವಾಮಿಗಳು ಬರುವಾಗ ಈ ಸಿಂಹಾಸನಕ್ಕೆ ಬರಬೇಕಾದವರನ್ನು ಕರೆತರುತ್ತಾರೆ ಎಂದು ಹೇಳಿ ಹೋಗುವರು.

ಮುದ್ದಣ್ಣನ ಇತಿಹಾಸ ಮುಕ್ತಾಯವಾದ ನಂತರ ಪರಶುರಾಮಪ್ಪ ದುರ್ಗದ ಸಿಂಹಾಸನಕ್ಕೆ ದೊರೆಯಾರು ಎಂದು ಆಲೋಚಿಸಿ ಬಿಳಿಚೋಡಿನ ಕಸ್ತೂರಿರಂಗಪ್ಪನವರ ಮಕ್ಕಳಾದ ಭರಮಣ್ಣನ ಬಗ್ಗೆ ನಂಬಿಗಸ್ಥ ಬೇಹುಗಾರರಿಂದ ವಿಷಯ ತಿಳಿದುಕೊಂಡು ಪ್ರಮುಖರ ಮುಂದೆ ವಿಚಾರ ವ್ಯಕ್ತಪಡಿಸಿದಾಗ ಊರ ಗೌಡರುಗಳು ದೊರೆಯನ್ನು ಆಯ್ಕೆ ಮಾಡುವ ಅಧಿಕಾರ ಪ್ರಧಾನಿಗಳಿಗಿರುವುದರಿಂದ ತಮ್ಮ ಅಭಿಪ್ರಾಯವೇನೂ ಇಲ್ಲವೆನ್ನುವರು. ಪರಶುರಾಮಪ್ಪನವರು ಇಂದಿನ ದುರ್ಗದ ರಾಜಕೀಯ ಪರಿಸ್ಥಿತಿಯೇ ಬೇರೆಯಾಗಿದೆ. ಇಂದು ಉತ್ತರಾಧಿಕಾರತ್ವದ ವಂಶವೇ ಬದಲಾಗುವುದು ಎಂದು ತಾವು ಆಯ್ಕೆ ಮಾಡಿರುವ ವ್ಯಕ್ತಿಯ ಕುರಿತು ಹೇಳುವರು. ಅದಕ್ಕೆ ಎಲ್ಲರೂ ಸಮ್ಮತಿ ಸೂಚಿವರು.

ಪಟ್ಟಾಭಿಷೇಕವಾದ ಮೇಲೆ ಭರಮಣ್ಣನಾಯಕ ಎಲ್ಲರಿಗೂ ಉಡುಗೊರೆಗಳನ್ನು ಕೊಡುವಾಗ ತಮಗೆ ಏನು ಪ್ರಿಯವೋ ಅದನ್ನು ತೆಗೆದುಕೊಳ್ಳಬೇಕೆಂದು ಪರಶುರಾಮಪ್ಪನವರಿಗೆ ಹೇಳುವನು. 'ಮೂಲ ಪುರುಷರಾದ ಮತ್ತಿ ತಿಮ್ಮಣ್ಣನಾಯಕರೇ ನಮ್ಮ ಮನೆತನದ ಹಿರಿಯರಿಗೆ ಹರಿಯದ ಹಚ್ಚಡ, ಮುರಿಯದ ಒಡವೆ ಎಂದು ವಂಶಪಾರಂಪರ್ಯವಾಗಿ ಪ್ರಧಾನಿತನವನ್ನು ಅನುಗ್ರಹಿಸಿದ್ದಾರೆ'[೬೧] (ಸುಬ್ಬರಾಯರು ತ.ರಾ, ೨೦೧೩, ಹೊಸಹಗಲು, ಪುಟ-೬೬) ನನಗೆ ಆಜೀವ

ಪರ್ಯಂತ ತಮ್ಮ ಪ್ರೇಮವನ್ನು ಮಾತ್ರ ಕೊಡಿ ಎಂದು ಕೇಳಿಕೊಳ್ಳುವನು. ಆದರೆ ನಾಯಕರು ತಮ್ಮ ಕತ್ತಿನಲ್ಲಿದ್ದ ನವರತ್ನಖಚಿತವಾದ ಮುತ್ತಿನ ಹಾರ ತೆಗೆದು ಪರಶುರಾಮಪ್ಪನವರ ಕತ್ತಿಗೆ ಹಾಕುವರು.

ಪರಶುರಾಮಪ್ಪನವರು ಮೆಹರ್‌ಬಾನುವಿಗೆ ರಾಜದರ್ಶನ ಮಾಡಿಸದೆ ಅವಳ ಸಂಗೀತ ಕಾರ್ಯಕ್ರಮಕ್ಕೆ ಅವಕಾಶ ಕೊಡುವುದಿಲ್ಲ. ಕೋಪಗೊಂಡ ಆಕೆ ಕಲೆಗೆ ಕಲಾವಿದರಿಗೆ ಅಪಮಾನಗೊಳಿಸಬೇಡಿರೆಂದು ಹೇಳಿದಾಗ ಪರಶುರಾಮಪ್ಪನವರು ತನಗೆ ನಂಬಿಕೆ ಬರುವವರೆಗೆ ನಾಯಕರಿಗೆ ವಿಷಯ ತಿಳಿಸಬಾರದೆಂದು ತಮ್ಮ ವಿಷಯ ತಿಳಿಸಿಯೇ ಇಲ್ಲ ಎಂದು ಹೇಳುವನು. ತದನಂತರ ನಾಯಕರೊಂದಿಗೆ ಈ ವಿಷಯ ಪ್ರಸ್ತಾಪಿಸಿ ಆಕೆಯ ಸಂಗೀತ ಕಾರ್ಯಕ್ರಮಕ್ಕೆ ಅನುವು ಮಾಡಿಕೊಡುತ್ತಾನೆ.

೬.೨.೮ ದಳವಾಯಿ ಮುದ್ದಣ್ಣ :

ದಳವಾಯಿ ಮುದ್ದಣ್ಣ ಯಾವಾಗಲೂ ತಾನು ಪ್ರತಿಷ್ಠೆಯಿಂದ ಸರ್ವಾಧಿಕಾರಿಯಾಗಬೇಕೆಂದು ಹಂಬಲಿಸಿದವನು. ಅದಕ್ಕಾಗಿ ಮಾಡಬಾರದ ಎಲ್ಲ ಹೀನ ಕೃತ್ಯಗಳನ್ನು ಎಸಗುತ್ತಾನೆ. ದಳವಾಯಿ ದೇಸಣ್ಣನಿಗೆ ಭುವನಪ್ಪನವರ ಬಗ್ಗೆ ಇಲ್ಲ ಸಲ್ಲದ ವಿಚಾರಗಳನ್ನೆಲ್ಲ ಹೇಳಿ ಗೊಂದಲಗಳನ್ನು ಸೃಷ್ಟಿ ಮಾಡುತ್ತಾನೆ. ಕುತ್ಸಿತ ಬುದ್ಧಿಯವನಾದ ಮುದ್ದಣ್ಣ ತಿಳುವಳಿಕೆ ಹೇಳಲು ಬಂದ ದೇಸಣ್ಣನನ್ನೇ ಕೊಲೆ ಮಾಡುತ್ತಾನೆ. ತಪ್ಪಿಸಿಕೊಂಡು ಬಚ್ಚಿಟ್ಟುಕೊಂಡ ಈತ ಚಿಕ್ಕಣ್ಣನ ಹತ್ತಿರ ತಾನು ಮತ್ತು ತನ್ನ ತಮ್ಮಂದಿರು ನಾಯಕರ ಎದುರಿಗೆ ಶರಣಾಗತರಾಗುವುದಾಗಿ ಹೇಳಿ ಕಳುಹಿಸಿ ತುಂಬಿದ ಓಲಗದಲ್ಲಿ ಶರಣಾಗತನಾದವನಂತೆ ನಟಿಸಿ ಓಬಣ್ಣನಾಯಕನನ್ನು ಕೊಲೆಗೈಯ್ಯುತ್ತಾನೆ. ಚಿಕ್ಕಣ್ಣನಾಯಕನನ್ನು ಸಿಂಹಾಸನದ ದೊರೆಯಾಗಿಸುತ್ತಾನೆ.

ಮುದ್ದಣ್ಣ ಸ್ವಭಾವದಿಂದ ಹಿಂಸಾಪರನಾಗಿದ್ದು ಕ್ರೂರಿ ಸ್ವಭಾವದವನು, ಸಮಯ ಸಾಧಕನೂ ಆಗಿದ್ದರೂ ಸಹ ಶತ್ರುಗಳನ್ನು ಹಿಮ್ಮೆಟ್ಟಿಸುವ ಅವನ ಧೈರ್ಯ ಹಾಗೂ ಜಾಣ್ಮೆ ಮೆಚ್ಚುವಂತವುಗಳೇ. ಒಂದು ಸಲ ಷಂಷೇರ್‌ಖಾನನ ದಂಡು ದಾಳಿ ಮಾಡುವದು. ದುರ್ಗದಲ್ಲಿ ಸಾಕಷ್ಟು ಸೈನ್ಯವಿಲ್ಲದಿರುವುದರಿಂದ ಎತ್ತಿನ ಕೋಡುಗಳಿಗೆ ಪಂಜು ಕಟ್ಟಿಸಿ ಅವುಗಳನ್ನು ಕಂಡೇ ಇದು ದುರ್ಗದ ದಂಡೆಂದು ಭಾವಿಸಿ ಷಂಷೇರ್‌ಖಾನ್ ಪಲಾಯನ ಮಾಡುವನು.

ಮುದ್ದಣ್ಣನ ಕ್ರೌರ್ಯತನ, ಪೈಶಾಚಕ ಕೃತ್ಯ ಎಲ್ಲಿಯವರೆಗೆ ಹೋಗಿ ಮುಟ್ಟುತ್ತದೆಯೆಂದರೆ ತಾನೇ ಸರ್ವಾಧಿಕಾರಿ ಎಂಬ ರೀತಿಯಲ್ಲಿ ವರ್ತಿಸುತ್ತಾನೆ. ಲಿಂಗಣ್ಣನಾಯಕರ ಅರಮನೆಗೆ ಮುತ್ತಿಗೆ ಹಾಕಿ ಅವರನ್ನು ಸೆರೆಹಿಡಿಸಿ ಕೊಡಬಾರದ ಎಲ್ಲ ಚಿತ್ರಹಿಂಸೆಗಳನ್ನು ಕೊಟ್ಟು, ಮಾಡಬಾರದ ಎಲ್ಲ ಅಪಮಾನಗಳೆಲ್ಲವನ್ನು ಮಾಡಿ ಕತ್ತು ಕತ್ತರಿಸಿ ಹತ್ಯೆಗೈಯ್ಯುತ್ತಾನೆ. ಮಠದ ಗುರುಗಳನ್ನು ಊರು ಬಿಟ್ಟು

ಹೋಗುವಂತೆ ಮಾಡುತ್ತಾನೆ. ಮಲ್ಲವ್ವನಾಗತಿ ವಿಷ ಕುಡಿದು ಸಾಯುವಂತೆ ನಡೆದುಕೊಳ್ಳುವನು. ಕೊನೆಗೆ ತಾನೇ ಸಾಕಿದ ಚಿರತೆಯಿಂದ ಹತನಾಗುವನು.

೬.೨.೯ ದಳವಾಯಿ ಭರಮಣ್ಣ :

ದಳವಾಯಿ ದೇಸಣ್ಣನ ಮಗ ಭರಮಣ್ಣ. ತನ್ನ ತಂದೆಯನ್ನು ಕೊಂದ ಮುದ್ದಣ್ಣನನ್ನು ಕೊಂದು ಸೇಡು ತೀರಿಸಿಕೊಳ್ಳಬೇಕೆಂದು ಹವಣಿಸುತ್ತಿರುತ್ತಾನೆ. ಯಾವಾಗಲೂ ಪರಶುರಾಮಪ್ಪನವರ ಜೊತೆಗೆ ಇರುವ ಈತ ಲಿಂಗಣ್ಣನಾಯಕ ದುರ್ಗದ ದೊರೆಯಾಗಲು ಆತನ ಮನವೊಲಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ಮುದ್ದಣ್ಣನ ಕ್ರೌರ್ಯತನವನ್ನು ವಿರೋಧಿಸುವ ಈತನು ಲಿಂಗಣ್ಣನಾಯಕನು ದುರ್ಗದ ದೊರೆಯಾಗಿ ನಿರುತ್ಸಾಹದಿಂದ ಮುದ್ದಣ್ಣನ ಕೈಗೊಂಬೆ ಎನ್ನುವ ರೀತಿಯಲ್ಲಿರುವಾಗ ಭರಮಣ್ಣ ಆತನಿಗೆ ಸ್ಥೈರ್ಯದ ಮಾತುಗಳನ್ನು ಹೇಳುತ್ತಾನೆ. ಭರಮಣ್ಣ ಯಾವಾಗಲೂ ಮುದ್ದಣ್ಣನ ವಿರುದ್ಧ ಸೇಡು ತೀರಿಸಿಕೊಳ್ಳಲು ಹಾತೊರೆಯುತ್ತಿರುತ್ತಾನೆ. ಆದರೆ ಪರಶುರಾಮಪ್ಪ ಹಾಗೂ ಗುರುಗಳು ಹೇಳುವ ಶಾಂತಿಯ ಮಾತುಗಳನ್ನು ಕೇಳಿ ರೊಚ್ಚಿಗೇಳುತ್ತಾನೆ. 'ನಾಯಕರು ಅರಮನೆಯಲ್ಲಿ ಸೆರೆಯಾಳು, ಮಠದಲ್ಲಿ ಸ್ವಾಮಿಗಳು ಸೆರೆಯಾಳು ಇನ್ನು ನಮ್ಮ ನಿಮ್ಮ ಕೈಗೆ ಬಳೆ ತೊಡಿಸಿ, ಅರಿಶಿನ ಕುಂಕುಮದ ಬಾಗಿನ ಕೊಟ್ಟರೆ, ನಾವು ಮೀಸೆ ಹೊತ್ತು ಬದುಕಿದ್ದಕ್ಕೂ ಸಾರ್ಥಕವಾದಂತಾಯಿತೆಂದು ಅಸಮಾಧಾನ ವ್ಯಕ್ತಪಡಿಸುತ್ತಾನೆ.'[೨] (ಸುಬ್ಬರಾಯರು ತ.ರಾ, ೨೦೧೫, ರಕ್ತರಾತ್ರಿ, ಪುಟ-೧೪೭) ಮಠಕ್ಕೆ ಹಾಕಿದ್ದ ಕಾವಲಿನ ಬಗ್ಗೆ ಮುದ್ದಣ್ಣನ ಹತ್ತಿರ ಪರಶುರಾಮಪ್ಪನ ಜೊತೆಗೂಡಿ ಬಂದು ಪ್ರಶ್ನಿಸುತ್ತಾನೆ. ನನ್ನ ಕೈಯ್ಯಾರ ದಳವಾಯಿಯ ಹೆಣವನ್ನು ಚೂರು ಚೂರಾಗಿ ಕತ್ತರಿಸಿ ಅವನ ಬೇಟೆಯ ನಾಯಿಗಳಿಗೆ ಉಣಬಡಿಸುವವರೆಗೆ ತಾನು ಸಾಯುವುದಿಲ್ಲ. ಒಂದು ವೇಳೆ ಸತ್ತರೂ ಭೂತವಾಗಿ ಕಾಡಿಯಾದರೂ ಹಗೆ ತೀರಿಸಿಕೊಂಡು ಅವನನ್ನು ಕೊಲ್ಲುತ್ತೇನೆ ಎಂದು ಹೇಳುವ ಮಾತುಗಳು ಅವನಲ್ಲಿರುವ ರೋಷಾಗ್ನಿ ಎಷ್ಟಿತ್ತು ಎಂಬುದು ವ್ಯಕ್ತವಾಗುವುದು.

ಹರಪನಹಳ್ಳಿಯವರು ಅಣಜಿಯ ಕೋಟೆಯ ಮೇಲೆ ದಾಳಿ ಮಾಡಿದಾಗ ತಾನೇ ಮುಂದಾಳತ್ವ ವಹಿಸಿ ಹರಪನಹಳ್ಳಿಯವರ ಸೊಕ್ಕು ಅಡಗಿಸುತ್ತೇನೆಂದು ಶಪಥ ಮಾಡಿ ಹೋಗುತ್ತಾನೆ. ಆದರೆ ಅಲ್ಲಿ ಶತ್ರು ಸೇನೆಯ ಮುಂದೆ ದುರ್ಗದ ಸೇನೆ ಸೋಲನ್ನನುಭವಿಸಿ ಹೋದ ಎರಡು ಸಾವಿರ ಸೈನಿಕರಲ್ಲಿ ಐದನೂರು ಜನ ಮಾತ್ರ ಮರಳಿ ಬರುತ್ತಾರೆ. ದಳವಾಯಿ ಭರಮಣ್ಣ ದೇಹವನ್ನೆಲ್ಲ ಗಾಯ ಮಾಡಿಕೊಂಡು ಬಂದು ನಾನು ನನ್ನ ದೊರೆಗೆ ಅಪಮಾನ ಮಾಡಿದೆ ನಾನಿನ್ನು ಬದುಕಬಾರದು ಎಂದು ಸಾವನ್ನೇ ಬಯಸುತ್ತಾನೆ. ಆದರೆ ಭರಮಣ್ಣನಾಯಕ ದಳವಾಯಿಗೆ

ಸಾಂತ್ವನ ಹೇಳಿ ಮತ್ತೆ ಅಣಜಿಯ ಮೇಲೆ ದಾಳಿ ಮಾಡಲು ಹೇಳಿದಾಗ ದಳವಾಯಿ ಭರಮಣ್ಣ ಈಗ ಸೇನೆಯನ್ನು ಮುನ್ನೆಡೆಸಿ ಯುದ್ಧತಂತ್ರವನ್ನು ಹೂಡಿ ಜಯಗಳಿಸುತ್ತಾನೆ.

೬.೨.೧೦ ಪ್ರಧಾನಿ ನರಸಪ್ಪಯ್ಯ :

ಪ್ರಧಾನಿ ನರಸಪ್ಪಯ್ಯ ದುರ್ಗದ ಪ್ರಧಾನಿಯಾಗಿದ್ದು ಮದಕರಿನಾಯಕನನ್ನು ಜಾನಕಲ್ಲಿನಿಂದ ದುರ್ಗಕ್ಕೆ ಕರೆದುಕೊಂಡು ಬಂದ ನಂತರ ನಾಗತಿ ಪ್ರಧಾನಿಗೆ ರಾಜಕಾರಣದ ವಿದ್ಯೆ ಕಲಿಸುವಂತೆ ಹೇಳಿ ದುರ್ಗದ ಕೀರ್ತಿಗೆ ಕಳಂಕ ತರದಂತಹ ಅರಸು ಇವನಾಗಬೇಕೆನ್ನುವಳು. ಬಿದನೂರಿನ ಚನ್ನಬಸವನಾಯಕ ದುರ್ಗದ ಸಹಾಯ ಬಯಸಿ ಬಂದಾಗ ಎಲ್ಲ ರೀತಿಯಿಂದಲೂ ಪರೀಕ್ಷಿಸಿ ನಾಯಕರಿಗೆ ತಿಳಿಸಿ ಆಶ್ರಯ ನೀಡುವನು. ಹೈದರಾಲಿಯ ವಕೀಲ ನಿಯೋಗದೊಂದಿಗೆ ಬಂದಾಗ ಬೇಕಂತಲೇ ಎರಡು ದಿನ ತಡಮಾಡಿ ನಾಯಕರನ್ನು ಭೇಟಿಮಾಡಿಸುವನು. ಅಂದರೆ ಇಲ್ಲಿ ನರಸಪ್ಪಯ್ಯನವರ ಮುಂಜಾಗ್ರತಾ ಕ್ರಮವನ್ನು ಕಾಣುತ್ತೇವೆ. ಪ್ರಧಾನಿಗಳು ಯಾವಾಗಲೂ ನವಾಬರ ಪರ ಆಡುವ ಮಾತುಗಳು ಕೆಲವು ಸಲ ನಾಯಕರಿಗೆ ಸಂದೇಹಕ್ಕೆಡೆಮಾಡಿಕೊಡುತ್ತವೆ. ಹೀಗಾಗಿ ನಾಯಕರು ಪರಶುರಾಮನಾಯಕನಿಗೆ ಸೂಕ್ಷ್ಮವಾಗಿ ಎಲ್ಲವನ್ನೂ ಅವಲೋಕಿಸುತ್ತ ಒಂದು ಕಣ್ಣಿಡುವಂತೆ ಹೇಳುವರು. ನಾಯಕರು ನವಾಬರ ಅಂಚೆಹರಿಕಾರ ನಾರಾಯಣಯ್ಯನ ಮೋಸ ಬಯಲಿಗೆಳೆದು ಆತನಿಗೆ ಶಿಕ್ಷೆ ವಿಧಿಸುವಂತೆ ನರಸಪ್ಪಯ್ಯನವರಿಗೆ ಹೇಳುತ್ತಾರೆ. ನಾಯಕರ ಮಾತಿನಂತೆ ಶಿಕ್ಷೆ ವಿಧಿಸಿದ ಪ್ರಧಾನಿಗಳು ಮೇನೆಯೊಳಕ್ಕೆ ಮನೆಗೆ ಹೋಗಿ ಅಲ್ಲಿಂದ ತಮ್ಮ ರಾಜೀನಾಮೆಯ ಪತ್ರವನ್ನು ಕಳುಹಿಸುತ್ತಾರೆ. ಅದರಲ್ಲಿ 'ನಮ್ಮಿಂದ ಆದಷ್ಟು ಉಂಡ ಉಪ್ಪಿಗೆ ದ್ರೋಹ ಬಗೆಯದಂತೆ ಸನ್ನಿಧಾನಕ್ಕೆ ಸೇವೆ ಮಾಡಿದೆವು. ನಮಗೂ ವಯಸ್ಸಾಯಿತು. ಬುದ್ಧಿಯೂ ಮಂದವಾಗಿ, ಸ್ವಾಮಿಕಾರ್ಯದಲ್ಲಿ ನಮ್ಮಿಂದ ಮೈಮರೆವಿನ ಅಪಚಾರವಾಯಿತು. ಅದನ್ನು ಕ್ಷಮಿಸುವುದೂ, ಬಿಡುವುದೂ ಪ್ರಭು ಚಿತ್ತಕ್ಕೆ ಸೇರಿದ ಮಾತು. ಮುಂದೆ ತಮ್ಮ ಕಾರ್ಯ ತಪ್ಪಾಗದಂತೆ ನಡೆಯುವ ಐಕ್ಯಕ ಭಾವನೆಯಿಂದ, ಈ ರಾಜೀನಾಮೆ ಪತ್ರವನ್ನು ಕಳಿಸಿದ್ದೇನೆ. ಇದನ್ನು ಒಪ್ಪಿಸಿಕೊಂಡು ನಮ್ಮ ವಯಸ್ಸಿಗೆ ಸರಿಯಾದ ಜಪ, ತಪ, ಪೂಜಾ ಕಾರ್ಯಗಳಲ್ಲಿ ತೊಡಗಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ'[೬೩] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೩೧೪) ಎಂದು ಬರೆದಿರುತ್ತಾರೆ. ಆದರೆ ಆ ಪತ್ರವನ್ನೋದಿದ ನಾಯಕರು ಸಭೆ ಸೇರಿಸಿ ವಿಷಯ ಮನವರಿಕೆ ಮಾಡಿದಾಗ ಯಾರೂ ಏನೇ ಹೇಳಿದರೂ ಪದವಿಯಲ್ಲಿ ಮುಂದುವರೆಯಲು ಒಪ್ಪದ ನರಸಪ್ಪಯ್ಯನವರು 'ಅಂಚೆಹರಿಕಾರರ ಪ್ರಸಂಗ ಬೀದಿಹಗರಣವಾಗಿ, ತನ್ನಿಂದ ತಪ್ಪಾಯಿತೋ ಇಲ್ಲವೋ ಅಂತೂ 'ನರಸಪ್ಪಯ್ಯ ಪ್ರಧಾನಿಪದವಿಗೆ ತಕ್ಕ ಮನುಷ್ಯನಲ್ಲ' ಎಂಬ ಹೆಸರು ನನಗೆ

ಅಂಟಿಹೋಯಿತು. ನಾವು ಹೇಳಿದ ಮಾತನ್ನು ದೊಡ್ಡ ಜನ 'ಸರಿಯೇ'? ಎಂದು ಯೋಚಿಸಲು ಕಾರಣವಾಯಿತು. "ತನ್ನ ಬೆನ್ನ ಹಿಂದೆ ಏನು ನಡೆಯುತ್ತಿದೆ ಎಂಬುದನ್ನೇ ತಿಳಿದುಕೊಳ್ಳಲಾರದ ಈ ಮುದುಕನಿಗೆ ಇನ್ನು ಪ್ರಧಾನಿಯಾಗಿ ಮುಂದುವರಿಯುವ ಚಪಲ. ಮುಪ್ಪಿನ ಕಾಲಕ್ಕೆ ಮೂರನೇ ಹೆಂಡತಿಯನ್ನು ಬಯಸಿದಂತೆ" ಎಂದು ಜನ ಹಿಂದೆ ತಾತ್ಸಾರವಾಗಿ ಆಡಿಕೊಳ್ಳಲು ಅವಕಾಶವಾಯಿತು. ಉಳಿದವರ ಮಾತು ಹೇಳುವುದೇನು. ನನ್ನಲ್ಲೇ ನನಗೆ ನಂಬಿಕೆ ಕೆಟ್ಟುಹೋಯಿತು. ಆದ್ದರಿಂದ ಒಪ್ಪದ ಈ ಪದವಿಯ ಅಲಂಕಾರ ನನಗೆ ಬೇಡ'[೬೪] (ಸುಬ್ಬರಾಯರು ತ.ರಾ, ೨೦೧೪, ದುರ್ಗಾಸ್ತಮಾನ, ಪುಟ-೩೧೭) ಎಂದು ಸಾರಾಸಗಟಾಗಿ ತಿರಸ್ಕರಿಸುವನು. ಜೊತೆಗೆ ಪ್ರಧಾನಿ ಪದವಿಯ ಲಾಂಛನವಾಗಿದ್ದ ಮುದ್ರೆ ಉಂಗುರವನ್ನು ನಾಯಕರಿಗೆ ಒಪ್ಪಿಸುವನು.

ತೀರ್ಥಯಾತ್ರೆಗೆ ಪತ್ನಿಸಮೇತವಾಗಿ ಹೋದ ನರಸಪ್ಪಯ್ಯ ದುರ್ಗಕ್ಕೆ ಮರಳುವಾಗ ನವಾಬರ ಸೈನಿಕನೊಬ್ಬ ಈತನನ್ನು ನವಾಬನ ಹತ್ತಿರ ಕರೆದುಕೊಂಡು ಹೋಗುವನು. ಅಲ್ಲಿ ಆತನನ್ನು ಗುರುತಿಸಿದ ನಾರಾಯಣಯ್ಯ ದುರ್ಗದ ಪ್ರಧಾನಿಗಳೆಂದೆ ಸಂಭೋದಿಸಿದಾಗ ನಾನೀಗ ಪ್ರಧಾನಿಯಲ್ಲ ಕೇವಲ ನರಸಪ್ಪಯ್ಯ ಎಂದು ಹೇಳುವರು. ಹೈದರಾಲಿ ನರಸಪ್ಪಯ್ಯನನ್ನು ಗೌರವದಿಂದ ಕರೆದುಕೊಂಡು ಅತಿಥಿಗಳ ಡೇರೆಯಲ್ಲಿ ಇರಿಸುವಂತೆ ಹೇಳುವನು. ಪೂರ್ಣಯ್ಯ ಈತನನ್ನು ಭೇಟಿಯಾಗಲು ಬಂದಾಗ ಆತನ ಬಾಯಿಂದ ಯುದ್ಧದ ಎಲ್ಲ ವಿವರಗಳನ್ನು ಕೇಳಿ ತಿಳಿದುಕೊಳ್ಳುವನು. ತನಗೆ ಬಾಯಾರಿಕೆ ಎಂದು ಎರಡು ಲೋಟ ನೀರು ತರಿಸಿ ಒಂದು ಪತ್ನಿ ಭಾಗೀರಥಿಬಾಯಿಗೆ ಕೊಟ್ಟು ನಾವು ಯಾತ್ರೆ ಮಾಡಿದ್ದು ಸಾರ್ಥಕವಾಯಿತೆಂದು ಹೇಳುತ್ತ ಲೋಟದ ನೀರಿನಲ್ಲಿ ಏನೋ ಕಸರಿದೆ ಎಂದು ಬೆರಳಾಡಿಸಿ ಆ ನೀರು ಕುಡಿದು ಕಣ್ಣುಮುಚ್ಚುತ್ತಾರೆ. ಅವರ ಕೈಯಿಂದ ಲೋಟ ಕಳಚಿ ಬಿದ್ದು ಉಂಗುರ ನೆಲಕ್ಕುರುಳುವುದು. ಆದರೆ ಲೋಟದಲ್ಲಿ ಏನೋ ಒಂದು ಬಿಳಿಚೂರ್ಣ ಕಾಣುವುದು. ಇತ್ತ ಪತ್ನಿಯೂ ಸಹ ಗುರುರಾಯ ನಿನ್ನ ಪಾದಕ್ಕೆ ಒಪ್ಪಿಸಿಕೋ ತಂದೆ ಎಂದು ಕಣ್ಣುಮುಚ್ಚುವಳು. ಆದರೆ ಕಾದಂಬರಿಯಲ್ಲೇ ಮತ್ತೆ ಮುಂದುವರಿದು ತ.ರಾ.ಸು ರವರು ನರಸಪ್ಪಯ್ಯ ತಾವು ನವಾಬರ ಬಂಧಿಯಾಗಿರುವ ವಿಷಯವನ್ನು ಬರೆದು ದುರ್ಗಕ್ಕೆ ಕಳಿಸಿಕೊಡುವರೆಂದು ಬರೆಯುತ್ತಾರೆ. ಜೊತೆಗೆ ಅವರ ಮಗನಾದ ಶ್ರೀಪತಿರಾಯನೇ ತಂದೆಯ ಬಂಧನಕ್ಕೆ ಮರುಗದೆ ತಾಯಿಯ ಅಂತ್ಯಸಂಸ್ಕಾರ ಮಾಡಿ ಮನೆಯಲ್ಲಿದ್ದ ಮುದ್ರೆಯುಂಗುರ, ಕೆಲವು ರಹಸ್ಯ ಪತ್ರಗಳನ್ನು ತೆಗೆದುಕೊಂಡು ನವಾಬನ ಆಪ್ತರಿಗೆ ಕೊಟ್ಟು ದುರ್ಗಕ್ಕೆ ದ್ರೋಹ ಬಗೆಯುವ ಕೆಲಸ ಮಾಡುವನು. ತಂದೆಯ ಹೆಸರಿನಲ್ಲಿ ಎಲ್ಲ ಪಾಳೆಯಗಾರರಿಗೆ ನನ್ನನ್ನು ಬದುಕಿಸಬೇಕೆಂದಿದ್ದರೆ ನವಾಬನಿಗೆ ಸಹಾಯ ಮಾಡುವಂತೆ ಹೇಳಿ ಪತ್ರ ಬರೆಯುವನು ಎಂಬ ವಿಷಯ ಪ್ರಸ್ತಾಪಿಸಿದ್ದಾರೆ.

೬.೨.೧೧ ಪರಶುರಾಮನಾಯಕ :

ಪರಶುರಾಮನಾಯಕ ಮದಕರಿನಾಯಕನ ತಮ್ಮನಾಗಿದ್ದು ಮದುವೆಯಾದ ನಂತರ ತಮ್ಮನಿಗೆಂದು ಚಿಕ್ಕಣ್ಣನಾಯಕರ ಅರಮನೆಯನ್ನು ತೆರವು ಮಾಡಿಸಿ ಕೊಡುತ್ತಾನೆ. ಪ್ರಧಾನಿ ಕಳ್ಳಿನರಸಪ್ಪಯ್ಯನವರ ಕೈಯಲ್ಲಿ ಪರಿಣತಿ ಪಡೆಯಲು ಅವರ ಕೈಕೆಳಗೆ ಉಪಪ್ರಧಾನಿಯನ್ನಾಗಿ ಮಾಡುತ್ತಾನೆ. ದುರ್ಗದ ರಾಜಕೀಯ ವಿದ್ಯಮಾನಗಳಲ್ಲಿ ದಿನದಿಂದ ದಿನಕ್ಕೆ ಬದಲಾದ ಸಂದರ್ಭದಲ್ಲಿ ಪರಶುರಾಮನಾಯಕ ಎಲ್ಲ ವಿಷಯಗಳನ್ನು ಮದಕರಿನಾಯಕರ ಹತ್ತಿರ ಬಂದು ಚರ್ಚಿಸುವನು. ನರಸಪ್ಪಯ್ಯನವರು ಯಾವಾಗಲೂ ನವಾಬರ ಪರವಾಗಿಯೇ ಮಾತನಾಡುವರಲ್ಲ ಎಂದು ಸಮಾಲೋಚಿಸುತ್ತ ಎಲ್ಲರ ಮೇಲೆ ಒಂದು ಕಣ್ಣಿಡಬೇಕೆಂಬ ನಾಯಕರ ಸಲಹೆಯಂತೆ ಯಾವೊಂದು ವಿಷಯವನ್ನು ಸದರವಾಗಿ ತೆಗೆದುಕೊಳ್ಳದೇ ಸೂಕ್ಷ್ಮವಾಗಿ ಅವಲೋಕಿಸುವ ಗುರುತರವಾದ ಜವಾಬ್ದಾರಿಯನ್ನು ತೆಗೆದುಕೊಳ್ಳುವನು.

ಹೈದರಾಲಿ ದುರ್ಗದ ಮೇಲೆ ದಾಳಿ ಮಾಡಿದಾಗ ಪರಶುರಾಮನಾಯಕ ಸೇನೆಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಡುವುದರ ಜೊತೆಗೆ ಮದಕರಿನಾಯಕರ ಜೊತೆ ಗುಪ್ತವಾಗಿ ಮಾರುವೇಷದಲ್ಲಿ ಓಡಾಡುತ್ತ ಜನರು ತಮ್ಮ ಬಗ್ಗೆ ಏನು ಹೇಳುವರೋ ಎಂಬ ನಾಯಕನ ಮಾತಿಗನುಗುಣವಾಗಿ ಹೋಗುತ್ತಾನೆ. ಜನರು ಮುಗ್ಗಲು ರಾಗಿಯನ್ನು ತಿನ್ನುತ್ತಾ ರಾಜನ ಬಗ್ಗೆ ನಿಂದನೆಯ ಮಾತುಗಳನ್ನಾಡಿದ್ದನ್ನು ಕೇಳಿಸಿಕೊಂಡು ಬಂದು ವೇದನೆ ಪಡುತ್ತಾನೆ. ಹೈದರಾಲಿ ಯುದ್ಧ ಸಮಾಪ್ತಿಗೊಳಿಸಬೇಕೆಂದರೆ ಹಣವನ್ನು ಮಾತ್ರವಲ್ಲದೆ ಪರಶುರಾಮನಾಯಕನನ್ನು ಒತ್ತೆ ಇಡಬೇಕೆಂದು ಹೇಳಿದಾಗ ಪರಶುರಾಮನಾಯಕ ಜನರ ಕಷ್ಟಕ್ಕಿಂತ ಅದು ದೊಡ್ಡದಲ್ಲವೆಂದು ಅದಕ್ಕೆ ಒಪ್ಪುವಂತೆ ತನ್ನ ಅಣ್ಣನಾದ ಮದಕರಿನಾಯಕನಿಗೆ ಹೇಳುತ್ತಾನೆ. ನವಾಬನ ವಿರುದ್ಧ ಹೋರಾಡಲು ಹೋದ ಮದಕರಿನಾಯಕ ನೆಲಕ್ಕುರುಳಿದಾಗ ಪರಶುರಾಮನಾಯಕ ಅಣ್ಣಾ ಎಂದು ಸ್ತಬ್ಧವಾಗಿ ನಿಲ್ಲುವನು.

೬.೨.೧೨ ಸಂಗೊಳ್ಳಿ ರಾಯಣ್ಣ :

ಕಿತ್ತೂರಿನ ವೀರರಾಣಿ ಚೆನ್ನಮ್ಮನ ಬಲಗೈ ಭಂಟ ಸಂಗೊಳ್ಳಿ ರಾಯಣ್ಣ. ಚೆನ್ನಮ್ಮ ಬ್ರಿಟೀಷರ ಬಂಧಿಯಾಗಿ ಜೈಲಿನಲ್ಲಿದ್ದಾಗ, ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆದ ದಂಗೆಯ ನೇತಾರ. ಸಂಗೊಳ್ಳಿ ಗ್ರಾಮದ ತಳವಾರನಾಗಿದ್ದ ರಾಯಣ್ಣ, ಕಿತ್ತೂರು ಸಂಸ್ಥಾನದ ಪ್ರಜೆ. ರಾಯಣ್ಣನ ವೃತ್ತಾಂತವನ್ನು ಜನಪದರು ಹೀಗೆ ಬಣ್ಣಿಸಿದ್ದಾರೆ.

'ಬೆಳಗಾವಿ ಜಿಲ್ಲಾ ಪೈಕಿ ಸಂಪಗಾಂವಿ ತಾಲ್ಲೂಕಿನೊಳಗ

ಸಂಗವಳ್ಳಿ ಎಂಬ ಸಣ್ಣಹಳ್ಳಿ ಇತ್ತೋ ಹದ್ದಿನೊಳಗ

ತಾಯಿ ಕೆಂಚವ್ವನ ಹೊಟ್ಯಾಗ ಬೆಳದಾನೋ ರಾಯಣ್ಣಾಗ

ಭರಮಪ್ಪ ಎಂಬ ತಂದಿ ಇದ್ದನವಗ

ರೋಗಣ್ಣವರ ರಾಯನೆಂದು ಹೆಸರು ಆದಾನು ದೇಶದ ಮ್ಯಾಗ

ಜಾತಿಯಿಂದ ರಾಯಣ್ಣ ತಾನು ಕುರುಬನಾಗಿದ್ದನಾಗ

ಸಂಗವಳ್ಳಿ ವಾಲೀಕಾರಿಕೆ ಇತ್ತ ಅವರ ವಂಶದಾಗ'[೬೫] (ಮೋಹನಕೃಷ್ಣ ರೈ.ಕೆ(ಸಂ), ೨೦೦೯, ಪುಟ-೧೪೦)

ಸಂಗೊಳ್ಳಿ ರಾಯಣ್ಣನ ಕುಟುಂಬ ಮೂಲ ಕುರಿತು ಹೇಳುವ ಲಾವಣಿಯ ಈ ತುಣುಕು ತುಂಬಾ ಮಹತ್ವದ್ದಾಗಿರುವುದು. 'ರಾಯಣ್ಣನ ಅಜ್ಜನಾದ ರಾಗಪ್ಪನು ವೀರಪ್ಪ ದೇಸಾಯಿಯ ವತಿಯಿಂದ 'ಚೆಣಗಿ ಕೋವಾಡ' ಯುದ್ಧದಲ್ಲಿ ತನ್ನ ಶೌರ್ಯವನ್ನು ತೋರಿಸಿದ್ದರಿಂದ ಮನೆತನಕ್ಕೆ 'ಸಾವಿರ ಒಂಟಿ ಸರದಾರ' ಎಂಬ ಬಿರುದು ಸಿಕ್ಕಿತ್ತು. ರಾಯಣ್ಣನ ತಂದೆಯ ಹೆಸರು ಭರಮಪ್ಪ, ತಾಯಿ ಕೆಂಚವ್ವ, ಈತ ೧೫-೦೮-೧೭೯೮ ರಲ್ಲಿ ಹುಟ್ಟಿದ ೨೬-೦೧-೧೮೩೧ ರಲ್ಲಿ ಕಾಲವಾದ. ರಾಯಣ್ಣನಿಗೆ ಮದುವೆಯಾಗಿತ್ತು. ಇವನ ಹೆಂಡತಿ ಮಲ್ಲವ್ವ, ಇವರಿಗೆ ಹನುಮಂತನೆಂಬ ಪುತ್ರನಿದ್ದನು. ಮಲ್ಲವ್ವಳು ನೇಗಿನಹಾಳದ ಹಳಬ ಲಕ್ಕಪ್ಪನ ತಂಗಿ. ಕೊನೆಗೆ ಲಕ್ಕಪ್ಪನೇ ರಾಯಣ್ಣನನ್ನು ಹಿಡಿದುಕೊಡುತ್ತಾನೆಂದು ತಿಳಿದುಬರುತ್ತದೆ'[೬೬] (ಮಠದ ಸಿ.ವಿ, ೨೦೦೪, ಪುಟ-೧೦೧) ಆದರೆ ಕಟ್ಟೀಮನಿಯವರ ಸಂಗೊಳ್ಳಿ ರಾಯನಾಯಕದಲ್ಲಿ ಇವನ ಹೆಂಡತಿ ನಿಂಗಿ, ಹೆಚ್ಚಾಗಿ ತವರೂರಿನಲ್ಲಿಯೇ ಇರುತ್ತಿದ್ದಳು ಮಕ್ಕಳಿರಲಿಲ್ಲ. ಹನುಮಂತ ತನ್ನ ಅಣ್ಣ ಸಿದ್ಧಣ್ಣನ ಮಗನೆಂದು ಪ್ರಸ್ತಾಪಿಸಲ್ಪಟ್ಟಿದೆ.

ರಾಯಣ್ಣ ಸೈನ್ಯ ಕಟ್ಟಿ ಇಂಗ್ಲೀಷರ ವಿರುದ್ಧ ಹೋರಾಡುತ್ತಿರುವಾಗ ರಾಯಣ್ಣನ ಸಂಗಡಿಗರು ಹಲ್ಯಾಳ ಕೋಟೆಗೆ ಮುತ್ತಿಗೆ ಹಾಕುತ್ತಾರೆ. ಭೀಕರ ಕದನವಾಗಿ ಇಂಗ್ಲೀಷರು ಹಣ್ಣು ಹಣ್ಣಾಗುತ್ತಾರೆ. ಹಲ್ಯಾಳದ ಮುತ್ತಿಗೆಯ ನಾಲ್ಕನೆಯ ದಿನ ರಾಯಣ್ಣ ಕೊಳದಲ್ಲಿ ಮೀಯುತ್ತಿದ್ದಾಗ ವೆಂಕಣ್ಣಗೌಡ, ಲಿಂಗಣ್ಣಗೌಡ, ಲಕ್ಕಪ್ಪ ಮೂವರು ರಾಯಣ್ಣನ ಸೈನ್ಯ ಸೇರಿಕೊಂಡು ಅವನನ್ನು ಮೋಸದಿಂದ ಹಿಡಿದುಕೊಡುತ್ತಾರೆ. ಕಿತ್ತೂರು ಸೈನ್ಯಕ್ಕೆ ಸೋಲಾಗುತ್ತದೆ. ರಾಯಣ್ಣನನ್ನು ಸೆರೆಹಿಡಿದು ಗಲ್ಲಿಗೆ ಹಾಕುತ್ತಾರೆ. ರಾಯಣ್ಣ ತಾನು ಫಾಸೀ ಶಿಕ್ಷೆಗೊಳಗಾಗಿರುವ ಮುನ್ನ ಅಳುತ್ತಿದ್ದ ತನ್ನ ತಾಯಿ

ಕೆಂಚವ್ವನನ್ನು ಸಮಾಧಾನ ಮಾಡುತ್ತಾನೆ. 'ಅಳಬ್ಯಾಡ ಅವ್ವ, ಅಳಬ್ಯಾಡ ನನಗ ಸಂತೋಷದಿಂದ ಅಪ್ಪಣೆ ಕೊಡು. ನಾನೊಬ್ಬ ಹೋದರೂ ಇನ್ನೊಬ್ಬ ಮಗ ಅದಾನ, ಮೊಮ್ಮಗ ಅದಾನ. ನಾನೇನು ಕಳ್ಳತನ, ಸುಳ್ಳುತನ ಮಾಡಿ ಫಾಸೀ ಹೋಗುತ್ತಿಲ್ಲ. ಶೂರನಂಗ ಲಢಾಯಿ ಮಾಡಿ ವೀರಸ್ವರ್ಗ ಪಡೀತಿದೀನಿ. ಮುಂದಿನ ಜನ್ಮದಲ್ಲಿ ಮತ್ತೆ ಹುಟ್ಟಿಸಿದರ ನಿನ್ನ ಹೊಟ್ಟೆಯಲ್ಲೇ ಹುಟ್ಟಿ ಬರುವಂತೆ ಮಾಡಂತ ದೇವರನ್ನು ಬೇಡಕೊಂತೀನಿ ಎಂದು ಹೇಳಿ, ಅಧಿಕಾರಿಯ ಕಡೆಗೆ ತಿರುಗಿ ನನ್ನ ಶವವನ್ನು ಹುಗೀಲಿಕ್ಕೆ ನನ್ನ ಮನೆಯವರ ವಶಕ್ಕೆ ಕೊಡಿರಿ. ನನ್ನ ಸಮಾಧಿಯ ಮ್ಯಾಲ ಆಲದಗಿಡಾ ಹಚ್ಚಿರಿ'[೬೭] (ಬಸವರಾಜ ಕಟ್ಟೀಮನಿ, ೨೦೦೮, ಸಂಗೊಳ್ಳಿ ರಾಯನಾಯಕ, ಪುಟ-೧೭೮) ಎಂದು ಫಾಸಿಯ ಕಂಬಕ್ಕೇರುವನು. ರಾಯಣ್ಣ ಈ ಜಗತ್ತನ್ನು ಬಿಟ್ಟು ಹೋದಾಗ ಕೇವಲ ಮೂವತ್ತೆಂಟರ ಪ್ರಾಯದವನಾಗಿದ್ದನು. ಕಿತ್ತೂರು ರಾಜ್ಯದ ಸ್ವಾತಂತ್ರ್ಯಕ್ಕಾಗಿ, ಧೀರನಾಗಿ ಹೋರಾಡಿ ಮಡಿದ ಸಂಗೊಳ್ಳಿ ರಾಯಣ್ಣ ಇಂದಿಗೂ, ಕರ್ನಾಟಕದ ಸ್ಫೂರ್ತಿಯ ಸೆಲೆಯಾಗಿದ್ದಾನೆ. ಆತನ ಶೂರತನ ಕುರಿತು ಲಾವಣಿಗಳು ಇಂದಿಗೂ ಕಿತ್ತೂರು ಭಾಗದ ಜನರ ನಾಲಿಗೆಯ ಮೇಲೆ ಜೀವಂತವಾಗಿವೆ.

ರಾಯಣ್ಣನ ನೇತೃತ್ವದಲ್ಲಿ ಈ ನಾಡಿನ ಜನಸಾಮಾನ್ಯರೂ ತಮ್ಮ ಜೀವವನ್ನೇ ಪಣಕ್ಕಿಟ್ಟು ಹೋರಾಡುತ್ತಾರೆ. ಅಂದಿನ ರಾಜಕೀಯ ಸನ್ನಿವೇಶದಲ್ಲಿ ಬ್ರಿಟೀಷರ ಎಂಜಲು ತಿನ್ನುತ್ತಿದ್ದ ಕುಲಕರ್ಣಿ, ಅಮಲ್ದಾರರು ಜನಸಾಮಾನ್ಯರ ಬದುಕಿಗೆ ಹೇಗೆ ಮಾರಕವಾಗಿದ್ದರು ಎಂಬುದನ್ನು ಕಾಣುತ್ತೇವೆ. ಜೊತೆಗೆ ರಾಯಣ್ಣನ ಅಪ್ರತಿಮ ವ್ಯಕ್ತಿತ್ವ, ಸಂಘಟನಾ ಚಾತುರ್ಯ, ಹೋರಾಟದ ಕೆಚ್ಚು, ಕಿತ್ತೂರನ್ನು ಸ್ವತಂತ್ರಗೊಳಿಸಬೇಕೆಂಬ ಅಭಿಲಾಷೆ ಇವೆಲ್ಲ ಅಂಶಗಳನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

೬.೨.೧೩ ಬಿಚ್ಚುಗತ್ತಿ ಚೆನ್ನಬಸಪ್ಪ :

ಬಿಚ್ಚುಗತ್ತಿ ಚೆನ್ನಬಸಪ್ಪ ಮತ್ತು ಸಂಗೊಳ್ಳಿ ರಾಯಣ್ಣ ಆತ್ಮೀಯ ಸ್ನೇಹಿತರು. ಈತ ಸಂಗೊಳ್ಳಿಯ ಸಮೀಪದಲ್ಲಿಯೇ ಇರುವ ಅಮಟೂರಿನ ಬಂಟ. ಇವರಿಬ್ಬರೂ ಬಾಲ್ಯದಿಂದಲೂ ಕೂಡಿ ಬೆಳೆದವರು. ಕಿತ್ತೂರ ಚೆನ್ನಮ್ಮ ರಾಣಿಯವರ ಅಂಗರಕ್ಷಕ ಪಡೆಯಲ್ಲಿ ಕೆಲಸ ಮಾಡುವ ಈತನನ್ನು ಕತ್ತಿ ತಿರುಗಿಸುವ ವಿದ್ಯೆಯಲ್ಲಿ ಮೀರಿಸುವವರು ಮತ್ತೊಬ್ಬರಿರಲಿಲ್ಲ. ಇವನು ಎಂದೂ ತನ್ನ ಕತ್ತಿಯನ್ನು ಒರೆಗಾಣಿಸಿದವನಲ್ಲ. ಹೀಗಾಗಿ ಈತನ ಹೆಸರಿನ ಹಿಂದೆ ಬಿಚ್ಚುಗತ್ತಿ ಎಂಬ ನಾಮಧೇಯ ಸೇರಿಕೊಂಡಿತು. ಕುಶಾಗ್ರಮತಿಯಾದ ಈತ ನೆಲಕ್ಕೆ ಕಿವಿ ಹಚ್ಚಿ ಎಷ್ಟು ಅಂತರದ ಮೇಲೆ ಎಷ್ಟು ಸೈನ್ಯವು ಬರುತ್ತದೆಯೆಂದು ಹೇಳುತ್ತಿದ್ದನು. ಕಿತ್ತೂರನ್ನು ಸ್ವತಂತ್ರಗೊಳಿಸುವ ವಿಚಾರದಲ್ಲಿ ರಾಯಣ್ಣನ ಜೊತೆಗೆ ಈತನ ಪಾತ್ರವು ಅತ್ಯಂತ ಮಹತ್ತರವಾದುದು.

'ಕೂಡಿದರೋ ಗೆಣಿಯಾರು! ಮಾಡಿದರು ಮಸಲತ್ತು

ನೋಡಬೇಕಿವರ ಗಮ್ಮತ್ತು

ತಾಯಿ ಹೊಟ್ಟಲಿ ಹುಟ್ಟಿ ನಾವು

ತಾಯಿಯ ಮೊಲಿಹಾಲ ಕುಡಿಲಿಲ್ಲರೆಪ್ಪ

ಬಾಯಿ ಇಸವರದ ಬಳಲಿ ಸಾಯುವ ನಾವು

ಅವರಿಗೆ ನಮಗೆ ಆಗಲೆರೆಪ್ಪ ರಾಜೇದಮ್ಯಾಗ ಇನ್ನ

ನೋಡಬೇಕಿವರ ಗಮ್ಮತ್ತು ರಾಯಪ್ಪ

ಕೂಡಿಸಲೆ ದಂಡ ಬೆಳತನಕಾ'[೬೮] (ಮಠದ ಸಿ.ವಿ, ೨೦೦೪, ಪುಟ-೯೯)

ಬಿಚ್ಚುಗತ್ತಿ ಚೆನ್ನಬಸಪ್ಪ ದಂಡು ಕೂಡಿಸಲು ರಾಯಣ್ಣನನ್ನು ಹುರಿದುಂಬಿಸುತ್ತಾನೆ. ದಂಡನ್ನು ಕಟ್ಟುವ ಸಂದರ್ಭದಲ್ಲಿ ಸೈನಿಕರನ್ನು ಕೂಡಿಸಿಕೊಂಡು ಬರಲೆಂದು ಅಂಬಡಗಟ್ಟಿಗೆ ಹೋಗಿದ್ದ. ಬರುವಷ್ಟರಲ್ಲಿಯೇ ಲಿಂಗನಗೌಡರೂ, ವೆಂಕನಗೌಡರೂ ಫಿತೂರಿಯಾಗಿ ರಾಯಣ್ಣನನ್ನು ಮೋಸದಿಂದ ಹಿಡಿದುಕೊಟ್ಟಿರುವ ವಿಷಯ ತಿಳಿದ ಚೆನ್ನಬಸಪ್ಪ ಒಂದೆರಡು ತಾಸು ಹುಚ್ಚನಂತೆ ಕುಳಿತುಬಿಡುತ್ತಾನೆ. ಕಿತ್ತೂರ ನಾಡಿನ ಗಂಡುಗಲಿ ರಾಯಣ್ಣನಂಥವನೇ ಬಂದಿಯಾದ ಮೇಲೆ ಅವನ ಜೊತೆಗಾರನಾದ ನಾನಾದರೂ ಹೊರಗೆ ಇದ್ದು ಮಾಡುವುದೇನಿದೆ? ಎಂದು ಪರಿತಪಿಸುವನು. ಅವನಿಗೆ ಫಾಸೀ ಶಿಕ್ಷೆಯಾಗಿ ಜಗತ್ತನ್ನೇ ಬಿಟ್ಟು ಹೋದಾಗ ಅವನಾಸೆಯಂತೆ ಅವನ ಸಮಾಧಿಯ ಮೇಲೆ ಆಲದ ಮರವೊಂದನ್ನು ನೆಡುವನು.

ಬಿಚ್ಚುಗತ್ತಿ ಚೆನ್ನಬಸಪ್ಪನ ಸ್ವಾಮಿನಿಷ್ಠೆ, ಕಿತ್ತೂರಿನ ಸೇವಕನಾಗಿ, ರಾಯಣ್ಣನಿಗೆ ಆತ್ಮೀಯ ಗೆಳೆಯನಾಗಿ, ನಾಡಸೇವೆಗೆ ತನ್ನ ಜೀವನವನ್ನೇ ಮುಡುಪಿಡುವನು. ಇವನ ಆದರ್ಶ ಚರಿತ್ರೆ ಎಲ್ಲರಿಗೂ ಮಾದರಿ. ಈತ ತನ್ನ ಸ್ನೇಹಿತ ರಾಯಣ್ಣ ಸತ್ತನಂತರ ವೈರಾಗ್ಯ ತಾಳಿ ಖಡ್ಗವನ್ನು ತ್ಯಜಿಸಿ, ರಾಯಣ್ಣನನ್ನು ಗಲ್ಲಿಗೇರಿಸಿದ್ದ ಜಾಗದ ಬಳಿ ಸನ್ಯಾಸಿ ವೇಷದಲ್ಲೇ ಇದ್ದು ಕೊನೆಗೊಂದು ದಿನ ನಿಧನನಾದನು.

೬.೨.೧೪ ಟೆಹುಟಿ :

ಟೆಹುಟಿ ಐಗುಪ್ತದ ಒಬ್ಬ ಮುಖ್ಯ ಕಂದಾಯ ಅಧಿಕಾರಿ; ಮಹತ್ವಾಕಾಂಕ್ಷಿಯಾಗಿದ್ದು ಇಡೀ ದೇಶದಲ್ಲಿ ಪ್ರಾಂತಕ್ಕೊಬ್ಬರಂತೆ ನಾಲ್ವತ್ತು ಜನ ಪ್ರಾಂತಪಾಲರಿದ್ದರೆ, ಕಂದಾಯದ

ಅಧಿಕಾರಿಗಳಿರುವುದು ಮೂರೇ ಜನ. ಹೀಗಾಗಿ ಟೆಹುಟಿ ಅಧಿಕಾರದ ವರ್ಚಸ್ಸಿನಿಂದ ಎಲ್ಲರನ್ನು ನಿಕೃಷ್ಟವಾಗಿ ಕಾಣುತ್ತ ದರ್ಪದಿಂದಲೇ ನಡೆದುಕೊಳ್ಳುತ್ತಿರುತ್ತಾನೆ. ನೀರಾನೆ ಪ್ರಾಂತದವರು ಕಂದಾಯವನ್ನು ಕಟ್ಟಲಾಗದೆ ಮನವಿ ಸಲ್ಲಿಸಲು ಬರುತ್ತಿರುವ ವಿಷಯ ಪ್ರಾಂತಪಾಲನಾದ ಗೇಬುವಿನಿಂದ ತಿಳಿದು ಕೆಂಡಾಮಂಡಲನಾಗುತ್ತಾನೆ. ಅರಮನೆ ವೆಚ್ಚಕ್ಕೆ ಆಡಳಿತ ವೆಚ್ಚಕ್ಕೆ ಅಪಾರ ಧನಕನಕ ಬೇಕು. ಅದು ಬರುವುದು ಪ್ರಜೆಗಳು ನೀಡುವ ಕಂದಾಯದಿಂದ, ತೆರಿಗೆಯಿಂದ. ರೊಟ್ಟಿ ತಿಂದಷ್ಟು, ಖಿವವ ಕುಡಿದಷ್ಟು ಸುಲಭ ಅಲ್ಲ ರಾಜ್ಯಭಾರ ಮಾಡುವುದು ಎಂದು ನುಡಿಯುತ್ತಾನೆ. ಟೆಹುಟಿಯ ವರ್ತನೆ ಗೇಬುಗೆ ವಿಚಿತ್ರವಾಗಿ ಕಾಣಿಸುತ್ತದೆ.

ಮೆನೆಪ್‌ಟಾ ನೀರಾನೆ ಪ್ರಾಂತದ ಜನರ ನಾಯಕನಾಗಿ ಕಂದಾಯ ಇಮ್ಮಡಿಯಾಗುತ್ತಿರುವುದರಿಂದ ತಮಗಾಗುತ್ತಿರುವ ಅನ್ಯಾಯ, ಕಷ್ಟಗಳನ್ನು ತೋಡಿಕೊಳ್ಳುತ್ತಾನೆ. ಆದರೆ ಯಾವುದಕ್ಕೂ ಜಗ್ಗದ ಕಂದಾಯ ಅಧಿಕಾರಿ ಮನುಷ್ಯನಿಗೆ ಅವನ ನಾಲಗೆಯೇ ವೈರಿ. ಆ ನಾಲಗೆಯಿಂದಲೇ ಅವನು ನಾಶವಾಗ್ತಾನೆ. ಗೋಧಿಯ ಕಣಜಕ್ಕಿಂತಲೂ ದೊಡ್ಡದು ಮನುಷ್ಯನ ಹೊಟ್ಟೆ ಎಂದು ಅಪಮಾನಗೊಳಿಸುತ್ತಾನೆ. ಅವರ ಸಮಸ್ಯೆಗೆ ಸ್ಪಂದಿಸುವುದರ ಬದಲಾಗಿ ನೀರಾನೆಯ ತೊಗಲಿನ ಚಾವಟಿಯಿಂದ ಹೊಡೆಸುತ್ತಾನೆ. ಇಲ್ಲಿ ಗೇಬುವಿನ ಆಡಳಿತದ ವೈಖರಿ ಸರಿಯಿಲ್ಲದಿರುವುದರಿಂದ ಜನರ ವರ್ತನೆ ಹೀಗಿದೆ ಎಂದು ನಿರ್ಧರಿಸಿಕೊಳ್ಳುತ್ತ ಇಡೀ ರಾತ್ರಿ ಕೈದಿಯನ್ನು ಬಿಡದಿದ್ದರೆ ಜನ ತಣ್ಣಗಾಗುತ್ತಾರೆ. ನಾಳೆ ಬೆಳಗಿನಿಂದಲೇ ಕಂದಾಯ ವಸೂಲಿ ಪ್ರಾರಂಭಿಸಿ ಎಂದು ಗೇಬುವಿಗೆ ಆದೇಶವಿತ್ತನು.

ಬೆಳಗಿನ ಸಮಯದಲ್ಲಿಯೇ ನೀರಾನೆ ಪ್ರಾಂತದ ಜನರೆಲ್ಲರೂ ಒಗ್ಗಟ್ಟಾಗಿ ಬಂದಾಗ ಟೆಹುಟಿ ಅವರ ಮೇಲೆ ಬಾಣ ಪ್ರಯೋಗ ಮಾಡಿಸಿ, ಕೆಲವರು ಗಾಯಗೊಂಡು ಮತ್ತಷ್ಟು ರೊಚ್ಚಿಗೇಳುವಂತೆ ಮಾಡುತ್ತಾನೆ. ಕಂದಾಯ ವಸೂಲಿಗೆಂದು ಹೋದ ಅಧಿಕಾರಿಗಳು ತಾವು ಬದುಕಿ ಉಳಿದರೆ ಸಾಕೆಂದು ಓಡಿಬರುತ್ತಾರೆ ಸೆಡ್ ಉತ್ಸವಕ್ಕೆಂದು ಮೆನೆಪ್‌ಟಾ ಹೋದಾಗ ಪೆರೋನಿಗೆ ಈತನ ಬಗ್ಗೆ ಹೇಳಿ ಶಿರಚ್ಛೇದನ ಶಿಕ್ಷೆಯಾಗುವಂತೆ ಮಾಡುವನು.

೬.೨.೧೫ ಮೆನೆಪ್‌ಟಾ :

ಮೆನೆಪ್‌ಟಾ ನೀರಾನೆ ಪ್ರಾಂತದ ಜನನಾಯಕ. ಈತನು ಕಂದಾಯ ಅಧಿಕಾರಿಯಾದ ಟೆಹುಟಿಗೆ ಮನವಿ ಸಲ್ಲಿಸಲು ತನ್ನ ಪ್ರಾಂತದ ಕೆಲವರೊಡನೆ ಹೋಗುತ್ತಾನೆ. ಅಲ್ಲಿ ಪೆರೋ ಪ್ರಭುವಿನ ಆಯುರಾರೋಗ್ಯ ಹೆಚ್ಚಲಿ ಎಂದು ಆಶಿಸುತ್ತ ಬಡರೈತರು, ನೆಯ್ಗೆಯವರು, ಕಲ್ಲುಗಾರೆ ಕೆಲಸದವರು, ಮರಗೆಲಸದವರು ಇನ್ನಿತರ ಬೇರೆ ಬೇರೆ ಕಸಬುದಾರರು ಇವರೆಲ್ಲರ ಪರವಾಗಿ ದೇಶದ ಕಂದಾಯ

ಅಧಿಕಾರಿಯ ಸನ್ನಿಧಿಯಲ್ಲಿ ಮನವಿ ಸಲ್ಲಿಸುವುದಕ್ಕೆ ನಿಂತಿದ್ದೇನೆ ಎಂದು ಮಾತು ಆರಂಭಿಸುವನು. 'ದಾಖಲೆಯಾಗಿರೋ ಹಾಗೆ ಕಳೆದ ವರ್ಷ 'ಒಳ್ಳೆಯ ನೀಲ' ಆದರೇನಾಯ್ತು? ಹಗ್ಗ ಎಳೆಯುವವರು ಎಳೆದರು. ಮೋಜಣಿದಾರರು ನೆಲ ಅಳೆದರು. ನಾಲೆಗಳ ದುರಸ್ತಿ ಮಾತ್ರ ಆಗಲಿಲ್ಲ. ಕೆರೆಗಳ ಹೂಳು ತೆಗೆದು ನೀರು ಸಂಗ್ರಹಿಸೋ ಕೆಲಸ ನಡೀಲಿಲ್ಲ. ಇದು ಬಡ ಪ್ರಜೆಗಳಿಂದ ಆಗುವಂಥದೆ. ಆಳುವವರಲ್ಲವೆ ಮಾಡಬೇಕಾದ್ದು? ನಾವು ಷಾಡೂಫ್ ನಡೆಸೇವು. ನದಿಯಿಂದ ನೀರೆತ್ತಿ ಬಾವಿಗೆ ಸುರಿದೇವು. ಆದರೆ ಈ ನೀರು ಎಷ್ಟು ಹೊಲಗಳಿಗೆ ಸಾಕು. ಇಷ್ಟಕ್ಕೆ ಮುಗಿಲಿಲ್ಲ ನಮ್ಮ ಕಷ್ಟ. ಮುದಿ ಹೋರಿಗೆ ಬದಲು ಹೊಸ ಹೋರಿ ತರ್ಬೇಕು. ನೇಗಿಲಿಗೆ ಬೇರೆ ಮೊನೆ ಹಾಕ್ಬೇಕು. ಇದಕ್ಕೆ ಖರ್ಚಾಗೋದಿಲ್ಲವಾ? ಧಾನ್ಯ ಬೇಡವಾ? ಇನ್ನು ಇಲಿ, ಹೆಗ್ಗಣ, ಕಾಡುಹಂದಿ, ಹುಳ ಹುಪ್ಪಟೆ, ಮಿಡತೆ, ಹಕ್ಕಿಗಳ ಕಾಟದ ವಿಷಯ ಎಷ್ಟು ಹೇಳಿದರೂ ಸ್ವಲ್ಪವೇ. ಕಳ್ಳರೂ ಬರ್ತಾರೆ. ರಾಜಕಣಜಕ್ಕೆ ಹಿಂದೆ ಹತ್ತರಲ್ಲಿ ಒಂದಂಶ ದೇವಮಂದಿರಕ್ಕೂ ಸಲ್ಲಬೇಕಾಗಿದೆ. ಕೈಯಲ್ಲಿದ್ದ ಚೂರುಪಾರು ಕಾಳು ಮುಗಿದಾಗ ನಾವು ಏನನ್ನು ತಿನ್ಬೇಕು? ಆಗ ಪೆಪರೈಸ್ ದಂಟಿನ ಬುಡಭಾಗವೇ ನಮ್ಮ ಆಹಾರ. ಇಲ್ಲವೆ ನೀರು ಗಿಡಗಳ ಬೇರುಗಳು, ಕಡ್ಡಿಗಳು, ಹಸಿಯೋ ಬೇಯಿಸಿಯೋ ತಿನ್ಬೇಕು'[೬೯] (ನಿರಂಜನ, ೧೯೭೬, ಮೃತ್ಯುಂಜಯ, ಪುಟ–೪೪) ಎಂದು ತಮ್ಮ ಪ್ರಾಂತದ ಜನಕ್ಕಾಗುತ್ತಿರುವ ಸಮಸ್ಯೆಯನ್ನು ತೋಡಿಕೊಳ್ಳುವನು. ಆದರೆ ಮೃಗದಂತೆ ವರ್ತಿಸುವ ಟೆಹುಟಿ ಆತನಿಗೆ ನೀರಾನೆಯ ತೊಗಲಿನ ಚಾವಟಿಯಿಂದ ಹೊಡೆಸುತ್ತಾನೆ. ಮಗನಾದ ರಾಮೆರಿಪ್‌ಟಾನಿಗೆ ಮನೆಗೆ ಹೋಗಿ ಅಮ್ಮನ ಹತ್ತಿರ ಇರುವಂತೆ ಹೇಳಿ ಕಳಿಸುವನು. ಜನರೆಲ್ಲ ದಂಗೆಯೆದ್ದು ಪ್ರಾಂತಪಾಲರನ್ನು, ಕಂದಾಯ ಅಧಿಕಾರಿ ಟೆಹುಟಿಯನ್ನು ಪ್ರಾಂತದಿಂದಲೇ ಓಡಿಸಿ, ಮೆನೆಪ್‌ಟಾನನ್ನು ನಾಯಕನನ್ನಾಗಿ ಮಾಡಿ ತಾವೇ ಆಡಳಿತ ನಡೆಸಿಕೊಳ್ಳುತ್ತಾರೆ.

ಮೆನೆಪ್‌ಟಾ ತಮ್ಮ ಈ ಹೊಸ ವ್ಯವಸ್ಥೆಯಲ್ಲಿ ದಾಸರಿಲ್ಲ, ದಾಸಿಯರಿಲ್ಲ. ಎಲ್ಲರೂ ಮುಕ್ತರು. ವಿಮುಕ್ತ ದುಡಿಮೆಗಾರರು. ರಾಜಗೃಹದ ಉದ್ಯೋಗಿಗಳಿಗೆ ಮುಂದೆಯೂ ಕೆಲಸವಿದೆ. ಆದರೆ ಭೋಜನ ಮಂದಿರದ ದಾಸಿಯರು ಸ್ವತಂತ್ರರು. ಅವರು ಯಾವುದಾದರೂ ಕೆಲಸವನ್ನು ಸ್ವತಂತ್ರವಾಗಿ ಹೊರಗೆ ಹೋಗಿ ಮಾಡಬಹುದೆನ್ನುವನು. ಕಂದಾಯ ವಸೂಲಿಯ ಕೆಲಸಕ್ಕಾಗಿಯೇ ಹಲವರು ನೇಮಕಗೊಳ್ಳುತ್ತಾರೆ. ನೂರಾರು ರೈತರ ನೇಗಿಲು ಮೊನೆಗಳು ಮೊಂಡಾಗಿದ್ದವು, ಹಳೆಯದಾಗಿದ್ದವು ಅಥವಾ ಮುರಿದಿದ್ದವು. ಅವುಗಳ ದುರಸ್ತಿಯ ವೆಚ್ಚವನ್ನು ರಾಜಗೃಹವೇ ವಹಿಸಿಕೊಂಡು ರೈತರಿಗೆ ನೆರವಾಗುತ್ತದೆ. ಎಲ್ಲರೂ ಮೆನೆಪ್‌ಟಾನನ್ನು ಸಾಕ್ಷಾತ್ ದೇವರೆಂದೇ ಹೇಳುತ್ತಾರೆ. ಪೆರೋನನ್ನು ಭೇಟಿಯಾಗಲು ಹೋದ ಮೆನೆಪ್‌ಟಾ ಸೆಡ್ ಉತ್ಸವ ಮುಗಿಯುವವರೆಗೆ ಪೆರೋನ ಆಜ್ಞೆಯಂತೆ ಅಲ್ಲಿಯೇ ಉಳಿಯುತ್ತಾನೆ. ಸೆಡ್ ಉತ್ಸವ ಮುಗಿದ ಮೇಲೆ ಮೆನೆಪ್‌ಟಾನನ್ನು ಬಂಧಿಸಿ

ವಿಚಾರಣೆಗೊಳಪಡಿಸುವರು. ಟೆಹುಟಿ ಆತನ ಮೇಲೆ ಆರೋಪ ಹೊರಿಸಿ ಪೆರೋನಿಗೆ ವಿರುದ್ಧವಾಗಿ ನಡೆದುಕೊಂಡಿರುವನೆಂದು ಹೇಳುವನು. ಆದರೆ ಮೆನೆಪ್‌ಟಾ ನೀರಾನೆ ಪ್ರಾಂತದಲ್ಲಿ ನಡೆಯುತ್ತಿರುವ ಅನ್ಯಾಯ, ಅಕ್ರಮಗಳ ಕುರಿತು ಹೇಳುವನು. 'ಜೀವ ತೇದು ದುಡಿಯುವ ಜನರಿಗೆ ಅರೆಹೊಟ್ಟೆ, ಚಾಟಿ ಏಟು; ಕೊಬ್ಬಿದ ಭೂಮಾಲಿಕರಿಗೆ ಅರಮನೆ ಪಲ್ಲಕ್ಕಿ! ದರಿದ್ರರ ಶವಗಳ ಮೇಲೆ ತುಣುಕು ಬಟ್ಟೆಯೂ ಇಲ್ಲ; ಆದರೆ ಮಂದಿರದ ಸೋಮಾರಿ ಬೆಕ್ಕು ಸತ್ತಾಗ ಅದಕ್ಕೆ ಶವಲೇಪನ! ಅರ್ಚಕ ವರ್ಗದ ಕಾಮತೃಷೆಗೆ ದೇವಸೇವಕಿಯರ ಬಲಿ; ಮುದ್ದು ಮಕ್ಕಳ ತಾಯಂದಿರಾಗಬೇಕಾದ ಹೆಂಗಳೆಯರಿಗೆ ಮಂದಿರದ ಪವಿತ್ರಗೂಳಿ, ಪವಿತ್ರ ಟಗರುಗಳ ಜತೆ ಕಡ್ಡಾಯ ಸಂಭೋಗ!'[೨೦] (ನಿರಂಜನ, ೧೯೭೬, ಮೃತ್ಯುಂಜಯ, ಪುಟ–೩೮೦) ಎಂದು ಅಮಾನುಷವಾಗಿ ನಡೆಸಿಕೊಳ್ಳುವುದರ ಕುರಿತು ಹೇಳುತ್ತಾ. ಅಂಥ ನಾಗರೀಕತೆಗೆ ರೋಸಿ ಹೋಗಿ, ಅವರು ಮಾಡುವ ಸುಲಿಗೆಗೆ ಒಪ್ಪದೆ, ನಾವು ದಲಿತರು ಸೆಟೆದು ನಿಂತಿದ್ದೇವೆ ಎನ್ನುವನು. ದೇವರ ಹೆಸರಿನಲ್ಲಿ ಅರ್ಚಕರ ಮುಷ್ಟಿಯೊಳಗೆ ಹಿಪ್ಪೆಯಾಗಲು ಸಾಧ್ಯವಿಲ್ಲವೆಂದೇ ಹೇಳುವನು. ಈ ಎಲ್ಲ ಮಾತುಗಳನ್ನು ಕೇಳಿದ ಪೆರೋ ನ್ಯಾಯಾನ್ಯಾಯಗಳನ್ನು ನೋಡದೆ ಈತನಿಗೆ ಶಿರಚ್ಛೇದನ ಮಾಡುವ ಶಿಕ್ಷೆ ವಿಧಿಸುವನು. ಮೆನೆಪ್‌ಟಾನ ದೇಹ ರುಂಡ ಮುಂಡದಿಂದ ಬೇರ್ಪಟ್ಟಿತು. ಆತನ ದೇಹವನ್ನು ಹದಿನಾಲ್ಕು ಭಾಗ ಮಾಡಲಾಯಿತು.

ಲಕ್ಷ್ಮೀಧರ ಅಮಾತ್ಯರು, ಅರವೀಟಿ ಬುಕ್ಕರಾಯರು, ಭುವನಪ್ಪನವರು, ದಳವಾಯಿ ದೇಸಣ್ಣ, ವಿರೂಪಾಕ್ಷ ಜೋಯಿಸರು, ಹೊರಕೆನಾಯಕ, ದೊಣ್ಣೆ ರಂಗಪ್ಪನಾಯಕ, ಗೋಪಾಲಪುರದ ಗೌಡ, ಕಸ್ತೂರಿನಾಯಕ, ಮಲ್ಲಭಟರಹಳ್ಳಿಯ ಗೌಡ ಭೈರಪ್ಪ, ಚದುರುಗೊಳದ ಶಾನುಭೋಗ ಕೆಂಚಯ್ಯ, ಜುಲ್‌ಫಿಕಾರಖಾನ್, ವೆಂಕಪ್ಪಯ್ಯ, ಯಜ್ಞನಾರಾಯಣ ಜೋಯಿಸರು, ವಿರೂಪಾಕ್ಷಪ್ಪನವರು, ಸುಬ್ಬರಾಯಶಾಸ್ತ್ರೀಗಳು, ಚಂದ್ರಶೇಖರಶಾಸ್ತ್ರೀಗಳು, ಭೈರವಿ ವೆಂಕಟಸುಬ್ಬಯ್ಯ, ಚಿತ್ತೂರಿನ ಪ್ರಧಾನಿಯಾಗಿದ್ದ ಭೀಮಸಿಂಹ, ರಜಪೂತ ವಂಶದಲ್ಲಿ ಹುಟ್ಟಿದ್ದರೂ ಸಹ ರಾಣಾ ಪದವಿಗೋಸ್ಕರ ಅನಾಚಾರದ ಕೆಲಸ ಮಾಡಿ ತದನಂತರ ಪಶ್ಚಾತ್ತಾಪಪಟ್ಟ ಜಗಮಲ್ಲ, ಶಕ್ತಸಿಂಹರಂತಹ ಪಾತ್ರಗಳು, ಕೊಡಗಿನ ಸ್ವಾತಂತ್ರ್ಯಕ್ಕಾಗಿ ತಾನು ಅರಸು ವಂಶದವನೆಂದು ಕಲ್ಯಾಣಸ್ವಾಮಿ ಎಂಬ ಹೆಸರಿನಿಂದ ಜನರನ್ನು ಒಟ್ಟುಗೂಡಿಸುವ ಕೆಲಸ ಮಾಡಿದ ಪುಟ್ಟಬಸವ, ಕೊಡಗು ಅರಸು ಸಂಸ್ಥಾನದವನಾಗಿದ್ದರೂ ಸಂಬಂಧಿಗಳ ಕುತಂತ್ರದಿಂದಲೇ ಮಾರುವೇಷದಲ್ಲಿ ಅಲೆದಾಡಬೇಕಾದ ಸನ್ನಿವೇಶ ಬಂದರೂ ಕೊಡಗಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರಪ್ಪಾಜಿ, ಕೊಡಗಿನ ದಿವಾನನಾಗಿದ್ದರೂ ಬ್ರಿಟೀಷರ ಪರವಾಗಿ ನಿಂತು ಕೊಡಗಿಗೆ ದ್ರೋಹವೆಸಗುವ ಅಪ್ಪಾರಂಡ ಬೋಪು ದಿವಾನ, ಕಿತ್ತೂರಿನ ಪ್ರಧಾನಿಗಳಾಗಿದ್ದ ಗುರುಸಿದ್ಧಪ್ಪನವರು, ಕಿತ್ತೂರಿನ ದಿವಾನನಾಗಿ ಕಿತ್ತೂರಿಗೆ

ಮೋಸ ಮಾಡಿದ ಗುರುನಾಥಪಂತ, ಕಿತ್ತೂರಿನ ಸರದಾರನಾಗಿದ್ದು ನ್ಯಾಯ ನಿಷ್ಠುರತೆಯ ವ್ಯಕ್ತಿಯಾಗಿದ್ದ ವೀರಸಂಗಪ್ಪನವರು, ಸೇನಾಪತಿಯಾಗಿದ್ದ ತಿಮ್ಮನಗೌಡರು, ನರಗುಂದ ಸಂಸ್ಥಾನದ ಕಾರಭಾರಿಯಾಗಿದ್ದು ಇಂಗ್ಲೀಷರೊಂದಿಗೆ ಸೇರಿ ಪಿತೂರಿ ಮಾಡುವ ಕೃಷ್ಣಾಜಿಪಂತ, ಬನ್ಯಾಬಾಪು, ರಾಘೋಪಂಥ, ಕಯ್ಯೂರಿನ ಜನರಲ್ಲಿ ಜಾಗೃತಿಯನ್ನುಂಟು ಮಾಡಿದ ಶಾಲಾ ಮಾಸ್ತರರು, ಶಾಲಾ ಮಾಸ್ತರರ ಪ್ರೇರಣೆಯಿಂದಲೇ ಜನರಲ್ಲಿ ಕೆಚ್ಚೆದೆ ತುಂಬುವ ಅಪ್ಪು, ಚಿರಕುಂಡ, ಜಮೀನ್ದಾರರ ಪ್ರತೀಕವಾಗಿರುವ ನಂಬೂದಿರಿ ಮತ್ತು ನಂಬಿಯಾರ, ಜನತೆಯಲ್ಲಿ ಸ್ವಾತಂತ್ರ್ಯದ ಕಿಡಿ ಹಚ್ಚಿದ ಶೇಖರ, ರಾಜ, ಶಂಕರಪ್ಪ ಮಾಸ್ತರರು, ವಿಶ್ವನಾಥ ದೇಸಾಯಿ ಜನಮಾನಸದಲ್ಲಿ ಉಳಿಯುವಂತೆ ಈ ಎಲ್ಲ ಪಾತ್ರಗಳನ್ನು ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಿರುವರು.

ಈ ಎಲ್ಲ ಪಾತ್ರಗಳ ಜೊತೆಗೆ ಹಲವಾರು ಕಾಲ್ಪನಿಕ ಪಾತ್ರಗಳನ್ನು ಚಿತ್ರಿಸಿದ್ದು, ಅವು ಇತಿಹಾಸದ ಪಾತ್ರಗಳೆನೋ ಎನ್ನುವ ರೀತಿಯಲ್ಲಿ ಪುನರ್‌ಲೇಖದ ಸ್ವರೂಪದಲ್ಲಿ ಹೇಳಿರುವರು. ಅಮೋಘವರ್ಷ ನೃಪತುಂಗನ ಪತ್ನಿಯನ್ನಾಗಿ ಲಕ್ಷ್ಮೀದೇವಿ, ಗೊಮ್ಮಟ ಮೂರ್ತಿಯನ್ನು ನಿರ್ಮಿಸಿದ ಶಿಲ್ಪಿ ಭರತೋಜನ ಪಾತ್ರವನ್ನು ಇತಿಹಾಸದ ವ್ಯಕ್ತಿಯೇನೋ ಎಂಬಂತೆ ಚಿತ್ರಿಸಿರುವರು. ಭರತೋಜ ಶಿಲ್ಪ ಕೆತ್ತುವ ಕಾರ್ಯಕ್ಕೆ ಒಪ್ಪಿಕೊಂಡು ಇದಕ್ಕೆ ನನಗೆ ಹೆಸರು, ಹಣದ ಪುರಸ್ಕಾರ ಯಾವುದೂ ಬೇಡ. ನನ್ನ ಬಾಳನ್ನು ಉದ್ಧಾರ ಮಾಡುವ ತಪಸ್ಸು ಈ ಶಿಲ್ಪರಚನೆ, ಎಂದು ಹೇಳಿ ಕೆಲಸ ಪ್ರಾರಂಭಿಸುವನು. ಆದರೆ ತನಗೆ ಬೇಕಾದ ನಾಲ್ಕು ಜನ ಕಲ್ಲುಕುಟಿಗರನ್ನು ಮಾತ್ರ ನೇಮಿಸಿಕೊಂಡು ಉಳಿದೆಲ್ಲ ಪ್ರಸಿದ್ಧಿ ಪಡೆದ ಶಿಲ್ಪಿಗಳನ್ನು ಸಹ ನಿರಾಕರಿಸುವನು. ಇದರಿಂದ ಕೋಪಗೊಂಡ ಹಲವರು ಈತನ ಕುರಿತು ಅಸಡ್ಡೆತನದಿಂದ ಮಾತನಾಡುವರು. ಇವನೊಬ್ಬ ಮಾಟಗಾರ ಇರಬೇಕು. ಒಬ್ಬನಿಂದ ಅದು ಸಾಧ್ಯವೇ? ಅದರಲ್ಲೂ ಅದನ್ನು ಬೇರೆಯವರಿಗೆ ಕಾಣಿಸದಂತೆ ಸುತ್ತು ಪರದೆ ಮುಚ್ಚಿ ಶಿಲ್ಪ ಕೆತ್ತುತ್ತಿರುವನು. ಚಾವುಂಡರಾಯನಿಗೆಲ್ಲೋ ಹುಚ್ಚು ಎಂದು ಹಗುರವಾಗಿ ಮಾತನಾಡಿದ ಜನಕ್ಕೆಲ್ಲ ಎಲ್ಲರೂ ನಿಬ್ಬೆರಗಾಗಿ ನೋಡುವಂತ ಬಾಹುಬಲಿ ಮೂರ್ತಿಯನ್ನು ಕೆತ್ತುವನು. ಚಾವುಂಡರಾಯನಿಗೆ ಪೂರ್ಣಗೊಂಡಿರುವ ಶಿಲ್ಪವನ್ನು ಮರುದಿನ ನೋಡಲು ಬರುವಂತೆ ಹೇಳಿ ಕಳುಹಿಸಿ ತಾನು ಯಾರಿಗೂ ಗೊತ್ತಾಗದ ಹಾಗೆ ಪತ್ರವೊಂದನ್ನು ಬರೆದಿಟ್ಟು ತಾನು ವಹಿಸಿಕೊಂಡಿದ್ದ ಕೆಲಸ ಸಂಪೂರ್ಣವಾಗಿದ್ದು ತಾನು ಬಾಹುಬಲಿ ಸನ್ನಿಧಾನಕ್ಕೆ ಹೋಗುತ್ತಿರುವುದಾಗಿ ಅದೃಶ್ಯವಾಗುವನು.

೬.೨.೧೬ ರಾಮಭಟ್ಟ :

ಅ.ನ.ಕೃ ಅವರು ಐತಿಹಾಸಿಕ ವ್ಯಕ್ತಿಯಾದ ಸಿಂಗಮಭಟ್ಟನಿಗೆ ಭಾವಮೈದುನನಾಗಿ ರಾಮಭಟ್ಟ ಎಂಬ ಕಾಲ್ಪನಿಕ ಪಾತ್ರವನ್ನು ಚಿತ್ರಿಸಿದ್ದಾರೆ. ರಾಮಭಟ್ಟನೂ ಸಹ ಸಿಂಗಮಭಟ್ಟನ ಹಾಗೆ

ಜಲಯಂತ್ರ ವಿಶಾರದ. ಅವನಷ್ಟೇ ಪಾಂಡಿತ್ಯ ವಿದ್ವತ್ತನ್ನು ಹೊಂದಿದ ವ್ಯಕ್ತಿಯಾಗಿದ್ದರೂ ಕೂಡ ದುರಾಶೆಯನ್ನು ಹೊಂದಿದ ವ್ಯಕ್ತಿಯನ್ನಾಗಿ ಚಿತ್ರಿಸಿದ್ದಾರೆ. ರಾಮಭಟ್ಟನು ತನ್ನ ಪತ್ನಿಯಾದ ವಿಜಯಲಕ್ಷ್ಮಿಯನ್ನು ಕರೆದುಕೊಂಡು ಪಶ್ಚಾತ್ತಾಪವಾದ ರೀತಿಯಲ್ಲಿ ನಟಿಸುತ್ತಾ ವಿಜಯನಗರಕ್ಕೆ ಬರುತ್ತಾನೆ. ತನ್ನ ಭಾವನಾದ ಸಿಂಗಮಭಟ್ಟನಿಗೆ 'ಸ್ವರ್ಣಮರೀಚಿಕೆಯ ಬೆನ್ನು ಹತ್ತಿ ನಾನು ಆಡಬಾರದುದನ್ನಾಡಿದೆ, ಮಾಡಬಾರದುದನ್ನು ಮಾಡಿದೆ. ಮ್ಲೇಚ್ಛರ ಸಖ್ಯ ಬೆಳೆಸಿ ತಿನ್ನಬಾರದುದನ್ನು ತಿಂದೆ ಕುಡಿಯಬಾರದುದನ್ನು ಕುಡಿದೆ'[೭೧] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೩೬) ತಾನು ದೈವದ್ರೋಹಿ, ಧರ್ಮದ್ರೋಹಿ, ದೇಶದ್ರೋಹಿ ಎಂದುಕೊಂಡಾಗ ಸಿಂಗಮಭಟ್ಟನು ನಾಲ್ಕು ದಿನ ಎಲ್ಲವನ್ನು ಮರೆತು ಸುಖವಾಗಿರು ಎನ್ನುವನು.

ಇತ್ತ ವಿಜಯನಗರದ ನೀರಾವರಿ ಯೋಜನೆಯ ನಾಶಕ್ಕೆ ಸಂಚು ಮಾಡಿ ಬಹುಮನಿ ಸುಲ್ತಾನರ ಪ್ರತಿನಿಧಿಯಾದ ರೇಜಾಖಾನನ್ನು ಸಾಧು ವೇಷದಲ್ಲಿ ಕರೆಸುತ್ತಾನೆ ಎಲ್ಲ ವಿಷಯವನ್ನು ಪತ್ತೆ ಮಾಡಿದ ರಾಮಭಟ್ಟನ ಪತ್ನಿ ವಿಜಯಲಕ್ಷ್ಮಿ ತನ್ನ ಅಣ್ಣನಾದ ಸಿಂಗಮಭಟ್ಟನಿಗೆ ವಿಷಯ ತಿಳಿಸುತ್ತಾಳೆ. ಸಿಂಗಮಭಟ್ಟ ದಣ್ಣಾಯಕರ ಮಹಲಿಗೆ ಹೋಗಿ ರೇಜಾಖಾನ ಹಾಗೂ ರಾಮಭಟ್ಟನ ಸಂಚಿನ ವಿಷಯ ತಿಳಿಸಿ ಅವರನ್ನು ಈಗಲೇ ಸೆರೆಹಿಡಿಯದೇ ಅವರ ಮೇಲೆ ಕಣ್ಣಿಡುವಂತೆ ಸೂಚಿಸುತ್ತಾನೆ. ತದನಂತರ ಎಲ್ಲರನ್ನು ಸೆರೆಹಿಡಿದು ಮಹಾಪ್ರಭುಗಳ ಮುಂದೆ ನಿಲ್ಲಿಸಿದಾಗ ವಜೀರ ಅಹಮದ್ ಈ ಎಲ್ಲ ಸಂಚಿನ ರೂವಾರಿ ರಾಮಭಟ್ಟ ಎನ್ನುವನು. ಕೆರಳಿದ ರಾಮಭಟ್ಟ 'ಮ್ಲೇಚ್ಛ ಹಂದಿ, ಹಾಳು ಪ್ರಾಣ ಉಳಿಸಿಕೊಳ್ಳಲು ಸುಳ್ಳೇಕೆ ಬೊಂಕುವೆ? ನಾಯಿ ನರಿಗಳಂತೆ ಬದುಕುತ್ತೀರಿ ಸಾಯುವಾಗಲಾದರೂ ಮನುಷ್ಯರಂತಿರಬೇಡವೇ? ಮಹಾಪ್ರಭೂ, ರೇಜಾಖಾನ ಮತ್ತು ನಾನು ಗೆಳೆಯರು. ಸಿಂಗಮಭಟ್ಟರು ಇಲ್ಲಿಗೆ ಬಂದು ಜಲಯೋಜನೆಗಳನ್ನು ಕೈಗೊಂಡ ಮೇಲೆ ಬಹುಮನೀ ರಾಜ್ಯದ ವಜೀರರಾದ ಜೈನಲಾಬುದ್ಧೀನ್ ಅವರು ದಿಲ್ಲಿಗೆ ಬಂದು, ವಿಜಯನಗರದ ಸಮಸ್ತ ಚಟುವಟಿಕೆಗಳನ್ನು ವರ್ಣಿಸಿ, ನನ್ನ ನೆರವು ಬೇಡಿದರು. ರೇಜಾಖಾನನು ನನ್ನನ್ನು ಒತ್ತಾಯಪಡಿಸಿದ. ಹಲವು ವಿಧಿಗಳಲ್ಲಿ ನಾನು ರೇಜಾಖಾನನಿಗೆ ಋಣಿಯಾಗಿದ್ದೆ. ಅವನ ಮಾತು ತೆಗೆದು ಹಾಕಲಾಗದೆ, ಜೈನಲಾವುದ್ಧೀನ್ ಇತ್ತ ಸುವರ್ಣ ರಾಶಿಯನ್ನು ತಿರಸ್ಕರಿಸಲಾಗದೆ ಈ ಕೃತ್ಯಕ್ಕೆ ಒಪ್ಪಿಕೊಂಡೆ. ನಾನು ಅಪರಾಧಿಯಾದರೂ ಈ ಕೃತ್ಯದ ಪ್ರೇರಕನಲ್ಲ'[೭೨] (ಕೃಷ್ಣರಾಯರು ಅ.ನ, ೨೦೦೪, ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ, ಪುಟ-೫೧) ಎನ್ನುವನು. ರಾಮಭಟ್ಟ ಜಲತಂತ್ರ ವಿಶಾರದ ಮಾತ್ರನಾಗಿರದೆ ವಾಸ್ತುಶಿಲ್ಪ ವಿಶಾರದನೂ ಆಗಿರುತ್ತಾನೆ. ಪಶ್ಚಾತ್ತಾಪವಾಗಿ ಸೆರೆಯಲ್ಲಿಯೇ ಕುಳಿತು ಸೂಕ್ತ ಸಲಹೆಗಳನ್ನು ನೀಡುತ್ತಾನೆ. ತುಂಗಭದ್ರಾ ನದಿಯಿಂದ ಕಾಲುವೆ ತೋಡಿ ಕಮಲಾಪುರದವರೆಗೆ ನೀರು ಹಾಯಿಸುವ ಕಾರ್ಯದಲ್ಲಿ ಬಂಡೆಗಲ್ಲೊಂದು ಅಡ್ಡಲಾಗಿ ಬಂದಾಗ ಸಿಂಗಮಭಟ್ಟ ತನ್ನ

ಬುದ್ಧಿಯನ್ನೆಲ್ಲಾ ಪ್ರಯೋಗಿಸಿ ಆ ಬಂಡೆಗಲ್ಲನ್ನು ತೆಗೆಯಲು ನೋಡುತ್ತಾನೆ. ಆ ಬಂಡೆಗಲ್ಲು ಕಲ್ಲು ಕುಟಿಗರ ಉಳಿಗಾಗಲಿ, ಮದ್ದಿನವರ ಸಿಡಿಮದ್ದುಗಳಿಗಾಗಲಿ ಏನೂ ಮಾಡಲು ಸಾಧ್ಯವಿಲ್ಲದಾದಾಗ ಚಿಂತಾಕುಲನಾದ ಸಿಂಗಮಭಟ್ಟ ರಾಮಭಟ್ಟನ ಸಲಹೆ ಕೇಳುತ್ತಾನೆ. "ನಾಳೆ ಸೂರ್ಯೋದಯಕ್ಕೆ ಮುನ್ನ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡು" ಎಂದು ರಾಮಭಟ್ಟ ಹೇಳಿ ಅಲ್ಲಿ ಹೋದಾಗ ಆ ಬಂಡೆಯ ಅಷ್ಟಮೂಲೆಗಳನ್ನು ಪರೀಕ್ಷಿಸಿ ಒಂದು ತುಣುಕು ಕಲ್ಲನ್ನು ಪುಡಿ ಮಾಡಿ ಸುತ್ತಣ ಪ್ರದೇಶದಲ್ಲಿ ದೊರೆಯುತ್ತಿದ್ದ ಕೆಲವು ಎಲೆ ಹೂವುಗಳನ್ನು ಮೂಲಿಕೆಗಳನ್ನು ಆಯ್ದು ತಂದು ಕಷಾಯ ತಯಾರಿಸಿ ಅದನ್ನು ಬಂಡೆಯ ಮೇಲೆಲ್ಲ ಬಳಿದು ಹೋದಾಗ ಮರುದಿನ ರಾಮಭಟ್ಟ ಮಸಿಯಿಂದ ಗುರುತುಹಾಕಿದ್ದ ಎಡೆಗಳಲ್ಲಿ ಬಂಡೆ ಸೀಳುಬಿಟ್ಟಿತ್ತು. ಮಹಾಪ್ರಭುಗಳ ಸಮೇತರಾಗಿ ಸಮಸ್ತರೂ ಮಂತ್ರಮುಗ್ಧರಂತೆ ನಿಂತುಬಿಟ್ಟರು. ರಾಮಭಟ್ಟನನ್ನು ಬಿಡುಗಡೆಗೊಳಿಸಲು ಮಹಾಪ್ರಭುಗಳು ನಿರ್ಧರಿಸಿದರೂ ಸಹ ರಾಮಭಟ್ಟ ಅದಕ್ಕೊಪ್ಪದೇ ಪ್ರಾಯಶ್ಚಿತಕ್ಕಾಗಿ ಸೆರೆಯಲ್ಲಿರಲು ಬಯಸುತ್ತಾನೆ.

ಯುದ್ಧ ಘೋಷಣೆಯಾದಾಗ ರಾಮಭಟ್ಟ ಹಠ ಹಿಡಿದು ಯುದ್ಧ ಕಾರ್ಯದಲ್ಲಿ ಭಾಗವಹಿಸುತ್ತಾನೆ. ಆದರೆ ರೋಷನಾರಾ ಮಾರುವೇಷದಲ್ಲಿ ಬಂದು ರಾಮಭಟ್ಟನನ್ನು ಇರಿದು ಕೊಲ್ಲುತ್ತಾಳೆ. ಅದೇ ಸಮಯಕ್ಕೆ ಪತ್ನಿ ವಿಜಯಲಕ್ಷ್ಮಿಯೂ ಸಹ ಅಲ್ಲಿಗೆ ಬಂದಾಗ ಹಾರಿಬಂದ ಭಲ್ಲೆಯೊಂದು ಆಕೆಯ ಬೆನ್ನಿಗೆ ಇರಿದು ರಾಮಭಟ್ಟನ ಜೊತೆಗೆ ಅವಳ ಪ್ರಾಣಪಕ್ಷಿಯೂ ಸಹ ಹಾರಿಹೋಗುತ್ತದೆ. ಒಂದು ಪಕ್ಷದವರು ಇನ್ನೊಂದು ಪಕ್ಷದವರ ಯಾವುದೇ ಅಭಿವೃದ್ಧಿಯನ್ನು ಸಹಿಸದೆ, ವಿನಾಶಕಾರಿ ಕೆಲಸಕ್ಕೆ ಕೈ ಹಾಕುವ ದುಷ್ಟನಿರ್ಣಯ ಮಾಡುವುದು ಅತ್ಯಂತ ಹೇಯ ಕೃತ್ಯ ಎಂದು ಯಾರಿಗಾದರೂ ಅನಿಸುತ್ತದೆ. ಆದರೆ ದ್ವೇಷದಲ್ಲಿ ಇವೆಲ್ಲವೂ ಸೇರುವುದು ಅನಿವಾರ್ಯ ಎಂಬ ಸತ್ಯವನ್ನು ಸನ್ನಿವೇಶಗಳು ಸ್ಪಷ್ಟಪಡಿಸುತ್ತವೆ. ರಾಜಕೀಯದಲ್ಲಿ ಬಂಧಿಯೂ ಉಪಯೋಗಕ್ಕೆ ಬರುತ್ತಾನೆ. ಬಂಧಿಯಾದ ರಾಮಭಟ್ಟನ ತಂತ್ರಜ್ಞಾನ ಕೌಶಲವನ್ನು ವಿಜಯನಗರ ಬಳಸಿಕೊಂಡಿತು. ಪುಣ್ಯಪ್ರಭಾವದಲ್ಲಿ ಹೆಚ್ಚಾಗಿ ಕಾಣುವವನು ರಾಮಭಟ್ಟ. ರಾಮಭಟ್ಟ ವಿಜಯನಗರದ ಗೆಲುವಿನಲ್ಲಿ ಪ್ರಧಾನ ಪಾತ್ರವಹಿಸಿ, ಪತ್ನಿಸಹಿತ ಹುತಾತ್ಮನಾದದ್ದು ಕಾದಂಬರಿಯ ವೈಶಿಷ್ಟ್ಯವಾಗಿದೆ.

ಬಹುಮನಿ ಸುಲ್ತಾನರ ಪ್ರತಿನಿಧಿಗಳಾದ ರೇಜಾಖಾನ್ ಹಾಗೂ ವಜೀರ್ ಅಹಮದ್ ವಿಜಯನಗರಕ್ಕೆ ಕೇಡು ಬಗೆಯುವ ದುಷ್ಟ ಪಾತ್ರಗಳು. ಬಹುಮನಿ ಸುಲ್ತಾನರ ಜನಾನಾ ಸೇರುವ ಸುರೈಯ್ಯಾ, ಗುಲ್‌ಷನ್ ಪಾತ್ರಗಳು ತಮ್ಮ ಕುಟುಂಬದವರಿಗೋಸ್ಕರ ಅನಿವಾರ್ಯವಾಗಿ ತಮ್ಮ ಬದುಕನ್ನು ಹಾಳುಗೆಡವಿಕೊಂಡವರು. ಸುಲ್ತಾನ್ ಮಹಮದ್ ಷಹಾರವರ ಪ್ರತಿನಿಧಿಯಾಗಿ

ವಿಜಯನಗರಕ್ಕೆ ಬಂದ ವಾಲಿ ಮಹಮದ್ ಇಲ್ಲಿನ ರಾಜರ ಆಡಳಿತದ ವೈಖರಿಯನ್ನು ನೋಡಿ ವಿಜಯನಗರದಂಥ ಸಂಪತ್ಸಮೃದ್ಧವಾದ ರಾಜ್ಯ ನಾನು ನೋಡಿಯೇ ಇಲ್ಲ ಎನ್ನುತ್ತಾನೆ. ವಿಜಯನಗರದ ಮೌಲ್ವಿಗಳು ಸಹಿತ ವಿಜಯನಗರಕ್ಕೆ ಯಾರಾದರೂ ಮುತ್ತಿಗೆ ಹಾಕಿದರೆ ಸಮಸ್ತ ಮುಸ್ಲಿಂರೆಲ್ಲರೂ ರಕ್ತ ಚೆಲ್ಲಲು ಸಿದ್ಧವಾಗಿರುವ ವಿಷಯ ಸುಲ್ತಾನರಿಗೆ ತಿಳಿಸುವನು. ಓರಗಲ್ಲಿನ ತರುಣ ಕುಲವಂತಸಿಂಹನ ಜೊತೆಗೆ ಕಾದಾಡುತ್ತಾನೆ. ಕುಲವಂತಸಿಂಹ ವೀರಮರಣವನ್ನಪ್ಪಿದಾಗ ವಾಲಿ ಮಹಮದ್ ವೀರನಾದ ಕುಲವಂತನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಕಣ್ಣೀರು ಹಾಕುತ್ತಾನೆ. ಆಗ ಕುಲವಂತ ಯುದ್ಧ, ಜಗಳ, ಅಶಾಂತಿ ಇಲ್ಲದ ಲೋಕದಲ್ಲಿ ನಾವಿಬ್ಬರು ಮತ್ತೆ ಭೇಟಿಯಾಗೋಣ ಎಂದು ಕಣ್ಣು ಮುಚ್ಚುತ್ತಾನೆ. ಇಲ್ಲಿ ಅ.ನ.ಕೃ ಕುಲವಂತಸಿಂಹ ಎಂಬ ಕಾಲ್ಪನಿಕ ಪಾತ್ರದ ಮೂಲಕ ಒಬ್ಬ ವೀರನಾದವನ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ.

೬.೨.೧೭ ಗಿರಿಜವ್ವೆ :

ಗಿರಿಜವ್ವೆ ಜೀವಂತ ವ್ಯಕ್ತಿಯಲ್ಲ. ತ.ರಾ.ಸು ರವರ ಕಲ್ಪನೆಯ ಸೃಷ್ಟಿ. ಕಲ್ಪನೆಯ ಸೃಷ್ಟಿಯಾದರೂ 'ಐತಿಹಾಸಿಕ'ವೆನ್ನುವಷ್ಟು ಪ್ರಬಲಳೆನ್ನಿಸಿ ದುರ್ಗದ ಇತಿಹಾಸದಲ್ಲಿ ಉಳಿದಿದ್ದಾಳೆ. ಓಬಣ್ಣನಾಯಕನ ಕಾವಲು ಕಾಯುವ ಜವಾಬ್ದಾರಿಯನ್ನು ಸಹ ನಾಗತಿಯು ಈಕೆಗೆ ವಹಿಸಿದ್ದು ಅದನ್ನು ನಿಷ್ಠೆಯಿಂದ ಮಾಡುತ್ತಾಳೆ. ಓಬಣ್ಣನಾಯಕನ ಪಟ್ಟಾಭಿಷೇಕದ ಸಮಯದಲ್ಲಿ ತಮಗೆ ಪಟ್ಟದ ಕಾಣಿಕೆ ಮರ್ಯಾದೆಯುತವಾಗಿ ಸಂದಾಯವಾಗಿಲ್ಲವೆಂದು ಸೈನಿಕರೆಲ್ಲರೂ ರಾಯಣ್ಣ ಹಾಗೂ ವೀರಣ್ಣನ ನೇತೃತ್ವದಲ್ಲಿ ಅರಮನೆಗೆ ನುಗ್ಗಿದಾಗ ನಾಗತಿಯು ಕಣ್ಣೀರು ಹಾಕುವುದನ್ನು ಓಬಣ್ಣನಾಯಕ ಭಯದಿಂದ ನಡುಗುವುದನ್ನು ನೋಡಲಾಗದೆ ಕತ್ತಿ ಹಿರಿದು ನಿಲ್ಲುತ್ತಾಳೆ. ಓಬಣ್ಣನಾಯಕನ ಕಗ್ಗೊಲೆ, ಓಬವ್ವನಾಗತಿಯ ಸಾವು ಎರಡೂ ಸನ್ನಿವೇಶಗಳಿಂದ ಜರ್ಜರಿತಳಾದ ಗಿರಿಜವ್ವೆ ಹನ್ನೆರಡು ವರ್ಷಗಳ ಕಾಲ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿರುತ್ತಾಳೆ. ಒಂದು ದಿನ ಲಿಂಗಣ್ಣನಾಯಕನಿಗೆ ನಾಗತಿಯ ಸಮಾಧಿಯ ಬಳಿ ಕಾಣಿಸಿಕೊಂಡು ಒಂದು ಕತ್ತಿಯನ್ನು ಕೊಟ್ಟು ಸೇಡು ತೀರಿಸಿಕೊಳ್ಳುವಂತೆ ಹೇಳುತ್ತಾಳೆ. ಮುದ್ದಣ್ಣನ ಕಾರ್ಯಚಟುವಟಿಕೆಗಳನ್ನೆಲ್ಲ ವೀಕ್ಷಿಸುತ್ತಲೇ ಇದ್ದ ಈಕೆ ಆತನ ಮನೆಗೆ ಕತ್ತಲಲ್ಲಿ ಹೋಗಿ ತಾನು ನಾಗತಿಯ ನೆರಳು ಎಂದು ಹೇಳಿ ಕಿಲಕಿಲನೆ ನಕ್ಕು ಯಾರ ಕೈಗೂ ಸಿಗದೇ ಓಡಿ ಹೋಗುತ್ತಾಳೆ.

ಲಿಂಗಣ್ಣನಾಯಕರನ್ನು ಮುದ್ದಣ್ಣ ಹತ್ಯೆ ಮಾಡಿದಾಗ ಆತನ ಮೇಲೆ ಸೇಡು ತೀರಿಸಿಕೊಳ್ಳಲು ಇನ್ನಷ್ಟು ಹಾತೊರೆಯುತ್ತಾಳೆ. ಗೋಪಾಲಪುರದ ಗೌಡನ ಜೊತೆಗೆ ಸೇರಿ ವ್ಯೂಹವೊಂದನ್ನು ಹೆಣೆಯಲು ನೆರವಾಗುತ್ತಾಳೆ. ಗೋಪಾಲಪುರದ ಗೌಡನ ಹತ್ಯೆಯೂ ನಡೆದು ಹೋಗುತ್ತದೆ. ಆದರೆ

ಗಿರಿಜವ್ವೆ ಮಾತ್ರ ನಿರಾಶಳಾಗದೆ ರಣತಂತ್ರ ಹೆಣೆಯುತ್ತಲೇ ಹೋಗುತ್ತಾಳೆ. ಸೆರೆಯಲ್ಲಿದ್ದ ಪರಶುರಾಮಪ್ಪ ಹಾಗೂ ಭರಮಣ್ಣನನ್ನು ಸೆರೆಯಿಂದ ಪಾರಾಗಿಸಲು ನೆರವಾದ ಈಕೆ ಗುರುಗಳನ್ನು ಪಾರಾಗಿಸುವಲ್ಲಿ ಸಹಾಯ ಮಾಡುತ್ತಾಳೆ. ಮಲ್ಲಭಟ್ಟರ ಹಳ್ಳಿಯ ಗೌಡನನ್ನು ಕಂಡು ಮುದ್ದಣ್ಣನ ವಿರುದ್ಧ ಪ್ರತಿಭಟಿಸುವಂತೆ ಪ್ರಚೋದಿಸುತ್ತಾಳೆ. ಆದರೆ ಆತ ಅದು ಸುಲಭವಲ್ಲ ಎಂದಾಗ 'ನೀವು ಗಂಡಸರಾದರೆ ಹೂ ಎನ್ನಿ, ಇಲ್ಲವಾದರೆ ಕೈಗೆ ಬಳೆ ಇಟ್ಟುಕೊಂಡು ನಾವು ಹೆಂಗಸರು, ಗಂಡಸರನ್ನು ಬೇರೆ ಕಡೆ ಹುಡುಕಿ ಎಂದು ಹೇಳಿ'[೭೩] (ಸುಬ್ಬರಾಯರು ತ.ರಾ, ೨೦೧೫, ತಿರುಗುಬಾಣ, ಪುಟ-೮೯) ಎನ್ನುವ ಮಾತುಗಳು ಇವಳಲ್ಲಿರುವ ಆಕ್ರೋಶವನ್ನು ವ್ಯಕ್ತಪಡಿಸುತ್ತವೆ.

ಕೊನೆಗೆ ಮುದ್ದಣ್ಣ ಸಾಕಿದ ಚಿರತೆ, ನಾಯಿಗಳನ್ನು ಅವನ ಮೇಲೆರಗಿಸಿ ಕೊಲ್ಲಿಸಿ ಹೆಣಗಳನ್ನು ಸಹ ಹುಣಸೆಯ ತೋಪಿಗೆ ನೇತಾಕಿಸಿ ಹದ್ದು ಕಾಗೆಗಳಿಗೆ ಆಹಾರ ಮಾಡಿ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾಳೆ. ಕೊನೆಗೆ ಗುರುಗಳಾದ ಉಗ್ರಚನ್ನವೀರಸ್ವಾಮಿಗಳ ಜೊತೆ ಹೋಗಲು ಸಿದ್ಧಳಾಗಿ ತನ್ನ ಉಳಿದ ಆಯುಷ್ಯವನ್ನು ಸ್ವಾಮಿಗಳ ಸೇವೆಯಲ್ಲಿ ಕಳೆದು, ಈ ಕೊಲೆಯ ಪಾಪವನ್ನು ಕಳೆದುಕೊಳ್ಳುವುದಾಗಿ ಪರಶುರಾಮಪ್ಪ ಹಾಗೂ ಭರಮಣ್ಣನವರಿಂದ ಬೀಳ್ಕೊಡುತ್ತಾಳೆ.

೬.೨.೧೮ ಚಿದಂಬರ ದೀಕ್ಷಿತ :

ಚಿದಂಬರ ದೀಕ್ಷಿತ ಪ್ರತಿದಿನ ಅತಿಥಿ ಅಭ್ಯಾಗತರಿಗೆ ಊಟ ಮಾಡಿಸದೆ ಆಹಾರ ಮುಟ್ಟುತ್ತಿರುವುದಿಲ್ಲ. ಆ ಸಮಯದಲ್ಲಿ ಶ್ರೀರಂಗಪಟ್ಟಣದವನಾದ ಯಾರೋ ಒಬ್ಬ ಬ್ರಾಹ್ಮಣ ಕೊಲ್ಲಾಪುರದಿಂದ ಬಂದದ್ದು ಆತನಿಗೆ ಸಾಕ್ಷಾತ್ ದೇವಿಯೇ ಆ ಬ್ರಾಹ್ಮಣನ ರೂಪದಲ್ಲಿ ಬಂದಿರುವಂತಿರುತ್ತದೆ. ಅದನ್ನು ದೀಕ್ಷಿತರು ಆ ಬ್ರಾಹ್ಮಣನ ಹತ್ತಿರ ಅರಿಕೆ ಮಾಡಿಕೊಂಡಾಗ ಕಲಿಗಾಲದಲ್ಲೂ ಇಂತಹ ಧರ್ಮನಿಷ್ಠೆ ಇರುವುದೇ ಎಂದು ಆಶ್ಚರ್ಯವ್ಯಕ್ತಪಡಿಸುತ್ತಾನೆ.

ಊರಿನಲ್ಲಿ ದೀಕ್ಷಿತರ ಮಾತುಗಳನ್ನು ಯಾರೂ ತೆಗೆದುಹಾಕುತ್ತಿರುವುದಿಲ್ಲ. ಏನೇ ಕಲಹ, ಭಿನ್ನಾಭಿಪ್ರಾಯಗಳಾದರೂ ಅವುಗಳನ್ನು ಬಗೆಹರಿಸುತ್ತಿದ್ದರು. ದೀಕ್ಷಿತರು ತಾವು ಕಿತ್ತೂರು ಸಂಸ್ಥಾನದ ಕಾರಭಾರಿಯಾಗಿದ್ದ ವಿಷಯವನ್ನು ಪ್ರಸ್ತಾಪಿಸುತ್ತ ಇವರಿಗೂ ಇನ್ನೊಬ್ಬ ಕಾರಭಾರಿ ಮಲ್ಲಪ್ಪಶೆಟ್ಟರಿಗೂ ಭಿನ್ನಾಭಿಪ್ರಾಯವಾಗಿ ಕಾರಭಾರಿ ಸ್ಥಾನಕ್ಕೆ ವೆಂಕಟರಾಯರ ಹೆಸರನ್ನು ಸೂಚಿಸಿ ತಾವು ಬೈಲಹೊಂಗಲಕ್ಕೆ ಬಂದುದಾಗಿ, ಮಲ್ಲಸರ್ಜ ದೊರೆಗೂ ತಮಗೂ ಇದ್ದ ಆತ್ಮೀಯತೆ ಕುರಿತು ಹೇಳುವನು. ಶಾಸ್ತ್ರೀಗಳಿಗೆ ಕಿತ್ತೂರಿನಲ್ಲಿ ದೇಸಾಯರ ಸಮೀಪದಲ್ಲಿ ಯೋಗ್ಯರಾದವರಿಲ್ಲ. ಕಾರಭಾರಿಗಳಾದ ಮಲ್ಲಪ್ಪಶೆಟ್ಟರೂ, ವೆಂಕಟರಾಯರೂ ಸ್ವಾರ್ಥಿಗಳು. ಪ್ರಧಾನಿ ಗುರುಸಿದ್ಧಪ್ಪನವರು ನೈಷ್ಠಿಕ ಸ್ವಾಮಿಭಕ್ತರು. ಹೀಗಾಗಿ ನೀವು ಅಲ್ಲಿಗೆ ಹೋಗಿ ದೊರೆಗಳ ಹಿತೈಷಿಗಳಾಗಿರಬೇಕೆಂದು

ಸೂಚಿಸುವನು. ಜೊತೆಗೆ ತನ್ನ ಭಾವ ವೆಂಕಟರಾಯರ ಮನೆಯಲ್ಲಿದ್ದು ಅಲ್ಲಿ ನಡೆಯುವ ವಿದ್ಯಮಾನಗಳನ್ನೆಲ್ಲ ಚೆನ್ನಮ್ಮರಾಣಿಯವರಿಗೆ ತಿಳಿಸುತ್ತ ಬರಬೇಕು ಎಂದೆಲ್ಲ ಹೇಳಿ ಕಳಿಸುವರು.

ಪೇಶ್ವೆಯವರು ದೊರೆಗಳನ್ನು ಮೋಸದಿಂದ ಕರೆಸಿಕೊಂಡು ಬಂಧಿಸಿ, ತದನಂತರ ಷರತ್ತುಗಳೊಂದಿಗೆ ಬಂಧಮುಕ್ತಗೊಳಿಸಿದಾಗ ಕಿತ್ತೂರಿಗೆ ಬರುವ ವೇಳೆಗಾಗಲೇ ಆರೋಗ್ಯ ಸ್ಥಿತಿ ಹದಗೆಟ್ಟು ಕಿತ್ತೂರಿಗೆ ಬಂದು ಪ್ರಾಣಪಕ್ಷಿ ಹಾರಿಹೋದಾಗ ರುದ್ರಮ್ಮನವರು ಸಾಯಲು ನಿರ್ಧರಿಸುತ್ತಾರೆ. ಯಾರೂ ಎಷ್ಟೇ ಸಮಾಧಾನ ಹೇಳಿದರೂ ತನ್ನ ನಿರ್ಧಾರ ಬದಲಿಸದ ರುದ್ರಮ್ಮಳಿಗೆ ದೀಕ್ಷಿತರು ಬಂದು ಸಾಂತ್ವನ ಹೇಳುವರು. 'ಕೈಲಾಸದಲ್ಲಿ ಶಿವಸಾನಿಧ್ಯದಲ್ಲಿರುವ ದೊರೆಗಳ ಆತ್ಮಕ್ಕೆ ಶಾಂತಿಯನ್ನು ಕೊಡಬೇಕಾದುದು ನಮ್ಮ ಧರ್ಮ. ಈ ಧರ್ಮದ ಹೊರೆಯನ್ನು ದೊರೆಗಳು ಹೆಗಲ ಮೇಲೆ ಹೇರಿ ಹೋಗಿದ್ದಾರೆ. ಯುವರಾಜ ಶ್ರೀ ಶಿವಲಿಂಗರುದ್ರಸರ್ಜರ ಪಟ್ಟಾಭಿಷೇಕ ವಿಳಂಬ ಮಾಡಬಾರದು. ನಾವೇ ಕಿತ್ತೂರಿನ ದೊರೆ ಕೈಲಾಸವಾಸಿಗಳಾದರು. ಕಿತ್ತೂರಿನ ದೊರೆ ಚಿರಾಯುವಾಗಲಿ ಎಂದು ಶತ್ರುಗಳ ಎದೆಯೊಡೆಯುವಂತೆ ಜಯಘೋಷ ಮಾಡಬೇಕು. ದುಃಖವನ್ನು ನುಂಗಿಕೊಂಡು ಯುವರಾಜ ಕುಮಾರರನ್ನು ಹರಸಿ ಅನಾಥವಾಗಿರುವ ಕಿತ್ತೂರಿನ ಮಕ್ಕಳನ್ನು ಕಾಪಾಡಿ'[೭೪] (ಕೃಷ್ಣರಾಯರು ಅ.ನ, ೨೦೦೭, ವೀರರಾಣಿ ಕಿತ್ತೂರು ಚೆನ್ನಮ್ಮ, ಪುಟ-೪೧) ಎಂದು ವಿನಂತಿಸಿಕೊಳ್ಳುತ್ತಾರೆ. ದೀಕ್ಷಿತರ ಮಾತುಗಳನ್ನು ಕೇಳುತ್ತಿದ್ದಂತೆಯೇ ರುದ್ರಮ್ಮರಾಣಿ ತಾನಿನ್ನು ಕರ್ತವ್ಯಚ್ಯುತಳಾಗುವುದಿಲ್ಲವೆಂದು ನಿರ್ಧರಿಸುತ್ತಾಳೆ.

ಚೆನ್ನಮ್ಮರಾಣಿಯೂ ಸಹ ಯಾವೊಂದು ನಿರ್ಧಾರ ತೆಗೆದುಕೊಳ್ಳಬೇಕಾದರೂ ದೀಕ್ಷಿತರ ಸಲಹೆಯನ್ನು ಕೇಳುತ್ತಿರುತ್ತಾಳೆ. ದೀಕ್ಷಿತರು ಪೂಜೆ ಮಾಡುವ ನೆಪದಲ್ಲಿ ಚೆನ್ನಮ್ಮರಾಣಿಯ ಹತ್ತಿರ ಹೋಗಿ ಬರುತ್ತಿರುತ್ತಾರೆ. ಆದರೆ ಒಂದು ಸಲ ಅನಾರೋಗ್ಯದ ನೆಪವೊಡ್ಡಿ ರಾಯಣ್ಣನನ್ನು ತನ್ನ ಶಿಷ್ಯ ಎಂದು ಕಳುಹಿಸಿಕೊಟ್ಟಾಗ ಚೆನ್ನಮ್ಮಳಿಗೆ ಕಿತ್ತೂರಿನ ಬಿಡುಗಡೆಗೆ ಸೈನ್ಯ ಕಟ್ಟುತ್ತಿರುವ ವಿಷಯ ತಿಳಿಸಿ ಬರುವವನು. ಈ ಎಲ್ಲ ವಿಷಯ ಗಮನಿಸಿದ ಕ್ಯಾಪ್ಟನ್ ಹ್ಯಾರಿಸ್ ದೀಕ್ಷಿತರಿಗೆ ಮರಣದಂಡನೆಯ ಶಿಕ್ಷೆ ವಿಧಿಸುವನು. ದೀಕ್ಷಿತರು ಮತ್ತು ಅವರ ಪತ್ನಿ ತುಳಜಾಭವಾನಿಗೆ ಗಲ್ಲು ಹಾಕುವ ಸಂದರ್ಭದಲ್ಲಿ ಕಣ್ಣು ಕಟ್ಟಲು ಹೋದಾಗ ಅದನ್ನು ನಿರಾಕರಿಸುತ್ತಾರೆ. ಇಂದು ಸತ್ತು ನಾಳೆ ಮತ್ತೆ ಹುಟ್ಟುತ್ತೇನೆ. ಕಿತ್ತೂರು ಸ್ವತಂತ್ರವಾದ ಮೇಲೆ ನನಗೆ ಅಂತಿಮ ಶಾಂತಿ "ಕಿತ್ತೂರಿಗೆ ಜಯವಾಗಲಿ" ಎಂದು ಘೋಷಿಸುತ್ತ ನೇಣಿನ ಕುಡಿಕೆಗೆ ಕೊರಳೊಡ್ಡುತ್ತಾರೆ. ಇಲ್ಲಿ ಸಾಮಾನ್ಯ ವ್ಯಕ್ತಿಗಳೂ ಸಹ ರಾಜ್ಯದ ಏಳ್ಗೆಗಾಗಿ ಶ್ರಮಿಸುವುದಲ್ಲದೆ ತಮ್ಮ ಪ್ರಾಣವನ್ನು ಕೊಡಲು ಸಹ ಹಿಂಜರಿಯುತ್ತಿರಲಿಲ್ಲ ಎಂಬ ಅಂಶವನ್ನು ಕಾದಂಬರಿಕಾರರು ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ.

೬.೨.೧೯ ರಾಜಶೇಖರ :

ರಾಜಶೇಖರ ಇದೊಂದು ಕಾಲ್ಪನಿಕ ಪಾತ್ರವಾಗಿದ್ದು ನರಗುಂದ ಬಂಡಾಯದ ಚರಿತ್ರೆಯಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯೂ ಸಹ ಯಾವ ತೆರನಾಗಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದನು ಎಂಬುದನ್ನು ಈ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಐತಿಹಾಸಿಕ ಸತ್ಯಾಂಶಗಳಿಗೆ ಅಪಚಾರವಾಗದಂತೆ ಕಾಲ್ಪನಿಕ ಪಾತ್ರ ರೂಪಿಸಿಕೊಳ್ಳಲು ಕಾದಂಬರಿಕಾರನಿಗೆ ಸ್ವಾತಂತ್ರ್ಯವಿರುತ್ತದೆ ಎಂಬುದು ಎಲ್ಲ ಕಾದಂಬರಿಕಾರರು ಹೇಳುವ ಮಾತುಗಳು. ರಾಜಶೇಖರನೆಂಬ ಕಾಲ್ಪನಿಕ ಪಾತ್ರವನ್ನು ಸೃಷ್ಟಿಸುವ ಉದ್ದೇಶವೇನಿತ್ತು ಎಂಬುದರ ಬಗ್ಗೆ ಕಾದಂಬರಿಕಾರ ಹೇಳುವ ಮಾತುಗಳೆಂದರೆ 'ನರಗುಂದದ ಬಂಡಾಯಕ್ಕೆ ಸಂಬಂಧಿಸಿದ ಸಾಮಗ್ರಿಯನ್ನೆಲ್ಲ ಅಮೂಲಾಗ್ರವಾಗಿ ಪರಿಶೋಧಿಸಿದಾಗ, ಅಲ್ಲಿ ನಡೆದ ಹೋರಾಟ ನನಗೆ ಅಷ್ಟೇನೂ ಗಂಭೀರ ಸ್ವರೂಪದ್ದೆನಿಸಲಿಲ್ಲ. ಜನರು ತಿಳಿದಂತೆ ಬಾಬಾಸಾಹೇಬ್ ಶೂರನೂ ಆಗಿರಲಿಲ್ಲ. ಅವನ ಸುತ್ತಮುತ್ತಲಿನ ಅಧಿಕಾರಿಗಳಲ್ಲೂ ವೀರಗುಣವೇ ಕಂಡು ಬರಲಿಲ್ಲ. ಹೀಗಾಗಿ, ಸಪ್ಪೆಯಾಗಿಯೇ ನಡೆದ ಆ ಬಂಡಾಯವನ್ನು ಹಾಗೇ ಚಿತ್ರಿಸದೆ, ರಾಜಶೇಖರನ ಪಾತ್ರವನ್ನು ಕಲ್ಪಿಸಿಕೊಂಡು, ಅಲ್ಲಿ ನಡೆದ ಘಟನೆಗಳಲ್ಲಿ ಅವನನ್ನೂ ತೊಡಗಿಸಿ ಒಟ್ಟಾರೆ ಕಾದಂಬರಿ ಗಂಭೀರವಾಗುವಂತೆ ಮಾಡಲು ನಾನಿಲ್ಲಿ ಯತ್ನಿಸಿದ್ದೇನೆ'[೬೫] (ಬಸವರಾಜ ಸಾದರ, ೨೦೦೦, ಪುಟ-೨೫೯) ಎಂದು ಹೇಳಿಕೊಂಡಿದ್ದಾರೆ.

ನರಗುಂದ ಸಂಸ್ಥಾನದ ಪುಟ್ಟ ಪಡೆಗೆ ಈತನೇ ದಳಪತಿಯಾಗಿ ಕಾರ್ಯನಿರ್ವಹಿಸುತ್ತ ದೊರೆಯ ವಿಶ್ವಾಸ ಪಡೆದುಕೊಂಡಿದ್ದನು. ಆದರೆ ರಾಘೋಬನು ಪಿತೂರಿ ಮಾಡಿ ರಾಜಶೇಖರನನ್ನು ಊರಿನಿಂದಲೇ ಓಡಿಸುವ ತಂತ್ರ ಮಾಡುವನು. ರಾಜಶೇಖರನ ಪಾತ್ರದ ಮೂಲಕ ಅಂದಿನ ಸಾಮಾಜಿಕ ಸ್ತರದಲ್ಲಿ ಕೆಳಜಾತಿಯವರು ಮೇಲ್ಜಾತಿಯವರಿಂದ ಅವಮಾನಿತರಾಗುತ್ತಿದ್ದ ಪರಿಯನ್ನು ಎತ್ತಿ ತೋರಿಸಿದ್ದಾರೆ. ಕೀಳು ಕುಲದವನಾದ ರಾಜಶೇಖರನ ಪಾತ್ರಕ್ಕೆ ಪ್ರಾಧಾನ್ಯತೆ ಕೊಟ್ಟಿರುವ ಲೇಖಕರಿಗೆ ಇರುವ ಪ್ರಗತಿಪರ ಧೋರಣೆಯನ್ನು ಎತ್ತಿ ತೋರಿಸುತ್ತದೆ. ವಸಾಹತುಶಾಹಿಯನ್ನು ಎದುರಿಸಿ ನಿಂತು ಹೋರಾಡಿದ್ದನ್ನು ಕಾಲ್ಪನಿಕವಾದರೂ ಅರ್ಥಪೂರ್ಣವಾಗಿ ಪ್ರತಿಪಾದಿಸಿರುವರು. ಹೀಗೆ ಹೋದ ರಾಜಶೇಖರ ಎರಡು ವರ್ಷಗಳವರೆಗೆ ಜಮಖಂಡಿಯಲ್ಲಿದ್ದು ಅಲ್ಲಿ ಛೋಟೂಸಿಂಗ್‌ನ ಸ್ನೇಹ ಸಂಪಾದಿಸಿಕೊಂಡು ತನ್ನ ಧೈರ್ಯ ಶೌರ್ಯಗಳಿಂದ ಆತನನ್ನು ಮೆಚ್ಚಿಸಿ ಕುದುರೆಯೊಂದನ್ನು ಬಹುಮಾನವಾಗಿ ಪಡೆದುಕೊಂಡಿದ್ದ. ನರಗುಂದಕ್ಕೆ ವಾಪಸ್ಸಾದಾಗ ಅಲ್ಲಿನ ವಿದ್ಯಮಾನಗಳನ್ನು ಕಂಡು ಚಕಿತನಾಗುತ್ತಾನೆ. ರಾಜಾಸಾಹೇಬರು ಇಂಗ್ಲೀಷರ ವಿರುದ್ಧ ಲಢಾಯಿ

ಮಾಡುವ ವಿಷಯ ತಿಳಿದು ಇವನ ರಕ್ತ ಬಿಸಿಯಾಗುತ್ತದೆ. ಇವನ ವಂಶಸ್ಥರೆಲ್ಲರೂ ಸೈನಿಕರಾಗಿದ್ದವರೇ.

ರಾಜಶೇಖರನನ್ನು ಭೇಟಿಯಾದ ಕೆಂಚಣ್ಣ ನರಗುಂದದಲ್ಲಿ ನಡೆಯುತ್ತಿರುವ ಇಂಗ್ರೇಜರ ಕುತಂತ್ರದ ರಾಜಕೀಯತೆಯನ್ನು ತಿಳಿಸುತ್ತ ಊರಿನಲ್ಲಿ ಯಾರನ್ನೂ ಸುಲಭವಾಗಿ ನಂಬಬೇಡ. ದೇಶಪ್ರೇಮಿ ಯಾರು, ದೇಶದ್ರೋಹಿ ಯಾರು ಎಂದು ತಿಳಿಯುವುದು ಕಷ್ಟವಾಗಿದೆ ಎನ್ನುವನು. ಯುದ್ಧ ನಡೆದಾಗ ಜನರಿಗೆ ಆಹಾರದ ಕೊರತೆಯಾಗಬಾರದೆಂಬ ಉದ್ದೇಶದಿಂದ ರೈತರನ್ನು ಕಾಡಿ ಬೇಡಿ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದರೆ ಅವು ಕೋಟೆಗೆ ಬಂದು ಬೀಳುವ ಮೊದಲೇ ದೇವಸ್ಥಾನದ ಉಗ್ರಾಣಕ್ಕೆ ಸೇರುತ್ತಿದ್ದವು. ಇದರಿಂದ ನೊಂದ ರಾಜಶೇಖರ ದೊರೆಯೆದುರು ಈ ವಿಷಯ ಪ್ರಸ್ತಾಪಿಸಿ ಅದನ್ನು ತಪ್ಪಿಸುತ್ತಾನೆ. ಮ್ಯಾನ್‌ಸನ್ ಎಂಟತ್ತು ಜನರ ದಂಡನ್ನು ತೆಗೆದುಕೊಂಡು ಬರುವನು. ಭಾಸ್ಕರರಾಯ ಅವನ ಮೇಲೆ ದಾಳಿ ಮಾಡಿದಾಗ ತನ್ನ ಜೀವ ಉಳಿಸಬೇಕೆಂದು ಶರಣು ಬರುವನು. ಆಗ ರಾಜಶೇಖರ ಶರಣು ಬಂದವರಿಗೆ ಅಭಯ ತೋರುವುದು ಭಾರತೀಯ ಸಂಸ್ಕೃತಿ ಎಂದಾಗ ಭಾಸ್ಕರರಾಯ ರಾಜಶೇಖರನ ಮೇಲೆಯೇ ಸಂಶಯ ತಾಳಿ ಮ್ಯಾನ್‌ಸನ್‌ನ ಕತ್ತನ್ನು ಕತ್ತರಿಸುವನು. ರಾಘೋಬ ರಾಜಶೇಖರನ ಬಗ್ಗೆ ಅಸಡ್ಡೆಯ ಭಾವನೆಯನ್ನೇ ಹೊಂದಿದ್ದು ಈತ ಇಂಗ್ಲೀಷರ ಗೂಢಚಾರನಿರಬೇಕೆಂದು ಅಪಮಾನಗೊಳಿಸುವನು. ಭಾಸ್ಕರರಾಯ ಇವನನ್ನು ಬಂಧನದಲ್ಲಿಟ್ಟು ವಿಚಾರಣೆಗೊಳಪಡಿಸುವನು. ಈ ವಿಷಯ ತಿಳಿದ ಮಲ್ಲಿಕಾ ಆತನಿಗೆ ಊರು ಬಿಡುವಂತೆ ಹೇಳುವಳು. ಕೆಂಚಣ್ಣನೂ ಸಹ ಯುದ್ಧದ ತಯಾರಿ ನಡೆದಿರುವಾಗ ತಾವು ಊರು ಬಿಡುವುದು ಕ್ಷೇಮವೆಂದು ಸೂಚಿಸುವನು. ಅಷ್ಟರಲ್ಲಿಯೇ ಸೈನಿಕನೊಬ್ಬ ಓಡಿ ಬಂದು ದಂಡು ಊರೊಳಗೆ ಬಂದುಬಿಟ್ಟಿದೆ. ರಾಘೋಬನಾಗಲಿ, ರಾಜಾಸಾಹೇಬನಾಗಲಿ ಕಾಣುತ್ತಿಲ್ಲವೆಂದು ಹೇಳಿದಾಗ ಎಲ್ಲ ಕಡೆ ಹುಡುಕಿದರೂ ಕಾಣದಾಗುತ್ತಾರೆ.

ರಾಜಶೇಖರ ಸೈನ್ಯದ ಮುಂದಾಳತ್ವ ವಹಿಸಿ ಮುನ್ನಡೆಸಬೇಕೆಂದು ಮುನ್ನುಗ್ಗಿದರೂ ಸಹ ಸೈನಿಕರೆಲ್ಲರೂ ರಾಜನಿಲ್ಲನೆಂಬ ಕಾರಣದಿಂದ ಚದುರಿ ಹೋಗುತ್ತಾರೆ. ಕೃಷ್ಣಾಜಿಪಂತನೇ ತನ್ನ ಸೈನಿಕರಿಗೆ ಈತ ಇಂಗ್ಲೀಷರ ಪರಮ ವೈರಿ ಬಿಡಬೇಡಿರೆಂದು ಅವನ ಕೈ ಕತ್ತರಿಸಿ ಹಾಕುತ್ತಾನೆ. ಆದರೂ ವೀರಾವೇಶದಿಂದಲೇ ಹೋರಾಡುತ್ತ ರಾಜಶೇಖರ ಕೃಷ್ಣಾಜಿಪಂತನಿಗೆ ಸೆರೆಯಾಗುತ್ತಾನೆ. ಇಂಗ್ಲೀಷರಿಂದ ವಿಚಾರಣೆಗೊಳಗಾದ ರಾಜಶೇಖರ ನಿರಪರಾಧಿಯೆಂದು ತಿಳಿಯಲಾಗಿ ಬಿಡುಗಡೆಗೊಂಡು ಮಲ್ಲಿಕಾಳೊಂದಿಗೆ ವಿವಾಹವಾಗುತ್ತದೆ.

ಫ್ರಾನ್ಸ್ ದೇಶದ ಮಾರ್ಸೆಲ್ಸ್ ಊರಿನವನಾದ ಜಾನ್ ಡ್ಯೂವೋರೊ ಮರಾಠಾ ಸೈನ್ಯದ ನಾಯಕನಾದ ಸಂತೋಜಿ ಘೋರ್ಪಡೆಯಿಂದ ಹಣವನ್ನೆಲ್ಲ ಕಳೆದುಕೊಂಡು ದುರ್ಗಕ್ಕೆ ರಕ್ತ ಸಿಕ್ತವಾಗಿ ಬಂದು ತನ್ನ ಬದುಕಿನ ಕಥೆಯನ್ನೆಲ್ಲ ಹೇಳಿಕೊಂಡು ದುರ್ಗದ ಕೋಟೆಯನ್ನು ಬಲಪಡಿಸುವಲ್ಲಿ ನೆರವಾಗುತ್ತಾನೆ. ಹಾಗೆಯೇ ಸೀರ್ಯದ ಖಾಸಿಂಖಾನ್‌ನ ಆಶ್ರಯದಲ್ಲಿದ್ದ ಗಾಯಕಿ ಮೆಹರ್‌ಬಾನು ದುರ್ಗದಲ್ಲಿ ಕಲಾಪ್ರದರ್ಶನ ಮಾಡಬೇಕೆಂದು ಬಯಸುತ್ತಾಳೆ. ಅವಕಾಶ ಸಿಗದೇ ಇದ್ದಾಗ ಹತಾಶಳಾಗುತ್ತಾಳೆ. ನಾಯಕರ ಬಗ್ಗೆ ಅಪನಂಬಿಕೆ ತಾಳುತ್ತಾಳೆ. ಆದರೆ ಅವಕಾಶ ಸಿಕ್ಕು ದೊರೆಗಳ ಬಗ್ಗೆ ತಾನು ತಿಳಿದುಕೊಂಡಿರುವ ವಿಚಾರಗಳು ತಪ್ಪೆಂದು ತಿಳಿದಾಗ ಪಶ್ಚಾತ್ತಾಪ ಪಡುತ್ತಾಳೆ. ಈ ಎಲ್ಲ ಸನ್ನಿವೇಶಗಳನ್ನು ತ.ರಾ.ಸು ವಿಜಯೋತ್ಸವ ಕಾದಂಬರಿಯಲ್ಲಿ ಓದುಗರ ಮನಮುಟ್ಟುವ ರೀತಿಯಲ್ಲಿ ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿಸಿರುವರು.

ಹೀಗೆ ಅನೇಕ ಪಾತ್ರಗಳು ಪುನರ್‌ಲೇಖದ ಸ್ವರೂಪದಲ್ಲಿ ಚಿತ್ರಿತವಾಗಿವೆ.

ಅಧ್ಯಾಯ ೭

ಸಮಾರೋಪ

ಅನುಬಂಧ ೧

ಪ್ರಾಥಮಿಕ ಆಕರಗಳು

ಅನುಬಂಧ ೨

ಪರಾಮರ್ಶನ ಕೃತಿಗಳು

ಅಧ್ಯಾಯ ೭

ಸಮಾರೋಪ

ಆಧುನಿಕ ಕನ್ನಡ ಸಾಹಿತ್ಯ ಪಾಶ್ಚಿಮಾತ್ಯ ಪ್ರಭಾವದಿಂದ ಬೆಳೆದು ಬಂದಿದ್ದರೂ ಸಹ ಇಲ್ಲಿ ಪರಂಪರಾಗತ ಸತ್ವವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ನವೋದಯದ ನಂತರ ಪ್ರಗತಿಶೀಲ ಸಾಹಿತ್ಯ ಮಹತ್ವದ ಘಟ್ಟವಾಗಿದೆ. ಪ್ರಗತಿಶೀಲರು ತಾವು ನವೋದಯದವರಿಗಿಂತ ತೀರ ಭಿನ್ನ, ಬಂಡಾಯಕೋರರು ಎಂದು ಘೋಷಿಸಿಕೊಂಡರೂ ಸಹ ಪ್ರಗತಿಶೀಲ ಸಾಹಿತ್ಯವು ನವೋದಯ ಸಾಹಿತ್ಯದ ತೀವ್ರ ಸ್ವರೂಪ ಎಂದೇ ಕಾಣುತ್ತದೆ. ಎರಡೂ ಪಂಥಗಳು ವಾಸ್ತವ ಮಾರ್ಗವನ್ನೇ ಆರಿಸಿಕೊಂಡರೂ ಸಹ ಪ್ರಗತಿಶೀಲರು ವಿಮರ್ಶಾತ್ಮಕ ವಾಸ್ತವ ಮಾರ್ಗವನ್ನು ಹಿಡಿದರು. ವ್ಯಕ್ತಿಯ ಬದುಕಿನ ಆರ್ಥಿಕ ಮತ್ತು ಸಾಮಾಜಿಕ ಆಯಾಮಗಳಿಗೆ ಒತ್ತುಕೊಟ್ಟರು.

ಇಲ್ಲಿ ಒಟ್ಟು ಸಂಶೋಧನೆಯ ಅಧ್ಯಯನದ ಫಲಶೃತಿಯನ್ನು ವಿವರಿಸಲಾಗಿದೆ. ಈ ಅಧ್ಯಯನವು ವಿಭಿನ್ನ ಆಲೋಚನೆಯಿಂದ ಕೂಡಿದ್ದಾಗಿದೆ. ಗತಕಾಲದ ಇತಿಹಾಸದ ಮೇಲೆ ಬೆಳಕು ಚೆಲ್ಲುವ, ವಿಶಾಲ ತಳಹದಿಯಲ್ಲಿಯೇ ಇತಿಹಾಸದ ಪುನರ್ ನಿರ್ಮಾಣದ ಕಾರ್ಯ ನಡೆಯಬೇಕು. ಒಂದು ಕಲ್ಲಿನ ಕೋಟೆಗೂ ತನ್ನದೇ ಆದ ಇತಿಹಾಸ ಇರುತ್ತದೆ. ಅದೊಂದು ಇತಿಹಾಸದ ಕುರುಹು. ಅದು ತನ್ನದೇ ಆದ ರೀತಿಯಲ್ಲಿ ಇತಿಹಾಸದ ಪ್ರಜ್ಞೆ ಮೂಡಿಸುತ್ತದೆ. ಇಂಥವುಗಳನ್ನು ದಾಖಲಿಸುವ, ಇತಿಹಾಸವನ್ನು ಜೋಪಾನ ಮಾಡಿ ಕಾಪಾಡುವತ್ತ ಪ್ರಯತ್ನಗಳು ನಿರಂತರ ನಡೆಯಬೇಕಾಗಿದೆ. ಅಂತಹ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ. ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರು ಐತಿಹಾಸಿಕ ಕಾದಂಬರಿಗಳನ್ನು ಕಲಾಪೂರ್ಣವಾಗಿ ರಸವತ್ತಾಗಿ, ಕುತೂಹಲ ಕೆರಳಿಸುವಂತೆ ಚಿತ್ರಿಸಿದ್ದಾರೆ. ಸಿಕ್ಕಿರುವ ಕೆಲವೇ ಸಾಲುಗಳ ಸತ್ಯ ಸಂಗತಿಗಳ ಹಿನ್ನೆಲೆಯಲ್ಲಿ ಪಾತ್ರಗಳನ್ನು ಸೃಷ್ಟಿಸಿ ಕಥೆ ಹೆಣೆದಿದ್ದಾರೆ. ಇವರು ಇತಿಹಾಸವನ್ನು ಪುನರ್‌ಸೃಷ್ಟಿಸುವ ಪುನರ್‌ಲೇಖದ ಸ್ವರೂಪದಲ್ಲಿ ಕಾದಂಬರಿಗಳನ್ನು ರಚಿಸಿದ್ದು ಇಲ್ಲಿ ಪ್ರತಿಯೊಂದು ಕಾದಂಬರಿಗಳಲ್ಲಿನ ಕಥಾವಸ್ತುವನ್ನು ಅಧ್ಯಯನಕ್ಕೊಳಪಡಿಸಿ ಆ ಕಾದಂಬರಿಗಳ ಉದ್ದೇಶವನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಅ.ನ.ಕೃ ಕನ್ನಡಿಗರಿಗೆ ನಮ್ಮ ಇತಿಹಾಸವನ್ನು ಪರಿಚಯಿಸುವ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯದ ಸಂಪೂರ್ಣ ಇತಿಹಾಸವನ್ನು ತಮ್ಮ ಹತ್ತು ಕಾದಂಬರಿಗಳ ಮಾಲಿಕೆಯಲ್ಲಿ ಚಿತ್ರಿಸಿದ್ದು ವಿಜಯನಗರದ ಜೊತೆ ಜೊತೆಗೆ ಬಿಜಾಪುರದ ವಿಚಾರಗಳನ್ನು ನಿರೂಪಿಸುತ್ತ ಸಮಕಾಲೀನ ಘಟನೆಗಳು ಕೈ ತಪ್ಪದಂತೆ ಎಚ್ಚರ ವಹಿಸಿದ್ದಾರೆ. ಇತಿಹಾಸವನ್ನು ಪುನರ್‌ಸೃಷ್ಟಿಸುವ ಸಂದರ್ಭದಲ್ಲಿ ಅ.ನ.ಕೃ

ಮತೀಯವಾದಿ ಮುಸ್ಲಿಮರು ನಡೆಸಿದ ಲೂಟಿ. ದರೋಡೆ, ಮಾನಹಾನಿ, ಕೊಲೆಗಳನ್ನು ವಿಸ್ತಾರವಾಗಿ ಹೇಳಿರುವರು. ಧರ್ಮಕ್ಕಾಗಿ, ದೇಶಕ್ಕಾಗಿ, ಆತ್ಮಗೌರವದ ಪ್ರತಿಷ್ಠೆಗಾಗಿ ಸತತವಾಗಿ ಒಬ್ಬಂಟಿಯಾಗಿಯೇ ಹೋರಾಡುತ್ತಲೇ ವೀರಸ್ವರ್ಗವನ್ನೇರುವ ಕಥೆಯೇ ರಣವಿಕ್ರಮ. ಹಾಗೆಯೇ ಕಿತ್ತೂರಿನ ರಾಣಿ ಚೆನ್ನಮ್ಮ, ಮಾಗಡಿ ಕೆಂಪೇಗೌಡ ಹಾಗೂ ಹಾವನೂರಿನ ಸಂಸ್ಥಾಪಕ ಹನುಮಂತಗೌಡನನ್ನು ಕುರಿತು ಕಾದಂಬರಿಗಳನ್ನು ರಚಿಸಿದ್ದು ಈ ಎಲ್ಲ ಕಾದಂಬರಿಗಳು ಓದುಗರ ಮನ ಗೆಲ್ಲುತ್ತವೆ.

ತ.ರಾ.ಸುರವರು ಕರ್ನಾಟಕದ ಉಜ್ವಲ ಇತಿಹಾಸವನ್ನು ಕಟ್ಟಿಕೊಡುವ ಉದ್ದೇಶದಿಂದ ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂಬತ್ತು ಕಾದಂಬರಿಗಳನ್ನು ರಚಿಸಿದ್ದು ಅವುಗಳಲ್ಲಿ ಚಿತ್ರದುರ್ಗದ ನಾಯಕರ ಏಳು ಬೀಳುಗಳನ್ನು ಚಿತ್ರಿಸಿದ್ದಾರೆ. ಇವರ ಯಾವುದೇ ಐತಿಹಾಸಿಕ ಕಾದಂಬರಿಗಳನ್ನು ಓದುತ್ತಾ ಹೋದರೂ ಆ ಕಾಲದ ಜನಜೀವನ, ಸಂಸ್ಕೃತಿಯ ಚಿತ್ರಣ ನಮ್ಮ ಕಣ್ಮುಂದೆ ಕಟ್ಟುತ್ತದೆ. ಅದರಲ್ಲೂ ವಿಶೇಷವಾಗಿ ದುರ್ಗದ ಇತಿಹಾಸವನ್ನು ಕುರಿತು ರಚಿಸಿದಂಥ ಕಾದಂಬರಿಗಳನ್ನು ಓದುತ್ತ ಹೋದಂತೆ ನಮ್ಮ ಕಣ್ಮುಂದೆ ದುರ್ಗದ ಚಿತ್ರಣವೇ ಬರುತ್ತದೆ. ಅಲ್ಲಿಯ ಒಂದೊಂದು ಕಲ್ಲುಗಳೂ ಸಹ ಒಂದೊಂದು ಕಥೆಗಳನ್ನು ಹೇಳುತ್ತವೆ. ಒಂದು ಪಾಳೆಯಗಾರರ ಮನೆತನದಲ್ಲಿ ರಾಜ್ಯಭಾರಕ್ಕಾಗಿ ಇಷ್ಟೆಲ್ಲ ರಕ್ತಪಾತ, ದ್ವೇಷ, ಮತ್ಸರಗಳು ನಡೆದಿರಬಹುದಾದರೆ ದೊಡ್ಡ ದೊಡ್ಡ ಸಾಮ್ರಾಜ್ಯಗಳಲ್ಲಿ ಏನೆಲ್ಲ ನಡೆದಿರಬಹುದು ಎಂಬ ಕಲ್ಪನೆ ಮೂಡುತ್ತದೆ. ಇವರು ಚಿತ್ರದುರ್ಗದ ಕಲ್ಲು ಕಲ್ಲನ್ನೂ, ಅಂಗುಲ ಅಂಗುಲವನ್ನೂ ಮಾತನಾಡಿಸಿದ್ದಾರೆ. ಅಲ್ಲಿನ ಕೋಟೆ ಕೊತ್ತಲುಗಳೂ, ಕಂದಕ ಬತೇರಿಗಳೂ, ಗುಡಿ ಗೋಪುರಗಳೂ, ಬಂಡೆ ಬಂಡೆಗಳೂ, ಹೊಂಡ ಹೊಂಡಗಳೂ ತಮ್ಮ ಇತಿಹಾಸವನ್ನು ಬಿಚ್ಚಿ ಹೇಳುತ್ತವೆ. ಚಿತ್ರದುರ್ಗದ ಗಂಡು ಮೆಟ್ಟಿನ ಸಂಗೀತಗಾರ ಕೋಟೆ ಬಿದ್ದರೂ ಟೀಪುವನ್ನು ಪ್ರತಿಭಟಿಸಿ, ತನ್ನ ನಾಲಗೆಯ ಭೀತಿಗೆ ತಾಯಿಯನ್ನು ಸುಲ್ತಾನನ ಭೋಗದ ಹೆಣ್ಣಾಗಿ ಮಾಡಲಾರೆನೆಂದು ನಾಲಗೆಯನ್ನು ದೇವಿಗೆ ಅರ್ಪಿಸಿ ಟೀಪುವಿನ ಹೃದಯವನ್ನು ಸೋಲಿಸಿದ ಮಹಾನುಭಾವನ ಕಥೆ ಹಂಸಗೀತೆ.

ಒಂದು ಸಾವಿರ ವರ್ಷದ ಹಿಂದಿನ ಕರ್ನಾಟಕ ಭಾರತೀಯ ಚರಿತ್ರೆಯಲ್ಲೆಲ್ಲ ಅಗ್ರಸ್ಥಾನವನ್ನು ಪಡೆದುಕೊಂಡ ನೃಪತುಂಗನ ಜೀವನದ ಕುರಿತು ಹೇಳುವಾಗ ಕೆಲವು ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿಕೊಂಡು ಕಾದಂಬರಿಯನ್ನು ರಮ್ಯೋಜ್ವಲಗೊಳಿಸಿದ್ದಾರೆ. ಹಾಗೆಯೇ ವಿಷ್ಣುವರ್ಧನನನ್ನು ಕುರಿತು ಸಿಡಿಲಮೊಗ್ಗು ಮತ್ತು ಕೀರ್ತಿನಾರಾಯಣ, ಚಾವುಂಡರಾಯನನ್ನು ಕುರಿತು ಶಿಲ್ಪಶ್ರೀ ಕಾದಂಬರಿಯನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಟ್ಟೀಮನಿಯವರು ನರಗುಂದ ಬಂಡಾಯ, ಪೌರುಷ ಪರೀಕ್ಷೆ ಮತ್ತು ಸಂಗೊಳ್ಳಿ ರಾಯನಾಯಕ ಎಂಬ ಮೂರು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಈ ಕಾದಂಬರಿಗಳಲ್ಲಿ ಅವರು ತೋರಿದ ಹೊಸತನ ಮತ್ತು ವೈಶಿಷ್ಟ್ಯವೆಂದರೆ ಐತಿಹಾಸಿಕ ಆವರಣಕ್ಕೆ ಧಕ್ಕೆಯಾಗದ ಹಾಗೆ ಹೊಸ ಪಾತ್ರಗಳನ್ನು ಸೃಷ್ಟಿಸಿ ಆ ಸಾಮಾನ್ಯ ವ್ಯಕ್ತಿಗಳ ಮೂಲಕವೇ ಐತಿಹಾಸಿಕ ಆವರಣವನ್ನು ಬಿಚ್ಚಿಡುವ ಕಾರ್ಯ ಸಾಧಿಸಿದ್ದಾರೆ. ನರಗುಂದ ಬಂಡಾಯದ ರಾಜಶೇಖರ, ಪೌರುಷ ಪರೀಕ್ಷೆಯ ಮಡಿವಾಳ ಇವು ಅವರ ಕಲ್ಪಿತ ಪಾತ್ರಗಳು. ಈ ಕಲ್ಪಿತ ಪಾತ್ರಗಳ ಮೂಲಕವಾಗಿ ಸಾಮಾನ್ಯ ವ್ಯಕ್ತಿಗಳೂ ಸಹ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಪಣಕ್ಕಿಟ್ಟು ಸಂಸ್ಥಾನಗಳಿಗೆ ನಿಷ್ಠರಾಗಿ ಹೋರಾಡಿದ ಚಿತ್ರಣವನ್ನು ನೀಡಿರುವರು. ಇಲ್ಲಿ ಇತಿಹಾಸವನ್ನು ಕಾದಂಬರಿಗಳ ಮೂಲಕವಾಗಿ ಪುನರ್‌ಸೃಷ್ಟಿಸಿದಂತಿವೆ. ಇತಿಹಾಸವನ್ನು ಹೊಸ ಬಗೆಯಿಂದ ಅರ್ಥೈಸಿರುವರು. ಇವರ ಸ್ವಾತಂತ್ರ್ಯದೆಡೆಗೆ ಮತ್ತು ಮಾಡಿಮಡಿದವರು ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳಾಗಿದ್ದು ಗಾಂಧೀಜಿಯವರು ಮಾಡು ಇಲ್ಲವೆ ಮಡಿ ಎಂದು ಕರೆಕೊಟ್ಟಿದ್ದಕ್ಕನುಗುಣವಾಗಿ ಪ್ರತಿಯೊಬ್ಬ ಭಾರತೀಯನು ಸಂಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣುತ್ತೇವೆ. ಹೆಚ್ಚಾಗಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ದೇಶಕ್ಕಾಗಿ ಪ್ರಾಣಾರ್ಪಣೆಗೈದಿರುವುದನ್ನು ಕಾದಂಬರಿಗಳಲ್ಲಿ ವಿವರಿಸಿರುವರು.

ನಿರಂಜನರ ಕಲ್ಯಾಣಸ್ವಾಮಿ ಮತ್ತು ಸ್ವಾಮಿ ಅಪರಂಪಾರ ಕೊಡಗಿನ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದ ಚಿತ್ರಣವಿರುವುದು. ಇಂಗ್ಲೀಷರು ಕೊಡಗಿನ ರಾಜನ ಜೊತೆ ಸ್ನೇಹ ಸಂಪಾದನೆ ಮಾಡಿದ ರೀತಿಯಲ್ಲಿ ವರ್ತಿಸಿ ಮೋಸ, ಕುತಂತ್ರದಿಂದ ಕೊಡಗುವನ್ನು ವಶಪಡಿಸಿಕೊಳ್ಳುವ ಕಥೆ ಇರುವುದು. ಮೃತ್ಯುಂಜಯ ಇದೊಂದು ವಿಭಿನ್ನ ರೀತಿಯ ಐತಿಹಾಸಿಕ ಕಾದಂಬರಿ. ಇದರಲ್ಲಿ ರಾಜಮಹಾರಾಜರ ಕಥೆ ಇರದೆ ಜನಸಾಮಾನ್ಯರ ಚಿತ್ರಣವನ್ನು ಕೊಟ್ಟಿರುವರು. ಇಲ್ಲಿ ಆಧುನಿಕ ಮಾನವನ ಪೂರ್ವಜರ ಕಥೆಯನ್ನು ಹೇಳಿರುವುದನ್ನು ಕಾಣುತ್ತೇವೆ. ಇದು ಐಗುಪ್ತ ದೇಶದ ನೀರಾನೆ ಪ್ರಾಂತದಲ್ಲಿ ನಡೆದಿರುವ ಘಟನೆಯಾಗಿರುವುದು.

ಜೀವನ ಮೌಲ್ಯಗಳ ಪ್ರತಿಪಾದನೆಯನ್ನು ಮಾಡುವ ಸಂದರ್ಭದಲ್ಲಿ ಕಾದಂಬರಿಗಳಲ್ಲಿ ವ್ಯಕ್ತವಾದ ವೀರ, ತ್ಯಾಗ, ಪ್ರೇಮ ಮತ್ತು ಕರುಣೆಯ ವಿಚಾರಗಳನ್ನು ಕುರಿತು ನೋಡಲಾಗಿದೆ. ಈ ಜೀವನ ಮೌಲ್ಯಗಳು ವ್ಯಕ್ತಿಗಳ ಬದುಕಿನ ಅಂಗಗಳಾಗಿದ್ದು ಅವುಗಳನ್ನು ಸಂದರ್ಭ, ಸನ್ನಿವೇಶಕ್ಕನುಸಾರವಾಗಿ ಅವರ ಮನದಾಳದಿಂದ ಹೇಗೆ ಹೊರಬರುತ್ತಿದ್ದವು ಎಂಬುದರ ಕುರಿತಾಗಿ

ಸ್ಪಷ್ಟಪಡಿಸಿಕೊಳ್ಳಲಾಗಿದೆ. ಇಲ್ಲಿನ ಪ್ರತಿಯೊಂದು ಪಾತ್ರಗಳ ಜೀವನಾದರ್ಶ, ಜೀವನ ಮೌಲ್ಯಗಳು ಓದುಗರ ಮನದಾಳದಲ್ಲಿ ಅಚ್ಚಳಿಯದಂತೆ ಉಳಿಯುತ್ತವೆ.

ಧಾರ್ಮಿಕ ಚಿಂತನೆಯ ಪ್ರತಿಪಾದನೆಯಲ್ಲಿ ಧರ್ಮ ಎಂಬುದು ಮಾನವನ ಬದುಕಿನಲ್ಲಿ ಹೇಗೆ ಹಾಸುಕೊಕ್ಕಾಗಿದೆ. ಧರ್ಮಪ್ರಸಾರದ ಕಾರ್ಯಕ್ಕಾಗಿ, ಸಾಮ್ರಾಜ್ಯದ ಶ್ರೇಯೋಭಿವೃದ್ಧಿಗೆ ಮಠಗಳು, ಮಠಾಧೀಶರು ವಹಿಸಿದ ಪಾತ್ರವೆಂತಹದ್ದು, ಇವರು ಧರ್ಮ, ಸಂಸ್ಕೃತಿ, ಜನಜೀವನವನ್ನು ರಕ್ಷಿಸಿ, ಉದ್ಧರಿಸಿ ಪ್ರಾಣಾಪಾಯದಿಂದ ಪಾರು ಮಾಡಿದ ಬಗೆ ಕುರಿತು ಹೇಳುತ್ತ, ಇವರ ಬದುಕಿನ ಹಲವಾರು ಸಂಗತಿಗಳನ್ನು ನೋಡಲಾಗಿದೆ. ಅಷ್ಟೇ ಅಲ್ಲದೆ ಕಾದಂಬರಿಗಳಲ್ಲಿ ಪ್ರಸ್ತಾಪವಾಗಿರುವ ವಿವಿಧ ಹಬ್ಬಗಳ ಕುರಿತು ನೋಡಲಾಗಿದೆ. ಹಬ್ಬಗಳು ಬದುಕಿನ ಅವಿಭಾಜ್ಯ ಅಂಗದಂತಿದ್ದು ಇವುಗಳನ್ನು ಸರ್ವರೂ, ಸರ್ವಕುಲದವರೂ ಐಕ್ಯತೆಯಿಂದ ಹೇಗೆ ಆಚರಿಸಿಕೊಂಡು ಬರುತ್ತಿದ್ದರು. ಈ ಹಬ್ಬಗಳನ್ನು ಆಚರಿಸುವ ಉದ್ದೇಶವೇನಿತ್ತು. ಇವು ಮನುಷ್ಯ ಜೀವನದಲ್ಲಿ ಸಂತೋಷಕೂಟವಾಗಿ ಹೇಗೆ ಬರುತ್ತಿದ್ದವು ಎಂಬೆಲ್ಲ ವಿಚಾರಗಳನ್ನು ನೋಡುವುದರ ಜೊತೆಗೆ ಹೋಳಿಹುಣ್ಣಿಮೆ, ಯುಗಾದಿ, ಗೌರಿಗಣೇಶ, ಮಹಾನವಮಿ(ದಸರಾ), ದೀಪಾವಳಿ ಹಬ್ಬಗಳನ್ನು ವೈಭವದಿಂದ ಆಚರಿಸುತ್ತಿದ್ದುದರ ಕುರಿತು ನೋಡಲಾಗಿದೆ. ಹಾಗೆಯೇ ಚಿತ್ರದುರ್ಗದವರು ವಿಶೇಷವಾಗಿ ಆಚರಿಸುತ್ತಿದ್ದ ಏಕನಾಥೇಶ್ವರಿ ಅಮ್ಮನ ಉತ್ಸವದ ಬಗ್ಗೆ ವಿವರಿಸಲಾಗಿದೆ.

ನಾಯಕ ಪ್ರಧಾನ ಪಾತ್ರಗಳಲ್ಲಿ ಐತಿಹಾಸಿಕ ಕಾದಂಬರಿಗಳಲ್ಲಿ ಬರುವ ರಾಜರನ್ನು ಕುರಿತು ನೋಡಲಾಗಿದೆ. ಏಕೆಂದರೆ ಇಂತಹ ಕಾದಂಬರಿಗಳಲ್ಲಿ ನಾಯಕನೆಂದರೆ ರಾಜನೆಂದೇ ಅರ್ಥ ಬಿಂಬಿಸಲಾಗುತ್ತದೆ. ಒಂದು ರಾಜ್ಯದ ಏಳು ಬೀಳುಗಳು ರಾಜನನ್ನೇ ಅವಲಂಬಿಸಿರುವುದರಿಂದ ಪರಾಕ್ರಮಿಯಾದ ಈತನ ಜೀವನ, ಆಡಳಿತದ ವೈಖರಿಯನ್ನು ಕುರಿತು ಸ್ಪಷ್ಟವಾಗಿ ಕಂಡುಕೊಳ್ಳಲಾಗಿದೆ. ಉಪೇಕ್ಷಿತ ಪಾತ್ರಗಳು ಕಾದಂಬರಿಗಳಲ್ಲಿ ಮಹತ್ವತೆಯನ್ನು ಪಡೆದುಕೊಂಡ ಸ್ತ್ರೀಯರು ಹಾಗೂ ಪುರುಷರ ಪಾತ್ರಗಳ ಕುರಿತು ಪುನರ್‌ಲೇಖದ ಸ್ವರೂಪದಲ್ಲಿ ನಿರೂಪಿಸಲಾಗಿದ್ದು ಇದರಲ್ಲಿ ಅವರ ಜೀವನದ ರೀತಿ, ನೀತಿ, ಸುಖ, ದುಃಖ ಹಾಗೂ ಅವರು ಬದುಕಿನಲ್ಲಿ ಎದುರಿಸಿದ ಸವಾಲುಗಳು ಎಲ್ಲದರ ಪರಿಚಯವಾಗುತ್ತದೆ. ಈ ಸ್ತ್ರೀಯರು ಪುರುಷನಿಗೆ ಸಹಾಯಕವಾಗಿ, ಬೆನ್ನೆಲುಬಾಗಿ ನಿಂತು ರಾಜ್ಯದ ಏಳ್ಗೆಗೆ ಹೇಗೆ ನೆರವಾದರೋ ಹಾಗೆಯೇ ಸಾಮಾನ್ಯ ಸ್ತ್ರೀಯರೂ ಸಹ ರಾಜ ಮತ್ತು ರಾಜ್ಯದ ಮೇಲಿನ ಪ್ರೀತಿ, ಅಭಿಮಾನದಿಂದ ತಮ್ಮ ಜೀವನವನ್ನೇ ಪಣವಾಗಿಟ್ಟು ಪಡಬಾರದ ಪಾಡು ಪಟ್ಟಿದ್ದನ್ನು ಕಾಣುತ್ತೇವೆ. ಸಾಮಾನ್ಯ ಸ್ತ್ರೀಯರು ಅವಿದ್ಯಾವಂತರು, ಅಶಿಕ್ಷಿತರು,

ಮುಗ್ಧರು ಆಗಿದ್ದು, ಆದರೆ ಸಮಯ, ಸಂದರ್ಭಕ್ಕನುಗುಣವಾಗಿ ಅವರು ತೆಗೆದುಕೊಳ್ಳುವ ನಿರ್ಧಾರಗಳು ಇಂದಿನ ಕಾಲದ ಜನರಿಗೂ ಮಾರ್ಗದರ್ಶಕವಾಗಿವೆ.

ಪುರುಷ ಪಾತ್ರಗಳನ್ನು ಕುರಿತು ನೋಡಲಾಗಿ ಇವರು ಒಂದು ಕಾದಂಬರಿಯ ಭವ್ಯ ಕಟ್ಟಡಕ್ಕೆ ಭದ್ರವಾದ ಆಧಾರ ಸ್ತಂಭದಂತಿದ್ದು ರಾಜನಾದವನು ಯಾವುದೇ ಮಹತ್ತರವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೆ ಇನ್ನುಳಿದ ವ್ಯಕ್ತಿಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಸಮಾಲೋಚನಾ ಸಭೆಗಳನ್ನು ಕರೆದು ಚರ್ಚಿಸಿರುವುದನ್ನು ಕಾಣುತ್ತೇವೆ. ಇವರು ರಾಜ್ಯ ಮತ್ತು ರಾಜನಿಗೆ ನಿಷ್ಠರಾಗಿ ಅವರ ಶ್ರೇಯೋಭಿವೃದ್ಧಿಗೆ ಪ್ರಾಣವನ್ನೇ ಲೆಕ್ಕಿಸದೆ ಸಮರಾಂಗಣದಲ್ಲಿ ಹೋರಾಡುತ್ತಿದ್ದರು. ಕೆಲವು ಹಿರಿಯರಾದ ಪ್ರಧಾನಿಗಳು, ಅಮಾತ್ಯರು ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಕಾದಂಬರಿಕಾರರು ಐತಿಹಾಸಿಕ ವಸ್ತುವಿಗೆ ಹಾಗೂ ಅಲ್ಲಿನ ಪಾತ್ರಗಳಿಗೆ ಭಂಗವಾಗದ ರೀತಿಯಲ್ಲಿ ಸನ್ನಿವೇಶ ಸಂದರ್ಭಕ್ಕನುಸಾರವಾಗಿ ಹಲವಾರು ಕಾಲ್ಪನಿಕ ಪಾತ್ರಗಳನ್ನು ತಮ್ಮ ಕಥಾವಸ್ತುವಿಗೆ ತಕ್ಕ ಹಾಗೆ ಸೃಷ್ಟಿಸಿ ಓದುಗರ ಕಣ್ಮುಂದೆ ಆ ಪಾತ್ರಗಳು ಸುಳಿಯುವಂತೆ ಮಾಡಿದ್ದಾರೆ. ಇದು ಐತಿಹಾಸಿಕ ಕಾದಂಬರಿಯ ಗೆಲುವೂ ಹೌದು ಮತ್ತು ಸೋಲು ಹೌದು. ಐತಿಹಾಸಿಕ ಸತ್ಯ ಯಾವುದು ಎಂದು ಸ್ಪಷ್ಟಪಡಿಸಿಕೊಳ್ಳಲಾಗದ ಸ್ಥಿತಿಗೆ ಬಂದ ಓದುಗ ಅಲ್ಲಿ ಹೇಳಿರುವಂತಹ ವಿಷಯಗಳೆಲ್ಲವನ್ನು ಸತ್ಯವೆಂದು ಒಪ್ಪಿಕೊಳ್ಳುತ್ತಾನೆ. ಆಗ ಓದುಗನಲ್ಲಿ ಎಂತಹ ಭಾವನೆ ಮೂಡುತ್ತದೆಂದರೆ ಕಲ್ಪನೆಯ ವಿಷಯವೆಲ್ಲವೂ ಸತ್ಯವೆಂದು ಗೋಚರವಾಗಿ ಇತಿಹಾಸ ಸೋಲುತ್ತದೆ. ಕಲ್ಪನೆಯೇ ಸತ್ಯವಾಗಿ ಗೆಲ್ಲುತ್ತದೆ.

ಹೀಗೆ ಎಲ್ಲ ಅಧ್ಯಾಯಗಳ ಕುರಿತು ಕಂಡುಕೊಳ್ಳಲಾದ ವಿಚಾರಗಳನ್ನು ಸಮಾರೋಪದಲ್ಲಿ ನೋಡಲಾಗಿದೆ. ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನರವರ ಹಾಗೆ ಕನ್ನಡ ಸಾಹಿತ್ಯದ ಕೃಷಿಯನ್ನು ಇಂದಿನ ಲೇಖಕರು ಬೆಳೆಸಬೇಕಾಗಿದೆ. ಅವರ ಹಾಗೆ ಇತಿಹಾಸದ ವಿಷಯಗಳನ್ನು ಕಾದಂಬರಿಗಳ ರೂಪದಲ್ಲಿ ಬರೆದು ಎಲ್ಲ ಜನಸಾಮಾನ್ಯರಿಗೂ ನಮ್ಮ ನಾಡಿನ ಇತಿಹಾಸ ತಿಳಿಯುವ ಹಾಗೆ ಮಾಡುವಲ್ಲಿ ಶ್ರಮಿಸಬೇಕಾಗಿದೆ.

೧ ಪ್ರಗತಿಶೀಲಕಾರರು ಬರೆದ ರಾಷ್ಟ್ರೀಯತೆಯ ಮನೋಧರ್ಮದ ಕಾದಂಬರಿಗಳನ್ನು ಓದಿದಾಗ ಪ್ರತಿಯೊಬ್ಬ ಕನ್ನಡಿಗರಲ್ಲಿ ಕನ್ನಡತನ, ಕನ್ನಡ ಭಾಷೆಯ ಮೇಲೆ ಅಭಿಮಾನ ಹುಟ್ಟಿ ನರನಾಡಿಗಳಲ್ಲಿ, ರಕ್ತದ ಧಮನಿ ಧಮನಿಗಳಲ್ಲಿ ಕನ್ನಡ ಪ್ರೇಮ ಪುಟಿಯುತ್ತದೆ. ಈ ಕಾದಂಬರಿಗಳು ಹಿರಿಯರು ತಮ್ಮ ತ್ಯಾಗ, ಬಲಿದಾನಗಳಿಂದ ಈ ರಾಷ್ಟ್ರವನ್ನು ಹೇಗೆ ಕಟ್ಟಿ ಬೆಳೆಸಿದ್ದಾರೆ ಎಂಬುದರ ಅರಿವು ಮೂಡಿಸುವುದರ ಜೊತೆಗೆ ಅವು ಇತಿಹಾಸವನ್ನು ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ.

ಹೊಸತೊಂದು ಬೆಳಕನ್ನು ತೋರುತ್ತವೆ. ಆ ಬೆಳಕು ದುರ್ಗಮವಾದ ಹಾದಿಯನ್ನು ಸುಗಮಗೊಳಿಸುತ್ತದೆ. ಇದರ ಜೊತೆಗೆ ಸಮಷ್ಟಿ ಪ್ರಜ್ಞೆಯನ್ನು ಮೂಡಿಸುತ್ತದೆ. ಸ್ವಾತಂತ್ರ್ಯದೆಡೆಗೆ ಕಾದಂಬರಿಯಲ್ಲಿ ಸ್ವಾತಂತ್ರ್ಯ ಹೋರಾಟದ ಸೂಚನೆ, ಸುಳಿವುಗಳು ಇರುವುದರಿಂದ ಚಿಕ್ಕಮಕ್ಕಳಲ್ಲಿಯ ರಾಷ್ಟ್ರೀಯ ಪ್ರಜ್ಞೆಯನ್ನು ಎತ್ತಿ ಹಿಡಿದು ಪ್ರಗತಿಪರ ಆಶಯಗಳನ್ನು ವ್ಯಕ್ತಪಡಿಸುತ್ತದೆ.

೨ ಐತಿಹಾಸಿಕ ಪರಂಪರೆ ಹೊಂದಿರುವ ಮಠ ಮಾನ್ಯಗಳು ಒಂದು ಸಂಸ್ಥಾನ ಕಟ್ಟುವಲ್ಲಿ ಮಠಾಧೀಶರ, ಜೈನ ಮುನಿಗಳ ಪ್ರಭಾವ ರಾಜನಿಗೆ ಆಡಳಿತದಲ್ಲಿ ಅನೇಕ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿ ಧರ್ಮಜಾಗೃತಿಯನ್ನು ಉಂಟು ಮಾಡುತ್ತವೆ. ಅಂದರೆ ಈ ಮಠಗಳು ಪ್ರತಿಯೊಬ್ಬ ಮಾನವ ಯಾವುದೇ ಮೇಲು ಕೀಳೆಂಬ ಜಾತಿ ಭೇದದ ತಾರತಮ್ಯವಿಲ್ಲದೆ, ಪರಸ್ಪರ ಅನ್ಯೋನ್ಯತೆಯಿಂದ ಬಾಳುವಂತೆ ಮಾರ್ಗದರ್ಶನ ಮಾಡುತ್ತವೆ.

೩ ಜೀವನ ಪ್ರತಿಯೊಂದು ಸಮಸ್ಯೆಗಳನ್ನು ತಂದೊಡ್ಡುತ್ತಲೇ ಇರುತ್ತದೆ. ಅವುಗಳನ್ನು ಧೈರ್ಯದಿಂದ ಎದುರಿಸುವ ಮನೋಸ್ಥೈರ್ಯ ನಮ್ಮಲ್ಲಿರಬೇಕು. ಇತಿಹಾಸವನ್ನು ನೋಡಿದರೆ ಅಲ್ಲಿನ ಪ್ರಭುಗಳು ತಮ್ಮ ಬದುಕಿನುದ್ದಕ್ಕೂ ಶತ್ರುಗಳ ಜೊತೆಗೆ ಹೋರಾಡುತ್ತಲೇ ಎಂದಿಗೂ ಎದೆಗುಂದಿ ಆತ್ಮಸ್ಥೈರ್ಯ ಕಳೆದುಕೊಳ್ಳದೇ ಬದುಕಿದ್ದ ರೀತಿ ನಮಗೆ ಆದರ್ಶಪ್ರಾಯವಾದುದು.

೪ ಜಾತಿಯ ಜಾಡು ಹಿಡಿದು ಹೋದವರು ಯಾರಿಂದಲೂ ಯಾವ ಜಾತಿಯೂ ಉದ್ಧಾರವಾಗಿಲ್ಲ. ಆ ಸತ್ಯವನ್ನು ಪ್ರತಿಯೊಬ್ಬರೂ ಅರಿತುಕೊಂಡು ಬುಕ್ಕರಾಯನ ಶಾಸನದ ವಿಚಾರದಂತೆ ಧರ್ಮಸಮನ್ವಯತೆಯನ್ನು ಕಾಯ್ದುಕೊಳ್ಳುವುದು ಅವಶ್ಯ.

೫ ಕೆಲವೊಂದು ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಎಷ್ಟೇ ಪ್ರಾಮಾಣಿಕನಾಗಿದ್ದು, ವಿಧೇಯತೆಯಿಂದ ನಡೆದುಕೊಳ್ಳುತ್ತ ಅವರ ಏಳ್ಗೆಗಾಗಿ ತನ್ನ ಬದುಕನ್ನೇ ಮೀಸಲಿಟ್ಟು ಶ್ರಮಿಸಿದರೂ ಸಹ ಕೆಲವರ ಚಾಡಿ ಮಾತುಗಳು, ಕುತಂತ್ರದ ಹೇಳಿಕೆಗಳು ಆ ವ್ಯಕ್ತಿಯ ಕುರಿತು ಸಂಶಯಕ್ಕೆಡೆ ಮಾಡಿಕೊಡುತ್ತವೆ. ಪ್ರಾಮಾಣಿಕ ವ್ಯಕ್ತಿಯಿದ್ದರೂ ಸಹ ಪಡಬಾರದ ಪಾಡು ಪಡಬೇಕಾಗುತ್ತದೆ. ಸೂರ್ಯ ಚಂದ್ರರಿಗೆ ಗ್ರಹಣ ಹಿಡಿದು ಬಿಡುವ ರೀತಿಯಲ್ಲಿ ಆ ವ್ಯಕ್ತಿಯ ಬದುಕಿಗೂ ಗ್ರಹಣ ಹಿಡಿದು ತದನಂತರ ಸತ್ಯ ಗೊತ್ತಾಗಿ ಅವನು ಪುರಸ್ಕರಿಸಲ್ಪಡುವನು. ಇದಕ್ಕೆ ಉತ್ತಮ ಉದಾಹರಣೆ ಬೆಂಗಾಳೂರು ನಗರ ಸ್ಥಾಪಕ ಕೆಂಪೇಗೌಡ. ವಿಜಯನಗರದ ಏಳ್ಗೆಗಾಗಿಯೇ ಶ್ರಮಿಸಿದ ಈತ ಜಗದೇವರಾಯರಂತಹ ಕುತಂತ್ರಕ್ಕೆ ಬಲಿಯಾಗಿ ಸೆರೆಯಲ್ಲಿದ್ದು ತದನಂತರ ಸತ್ಯ ಗೊತ್ತಾಗಿ ಶ್ರೀ ಶ್ರೀ ರಾಮರಾಯರಿಂದ ಪುರಸ್ಕರಿಸಲ್ಪಡುವುದನ್ನು ಕಾಣುತ್ತೇವೆ. ಇದರಿಂದ ಕಲಿಯಬೇಕಾದ ಪಾಠ ಬದುಕಿನಲ್ಲಿ ಎಂದೂ

ನಿರಾಶಾವಾದಿಗಳಾಗಿ ಭರವಸೆ ಕಳೆದುಕೊಳ್ಳದೆ ಮುನ್ನುಗ್ಗಬೇಕು. ಕತ್ತಲು ಕಳೆದು ಬೆಳಕು ಮೂಡುವ ರೀತಿ ಸಂಕಷ್ಟಗಳು ಕಳೆದು ಸುಖದ ದಿನಗಳು ಬಂದೇ ಬರುತ್ತವೆ.

೬ ಚಿತ್ರದುರ್ಗಕ್ಕೆ ಸಂಬಂಧಿಸಿದ ಕಾದಂಬರಿಗಳನ್ನೆಲ್ಲ ಓದಿದ ಮೇಲೆ ಪಾಳೆಗಾರರ ಮನೆತನದಲ್ಲಿ ರಾಜ್ಯಭಾರಕ್ಕಾಗಿ ರಕ್ತಪಾತ, ದ್ವೇಷ, ಮತ್ಸರದಂತಹ ಅವಘಡಗಳು ಸಂಭವಿಸಿರಬೇಕಾದರೆ ಇನ್ನೂ ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಸಂಸ್ಥಾನಗಳಲ್ಲಿ ಏನೆಲ್ಲ ಅನಾಹುತಗಳು ಸಂಭವಿಸಿರಬಹುದು ಎಂಬ ಕಲ್ಪನೆ ಮನಸ್ಸಿನಲ್ಲಿ ಮೂಡಿ ಮನುಷ್ಯ ಶಾಂತಿಯಿಂದ ಬಾಳಿ ಬದುಕಬೇಕು. ಯುದ್ಧವೆನ್ನುವುದು ಎಂದೆಂದಿಗೂ ಮರುಕಳಿಸದಿರಲಿ ಎಂಬಂತಾಗುತ್ತದೆ.

೭ ಮನುಷ್ಯನಿಗೆ ಸ್ವಂತ ವಿವೇಚನೆ ಎಂಬುದು ಮುಖ್ಯ. "ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಂಡಂತೆ" ತಂದೆ ಒಬ್ಬ ವ್ಯಕ್ತಿಯನ್ನು ನಂಬಿ ಆತನ ವಿಚಾರಕ್ಕೆ ಮನ್ನಣೆ ಕೊಟ್ಟು ಆತನ ಮಾತಿನಂತೆ ನಡೆದರೇ ಮಗನೂ ಸಹ ಹಾಗೇ ನಡೆದುಕೊಳ್ಳುವುದು ಸಾಧ್ಯವಿಲ್ಲ. ಕಾಲಮಾನ, ಪರಿಸ್ಥಿತಿಗೆ ತಕ್ಕ ಹಾಗೆ ಇಂದು ಸಂಬಂಧಗಳೂ ಬದಲಾಗುತ್ತಿವೆ. ಮನುಷ್ಯ ಮನುಷ್ಯರ ನಡುವಿನ ಬಾಂಧವ್ಯದ ಕೊಂಡಿ ತಪ್ಪುತ್ತಿದೆ. ಹೀಗಾಗಿ ಸ್ವಂತ ನಿರ್ಧಾರ, ವಿವೇಚನೆ ಎಂಬುದು ಮುಖ್ಯವಾಗುತ್ತವೆ. ಮಲ್ಲಸರ್ಜ ದೊರೆ ಸ್ವಂತ ನಿರ್ಧಾರ ತೆಗೆದುಕೊಳ್ಳದೇ ದಿವಾನರಾದ ಗುರುನಾಥಪಂತರ ಮಾತುಗಳನ್ನು ಕೇಳಿಯೇ ಟಿಪ್ಪುವಿನ ಬಂಧಿಯಾಗಿ ಪಡಬಾರದ ಪಾಡು ಪಡುವಂತಾದ ಚಿತ್ರಣವನ್ನು ಕಟ್ಟೀಮನಿಯವರು ಪೌರುಷ ಪರೀಕ್ಷೆ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

೮ ನರಗುಂದ ಬಂಡಾಯ ಕಾದಂಬರಿಯನ್ನು ಓದುತ್ತ ಹೋದ ಹಾಗೆ ಮನುಷ್ಯ ಎಷ್ಟೊಂದು ಸ್ವಾರ್ಥಿ. ಜಾತೀಯತೆ ಭಾವನೆ ಎಂಬುದು ಇಂದು ನಿನ್ನೆಯದಲ್ಲ ಅದು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿರುವಂತದು. ಜಾತಿಯ ಕಟ್ಟೆಳೆಗೆ ಜೋತು ಬಿದ್ದ ರಾಜನಿಗೆ ತನ್ನವರಿಂದಲೇ ತನಗೆ ಮೋಸವಾಗುವುದು. ಇದರಿಂದ ಅನ್ಯ ಜಾತಿಯವರು ಅವನ ನೆರವಿಗೆ ಬಾರದಿದ್ದುದು ಇದರಿಂದ ರಾಜ ದುರಂತತೆಗೆ ಒಳಗಾಗುವನು. ಇದನ್ನೆಲ್ಲ ಗಮನಿಸಿದರೆ ಮನುಷ್ಯನ ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ. ಇರುವಷ್ಟು ಕಾಲವೂ ಬದುಕಿನಲ್ಲಿ ಮೇಲು ಕೀಳೆಂಬ ಭಾವನೆಯಿಲ್ಲದೆ ಸಹಬಾಳ್ವೆಯಿಂದ ಬದುಕಬೇಕೆಂಬ ವಿಚಾರಗಳು ಮನವರಿಕೆಯಾಗುವವು.

೯ ಬ್ರಿಟೀಷ್ ವಸಾಹತುಶಾಹಿಯನ್ನು ಹಿಮ್ಮೆಟ್ಟಿಸುವಲ್ಲಿ ನಮ್ಮ ನಾಡಿನ ಜನತೆ ಹೋರಾಡಿದ ಹೋರಾಟದ ಸ್ವರೂಪವನ್ನು ಕಾದಂಬರಿಕಾರರು ರಮ್ಯೋಜ್ವಲವಾಗಿ ನಿರೂಪಿಸುತ್ತ, ಅದಕ್ಕಾಗಿ ಶಾಲಾ ಕಾಲೇಜುಗಳ ಮಾಸ್ತರರು ಹಾಗೂ ಹೆಣ್ಣು ಗಂಡು ಎಂಬ ಯಾವುದೇ ಭೇದ ಭಾವವಿಲ್ಲದೆ ಎಲ್ಲ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಂಡ ವಿಚಾರಗಳನ್ನು ಕಾದಂಬರಿಗಳಲ್ಲಿ ನಿರೂಪಿಸಿರುವರು.

೧೦ ಚರಿತ್ರೆಯ ವಸ್ತುಗಳನ್ನು ಆರಿಸಿಕೊಂಡಿರುವ ಪ್ರಗತಿಶೀಲ ಕಾದಂಬರಿಕಾರರು ಇತಿಹಾಸವನ್ನು ತಾವೇ ಕಟ್ಟುವ ಜವಾಬ್ದಾರಿಯನ್ನು ಸ್ವತಃ ಹೊತ್ತುಕೊಂಡಿದ್ದು ಇವರು ಕಾದಂಬರಿಗಳ ನಿರ್ಮಾತೃಗಳಾಗಿ ಕಾಣದೆ ಚರಿತ್ರಕಾರರಾಗಿ ಕಾಣಿಸುತ್ತಾರೆ.

ಹೀಗೆ ಈ ಮಹಾಪ್ರಬಂಧವು ಒಟ್ಟು ಏಳು ಅಧ್ಯಾಯಗಳಿಂದ ಸಂಪೂರ್ಣವಾಗಿರುವುದು.

ಅನುಬಂಧ ೧

ಪ್ರಾಥಮಿಕ ಆಕರಗಳು

೧) ಕೃಷ್ಣರಾಯರು ಅ.ನ, ೨೦೦೪, **'ವಿಜಯ ವಿದ್ಯಾರಣ್ಯ ಮತ್ತು ತಪೋಬಲ'** (ಸಾಗರ್ ಪ್ರಕಾಶನದಲ್ಲಿ ಮೊದಲ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೨) ಕೃಷ್ಣರಾಯರು ಅ.ನ, ೨೦೦೪, **'ಪುಣ್ಯಪ್ರಭಾವ ಮತ್ತು ಪ್ರೌಢಪ್ರತಾಪಿ'** (ಸಾಗರ್ ಪ್ರಕಾಶನದಲ್ಲಿ ಮೊದಲ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೩) ಕೃಷ್ಣರಾಯರು ಅ.ನ, ೨೦೦೪, **'ಮೋಹನ ಮುರಾರಿ ಮತ್ತು ಯಶೋದುಂದುಭಿ'** (ಸಾಗರ್ ಪ್ರಕಾಶನದಲ್ಲಿ ಮೊದಲ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೪) ಕೃಷ್ಣರಾಯರು ಅ.ನ, ೨೦೦೪, **'ಅಭಯಪ್ರದಾನ ಮತ್ತು ತೇಜೋಭಂಗ '** (ಸಾಗರ್ ಪ್ರಕಾಶನದಲ್ಲಿ ಮೊದಲ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೫) ಕೃಷ್ಣರಾಯರು ಅ.ನ, ೨೦೦೪, **'ಅಳಿಯ ರಾಮರಾಯ ಮತ್ತು ಪ್ರಳಯಾನಂತರ '** (ಸಾಗರ್ ಪ್ರಕಾಶನದಲ್ಲಿ ಮೊದಲ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೬) ಕೃಷ್ಣರಾಯರು ಅ.ನ, ೨೦೦೬, **'ಸಂಗ್ರಾಮ ಧುರೀಣ'** (ದ್ವಿತೀಯ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೭) ಕೃಷ್ಣರಾಯರು ಅ.ನ, ೨೦೦೭, **'ರಣವಿಕ್ರಮ'** (ದ್ವಿತೀಯ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೮) ಕೃಷ್ಣರಾಯರು ಅ.ನ, ೨೦೦೭, **'ಯಲಹಂಕ ಭೂಪಾಲ'** (ದ್ವಿತೀಯ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೯) ಕೃಷ್ಣರಾಯರು ಅ.ನ, ೨೦೦೭, **'ವೀರರಾಣಿ ಕಿತ್ತೂರು ಚೆನ್ನಮ್ಮ'** (ನಾಲ್ಕನೆಯ ಮುದ್ರಣ) ಸಾಗರ್ ಪ್ರಕಾಶನ, ನಂ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೧೦) ನಿರಂಜನ, ೧೯೭೬, **'ಮೃತ್ಯುಂಜಯ'** (ಮೊದಲನೆಯ ಮುದ್ರಣ) ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲೀಷರ್ಸ್ (ಪ್ರೈ) ಲಿಮಿಟೆಡ್ ೧೨/೧೩ ಲಾಲ್‌ಬಾಗ್ ಫೋರ್ಟ್ ರೋಡ್, ಬೆಂಗಳೂರು ೫೬೦೦೦೪

೧೧) ನಿರಂಜನ, ೨೦೦೫, **'ಕಲ್ಯಾಣಸ್ವಾಮಿ'** (ಐದನೆಯ ಮುದ್ರಣ) ಡಿ.ವಿ.ಕೆ ಮೂರ್ತಿ, ಕೃಷ್ಣಮೂರ್ತಿಪುರಂ ಮೈಸೂರು ೪

೧೨) ನಿರಂಜನ, ೧೯೭೭, **'ಸ್ವಾಮಿ ಅಪರಂಪಾರ'** (ನಾಲ್ಕನೆಯ ಮುದ್ರಣ) ಡಿ.ವಿ.ಕೆ ಮೂರ್ತಿ, ಕೃಷ್ಣಮೂರ್ತಿಪುರಂ ಮೈಸೂರು ೪

೧೩) ನಿರಂಜನ, ೨೦೦೧, **'ಚಿರಸ್ಮರಣೆ'** (ಆರನೆಯ ಮುದ್ರಣ) ಡಿ.ವಿ.ಕೆ ಮೂರ್ತಿ, ಕೃಷ್ಣಮೂರ್ತಿಪುರಂ ಮೈಸೂರು ೪

೧೪) ಬಸವರಾಜ ಕಟ್ಟೀಮನಿ, ೧೯೬೯, **'ನರಗುಂದ ಬಂಡಾಯ'** (ಪರಿಷ್ಕೃತ ಆವೃತ್ತಿ) ಕಾದಂಬರಿ ಪ್ರಕಾಶನ, ಸಾಧನಕೇರಿ ಧಾರವಾಡ ೧

೧೫) ಬಸವರಾಜ ಕಟ್ಟೀಮನಿ, ೨೦೧೧, **'ಪೌರುಷ ಪರೀಕ್ಷೆ'** (ದ್ವಿತೀಯ ಮುದ್ರಣ) ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

೧೬) ಬಸವರಾಜ ಕಟ್ಟೀಮನಿ, ೨೦೦೮, **'ಸಂಗೊಳ್ಳಿ ರಾಯನಾಯಕ'** (ಇತ್ತೀಚಿನ ಮುದ್ರಣ) ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

೧೭) ಬಸವರಾಜ ಕಟ್ಟೀಮನಿ, ೨೦೧೧, **'ಸ್ವಾತಂತ್ರ್ಯದೆಡೆಗೆ'** (ದ್ವಿತೀಯ ಮುದ್ರಣ) ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

೧೮) ಬಸವರಾಜ ಕಟ್ಟೀಮನಿ, ೨೦೦೯, **'ಮಾಡಿ ಮಡಿದವರು'** (ಇತ್ತೀಚಿನ ಮುದ್ರಣ) ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

೧೯) ಸುಬ್ಬರಾಯರು ತ.ರಾ, ೨೦೧೩, **'ಕಂಬನಿಯ ಕುಯಿಲು'** (ಹನ್ನೆರಡನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೦) ಸುಬ್ಬರಾಯರು ತ.ರಾ, ೨೦೧೫, **'ರಕ್ತರಾತ್ರಿ'** (ಒಂಬತ್ತನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೧) ಸುಬ್ಬರಾಯರು ತ.ರಾ, ೨೦೧೫, **'ತಿರುಗುಬಾಣ'** (ಹತ್ತನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೨) ಸುಬ್ಬರಾಯರು ತ.ರಾ, ೨೦೧೧, **'ರಾಜ್ಯದಾಹ'** (ಮೂರನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೩) ಸುಬ್ಬರಾಯರು ತ.ರಾ, ೨೦೧೪, **'ವಿಜಯೋತ್ಸವ'** (ನಾಲ್ಕನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೪) ಸುಬ್ಬರಾಯರು ತ.ರಾ, ೨೦೧೩, **'ಹೊಸಹಗಲು'** (ನಾಲ್ಕನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೫) ಸುಬ್ಬರಾಯರು ತ.ರಾ, ೨೦೧೫, **'ಕಸ್ತೂರಿ ಕಂಕಣ'** (ಐದನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೬) ಸುಬ್ಬರಾಯರು ತ.ರಾ, ೨೦೧೪, **'ದುರ್ಗಾಸ್ತಮಾನ'** (ಹನ್ನೊಂದನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೭) ಸುಬ್ಬರಾಯರು ತ.ರಾ, ೨೦೧೩, **'ಹಂಸಗೀತೆ'** (ಹದಿನೆಂಟನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೮) ಸುಬ್ಬರಾಯರು ತ.ರಾ, ೨೦೧೪, **'ನೃಪತುಂಗ'** (ನಾಲ್ಕನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೨೯) ಸುಬ್ಬರಾಯರು ತ.ರಾ, ೨೦೧೪, **'ಸಿಡಿಲಮೊಗ್ಗು'** (ಐದನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೩೦) ಸುಬ್ಬರಾಯರು ತ.ರಾ, ೧೯೯೭, **'ಕೀರ್ತಿನಾರಾಯಣ'** (ಮರು ಮುದ್ರಣ) ರಾಜರಾಜೇಶ್ವರಿ ಪ್ರಕಾಶನ ೭ ನೇ ಬ್ಲಾಕ್, ಜಯನಗರ, ಬೆಂಗಳೂರು

೩೧) ಸುಬ್ಬರಾಯರು ತ.ರಾ, ೨೦೧೪, **'ಶಿಲ್ಪಶ್ರೀ'** (ಆರನೆಯ ಮುದ್ರಣ) ಹೇಮಂತ ಸಾಹಿತ್ಯ, ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

ಅನುಬಂಧ ೨

ಪರಾಮರ್ಶನ ಗ್ರಂಥಗಳು

೧) ಅಶೋಕ ನರೋಡೆ, ೨೦೧೦, **'ಗದ್ಯ ಸಂಗಾತಿ'** (ಪ್ರಥಮ ಮುದ್ರಣ) ಕುಕ್ಕೆಶ್ರೀ ಪ್ರಕಾಶನ ಬೆಂಗಳೂರು

೨) ಉಷಾ ಎಂ(ಸಂ), ೨೦೧೪, **'ಭಾಷಾಂತರ ಪ್ರವೇಶಿಕ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩) ಅಂಬೇಡ್ಕರ್ ಬಿ ಆರ್(ಡಾ), ೨೦೧೭, **'ಹಿಂದೂ ಧರ್ಮದ ತತ್ವ'** (ಪ್ರಥಮ ಮುದ್ರಣ) ಅನುವಾದ ಸುರೇಶ ಭಟ್ ಬಾಕ್ರಬೈಲ್ ಲಡಾಯಿ ಪ್ರಕಾಶನ ಗದಗ ೫೮೨೧೦೧

೪) ಕಯ್ಯಾರ ಕಿಞ್ಞಣ್ಣ ರೈ, ೧೯೮೯, **'ಮಹಾಕವಿ ಗೋವಿಂದ ಪೈ'** (ಪ್ರಥಮ ಮುದ್ರಣ) ಎಂ.ಆರ್ ಸತ್ಯನಾರಾಯಣ ಆಕಳವಾಡಿ ಬುಕ್ ಡಿಪೋ ವಿಜಯ ರೋಡ, ಧಾರವಾಡ ೧

೫) ಕಲಬುರ್ಗಿ ಎಂ.ಎಂ(ಡಾ), ೨೦೦೮, **'ಕನ್ನಡ ಅರಸರ ಅಕನ್ನಡ ಪ್ರಜ್ಞೆ'** (ಮೊದಲ ಮುದ್ರಣ) ಸಾಹಿತ್ಯ ಪ್ರಕಾಶನ ಕೊಪ್ಪಿಕರ್ ಬೀದಿ ಹುಬ್ಬಳ್ಳಿ ೫೮೦೦೨೦

೬) ಕಲ್ಯಾಣರಾವ್ ಪಾಟೀಲ ಜಿ(ಪ್ರೊ), ೨೦೧೧, **'ಸಾಹಿತ್ಯ ಸಂಪದ'** (ಪ್ರಥಮ ಮುದ್ರಣ) ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ ಜಿ-೨ ವಿ.ವಿ ಹಾಸ್ಟೇಲ್ ಕಾಂಪ್ಲೆಕ್ಸ್, ಸೇಡಂ ರಸ್ತೆ ಗುಲಬರ್ಗಾ ೫೮೫೧೦೫

೭) ಕೀರ್ತಿನಾಥ ಕುರ್ತಕೋಟಿ, ೧೯೯೨, **'ಬಯಲು ಮತ್ತು ಆಲಯ'** (ಪ್ರಥಮ ಮುದ್ರಣ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೮) ಕೀರ್ತಿನಾಥ ಕುರ್ತಕೋಟಿ, ೨೦೦೬, **'ಭಾಷೆ ಮತ್ತು ಸಂಸ್ಕೃತಿ'** (ಪ್ರಥಮ ಮುದ್ರಣ) ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ೧, ದೇಸಾಯಿ ಕಾಲನಿ, ಯುನಿವರ್ಸಿಟಿ ಕ್ರಾಸ್ ಧಾರವಾಡ ೫೮೦೦೦೩

೯) ಕೀರ್ತಿನಾಥ ಕುರ್ತಕೋಟಿ, ೨೦೦೮, **'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ'** (ಪ್ರಥಮ ಮುದ್ರಣ) ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್ ದೇಸಾಯಿ ಕಾಲನಿ, ಯುನಿವರ್ಸಿಟಿ ಕ್ರಾಸ್ ಧಾರವಾಡ ೫೮೦೦೦೩

೧೦) ಕೀರ್ತಿನಾಥ ಕುರ್ತಕೋಟಿ, ೨೦೦೮, **'ಕನ್ನಡ ಸಾಹಿತ್ಯ ಸಂಗಾತಿ'** (ತೃತೀಯ ಮುದ್ರಣ) ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್ ದೇಸಾಯಿ ಕಾಲನಿ, ಯುನಿವರ್ಸಿಟಿ ಕ್ರಾಸ್ ಧಾರವಾಡ ೫೮೦೦೦೩

೧೧) ಕುಲಕರ್ಣಿ ಜಿ.ಬಿ(ಡಾ), ೨೦೧೨, **'ರಾಷ್ಟ್ರಕೂಟರ ಚರಿತ್ರೆ ಮತ್ತು ಸಂಸ್ಕೃತಿ'** (ಪ್ರಥಮ ಮುದ್ರಣ) ಶ್ರೀ ಅನ್ನಪೂರ್ಣ ಪಬ್ಲೀಷರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್ # ೧೩೩, ೧ನೇ ಮಹಡಿ, ಭಾರತೀಪುರ ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು ಬಿಲ್ಲಿಸಕೋಟೆ ಅಂಚೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೧೨) ಕೃಷ್ಣರಾಯರು ಅ.ನ, ೨೦೧೧, **'ಬರಹಗಾರನ ಬದುಕು ಮತ್ತು ನನ್ನನ್ನು ನಾನೇ ಕಂಡೆ'** (ಪ್ರಥಮ ಮುದ್ರಣ) ಸಾಗರ್ ಪ್ರಕಾಶನ ನಂ ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ ನೇ ಸ್ಟೇಜ್ ಬೆಂಗಳೂರು ೫೬೦೦೭೨

೧೩) ಕೃಷ್ಣರಾಯ ಶಾ.ಮಂ(ಸಂ), ೧೯೭೦, **'ರಸಚೇತನ'** (ಪ್ರಥಮ ಮುದ್ರಣ) ಗೋವಾ ಕನ್ನಡ ಸಂಘ (ರಿ.) ಮಡಗಾಂವ್–ಗೋವಾ

೧೪) ಕೃಷ್ಣರಾಯ ಶಾ.ಮಂ(ಸಂ), ೧೯೯೪, **'ತ.ರಾ.ಸು ಬದುಕು ಬರಹ'** (ದ್ವಿತೀಯ ಮುದ್ರಣ) ವಿಶ್ವಭಾರತಿ ಪ್ರಕಾಶನ ಮಡಗಾಂವ್–ಗೋವಾ

೧೫) ಕೃಷ್ಣರಾಯ ಶಾ.ಮಂ(ಸಂ), ೨೦೦೮, **'ಅಮರಚೇತನ'** (ಪ್ರಥಮ ಮುದ್ರಣ) ಸಾಗರ್ ಪ್ರಕಾಶನ ನಂ.೧೬೭೯, ೧೦ನೇ ಮುಖ್ಯರಸ್ತೆ ೫ನೇ ಎ ಅಡ್ಡರಸ್ತೆ, ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೧೬) ಕೃಷ್ಣರಾಯ ಶಾ.ಮಂ(ಸಂ), ೨೦೧೨, **'ಅ.ನ.ಕೃ ಭಾಷಣಗಳು'** (ಪ್ರಥಮ ಮುದ್ರಣ) ಸಾಗರ್ ಪ್ರಕಾಶನ ನಂ ೬೯೫, ೧೦ ನೇ ಮುಖ್ಯರಸ್ತೆ.೮೦ ಅಡಿರಸ್ತೆ ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ ಬೆಂಗಳೂರು ೫೬೦೦೭೨

೧೭) ಗಳಗನಾಥ, ೧೯೯೯, **'ಮಾಧವ ಕರುಣಾ ವಿಲಾಸ'** (ಪ್ರಥಮ ಮುದ್ರಣ) ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ

೧೮) ಗಿರಡ್ಡಿ ಗೋವಿಂದರಾಜ , ೨೦೧೧, **'ಸಾಹಿತ್ಯ ಮತ್ತು ಪರಂಪರೆ'** (ಪ್ರಥಮ ಮುದ್ರಣ) ಹೇಮಂತ ಸಾಹಿತ್ಯ ೯೭೨–ಸಿ, ೪ನೇ ಇ ವಿಭಾಗ, ೧೦–ಎ ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೧೯) ಗಿರಿಜಾ ಟಿ, ೧೯೯೧, **'ಚಿತ್ರದುರ್ಗ ಜಿಲ್ಲಾ ದರ್ಶಿನಿ'** (ಪ್ರಥಮ ಮುದ್ರಣ) ರೇಖಾ ಪ್ರಕಾಶನ ೧/೮೯೮, ಮೈಸೂರು ಮಠದ ರಸ್ತೆ, ದಾವಣಗೆರೆ ೧

೨೦) ಗೀತಾ ವಸಂತ (ಡಾ), ೨೦೧೦, **'ಹೊಸ ದಿಗಂತ ಹೊಸ ದಾರಿ'** (ಪ್ರಥಮ ಮುದ್ರಣ) ಮಹಿಳಾ ಸಾಹಿತ್ಯಿಕಾ ನವನಗರ, ಹುಬ್ಬಳ್ಳಿ

೨೧) ಗುರುಮೂರ್ತಿ ಪೆಂಡಕೂರು, ೨೦೧೪, **'ಭಗ್ನ ವಿಜಯನಗರ ಚರಿತ್ರೆ'** (ಎರಡನೆಯ ಮುದ್ರಣ) ಕನ್ನಡಾನುವಾದ, ಕುಂದೂರಿ ಈಶ್ವರದತ್ತು ತೆಲುಗು ಮೂಲ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨) ಚಿದಾನಂದಮೂರ್ತಿ ಎಂ(ಡಾ), ೨೦೧೦, **'ಹೊಸತು ಹೊಸತು'** ಸಪ್ನ ಬುಕ್ ಹೌಸ್ ೩ ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

೨೩) ಚೆನ್ನಕ್ಕ ಪಾವಟೆ (ಡಾ), ೨೦೦೮, **'ಸಾಂಸ್ಕೃತಿಕ ಶೋಧ ಮತ್ತು ಪ್ರಯೋಗಶೀಲತೆ'** (ಪ್ರಥಮ ಮುದ್ರಣ) ಚೆನ್ನಗಂಗಾ ಪ್ರಕಾಶನ ಸಾಧನಕೇರಿ, ಧಾರವಾಡ

೨೪) ಚೆನ್ನಕ್ಕ ಪಾವಟೆ(ಡಾ), ೨೦೧೦, **'ಸಂಸ್ಕೃತಿ ಸೌರಭ'** (ಪ್ರಥಮ ಮುದ್ರಣ) ಕಾರ್ತಿಕ್ ಎಂಟರ್‌ಪ್ರೈಸಸ್ ನಂ ೧೧೪, ೪ ನೇ ಅಡ್ಡರಸ್ತೆ ಬಿ.ಸಿ.ಸಿ ಬಡಾವಣೆ ಅತ್ತಿಗುಪ್ಪೆ ವಿಜಯನಗರ ೨ ನೇ ಹಂತ ಬೆಂಗಳೂರು ೫೬೦೦೪೦

೨೫) ಚಂದ್ರಪೂಜಾರಿ ಎಂ, ೨೦೦೮, **'ಸಂಶೋಧನಾ ಪ್ರಸ್ತಾವ'** ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೨೬) ಚಂದ್ರಶೇಖರ ಧೂಳೇಕರ, ೨೦೧೦, **'ಇತಿಹಾಸವೆಂದರೆ ರಾಜ ರಾಣಿಯರ ಕಥೆಯಲ್ಲ'** (ಪ್ರಥಮ ಮುದ್ರಣ) ನಿರಂತರ #೩೯/೨&೩, ಮೊದಲ ಮಹಡಿ, ರೆಮ್ಕೊ ಲೇಔಟ್, ವಿಜಯನಗರ ಬೆಂಗಳೂರು ೫೬೦೦೪೦

೨೭) ತಿಮ್ಮೇಗೌಡ ಎಚ್.ಆರ್(ಡಾ), ೨೦೧೧, **'ಕನ್ನಡ ಪ್ರಗತಿಶೀಲ ಸಾಹಿತ್ಯದ ಸಣ್ಣ ಕಥೆಗಳು'** (ಪ್ರಥಮ ಮುದ್ರಣ) ಈಶ್ವರಿ ಪ್ರಕಾಶನ ನಂ ೨೮೫/ಎಫ್ ೫, ೨ ನೇ ಮಹಡಿ ಉತ್ತರಾಧಿಮಠದ ರಸ್ತೆ, ಫೋರ್ಟ್ ಮೊಹಲ್ಲಾ ಮೈಸೂರು ೪

೨೮) ದೊಡ್ಡಬಸಪ್ಪ ಬಳೂರಗಿ, ೨೦೧೧, **'ಚಿಂತನ ಚೈತ್ರ'** (ಪ್ರಥಮ ಮುದ್ರಣ) ಪ್ರಭು ಪ್ರಕಾಶನ 'ಪ್ರೇಮಕುಂಜ' ಬಸವೇಶ್ವರ ನಗರ ಕೋರ್ಟರಸ್ತೆ ಶಹಾಪುರ ೫೮೫೨೨೩ ಯಾದಗಿರಿ ಜಿಲ್ಲೆ

೨೯) ನರಹರಿ ವಿ, ೨೦೧೧, **'ಇತಿಹಾಸ: ವಿಚಾರ ವಿಶೇಷ'** (ಪ್ರಥಮ ಮುದ್ರಣ) ಪ್ರತಿಭಾ ಪ್ರಕಾಶನ ಪ್ರಥಮ ಛಾಯಾ, ಗೋಕುಲಂ ಮೂರನೇ ಹಂತ ಮೈಸೂರು-೩

೩೦) ನರೇಂದ್ರ ಕಟ್ಟಿ, ೨೦೧೫, **'ನಾಡಪ್ರಭು ಕೆಂಪೇಗೌಡ'** (ಪ್ರಥಮ ಮುದ್ರಣ) ವಸಂತ ಪ್ರಕಾಶನ ನಂ ೩೬೦, ೧೦ ನೇ 'ಬಿ' ಮುಖ್ಯರಸ್ತೆ ೩ ನೇ ಬ್ಲಾಕ್ ಜಯನಗರ, ಬೆಂಗಳೂರು ೫೬೦೦೧೧

೩೧) ನಾಗರತ್ನ ಬಿ.ಆರ್(ಶ್ರೀಮತಿ), ೨೦೧೦, **'ವಿಚಾರ ಮಂಜರಿ'** (ಪ್ರಥಮ ಮುದ್ರಣ) ರಾಘವೇಂದ್ರ ಪ್ರಿಂಟರ್ಸ್ ಸಹ್ಯಾದ್ರಿ ಸರ್ಕಲ್, ೨ ನೇ ಕ್ರಾಸ್, ಹೇಮಾವತಿ ಆಸ್ಪತ್ರೆ ಹತ್ತಿರ ಹಾಸನ

೩೨) ನಾವಲಗಿ ಸಿ.ಕೆ, ೨೦೧೧, **'ಜಾನಪದ ಸಡಗರ'** (ಪ್ರಥಮ ಮುದ್ರಣ) ಸಾಗರ್ ಪ್ರಕಾಶನ ನಂ.೬೯೫, ೧೦ ನೇ ಮುಖ್ಯರಸ್ತೆ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ ನೇ ಹಂತ ಬೆಂಗಳೂರು ೫೬೦೦೭೨

೩೩) ನಾಯಕ ಹಾ.ಮಾ(ಡಾ), ಸಿಪಿಕೆ(ಡಾ), ಟಿ.ವಿ.ವೆಂಕಟಾಚಲಶಾಸ್ತ್ರಿ(ಡಾ)(ಸಂ), ೧೯೮೩, **'ಸ್ವಸ್ತಿ'** (ತ.ಸು.ಶಾಮರಾಯರ ಅಭಿನಂದನ ಗ್ರಂಥ) ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಗೋಕುಲಂ ಮೂರನೆಯ ಹಂತ ಮೈಸೂರು ೫೭೦೦೦೨

೩೪) ನಾಯಕ ಹಾ.ಮಾ.(ಪ್ರ.ಸಂ), ೧೯೭೪, **'ಕನ್ನಡ ಸಾಹಿತ್ಯ ಚರಿತ್ರೆ'** (ಮೊದಲ ಸಂಪುಟ) ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ

೩೫) ನಾಯಕ ಜಿ.ಹೆಚ್(ಸಂ), ೨೦೦೦, **'ಶತಮಾನದ ಕನ್ನಡ ಸಾಹಿತ್ಯ'** (ಪ್ರಥಮ ಮುದ್ರಣ) ಶ್ರೀ ರಾಘವೇಂದ್ರ ಪ್ರಕಾಶನ ಅಂಕೋಲಾ ಉ.ಕ

೩೬) ನಿಂಗಪ್ಪ ಮುದೇನೂರು, ೨೦೦೪, **'ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು'** (ಪ್ರಥಮ ಮುದ್ರಣ) ಸಿವಿಜಿ ಪಬ್ಲಿಕೇಷನ್ಸ್ ಬೆಂಗಳೂರು

೩೭) ನಿಂಬಾಳ ಗಂಗಾಧರ ಎನ್, ೨೦೧೫, **'ಬೈಲಹೊಂಗಲ ತಾಲೂಕಿನ ವೀರಶೈವ ಮಠಗಳ ಅಧ್ಯಯನ'** (ಪ್ರಥಮ ಮುದ್ರಣ) ಜಯಶ್ರೀ ಪ್ರಕಾಶನ, ಬೈಲಹೊಂಗಲ

೩೮) ನಂಜುಂಡಸ್ವಾಮಿ ಎ.ಎಸ್, ೨೦೦೯, **'ವಿಜಯನಗರದ ಇತಿಹಾಸ'** (ಐದನೆಯ ಮುದ್ರಣ) ಸಮಾಜ ಪುಸ್ತಕಾಲಯ ಶಿವಾಜಿ ಬೀದಿ, ಧಾರವಾಡ

೩೯) ಪರಮಶಿವಯ್ಯ ಜಿ.ಶಂ, ೨೦೧೨, **'ಜಾನಪದ ಕೆಲವು ಮುಖಗಳು'** (ಪ್ರಥಮ ಮುದ್ರಣ) ಸಾಗರ್ ಪ್ರಕಾಶನ ನಂ ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೩ ನೇ ಹಂತ ಬೆಂಗಳೂರು ೫೬೦೦೭೨

೪೦) ಪಾಟೀಲ ವ್ಹಿ.ಎಲ್(ಡಾ), ೨೦೧೨, **'ಮೌಖಿಕ ಪರಂಪರೆ'** (ಪ್ರಥಮ ಮುದ್ರಣ) ಹೇಮಂತ ಸಾಹಿತ್ಯ ನಂ ೯೭೨ 'ಸಿ', ೪ ನೇ 'ಇ' ವಿಭಾಗ, ೧೦ ನೇ 'ಎ' ಮುಖ್ಯ ರಸ್ತೆ ರಾಜಾಜಿನಗರ, ಬೆಂಗಳೂರು

೪೧) ಪುರದನಗೌಡರ ಎಂ.ಎಂ, ೨೦೦೮, **'ಸಾಹಿತ್ಯ ಸಾಂಗತ್ಯ'** (ಪ್ರಥಮ ಮುದ್ರಣ) ಪ್ರತಿಭಾ ಪ್ರಕಾಶನ, ಕಲಘಟಗಿ

೪೨) ಪೂಜಾರಹಳ್ಳಿ ವಿರೂಪಾಕ್ಷಿ(ಸಂ), ೨೦೦೯, **'ಚರಿತ್ರೆ ಅಧ್ಯಯನ ಸಂಪುಟ ೪, ಸಂಚಿಕೆ ೨'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩) ಬರಗೂರು ರಾಮಚಂದ್ರಪ್ಪ(ಪ್ರ.ಸಂ), ೨೦೦೨, **'ಕರ್ನಾಟಕ ಸಂಗಾತಿ'** (ಡಿಶೆಂಬರ್) ಕರ್ನಾಟಕ ಸರ್ಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು.

೪೪) ಬಸವರಾಜ ಸಾದರ(ಡಾ), ೨೦೦೦, **'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು'** (ಪ್ರಥಮ ಮುದ್ರಣ) ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿಮಠ ಬೆಳಗಾವಿ ೫೯೦೦೧೦

೪೫) ಬೆಟಗೇರಿ ಕೃಷ್ಣಶರ್ಮ, ೨೦೦೫, **'ಕರ್ನಾಟಕ ಜನಜೀವನ'** (ಎರಡನೆಯ ಮುದ್ರಣ) ಸಾಗರ್ ಪ್ರಕಾಶನ ನಂ.೧೬೭೯, ೧೦ನೇ ಮುಖ್ಯರಸ್ತೆ ೫ನೇ ಎ ಅಡ್ಡರಸ್ತೆ, ಬನಶಂಕರಿ ಮೊದಲನೇ ಹಂತ, ೨ನೇ ಘಟ್ಟ ಬೆಂಗಳೂರು ೫೬೦೦೫೦

೪೬) ಭಟ್ಟ ಜಿ.ಎಸ್, ೨೦೧೨, **'ಸಾಹಿತ್ಯ ದರ್ಪಣ'** (ಪ್ರಥಮ ಮುದ್ರಣ) ಹೇಮಂತ ಸಾಹಿತ್ಯ ನಂ ೯೭೨/ಸಿ, ೪ ನೇ 'ಇ' ಬ್ಲಾಕ್, ೧೦ ನೇ 'ಎ' ಮುಖ್ಯರಸ್ತೆ ರಾಜಾಜಿನಗರ, ಬೆಂಗಳೂರು ೫೬೦೦೧೦

೪೭) ಮಠದ ಸಿ.ವಿ(ಡಾ), ೨೦೦೪, **'ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ ಏಳು ಉಪನ್ಯಾಸಗಳು'** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೮) ಮೀನಾಕ್ಷಿ ಜಂಗಮನಿ(ಡಾ), ೨೦೧೦, **'ಚಾರಿತ್ರಿಕ ಕಾದಂಬರಿ ಸಾಂಸ್ಕೃತಿಕ ಸಂಕಥನ'** (ಪ್ರಥಮ ಮುದ್ರಣ) ರಚನ ಪ್ರಕಾಶನ ೪/೩ ಎ 'ಶ್ರೀ ಕೃಪ' ೨ನೇ ಮೇನ್, ೯ನೇ ಕ್ರಾಸ್ ವಿದ್ಯಾರಣ್ಯಪುರಂ ಮೈಸೂರು ೫೭೦೦೦೮

೪೯) ಮುರಿಗೆಪ್ಪ ಎ(ಡಾ)(ಪ್ರ.ಸಂ), ೨೦೧೪, **'ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ'** (ಎರಡನೆಯ ಮುದ್ರಣ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೦) ಮುಳಗುಂದ ಚ.ವಿ(ಪ್ರೊ) ಹೆಗಡೆ ಜಿ.ಎಂ(ಡಾ) (ಸಂ), ೨೦೦೬, **'ಸಮಾಜ ಮತ್ತು ಸಂಸ್ಕೃತಿ'** (ಪ್ರಥಮ ಮುದ್ರಣ) ಸಾಹಿತ್ಯ ಪ್ರಕಾಶನ ಕೊಪ್ಪಿಕರ ಬೀದಿ ಹುಬ್ಬಳ್ಳಿ ೫೮೦೦೨೦

೫೧) ಮೋಹನಕೃಷ್ಣ ರೈ.ಕೆ(ಡಾ)(ಸಂ), ೨೦೦೯, **'ಚರಿತ್ರೆ ಅಧ್ಯಯನ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೨) ರಘುಶಂಖ ಭಾತ್ರಾಂಬಾ(ಡಾ), ೨೦೧೦, **'ವಚನಕಾರರ ವೃತ್ತಿ ಮೌಲ್ಯಗಳು ಒಂದು ಅಧ್ಯಯನ'** (ಪ್ರಥಮ ಮುದ್ರಣ) ಪ್ರಭುರಾವ ಕಂಬಳಿವಾಲೆ ಕನ್ನಡ ಸೇವಾ ಪ್ರತಿಷ್ಠಾನ, ಬೀದರ.

೫೩) ರಮೇಶ ಬೆ.ಗೋ, ೨೦೧೧, **'ರಾಷ್ಟ್ರಕೂಟ ನೃಪತುಂಗ'** (ಪ್ರಥಮ ಮುದ್ರಣ) ಸಾಹಿತ್ಯ ಸಾಧನಾ ನಂ ೧೧೦, ೧ ನೇ ಕ್ರಾಸ್, ಕಬ್ಬೇಹಳ್ಳ, ಸುಂಕದಕಟ್ಟೆ ಬೆಂಗಳೂರು ೫೬೦೦೯೧

೫೪) ರಮೇಶ ಬೆ.ಗೋ, ೨೦೧೧, **'ಹೊಯ್ಸಳ ವಿಷ್ಣುವರ್ಧನ'** (ಪ್ರಥಮ ಮುದ್ರಣ) ಸಾಹಿತ್ಯ ಸಾಧನಾ ನಂ ೧೧೦, ೧ ನೇ ಕ್ರಾಸ್, ಕೆಬ್ಬೇಹಳ್ಳ, ಸುಂಕದಕಟ್ಟೆ ಬೆಂಗಳೂರು ೫೬೦೦೯೧

೫೫) ರಹಮತ್ ತರೀಕೆರೆ(ಸಂ), ೨೦೧೧, **'ಮಾತು ತಲೆ ಎತ್ತುವ ಬಗೆ'** (ತೃತೀಯ ಮುದ್ರಣ) ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೫೬) ರಾಜಶೇಖರ ಇಚ್ಚಂಗಿ(ಡಾ), ೨೦೦೩, **'ಸಂಸ್ಕೃತಿ ಶೋಧ'** (ಪ್ರಥಮ ಮುದ್ರಣ) ಆಕರ ಗ್ರಂಥ ಡಾ.ಕೆ ರವೀಂದ್ರನಾಥ, 'ಮಠಮಾನ್ಯಗಳು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ' ೧೯೯೬ ಅಕ್ಕಮಹಾದೇವಿ ಪ್ರಕಾಶನ ಹುಕ್ಕೇರಿ ೫೯೧೩೦೯

೫೭) ರಾಜಶೇಖರ ಇಚ್ಚಂಗಿ(ಡಾ), ೨೦೧೧, **'ಜನಪದ ಜೀವಾಳ'** (ಪ್ರಥಮ ಮುದ್ರಣ) ಸಚಿನ್ ಪಬ್ಲಿಷರ್ಸ್ ನಂ ೧೬೬, ೬ ನೇ 'ಸಿ' ಮುಖ್ಯರಸ್ತೆ ಹಂಪಿನಗರ ಬೆಂಗಳೂರು ೫೬೦೧೦೪

೫೮) ರಾಜೇಗೌಡ ಹ.ಕ, ೨೦೦೭, **'ಜಾನಪದ ಶೋಧ'** (ಪ್ರಥಮ ಮುದ್ರಣ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೯) ಲೋಕೇಶ ಅಗಸನಕಟ್ಟೆ(ಡಾ), ೨೦೧೨, **'ಒಳಗಿನ ಬೆಳಗು'** (ಪ್ರಥಮ ಮುದ್ರಣ) ಸಪ್ನ ಬುಕ್ ಹೌಸ್ ೩ ನೇ ಮುಖ್ಯರಸ್ತೆ, ಗಾಂಧೀನಗರ ಬೆಂಗಳೂರು ೫೬೦೦೦೯

೬೦) ವಿದ್ಯಾಶಂಕರ ಎಸ್(ಡಾ)(ಸಂ), ೨೦೧೦, **'ಅ.ನ.ಕೃ ಬದುಕು ಬರಹ'** (ಪ್ರಥಮ ಮುದ್ರಣ) ಪ್ರಿಯದರ್ಶಿನಿ ಪ್ರಕಾಶನ ನಂ ೧೩೮, ೭ನೇ 'ಸಿ' ಮುಖ್ಯರಸ್ತೆ ಹಂಪಿನಗರ ಬೆಂಗಳೂರು ೫೬೦೧೦೪

೬೧) ವೀರಶೆಟ್ಟಿ ಬಾವುಗೆ(ಸಂ), ೨೦೧೦, **'ಸಾಹಿತ್ಯ ಜ್ಯೋತಿ'** (ಪ್ರಥಮ ಮುದ್ರಣ) ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಭಾಲ್ಕಿ, ಬೀದರ ಜಿಲ್ಲೆ.

೬೨) ವೃಷಭೇಂದ್ರಾಚಾರ್ಯ ಅರ್ಕಸಾಲಿ(ಡಾ), ೨೦೦೯, **'ವೀರರಾಣಿ ಕಿತ್ತೂರ ಚೆನ್ನಮ್ಮ'** (ಪ್ರಥಮ ಮುದ್ರಣ) ದಾಮಿನಿ ಸಾಹಿತ್ಯ ನಂ.೫೫೯, ೯ನೇ ಮುಖ್ಯರಸ್ತೆ, ಎಂ.ಸಿ.ಲೇಔಟ್, ವಿಜಯನಗರ ಬೆಂಗಳೂರು ೫೬೦೦೪೦

೬೩) ವೇಣು ಬಿ.ಎಲ್, ೨೦೦೩, **'ಹೆಬ್ಬುಲಿ ಹಿರೇಮದಕರಿನಾಯಕ'** (ಪ್ರಥಮ ಮುದ್ರಣ) ಪಾಂಚಜನ್ಯ ಪಬ್ಲಿಕೇಷನ್ಸ್ ಸಂಖ್ಯೆ ೪೨೦/೨೮, ೬-೭ ನೇ ಕ್ರಾಸ್ ನಡುವೆ, ಅಮರಜ್ಯೋತಿ ನಗರ, ಬೆಂಗಳೂರು ೫೬೦೦೪೦

೬೪) ಶಿವಾನಂದ ಗುಬ್ಬಣ್ಣವರ(ಡಾ), ೨೦೦೯, **'ಲಾವಣಿ ಸಾಹಿತ್ಯದಲ್ಲಿ ಸಂಸ್ಥಾನಿಕರ ಬಂಡಾಯ'** (ಪ್ರಥಮ ಮುದ್ರಣ) ಅಕ್ಷಯ ಪ್ರಕಾಶನ, ಧಾರವಾಡ

೬೫) ಶಿವಾನಂದ ಗುಬ್ಬಣ್ಣವರ(ಡಾ), ೨೦೧೧, **'ಜನಪದ ಸಾಹಿತ್ಯದಲ್ಲಿ ಕಿತ್ತೂರ ಸಂಸ್ಥಾನಿಕರು'** (ಪ್ರಥಮ ಮುದ್ರಣ) ಅಕ್ಷಯ ಪ್ರಕಾಶನ ಧಾರವಾಡ

೬೬) ಶಿರೂರ ಬಿ.ವ್ಹಿ(ಡಾ), ೨೦೧೧, **'ಶ್ರವಣಬೆಳ್ಗೊಳ'** (ಪರಿಷ್ಕೃತ ಆವೃತ್ತಿ) ವಿಸ್ಮಯ ಪಬ್ಲಿಕೇಷನ್ಸ್ ಬೆಂಗಳೂರು ೫೬೦೦೭೨

೬೭) ಶೈಲಜಾ ಹೊಸಳ್ಳೇರ (ಡಾ), ೨೦೧೨, **'ಬೂದಿಹಾಳು ಪಾಳೇಗಾರ ಸಿರುಮ ನಾಯಕ (ಸಿರುಮನ ಸಾಂಗತ್ಯಗಳು)'** (ಪ್ರಥಮ ಮುದ್ರಣ) ರೋಹಿಣಿ ಎಂಟರ್‌ಪ್ರೈಸಸ್ # ೧೫, ೬ನೇ ಕ್ರಾಸ್, ಧನ್ವಂತರಿನಿಲಯ, ಕೊಟ್ಟಿಗೇಪಾಳ್ಯ, ಮಾಗಡಿ ಮುಖ್ಯರಸ್ತೆ ವಿಶ್ವನೀಡಂ ಅಂಚೆ ಬೆಂಗಳೂರು ೯೧

೬೮) ಶ್ರೀನಿವಾಸಮೂರ್ತಿ ಎಚ್.ವಿ, ೨೦೦೪, **'ಇತಿಹಾಸ ಸಂಶೋಧನಾ ಸಮೀಕ್ಷೆ'** (ಪ್ರಥಮ ಮುದ್ರಣ) ಕಲಾ ಪ್ರಕಾಶನ ನಂ ೨ ಸೆಕೆಂಡ್ ಕ್ರಾಸ್, ರಾಜಮಹಲ್ ಗುತ್ತಹಳ್ಳಿ ಬೆಂಗಳೂರು ೫೬೦೦೦೩

೬೯) ಶಂಕರ ಮೊಕಾಶಿ ಪುಣೇಕರ(ಡಾ), ೨೦೧೨, **'ಸಾಹಿತ್ಯ ಮತ್ತು ಅಭಿರುಚಿ'** (ಪ್ರಥಮ ಮುದ್ರಣ) ವಸಂತ ಪ್ರಕಾಶನ

೭೦) ಸದಾಶಿವಪ್ಪ ಕುಂ.ಬಾ, ೨೦೦೯, **'ಜಾನಪದ ಸಾಹಿತ್ಯ ಸಂಸ್ಕೃತಿ'** (ಪ್ರಥಮ ಮುದ್ರಣ) ಮಮತಾ ಪ್ರಕಾಶನ ೮೩೬, ೫ ನೆಯ ಮೇನ್, ೫ ನೆಯ ಕ್ರಾಸ್, ಎಂ.ಸಿ ಲೇಔಟ್, ವಿಜಯನಗರ ಬೆಂಗಳೂರು ೫೬೦೦೪೦

೭೧) ಸರಸ್ವತಿ ಎನ್, ಶಿಲ್ಪಶ್ರೀ ಸಿ.ಎನ್(ಸಂ), ೨೦೧೧, **'ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ'** (ಪ್ರಥಮ ಮುದ್ರಣ) ಉಷಾ ಪ್ರಕಾಶನ #೨೫೪೨, ಹೆಬ್ಬಾಳ್ ೨ ನೇ ಹಂತ, ರೇಣುಕ ಎಲ್ಲಮ್ಮ ದೇವಸ್ಥಾನದ ಎದುರು ಮೈಸೂರು ೧೭

೭೨) ಸರೋಜಿನಿ ಆರ್(ಡಾ), ೨೦೧೦, **'ಆಯ್ದ ಲೇಖನಗಳು ಭಾಗ ೧'** (ಪ್ರಥಮ ಮುದ್ರಣ) ವಿವೇಕ ಪ್ರಕಾಶನ ಹುಬ್ಬಳ್ಳಿ ೫೮೦೦೨೧

೭೩) ಸುಶೀಲಾ ಸೋಮಶೇಖರ, ೨೦೧೦, **'ನುಡಿ ಜ್ಯೋತಿರ್ಲಿಂಗ'** (ಪ್ರಥಮ ಮುದ್ರಣ) ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ೧೨/೧, ಈವನಿಂಗ್ ಬಜಾರ ಹಿಂಬಾಗ ಶಿವರಾಂಪೇಟೆ, ಮೈಸೂರು ೫೭೦೦೦೧

೭೪) ಸಂಗನಾಳಮಠ ಯು.ಎನ್, ೨೦೧೧ **'ಸಂವೇದ'** (ಪ್ರಥಮ ಮುದ್ರಣ) ಸಿವಿಜಿ ಇಂಡಿಯಾ ಕಸ್ತೂರಬಾ ಭವನ, ಗಾಂಧಿಭವನ ಆವರಣ, ಕುಮಾರಪಾರ್ಕ ಪೂರ್ವ ಬೆಂಗಳೂರು ೫೬೦೦೦೧


೭೫) ಸಂಪತ್‌ಕುಮಾರ ಬಿ.ಪಿ(ಡಾ) (ಸಂ), ೨೦೧೨, **'ಪರಂಪರೆ ಮತ್ತು ಕವಿ ಪ್ರತಿಭೆಯ ಮುಖಾಮುಖಿ'** (ಪ್ರಥಮ ಮುದ್ರಣ) ಕಾರ್ತಿಕ್ ಎಂಟರ್‌ಪ್ರೈಸರ್ಸ್ ನಂ ೧೧೪, ೪ನೇ ಅಡ್ಡರಸ್ತೆ, ಬಿ.ಸಿ.ಸಿ ಬಡಾವಣೆ ಅತ್ತಿಗುಪ್ಪೆ, ವಿಜಯನಗರ ಎರಡನೇ ಹಂತ, ಬೆಂಗಳೂರು.

೭೬) ಹುರಗಲವಾಡಿ ಲಕ್ಷ್ಮೀ ನರಸಿಂಹಶಾಸ್ತ್ರೀ, ೨೦೧೦, **'ಯುಗಪುರುಷ ಶ್ರೀ ವಿದ್ಯಾರಣ್ಯರು'** (ಪ್ರಥಮ ಮುದ್ರಣ) ಭಾರತೀ ಪ್ರಕಾಶನ ಸರಸ್ವತಿಪುರಂ ಮೈಸೂರು ೫೭೦೦೦೯

೭೭) ಹೂಗಾರ ಪಿ.ಬಿ(ಪ್ರೊ), ೨೦೦೬, **'ಕರ್ನಾಟಕ ಇತಿಹಾಸ'** (ನಾಲ್ಕನೆಯ ಮುದ್ರಣ) ಶ್ರೀ ಸಿದ್ದಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಮುಖ್ಯ ರಸ್ತೆ ಗುಲಬರ್ಗಾ ೫೮೫೧೦೧

೭೮) ಹೂಗಾರ ಎ.ಎಸ್(ಸಂ), ೨೦೧೨, **'ಜಾನಪದ ನರಗುಂದ'** (ದ್ವಿತೀಯ ಮುದ್ರಣ) ದರ್ಪಣ ಪುಸ್ತಕ ಪ್ರಕಾಶನ ೭೯, ೨ ನೇ ಮುಖ್ಯ ರಸ್ತೆ, ಶಕ್ತಿನಗರ, ಧಾರವಾಡ ೫೮೦೦೦೪

೭೯) ಹೆಗ್ಗಡೆ ಒಡೆಯರ ಡಿ, ೨೦೦೮, **'ಹಕ್ಕ ಬುಕ್ಕ'** (ಪ್ರಥಮ ಮುದ್ರಣ) ತನು ಮನು ಪ್ರಕಾಶನ ಹೆಚ್.ಐ.ಜಿ ೧೨೬೭ ಕಾವ್ಯಲೋಕ ೧ ನೇ ತಿರುವು ಶ್ರೀರಾಂಪುರ ಬಡಾವಣೆ ೨ ನೇ ಹಂತ ಮೈಸೂರು ೫೭೦೦೨೩



ಸಾಹಿತ್ಯ ಅಧ್ಯಯನ ವಿಭಾಗ